ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು

ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧ



ಸಂಶೋಧಕಿ
ವಿಮಲಾ ಅಮಲಪ್ಪ

ಮಾರ್ಗದರ್ಶಕರು
ಡಾ. ಗಂಗಾಧರ ದೈವಜ್ಞ
ಹಿರಿಯಶ್ರೇಣಿ ಅಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ –೫೮೩೨೭೬
೨೦೦೯

ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು

ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ವಿಮಲಾ ಅಮಲಪ್ಪ

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಹಿ.ಶ್ರೇ. ಅಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

<u>ಪ್ರಮಾಣ ಪತ್ರ</u>

"ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಗಂಗಾಧರ ದೈವಜ್ಞ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 30.01.2009

ಸ್ಥಳ : ವಿದ್ಯಾರಣ್ಯ

(ವಿಮಲಾ ಅಮಲಪ್ಪ)
ಸಂಶೋಧಕಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದೃಢೀಕರಣ ಪತ್ರ

"ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕುಮಾರಿ ವಿಮಲಾ ಅಮಲಪ್ಪ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಡಾ. ಗಂಗಾಧರ ದೈವಜ್ಞ)
ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಅವರಿಗೂ ಮತ್ತು ಇಂದಿನ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಹಾಗೂ ಹಿಂದಿನ ಕುಲಸಚಿವರಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೂ ಈಗಿನ ಕುಲಸಚಿವರಾದ ಡಾ. ಎಸ್.ಎಸ್. ಪೂಜಾರ ಅವರಿಗೂ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಪಾಂಡುರಂಗ ಬಾಬು ಅವರಿಗೂ, ಮಹಾಪ್ರಬಂಧದ ರಚನೆಯ ಪ್ರತಿಹಂತದಲ್ಲಿ ನನ್ನನ್ನು ಪ್ರೋತ್ಸಾಹಿಸಿ ತಪ್ಪಿದ್ದಲ್ಲಿ ತಾಳ್ಮೆಯಿಂದ ತಿದ್ದಿ ನನ್ನ ಸಂಶೋಧನಾ ಮಹಾಪ್ರಬಂಧಕ್ಕೆ ಒಂದು ರೂಪ ಕೊಡಲು ಸೂಕ್ತ ಸಲಹೆ ಸೂಚನೆಗಳನ್ನು ಕೊಟ್ಟು ಮುನ್ನೆಡೆಸಿದ ನನ್ನ ಮಾರ್ಗದರ್ಶಕರಾದ ಡಾ. ಗಂಗಾಧರ ದೈವಜ್ಞ ಅವರಿಗೂ ನನ್ನನ್ನ ಸದಾ ಮಗಳಂತೆ ಪ್ರೀತಿ ವಿಶ್ವಾಸದಿಂದ ನೋಡಿದ ಶ್ರೀಮತಿ ಸರೋಜ ದೈವಜ್ಞ ಅವರಿಗೂ ಪುಟ್ಟಿ ಭಾಗಿರಥಿ ಹಾಗೂ ಕುಟುಂಬದವರಿಗೆಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು ಸಲ್ಲಿಸುತ್ತೇನೆ.

ನನ್ನ ಅಧ್ಯಯನದ ಬಗ್ಗೆ ಸದಾ ವಿಚಾರಿಸುತ್ತಾ ಪ್ರೋತ್ಸಾಹ ನೀಡಿದ ಬುಡಕಟ್ಟು ಅಧ್ಯಯನದ ಮುಖ್ಯಸ್ಥರಾದ ಡಾ. ಚಲುವರಾಜು ಅವರಿಗೂ ವಿಭಾಗದ ಅಧ್ಯಾಪಕರುಗಳಾದ ಡಾ. ಹಿ.ಚಿ. ಬೋರಲಿಂಗಯ್ಯ, ಡಾ. ಕೆ.ಎಂ. ಮೇತ್ರಿ, ಡಾ. ಕೇಶವನ್ ಪ್ರಸಾದ, ಡಾ. ಎ.ಎಸ್. ಪ್ರಭಾಕರ ಅವರಿಗೂ ಧನ್ಯವಾದಗಳು.

ನನ್ನ ಓದಿಗೆ ಬೆನ್ನೆಲುಬಾಗಿ ನಿಂತ ನನ್ನ ಕನಸನ್ನು ನನಸು ಮಾಡಿದ ಪೂಜ್ಯ ತಂದೆಯರಾದ ಅಮಲಪ್ಪ ಬಿಲ್ಲವ್ ಮತ್ತು ತಾಯಿ ಮಹಾದೇವಮ್ಮವರಿಗೂ ನಾನು ಋಣಿಯಾಗಿದ್ದೇನೆ ಹಾಗೂ ಅಕ್ಕಳಾದ ಶಾಂತಳಿಗೂ ವಿಶೇಷವಾದ ನಮನವನ್ನು ಸಲ್ಲಿಸುತ್ತೇನೆ. ಅದರಂತೆಯೇ ಮತ್ತೀರ್ವ ಅಕ್ಕಂದಿರಾದ ನಿರ್ಮಲಾ, ಶಾಮಲಾ, ಮಾವಂದಿರಾದ ಮಾನಪ್ಪ ಬಲ್ಲಿದವ್, ನಂದಕುಮಾರ, ಸಹೋದರರಾದ ಶ್ರೀಕಾಂತ, ಚಂದ್ರಕಾಂತ, ಶಶಿಕಾಂತ, ರಜನಿಕಾಂತ, ಪ್ರಶಾಂತ ಹಾಗೂ ಸಹೋದರಿ ಕಮಲಾ, ಅತ್ತಿಗೆ ಅನಿತಾ, ಪುಟ್ಟರಾಹುಲ, ಮೋಹನ, ಮುರುಳಿ, ಪೃಥ್ವಿ, ದಿವ್ಯಾ, ಭವ್ಯ, ಸೃಷ್ಠಿಯನ್ನು ಪ್ರೀತಿಯಿಂದ ನೆನೆಯುತ್ತೇನೆ.

ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನನ್ನ ಅಧ್ಯಯನಕ್ಕೆ ಸಹಕಾರ ನೀಡಿದ ಕೆ.ಪಿ.ಇ.ಸಿ. ಕಾರ್ಯದರ್ಶಿ ಮಾರುತಿ ಡಿ. ಮಾಲೆ ಹಾಗೂ ಭಾರತಿ ಸಂಗಾವಿಯವರಿಗೂ ಗೌರವ ಪೂರ್ವಕ ನಮನ. ಹಾಗೆಯೇ ಶಿಲ್ಪಿ ದೇಶಮಾನಿ, ವೀರಶೆಟ್ಟಿಯವರಿಗೆ, ಉಮಾದೇವಿ ಒಡೆಯರ್, ಭಾರತಿ, ಅಕ್ಕಮ, ಡಾ. ಮಹಾಜನ್ ಅವರಿಗೂ ಕೃತಜ್ಞತೆಗಳು.

ಅಧ್ಯಯನದ ಉದ್ದಕ್ಕೂ ನನ್ನೊಂದಿಗೆ ಇದ್ದು ವಿಷಯದ ಕುರಿತು ಆಗಾಗ ಚರ್ಚೆ, ಸಂವಾದಗಳನ್ನು ಮಾಡಿ ಅಧ್ಯಯನಕ್ಕೆ ಹೊಸ ಹೊಳಹುಗಳನ್ನು ತೋರಿಸಲು ಅನುವಾದ ನನ್ನ ಎಲ್ಲಾ ವಿಶ್ವವಿದ್ಯಾಲಯದ ಹಾಗೂ ಹೊರಗಿನ ಮತ್ತು ನನ್ನೂರಿನ ಸ್ನೇಹಿತರನ್ನು ಮತ್ತು ಸದಾ ಅಭಿಮಾನದಿಂದ ಕಾಣುವ ಸಮಸ್ತ ಬಂಧು ಬಾಂಧವರಿಗೂ, ಪ್ರತ್ಯೇಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದವರಿಗೆಲ್ಲರಿಗೂ ಪ್ರೀತಿಯಿಂದ ನೆನೆಸಿಕೊಳ್ಳುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಮತ್ತು ಬುಡಕಟ್ಟು ಅಧ್ಯಯನ ವಿಭಾಗದ ಎಲ್ಲ ಸಿಬ್ಬಂದಿ ವರ್ಗದವರೆಲ್ಲರಿಗೂ ನಾನು ಋಣಿಯಾಗಿರುವೆ. ಈ ಮಹಾ ಪ್ರಬಂಧಕ್ಕೆ ಚೆಂದದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಿಶೋರ ದಾಟನಾಳ ಮತ್ತು ಪ್ರೀತಿಯಿಂದ ಹಾಗೂ ಆತ್ಮೀಯತೆಯಿಂದ ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ ಶ್ರೀನಿವಾಸ ಕೆ. ಕಲಾಲ್., ಭಾವನಾ ಗ್ರಾಫಿಕ್ಸ್, ಕಮಲಾಪುರ ಇವರಿಗೆ ನಾನು ಅಭಾರಿಯಾಗಿರುವೆ.

ವಿಮಲಾ ಅಮಲಪ್ಪ ಬಿಲ್ಲವ್

ಪರಿವಿಡಿ

ಪರಿಶಿಷ್ಟಗಳು

ಭೂಪಟ

ಕೋಷ್ಟಕಗಳು

ವೃತ್ತಚಿತ್ರ

ಲಂಬಚಿತ್ರ

ಅಂಕಿ ಅಂಶಗಳ ಪಟ್ಟಿ

ಭೂಪಟ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕುವಾರುಗಳ ಕಾಡುಗೊಲ್ಲರ ಸಮೀಕ್ಷೆ ಕಾರ್ಯಮಾಡಿದ ನೆಲೆಗಳು



n ಚಿತ್ರದುರ್ಗ ಜಿಲ್ಲೆ

♦ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕು

* ನೆಲೆಗಳು ೧. ಹನುಮಂತನಹಳ್ಳಿ
೨. ಜೋಗಿಹಟ್ಟಿ
೩. ಯಲಗಟ್ಟಿ ಗೊಲ್ಲರಹಟ್ಟಿ
೪. ಬೆಳಗೆರೆ ಗೊಲ್ಲರಹಟ್ಟಿ
೫. ಗುಂಡ್ಲೂರು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ವ್ಯಾಪ್ತಿ

೧.೪ ಅಧ್ಯಯನದ ವಿಧಾನ

೧.೫ ಇದುವರೆಗೆ ನಡೆದ ಅಧ್ಯಯನ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೧ ಪ್ರಸ್ತಾವನೆ

ಪ್ರತಿಯೊಂದು ಸಮುದಾಯವು ಪ್ರತ್ಯೇಕವಾದ ಭಾಷೆ, ಉಪಭಾಷೆ, ವಿಶಿಷ್ಟವಾದ ಜೀವನಕ್ರಮ, ಇತರರಿಗಿಂತ ಭಿನ್ನವಾದ ಆಂತರಿಕ ವ್ಯವಸ್ಥೆ, ಪ್ರತ್ಯೇಕವಾದ ಸಾಮಾಜಿಕ ವ್ಯವಸ್ಥೆ, ತಮ್ಮದೇ ಆದ ಕೌಟುಂಬಿಕ ವ್ಯವಸ್ಥೆ, ಮದುವೆ, ಹುಟ್ಟು-ಸಾವು ಇವುಗಳ ಜೊತೆಗೆ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದರ ಜೊತೆಗೆ ಸಾಹಿತ್ಯ, ಕಲೆ, ವೇಷ-ಭೂಷಣಗಳಲ್ಲಿ ವಿಭಿನ್ನತೆಯನ್ನು ಕಾಣಬಹುದು. ಹೀಗೆ ಸಾಂಸ್ಕೃತಿಕ ಹತ್ತು ಹಲವು ಅನನ್ಯತೆಗಳನ್ನು ಬುಡಕಟ್ಟುಗಳಲ್ಲಿ ಕಾಣಬಹುದು. ಈ ಅನನ್ಯತೆಗಳು ಸಾಂಪ್ರದಾಯಿಕ ಕುರುಹುಗಳಾಗಿದ್ದು, ಇಂತಹ ಅನನ್ಯತೆಯನ್ನು ಆಧುನಿಕ ಶಿಸ್ತುಗಳಲ್ಲಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ. ಈ ಕುರಿತಂತೆ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯನಂತರದಲ್ಲಿ ಹಲವು ಸಂಶೋಧನೆಗಳು ನಡೆದಿದ್ದು, ಹೊಸ ಹೊಸ ವಿಚಾರಗಳು ಶೋಧನೆಗೊಂಡಿವೆ. ಆದರೂ ಸಹ ಈ ಬುಡಕಟ್ಟುಗಳನ್ನು ವಿಭಿನ್ನ (ವಿಧಗಳಲ್ಲಿ) ರೀತಿಯಲ್ಲಿ ಅಧ್ಯಯನ ಮಾಡುವ ಅಗತ್ಯತೆ ಪ್ರಸ್ತುತ ಅಧ್ಯಯನಗಳಿಗಿವೆ.

ಯಾವುದೆ ಬುಡಕಟ್ಟಿನ ಅಧ್ಯಯನದ ಮೂಲ ಉದ್ದೇಶವೆಂದರೆ, ಆ ಬುಡಕಟ್ಟಿನ ಸಂಸ್ಕೃತಿ ಮೂಲ ಸ್ವರೂಪ(ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ)ವಾಗಿ ಕಂಡುಕೊಳ್ಳುವುದು. ಹೀಗಾಗಿ ಬುಡಕಟ್ಟುಗಳ ಅಧ್ಯಯನವು ಸಮಾಜದ ಬಗೆಗಿನ ಅಂತರ್ ದೃಷ್ಟಿಗೆ ಹೊಸ ಅರಿವನ್ನು ಒದಗಿಸುತ್ತದೆ. ಹಾಗಾಗಿ ಬುಡಕಟ್ಟುಗಳನ್ನು ಸೂಕ್ಷ್ಮ ಅಧ್ಯಯನಗಳ ಮುಖಾಂತರ ಅಭ್ಯಸಿಸುವುದು ಅನಿವಾರ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಬುಡಕಟ್ಟುಗಳನ್ನು ಕುಟುಂಬ, ಜಾತಿ, ಕುಲ, ಜನಾಂಗ, ಸಮೂಹ, ಸಮುದಾಯಗಳ ನೆಲೆಗಳಲ್ಲಿ ಅಭ್ಯಸಿಸಲಾಗಿದೆ. ಜೊತೆಗೆ ಇವುಗಳ ರಕ್ತಸಂಬಂಧ, ಪಾವಿತ್ರ್ಯತೆ, ನಂಬಿಕೆ-ನಿಷೇಧ, ಆಚರಣೆ ಮತ್ತು

ಸಂಪ್ರದಾಯಗಳ ಮೂಲಕವೂ ತಿಳಿಯಲಾಗಿದೆ. ಅಂತೆಯೇ ಅನೇಕ ಬುಡಕಟ್ಟು ಸಮುದಾಯಗಳ ನಡುವೆಯೂ ಅನ್ಯನತೆಯನ್ನು ಹೊಂದಿರುವ ಕಾಡುಗೊಲ್ಲರನ್ನು ಸಹ ಅಧ್ಯಯನಕ್ಕೆ ಒಳಪಡಿಸುವ ಅವಶ್ಯಕತೆ ಇದೆ.

ಬುಡಕಟ್ಟಿನ ಅನೇಕ ಗುಣಲಕ್ಷಣಗಳನ್ನು ಕಾಡುಗೊಲ್ಲರು ಹೊಂದಿದ್ದರೂ ಸರ್ಕಾರ ಕಾಡುಗೊಲ್ಲರನ್ನು ಬುಡಕಟ್ಟು ಎಂದು ಅನುಸೂಚಿತ ಪಟ್ಟಿಯಲ್ಲಿ ಸೇರಿಸದೇ, ಸಾಮಾನ್ಯ ಪ್ರಬಲ ಜಾತಿಗಳೊಂದಿಗೆ ಪೈಪೋಟಿ ನಡೆಸುವ ಪಟ್ಟಿಗೆ ಸೇರಿಸಿದೆ. ಆದರೆ ಕಾಡುಗೊಲ್ಲರು ಮೂಲತಃ ಆಹಾರ ಸಂಗ್ರಹಣೆ ಮತ್ತು ಬೇಟೆಯನ್ನು ಪ್ರಧಾನವಾಗಿಟ್ಟುಕೊಂಡು ಜೀವನ ಮಾಡುತ್ತಿದ್ದವರು. ಆದರೆ ಇತ್ತೀಚೆಗೆ ಬೇಟೆ ಮತ್ತು ಪಶುಪಾಲನೆ ಕ್ರಮೇಣ ಕಡಿಮೆಯಾಗುತ್ತಿದ್ದು, ಇದಕ್ಕೆ ಕಾರಣ. ಮಳೆ ಕಡಿಮೆಯಾಗಿ ಹುಲ್ಲು ಸಿಗದೇ ಇದದ್ದರಿಂದ ಊರಿನಿಂದ ಊರುಗಳಿಗೆ ಅಲೆಮಾರಿಗಳಾಗಿ ಜೀವನ ನಿರ್ವಹಿಸುತ್ತಿದ್ದು, ನಂತರದ ಕಾಲಘಟ್ಟದಲ್ಲಿ ಒಂದು ಕಡೆ ನೆಲೆನಿಂತು ಕೃಷಿಯನ್ನು ಪ್ರಧಾನ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಈ ಸಮುದಾಯದಲ್ಲಿ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣಬಹುದಾಗಿದೆ. ಮೂಲತಃ ಇವರು ಕನ್ನಡ ಭಾಷೆಯನ್ನಾಡುವವರಾಗಿದ್ದಾರೆ. ಕಾಡು ಮತ್ತು ಗೊಲ್ಲ ಎಂಬ ಪದಗಳು ಜೋಡುನುಡಿಗಳಾಗಿದ್ದು 'ಕಾಡು' ದ್ರಾವಿಡ ಮೂಲದ ಕನ್ನಡಿಗರ ಪದವಾದರೆ 'ಗೊಲ್ಲ' (ಗೋವುಲ) ಸಂಸ್ಕೃತಿ ಮೂಲದ ಆರ್ಯ ಪದವಾಗಿದೆ. ಸಂಸ್ಕೃತ 'ಗೋವುಲ' ಶಬ್ದದಿಂದ ಕನ್ನಡದ ಗೊಲ್ಲ ಶಬ್ಧ ರೂಪಗೊಂಡಿರುವುದು. ಗೊಲ್ಲ ಎಂದರೆ "ಗೋವುಗಳನ್ನು ಕಾಯುವ ಗೋಪಾಲಕ"ಎಂಬ ಅರ್ಥ ಬರುತ್ತದೆ. ಕಾಡುಗೊಲ್ಲ ಎಂದರೆ ಕಾಡಿನಲ್ಲಿ ವಾಸ ಮಾಡುತ್ತಾ ದನಗಳ ಮೇಯಿಸುವವನು ಎಂದರ್ಥವಾಗುತ್ತದೆ. ಕಾಡುಗೊಲ್ಲರನ್ನು ಅಡವಿಗೊಲ್ಲರು, ಹಟ್ಟಿಗೊಲ್ಲರು, ಕರಡಿಗೊಲ್ಲರು, ಕಲ್ಲಿಗೊಲ್ಲರು ಎಂಬ ಹೆಸರುಗಳಿಂದ ಕರೆಯುತ್ತಾರೆ. (ಅಡವಿಗೊಲ್ಲರು ಮತ್ತು ಕಾಡುಗೊಲ್ಲರು ಒಂದೇ ಎಂದೂ ಅರ್ಥವಾಗುತ್ತದೆ. ಕೂಡ್ಲಿಗಿ ಭಾಗದಲ್ಲಿ ಕಾಡುಗೊಲ್ಲರನ್ನು 'ಕರಡಿಗೊಲ್ಲರು' ಎಂದು, ಹಟ್ಟಿಯ ಸುತ್ತ ಬೇಲಿಯನ್ನು ಹಾಕಿಕೊಂಡಿರುವವರನ್ನು 'ಕಳ್ಳಿಗೊಲ್ಲ'ರೆಂದು ಕರೆಯುತ್ತಾರೆ) ಕಾಡುಗೊಲ್ಲರು ಯಾದವ ಕುಲಕ್ಕೆ ಸೇರಿದವರೆಂದು, ಶ್ರೀಕೃಷ್ಣ ಗೊಲ್ಲಭಾಮೆಯೊಡನೆ ರಾಸಕ್ರೀಡೆಯಾಡಿದ ಎನ್ನುವ ಕಾರಣಕ್ಕಾಗಿಯೇ ಇವರನ್ನು ಕೃಷ್ಣಗೊಲ್ಲರೆಂದು ಕರೆಯಲಾಗುತ್ತದೆ.

ಮೂಲ ಉದ್ಯೋಗವನ್ನಾಗಿ ಕೃಷಿಯನ್ನು ಅವಲಂಬಿಸಿರುವ ರಾಷ್ಟ್ರಗಳಲ್ಲಿ ಭಾರತವು ಒಂದಾಗಿದೆ. ಈ ರಾಷ್ಟ್ರದಲ್ಲಿ ವಿವಿಧ ಜಾತಿಗಳು ಮತ್ತು ಸಮುದಾಯಗಳು ಅವುಗಳ ಜೊತೆಗೆ ತಮ್ಮದೇ ಆದ ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳ ಜೊತೆಗೆ ತಮ್ಮದೇ ಆದ ಸಾಮಾಜಿಕ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದ ಅನೇಕ ಸಮುದಾಯಗಳಲ್ಲಿ ಕಾಡುಗೊಲ್ಲ ಸಮುದಾಯವು ಒಂದಾಗಿದೆ. ಈ ಸಮುದಾಯದ ಬದುಕಿನ ಹೋರಾಟದಲ್ಲಿ ಹಲವಾರು ಸ್ಥಿತ್ಯಂತರಗಳಿಗೆ ಗುರಿಯಾಗಿರುವುದು ಕಂಡುಬಂದಿದ್ದು, ಅವರ ಭೂಮಿ, ಅರಣ್ಯ, ವ್ಯವಸಾಯ, ಭೂಹಿಡುವಳಿ, ಅದರಿಂದ ದೊರೆಯುವ ಆದಾಯ ಮತ್ತು ವೆಚ್ಚಗಳ ಮೂಲಕ ಸಮುದಾಯದ ಜನರು ವರ್ತಮಾನದಲ್ಲಿ ಬದುಕುವಂತೆ ಅನಿವಾರ್ಯತೆ ಇದೆ. ಬೇರೆ ಬೇರೆ

ಸಮಾಜಗಳ ನಡುವಿನ ಸಂಬಂಧ, ಸಂಘಟನಾ ವ್ಯವಸ್ಥೆ, ವೈವಿಧ್ಯಪೂರ್ಣ ಜೀವನದ ಮಹತ್ವಕ್ಕಿಂತ ಕಾಡುಗೊಲ್ಲರ ಜೀವನ ವಿಭಿನ್ನ ಎಂದು ತಿಳಿದುಕೊಳ್ಳುವುದು ಇಲ್ಲಿ ಮುಖ್ಯವಾಗಿದೆ.

ಕಾಡುಗೊಲ್ಲರ ಜೀವನ ವಿಧಾನ ಭೌಗೋಳಿಕ ಪರಿಸರ, ಮೂಲಭೂತ ಸೌಲಭ್ಯದ ಆಧಾರದ ಮೇಲೆ ಆರ್ಥಿಕ ಸ್ಥಿತಿಗತಿಯು ಅವಲಂಬಿತವಾಗಿದೆ. ಇವರದು ಸರಳ ಆರ್ಥಿಕ ವ್ಯವಸ್ಥೆಯಾಗಿದ್ದು, ಪ್ರಕೃತಿಯ ಮಕ್ಕಳಾಗಿ ಕಾಡುಗಳಲ್ಲಿ ವಾಸಿಸುತ್ತಿದ್ದಾರೆ. ನಗರಗಳಿಂದ, ನಾಗರಿಕ ಸಮಾಜದಿಂದ ದೂರವಿರುವ ಇವರು ತಮ್ಮ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುತ್ತ ಪಶುಪಾಲನೆ, ಸಣ್ಣ-ಪುಟ್ಟ ಬೇಟೆ ಮತ್ತು ಸಣ್ಣ ಭೂಹಿಡುವಳಿ ಗಳಲ್ಲಿ ಕೃಷಿ ಮಾಡುತ್ತಾ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಇದರಿಂದಾಗಿ ಅಲೆಮಾರಿ ಅತಂತ್ರ ಸ್ಥಿತಿಯನ್ನು ಬಿಟ್ಟು ಒಂದು ಕಡೆ ನೆಲೆನಿಂತು ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ.

ಕೈಗಾರೀಕರಣ, ಖಾಸಗೀಕರಣ, ಜಾಗತೀಕರಣದ ಪ್ರಭಾವದಿಂದ ಅರಣ್ಯ ನಾಶವಾಗುತ್ತಿರುವ ಆಧುನಿಕ ಸಂದರ್ಭದಲ್ಲಿ ಸಮುದಾಯವು ತನ್ನ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದರ ಜೊತೆಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದೆ. ಸರ್ಕಾರವು ಜಾರಿಗೊಳಿಸಿದ ಗಿರಿಜನ ಅಭಿವೃದ್ಧಿ ಮತ್ತು ಪುನರ್ ವಸತಿ ಯೋಜನೆಗಳು ಈ ಸಮುದಾಯಕ್ಕೆ ತಲುಪದೇ ಇರುವುದು ಒಂದು ವಿಪರ್ಯಾಸವೆಂದೆ ಹೇಳಬಹುದು. ಈ ಸಮುದಾಯವು ಸರ್ಕಾರದ ಯೋಜನೆಗಳ ಮೇಲೆ ಅವಲಂಬಿತವಾಗಿರದೇ ತನ್ನ ಸ್ವಂತ ಜಮೀನಿನಲ್ಲಿ ಪಾರಂಪರಿಕ ಉತ್ಪಾದನಾ ವಿಧಾನದ ಮೂಲಕ ಉತ್ತಿ, ಬಿತ್ತಿ, ಕೃಷಿಮಾಡಿಕೊಂಡು ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಉತ್ತಮ ಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ಸಂಪೂರ್ಣ ಮಳೆಯಾಶ್ರಿತವಾಗಿರುವ ಇವರ ಭೂಮಿಗಳಲ್ಲಿ ಚೆನ್ನಾಗಿ ಫಸಲನ್ನು ಬೆಳೆಯಲಾಗದೆ ಹಾಗೂ ಬದಲಾಗುತ್ತಿರುವ ಸಮಾಜದಲ್ಲಿ ಆಧುನೀಕರಣದ ಪ್ರಭಾವಕ್ಕೆ ಸಿಕ್ಕಿ ತನ್ನ ಅಸ್ತಿತ್ವದ ಉಳಿವಿಗಾಗಿ ನಡೆಸುತ್ತಿರುವ ಪ್ರಯತ್ನಗಳನ್ನು ಇಲ್ಲಿ ಪ್ರಧಾನ ಚರ್ಚೆಗೆ ಒಳಪಡಿಸಲಾಗಿದೆ. ಈ ಸಮುದಾಯ ಸ್ವಾತಂತ್ರ್ಯದ ನಂತರ ಹಲವಾರು ಸ್ಥಿತ್ಯಂತರ ಗಳಿಗೆ ಗುರಿಯಾಗಿರುವುದು ಕಂಡುಬರುತ್ತದೆ. ಕಾಡುಗೊಲ್ಲರಿಗೆ ಬದುಕಲು ಅರಣ್ಯ, ವ್ಯವಸಾಯಕ್ಕೆ ಬೇಕಾದ ಭೂಮಿ ಹಾಗೂ ಜನರನ್ನು ವರ್ತಮಾನದಲ್ಲಿ ಬದುಕುವಂತೆ ಪ್ರೇರೇಪಿಸುವ ಅಂಶಗಳನ್ನು ಪ್ರಧಾನವಾಗಿಟ್ಟು ಕೊಂಡು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಕಾಡುಗೊಲ್ಲರ ಸಮುದಾಯವು ಹೊಂದಿರುವ ಆರ್ಥಿಕ ಚಟುವಟಿಕೆಗಳು, ಮಾನವ ಶ್ರಮ ಸಂಪತ್ತಿನ ಬಳಕೆ, ಸಂಪನ್ಮೂಲಗಳ ಪಾತ್ರ, ಜನಸಂಖ್ಯೆ, ಕೌಟುಂಬಿಕ ಜೀವನದಲ್ಲಿ ಆವರ್ತನಗಳು, ಉದ್ಯೋಗಗಳು ಮುಂತಾದ ಆರ್ಥಿಕ ಅಂಶಗಳ ಜೊತೆಗೆ ಸಾಮಾಜಿಕ ಸಂರಚನೆ, ಭೌಗೋಳಿಕ ವಿಶ್ಲೇಷಣೆ, ಐತಿಹಾಸಿಕ ಹಿನ್ನೆಲೆ, ಧಾರ್ಮಿಕ ರೀತಿ ರಿವಾಜುಗಳು ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ವಿಶ್ಲೇಷಣೆ ಮಾಡುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಕಾಡುಗೊಲ್ಲರ ಆರ್ಥಿಕ ಸಂರಚನೆಯನ್ನು ಕುರಿತು ಕ್ಷೇತ್ರಧಾರಿತ ಮಾಹಿತಿಯನ್ನು ಸಂಗ್ರಹ ಮಾಡಿ

ಕೊಂಡಿದ್ದು ಅವರಲ್ಲಿ ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದು, ಆದಾಯದ ಅಸಮಾನತೆಯು ಹೆಚ್ಚಾಗಿದೆ. ಈ ಕಾರಣದಿಂದಾಗಿ ಕಾಡುಗೊಲ್ಲರು ಬಡವರಾಗಿಯು ಅನ್ಯ ಸಮುದಾಯದವರು ಶ್ರೀಮಂತರಾಗಿಯು ಕಂಡುಬರುತ್ತಾರೆ. ಇಷ್ಟಾಗಿಯೂ ಕೂಡ ಕಾಡುಗೊಲ್ಲರ ಅಭಿವೃದ್ಧಿಗಾಗಿ ಸರ್ಕಾರ ಯಾವುದೇ ಯೋಜನೆಯನ್ನು ಜಾರಿಗೆ ತಂದಿಲ್ಲದಿರುವುದು ಕಾಡುಗೊಲ್ಲರ ದುರ್ದೈವವೇ ಸರಿ.

ಈ ಅಧ್ಯಯನದ ಮುಖಾಂತರ ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸುವುದರ ಜೊತೆಗೆ ಇವರ ಸಾಮಾಜಿಕ ಹಿನ್ನೆಲೆಯ ಆಧಾರದ ಮೇಲೆ ಆರ್ಥಿಕ ಬದುಕು ಹೇಗೆ ಇದೆ ಎಂಬುದನ್ನು ತಿಳಿದುಕೊಳ್ಳಲಾಗಿದೆ. ಈ ಸಮುದಾಯದ ಆರ್ಥಿಕ ಸ್ಥಿತಿಗತಿಯಲ್ಲಿ ಸಮಾನತೆ, ಸಂಘಟನೆ, ಸಮಸ್ಯೆ, ಮುಂತಾದ ವಿಷಯ ಹಾಗೂ ಈ ಸಮುದಾಯದಲ್ಲಿ ಉಂಟಾಗುತ್ತಿರುವ ಸ್ಥಿತ್ಯಂತರಗಳನ್ನು ಅಧ್ಯಯನಿಸುವುದರ ಜೊತೆ ಸರ್ಕಾರ ಇಂಥವರಿಗಾಗಿ ಅಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಹಿಂದುಳಿದವರಾಗಿ ಮಾಡಿರುವ ಅಭಿವೃದ್ಧಿ ನೀತಿಗಳೇನು? ಅವುಗಳ ಫಲಿತಗಳೇನು? ಎಂಬುದನ್ನು ಅರಿತು ಅದಕ್ಕೆ ಪರಿಹಾರೋಪಾಯಗಳನ್ನು ನೀಡುವುದರ ಮೂಲಕ ಅವರ ಸ್ಥಾನಮಾನ ಸುಧಾರಿಸಿ ಪ್ರಮುಖ ವಾಹಿನಿಡೆಗೆ ಅವರನ್ನು ತರುವುದು ಅವಶ್ಯಕವಾಗಿದೆ. ಈ ಅಧ್ಯಯನದ ಮೂಲಕ ಅವರ ಆರ್ಥಿಕ ಸ್ಥಿತಿಗತಿಯ ಬಗೆಗೆ ಹಾಗೂ ಒಟ್ಟಾರೆ ಸಮಸ್ಯೆಗಳನ್ನು ಇಲ್ಲಿ ವಿವರಿಸಲಾಗಿದೆ.

ಕಾಡುಗೊಲ್ಲರಲ್ಲಿ ಪಶುಪಾಲನೆ ಹಾಗೂ ವ್ಯವಸಾಯ ಇವರ ಮೂಲವೃತ್ತಿಯಾಗಿವೆ. ಪರಂಪರಾನು ಗತವಾದ ಅವಿಷ್ಕಾರ ಪಡೆದುಕೊಳ್ಳದ ಈ ವೃತ್ತಿಗಳ ಮೂಲಕ ಅವರ ಬದುಕು ಅತಂತ್ರವಾಗುತ್ತಿದೆ. ಆಧುನಿಕತೆಯ ಈ ಸಂದರ್ಭದಲ್ಲಿ ಸಮುದಾಯದಲ್ಲಿ ಉಂಟಾಗುತ್ತಿರುವ ಸ್ಥಿತ್ಯಂತರಗಳನ್ನು ಮತ್ತು ಇವರು ವರ್ತಮಾನದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಇಲ್ಲಿ ಅಧ್ಯಯನಿಸಲಾಗುವುದು. ಕಾಡುಗೊಲ್ಲರಿಗೆ ಇನ್ನು ಆರ್ಥಿಕ ಮೂಲಗಳು ದಕ್ಕಿಲ್ಲ. ವ್ಯವಸಾಯ ಮಾಡಲು ಬೆರಳೆಣಿಕೆಯ ಜನರಿಗೆ ಭೂಮಿ ಸಿಕ್ಕರೆ, ಇನ್ನುಳಿದವರು ಕೃಷಿಕೂಲಿಗಳಾಗಿ ಬದುಕುತ್ತಿದ್ದಾರೆ. ಈ ಸಮುದಾಯದಲ್ಲಿಯ ಮೂಲ ಉದ್ಯೋಗದ ಮೂಲಕ ಅವರಿಗೆ ಉಳಿತಾಯ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ ಹಾಗೂ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕದೇ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತೀರಾ ಹಿಂದುಳಿಯುತ್ತಿದ್ದಾರೆ ಮತ್ತು ಹಲವಾರು ಬಗೆಯ ಸಾಮಾಜಿಕ ಹಿನ್ನಡೆಯನ್ನು ಅನುಭವಿಸುತ್ತಿದ್ದಾರೆ. ಒಟ್ಟಾರೆ ಸಾಂಸ್ಕೃತಿಕವಾಗಿ ಶ್ರೀಮಂತವಿರುವ ಕಾಡುಗೊಲ್ಲರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಈ ಕಾರಣಕ್ಕಾಗಿ ಇವರ ಆರ್ಥಿಕ ಬದುಕನ್ನು, ದುಡಿಮೆ ಸ್ವರೂಪವನ್ನು ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ.

೧.೨ ಅಧ್ಯಯನದ ಉದ್ದೇಶ

೧. ಕಾಡುಗೊಲ್ಲರ ಚಾರಿತ್ರಿಕ ಬೆಳವಣಿಗೆಯನ್ನು ಕಂಡುಕೊಳ್ಳುವುದು. ಇದಕ್ಕಾಗಿ ಸಾಹಿತ್ಯಿಕ ಹಾಗೂ ಸಮುದಾಯದ ಒಳಗಿರುವ ಐತಿಹ್ಯಗಳನ್ನು ಪರಿಶೀಲಿಸುವುದು.

೨. ಕಾಡುಗೊಲ್ಲರ ಸಾಂಸ್ಕೃತಿಕ ಅನನ್ಯತೆಯನ್ನು ದಾಖಲಿಸುವುದು.

೩. ಕಾಡುಗೊಲ್ಲರ ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳನ್ನು ಗುರುತಿಸುವುದು.

೪. ಕಾಡುಗೊಲ್ಲರ ಆರ್ಥಿಕ ಚಟುವಟಿಕೆಯ ಪ್ರಮುಖ ಮೂಲಗಳಾದ ಪರಂಪರಾನುಗತ ಹಾಗೂ ಅವಲಂಬಿತ ವೃತ್ತಿಗಳ ದುಡಿಮೆಯ ಸ್ವರೂಪವನ್ನು ಅಧ್ಯಯನಿಸುವುದು.

೫. ಪ್ರಸ್ತುತ ಸಂದರ್ಭದಲ್ಲಿ ಕಾಡುಗೊಲ್ಲರ ಎದುರಿಸುವ ಸಮಸ್ಯೆಗಳನ್ನು ಶೋಧಿಸುವುದು.

೬. ಸರ್ಕಾರದ ಯೋಜನೆಗಳಿಂದ ಕಾಡುಗೊಲ್ಲರಿಗೆ ಪ್ರಯೋಜನಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸುವುದು.

೧.೩ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯಲ್ಲಿಯ ಮೊಳಕಾಲ್ಮೂರು, ಚಳ್ಳಕೆರೆ ತಾಲ್ಲೂಕಿನಲ್ಲಿರುವ ಆಯ್ದ ಗ್ರಾಮಗಳನ್ನು ಆಯ್ದುಕೊಂಡಿರುತ್ತೇನೆ. ಮೊಳಕಾಲ್ಮೂರು ತಾಲ್ಲೂಕಿನ ಗುಂಡ್ಲೂರು, ಚಳ್ಳಕೆರೆ ತಾಲ್ಲೂಕಿನ ಜೋಗಿಹಟ್ಟಿ, ಹನುಮಂತನಹಳ್ಳಿ ಗೊಲ್ಲರಹಟ್ಟಿ, ಬೆಂಜಿಗೆರೆ ಗೊಲ್ಲರಹಟ್ಟಿ, ಯಲಗಟ್ಟಿ ಗೊಲ್ಲರಹಟ್ಟಿಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ನಾನು ಅಧ್ಯಯನಕ್ಕಾಗಿ ಈ ಪ್ರದೇಶಗಳನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣಗಳೆಂದರೆ ಇಲ್ಲಿ ಆರ್ಥಿಕವಾಗಿ ಬಡತನ ರೇಖೆಗಿಂತ ಕಡಿಮೆಯಿರುವ ಕುಟುಂಬಗಳು, ಮಧ್ಯಮವರ್ಗದ ಕುಟುಂಬಗಳು ಹಾಗೂ ಶ್ರೀಮಂತ ಕುಟುಂಬಗಳ ಮಿಶ್ರಣವಿರುವುದರಿಂದ ಈ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡೆನು. ಹಾಗೀಗಿ ಈ ಪ್ರದೇಶಗಳ ಕಾಡುಗೊಲ್ಲರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳು ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ.

೧.೪ ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಪ್ರಾಥಮಿಕ ಹಾಗೂ ಅನುಷಂಗಿಕ ಆಕರಗಳಲ್ಲಿಯ ಮಾಹಿತಿಯನ್ನು ಸಂಗ್ರಹಿಸಿ ಇಲ್ಲಿ ಬಳಸಿಕೊಳ್ಳಲಾಗಿದೆ. ಇದು ಮುಖ್ಯವಾಗಿ ಕ್ಷೇತ್ರಕಾರ್ಯ ಆಧಾರಿತ ಅಧ್ಯಯನ ವಾಗಿದೆ. ಕಾಡುಗೊಲ್ಲರ ಬಗ್ಗೆ ನಡೆದಿರಕ್ಕಂತ ಅಧ್ಯಯನಗಳು ಕಡಿಮೆಯಾಗಿದ್ದು, ಕ್ಷೇತ್ರಕಾರ್ಯದ ಮಾಹಿತಿಯನ್ನು ಈ ಅಧ್ಯಯನದಲ್ಲಿ ಬಳಸಿಕೊಂಡು ಪ್ರಬಂಧವನ್ನು ಸಿದ್ಧಡಿಸಲಾಗಿದೆ.

೧. **ಲಭ್ಯವಿರುವ ಆಕಾರಗಳ ಅಧ್ಯಯನ** : ಸ್ವಾತಂತ್ರ್ಯ ಪೂರ್ವದಿಂದ ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಪರಾಮರ್ಶಿಸುವುದು. ಜೊತೆಗೆ ಕಾಡುಗೊಲ್ಲರ ಮೌಖಿಕ ಸಾಹಿತ್ಯವನ್ನು ಪ್ರಧಾನ ಆಕರವೆಂದು ಅಧ್ಯಯನ ಮಾಡುವುದು.

೨. **ಐತಿಹಾಸಿಕ ವಿಧಾನ** : ಕಾಡುಗೊಲ್ಲರ ಮೂಲದ ಬಗ್ಗೆ ತಿಳಿಯುವುದಕ್ಕಾಗಿ ಲಭ್ಯವಾದ ಮೌಖಿಕ

ಮತ್ತು ಲಿಖಿತ ಸಾಹಿತ್ಯಿಕ ಆಕರಗಳ ಮೂಲಕ ಅಧ್ಯಯನ ಮಾಡಲಾಗಿದೆ. ಕಾಡುಗೊಲ್ಲರ ಮೌಖಿಕ ಸಾಹಿತ್ಯ, ಆಚರಣೆ, ಆರಾಧನಾ ಪರಂಪರೆ, ಸ್ಮಾರಕಗಳು ಮತ್ತು ವಿಧಿನಿಷೇಧಗಳನ್ನು ಪ್ರಧಾನವಾಗಿ ಮತ್ತು ಲಿಖಿತ ಆಕರಗಳನ್ನು ಅನುಷಂಗಿಕವಾಗಿ ಬಳಸಲಾಗಿದೆ.

೩. **ಪ್ರಶ್ನಾವಳಿ ವಿಧಾನ** : ಕಾಡುಗೊಲ್ಲ ಸಮುದಾಯದ ಉದ್ದೇಶಗಳನ್ನು ತಿಳಿಯುವುದಕ್ಕಾಗಿ ಪೂರಕವಾದ ಪ್ರಶ್ನಾವಳಿಗಳನ್ನು ತಯಾರಿಸಿ ಅದನ್ನು ಪರೀಕ್ಷೆಗೊಳಪಡಿಸಿದ ನಂತರ ಸೂಕ್ತ ಪ್ರಶ್ನೆಗಳನ್ನು ತಯಾರಿಸಿ, (ಮಾದರಿ) ಐದು ಗ್ರಾಮಗಳನ್ನು ಸೂಕ್ಷ್ಮ ಸಮೀಕ್ಷೆಗೆ ಒಳಪಡಿಸಲಾಗಿದೆ. ಸದರಿ ಪ್ರಶ್ನಾವಳಿಗಳನ್ನು ಕೌಟುಂಬಿಕ ಸಮೀಕ್ಷೆ(House hold data)ಯನ್ನು ಸಂಗ್ರಹಿಸಲು ಬಳಸಿಕೊಳ್ಳಲಾಗಿದೆ.

೪. **ಸಂದರ್ಶನ ವಿಧಾನ** : ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವುದಕ್ಕೋಸ್ಕರ ಪ್ರಶ್ನಾವಳಿ ಮಾಡಿಕೊಂಡು, ಸಂದರ್ಶನದ ಮೂಲಕ ಧ್ವನಿಸುರುಳಿಯನ್ನು ಮಾಡಿಕೊಂಡು, ಕಾಡುಗೊಲ್ಲ ಸಮುದಾಯದ ಹಿರಿಯ ವ್ಯಕ್ತಿಗಳಿಂದ ಹಾಗೂ ಸ್ತ್ರೀಯರನ್ನು ಮಾಹಿತಿದಾರರಾಗಿರಿಸಿಕೊಂಡು ಅನೇಕ ಮಾಹಿತಿಗಳನ್ನು ಅಧ್ಯಯನಕ್ಕಾಗಿ ಸಂಗ್ರಹಿಸಲಾಗಿದೆ.

೫. **ಅವಲೋಕನ ವಿಧಾನ** : ಕಾಡುಗೊಲ್ಲರ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವಿಷಯಗಳನ್ನು ಆಯಾ ಸಂದರ್ಭದಲ್ಲಿ ಅವಲೋಕಿಸಿ ಸತ್ಯಕ್ಕೆ ಹತ್ತಿರವಾದ ಮಾಹಿತಿಯನ್ನು ದಾಖಲಿಸಿ ಕೊಳ್ಳುವ ಮೂಲಕ ಸಮುದಾಯದ ವಾಸ್ತವ ಅಂಶಗಳನ್ನು ಕಟ್ಟಿಕೊಡುವ ಪ್ರಯತ್ನದಲ್ಲಿ ಅವಲೋಕನ ವಿಧಾನವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ಧ್ವನಿಮುದ್ರಣ, ಛಾಯಾ ಚಿತ್ರಗಳನ್ನು ಸೆರೆ ಹಿಡಿದು ಕ್ಷೇತ್ರಕಾರ್ಯದ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಅವಲೋಕನ ಮತ್ತು ಸಹಭಾಗಿತ್ವ ವಿಧಾನವನ್ನು ಬಳಸಲಾಗಿದೆ.

೬. **ಸಂಖ್ಯಾಶಾಸ್ತ್ರೀಯ ವಿಧಾನ** : ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಅಂಕಿ-ಸಂಖ್ಯೆಗಳ ವಿಷಯಕ್ಕೆ ಸಂಬಂಧಿಸಿದಂತೆ ವರ್ಗೀಕರಣ ಮಾಡಿ ಅನೇಕ ಕೋಷ್ಟಕಗಳನ್ನು ಸಿದ್ಧಪಡಿಸಲಾಗಿದೆ.

೭. **ತೌಲನಿಕ ವಿಧಾನ** : ಸಂಶೋಧನೆಯಲ್ಲಿ ತೌಲನಿಕ ವಿಧಾನ ತುಂಬಾ ಅವಶ್ಯಕವಾಗಿದ್ದು, ಕಾಡುಗೊಲ್ಲರಿಗೆ ಸಂಬಂಧಿಸಿದಂತೆ ಹಲವಾರು ವಿಚಾರಗಳನ್ನು ಅನ್ಯ ಸಮುದಾಯದ ಜೊತೆಗೆ ಹೋಲಿಸಿ ನೋಡುವುದಕ್ಕಾಗಿ ಹಾಗೂ ಹಿಂದಿನ ಕಾಡುಗೊಲ್ಲರ ಸಮುದಾಯಕ್ಕೂ ಮತ್ತು ಪರಿವರ್ತನೆಗೊಂಡ ಇಂದಿನ ಕಾಡುಗೊಲ್ಲರಿಗೆ ತುಲನೆ ಮಾಡಲು ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ.

೧.೫ ಇದುವರೆಗೆ ನಡೆದ ಅಧ್ಯಯನ ಸಮೀಕ್ಷೆ

ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯ ಬಗ್ಗೆ ಹಲವಾರು ಸಂಶೋಧನಾತ್ಮಕ ಅಧ್ಯಯನಗಳು ನಡೆದಿವೆಯಾದರೂ ಅವು ಕಡಿಮೆ ಎಂದು ಹೇಳಬಹುದು. ಕಾಡುಗೊಲ್ಲರ ಸಮುದಾಯ

ಕುರಿತು ಕುಲಶಾಸ್ತ್ರೀಯ (Ethnographic) ಮತ್ತು ಮಾನವಶಾಸ್ತ್ರೀಯ (Anthropological Studies) ಅಧ್ಯಯನಗಳು ನಡೆದಿದ್ದು, ಇವುಗಳನ್ನು ಅನೇಕ ವಿದ್ವಾಂಸರು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮತ್ತು ಅದರಲ್ಲೂ ವಿಶೇಷವಾಗಿ ವಿದೇಶಿ ವಿದ್ವಾಂಸರು ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಅಲ್ಲಲ್ಲಿ ಸಂಶೋಧನಾ ಲೇಖನಗಳು, ಪ್ರಬಂಧಗಳು, ಗ್ರಂಥಗಳು ಪ್ರಕಟಗೊಂಡಿವೆ. ಮುಖ್ಯವಾಗಿ ಈ ಅಧ್ಯಯನಗಳು ಕಾಡುಗೊಲ್ಲರ ಆರ್ಥಿಕ, ಸಾಹಿತ್ಯಿಕ, ಸಾಮಾಜಿಕ, ಐತಿಹಾಸಿಕ ಮತ್ತು ಧಾರ್ಮಿಕವಾದ ಸ್ಥಿತ್ಯಂತರಗಳ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ.

ಬಿ.ಎಫ್. ಪಾಸೆಟರವರು ಕ್ರಿ.ಶ. ೧೮೮೮ರ ಮುಂಬಯಿ ಪ್ರಾಂತ್ಯದಲ್ಲಿ ಪ್ರಕಟವಾಗಿದ್ದ "The Journal of Anthropological Society" ಎಂಬ ಪತ್ರಿಕೆಯ ಮೊದಲ ಸಂಪುಟದಲ್ಲಿ ಕಾಡುಗೊಲ್ಲರ ಬಗ್ಗೆ ಮಾಹಿತಿ ಸಿಗುತ್ತದೆ. ಇಲ್ಲಿ ಕಾಡುಗೊಲ್ಲರ ಮೂಲದ ಬಗ್ಗೆ ತಿಳಿಸುತ್ತಾ, ಇವರು ಮೂಲತಃ ಉತ್ತರ ಭಾರತದಿಂದ ಬಂದವರಾಗಿದ್ದು, ಕಾಡುಗೊಲ್ಲರನ್ನು ಅಡವಿಗೊಲ್ಲರು ಎಂದು ಕರೆಯುತ್ತಿದ್ದರು. ೧೯೧೧ ರಿಂದ ೧೯೭೧ರ ಜನಗಣತಿಯಲ್ಲಿ ಊರುಗೊಲ್ಲರು ಮತ್ತು ಕಾಡುಗೊಲ್ಲರನ್ನು ಪ್ರತ್ಯೇಕವಾಗಿ ಗುರುತಿಸುತ್ತಿದ್ದರು. ಇಲ್ಲಿ ವಿಶೇಷವಾಗಿ ಮಹಿಳೆಯರು ಆಚರಿಸುತ್ತಿದ್ದ ಸಂಪ್ರದಾಯ ಮತ್ತು ಆಚರಣೆಗಳ ಜೊತೆಗೆ ಕಾಡುಗೊಲ್ಲರ ಮಹಿಳೆಯರಿಗೆ ಇರತಕ್ಕಂತ ಕಟ್ಟಾಚರಣೆಗಳನ್ನು ಸವಿಸ್ತಾರವಾಗಿ ಚರ್ಚಿಸಿದ್ದಾರೆ.

ಎಫ್. ಬುಕಾನನ್(೧೮೦೭)ರುರು "Journey through Mysore, Canara and Malbar" ಎಂಬ ಕೃತಿಯ ಮೊದಲನೆಯ ಸಂಪುಟದಲ್ಲಿ ಕಾಡುಗೊಲ್ಲರ ಪಶುಪಾಲನೆಯನ್ನು ಕುರಿತು ಸವಿಸ್ತಾರವಾದ ಮಾಹಿತಿಯನ್ನು ನೀಡಿದ್ದಾರೆ. ಅಲೆಮಾರಿಗಳಾಗಿದ್ದ ಕಾಡುಗೊಲ್ಲರು ಊರಿನಿಂದ ಊರಿಗೆ ಪಶುಗಳನ್ನು ಮೇಯಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ದಷ್ಟಪುಷ್ಟವಾಗಿರುವಂತಹ ಕಾಡುಗೊಲ್ಲರ ಪಶುಗಳು ಕಳ್ಳತನ ವಾಗುತ್ತಿದ್ದು, ಹುಲಿ ಮತ್ತು ಇನ್ನಿತರ ಕಾಡುಪ್ರಾಣಿಗಳಿಂದ ರಕ್ಷಣೆ ಮಾಡುವುದಕ್ಕೋಸ್ಕರ ರಾತ್ರಿಯಲ್ಲಿ ಬೆಂಕಿ ಉರಿಸುತ್ತಿದ್ದರು. ಕಾಡುಗೊಲ್ಲರಿಗೆ ೧೦೦ ದನಗಳ ಹಿಂಡನ್ನು ಕಾಯಲು ಇಬ್ಬರು ಗಂಡಸರು ಎರಡು ನಾಯಿಗಳು ಬೇಕಾಗುತ್ತಿದ್ದವು. ಅಷ್ಟೊಂದು ಪಶುಸಂಪತ್ತನ್ನು ಕಾಡುಗೊಲ್ಲರು ಹೊಂದಿದ್ದರು. ಅವರು ಹೆಚ್ಚಾಗಿ ಹುಲ್ಲುಗಾವಲು ಮತ್ತು ಕೃಷಿಗೆ ಯೋಗ್ಯವಾದ ಭೂಮಿಯಿದ್ದ ಕಡೆ ನೆಲೆಸುತ್ತಿದ್ದರು. ಹೆಚ್ಚು ಪಶುಸಂಪತ್ತನ್ನು ಹೊಂದಿದವರು ಶ್ರೀಮಂತರಾಗಿರುತ್ತಿದ್ದರೆಂದು, ಉದಾಹರಣೆಗೆ ಜುಂಜಪ್ಪನನ್ನು ಅತಿಹೆಚ್ಚು ಪಶುಸಂಪತ್ತನ್ನು ಹೊಂದಿದ್ದನೆಂದು ವಿವರಿಸುತ್ತಾ ಇನ್ನೂ ಹತ್ತು ಹಲವಾರು ವಿಷಯಗಳನ್ನು ವಿವರಿಸುತ್ತಾ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡಿದ್ದಾರೆ.

ಎಡ್ಗರ್ ಥರಸ್ಟನ್ ಮತ್ತು ಕೆ. ರಂಗಾಚಾರಿಯವರು (೧೯೮೭) ತಮ್ಮ "Castes and Tribes of Southern India" ಎಂಬ ಕೃತಿಯಲ್ಲಿ ಕಾಡುಗೊಲ್ಲರ ಬಗ್ಗೆ ಮೂರು ಪುಟಗಳಲ್ಲಿ ವಿವರಿಸುತ್ತಾ, ಕಾಡುಗೊಲ್ಲ ಸಮುದಾಯವು ಬುಡಕಟ್ಟು ಪಂಗಡವಾಗಿದೆ ಎಂದು ಇದನ್ನು ೧೮೯೧ ಮತ್ತು ೧೯೦೧ರಲ್ಲಿ

ದೊರೆತ ಮಾಹಿತಿಯನ್ನು ಆಧರಿಸಿ ವಿವರಿಸಿದ್ದಾರೆ. ಇದರ ವಿವರಣೆಯನ್ನು "Journal of Anthropoligical Society of Bombay" ಎಂಬ ಪತ್ರಿಕೆಯ ಭಾಗದಲ್ಲಿ ಉದ್ಧರಿಸಿದ್ದಾರೆ.

ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣಯ್ಯನವರು "The Mysore Tribes and Castes"(1928-36)ದಲ್ಲಿ ಬುಡಕಟ್ಟುಗಳ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಈ ಅಧ್ಯಯನದ ನಾಲ್ಕು ಸಂಪುಟಗಳಲ್ಲಿ ಮೂರನೆಯ ಸಂಪುಟದಲ್ಲಿ ಕಾಡುಗೊಲ್ಲರ ಬಗ್ಗೆ ಲೇಖನವಿದೆ. ಕಾಡುಗೊಲ್ಲರು ವಾಸಿಸುವ ಪ್ರದೇಶಗಳು, ಸಮಾಜದ ಒಳರಚನೆ, ಬೆಡಗು, ಹುಟ್ಟು, ಸಾವು, ಮದುವೆಯಲ್ಲಿ ನಡೆಯುವ ಸಂಪ್ರದಾಯಗಳಲ್ಲದೆ ಧರ್ಮ, ಆಹಾರ, ಕಸುಬು, ಉಡುಗೆ-ತೊಡುಗೆ, ಮೊದಲಾದವುಗಳ ವಿವರಣೆಯನ್ನು ನೀಡಿದ್ದಾರೆ. ಮಾನವ ವಿಜ್ಞಾನದ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯದ ಮೂಲಕ ಕಾಡುಗೊಲ್ಲರ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಕರ್ನಾಟಕದಲ್ಲಿ ನಡೆದ ಜನಾಂಗಗಳ ಅಧ್ಯಯನಗಳಲ್ಲಿ ಇದೊಂದು ಮಾದರಿ ಆಗಿದ್ದು, ಕಾಡುಗೊಲ್ಲರನ್ನು "ಕಾಡುಬುಡಕಟ್ಟು" (Forest Tribe) ಎಂದು ಗುರುತಿಸಿರುವುದು ವಿಶೇಷವಾಗಿದೆ.

ಬಿ.ಎಂ. ಮಹಾದೇವಶಾಸ್ತ್ರಿಗಳು ೧೯೪೦ರಲ್ಲಿ ಪ್ರಕಟಿಸಿದ "ಯಾದವರ ಕೈಪಿಡಿ ಅರ್ಥಾತ್ ಗೊಲ್ಲಗೌಡರ ವಂಶಾವಳಿಗಳು" ಎಂಬ ಕೃತಿ ತಾಮ್ರಪಟದಿಂದ ಪ್ರಾಪ್ತವಾಗಿದ್ದು, ಮದುವೆಯಲ್ಲಿ ವಿಳ್ಯೇದೆಲೆ ಎತ್ತುವ ವಿವರಗಳನ್ನು ನೀಡುವುದಲ್ಲದೆ, ಪಾತದೇವರ ಪ್ರಕರಣದ ವಿವರಣೆಯನ್ನು ನೀಡುತ್ತಾ ಅದು ಸಾಂಸ್ಕೃತಿಕ ಮಹತ್ವವನ್ನು ವಿವರಿಸಿರುತ್ತದೆ.

ಎ.ಎ.ಡಿ.ಲೂಯಿಸ್ ಅವರು "Tribes of Mysore"ನಲ್ಲಿ ೨೭ ಬುಡಕಟ್ಟುಗಳನ್ನು ಗುರುತಿಸಿದ್ದಾರೆ. ಇದರಲ್ಲಿ ಕಾಡುಗೊಲ್ಲ ಸಮುದಾಯವು ಸಹ ಒಂದು ಬುಡಕಟ್ಟು ಎಂದು ಪರಿಗಣಿಸಿದ್ದಾರೆ. ಯಾವುದೇ ಒಂದು ಬುಡಕಟ್ಟು ಎಂದು ಕರೆಯಿಸಿಕೊಳ್ಳಬೇಕಾದರೆ ಭಾರತ ಸರ್ಕಾರ "The Centrel Tribale Advisory Boardನ ಅಧ್ಯಕ್ಷರು 'The All India Nomadica Tribal Enquirey comitee" ಸದಸ್ಯರಾಗಿದ್ದು, ಇವರು ಕಾಡುಗೊಲ್ಲರ ಭಾಷೆಯಲ್ಲಿ ಉರ್ದು, ಮರಾಠಿ ಮತ್ತು ಕನ್ನಡ ಶಬ್ದಗಳಿಂದ ತುಂಬಿದೆ ಎಂದು ಹೇಳಿರುವುದು ಸೂಕ್ತವಲ್ಲವೆಂದೇ ಹೇಳಬಹುದು. ಆದರೆ ಇದು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಲ್ಲ. ಹಿಂದುಳಿದ ವರ್ಗಗಳಲ್ಲಿ (Backward Classes) ಅರೆ ಅಲೆಮಾರಿ ಬುಡಕಟ್ಟು (Semi-Nomadic Tribe) ವರ್ಗಕ್ಕೆ ಹಿಂದೆ ಸೇರಿಸಿದ್ದರು. ಈಗ ಅದನ್ನು ಹಿಂದುಳಿದ ಬುಡಕಟ್ಟು (Backward) ಗುಂಪಿಗೆ ಸೇರಿಸಿದ್ದಾರೆ.

ತೀ.ನಂ.ಶಂಕರನಾರಾಯಣರವರು ಪ್ರಕಟಿಸಿದ "ಕಾಡುಗೊಲ್ಲರ ನಂಬಿಕೆಗಳು ಮತ್ತು ಸಂಪ್ರದಾಯಗಳು" ಎಂಬ ಕೃತಿ ಇದುರೆಗೂ ನಡೆದ ಅಧ್ಯಯನಗಳಲ್ಲಿ ಅತ್ಯಂತ ಮಹತ್ವವಾಗಿದ್ದು, ಕಾಡುಗೊಲ್ಲರನ್ನು ಕುರಿತು ಸವಿಸ್ತಾರವಾದ ಮಾಹಿತಿಯನ್ನು ವಿಶ್ಲೇಷಣೆಯೊಂದಿಗೆ ವಿವರಿಸಿದ್ದಾರೆ. ಇದು ಕಾಡುಗೊಲ್ಲರನ್ನು ಕುರಿತು ವಿಮರ್ಶಾತ್ಮಕವಾಗಿ ಸಂಶೋಧನೆ ಕೈಗೊಂಡ ಅತ್ಯುತ್ತಮ ಅಧ್ಯಯನವಾಗಿದೆ. ಈ ಕೃತಿಯಲ್ಲಿ ಕಾಡುಗೊಲ್ಲರ

ಹುಟ್ಟಿನಿಂದ ಸಾಯುವವರೆಗೂ ನಡೆಸುವ ಎಲ್ಲ ಸಂಪ್ರದಾಯ, ಆಚರಣೆಗಳನ್ನು ವಿವರಿಸಲಾಗಿದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಎತ್ತಪ್ಪ ಮತ್ತು ಜುಂಜಪ್ಪನನ್ನು ಕುರಿತಾದ ಸೃಷ್ಟಿ ಪುರಾಣಗಳನ್ನು ಹಾಗೂ ಇವರು ದೈವವಾಗಿ ಕಾಣಿಸಿಕೊಂಡ ಬಗೆಯನ್ನು ವಿವರಿಸಲಾಗಿದೆ. ಹಾಗೂ ಕಾಡುಗೊಲ್ಲರು ಇತರೆ ಸಮುದಾಯಗಳ ಜೊತೆ ಹೊಂದಿರುವ ಬಾಂಧವ್ಯಗಳನ್ನು ಕುರಿತು ಚರ್ಚಿಸಿದ್ದಾರೆ.

ಜೀ.ಶಂ. ಪರಮಶಿವಯ್ಯರವರು (೧೯೭೯) "ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು" ಎಂಬ ಗ್ರಂಥದಲ್ಲಿ "ಕಾಡುಗೊಲ್ಲರ ಜುಂಜಪ್ಪನ ಸಂಪ್ರದಾಯ"ದಲ್ಲಿ ಜುಂಜಪ್ಪ ವೃತ್ತಿಯಲ್ಲಿ ಅಪಾರ ಸಾಹಸದಿಂದ ಮೆರೆದಿದ್ದ ಎಂದು ತಿಳಿಸುತ್ತಾ ಅವನ ವೈಶಿಷ್ಟ್ಯ ಮತ್ತು ಮಹಿಮೆಯನ್ನು ವಿವರಿಸಿದ್ದಾರೆ. ಚನ್ನರಾಯಪಟ್ಟಣ ಭಾಗದಲ್ಲಿ ಸಂಗ್ರಹಿಸಿದ ಕತೆಗೆ "ದಕ್ಷಿಣ ಸಂಪ್ರದಾಯ"ವೆಂದು ಶಿರಾದ ಸುತ್ತಲಿನ ಪ್ರದೇಶದಲ್ಲಿ ಸಂಗ್ರಹಿಸಿದ ಕಥೆಗೆ "ಉತ್ತರ ಸಂಪ್ರದಾಯ"ವೆಂದು ವಿಭಾಗಿಸಿ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಜುಂಜಪ್ಪನ ಸಾಹಸಗಾಥೆಯನ್ನು ವಿಶ್ಲೇಷಿಸಿದ್ದಾರೆ.

ಅಂಬಳಿಕೆ ಹಿರಿಯಣ್ಣರವರು "ಕಾಡುಗೊಲ್ಲರ ಜನಪದ ಗೀತೆಗಳು" ಎಂಬ ಕೃತಿಯಲ್ಲಿ ಕಾಡುಗೊಲ್ಲರ ಪಂಚ ದೈವಗಳಾದ ಕ್ಯಾತಲಿಂಗ, ಪಾತೇಲಿಂಗ, ಕಾಟಂಲಿಂಗರನ್ನು ಕುರಿತಾದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಕಾಡುಗೊಲ್ಲರ ಮದುವೆ ಹಾಡು, ಒಸಗೆ ಪದಗಳು, ಅವರ ಆರಾಧ್ಯ ದೈವಗಳಾದ ಕರಿಓಬೇನಹಳ್ಳಿ ಮಾರಕ್ಕ, ಮಾಯಸಂದ್ರದ ಕರಿಯಮ್ಮ, ರಂಗಪ್ಪ ಮೊದಲಾದವರನ್ನು ಕುರಿತಾದ ಹಾಡುಗಳನ್ನು ಸಂಗ್ರಹಿಸುವುದರ ಜೊತೆಗೆ ತ್ರಿಪದಿಗಳಲ್ಲಿ ಅಡಗಿರುವ ಜುಂಜಪ್ಪನ ಸಾಹಿತ್ಯವನ್ನು ಕಲೆಹಾಕಿದ್ದಾರೆ.

ಕಾಳೇಗೌಡ ನಾಗವಾರ ಅವರು "ಕಾಡುಗೊಲ್ಲರ ಹಟ್ಟಿಯೊಂದರ ಜನಪದ ಸಾಹಿತ್ಯ"ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಇಲ್ಲಿ ಕಾಡುಗೊಲ್ಲರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಸೂಕ್ಷ್ಮಗಳನ್ನು ವಿವರಿಸುವುದರ ಜೊತೆಗೆ ಕಾಡುಗೊಲ್ಲರ ಸಾಂಸ್ಕೃತಿಕ ನೆಲೆ, ವೀರನಾದ ಜುಂಜಪ್ಪನ ಸಾಹಸವನ್ನು ವಿವರಿಸಿದ್ದಾರೆ. ಕರಮೋರಳ್ಳಿಗೆ ಸಮೀಪವಿರುವ ಶಿರಾ ತಾಲೂಕಿನ ಬೇವಿನಹಳ್ಳಿಯನ್ನು ಮುಖ್ಯವಾಗಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಂಡಿದ್ದಾರೆ.

ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು "ಕಾಡುಗೊಲ್ಲರ ಬುಡಕಟ್ಟು ವೀರರು" (೨೦೦೫) ಎಂಬ ಗ್ರಂಥದಲ್ಲಿ ಪಶುಪಾಲಕ ಹಾಗೂ ಕೃಷಿ ಸಂಸ್ಕೃತಿ ನಡುವಿನ ಸಂಘರ್ಷ, ಶಿಷ್ಟ ಸಂಸ್ಕೃತಿಯ ಪ್ರತಿರೋಧಗಳನ್ನು ವಿವರಿಸುತ್ತಾ ಕಾಡುಗೊಲ್ಲರ ಸಾಂಸ್ಕೃತಿಕ ವೀರರಾದ ಎತ್ತಪ್ಪ ಮತ್ತು ಜುಂಜಪ್ಪನನ್ನು ಕೇಂದ್ರವಾಗಿಟ್ಟುಕೊಂಡು ಇವರ ಸಾಹಸಗಳನ್ನು ವಿವರಿಸುತ್ತಾ ಇವರ ಜೊತೆಗೆ ಈರಗಾರತಿಯರಾದ ಗಿಡ್ಡಮ್ಮ, ಪಗಮ್ಮ, ಈರೋವಿ ಇನ್ನು ಹಲವಾರು ವಿವರಣೆಗಳನ್ನು ನೀಡಿದ್ದಾರೆ. ಜುಂಜಪ್ಪ ಮತ್ತು ಎತ್ತಪ್ಪನ ಸಂಪ್ರದಾಯವನ್ನು ವಿವರಿಸಿದ್ದಾರೆ. ಕ್ಷೇತ್ರಕಾರ್ಯದ ಮೂಲಕವೇ ಒಟ್ಟಾರೆ ಅಧ್ಯಯನ ಕೈಗೊಂಡಿರುವ ಇವರು ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರ ವಿಶೇಷತೆಯನ್ನು ವಿವರಿಸಿದ್ದಾರೆ. ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು ಪ್ರಕಟಿಸಿರುವ ಈ

[illegible]

ಕಾಡುಗೊಲ್ಲರ ಬುಡಕಟ್ಟು ವೀರರು ಇದೊಂದು ಪಿಎಚ್.ಡಿ ಪ್ರಬಂಧವಾಗಿದೆ. ೧೯೯೬ರಲ್ಲಿ ಮೈಸೂರು ವಿಶ್ವವಿದ್ಯಾಲಯ ಈ ಪ್ರಬಂಧಕ್ಕೆ ಪಿಎಚ್.ಡಿ. ಪದವಿ ನೀಡಿದೆ.

ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರು ರಚಿಸಿದ "ಗೊಲ್ಲಕಡಗ" (೧೯೯೯) ಎಂಬ ಗ್ರಂಥದಲ್ಲಿ ಕಾಡುಗೊಲ್ಲರ ನೆಲೆಗಳು, ಪ್ರಸಿದ್ಧ ಕುಲದೇವರುಗಳು, ರವಿಕೆ ರಹಿತ ಸಂಪ್ರದಾಯ ಮತ್ತು ಎತ್ತಪ್ಪನ ಸಂಪ್ರದಾಯವನ್ನು ವಿವರಿಸಿದ್ದಾರೆ. ಕಾಡುಗೊಲ್ಲರ ಸಂಪ್ರದಾಯ, ಆಚರಣೆಗಳಲ್ಲದೇ ಎರಡು ವಿಶಿಷ್ಟ ಸಂಪ್ರದಾಯಗಳ ಬಗ್ಗೆ ವಿವರಿಸಿದ್ದಾರೆ. ಕಾಡುಗೊಲ್ಲರಲ್ಲಿಯ ಊದುಗಣೆ, ಢಗಮು ಇವು ರೋಚಕ ಜನಪದ ವಾದ್ಯಗಳು. ಇವುಗಳ ಬಗ್ಗೆ ವಿಶ್ಲೇಷಣೆ ನೀಡಿದ್ದಾರೆ. ಕಾಡುಗೊಲ್ಲರ ಸಮುದಾಯವು ಜಾನಪದೀಯ ನೆಲೆಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದೆ. ಅದು ಈಗ ಚರಿತ್ರೆಯನ್ನಾಗಿ ಹೇಗೆ ಕಟ್ಟಿಕೊಳ್ಳುತ್ತಿದೆ ಮತ್ತು ತನ್ನ ಸಮುದಾಯದ ವೈಶಿಷ್ಟ್ಯತೆಯನ್ನು ಹೇಗೆ ಕಾಪಾಡಿಕೊಳ್ಳುತ್ತಿದೆ ಎಂಬುದನ್ನು ಚರ್ಚಿಸಿದ್ದಾರೆ.

ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರ ಕೃತಿಯಾದ "ಕಾಡುಗೊಲ್ಲರ ಸಂಸ್ಕೃತಿ" (೨೦೦೪) ಎಂಬ ಗ್ರಂಥದಲ್ಲಿ ಕಾಡುಗೊಲ್ಲರ ಮೂಲವೃತ್ತಿ ಪಶುಪಾಲನೆ ಇಂದು ಯಾವ ಹಂತದಲ್ಲಿದೆ, ಆಧುನಿಕತೆ ಪರಿಸ್ಥದಲ್ಲಿ ಕಾಡುಗೊಲ್ಲರ ಪಶುಪಾಲನೆ ಯಾವ ಕಡೆ ಸಾಗುತ್ತಿದೆ, ಅವರ ಸಮಸ್ಯೆಗಳೇನು, ಈ ಸಮುದಾಯದ ಸಾಂಸ್ಕೃತಿಕ ನಾಯಕರಾದ ಎತ್ತಪ್ಪ ಮತ್ತು ಜುಂಜಪ್ಪನ ಪಶುಪಾಲನೆಯ ವಿವರಗಳನ್ನು ಅವರ ಹೋರಾಟಗಳನ್ನು ವಿವರಿಸುವುದರ ಜೊತೆಗೆ ಕಾಡುಗೊಲ್ಲರ ಸಂಪೂರ್ಣ ಜೀವನಕ್ರಮವನ್ನು ಚರ್ಚಿಸಿದ್ದಾರೆ.

ಡಾ. ಎಂ. ಗುರುಲಿಂಗಯ್ಯನವರು "ಕರ್ನಾಟಕದ ಗೊಲ್ಲ ಸಮುದಾಯ" (೨೦೦೫) ಎಂಬ ಗ್ರಂಥದಲ್ಲಿ ಕಾಡುಗೊಲ್ಲರ ಅಭ್ಯುದಯ, ಅಭಿವೃದ್ಧಿ ಮತ್ತು ಕಲ್ಯಾಣ ಎನ್ನುವ ಪರಿಕಲ್ಪನೆಯನ್ನು ಇಟ್ಟುಕೊಂಡು ಚರ್ಚಿಸಿದ್ದಾರೆ. ಕಾಡುಗೊಲ್ಲರು ಹುಟ್ಟಿನಿಂದ ಸಾಯುವವರೆಗೆ ಯಾವ ಯಾವ ಕ್ರಿಯೆಗಳನ್ನು ಆಚರಿಸುತ್ತಾರೆ ಎಂಬುದನ್ನು ವಿವರಿಸಿದ್ದಾರೆ. ಕಾಡುಗೊಲ್ಲರ ಅಭಿವೃದ್ಧಿಯಲ್ಲಿ ಹಿಂದುಳಿದ ವರ್ಗಗಳ ಆಯೋಗಗಳಿಂದ ಎಷ್ಟು ಶೋಷಣೆಯಾಗುತ್ತಿದೆ, ಶಿಕ್ಷಣ ಕ್ಷೇತ್ರದಲ್ಲಿ ಎಷ್ಟು ಜನರು ಉನ್ನತ ಸ್ಥಾನವನ್ನು ಪಡೆದಿದ್ದಾರೆ, ರಾಜಕೀಯವಾಗಿ ಎಷ್ಟರ ಮಟ್ಟಿಗೆ ಸಂಘಟನೆಯಾಗುತ್ತಿದ್ದಾರೆ, ಶೋಷಣೆಗೊಳಗೊಂಡ ಈ ಸಮುದಾಯಕ್ಕೆ ಸರ್ಕಾರದಿಂದ ಸಿಗಬೇಕಾಗಿದ್ದ ಸೌಲಭ್ಯಗಳು ಸಿಗುವಂತೆ ಮಾಡುವುದಕ್ಕೆ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದಕ್ಕೆ ಶಿಫಾರಸ್ಸು ಮಾಡಿದ್ದಾರೆ.

ಡಾ. ಎಂ. ಗುರುಲಿಂಗಯ್ಯ ಅವರ "ಟ್ರೈಬ್ ಕಲ್ಚರ್ ಚೈಂಜ್ ಅಂಡ್ ಮೊಬೈಲಿಟಿ" (೨೦೦೫) ಎಂಬ ಕೃತಿಯಲ್ಲಿ ಕಾಡುಗೊಲ್ಲರ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಇದರಲ್ಲೂ ಸಹ ಕರ್ನಾಟಕದ ಕಾಡುಗೊಲ್ಲ ಸಮುದಾಯದ ವಿಷಯವೇ ಚರ್ಚೆಯಾಗಿದೆ.

"ಕಾಡುಗೊಲ್ಲರು ಸರ್ಕಾರ ಮತ್ತು ಅಭಿವೃದ್ಧಿ" (೨೦೦೪) ಎಂಬ ಲೇಖನದಲ್ಲಿ ಹಿಂದುಳಿದ ಬುಡಕಟ್ಟಿನಲ್ಲಿರತಕ್ಕಂತಹ ಕಾಡುಗೊಲ್ಲರ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಗಮನ ಹರಿಸಿಲ್ಲ ಎಂಬುದನ್ನು ತಿಳಿಸಿದ್ದಾರೆ. ಅಷ್ಟೇ ಅಲ್ಲದೇ ಕಾಡುಗೊಲ್ಲರ

ಸಮುದಾಯದ ಮಹಿಳೆಯರು ಅವಮಾನೀಯ ಆಚರಣೆಗಳಿಗೆ ಬಲಿಯಾಗುತ್ತಿದ್ದು, ಇದನ್ನು ಸರ್ಕಾರದ ಮುಖಾಂತರ ನಿಷೇಧಿಸಬೇಕಾಗುತ್ತದೆ. ಕಾಡುಗೊಲ್ಲರ ಸಮುದಾಯವನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸಬೇಕು. ಅಂದರೆ ಮಾತ್ರ ಅವರ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಎಂ. ಗುರುಲಿಂಗಯ್ಯ ಮತ್ತು ವಿ. ನಾಗಪ್ಪ ಅವರು "ಕಾಡುಗೊಲ್ಲ" (೨೦೦೮) ಎಂಬ ಕೃತಿಯಲ್ಲಿ ಕಾಡುಗೊಲ್ಲರು ಅನುಭವಿಸುತ್ತಿರುವ ಸಮಸ್ಯೆಗಳು, ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿಯಲು ಕಾರಣಗಳೇನು ಮತ್ತು ಈ ಸಮಸ್ಯೆಗಳಿಗೆ ಪರಿಹಾರಗಳೇನು ಎಂಬುದನ್ನು ಸೂಚಿಸಿದ್ದಾರೆ. ಎಂ. ಗುರುಲಿಂಗಯ್ಯ ಅವರು ಸಲ್ಲಿಸಿದ "ಕಾಡುಗೊಲ್ಲರಲ್ಲಿ ಸಾಮಾಜಿಕ ಚಲನೆ ಮತ್ತು ಸಾಮಾಜಿಕ ಬದಲಾವಣೆ" (೧೯೯೯) ಎಂಬ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯ, ಪಿಎಚ್.ಡಿ. ಪದವಿಯನ್ನು ನೀಡಿದೆ.

ಡಾ. ಎಸ್.ಕೆ. ಸಣ್ಣೊಬಯ್ಯನವರ "ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ" (೨೦೦೨) ಎಂಬ ಪ್ರಬಂಧಕ್ಕೆ ಹಂಪಿ, ಕನ್ನಡ ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿಯನ್ನು ನೀಡಿದೆ. ಈ ಪ್ರಬಂಧದಲ್ಲಿ ಕಾಡುಗೊಲ್ಲರ ಹಾಗೂ ಮ್ಯಾಸನಾಯಕರ ಬದುಕಿನ ಸಂಬಂಧ, ಸಂಘರ್ಷಗಳನ್ನು ವಿವರಿಸಿದ್ದಾರೆ.

ಡಾ. ಚಲುವರಾಜು ಅವರು ಕಾಡುಗೊಲ್ಲರ ಸಾಂಸ್ಕೃತಿಕ ವೀರನಾದ ಜುಂಜಪ್ಪನ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಕೊಟ್ಯಾಂತರ ದೈವಗಳನ್ನು ಆರಾಧಿಸುವ ಪರಂಪರೆ ಇದೆ. ದೈವಗಳ ಚರಿತ್ರೆಗಳು ಕಲ್ಪನಾತೀತವಾಗಿವೆ. ಆದರೆ ಬುಡಕಟ್ಟು ಸಮುದಾಯಗಳು ಆರಾಧಿಸುವ ದೈವಗಳು ನಮ್ಮ ನಡುವೆ ಬಾಳಿ, ಬದುಕಿ, ಹೋರಾಟದ ಮೂಲಕ ಆ ಸಮುದಾಯಗಳಿಗೆ ನೆಲೆ ಬೆಲೆಯನ್ನು ತಂದು ಕೊಟ್ಟ ಸಾಂಸ್ಕೃತಿಕ ನಾಯಕರನ್ನೇ ತಮ್ಮ ಆರಾಧ್ಯ ದೈವವಾಗಿ ಪೂಜಿಸುತ್ತಿದ್ದಾರೆ. ಅಂಥವರಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಜುಂಜಪ್ಪನೂ ಒಬ್ಬ. ಅವನ ಹುಟ್ಟು, ಬೆಳವಣಿಗೆ, ವೃತ್ತಿ ಸಾಹಸ, ಪವಾಡ, ಹೋರಾಟಗಳನ್ನು ಕುರಿತು ಮೌಖಿಕ ಸಂಪ್ರದಾಯದಲ್ಲಿರುವ ಕಾವ್ಯ ಇದಾಗಿದೆ.

ಕೆ.ಎಂ. ಮೈತ್ರಿ ಅವರು ಸಂಪಾದಿಸಿದ "ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ" (೧೯೯೭)ದಲ್ಲಿ ಕಾಡುಗೊಲ್ಲರ ಸಮುದಾಯದ ಕಲಾವಿದರನ್ನು ಪರಿಚಯಿಸುವುದರ ಜೊತೆಗೆ ಕಾಡುಗೊಲ್ಲರ ಸಮುದಾಯದಲ್ಲಿರುವ ಮೌಖಿಕ ಕಥನಗಳಲ್ಲಿ ಅವರ ಸಾಂಸ್ಕೃತಿಕ ನಾಯಕರ ಮತ್ತು ಆರಾಧ್ಯ ದೈವಗಳ ಮಹಿಮೆಯನ್ನು ಕೊಂಡಾಡಿದ್ದಾರೆ. ಅವರಲ್ಲಿ ಎತ್ತಯ್ಯ, ಚಿತ್ತಯ್ಯ, ಈರಣ್ಣ, ಬೋಮ್ಮಲಿಂಗಯ್ಯ, ಗೌರಸಂದ್ರ ಮಾರೆಮ್ಮ, ತಿರುಪತಿ ತಿಮ್ಮಪ್ಪ ಹಾಗೂ ಅಭಿಮನ್ಯುವನ್ನು ಕುರಿತಾದ ಬಿಡಿ ಬಿಡಿಯಾದ ಕಥನಕಾವ್ಯಗಳಿವೆ.

ಗಂಗಾಧರ ದೈವಜ್ಞರವರ "ಬುಡಕಟ್ಟು ಸಮಾಜ ಹುಟ್ಟು-ಸಾವು ನಡುವೆ" (೨೦೦೦) ಎಂಬ ಕೃತಿಯಲ್ಲಿ

ಕಾಡುಗೊಲ್ಲರ ಸೃಷ್ಟಿ ಪುರಾಣದಲ್ಲಿ ಅವರ ಮೂಲಪುರುಷರು ಹೇಗೆ ಜನ್ಮತಾಳಿದರು, ಅವರ ಸೃಷ್ಟಿಯಿಂದ ಕಾಡುಗೊಲ್ಲರ ಸಂತತಿ ಹೇಗೆ ಬೆಳೆಯಿತು. ಈ ಸಮುದಾಯದಲ್ಲಿ ಹುಟ್ಟಿನಿಂದ ಸಾಯುವವರೆಗೆ ಆಚರಿಸುವ ಆಚರಣೆಗಳು ಹೇಗಿವೆ ಹಾಗೂ ಸಾವಿನ ನಂತರ ಆಚರಣೆಗಳನ್ನು ದೆವ್ವ ಭೂತಗಳ ಪರಿಕಲ್ಪನೆಯನ್ನು ವಿವರಿಸಿದ್ದಾರೆ.

ಪ್ರೊ. ಕಾಳೇಗೌಡ ನಾಗವಾರ, ಎನ್. ಹುಚ್ಚಪ್ಪ ಮಾಸ್ತರವರ ಸಂಪಾದಕತ್ವದಲ್ಲಿ ಪ್ರಕಟಿಸಿದ "ಗಿರಿಜನ ಸಂಸ್ಕೃತಿ" (೨೦೦೦) ಎಂಬ ಗ್ರಂಥದಲ್ಲಿ ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು "ಎತ್ತಪ್ಪನ ಸಂಪ್ರದಾಯ" ಎಂಬ ಲೇಖನ ಪ್ರಕಟಿಸಿದ್ದಾರೆ. ಹೆತ್ತ ತುಪ್ಪದಲ್ಲಿ ಹುಟ್ಟಿರತಕ್ಕಂತ ಎತ್ತಪ್ಪ ಕಾಡುಗೊಲ್ಲ ಜನಾಂಗದ ಪ್ರಥಮ ಸಾಂಸ್ಕೃತಿಕ ಬುಡಕಟ್ಟು ವೀರನಾಗಿದ್ದು, ಎತ್ತಪ್ಪನನ್ನು ನೆನೆಯುವ ಗೂಡಿನ ಹಬ್ಬವನ್ನು, ಹಾಲು ಮೀಸಲು ಸಂಪ್ರದಾಯವನ್ನು ಚರ್ಚಿಸಿದ್ದಾರೆ. ಪಶುಪಾಲನೆ ಸಂಸ್ಕೃತಿಯ ಜುಂಜಪ್ಪನ ಸಂಪ್ರದಾಯಕ್ಕಿಂತ ಭಿನ್ನವಾಗಿದ್ದನ್ನು ಹಾಗೂ ಎತ್ತಪ್ಪನ ಸಂಪ್ರದಾಯದ ವೈಶಿಷ್ಟ್ಯತೆಯನ್ನು ಚರ್ಚಿಸಿದ್ದಾರೆ.

ಎ.ಎಸ್. ಪ್ರಭಾಕರ ಸಂಪಾದಿಸಿದ "ಆದಿವಾಸಿ ಆಖ್ಯಾನ" (೨೦೦೬) ಎಂಬ ಗ್ರಂಥದಲ್ಲಿ ಡಾ. ಕಾಳೇಗೌಡ ನಾಗವಾರವರ "ಕಾಡುಗೊಲ್ಲರ ಬದುಕಿನ ಅರ್ಥವ್ಯವಸ್ಥೆ" ಎಂಬ ಲೇಖನವಿದೆ. ಇಲ್ಲಿ ಕಾಡುಗೊಲ್ಲರು ಮೂಲವೃತ್ತಿ ಪಶುಪಾಲನೆಯಾಗಿತ್ತು. ಪ್ರಾರಂಭದಲ್ಲಿ ಅವರು ಬೇಟೆ, ಪಶುಪಾಲನೆ ಮಾಡುತ್ತಿದ್ದು ನಂತರ ವ್ಯವಸಾಯ ಕೈಗೊಳ್ಳತೊಡಗಿದರು. ಈಗ ಅವರು ತಮ್ಮ ವೃತ್ತಿಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಹಾಗೂ ಪರಿಹಾರಗಳನ್ನು ಕುರಿತು ವಿವರಿಸಿದ್ದಾರೆ.

ಪ್ರೊ. ಎಚ್.ಜೆ. ಲಕ್ಕಪ್ಪಗೌಡರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದಿರುವ "ಕರ್ನಾಟಕ ಬುಡಕಟ್ಟುಗಳು" ಸಂಪುಟ-೧ (೧೯೯೮) ರಲ್ಲಿ ಡಾ. ಕೃಷ್ಣಮೂರ್ತಿ ಹನೂರು ಅವರ 'ಕಾಡುಗೊಲ್ಲ' ಎಂಬ ಲೇಖನವಿದೆ. ಇದರಲ್ಲಿ ಕಾಡುಗೊಲ್ಲರ ಹಟ್ಟಿಯ ರಚನೆ, ಜೀವನಕ್ರಮ, ಅವರ ಆಚರಣೆ, ಸಂಪ್ರದಾಯಗಳ ಮಾಹಿತಿಯ ಜೊತೆಗೆ ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳ ವಿಶ್ಲೇಷಣೆ, ಕುಟುಂಬ, ನ್ಯಾಯ ವ್ಯವಸ್ಥೆಯ ಜೊತೆಗೆ ಕಲೆ, ಸಾಹಿತ್ಯ, ವೈದ್ಯಪದ್ಧತಿ ಮತ್ತು ಅವರ ಸಮುದಾಯದಲ್ಲಿ ಪ್ರಚಲಿತವಿರುವ ಪುರಾಣ ಮತ್ತು ಸಾಂಸ್ಕೃತಿಕ ವೀರರ ಬಗ್ಗೆ ವಿವರಣೆಯನ್ನು ನೀಡಿದ್ದಾರೆ.

ಕಾಡುಗೊಲ್ಲರನ್ನು ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳಲ್ಲಿ ಅವರ ಆರ್ಥಿಕವಾದ ಬದುಕನ್ನು ಕುರಿತು ವಿವರವಾದ ಅಧ್ಯಯನಗಳು ನಡೆದಿಲ್ಲ. ಈಗಾಗಲೇ ಪ್ರಕಟಗೊಂಡಿರುವ ಎಲ್ಲ ಕೃತಿಗಳನ್ನು ಹಾಗೂ ಲೇಖಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯದ ಮೂಲಕ ಅವರ ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ ಎರಡು

ಕಾಡುಗೊಲ್ಲರ ಐತಿಹಾಸಿಕ ಹಾಗೂ ಭೌಗೋಳಿಕ ಹಿನ್ನೆಲೆ

೨.೧ ಪೌರಾಣಿಕ ಹಿನ್ನೆಲೆ

೨.೨ ಐತಿಹಾಸಿಕ ಹಿನ್ನೆಲೆ

೨.೩ ಸೃಷ್ಟಿ ಪುರಾಣಗಳು

೨.೪ ಭೌಗೋಳಿಕ ಹಿನ್ನೆಲೆ

೨.೫ ಜನಸಂಖ್ಯೆ

ಅಧ್ಯಾಯ ೨

ಕಾಡುಗೊಲ್ಲರ ಐತಿಹಾಸಿಕ ಹಾಗೂ ಭೌಗೋಳಿಕ ಹಿನ್ನೆಲೆ

ಆದಿಮ ಸಂಸ್ಕೃತಿಯ ಎಲ್ಲ ಲಕ್ಷಣಗಳನ್ನು ಹೊಂದಿದ ಕಾಡುಗೊಲ್ಲರು ಮೂಲತಃ ಕರ್ನಾಟಕದವರೇ ಅಥವಾ ಈ ರಾಜ್ಯಕ್ಕೆ ವಲಸಿಗರೇ ಎಂಬ ಪ್ರಶ್ನೆ ಹಾಕಿಕೊಂಡರೆ ಅದಕ್ಕೆ ಅಸ್ಪಷ್ಟವಾದ ಉತ್ತರ ಸಿಗುತ್ತದೆ. ಕಾಡುಗೊಲ್ಲರು ಕರ್ನಾಟಕಕ್ಕೆ ವಲಸೆ ಬಂದವರು ಎಂದು ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕಾಡುಗೊಲ್ಲರು ಪಶುಪಾಲಕರು ಎಂಬುದುನ್ನು ಮಾತ್ರ ಅಲ್ಲಗಳೆಯುವಂತಿಲ್ಲ. ಬೇಟೆಯ ಮೂಲಕ ಹೊಟ್ಟೆ ಹೊರೆಯಲಿಕ್ಕಾಗದೇ ಪಶುಪಾಲನೆ ವೃತ್ತಿಯನ್ನು ಕೈಗೊಂಡು ಆ ಮೂಲಕವೇ ತಮ್ಮ ಅಸ್ಥಿತ್ವ ಪಡೆದುಕೊಂಡು ಬಂದವರು ಕಾಡುಗೊಲ್ಲರು. ಇವರಲ್ಲಿಯೇ ಕಾಲಾನಂತರ ಒಂದು ಪಂಗಡವಾಗಿ ಊರುಗೊಲ್ಲರೆಂಬ ಪ್ರತ್ಯೇಕತೆ ಹೊಂದಿರುವುದನ್ನು ಕಾಣುತ್ತೇವೆ.

ಕಾಡುಗೊಲ್ಲರ ಐತಿಹಾಸಿಕ ಹಿನ್ನೆಲೆಯನ್ನು ಕೇಳಿದಾಗ ಅವರು ನಾವು 'ಯಾದವರು' ಶ್ರೀಕೃಷ್ಣನ ಕುಲದವರು ಎಂದು ಹೇಳಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಭಾರತದಲ್ಲಿಯ ಪ್ರತಿಯೊಂದು ಸಮುದಾಯವೂ ಸಾಮಾನ್ಯವಾಗಿ ತನ್ನ ಪ್ರಾಚೀನತೆಯನ್ನು ಹೇಳುವಾಗ ವೇದ ಅಥವಾ ಪುರಾಣ ಕಾಲಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ನಮ್ಮ ಸಮುದಾಯದ ಬೇರುಗಳಿವೆ ಎಂಬುದಾಗಿ ತೋರಿಸುತ್ತವೆ ಮತ್ತು ಅದನ್ನು ಗಟ್ಟಿಗೊಳಿಸಲು ಅನೇಕ ಕಥೆ, ಪುರಾಣ, ಐತಿಹ್ಯಗಳನ್ನು ನೀಡುತ್ತದೆ. ಅಂತೆಯೇ ಅಧ್ಯಯನಕ್ಕೆ ಅಳವಡಿಸಿ ಕೊಂಡಿರುವ ಕಾಡುಗೊಲ್ಲರ ಸಮುದಾಯವೂ ಇದಕ್ಕೆ ಹೊರತಾಗಿಲ್ಲ. ಆದಿಮಾನವ ಬೇಟೆಯ ನಂತರ ಪಶುಪಾಲನೆ ವೃತ್ತಿಯನ್ನು ಕೈಗೊಂಡು ಆ ಕಾಲ ಘಟ್ಟದಿಂದಲೇ ಪಶುಪಾಲಕರು ಎಂಬ ಅಚ್ಚು ಒತ್ತಿಸಿಕೊಂಡ ಇಂದಿನ ಕಾಡುಗೊಲ್ಲರು ಅಲೆಮಾರಿ ಪಶುಪಾಲಕರಾದ ಆರ್ಯರಲ್ಲಿ ತಮ್ಮ ಮೂಲವನ್ನು ಗುರುತಿಸುತ್ತಿದ್ದಾರೆ. ಇದಕ್ಕೆ ಅನೇಕ ಕಾರಣಗಳುಂಟು. ಆಳುವ ಸಮುದಾಯಗಳಲ್ಲಿಯ ಕಥೆ, ಕಾವ್ಯ ಮತ್ತು ಪುರಾಣಗಳಲ್ಲಿರುವ

[illegible]

[illegible]

[illegible]

[illegible]

ಸಾಂಸ್ಕೃತಿಕ ವೀರರ ಚರಿತ್ರೆಗಳು ಅನೇಕ ಸಣ್ಣಪುಟ್ಟ ಸಮುದಾಯಗಳ ಮೇಲೆ ಹಾಗೂ ಅವರ ಕಥೆ, ಪುರಾಣ, ಕಾವ್ಯಗಳ ಮೇಲೆ ತನ್ನದೇ ಆದ ಅನೇಕ ಪ್ರಭಾವಗಳನ್ನು ಆಂಶಿಕವಾಗಿ ಬೀರಿವೆ. ಇದರಿಂದಾಗಿ ಅನೇಕ ಆದಿವಾಸಿ ಸಮುದಾಯಗಳು ಮತ್ತು ಅವರ ಕಾವ್ಯ ಕಥೆಗಳು ತಮ್ಮ ಮೂಲ ಸ್ವರೂಪ ಲಕ್ಷಣಗಳನ್ನು ಬದಲಾಯಿಸಿಕೊಂಡಿವೆ. ಸಣ್ಣ-ಪುಟ್ಟ ಸಮುದಾಯಗಳು ತಮ್ಮ ಸಂಸ್ಕೃತಿ ಮತ್ತು ಸಾಂಸ್ಕೃತಿಕ ವ್ಯಕ್ತಿಗಳನ್ನು ಅದರೊಂದಿಗೆ ಹೋಲಿಸುವ ಅಥವಾ ಪ್ರತಿಸ್ಪರ್ಧೆಗಿಳಿಸುವ ಕಾರ್ಯದಲ್ಲಿ ತೊಡಗಿಸಿದವು. ಈ ಕಾರಣದಿಂದಾಗಿ ಚಿಕ್ಕ ಚಿಕ್ಕ ಸಮುದಾಯಗಳಲ್ಲಿ ಜನಿಸಿದ ಸಾಂಸ್ಕೃತಿಕ ವೀರರ ನಿಜವಾದ ಚರಿತ್ರೆ ಮಾಯವಾಗ ತೊಡಗಿತು. ಆ ವೀರರ ಸಾಂಸ್ಕೃತಿಕ ನಾಯಕರ ಸಮುದಾಯದ ಮೂಲ ಪುರುಷರ ಸುತ್ತ ಅನೇಕ ಪುರಾಣ, ಕಥೆ, ಪವಾಡಗಳು ಹುಟ್ಟಿದವು ಮತ್ತು ಪ್ರಬಲ ಸಮುದಾಯದ ಪೌರಾಣಿಕ ವ್ಯಕ್ತಿಗಳ ಜೊತೆಗೆ ತಮ್ಮ ಸಂಬಂಧಗಳನ್ನು ಹೆಣೆಯುವ ಕಾರ್ಯ ಪ್ರಾರಂಭವಾಯಿತು. ಸಮುದಾಯದ ಮೂಲ ಪುರುಷನ ಅಥವಾ ಸಾಂಸ್ಕೃತಿಕ ನಾಯಕನ ಚರಿತ್ರೆ ಹಂತ ಹಂತವಾಗಿ ಸಂಕೀರ್ಣವಾಗುತ್ತ ನಡೆಯಿತು. ಪ್ರಭಲವಾದ ಸಂಸ್ಕೃತಿಯೊಂದು ತನ್ನ ಪ್ರಭಾವ ಬೀರುವುದಕ್ಕಿಂತ ಮೊದಲು ಈ ಸಣ್ಣ ಸಣ್ಣ ಸಮುದಾಯಗಳಲ್ಲಿ ಮಾತ್ರ ಪ್ರಚಲಿತದಲ್ಲಿದ್ದವು. ಪ್ರಭಲ ಸಂಸ್ಕೃತಿಯ ಪ್ರಭಾವ ಪ್ರೇರಣೆಯಿಂದ ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ತಮ್ಮ ಸಂಸ್ಕೃತಿ ಮತ್ತು ಸಮುದಾಯದ ಮೂಲ ಪುರುಷನನ್ನು ಹೊರಗಿನ ಪ್ರಪಂಚಕ್ಕೆ ಪರಿಚಯಿಸಲು ಹವಣಿಸಿದವು. ಜನರ ಮನ್ನಣೆ ಗಳಿಸಿಕೊಳ್ಳಲು ಮತ್ತು ನಮ್ಮ ಸಮುದಾಯ ಇಷ್ಟು ಪ್ರಾಚೀನವಾದುದು ಎಂದು ತೋರಿಸಿಕೊಳ್ಳಲು ತನ್ನ ಮೂಲ ಸ್ವರೂಪಗಳನ್ನು ಬದಲಾಯಿಸಿಕೊಂಡವು. ಆಳುವ ವರ್ಗದಲ್ಲಿ ಹುಟ್ಟಿದ ಅನೇಕ ಪುರಾಣ ವಿಷಯಗಳನ್ನು ಎತ್ತಿಕೊಂಡು ತನ್ನ ಸಂಸ್ಕೃತಿಗೆ ಒಗ್ಗುವಂತೆ ಮಾರ್ಪಡಿಸಿಕೊಂಡವು. ಪ್ರಬಲ ಕೋಮಿನ ಬೆನ್ನು ಹತ್ತಿದ ಸಮುದಾಯಗಳ ಮೂಲ ಪುರುಷರು ಮತ್ತು ಅವರ ಚರಿತ್ರೆಗಳು ತಮ್ಮತನವನ್ನು ಕಳೆದುಕೊಂಡು ಆ ಜನಾಂಗದ ಮತ್ತು ಆ ಪರಿಸರದ ಪುರಾಣ ವ್ಯಕ್ತಿಗಳಾಗಿ, ದೈವಗಳಾಗಿ ನಿಂತುಕೊಂಡರು. ಕಾಡುಗೊಲ್ಲರು ಸಹ ತಮ್ಮ ಮೂಲ ಪುರುಷನ ಅಥವಾ ಸಮುದಾಯದ ವಾಸ್ತವ ಚಿತ್ರಣವನ್ನು ಮರೆಮಾಡಿ ಯಾದವರ ಅಥವಾ ಕೃಷ್ಣನ ಜೊತೆಗೆ ಸಂಬಂಧ ಕಲ್ಪಿಸಿಕೊಂಡಿರಬಹುದೆಂದು ತೋರುತ್ತದೆ.

ಗೊಲ್ಲರ ಸಮುದಾಯವನ್ನು ಭಾರತದ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿರುವುದು ಕಂಡುಬರುತ್ತದೆ. ಬಿಹಾರ, ಉತ್ತರ ಪ್ರದೇಶ, ಪಂಜಾಬ ಹಾಗೂ ಉತ್ತರ ಭಾರತದ ಇತರೆ ರಾಜ್ಯಗಳಲ್ಲಿ ಇವರನ್ನು 'ಅಹಿದ್, ಜಾತ್, ಸಿಂಗ್, ಯಾದವ' ಮುಂತಾದ ಹೆಸರುಗಳಿಂದಲೂ ಕೇರಳದಲ್ಲಿ ಯಾದವ ಮತ್ತು ಮಣಿಯಾಣಿಗಳೆಂದು, ತಮಿಳನಾಡಿನಲ್ಲಿ "ಇಡಯಾನ್ ಕೋನಾತ್"ಗಳೆಂದೂ ಕರೆಯಲ್ಪಡುತ್ತಾರೆ. ಆಂಧ್ರದಲ್ಲಿ ರೆಡ್ಡಿ, ಗೊಲ್ಲರೆಡ್ಡಿ, ಮಣಿಯಾಣಿ, ಯಾದವ ಎಂದು ಗುರುತಿಸಿಕೊಂಡಿದ್ದಾರೆ. ಈ ಗೊಲ್ಲರ ಸಂಘಟನೆ ಭಾರತಾದ್ಯಂತ ಇರುವುದು ಕಂಡುಬರುತ್ತದೆ.

೨.೧ ಪೌರಾಣಿಕ ಹಿನ್ನೆಲೆ

ಕರ್ನಾಟಕದಲ್ಲಿರುವ ಕಾಡುಗೊಲ್ಲರು ಮತ್ತು ಊರುಗೊಲ್ಲರು ತಮ್ಮ ಸಮುದಾಯದ ಪ್ರಾಚೀನತೆಯನ್ನು ಹೇಳುವಾಗ ದ್ವಾಪಾರಯುಗಕ್ಕೆ ಹೋಗುತ್ತಾರೆ. ಗೊಲ್ಲರು ಅಥವಾ ಯಾದವರು ದ್ವಾಪಾರಯುಗದಲ್ಲಿ ಉತ್ತರ ಭಾರತದಲ್ಲಿ ಕೆಲ ಪ್ರದೇಶಗಳನ್ನು ಆಳುತ್ತಿದ್ದರು. ಈ ಸಂದರ್ಭದಲ್ಲಿ ಯಾದವರನ್ನು ಉದ್ಧರಿಸಲು ಶ್ರೀಕೃಷ್ಣಪರಮಾತ್ಮನು ಅವತಾರವೆತ್ತುತ್ತಾನೆ. ದುಷ್ಟನಿಗ್ರಹ ಮತ್ತು ಧರ್ಮವನ್ನು ರಕ್ಷಿಸುವುದಕ್ಕೋಸ್ಕರ ಅವತರಿಸಿ ಬಂದ ಶ್ರೀಕೃಷ್ಣನು ರಾಜ್ಯದ ಕಾರಭಾರ ಮಾಡುತ್ತಿರುತ್ತಾನೆ. ಕುರುಕ್ಷೇತ್ರದಲ್ಲಿ ಯುದ್ಧ ನಡೆಯುತ್ತದೆ. ಈ ಯುದ್ಧದಲ್ಲಿ ಶ್ರೀಕೃಷ್ಣನು ಪಾಂಡವರ ಪರವಾಗಿ ನಿಂತು ಯುದ್ಧದಲ್ಲಿ ಜಯಗಳಿಸಿಕೊಟ್ಟು ಧರ್ಮರಾಜನಿಗೆ ಪಟ್ಟ ಕಟ್ಟುತ್ತಾನೆ. ಈ ಯುದ್ಧದ ನಂತರ ಶ್ರೀಕೃಷ್ಣನು ಇಹಲೋಕವನ್ನು ತ್ಯಜಿಸಿದಾಗ ಯಾದವರಲ್ಲಿಯ ಯಾದವೀ ಕಲಹ ಹೆಚ್ಚಾಗಿ ಅಧಿಕಾರ ಮತ್ತು ರಾಜ್ಯದ ಮೋಹದಿಂದ ಒಬ್ಬರಿಗೊಬ್ಬರು ಕಿತ್ತಾಡತೊಡಗಿದರು. ಬಲಿಷ್ಠರಾದವರು ಯುದ್ಧದಲ್ಲಿ ಗೆದ್ದು ತಮ್ಮ ಪಾರುಪತ್ಯ ಸ್ಥಾಪಿಸಿ ಉತ್ತರ ಭಾರತದಲ್ಲಿ ಉಳಿದುಕೊಂಡರೆ, ಬಲಹೀನರಾದವರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ದಕ್ಷಿಣ ಭಾರತದ ಕಡೆಗೆ ವಲಸೆ ಬಂದು ಕರ್ನಾಟಕ, ತಮಿಳುನಾಡು, ಆಂಧ್ರ, ಕೇರಳದಲ್ಲಿ ಪಶುಪಾಲನೆ ಮಾಡುತ್ತ ವಾಸಿಸತೊಡಗಿದರು ಎಂದು ಹೇಳುವರು.

The Divine Haritge of Yadavas ಎಂಬ ಕೃತಿಯಲ್ಲಿ ಡಾ. ಬೇಥಕಲ್ ಅವರು ಈ ಗೊಲ್ಲರನ್ನು ಕುರಿತು ಹೀಗೆ ಅಭಿಪ್ರಾಯ ತಾಳಿದ್ದಾರೆ. ದಕ್ಷಿಣ ಭಾರತದಲ್ಲಿದ್ದವರಿಗೆ ಗೋಪ, ಯಾದವ ಎಂದು ಕರೆದು ಉತ್ತರ ಭಾರತದಲ್ಲಿನ ಗೊಲ್ಲರನ್ನು ಕ್ಷತ್ರೀಯ ಯಾದವರು ಎಂದು ಕರೆಯುವರು. ಇವರು ಮಹಾಭಾರತದ ಯುದ್ಧದಲ್ಲಿ ತೊಡಗಿ ನಾಶವಾದರು. ಉಳಿದ ಗೋಪಾಲಕರು ತಮ್ಮ ಪಶುಗಳಿಗೆ ಆಹಾರವಾಗಿದ್ದ ಪ್ರಕೃತಿಯು ಮುನಿಯುತ್ತಿದಂತೆ ಆಹಾರ ಹುಡುಕಿಕೊಂಡು ದಕ್ಷಿಣದ ಕಡೆಗೆ ವಲಸೆ ಬಂದರು. ತಮ್ಮ ದನಗಳ ಸಮೇತ ಉಳಿದ ಕೆಲವು ಯಾದವರು ಕಾರಣಾಂತರಗಳಿಂದ ಕರ್ನಾಟಕದ ಕಡೆ ಬಂದಿರಬಹುದೆಂದು ಡಾ. ಬೇಥಕಲ್ ಅಭಿಪ್ರಾಯ ಪಡುತ್ತಾರೆ. ಇವರ ಅಧ್ಯಯನದ ಪ್ರಕಾರ ಕರ್ನಾಟಕದಲ್ಲಿ ನೆಲೆಸಿರುವ ಗೊಲ್ಲರು ಉತ್ತರ ಭಾರತದಿಂದಲೇ ವಲಸೆ ಬಂದವರು ಎಂಬ ನಿಲುವು ತಾಳಿದ್ದಾರೆ.

ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಮತ್ತೊಂದು ಪುರಾಣ ಕಥೆಯ ಪ್ರಕಾರ "ಭಾಗವತದಲ್ಲಿ ವಸುದೇವ ಶ್ರೀಕೃಷ್ಣನನ್ನು ಯಶೋಧೆಯ ಬಳಿಯಲ್ಲಿ ಮಲಗಿಸಿ ಅವಳ ಮಗುವಾದ ಮಾಯೆಯನ್ನು ಎತ್ತಿಕೊಂಡು ಬಂದು ದೇವಕಿಯ ಬಳಿಯಲ್ಲಿ ಮಲಗಿಸುತ್ತಾನೆ. ಕಂಸ ಆ ಮಾಯೆಯನ್ನು ಬಂಡೆಗೆ ಅಪ್ಪಳಿಸಲು ಹೋದಾಗ ಅವಳು ಅವನ ಕೈಯಿಂದ ತಪ್ಪಿಸಿಕೊಂಡು ಆಕಾಶಮಾರ್ಗದಲ್ಲಿ ಹಾರಿ ಮಾಯವಾಗುತ್ತಾಳೆ. ಈ ಮಾಯೆಯನ್ನೇ ಕಾಡುಗೊಲ್ಲರು ಗೌರಸಂದ್ರದ ಮಾರಕ್ಕ, ಬೇವಿನಹಳ್ಳಿ ಕರಿಯಮ್ಮ, ಕರೇ ಬೇನಹಳ್ಳಿ ಮಾರಮ್ಮ, ಗೊಲ್ಲಹಳ್ಳಿಯಮ್ಮ, ಎಂಬ ಬೇರೆ ಬೇರೆ ಹೆಸರುಗಳಿಂದ ಬೇರೆ ಬೇರೆ ಪ್ರದೇಶಗಳಲ್ಲಿ ಪೂಜೆ ಮಾಡುತ್ತಾರೆ. ಈ ದೇವತೆ ಎತ್ತಪ್ಪ ಜುಂಜಪ್ಪ ದೇವತೆಗಳಿಗೆ ತಂಗಿಯಾಗುತ್ತಾಳೆ ಎಂದು ನಂಬುತ್ತಾರೆ".[೧]

ಕಾಡುಗೊಲ್ಲರು ಸಹ ಇಂದು ತಮ್ಮ ಮೂಲ ನೆಲೆಯನ್ನು ಶ್ರೀಕೃಷ್ಣನ ಬಳಿಗೆ ತೆಗೆದುಕೊಂಡು ಹೋಗಿದ್ದಾರೆ. ಆದರೆ ಇವರೆಲ್ಲರೂ ಆರಂಭದ ಘಟ್ಟದಲ್ಲಿ ಮಾತೃಪ್ರಧಾನ ವ್ಯವಸ್ಥೆಯಲ್ಲಿಯೇ ಗುರುತಿಸಿಕೊಂಡವರು ಎಂಬುದನ್ನು ಗಮನಿಸಬೇಕಾಗುತ್ತದೆ. ಕಾಡುಗೊಲ್ಲರಲ್ಲಿರುವ ಜುಂಜಪ್ಪನ ಪುರಾಣ, ಎತ್ತಯ್ಯನ ಪುರಾಣ, ಚಿತ್ರದೇವರು ಮತ್ತು ಕಾಟಮದೇವರ ಪುರಾಣ, ಪಾತೇದೇವರ ಪುರಾಣ ಮತ್ತು ಕೇತೇದೇವರ ಪುರಾಣಗಳನ್ನು ಗಮನಿಸಿದಾಗ ಸಮುದಾಯದ ಸಾಂಸ್ಕೃತಿಕ ನಾಯಕರಿಗೆ ಕಷ್ಟಗಳು ಬಂದಾಗ ಅವರು ಮಾತೃದೇವತೆಗಳನ್ನೇ ಮೊರೆ ಹೋಗುತ್ತಿದ್ದರು ಮತ್ತು ಈ ಮಾತೃ ದೇವತೆಗಳು ಶಿವ ಹಾಗೂ ಪಾರ್ವತಿಯ ಹತ್ತಿರ ಹೋಗಿ ಅವರ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದುದರ ಬಗ್ಗೆ ಮಾಹಿತಿ ಅವರ ಕಾವ್ಯ ಪುರಾಣಗಳಿಂದ ದೊರೆಯುತ್ತದೆ. ಪಶುಪಾಲಕರಾದ ಕಾಡುಗೊಲ್ಲರಿಗೆ ಪಶುಪತಿಯಾದ ಶಿವನೇ ಇವರ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸುವುದನ್ನು ಕಾಣುತ್ತೇವೆಯೆ ಹೊರತು ವೈಷ್ಣವ ಮೂಲದ ಶ್ರೀಕೃಷ್ಣ ಇವರ ಹತ್ತಿರವೂ ಸುಳಿಯುವುದಿಲ್ಲ. ಕಾಡುಗೊಲ್ಲರು ಕಾಲಾನಂತರ ವೈಷ್ಣವೀಕರಣಕ್ಕೆ ಒಳಗಾಗಿ ಶ್ರೀಕೃಷ್ಣನ ಜೊತೆಗೆ ತಮ್ಮ ಕುಲದ ಮೂಲವನ್ನು ಗುರುತಿಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಪಶುಪತಿಯಾದ ಶಿವನಿಗೆ ಮತ್ತು ಮಾತೃದೇವತೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ ಬುಡಕಟ್ಟು ಸಮುದಾಯಗಳು ಶ್ರೀಕೃಷ್ಣನಿಗೆ ಅಥವಾ ವಿಷ್ಣುವಿಗೆ ಯಾಕೆ ಆ ಮಾನ್ಯತೆಯನ್ನು ನೀಡಲಿಲ್ಲ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಎಲ್ಲ ಬುಡಕಟ್ಟು ಸಮುದಾಯಗಳಲ್ಲಿ ಈ ಸೃಷ್ಟಿ, ಮಾನವ ಸಂತತಿ, ಅವರ ವೃತ್ತಿ, ವೃತ್ತಿಯಲ್ಲಿ ಎದುರಾದ ಸಮಸ್ಯೆಗಳಿಗೆ ಪರಿಹಾರಗಳು ಮಾತೃ ದೇವತೆಗಳ ಮತ್ತು ಶಿವನ ಮೂಲಕವೇ ನಡೆಯುತ್ತದೆ ಎಂಬ ಕಲ್ಪನೆ ಇದೆ. ಈ ಸಮುದಾಯಗಳು ಶಿವ ಮತ್ತು ಮಾತೃ ದೇವತೆಗಳೇ ನಮ್ಮ ಆರಾಧ್ಯ ದೈವಗಳು ಎಂದು ಕಂಡುಕೊಂಡಿದ್ದಾರೆ. ನಗರದಿಂದ ಬಹಳ ದೂರವಿದ್ದ ಈ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಂಸ್ಕೃತಿ, ಭಾಷೆ, ಆಚಾರ-ವಿಚಾರಗಳನ್ನಾಧರಿಸಿ ಬದುಕಿದಂತವು. ನಾಗರಿಕತೆ ಎಷ್ಟೇ ಪ್ರಭಾವ ಬೀರಿದರೂ ತಮ್ಮ ಮೂಲವನ್ನು ಉಳಿಸಿಕೊಂಡೆ ಬಂದಿವೆ. ಕಾಡು ಇವರ ವಾಸಸ್ಥಾನ ಮಾತ್ರವಲ್ಲ ಅದು ಅವರ ಪಾಲಿಗೆ ದೇವರು. ಕಾಡಿನಲ್ಲಿಯ ಸಂಪನ್ಮೂಲಗಳನ್ನು ಬಳಸಿಕೊಂಡು ಬದುಕುತ್ತಾರೆ. ಸರಳತೆ ಮತ್ತು ಮುಗ್ಧತೆ ಇವರ ಲಕ್ಷಣಗಳು ಇಂತಹ ಮನೋಭಾವನೆಯುಳ್ಳ ಇವರು ತಮ್ಮ ಸೃಷ್ಠಿಯನ್ನು ಕಾಣಬಯಸುವುದೂ ಕೂಡ ಇಂತಹ ಪರಿಸರದಿಂದಲೇ ಆಗಿದೆ. ಶಿವ ಕಾನನವಾಸಿ ಇವನೂ ಕಿರಾತಕನಾಗಿ, ಕಾಪಾಲಿಯಾಗಿ, ಭಿಕ್ಷುಕನಾಗಿ, ಮುಗ್ಧನಾಗಿ, ದುಃಖಿಯಾಗಿ, ಶೋಷಣೆಗೊಳಗಾದವನು. ಯಾರಿಗೆ ಯಾವ ರೀತಿಯ ವರವನ್ನಾದರೂ ತಕ್ಷಣವೇ ಕೊಡುವವ, ಉಳಿದ ದೇವತೆಗಳಿಗೆ ಹೋಲಿಸಿದರೆ ಮೂಲ ಸ್ಥಿತಿವಂತನಲ್ಲದ ಶಿವ ಪರರ ಬಗೆಗೆ ಮಹಾ ಅನುಕಂಪ ಉಳ್ಳವನು, ಸ್ಮಶಾನವಾಸಿ, ಪ್ರಾಣಿ ಚರ್ಮಗಳ ಉಡುಪುಗಳು, ಇವು ಬುಡಕಟ್ಟು ಸಮುದಾಯಗಳಿಗೆ ತೀರ ಹತ್ತಿರವಾಗಿರುವುದರಿಂದ ಶಿವನನ್ನೆ ಇವರು ತಮ್ಮ ಕೃಪಾಳುವಾಗಿ ಪರಿಗಣಿಸಿದ್ದಾರೆ. ಹೀಗಾಗಿ ಬುಡಕಟ್ಟು ಸಮುದಾಯಗಳು ಶಿವನನ್ನು ಮತ್ತು ಅವನ ಪರಿವಾರದ ದೇವತೆಗಳನ್ನು ಮನುಷ್ಯ ಸಹಜ ರೂಪದಲ್ಲಿ ಕಂಡುಕೊಂಡಿದ್ದಾರೆ. ಅವನನ್ನೇ ಪ್ರಮುಖ

ದೈವವಾಗಿ ಆರಾಧಿಸುತ್ತಿದ್ದಾರೆ. ವಿಷ್ಣು ಹಾಗಲ್ಲ. ಇವನು ಶ್ರೀಮಂತ. ಆಡಂಬರದ ಬದುಕಿಗೆ ಒಗ್ಗಿಕೊಂಡವ. ಪ್ರತಿಯೊಂದನ್ನು ಶ್ರೀಮಂತಿಕೆಯ ಮೂಲಕವೇ ಅಳೆಯುವವ. ಈ ಕಾರಣಗಳಿಂದ ಅನೇಕ ಬುಡಕಟ್ಟು ಸಮುದಾಯಗಳು ವಿಷ್ಣುವನ್ನು ತನ್ನ ಆರಾಧ್ಯ ದೈವವಾಗಿ ಸ್ವೀಕರಿಸಲು ಒಪ್ಪದೇ ಇದ್ದಿರಬಹುದು. ಭಾರತೀಯ ಸಂಸ್ಕೃತಿಯಲ್ಲಿ ಆರಾಧಿಸಲ್ಪಡುವ ವಿಷ್ಣು ಮತ್ತು ಅವನ ಅವತಾರಗಳು ಬುಡಕಟ್ಟು ಸಮುದಾಯಗಳ ಮೇಲೆ ಪ್ರಭಾವವನ್ನು ಬೀರಿವೆ. ಈ ಕಾರಣಕ್ಕಾಗಿ ಅನೇಕ ಬುಡಕಟ್ಟು ಸಮುದಾಯಗಳು ವಿಷ್ಣುವಿನ ಆರಾಧನೆಯಲ್ಲಿ ಮೂರನೆಯ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಅನೇಕ ಬುಡಕಟ್ಟು ಸಮುದಾಯಗಳು ಮೊದಲ ಸ್ಥಾನವನ್ನು, ಮಾತೃದೇವತೆಗಳಿಗೆ ಎರಡನೆಯ ಸ್ಥಾನವನ್ನು, ಶಿವನಿಗೆ ಹಾಗೂ ಮೂರನೆಯ ಸ್ಥಾನವನ್ನು ಇತರೆ ದೇವತೆಗಳಿಗೆ (ವಿಷ್ಣುವನ್ನು ಸೇರಿಸಿಕೊಂಡು) ನೀಡಿದ್ದಾರೆಂದು ಗ್ರಹಿಸಿಕೊಳ್ಳಬೇಕಾಗಿದೆ. ಶಿವ ತನ್ನ ಭಕ್ತರಿಗೆ, ಅನುಯಾಯಿಗಳಿಗೆ ತೊಂದರೆಯಾದರೆ ತಕ್ಷಣ ಎಷ್ಟೇ ಕಷ್ಟಬಂದರೂ ಸಹಿಸಿಕೊಂಡು ಇತರರಿಗೆ ಪರೋಪಕಾರ ಮಾಡುವ ಮನೋವೃತ್ತಿಯುಳ್ಳವನಾಗಿದ್ದರಿಂದ ಆಡಂಬರ ಐಶ್ವರ್ಯ ಇವುಗಳಿಂದ ದೂರವಿದ್ದು ತಮ್ಮಂತೆ ಸರಳ ಬದುಕು, ಬದುಕುವ ಶಿವನನ್ನು ತಮ್ಮ ಆರಾಧ್ಯ ದೈವವಾಗಿ ಸ್ವೀಕರಿಸಿರುವುದನ್ನು ಕಾಣುತ್ತೇವೆ.

ಪಶುಪಾಲಕರಾಗಿದ್ದ ಕಾಡುಗೊಲ್ಲರಲ್ಲಿಯ ಒಂದು ಗುಂಪು ಬೇರ್ಪಟ್ಟು, ಅದು ಊರನ್ನು ಸೇರಿ ಅವರು ಊರುಗೊಲ್ಲರೆಂದು ಗುರುತಿಸಿಕೊಂಡಿದ್ದಾರೆ. ಊರಿನಗೊಲ್ಲರು ಕಾಲಾನಂತರ ವೈಷ್ಣವ ಸಂಪ್ರದಾಯ ಬೆಳೆಸಿಕೊಂಡು ತಾವು ಶ್ರೀಕೃಷ್ಣನ ಕುಲದವರು ಎಂಬ ಕಥೆಯನ್ನು ಹೆಣೆದುಕೊಂಡಂತೆ ಕಾಣುತ್ತದೆ. ಸಂಘಟನೆಯ ರೂಪದಲ್ಲಿ ಈ ಊರುಗೊಲ್ಲರ ಸಂಪರ್ಕ ಕಾಡುಗೊಲ್ಲರವರೆಗೆ ಬೆಳೆದು ಅವರಲ್ಲಿಯೂ ಯಾದವ ಕುಲ ಮತ್ತು ಕಾಡುಗೊಲ್ಲರ ಸಂಪರ್ಕಗಳ ಕೊಂಡಿ ಬೆಸೆದು ಅವರನ್ನೂ ಸಹ ಯಾದವ ಕುಲದವರು ಎಂದು ಒಪ್ಪಿಸಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಕಾಡುಗೊಲ್ಲರು ಮೂಲತಃ ದ್ರಾವಿಡರು ಮತ್ತು ಇವರು ಶೈವ ಸಂಪ್ರದಾಯದವರು ಎನ್ನುವುದಕ್ಕೆ ಹೆಚ್ಚು ಆಧಾರಗಳು ಸಿಗುತ್ತವೆ. ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಪುರಾಣಗಳನ್ನೆಲ್ಲ ಗಮನಿಸಿದಾಗ ಇವರಲ್ಲಿರುವ ಜುಂಜಪ್ಪ, ಎತ್ತಪ್ಪ, ಚಿತ್ತಯ್ಯ, ಕಾಟಯ್ಯ, ಕತೇದೇವರು ಮತ್ತು ಪಾತೇದೇವರಿಗೆ ಸಂಬಂಧಿಸಿದ ಪುರಾಣಗಳಲ್ಲಿ ಕಂಡುಬರುವ ಮೂಲ ಆಶಯ ಒಂದೇ ಆಗಿದ್ದು, ಅದು ಶೈವ ಪಂಥದ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದಂತಿದೆ. ಅಲ್ಲದೆ ಈ ಪುರಾಣಗಳಲ್ಲಿಯ ಚಿತ್ರಲಿಂಗ, ಕಾಟಮಲಿಂಗ, ಕೋಟೇಲಿಂಗ, ಪಾತೇಲಿಂಗ ಎಂದು ಬಳಸಿರುವುದನ್ನು ಗಮನಿಸಿದರೆ ಇವರು ಶಿವನ ಆರಾಧಕರು ಎಂಬುದಕ್ಕೆ ಸಾಕಷ್ಟು ಪುಷ್ಟಿ ನೀಡುತ್ತದೆ. ಈ ಎಲ್ಲ ದೇವತೆಗಳಿಗೂ ಮೂರನೇ ಕಣ್ಣನ್ನು ಚಿತ್ರಿಸಿರುವುದರಿಂದ ಇವರು ಶಿವನ ಪ್ರತಿರೂಪದವರೇ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತದೆ ಮತ್ತು ಜುಂಜಪ್ಪ, ಎತ್ತಪ್ಪ ಇವರಿಬ್ಬರೂ ವೀರಭದ್ರನ ಅವತಾರವೆಂದು ಇವರನ್ನು ಈಶ್ವರಲಿಂಗದ ಹೆಸರಿನಲ್ಲಿ ಪೂಜಿಸುತ್ತಿರುವುದರಿಂದ

ಇವರು ಶೈವ ಸಂಪ್ರದಾಯದವರೆಂದು ಹೇಳಲಿಕ್ಕೆ ಸಾಧ್ಯವಾಗುತ್ತದೆ. ಜುಂಜಪ್ಪನ ಜೊತೆಗಿದ್ದ 'ಬಡಮ್ಮೈಲ' ಎಂಬ ಹೋರಿಯೂ ಈಶ್ವರನ ವಾಹನವಾದ ನಂದಿಯೇ ಎಂದು ಪೂಜಿಸಲ್ಪಡುತ್ತದೆ. ಈ ಎಲ್ಲ ವಿಷಯಗಳನ್ನು ಗಮಿಸಿದಾಗ ಇವರು ಶೈವ ಸಂಪ್ರದಾಯದ ಶಿವನ ಆರಾಧಕರು ಎಂಬುದು ಸ್ಪಷ್ಟವಾಗುತ್ತದೆ.

ಕಾಡುಗೊಲ್ಲರಲ್ಲಿ ಪುರಾಣ ವ್ಯಕ್ತಿಗಳಾಗಿ ಅಥವಾ ದೈವಗಳಾಗಿ ಚಿತ್ರಿತವಾಗಿರುವ ಜುಂಜಪ್ಪ, ಎತ್ತಪ್ಪ ಚಿತ್ತಯ್ಯ, ಕಾಟಯ್ಯ ಮತ್ತು ಕೆತೇದೇವರು ಇವರೆಲ್ಲಾ ಈ ಸಮುದಾಯದ ಸಾಂಸ್ಕೃತಿಕ ನಾಯಕರು. ಇವರನ್ನು ಪೌರಾಣಿಕ ವ್ಯಕ್ತಿಗಳನ್ನಾಗಿ ಮತ್ತು ದೈವಗಳನ್ನಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಮಧ್ಯಕಾಲಿನ ಇತಿಹಾಸದಲ್ಲಿ ನಡೆದ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಸಂಘರ್ಷಗಳಿಂದ ಅನೇಕ ಸಣ್ಣ ಪುಟ್ಟ ಸಮುದಾಯಗಳ ಸಾಂಸ್ಕೃತಿಕ ನಾಯಕರ ಮತ್ತು ವೀರರ ಚರಿತ್ರೆಗಳು ಮಾಯವಾದವು. ಈ ಸಂದರ್ಭದಲ್ಲಿ ಅನೇಕ ಮೌಖಿಕ ಸಂಪ್ರದಾಯದ ಆಕರಗಳು ಆ ಸಮುದಾಯಗಳ ಜನರ ಬಾಯಿಯಲ್ಲಿ ಮಾತ್ರ ಉಳಿದುಕೊಂಡಿತು. ಪುರೋಹಿತಶಾಹಿ ಸಂಸ್ಕೃತಿಯ ಬೆನ್ನು ಹತ್ತಿದ ಅನೇಕ ಚಿಕ್ಕ-ಪುಟ್ಟ ಸಮುದಾಯಗಳು ತಮ್ಮ ಸಾಂಸ್ಕೃತಿಕ ನಾಯಕರನ್ನು ಅಥವಾ ವೀರರನ್ನು ಪೌರಾಣಿಕ ವ್ಯಕ್ತಿಯನ್ನಾಗಿಸುವ ಅಥವಾ ದೈವವಾಗಿರಿಸುವ ಪ್ರಯತ್ನಕ್ಕೆ ಕೈಹಾಕಿದರು. 'ಭಾರತೀಯ ಸಂಸ್ಕೃತಿಯಲ್ಲಿ ಪೌರಾಣಿಕ ವ್ಯಕ್ತಿಗಳನ್ನು ಚಾರಿತ್ರಿಕ ವ್ಯಕ್ತಿಗಳನ್ನಾಗಿ ರೂಪಿಸುವ ಮತ್ತು ಚಾರಿತ್ರಿಕ ವ್ಯಕ್ತಿಗಳನ್ನು ಪೌರಾಣಿಕ ವ್ಯಕ್ತಿಗಳನ್ನಾಗಿಸುವುದು ಕಂಡುಬರುತ್ತದೆ. ಪ್ರಬಲವಾದ ಸಮುದಾಯಗಳು ಪೌರಾಣಿಕ ವ್ಯಕ್ತಿಗಳನ್ನು ಚಾರಿತ್ರಿಕ ವ್ಯಕ್ತಿಗಳನ್ನಾಗಿ ರೂಪಿಸುತ್ತವೆ. ಇದಕ್ಕೆ ವಿರುದ್ಧವಾಗಿ ಬುಡಕಟ್ಟು ಮತ್ತು ಜನಪದ ಸಾಂಸ್ಕೃತಿಕ ವೀರರನ್ನು ಪೌರಾಣಿಕ ವ್ಯಕ್ತಿಯನ್ನಾಗಿಸಿ ಸಮುದಾಯದ ದೈವವಾಗಿ ಚಿತ್ರಿಸಿರುವುದನ್ನು ಅವರ ಸಮುದಾಯಗಳಲ್ಲಿ ಕಾಣುತ್ತೇವೆ, ಇದೊಂದು ದುರಂತವೆಂದೇ ಭಾವಿಸಬೇಕಾಗುತ್ತದೆ. ಒಂದು ಸಣ್ಣ ಸಮುದಾಯದ ಸಾಂಸ್ಕೃತಿಕ ನಾಯಕನನ್ನು ಪುರಾಣ ವ್ಯಕ್ತಿಯನ್ನಾಗಿಸಿದರೆ, ಅವನಿಗೆ ದೈವದ ಪಟ್ಟಕಟ್ಟಿದರೆ, ಆ ಮೂಲಕ ಒಂದು ಸಂಸ್ಕೃತಿಯ ಜನರನ್ನು ಒಟ್ಟುಗೂಡಿಸಲು ಹೆಚ್ಚು ಅನುಕೂಲವಾಗುತ್ತದೆ. ಸಾಂಸ್ಕೃತಿಕ ವ್ಯಕ್ತಿಯನ್ನೇ ಕೇಂದ್ರವಾಗಿಟ್ಟುಕೊಂಡು ಅನೇಕ ಧಾರ್ಮಿಕ ಆಚರಣೆಗಳನ್ನು ಹೆಣೆದು ಎಲ್ಲ ಆಚರಣೆಗಳನ್ನು ಕಟ್ಟುನಿಟ್ಟಿನಿಂದ ಪಾಲಿಸಲು ಸಮುದಾಯದ ಜನರಿಗೆ ಸೂಚಿಸುವ ಮೂಲಕ ತನ್ನ ಸಂಸ್ಕೃತಿಯನ್ನು ಹೆಚ್ಚು ಪ್ರಬಲಗೊಳಿಸುವುದು ಸಾಧ್ಯವಾಗುತ್ತದೆ. ಸಾಂಸ್ಕೃತಿಕ ಹೆಸರಿನಲ್ಲಿ ನಡೆಯುವ ಧಾರ್ಮಿಕ ಆಚರಣೆ, ಉತ್ಸವಗಳಲ್ಲಿ, ಸಮುದಾಯದ ಜನರನ್ನೆಲ್ಲ ಒಟ್ಟು ಗೂಡಿಸುವ ಮೂಲಕ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯವಾಗಿ ನಾವು ಹೇಗೆ ಬೆಳೆಯಬಹುದು ಎಂಬುದರ ಬಗೆಗೆ ಚಿಂತನೆ ಮಾಡಲು ಅವಕಾಶವಾಗುತ್ತದೆ. "ಒಂದು ಸಮುದಾಯದ ಭೂತ ಕಾಲದಲ್ಲಿ ನಡೆದ ಸಾಂಸ್ಕೃತಿಕ ವೀರನ ಕಥೆ ಹೇಳುವ ಅನೇಕ ಕಥೆ ಕಾವ್ಯಗಳು ಪ್ರಬಲ ಕೋಮಿನ ಪುರಾಣ ಸಂಸ್ಕೃತಿಯ ಪ್ರಭಾವಕ್ಕೊಳಗಾದದ್ದರಿಂದ ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ನಾಯಕರು ಸಮುದಾಯಗಳ ದೈವವಾಗಿ ನಿಂತಿದ್ದಾರೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಜುಂಜಪ್ಪ, ಎತ್ತಪ್ಪ, ಚಿತ್ತಯ್ಯ, ಕಾಟಯ್ಯ ಮತ್ತು ಕತೇದೇವರು ಇದಕ್ಕೆ ಹೊರತಾಗಿಲ್ಲ.

ಈ ಮೇಲಿನ ಎಲ್ಲ ವಿಷಯಗಳನ್ನು ಚರ್ಚಿಸಲು ಕಾರಣವೆಂದರೆ ಕಾಡುಗೊಲ್ಲರು ಕರ್ನಾಟಕದವರು ಎಂಬುದು ಸ್ಪಷ್ಟಪಡಿಸುವುದೇ ನನ್ನ ಉದ್ದೇಶವಾಗಿದೆ.

೨.೨ ಐತಿಹಾಸಿಕ ಹಿನ್ನೆಲೆ

ಕಾಡುಗೊಲ್ಲರಲ್ಲಿರುವ ಕೆಲ ಕಥೆಗಳನ್ನು ಗಮನಿಸಿದರೆ ಕಾಡುಗೊಲ್ಲರು ಮೂಲತಃ ಉತ್ತರ ಭಾರತದವರು ಎಂಬಂತೆ ಚಿತ್ರಿಸಿವೆ. "ಚಂದ್ರವಂಶದ ಚಂದ್ರಮುತ್ತಿ ಮತ್ತು ಸೂರ್ಯ ವಂಶದ ಚಿತ್ತಮುತ್ತಿ ಎಂಬುವರು ಕಾಡುಗೊಲ್ಲರ ಮೂಲ ಪುರುಷರು. ಇವರು ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪಶುಪಾಲನೆ ಹಾಗೂ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿದ್ದರು. ಇವರಿಬ್ಬರ ಹೆಣ್ಣುಮಕ್ಕಳು ದೆಹಲಿ ಪಟ್ಟಣದಲ್ಲಿ ಹಾಲು ಮೊಸರು ಮಾರುತ್ತಿರುವಾಗ ಈ ಹೆಣ್ಣುಮಕ್ಕಳು ಸೌಂದರ್ಯಕ್ಕೆ ದೆಹಲಿ 'ನವಾಬ' ಮೋಹಿತನಾಗಿ ಅವರನ್ನೇ ಮದುವೆಯಾಗಬೇಕೆಂದು ಚಂದಮುತ್ತಿ ಮತ್ತು ಚಿತ್ತಮುತ್ತಿಗೆ ಹೇಳಿ ಕಳುಹಿಸುತ್ತಾನೆ. ಈ ನವಾಬನ ದುಡುಕುತನಕ್ಕೆ ಚಂದಮುತ್ತಿ ಬಂಧುಗಳಾದ ಬಲ್ಲಾಳು ಸೋಮಗೊಂಡನ ಗೌಡ, ಭೂಮಮುತ್ತಿ, ಚಿತ್ತಮುತ್ತಿ, ರಾಮಚಂದ್ರಮುತ್ತಿ, ಅರೆರಾಯಗೊಂಡ, ಮರೆರಾಯಗೊಂಡ, ಎಗಡಿಮುತ್ತಿ, ಅಜ್ಜಿ ಮುತ್ತಿ, ಅತ್ತೆರಾಯ, ಮುತ್ತೆರಾಯ, ಕರಡಿ ಬಳ್ಳ ನಾಯ್ಕ, ಬಾಲ ಮುತ್ತನಾಯ್ಕ, ಪದ್ಮಳ್ಳನಾಯ್ಕ ಮೊದಲಾದವರು ಉದ್ರೇಕಿತರಾಗಿ ಹಾಲಿನಂತ ಕುಲ ನೀರಾಗಬಾರದು, ಗೋಕುಲದ ಹೆಣ್ಣುಮಕ್ಕಳನ್ನು ತುರುಕರಿಗೆ ಕೊಟ್ಟು ಮದುವೆ ಮಾಡುವುದು ನಮ್ಮ ಗೊಲ್ಲಾಳಿಕೆಗೆ ಅಪಮಾನವೆಂದು ಎಲ್ಲರು ಕುಳಿತು ವಿಚಾರ ಮಾಡಿ, ಸರ್ವಾದೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ದೆಹಲಿ ಪಟ್ಟಣವನ್ನು ಬಿಟ್ಟು ದಕ್ಷಿಣ ಭಾರತದ ಕಡೆ ವಲಸೆ ಹೋಗಲು ನಿರ್ಧಾರ ಕೈಕೊಂಡರು".[೨] ಬಿ.ಪಿ. ನಾಗರಾಜ ಅವರು ತಮ್ಮ 'ಗೊಲ್ಲರಟ್ಟಿ' ಎಂಬ ಗ್ರಂಥದಲ್ಲಿ "ಕಾಡುಗೊಲ್ಲರು ದೆಹಲಿ ಮತ್ತು ಸುತ್ತಮುತ್ತಲಿನ ಗ್ರಾಮ ಪಟ್ಟಣಗಳಲ್ಲಿ ವಾಸಿಸುತ್ತಿದ್ದರು ಎಂಬುದು ಆಶ್ಚರ್ಯ ಮೂಡಿಸುವಂತಾದರೂ ಮೊಗಲರ ಕಾಲಕ್ಕೆ ಅವರು ಹಿಂಸೆ ತಾಳಲಾರದೆ ಬುಡಕಟ್ಟಿನ ಪ್ರಮುಖರನ್ನು ಒಳಗೊಂಡಂತೆ ಎಲ್ಲರೂ ದಕ್ಷಿಣ ಭಾರತಕ್ಕೆ ವಲಸೆ ಬಂದು ಕರ್ನಾಟಕದ ಬಯಲು ಪ್ರದೇಶಗಳಾದ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೆಂಗಳೂರು, ರಾಯಚೂರು, ಕೋಲಾರ ಮುಂತಾದ ಜಿಲ್ಲೆಗಳಲ್ಲಿ ವಾಸಿಸಲು ಪ್ರಾರಂಭಿಸಿದರು ಎಂದು ಅಭಿಪ್ರಾಯ ಪಡುತ್ತಾರೆ. ಈ ಎರಡು ಹೇಳಿಕೆಗಳನ್ನು ಗಮನದಲ್ಲಿಟ್ಟುಕೊಂಡು ಕಾಡುಗೊಲ್ಲರ ವಲಸೆ ಕುರಿತು ಹೇಳುವುದಾದರೆ ಪೌರಾಣಿಕ ವ್ಯಕ್ತಿಯಾದ ಶ್ರೀಕೃಷ್ಣ ಮತ್ತು ಅವನ ಪರಿವಾರದ ಜೊತೆಗೆ ತಮ್ಮ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳುವುದಕ್ಕೋಸ್ಕರ ಈ ಕಥೆಯನ್ನು ಹುಟ್ಟುಹಾಕಿದಂತೆ ಕಾಣುತ್ತದೆ. ಶ್ರೀಕೃಷ್ಣ ದ್ವಾರಕೆಯಲ್ಲಿ ಹುಟ್ಟಿ ಉತ್ತರ ಭಾರತದಲ್ಲಿಯೇ ರಾಜ್ಯಾಡಳಿತ ಮಾಡಿದ ಎಂದು ಪುರಾಣಗಳು ಹೇಳುವುದರಿಂದ ದಕ್ಷಿಣ ಭಾರತದಲ್ಲಿರುವ ಈ ಗೊಲ್ಲರು ಶ್ರೀಕೃಷ್ಣ ಮತ್ತು ಅವನ ಕುಲಭಾಂದವರ ಜೊತೆಗೆ ಸಂಬಂಧ ಕಲ್ಪಿಸಿಕೊಳ್ಳುವುದರ ಜೊತೆಗೆ ಗಟ್ಟಿಯಾದ ಐಡೆಂಟಿಟಿ ಪಡೆಯುವುದಕ್ಕೋಸ್ಕರ ಈ ಕಥೆಯನ್ನು ಹುಟ್ಟು ಹಾಕಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಕಾಡುಗೊಲ್ಲರನ್ನು ಕುರಿತು ಅಧ್ಯಯನ ಮಾಡಿದ ಎಡ್ಗರ್ ಥರ್‌ಸ್ಟನ್ ಅವರು "ಕಾಡುಗೊಲ್ಲರು ಉತ್ತರ

ಭಾರತದಿಂದ ಬಂದವರೆಂದರೂ ಕಾಡುಗೊಲ್ಲರ ಸಂಪ್ರದಾಯಗಳು ಕಾಡುಕುರುಬರ ಸಂಪ್ರದಾಯಗಳನ್ನೆಲ್ಲ ಹೋಲುತ್ತವೆ" ಎಂದೂ ಹೇಳಿದ್ದಾರೆ. ಆದರೆ ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ದೃಷ್ಟಿಕೋನದಿಂದ ನೋಡುವುದಾದರೆ ಕರ್ನಾಟಕದ ಕಾಡುಗೊಲ್ಲರು ಬುಡಕಟ್ಟು ಲಕ್ಷಣಗಳನ್ನು ಹೊಂದಿರುವುದರಿಂದ ಇವರು ಈ ಪ್ರದೇಶದ ಮೂಲ ನಿವಾಸಿಗಳೆಂದು ತಿಳಿದು ಬರುತ್ತಿದೆ. ಗೊಲ್ಲ ಸಮುದಾಯದ ಹುಟ್ಟಿನ ಬಗ್ಗೆ ಏನೇ ವಾದ ಅಥವಾ ಐತಿಹ್ಯಗಳಿರಲಿ ಇವರು ಶತಶತಮಾನಗಳಿಂದ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿದ್ದಾರೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಗೊಲ್ಲರು ಶ್ರೀಕೃಷ್ಣನ ಕುಲದವರು ಅವರು ದೆಹಲಿಯಿಂದ ವಲಸೆ ಬಂದವರು ಎಂಬ ಕಥೆಯನ್ನು ಸಾಮಾನ್ಯವಾಗಿ ಊರಗೊಲ್ಲರು ಹುಟ್ಟುಹಾಕಿ ಅದನ್ನು ಕಾಡುಗೊಲ್ಲರ ಸಮುದಾಯದಲ್ಲಿ ಬಿಟ್ಟಿರಬೇಕು.

ಕಾಡುಗೊಲ್ಲರ ಮನೆ ಮಾತು ಕನ್ನಡ, ಕಾಡುಗೊಲ್ಲರ ಶಾರೀರಕ ಲಕ್ಷಣಗಳನ್ನು ಗಮನಿಸಿದಾಗ ಅವರು ದ್ರಾವಿಡ ಸಂಸ್ಕೃತಿಯನ್ನು ಹೋಲುವ ಸಮುದಾಯದವರ ಶಾರೀರಕ ಲಕ್ಷಣಗಳನ್ನೇ ಹೋಲುತ್ತಾರೆ. ಕರ್ನಾಟಕದ ಕಾಡುಗೊಲ್ಲರು ಉತ್ತರ ಭಾರತದ ಜನರ ಶಾರೀರಕ ಲಕ್ಷಣಗಳನ್ನು ಹೋಲುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

೨.೩ ಸೃಷ್ಟಿ ಪುರಾಣಗಳು

ವಿಶ್ವದ ಸೃಷ್ಟಿ ಹೇಗಾಯಿತು? ಯಾರಿಂದಾಯಿತು? ಮಾನವ ಹೇಗೆ ಹುಟ್ಟಿಕೊಂಡ? ಪಶು-ಪಕ್ಷಿ, ಪ್ರಾಣಿಗಳು ಹೇಗೆ ಉದಯಿಸಿದವು? ಮಾನವ ಅನುಸರಿಸುತ್ತಿರುವ ಮೂಲ ವೃತ್ತಿಗಳು ಹೇಗೆ ಹುಟ್ಟಿಕೊಂಡವು? ಎಂದು ತಿಳಿಸುವ ಪುರಾಣಗಳು ಜಗತ್ತಿನ ಅನೇಕ ಸಮುದಾಯಗಳಲ್ಲಿವೆ. ಪ್ರತಿಯೊಂದು ಸಮುದಾಯದ ಸೃಷ್ಟಿ ಪುರಾಣಗಳಲ್ಲಿ ಮನುಷ್ಯ, ಮರಗಿಡ, ಪ್ರಾಣಿ-ಪಕ್ಷಿ, ಅಗ್ನಿ, ವಾಯು, ನೀರು, ಸೂರ್ಯ-ಚಂದ್ರ, ನಭೋಮಂಡಲ, ಭೂಮಿ ಹೀಗೆ ಅನೇಕ ವಿಷಯಗಳು ಗೋಚರಿಸುತ್ತವೆ. ಈ ಪುರಾಣಗಳು ಸಮುದಾಯ ದಿಂದ ಸಮುದಾಯಕ್ಕೆ ಭಿನ್ನವಾಗಿರುವುದನ್ನು ಕಾಣುತ್ತೇವೆ. ಬುಡಕಟ್ಟು ಸಮುದಾಯಗಳಲ್ಲಿ ಪ್ರಚಲಿತವಿರುವ ಪುರಾಣಗಳು ಆ ಸಮುದಾಯದ ಮಾರ್ಗದರ್ಶಕರಂತೆ ಕಾರ್ಯ ನಿರ್ವಹಿಸಿ ಮತ್ತು ಆ ಸಮುದಾಯವನ್ನು ಪ್ರತಿಯೊಂದು ಹಂತದಲ್ಲೂ ರೂಪಿಸುತ್ತಿರುತ್ತದೆ. ನಂಬಿಕೆ, ಆಚಾರ, ವಿಚಾರ, ಸಂಪ್ರದಾಯಗಳಿಗೆ ಆ ಸಮುದಾಯದಲ್ಲಿನ ಪುರಾಣಗಳು ಸಮರ್ಥನೆಯನ್ನು ನೀಡುತ್ತವೆ. ಬುಡಕಟ್ಟು ಸಮುದಾಯಗಳಲ್ಲಿರುವ ಪುರಾಣಗಳು ಎಲ್ಲಿಯವರೆಗೆ ಜೀವಂತವಾಗಿರುತ್ತವೆಯೋ ಅಲ್ಲಿಯವರೆಗೆ ಆ ಸಮುದಾಯಗಳು ಸಂಘಟಿತವಾಗಿರುತ್ತವೆ. ಬುಡಕಟ್ಟುಗಳಲ್ಲಿಯ ಪುರಾಣಗಳು ಇನ್ನು ಜೀವಂತವಾಗಿರುವುದರಿಂದ ಅವರಲ್ಲಿ ಏಕತೆ ಇರುವುದು ಕಂಡುಬರುತ್ತದೆ. ಆಧುನಿಕತೆ, ವಸಾಹುತುಶಾಹಿ ಮತ್ತು ಜಾಗತೀಕರಣದ ನೀತಿಯಿಂದಾಗಿ ಕೆಲ ಬಡುಕಟ್ಟು ಸಮುದಾಯದ ಜನರ ಪುರಾಣಗಳು ತಮ್ಮ ಮೂಲವನ್ನು ಕಳೆದುಕೊಳ್ಳುತ್ತಿರುವುದನ್ನೂ ಕಾಣುತ್ತೇವೆ.

[illegible]

[illegible]

[illegible]

ಬುಡಕಟ್ಟು ಸಮುದಾಯಗಳಲ್ಲಿ ಪ್ರಚಲಿತವಿರುವ ಸೃಷ್ಟಿ ಪುರಾಣಗಳನ್ನು ಮೂರು ಹಂತದಲ್ಲಿ ವಿಭಾಗಿಸಿಕೊಂಡು ಅಧ್ಯಯನಕ್ಕೆ ಅಳವಡಿಸಿಕೊಳ್ಳಬಹುದಾಗಿದೆ.

೧. ಬೇಟೆಯನ್ನೇ ಪ್ರಧಾನವಾಗಿಟ್ಟುಕೊಂಡ ಸಮುದಾಯಗಳಲ್ಲಿನ ಸೃಷ್ಟಿಪುರಾಣಗಳು.

೨. ಪಶುಪಾಲನೆಯನ್ನೇ ಪ್ರಧಾನವಾಗಿಟ್ಟುಕೊಂಡ ಸಮುದಾಯಗಳಲ್ಲಿನ ಸೃಷ್ಟಿಪುರಾಣಗಳು.

೩. ಕೃಷಿಯನ್ನೇ ಪ್ರಧಾನವಾಗಿಟ್ಟುಕೊಂಡಿರುವ ಸಮುದಾಯಗಳಲ್ಲಿನ ಸೃಷ್ಟಿಪುರಾಣಗಳು.

"ಯಾವ ಸಂಸ್ಕೃತಿ ಪ್ರಬಲವಾಗಿರುತ್ತದೋ ಯಾವ ಧೋರಣೆಗಳು ಬದುಕನ್ನು ಮುಖ್ಯವಾಗಿ ರೂಪಿಸುತ್ತದೆಯೋ ಅದು ಪುರಾಣಗಳ ತಿರಳನ್ನು ನಿರ್ಧರಿಸುತ್ತದೆ ಬೇಟೆ, ಪಶುಪಾಲನೆ ಅಥವಾ ಆಹಾರ ಸಂಗ್ರಹಣೆ ಬದುಕಿನ ಮುಖ್ಯ ವಿಧಾನವಾಗಿದ್ದ ಸಮಾಜಗಳಲ್ಲಿ ಪ್ರಪಂಚ ಹೇಗೆ ಹುಟ್ಟಿತು ಎಂಬುವುದನ್ನು ಪುರಾಣ ಪ್ರಾಣಿಗಳ ಹುಟ್ಟಿಗೆ ಪ್ರಾಮುಖ್ಯತೆ ನೀಡುತ್ತದೆ. ವ್ಯವಸಾಯ ಮುಖ್ಯವಾದ ಸಮಾಜದ ಪುರಾಣಗಳಲ್ಲಿ ಬೇಸಾಯದ ಕೆಲಸಗಳಿಗೆ ಪ್ರಾಮುಖ್ಯತೆ ಸಲ್ಲಿಸುತ್ತದೆ. ಅಷ್ಟೇ ಅಲ್ಲ ಈ ಸಂಗತಿಯನ್ನು ಅತ್ಯಂತ ಪ್ರಾಚೀನ ಕಾಲದ ಆರಂಭದಿಂದ ಅಥವಾ ಅನಾದಿಯಿಂದ ಬೆಳೆದುಬಂದಂತೆ ಚಿತ್ರಿಸುತ್ತವೆ".[೩]

ಬುಡಕಟ್ಟು ಸಮುದಾಯಗಳಲ್ಲಿ ಬೇಟೆ ಮೊದಲ ಹಂತ, ಪಶುಪಾಲನೆ ಎರಡನೆಯದು ಮತ್ತು ಕೃಷಿ ಮೂರನೆಯ ಹಂತ. ಈ ಮೂರು ಹಂತಗಳಲ್ಲಿ ಆಯಾ ಸಮುದಾಯಗಳಲ್ಲಿ ಸೃಷ್ಟಿ ಪುರಾಣಗಳು ಹುಟ್ಟಿಕೊಂಡಿವೆ. ಬೇಟೆ ಸಂಸ್ಕೃತಿಯಲ್ಲಿ ಹುಟ್ಟಿಕೊಂಡಿರುವ ಪುರಾಣಗಳ ಅಂಶಗಳು ಪಶುಪಾಲಕರ ಸಂಸ್ಕೃತಿಯಲ್ಲಿಯ ಅಂಶಗಳು ಕೃಷಿ ಸಂಸ್ಕೃತಿಯ ಸೃಷ್ಟಿ ಪುರಾಣಗಳಲ್ಲಿಯೂ ಪುನಾರಾವರ್ತನೆಯಾಗಿದೆ. ಬೇಟೆಯನ್ನೇ ಮೂಲ ವೃತ್ತಿಯಾಗಿಸಿಕೊಂಡ ಸಮುದಾಯಗಳೇ ಪಶುಪಾಲನೆ ಮತ್ತು ಕೃಷಿ ಅವಲಂಬಿಸಿ ಬದುಕು ರೂಪಿಸಿಕೊಂಡಿರುವುದನ್ನು ಕಾಣುತ್ತೇವೆ. ಪಶುಪಾಲಕರು ಮತ್ತು ಕೃಷಿಕರು ಎಂದು ಹೇಳಿಕೊಳ್ಳುವ ಬುಡಕಟ್ಟುಗಳಲ್ಲಿ ಸಾಮಾನ್ಯವಾಗಿ ಬೇಟೆಯೂ ಒಂದು ಉಪಕಸುಬಾಗಿರುವುದನ್ನು ಕಾಣುತ್ತೇವೆ.

ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕಾಡುಗೊಲ್ಲರು ಪಶುಪಾಲನೆಯನ್ನೇ ತಮ್ಮ ಪ್ರಧಾನ ವೃತ್ತಿಯಾಗಿಸಿಕೊಂಡಿದ್ದರೂ ಬೇಟೆ ಮತ್ತು ಕೃಷಿ ಇವರಲ್ಲಿ ಉಪವೃತ್ತಿಯಾಗಿದೆ.

ಕಾಡುಗೊಲ್ಲರ ಮೂಲ ಪುರುಷನ ಬಗ್ಗೆ ಅವರಲ್ಲಿ ಒಂದು ಕಥೆ ಪ್ರಚಲಿತದಲ್ಲಿದೆ. "ಕಾಡುಗೊಲ್ಲರು ಮೊದಲಿಗೆ ದೆಹಲಿಯ ಬಳಿಯ ಕಾಡುಗಳಲ್ಲಿ ವಾಸಿಸುತ್ತಿದ್ದರು. ಅವರ ಮೂಲ ಪುರುಷರಾದ ಅಂಬೆರಾಯ ಮತ್ತು ತಂಬೆರಾಯರು ಋಷಿಗಳ ಮಾದರಿಯಲ್ಲಿ ಜೀವನ ನಡೆಸುತ್ತಿದ್ದರು. ಅವರ ವಂಶದಲ್ಲಿ ಚಂದನಗಂಧಿ ಎಂಬ ಹೆಣ್ಣು ಮಗಳು ಚಂದ್ರನನ್ನು ಕಾಮಿಸಿ ಅವನಿಂದ ಗರ್ಭಧರಿಸಿದ್ದನ್ನು ಕಂಡು ಜನರು ಇದನ್ನು ನಂಬಲಿಲ್ಲ. ಜೊತೆಗೆ ವಿವಾಹಕ್ಕೆ ಮೊದಲೇ ಗರ್ಭಧರಿಸಿದ್ದನ್ನು ಸಮುದಾಯದ ಜನರು ನಂಬದೆ ಗರ್ಭಧಾರಣೆಗೆ ಕಾರಣವಾದವರನ್ನು ಹೆಸರಿಸುವಂತೆ ಚಂದನಗಂಧಿಗೆ ಒತ್ತಾಯಿಸಿದರು. ಚಂದನಗಂಧಿಯ

ಸವಾಲು ಹಾಕಿ ಇದು ಚಂದ್ರನಿಂದ ಹುಟ್ಟಿದ ಮಗನೇ ಆಗಿದೆ ಎಂದು ವಾದಿಸಿದಳು ಹಾಗೂ ಇದನ್ನು ಸಾಬೀತು ಪಡಿಸುತ್ತೇನೆ ಎಂದು ಸವಾಲು ಹಾಕಿದಳು. ತದನಂತರ ಚಂದನಗಂಧಿಯ ಸಮ್ಮುಖದಲ್ಲಿಯೇ ಸಮುದಾಯದ ಜನರು ಒಂದು ಹಸುವಿನ ಮಣಕ(ಗರ್ಭಧಾರಣೆ ಮುನ್ನ)ವನ್ನು ತಂದು ಒಂದು ಕತ್ತಲೆ ಕೋಣೆಯಲ್ಲಿ ಕೂಡಿಹಾಕಿದರು. ಆಗ ಸೂರ್ಯನ ಕಿರಣಗಳು ಆ ಹಸುವಿನ ಮಣಕದ ಮೇಲೆ ಬೀಳುವಂತೆ ಮಾಡಲಾಯಿತು. ಸೂರ್ಯನ ಕಿರಣಗಳಿಂದ ಆ ಹಸುವು ಗರ್ಭಧರಿಸಿ ಒಂದು ಗಂಡು ಮಗುವನ್ನು ಹಡೆಯಿತು. ಸೂರ್ಯನ ಅಂಶ ಅಥವಾ ಕಿರಣಗಳಿಂದ ಹುಟ್ಟಿದ್ದರಿಂದ ಆ ಮಗುವಿಗೆ ಚಿತ್ತಮುತ್ತಿ ಎಂಬ ಹೆಸರಿಟ್ಟರು. ತದನಂತರ ಅಂಬೆರಾಯ ತುಂಬೆರಾಯರಿಗೆ ವಯಸ್ಸಾದ ಮೇಲೆ ಚಂದ್ರಮುತ್ತಿ ಮತ್ತು ಚಿತ್ತಮುತ್ತಿಯರು ಯುವಕರಾದರು. ಚಂದನಗಂಧಿಗೆ ಮದುವೆ ಮಾಡಿದರು. ಅವಳು ತನ್ನ ಗಂಡನಿಂದ ಒಂದು ಹೆಣ್ಣು ಮಗುವನ್ನು ಪಡೆದಳು. ಆದಿಶೇಷನ ಮಗಳಾದ ಬಾಲ ನಾಗಮ್ಮನನ್ನು ಚಂದಮುತ್ತಿ ಮದುವೆಯಾದ. ಮುಂದೆ ಅವರು ಜೀವನ ಸಾಗಿಸುತ್ತಾ ಕುಲದ ಉದ್ಧಾರಕ್ಕೆ ಕಾರಣರಾಗಿ ಸುಖವಾಗಿ ಬಾಳಿದರು ಎಂಬುದಾಗಿ ಹೇಳಲಾಗುತ್ತದೆ”.[೪]

ಕಾಡುಗೊಲ್ಲರಲ್ಲಿ ಕಂಡು ಬರುವ ಸಾಂಸ್ಕೃತಿಕ ನಾಯಕರೆಲ್ಲ ಸಾಮಾನ್ಯವಾಗಿ ದೇವರ ವರ ಪ್ರಸಾದಿಂದ ಹುಟ್ಟಿ ಬಂದವರೇ ಆಗಿದ್ದಾರೆ ಎಂದು ಚಿತ್ರಿಸಲಾಗಿದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಕಾಟಯ್ಯ, ಚಿತ್ತಯ್ಯ ಒಬಳನರಸಿಂಹ ಇವರು ಈಶ್ವರನ ಬೆವರಿನಿಂದ ಹುಟ್ಟಿದರು ಎಂಬ ಕಥೆ ಇದೆ. “ಈಶ್ವರ ಮತ್ತು ಪಾರ್ವತಿ ಆಕಾಶ ಮಾರ್ಗದಲ್ಲಿ ಪ್ರಪಂಚವನ್ನು ಸುತ್ತುತ್ತಾ ಬರುತ್ತಿರುವಾಗ ದಾರಿಯಲ್ಲಿ ಒಂದು ಕಾಡಿಗೆ ಬೆಂಕಿ ಬಿದ್ದಿರುವುದನ್ನು ಕಂಡರು. ಆ ಕಾಡಿನ ಪ್ರಾಣಿಗಳ ಗೋಳನ್ನು ಕೇಳಿದ ಈಶ್ವರ ಅವುಗಳನ್ನು ರಕ್ಷಿಸುವುದಕ್ಕೋಸ್ಕರ ಆ ಬೆಂಕಿಯನ್ನು ಆರಿಸಲು ಆರಂಭ ಮಾಡಿದ. ಈ ಪ್ರಯತ್ನದಲ್ಲಿ ಶಿವ ಬೆವರಿದ್ದಾಗ ಪಾರ್ವತಿ ಅವನ ಮೈಯನ್ನು ತನ್ನ ಸೀರೆಯ ಸೆರಗಿನಿಂದ ಒರಿಸುತ್ತಾಳೆ. ಆಗ ಈಶ್ವರನ ಬೆವರಿನ ಮೂರು ಹನಿಗಳು ನೆಲಕ್ಕೆ ಬಿದ್ದು ಅಲ್ಲಿ ಮೂರು ಮಕ್ಕಳು ಹುಟ್ಟುತ್ತವೆ. ಇವರಲ್ಲಿ ಮೊದಲನೆಯವನು ಕಾಟಯ್ಯ, ಎರಡನೆಯವನು ಚಿತ್ತಯ್ಯ ಮತ್ತು ಮೂರನೆಯವನು ಒಬಳನರಸಿಂಹ. ಈಶ್ವರನ ಮೈಬೆವರಿನಿಂದ ಈ ಮೂವರು ಮಕ್ಕಳು ಹುಟ್ಟಿದ್ದರಿಂದ ಪಾರ್ವತಿ ಈ ಮೂವರು ತಮ್ಮ ಮಕ್ಕಳೆಂದೇ ಭಾವಿಸಿದಳು. ಆಗ ಈಶ್ವರ ಈ ಮೂವರಿಗೂ ಜೀವನೋಪಾಯಕ್ಕೆ ವ್ಯವಸ್ಥೆ ಮಾಡಬೇಕಾಯಿತು. ಅದರಂತೆಯೇ ಈಶ್ವರ ಚಿತ್ರಗಿರಿ ಎಂಬ ಪಟ್ಟಣವನ್ನು ಕಟ್ಟಿ ಈ ಮೂವರಿಗೆ ಅಲ್ಲಿ ಸುಖವಾಗಿ ಜೀವನ ಮಾಡಲು ಅವಕಾಶ ಕಲ್ಪಿಸಿದ. ಕಾಟಯ್ಯನಿಗೆ ಚಿಂತಾಮಣಿ ಎಂಬ ಪುಸ್ತಕವನ್ನು ಒಂದು ಚಿನ್ನದ ಗಿಂಡಿಯನ್ನು ಒಂದು ಚಿನ್ನದ ಬೆತ್ತವನ್ನು ಕೊಟ್ಟು ಈಶ್ವರ ಮತ್ತು ಪಾರ್ವತಿ ಕೈಲಾಸಕ್ಕೆ ಹೊರಟು ಹೋದರು”[೫]. ಈ ಕಥೆಯನ್ನು ಗಮನಿಸಿದಾಗ ಈ ಕಥೆ ಕಾಡುಗೊಲ್ಲರ ಪಶುಪಾಲನೆಯ ಹಂತದಲ್ಲಿ ಹುಟ್ಟಿಕೊಂಡಿದೆ. ಕಾಟಯ್ಯ, ಚಿತ್ತಯ್ಯ ಹಾಗೂ ಓಬಳನರಸಿಂಹ ಇವರು ಶ್ರಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡವರು ಮತ್ತು ಪಶುಪಾಲನೆಯ ಸಂದರ್ಭದಲ್ಲಿ ಪಶುಗಳಿಗೆ ಯಾವುದೇ ರೀತಿಯ ತೊಂದರೆಯಾದರೂ ಅದನ್ನು

ಸಹಿಸುತ್ತಿರಲಿಲ್ಲ ಮತ್ತು ಅವುಗಳನ್ನು ಕಾಪಾಡಲು ಸ್ವತಃ ಶಿವನೇ ಅವುಗಳನ್ನು ರಕ್ಷಿಸುವಲ್ಲಿ ನಿರತನಾಗುತ್ತಿದ್ದ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಸಾಮಾನ್ಯವಾಗಿ ಎಲ್ಲ ಬುಡಕಟ್ಟುಗಳಲ್ಲಿ ಆ ಸಮುದಾಯದ ಮೂಲ ಪುರುಷರು ಶಿವನ ಮೂಲಕವೇ ಸೃಷ್ಟಿಯಾಗಿರುವಂತೆ ಕಾಡುಗೊಲ್ಲರಲ್ಲಿಯೂ ಸಹ ಮೂವರು ಶಿವನ ಮೂಲಕವೇ ಸೃಷ್ಟಿಯಾಗಿದ್ದಾರೆ ಎಂಬುದನ್ನು ಈ ಕಥೆ ಪ್ರತಿಪಾಧಿಸುತ್ತದೆ.

ಕಾಡುಗೊಲ್ಲರಲ್ಲಿರುವ ಇನ್ನೊಬ್ಬ ಸಾಂಸ್ಕೃತಿಕ ನಾಯಕ 'ಪಾತೆದೇವರು' ಸಹ ಶಿವನ ಅನುಗ್ರಹದಿಂದಲೇ ಜನಿಸಿದ ಎಂಬ ಕಥೆ ಪ್ರಚಲಿತದಲ್ಲಿದೆ. "ಪಾತೆದೇವರ ತಾಯಿ ದಾನಶಾಲಮ್ಮ ಉಳಿದೆಲ್ಲಾ ಮಕ್ಕಳಿಗೂ ಒಂದೇ ಮೊಲೆಯಲ್ಲಿ ಹಾಲು ಕುಡಿಸಿದರೆ ಪಾತೇಲಿಂಗನಿಗೆ ಎರಡೂ ಮೊಲೆಯಲ್ಲಿ ಹಾಲು ಕುಡಿಸುತ್ತಿದ್ದಳು. ಅಂತೆಯೆ ಪಾತೇಲಿಂಗನು ತುಂಬಾ ಪುಂಡುಕೋರನಾಗಿದ್ದ. ಪಾರ್ವತಿಯೇ ಅವನನ್ನು ತೆಗೆದುಕೊಂಡು ಹೋಗಿ ಸಾಕಿದಳು. ಅವಳ ಶಿಕ್ಷೆಗೂ ಬಗ್ಗದೆ ಪಾತೇಲಿಂಗ ಅನೇಕ ಸಾಹಸಗಳನ್ನು ಮಾಡಿ ಈಶ್ವರನನ್ನು ಮೆಚ್ಚಿಸಿದ. ಈಶ್ವರನ ಮೂರನೆಯ ಉರಿಗಣ್ಣಿನ ಶಕ್ತಿ ಪಾತೇದೇವರಿಗೆ ಬರುತ್ತದೆ. ಕರಡಿ ಬುಳ್ಳಪ್ಪನಿಂದಾಗಿ ಪಾತೇಲಿಂಗನು ದೇವರಾಗಿ ವೇದಾವತಿ ಮತ್ತು ಸುವರ್ಣಾವತಿ ನದಿಗಳು ಕೂಡುವ ಕೂಡಲಳ್ಳಿಯಲ್ಲಿ ಗುಬ್ಬ ಕಟ್ಟಿಸಿಕೊಂಡು ಇವನು ನೆಲೆಗೊಳ್ಳುತ್ತಾನೆ".[೬]

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಕೋಟೆಲಿಂಗನು ನೇರವಾಗಿ ಕೈಲಾಸದಿಂದ ಭೂಲೋಕಕ್ಕೆ ಬಂದವನು. ಇವನು ಜಂಗಮ ವೇಷಧರಿಸಿ ಭೂಲೋಕದಲ್ಲಿ ಭಿಕ್ಷೆ ಬೇಡುತ್ತಿದ್ದ. ರೆಡ್ಡಿಗಳ ಅಹಂಕಾರವನ್ನು ಮುರಿಯಲು ಇವನು ಅನೇಕ ಪವಾಡಗಳನ್ನು ಮಾಡುತ್ತಾನೆ ಎಂಬ ಕಥೆ ಕಾಡುಗೊಲ್ಲರಲ್ಲಿ ಪ್ರಚಲಿತದಲ್ಲಿವೆ.

ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಸೃಷ್ಟಿ ಪುರಾಣಗಳನ್ನು ಗಮನಿಸಿದಾಗ ಇವರು ಉತ್ತರ ಭಾರತದಿಂದ ವಲಸೆ ಬಂದವರಲ್ಲ. ದಕ್ಷಿಣ ಭಾರತವೇ ಇವರ ಮೂಲ ನೆಲೆಯಾಗಿತ್ತು. ಈ ಕಾಡುಗೊಲ್ಲರು ಶಿವನ ಆರಾಧಕರು ಎಂಬುದು ಸ್ಪಷ್ಟವಾಗುತ್ತದೆ. ಸುಮಾರು ೧೫ ಅಥವಾ ೧೬ನೇ ಶತಮಾನದಲ್ಲಿ ಈ ಸಮುದಾಯದಲ್ಲಿ ಶ್ರೀಕೃಷ್ಣ ಪ್ರವೇಶ ಮಾಡಿರುವ ಸಾಧ್ಯತೆ ಇದೆ.

೨.೪ ಭೌಗೋಳಿಕ ಹಿನ್ನೆಲೆ

ಕಾಡುಗೊಲ್ಲರ ಪ್ರಮುಖ ವೃತ್ತಿ ಪಶುಪಾಲನೆ. ಪಶುಪಾಲನೆಗಾಗಿ ಯೋಗ್ಯವಾದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದಕ್ಕಾಗಿ ಅಲೆದಾಡುತ್ತಿದ್ದರು. ನಾಗರಿಕ ಸಮಾಜದಿಂದ ದೂರವಾಗಿ ಉಳಿದು ತಮ್ಮದೇ ಆದ ಆಚಾರ-ವಿಚಾರ, ಸಂಸ್ಕೃತಿ, ಆಚರಣೆಗಳನ್ನು ಪಾಲಿಸುತ್ತ ಬಂದವರು. ಪಶುಪಾಲನೆಯ ಹಂತದಲ್ಲಿಯೆ ಕಾಡುಗೊಲ್ಲರಲ್ಲಿಯ ಒಂದು ಪಂಗಡ ಇವರಿಂದ ದೂರವಾಗಿ ಊರುಗಳನ್ನು ಸೇರಿಕೊಂಡು ಊರಗೊಲ್ಲರಾಗಿರ ಬಹುದು. ಊರಗೊಲ್ಲರಿಗೂ ಮತ್ತು ಕಾಡುಗೊಲ್ಲರಿಗೆ ಯಾವುದೇ ರೀತಿಯ ಸಂಬಂಧಗಳು ಇಲ್ಲದೇ ಇರುವುದನ್ನು ಗಮನಿಸಬಹುದು. ಕಾಡುಗೊಲ್ಲರು ಉತ್ತರದಿಂದ ಬಂದವರು ಎಂಬುದು ನಂಬಲರ್ಹವಾದದ್ದು. ದಕ್ಷಿಣ ಭಾರತದ ಕಾಡು ಪ್ರದೇಶಗಳಲ್ಲಿಯೆ ತಮ್ಮ ಅಸ್ತಿತ್ವವನ್ನು ಕಂಡುಗೊಂಡಿದ್ದ ಕಾಡುಗೊಲ್ಲರು

[illegible]

[illegible]

[illegible]

[illegible]

ಆಹಾರ ಸಂಗ್ರಹಣೆ ಮತ್ತು ಪಶುಪಾಲನೆ ಮಾಡುವುದಕ್ಕಾಗಿ ಇವರು ಅಲೆಮಾರಿಗಳಾಗಿದ್ದರು. ರಾಜಕೀಯ, ನೈಸರ್ಗಿಕ ವಿಕೋಪ ಮುಂತಾದ ಕಾರಣಗಳಿಂದ ಕರ್ನಾಟಕದ ಮಧ್ಯಭಾಗಕ್ಕೆ ಬಂದು ಇವರು ನೆಲೆಸಿದ್ದಾರೆ. ಶತಶತಮಾನಗಳಿಂದ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತ, ಕನ್ನಡ ಭಾಷೆಯನ್ನೆ ಮಾತನಾಡುತ್ತಿರುವ ಇವರನ್ನು ಪರಕೀಯರು ಎಂಬುದಾಗಿ ಗುರುತಿಸುವುದು ಸೂಕ್ತವೆನಿಸಲಾರದು.

ಹದಿನಾಲ್ಕನೆಯ ಶತಮಾನಕ್ಕಿಂತ ಪೂರ್ವದಲ್ಲಿ ತುಂಗಭದ್ರ ನದಿಯ ಉತ್ತರ ದಿಕ್ಕಿನಲ್ಲಿ ಪಶುಪಾಲನೆಗೆ ಮಾಡಿಕೊಂಡಿದ್ದ ಈ ಸಮುದಾಯ ಆದಿಲ್‌ಶಾಹಿಗಳ ದಬ್ಬಾಳಿಕೆಯನ್ನು ತಾಳಲಾರದೆ ತುಂಗಭದ್ರ ನದಿಯನ್ನು ದಾಟಿ ವಿಜಯನಗರ ಅರಸರ ಸಾಮ್ರಾಜ್ಯವನ್ನು ಪ್ರವೇಶಿಸಿ ಅಲ್ಲಿಂದ ಚಿತ್ರದುರ್ಗ, ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲಿ ವಾಸಿಸಲು ಪ್ರಾರಂಭಿಸಿರಬೇಕು. ಕಾಡುಗೊಲ್ಲರು ಮೊದಲು ಇಂದಿನ ಬಳ್ಳಾರಿ ಜಿಲ್ಲೆಯಲ್ಲಿಯೆ ವಾಸಿಸುತ್ತಿದ್ದು ಹಂತ ಹಂತವಾಗಿ ಇವರು ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗಳತ್ತ ಸಾಗಿರಬಹುದು. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ತುಮಕೂರು ಜಿಲ್ಲೆಗಳು ಹೆಚ್ಚಾಗಿ ಬಯಲು ಪ್ರದೇಶವನ್ನು ಒಳಗೊಂಡಿದ್ದು ಪಶುಪಾಲನೆಗೆ ಯೋಗ್ಯವಾದ ಸ್ಥಳವಾಗಿದೆ ಎಂಬುದನ್ನು ತಿಳಿದ ಕಾಡುಗೊಲ್ಲರು ಈ ಪ್ರದೇಶಗಳ ಬೆಟ್ಟಗುಡ್ಡದಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡಿದ್ದಾರೆ ಎಂಬುದನ್ನು ಗಮನಿಸಬೇಕಾಗುತ್ತದೆ.

"ಕಾಡುಗೊಲ್ಲರು ಎಂದೂ ನಾಗರಿಕ ವಸತಿ ಪ್ರದೇಶಗಳಲ್ಲಿ ವಾಸಿಸುವುದಿಲ್ಲ. ಅಂತಹ ನಾಗರಿಕ ಅಥವಾ ಜಾತಿ ವಸತಿಗಳಿಂದ ದೂರದಲ್ಲಿ ತಮ್ಮದೇ ಆದ ಜನಗಳ ಗುಂಪಿನಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ವಾಸಿಸುವುದು ಸಾಮಾನ್ಯ. ಯಾಕಾಗಿ ಇವರು ನಾಗರಿಕ ವಸತಿಯಿಂದ ದೂರವಿರಲು ಪ್ರಯತ್ನಿಸುತ್ತಾರೆ ಎಂಬುದನ್ನು ಪರಿಶೀಲಿಸಿದರೆ ಕುತೂಹಲಕಾರಕ ಅಂಶಗಳು ಹೊರಬೀಳುತ್ತವೆ. ಬಹುಶಃ ತಮ್ಮ 'ಬುಡಕಟ್ಟಿನ ಪಾವಿತ್ರ್ಯ'ವನ್ನು ಉಳಿಸಿಕೊಳ್ಳುವ ಕಾರಣದಿಂದಲೇ ಇವರು ನಾಗರಿಕ ವಸತಿಯಿಂದ ದೂರ ವಾಸಿಸುತ್ತಿದ್ದಾರೆ ಎಂದು ಭಾವಿಸಬೇಕಾಗಿದೆ. ಮೇಲಾಗಿ ಕಾಡುಗೊಲ್ಲರ ದೇವರುಗಳು ಅಂಟು-ಮುಂಟಿನ ವಿಷಯದಲ್ಲಿ ತುಂಬಾ ಕಟ್ಟುನಿಟ್ಟನ್ನು ಅನುಸರಿಸುವುದರಿಂದ ನಾಗರಿಕ ಜನವಸತಿಯ ಮಧ್ಯೆ ತಮ್ಮ ದೇವರುಗಳ ಪಾವಿತ್ರ್ಯ ಕಾಪಾಡಿಕೊಳ್ಳಲು ಸಾಧ್ಯವಿಲ್ಲವೆಂದೇ ಅವರು ಭಾವಿಸಿದಂತೆ ಕಾಣುತ್ತದೆ. ಹೀಗಾಗಿ ಅವರು ತಾವು ವಾಸಿಸುವ ಹಟ್ಟಿಯ ಒಳಗೂ ಅತ್ಯಂತ ಕಟ್ಟುನಿಟ್ಟಿನ ಶೌಚವನ್ನು ಪಾಲಿಸುವುದರಿಂದ, ಸೂತಕವಾದವರು, ಹೆರಿಗೆ ಯಾದವರು, ಪುಷ್ಪವತಿಯಾದವರು ಹಟ್ಟಿಯಿಂದ ಹೊರಗೆ ಇರುವುದನ್ನು ಇಂದೂ ಕಾಣಬಹುದು".[೭] ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರ ಅಭಿಪ್ರಾಯವನ್ನು ನಾನು ಇಲ್ಲಿ ಅಲ್ಲಗಳೆಯುವುದಿಲ್ಲ. ಆದರೆ ನಾಗರಿಕ ಸಮಾಜ ಕಾಡುಗೊಲ್ಲರ ಆಚಾರ-ವಿಚಾರ, ಆಚರಣೆ, ಅವರ ಬದುಕುವ ಕ್ರಮಗಳು, ಸಂಸ್ಕೃತಿ ಮುಂತಾದವು ನಾಗರಿಕರಿಗೆ ಹಿಡಿಸದೆ ಅವರಿಂದ ಅಪಹಾಸ್ಯಕ್ಕೆ ಗುರಿಯಾಗುವುದಕ್ಕಿಂತ ಅವರಿಂದ ಬಹುದೂರ ವಿರುವುದೇ ವಾಸಿ ಎಂಬ ನಿಲುವನ್ನು ತಾಳಿ ಊರ ಹೊರಗೆ ಬೆಟ್ಟ-ಗುಡ್ಡ, ಕಾಡು-ಮೇಡುಗಳಲ್ಲಿ ತಮ್ಮದೇ ಆದ ಹಟ್ಟಿಗಳನ್ನು ನಿರ್ಮಿಸಿಕೊಂಡು ನಾಗರಿಕ ಸಮಾಜದಿಂದ ದೂರ ಉಳಿದಿರಬಹುದೆಂದು ಕಾಣುತ್ತದೆ.

"ಕಾಡುಗೊಲ್ಲರು ತಮ್ಮನ್ನು 'ಗ್ರಾಮದ್ವೇಷಿವಾಸಿಗಳು' ಎಂದು ಕರೆದುಕೊಳ್ಳುವುದು ಅರ್ಥಪೂರ್ಣವಾಗಿದೆ. ಬುಡಕಟ್ಟು ಸಂಸ್ಕೃತಿ ಹೊರಗಿನವರನ್ನು ಯಾವಾಗಲೂ ಅನುಮಾನದಿಂದಲೇ ನೋಡುವುದರಿಂದ ಬುಡಕಟ್ಟು ಜನರು ಬೇರೆಯವರೊಂದಿಗೆ ಅಷ್ಟು ಸುಲಭವಾಗಿ ಬೆರೆಯುವುದಿಲ್ಲ. ಹಿಂದಿನ ಕಾಲದಲ್ಲಿ ಜನ 'ನಾಗರಿಕ ಗ್ರಾಮ' ಹೊಕ್ಕರೆ ತಮ್ಮ ಪಾವಿತ್ರ್ಯ ಕೆಡುತ್ತದೆ ಎಂದು ಭಾವಿಸಿದ್ದುದು ಎಷ್ಟು ಅರ್ಥಪೂರ್ಣವಾಗಿದೆ ಅನಿಸುತ್ತದೆ. ನಾನಾ ರೀತಿಯ ನಾಗರಿಕ ಸೋಂಕುಗಳಿಂದ ಕಲ್ಮಶಗೊಂಡ ಜನಗಳ ಸಂಪರ್ಕದಲ್ಲಿದ್ದರೆ ತಾವು ಕೆಟ್ಟು ಬಿಡುತ್ತೇವೆ ಎಂಬ ಭಯ ಅವರಲ್ಲಿದೆ".[೮] ಈ ಕಾರಣಗಳಿಂದಲೂ ಕಾಡುಗೊಲ್ಲರು ನಾಗರಿಕ ಸಮಾಜದಿಂದ ಬಹಳ ದೂರದಲ್ಲಿ ತಮ್ಮ ವಾಸಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇಂದೂ ಸಹ ಕಾಡುಗೊಲ್ಲರ ಹಟ್ಟಿಗಳನ್ನು ಅನ್ಯರು ಪ್ರವೇಶಿಸಿದರೆ ನೀವು ಯಾರು? ಯಾವ ಜಾತಿಯವರು? ಎಂದು ಪ್ರಶ್ನಿಸುತ್ತಾರೆ. ಈ ಹಟ್ಟಿಗಳಲ್ಲಿ ಎಲ್ಲರಿಗೂ ಪ್ರವೇಶ ದೊರೆಯುವುದಿಲ್ಲ. "ಕಾಡುಗೊಲ್ಲರು ವರ್ಷಕ್ಕೊಮ್ಮೆ ಹಬ್ಬ ಮಾಡುವಾಗ 'ಹಟ್ಟಿ ಬೆಳ್ಳಗೆ' ಮಾಡುತ್ತಾರೆ. ಹಟ್ಟಿಯಲ್ಲಿ ಒಂದು ನರಪಿಳ್ಳೆಯೂ ಇಲ್ಲದಂತೆ (ನಾಯಿ, ಬೆಕ್ಕು ಎಲ್ಲವನ್ನು ತೆಗೆದುಕೊಂಡು) ಹೊರಹೋಗಿ ಸ್ನಾನ ಮಾಡಿ ಬರುತ್ತಾರೆ. ಹಬ್ಬ ಮುಗಿಯುವವರೆಗೆ ಹಟ್ಟಿಯಿಂದ ಯಾರೂ ಹೊರಗೆ ಹೋಗುವಂತಿಲ್ಲ. ಹೊರಗಿನವರು ಒಳಗೆ ಬರುವಂತಿಲ್ಲ. ಬರಲೇಬೇಕೆಂದರೆ ಸ್ನಾನ ಮಾಡಿ ಹಟ್ಟಿ ಪ್ರವೇಶಿಸಬೇಕು. ಅಲ್ಲಿಯವರೆಗೂ ನಾಗರಿಕ ಪರಿಸರ ಹೊಕ್ಕು ಸೂತಕವನ್ನು ಕಳೆದುಕೊಳ್ಳುವ ಪ್ರಕ್ರಿಯೆ ಇದಾಗಿದಂತಿದೆ".[೯] ಕಾಡುಗೊಲ್ಲರು ಆಚರಿಸುವ ಈ ಮಡಿ, ಮೈಲಿಗೆ, ಸೂತಕಗಳನ್ನು ಗಮನಿಸಿದರೆ ಅವರ ದೃಷ್ಟಿಯಲ್ಲಿ ನಾಗರಿಕ ಸಮುದಾಯವೆಂದರೆ ಅದು ಒಂದು ರೀತಿಯಲ್ಲಿ ಮೈಲಿಗೆ ಎಂದು ತಿಳಿದುಕೊಂಡಿದ್ದಾರೆ. ನಾಗರಿಕ ಸೋಂಕು ಕೂಡ ನಮಗೆ ತಟ್ಟಬಾರದು ಎಂಬ ಕಾರಣಕ್ಕಾಗಿ ಅವರು ಊರುಗಳಿಂದ ಬಹಳ ದೂರ ಉಳಿದಿದ್ದಾರೆ. ನಾಗರಿಕ ಸಮಾಜ ಅವರಿಗೆ ಅನೇಕ ನೋವುಗಳನ್ನು ತಂದೊಡ್ಡಿರಬಹುದು ಮತ್ತು ಅವರಿಂದ ಅನೇಕ ತೊಂದರೆಗಳನ್ನು ಈ ಜನ ಅನುಭವಿಸಿರಬೇಕು. ಈ ಹಿನ್ನೆಲೆಯಲ್ಲಿ ಕಾಡುಗೊಲ್ಲರು ಹೊರ ಜಗತ್ತಿನವರನ್ನು ಕಂಡರೆ ಸಹಿಸುವುದಿಲ್ಲ.

ಕರ್ನಾಟಕ ರಾಜ್ಯದ ತುಮಕೂರು, ಚಿತ್ರದುರ್ಗ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ, ಕನಕಪುರ ಮತ್ತು ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಕಾಡುಗೊಲ್ಲರು ಕಂಡುಬರುತ್ತಾರೆ. ಹಾಸನ ಜಿಲ್ಲೆ ಅರಸೀಕೇರಿ ತಾಲೂಕಿನಲ್ಲಿಯೂ ಕಾಡುಗೊಲ್ಲರು ಕಂಡುಬರುವರು. ಚಿತ್ರದುರ್ಗದ ಹಿರಿಯೂರು, ಚಳ್ಳಕೆರೆ ಮತ್ತು ಶಿರಾ ತಾಲೂಕುಗಳಲ್ಲಿ ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿದ್ದು ಈ ಪ್ರದೇಶಗಳನ್ನು ಕಾಡುಗೊಲ್ಲರ ಸಾಂಸ್ಕೃತಿಕ ಕೇಂದ್ರಗಳೆಂದು ಹೇಳಬಹುದು. ಕಾಡುಗೊಲ್ಲರ ಆರಾಧ್ಯ ದೈವಗಳು ಮತ್ತು ಕಟ್ಟೆಮನೆಗಳು ಈ ಪ್ರದೇಶದಲ್ಲಿವೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಕಾಡುಗೊಲ್ಲರು ಅಧಿಕ ಪ್ರಮಾಣದಲ್ಲಿ ಕಂಡುಬರುತ್ತಾರೆ.

ಕಾಕಡುಗೊಲ್ಲರು ಬಯಲು ಪ್ರದೇಶದ ದಿಣ್ಣೆ, ಗುಡ್ಡಗಳಿಂದ ಕೂಡಿದ ಮತ್ತು ಹಳ್ಳಿಗಳಿಂದ ಬಹಳ ದೂರವಿರುವ ಪ್ರದೇಶದಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡಿದ್ದಾರೆ. ಕಾಡುಗೊಲ್ಲರು ಕಟ್ಟಿಕೊಂಡಿರುವ ಗುಡಿಸಲಿನ

ಸಮೂಹಗಳನ್ನೇ 'ಹಟ್ಟಿ' ಎಂದು ಎಂದು ಕರೆಯುವುದುಂಟು, ಈ ಹಟ್ಟಿಗಳು ಒಂದು ಕಾಲಕ್ಕೆ ಕಂದಾಯದ ದಾಖಲಾತಿಯಲ್ಲಿ ನಮೂದಿಸಲ್ಪಟ್ಟಿರಲಿಲ್ಲ. ಸಾಮಾನ್ಯವಾಗಿ ಕಾಡುಗೊಲ್ಲರು ವಾಸಿಸುತ್ತಿರವ ಪ್ರದೇಶವೆಲ್ಲ ಸರ್ಕಾರಿ ಗೋಮಾಳಗಳಾಗಿಯೊ ಅಥವಾ ಖಾಸಗಿ ಹಿಡುವಳಿಗಳಾಗಿರಬೇಕು ಎಂದು ಡಾ. ಎಂ. ಗುರುಲಿಂಗಪ್ಪ ಅಭಿಪ್ರಾಯ ಪಡುತ್ತಾರೆ. ಗೊಲ್ಲರ ಹಟ್ಟಿಗಳು ಇಂದೂ ನಾಗರಿಕ ಸೌಲಭ್ಯಗಳಿಂದ ಬಹಳ ದೂರ ಉಳಿದಿವೆ ಎಂದು ಹೇಳಿದರೆ ತಪ್ಪಾಗಲಾರದು. ಕುರುಚಲು, ಕಾಡುಗಳು, ಸಾಮಾನ್ಯವಾದ ಬೆಟ್ಟ ಗುಡ್ಡಗಳು, ಹುಲ್ಲು ಗಾವಲುಗಳು ಇವರ ಪ್ರಧಾನ ವೃತ್ತಿಯಾದ ಪಶುಪಾಲನೆಗೆ ಉಪಯುಕ್ತವಾಗಿವೆ. ಕಾಡುಗೊಲ್ಲರು ವಾಸಿಸುತ್ತಿರುವ ಪ್ರದೇಶಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು.

ಚಿತ್ರದುರ್ಗ ಜಿಲ್ಲೆ : ಚಿತ್ರದುರ್ಗ ಜಿಲ್ಲೆಯಲ್ಲಿ ಆರೂ ತಾಲ್ಲೂಕುಗಳಲ್ಲಿ ಕಾಡುಗೊಲ್ಲರು ಕಂಡು ಬರುತ್ತಾರೆ. ಆಯಾ ತಾಲ್ಲೂಕಿನಲ್ಲಿ ಇವರು ವಾಸಿಸುವ ನೆಲೆಗಳು ಈ ಕೆಳಗಿನಂತಿವೆ.

ಚಿತ್ರದುರ್ಗ ತಾಲ್ಲೂಕು

ಗಂಜಿಗಟ್ಟಿ ಗೊಲ್ಲರಹಟ್ಟಿ, ಕುರುವಿನಕೆರೆ, ಗೋನೂರು, ಹೊಸಕಲ್ಲಿಹಳ್ಳಿ, ಜಾನಕೊಂಡ, ಮದಕರಿಪುರ, ತುರುವನೂರು, ಉಪ್ಪನಾಯಕನಹಟ್ಟಿ, ಗೊಲ್ಲನಹಟ್ಟಿ, ಗಂಜಿಹಟ್ಟಿ.

ಚಳ್ಳಕೆರೆ ತಾಲ್ಲೂಕು

ದೇವರ ಮರಿಕುಂಟೆ, ಹೊಸಹಳ್ಳಿ, ಖಂಡೇನಹಳ್ಳಿ, ಸಾಣೀಕೆರೆ, ಸೂರನಹಳ್ಳಿ, ವಡೇರಹಳ್ಳಿ, ಕೆರೆಮುಂದಲ ಹಟ್ಟಿ, ಕಾಟಪ್ಪನಹಟ್ಟಿ, ಯಲಗಟ್ಟಿ, ಗೊಲ್ಲರಹಟ್ಟಿ ಕಾಮಸಮುದ್ರ, ಪುಟ್ಲೊಹಳ್ಳಿ, ಗೋಪಿಕೆರೆ, ಗೌರಸಮುದ್ರ, ಬೆಳಗೆರೆ, ಕ್ಯಾತಗೊಂಡನಹಟ್ಟಿ, ಚೆನ್ನಮ್ಮನ ನಾಗತಿಹಳ್ಳಿ, ಪುರ್ಲಹಳ್ಳಿ, ಗೌರಿಪುರ, ಮೊಮ್ಮಯ್ಯನಹಟ್ಟಿ, ಕಾಟಪ್ಪನ ಹಟ್ಟಿ, ಟಿ.ಎನ್. ಕೋಟೆ, ಚಳ್ಳಕೆರೆ.

ಹೊಳಲ್ಕೆರೆ ತಾಲ್ಲೂಕು

ಹರೇಹಳ್ಳಿ, ಅವಳಿಹಟ್ಟಿ, ಹೊಳಲ್ಕೆರೆ, ರಾಮಗಿರಿ, ಗಂಗಸಮುದ್ರ, ಗೊಲ್ಲರಹಟ್ಟಿ, ಚಿತ್ರಹಳ್ಳಿ, ಗುಂಪಿಮಡುಗೊಲ್ಲಹಟ್ಟಿ.

ಹಿರಿಯೂರು ತಾಲ್ಲೂಕು

ಹರ್ತಿಕೋಟೆ, ಕಪಿಲಹಟ್ಟಿ, ಮಾರಪ್ಪನಹಟ್ಟಿ, ಹುರ್ಲಿಬೇಡಹಟ್ಟಿ, ಜರ್ಲಂತಹಟ್ಟಿ, ಕಟ್ಟಪ್ಪನಹಟ್ಟಿ, ಹೊಸಯಳನಾಡು, ಜವನಗೊಂಡನಹಳ್ಳಿ, ನಂದಿಹಳ್ಳಿ, ಯರಬಳ್ಳಿ, ದೊಡ್ಡಗೊಲ್ಲರಹಟ್ಟಿ, ಸಂಗೇನಹಳ್ಳಿ, ಹಾಲುಗುಡ್ಡದ ಹಟ್ಟಿ, ವೀರೇನಹಳ್ಳಿ, ಮರಡಿಹಳ್ಳಿ, ಪಿ.ಡಿ. ಕೋಟೆ, ವೇಣುಕಲ್ ಗುಡ್ಡ, ಇಕ್ಕನೂರು, ಮದನಕುಂಟೆ, ಮುಂಗಸಿಹಳ್ಳಿ, ಯರಬಳ್ಳಿ, ಕೂಡಲಹಳ್ಳಿ, ಕರಿಓಬನಹಳ್ಳಿ, ಕೋಡಿಹಳ್ಳಿ, ಗುಂತಕಲ್‌ಹಟ್ಟಿ ಹಾಗೂ ಗುಡಿಹಳ್ಳಿ.

ಹೊಸದುರ್ಗ ತಾಲ್ಲೂಕು

ಬೀಸನಹಳ್ಳಿ, ಇಟ್ಟಿಗೆಹಳ್ಳಿ, ಹೇರೂರು, ಲಕ್ಕಿಹಳ್ಳಿ, ಮಾಡದ ಕೆರೆ, ಹೊಸ ತಿಮ್ಮನಹಟ್ಟಿ, ಹಳೆ ತಿಮ್ಮನಹಟ್ಟಿ.

ಮೊಳಕಾಲ್ಮೂರು ತಾಲ್ಲೂಕು

ಬೊಮ್ಮಲಿಂಗನಹಳ್ಳಿ, ಭೈರಾಪುರ, ಗುಡ್ಡದಹಳ್ಳಿ, ಹಾನಗಲ್, ಕೊಂಡ್ಲಹಳ್ಳಿ, ಕೊಮ್ಮನಪಟ್ಟಿ.

ತುಮಕೂರು ಜಿಲ್ಲೆ

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವಂತೆ ತುಮಕೂರು ಜಿಲ್ಲೆಯಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲರು ಕಂಡುಬರುತ್ತಾರೆ. ಈ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ನೆಲೆನಿಂತಿದ್ದಾರೆ. ಅವುಗಳು ಈ ಕೆಳಗಿನಂತಿವೆ.

ಶಿರಾ ತಾಲ್ಲೂಕು

ಕಳುವೋರಹಟ್ಟಿ, ಕುಂಬಾರ ಹಳ್ಳಿ, ಹಳೇ ಬಿಜ್ಜಂಬಳ್ಳಿ, ಪುರ್ಲಳ್ಳಿ, ಹುಳಿಗೆರೆ, ಮಾಗೇನಹಳ್ಳಿ, ಬೇವಿನಹಳ್ಳಿ, ತಂಗಾವರ, ಅಕ್ಕಮ್ಮನಹಳ್ಳಿ, ಗೊಲ್ಲಹಟ್ಟಿ ದೊಡ್ಡ ಅಗ್ರಹಾರದ ಗೊಲ್ಲರಹಟ್ಟಿ, ರಂಗೇನಹಳ್ಳಿ, ಶಾಗದಡು, ಹಾನೇನಹಳ್ಳಿ, ಎತ್ತಪ್ಪನ ಹಟ್ಟಿ, ಕುಂಬಾರ ಹಟ್ಟಿ, ಗೊಲ್ಲರಹಟ್ಟಿ, ಓಜಗುಂಟೆ ಗೊಲ್ಲರಹಟ್ಟಿ, ಉದ್ದನ ಚಿಕ್ಕಣ್ಣನ ಹಟ್ಟಿ, ಮಾಳನಹಳ್ಳಿ ಮತ್ತು ಚಿತ್ರದೇವರ ಹಟ್ಟಿ.

ಚಿಕ್ಕನಾಯಕನಹಳ್ಳಿ ತಾಲ್ಲೂಕು

ದೊಡ್ಡ ರಾಮಪುರದ ಗೊಲ್ಲರ ಹಟ್ಟಿ, ಕೆಂಪುರಾಯನಹಟ್ಟಿ, ಬಗ್ಗನಹಳ್ಳಿ, ಗೊಲ್ಲರಹಟ್ಟಿ, ಜಂಗಮರ ಹಳ್ಳಿ, ಗೊಲ್ಲರಟ್ಟಿ, ಮಲ್ಲಮ್ಮನಹಳ್ಳಿ, ಗಾಣದಾಳು, ದಬ್ಬುಕುಂಟೆ ಮತ್ತು ಸೋಮನಹಟ್ಟಿ.

ಗುಬ್ಬಿ ತಾಲ್ಲೂಕು

ಗುಡ್ಡದ ಹಳ್ಳಿ, ಹೊಸಕೆರೆ, ಚಿತ್ರದೇವರ ಹಟ್ಟಿ, ನಲ್ಲೂರು ಹಟ್ಟಿ, ಜುಂಜಪ್ಪನ ಹಟ್ಟಿ, ಚೇಳೂರು, ಹಾಗವಾಡ ಜುಂಜಪ್ಪನ ಹಟ್ಟಿ ಮತ್ತು ಸಣಬನಹಳ್ಳಿ.

ಪಾವಗಡ ತಾಲ್ಲೂಕು

ಕೊಂಡೇ ತಿಮ್ಮನಹಳ್ಳಿ ಹಟ್ಟಿ, ಪುಲಿ ಮಾಚೆಗೊಲ್ಲರಹಟ್ಟಿ, ಪೋಲನಹಳ್ಳಿ, ಜಂಗಮರ ಹಳ್ಳಿ, ಗೊಲ್ಲರಹಟ್ಟಿ ಮತ್ತು ಮಲ್ಲಮ್ಮನ ಹಳ್ಳಿ.

ತಿಪಟೂರು ತಾಲ್ಲೂಕು

ಸಿಡಿಲಹಳ್ಳಿ ಹಟ್ಟಿ ಮತ್ತು ಎತ್ತಪ್ಪನ ಹಟ್ಟಿ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲುಕಿನಲ್ಲಿ ತಮ್ಮಡಿ ಗೊಲ್ಲರಹಟ್ಟಿ, ಕ್ಯಾಸಿನಕೆರೆ ಗೊಲ್ಲರಹಟ್ಟಿ, ಮರಬದ

ಮತ್ತು ಮರಮನಹಳ್ಳಿ ಗೊಲ್ಲರಹಟ್ಟಿ, ಸುಪ್ಪಕನಹಳ್ಳಿ ಗೊಲ್ಲರಹಟ್ಟಿ, ಹೇಡಿಗುಡ್ಡದ ಗೊಲ್ಲರ ಹಟ್ಟಿ, ಗೊಂದೀಗೇರಿ ಗೊಲ್ಲರ ಹಟ್ಟಿ, ಶಿವಪುರದ ಗೊಲ್ಲರ ಹಟ್ಟಿ, ನುಡುವಲಿ ಗೊಲ್ಲರಹಟ್ಟಿ, ಕೆಂಗ್ಲಟ್ಟಿ ಗೊಲ್ಲರಹಟ್ಟಿ, ಬಸವನಗೊಲ್ಲರಹಟ್ಟಿ, ಸೂರದಾರಹಳ್ಳಿ ಗೊಲ್ಲರಹಟ್ಟಿ, ಬೆಳ್ಳಟ್ಟಿ ಗೊಲ್ಲರ ಹಟ್ಟಿ, ಹೆಂಬನಹಳ್ಳಿ ಗೊಲ್ಲರ ಹಟ್ಟಿ, ತುಂಬರ ಗೊಲ್ಲರಹಟ್ಟಿ. ಹಾಲೂಕು ಗೊಲ್ಲರಹಟ್ಟಿ ಮತ್ತು ಕಲ್ಲಹಳ್ಳಿ ಗೊಲ್ಲರ ಹಟ್ಟಿ.

ದಾವಣಗೆರೆ ಜಿಲ್ಲೆ

ಹಿರೇಮಲ್ಲನ ಹೊಳೆ ಗೊಲ್ಲರಹಟ್ಟಿ.

ಈ ಮೇಲೆ ತಿಳಿಸಿದ ಪ್ರದೇಶಗಳಲ್ಲದೇ ಇನ್ನೂ ಅನೇಕ ಪ್ರದೇಶಗಳಲ್ಲಿ ಕಾಡುಗೊಲ್ಲರು ತಮ್ಮ ನೆಲೆಗಳನ್ನು ಕಂಡುಕೊಂಡಿದ್ದಾರೆ. ಅನೇಕ ವಿದ್ಯಾವಂತರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಕಂಡು ಬರುತ್ತದೆ. ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದವರು ಅನೇಕ ವೃತ್ತಿಗಳನ್ನು ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತ ನಡೆದಿದೆ.

೨.೫ ಜನಸಂಖ್ಯೆ

ಕಾಡುಗೊಲ್ಲರನ್ನು ಕರ್ನಾಟಕ ಸರ್ಕಾರ ಹಿಂದುಳಿದ ವರ್ಗಗಳ ಪ್ರವರ್ಗ-೧ ರಲ್ಲಿ ಸೇರಿಸಿರುವುದರಿಂದ ಭಾರತ ಸರ್ಕಾರ ಇವರ ಜನಗಣತಿಯನ್ನು ಮಾಡಿಲ್ಲ. ಹೀಗಾಗಿ ಕಾಡುಗೊಲ್ಲರ ಜನಸಂಖ್ಯೆ ನಿಖರವಾಗಿ ಎಷ್ಟಿದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ೧೯೮೬ರಲ್ಲಿ ಕರ್ನಾಟಕ ಸರ್ಕಾರ ನೇಮಿಸಿದ ಹಿಂದುಳಿದ ವರ್ಗದ ಆಯೋಗವು ನಡೆಸಿದ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಸಮೀಕ್ಷೆಯ ಪ್ರಕಾರ ಗೊಲ್ಲ ಸಮುದಾಯದ ಜನಸಂಖ್ಯೆ ೫,೯೫,೩೧೪ ರಷ್ಟಿದೆ. ಕರ್ನಾಟಕ ಸರ್ಕಾರ ಮಾಡಿರುವ ಈ ಸಮೀಕ್ಷೆಯಲ್ಲಿ ಊರುಗೊಲ್ಲರು ಹಾಗೂ ಕಾಡುಗೊಲ್ಲರು ಸೇರಿಕೊಂಡಿರುವುದರಿಂದ ಕಾಡುಗೊಲ್ಲರ ಜನಸಂಖ್ಯೆ ಎಷ್ಟಿದೆ ಎಂಬುದು ತಿಳಿಯುವುದಿಲ್ಲ. ತೀ.ನಂ. ಶಂಕರನಾರಾಯಣ ಅವರು ತಮ್ಮ ಅಧ್ಯಯನದಲ್ಲಿ ಕಾಡುಗೊಲ್ಲರ ಜನಸಂಖ್ಯೆಯನ್ನು ಕುರಿತು ೧೯೭೩ರಲ್ಲಿ ಬೆಂಗಳೂರಿನ ಹೈಕೋರ್ಟ ಅಡ್ವಕೇಟ್ ಶ್ರೀ ಸಿದ್ದಪ್ಪ ಕಂಬಳಿಯವರು ನೀಡಿರುವ ಜನಸಂಖ್ಯೆ ಮಾಹಿತಿಯನ್ನೆ ಅವರು ಹೀಗೆ ವ್ಯಕ್ತಪಡಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ೧,೭೫,೦೦೦ ತುಮಕೂರು ಜಿಲ್ಲೆಯಲ್ಲಿ ೧,೪೯,೦೦೦ ಹಾಗೂ ಹಾಸನ ಜಿಲ್ಲೆಯಲ್ಲಿ ೮,೩೩೬ ಜನಸಂಖ್ಯೆ ಇದೆ ಎಂದು ವ್ಯಕ್ತಪಡಿಸಿದ್ದಾರೆ.

ನನ್ನ ವಿಷಯಧ್ಯಯನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕುಗಳಲ್ಲಿ ಒಟ್ಟಾರೆ ಐದು ಗ್ರಾಮಗಳನ್ನು ಆಯ್ದುಕೊಂಡಿದ್ದು, ಅವುಗಳ ಕುಟುಂಬವಾರು ಜನಸಂಖ್ಯೆಯು ಈ ಕೆಳಗಿನಂತಿದೆ.

ಕೋಷ್ಟಕ ೨.೧

ಕಾಡುಗೊಲ್ಲರ ನೆಲೆಗಳವಾರು ಹಾಗೂ ಲಿಂಗವಾರು ಜನಸಂಖ್ಯೆ ಪ್ರಮಾಣ

ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು
ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೬೨	೧೬೪	೧೬೧	೩೨೫
		ಜೋಗಿಹಟ್ಟಿ	೭೨	೧೯೮	೧೫೭	೩೫೫
		ಯಲಗಟ್ಟಿ ಗೊಲ್ಲರಹಟ್ಟಿ	೧೯೪	೪೬೩	೩೯೮	೮೬೧
		ಬೆಳಗೆರೆ ಗೊಲ್ಲರಹಟ್ಟಿ	೧೦೫	೨೭೨	೨೬೨	೫೩೪
	ಮೊಳಕಾಲ್ಮೂರು	ಗುಂಡ್ಲೂರು	೪೬	೧೩೩	೧೧೮	೨೫೧
		ಒಟ್ಟು	೪೭೯	೧೨೩೦	೧೦೯೬	೨೩೨೬

ಮೇಲ್ಕಂಡ ಕೋಷ್ಟಕದನ್ವಯ ಆಯ್ದ ಗ್ರಾಮಗಳ ಒಟ್ಟಾರೆ ಕೌಟುಂಬಿಕ ಕ್ಷೇತ್ರಕಾರ್ಯದಲ್ಲಿ ೪೭೯ ಕಟುಂಬಗಳಲ್ಲಿ ೨,೩೨೬ ಕಾಡುಗೊಲ್ಲರ ಜನಸಂಖ್ಯೆಯಿದೆ. ಇದರಲ್ಲಿ ಗಂಡು ಮತ್ತು ಹೆಣ್ಣು ಕ್ರಮವಾಗಿ ಶೇ. ೫೨.೮೮ ಹಾಗೂ ಶೇ. ೪೭.೧೧ ರಷ್ಟಿದ್ದಾರೆ. ಇದರಲ್ಲಿ ಚಳ್ಳಕೆರೆ ತಾಲೂಕಿನ ಹನುಮಂತನಹಳ್ಳಿಯಲ್ಲಿ ಶೇ. ೧೩.೯೭ (ಇದರಲ್ಲಿ ಗಂಡು ಶೇ. ೫೦.೪೬ ಹಾಗೂ ಹೆಣ್ಣು ಶೇ. ೪೯.೫೩)ರಷ್ಟು, ಜೋಗಿಹಟ್ಟಿಯಲ್ಲಿ ಶೇ. ೧೫.೨೬ (ಇದರಲ್ಲಿ ಗಂಡು ಹಾಗೂ ಹೆಣ್ಣು ಕ್ರಮವಾಗಿ ಶೇ. ೫೫.೭೭ ಮತ್ತು ಶೇ. ೪೪.೨೨)ರಷ್ಟು, ಯಲಗಟ್ಟಿಯಲ್ಲಿ ಶೆ. ೩೭.೦೧ (ಗಂಡು ಶೇ. ೫೩.೭೭ ಮತ್ತು ಹೆಣ್ಣು ಶೇ. ೪೬.೨೨)ರಷ್ಟು, ಬೆಳಗೆರೆಯಲ್ಲಿ ಶೇ. ೨೨.೯೫ (ಗಂಡು ಮತ್ತು ಹೆಣ್ಣು ಕ್ರಮವಾಗಿ ಶೇ. ೫೦.೯೩ ಮತ್ತು ಶೇ. ೪೯.೦೬)ರಷ್ಟು ಇದ್ದಾರೆ. ಅದರಂತೆಯೆ ಮೊಳಕಾಲ್ಮೂರು ತಾಲೂಕಿನ ಗುಂಡ್ಲೂರಿನಲ್ಲಿ ಶೇ. ೧೦.೭೯ (ಇದರಲ್ಲಿ ಗಂಡು ಶೇ. ೫೨.೯೮ ಮತ್ತು ಹೆಣ್ಣು ಶೇ. ೪೭.೦೧)ರಷ್ಟು ಕಾಡುಗೊಲ್ಲ ಜನಸಂಖ್ಯೆ ಇದೆ.

ಒಟ್ಟಾರೆಯಾಗಿ ಯಲಗಟ್ಟಿಯಲ್ಲಿ ಅತಿ ಹೆಚಿನ ಜನಸಂಖ್ಯೆ ಪ್ರಮಾಣ ಹೆಚ್ಚಾಗಿರುವುದು ಕಾಣಸಿಗುತ್ತದೆ. ಅಂತೆಯೆ ಹೆಣ್ಣಿನ ಲಿಂಗವಾರು ಪ್ರಮಾಣಕ್ಕೆ ಹೋಲಿಸಿದಾಗ ಗಂಡಿನ ಲಿಂಗವಾರು ಪ್ರಮಾಣ ಹೆಚ್ಚಾಗಿದ್ದು ಹೆಣ್ಣಿನ ಲಿಂಗಾನುಪಾತ ಕಡಿಮೆ ಇದೆ. ಅಂದರೆ ಒಂದು ಸಾವಿರಕ್ಕೆ ಪ್ರತಿಶತ ೮೯೧ರಷ್ಟು ಇದೆ.

೧೮೮೧ರ ಜನಗಣತಿ ಪ್ರಕಾರ ಅಂದಿನ ಮೈಸೂರು ಪ್ರಾಂತ್ಯದ ಕಾಡುಗೊಲ್ಲರ ಒಟ್ಟು ಜನಸಂಖ್ಯೆ ೪೪,೭೧೭ ಎಂದು ದಾಖಲಿಸಲಾಗಿದೆ. ೧೯೭೫ರಲ್ಲಿ ನೇಮಕವಾದ ಹಿಂದುಳಿದ ವರ್ಗದ ಮೊದಲ ಆಯೋಗದ ವರದಿಯ ಪ್ರಕಾರ ಕಾಡುಗೊಲ್ಲರ ಜನಸಂಖ್ಯೆ ಎರಡುವರೆ ಲಕ್ಷದಷ್ಟಿರಬಹುದೆಂದು ಊಹೆ ಮಾಡಿ ತಿಳಿಸಿದ್ದಾರೆ. ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಪ್ರಕಾರ ಒಟ್ಟು ಕರ್ನಾಟಕದಲ್ಲಿ ೧೧೪೧ ಕಾಡುಗೊಲ್ಲರ ನೆಲೆಗಳಿದ್ದು ೬ ಲಕ್ಷ ೩೭ ಸಾವಿರ ಜನಸಂಖ್ಯೆ ಇದೆ ಎಂದು ತಿಳಿಸಿದ್ದಾರೆ. ಇದರಲ್ಲಿ ಊರಗೊಲ್ಲ ಹಾಗೂ ಕಾಡುಗೊಲ್ಲರು ಸೇರಿಕೊಂಡಿರುವ ಸಾಧ್ಯತೆಗಳಿವೆ.

ಅಡಿ ಟಿಪ್ಪಣಿಗಳು

೧. ಶಂಕರನಾರಾಯಣ ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ೧೯೮೨, ಪುಟ. ೩೨.

೨. ಸಣ್ಣ ಓಬಯ್ಯ ಎಸ್.ಕೆ., ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಮಹಾಪ್ರಬಂಧ, ೨೦೦೨, ಪು. ೩೨.

೩. ನಾಗಭೂಷಣಸ್ವಾಮಿ ಓ.ಎಲ್., ಪುರಾಣ. ೧೯೯೩, ಪು. ೮

೪. ಗುರುಲಿಂಗಯ್ಯ ಎಂ., ವಿ. ನಾಗಪ್ಪ, ಕಾಡುಗೊಲ್ಲ, ೨೦೦೮, ಪು. ೩೧-೩೨.

೫. ಶಂಕರನಾರಾಯಣ ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ೧೯೮೨, ಪು. ೧೦೨

೬. ಕೃಷ್ಣಮೂರ್ತಿ ಹನೂರು, ಕಾಡುಗೊಲ್ಲರು, ೧೯೯೮, ಪು. ೮೪೩

೭. ವೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲರ ಸಂಸ್ಕೃತಿ, ಪು. ೫೯

೮. ಅದೇ ಪು. ೬೬

೯. ಅದೇ ಪು. ೬೬

ಅಧ್ಯಾಯ ಮೂರು

ಪಶುಪಾಲನೆ ಮತ್ತು ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು

೩.೧ ಭಾರತೀಯ ಸಂಸ್ಕೃತಿಯಲ್ಲಿ ಪಶುಪಾಲನೆ

ಅಧ್ಯಾಯ ೩

ಪಶುಪಾಲನೆ ಮತ್ತು ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು

ಆದಿಮಾನವ ಪ್ರಾರಂಭದ ಘಟ್ಟದಲ್ಲಿ ಬೇಟೆಯ ಮೂಲಕವೇ ಆಹಾರ ಸಂಗ್ರಹಣೆ ಮಾಡಿ ಅದನ್ನು ಸೇವಿಸಿ ಬದುಕುತ್ತಿದ್ದ ಎಂಬುದು ನಾವು ಅರಿತುಕೊಂಡಿರುವ ಸಂಗತಿಯಾಗಿದೆ. ಬೇಟೆಯ ಸಂದರ್ಭದಲ್ಲಿ ಉಂಟಾಗುತ್ತಿದ್ದ ಆಹಾರದ ಕೊರತೆಯನ್ನು ತುಂಬಿಕೊಳ್ಳಲು ಕಾಡಿನಲ್ಲಿದ್ದ ಸಾಧು ಪ್ರಾಣಿಗಳನ್ನು ಪಳಗಿಸುವುದರ ಮೂಲಕ ಅವುಗಳಲ್ಲಿರುವ ಕ್ರೂರತ್ವವನ್ನು ತೆಗೆದು ಸಾಧು ಪ್ರಾಣಿಗಳಾಗಿ ಪರಿವರ್ತನೆ ಮಾಡಿದ. ಕಾಡಿನಲ್ಲಿಯ ಕುರಿ, ಆಡು, ಎಮ್ಮೆ, ಆಕಳು, ಕೋಣ ಇವುಗಳನ್ನು ಪಳಗಿಸಿ ಇಲ್ಲಿಂದಲೇ ಆದಿಮಾನವ ಪಶುಪಾಲನೆಯನ್ನು ಪ್ರಾರಂಭಿಸಿ ಬೇಟೆಯ ಸಂದರ್ಭದಲ್ಲಿ ಉಂಟಾಗುತ್ತಿದ್ದ ಆಹಾರದ ಕೊರತೆಯನ್ನು ಪಶುಪಾಲನೆಯ ಹಂತದಲ್ಲಿ ನೀಗಿಸಿಕೊಳ್ಳತೊಡಗಿದ. ಈ ಪಶುಪಾಲಕ ವೃತ್ತಿ ಹೇಗಿತ್ತು ಎಂಬುದರ ಚಿತ್ರಣವೂ ದೊರೆಯುತ್ತದೆ. ಆರ್ಯರು ಭಾರತವನ್ನು ಪ್ರವೇಶಿಸುವಾಗ ಅವರು ಪಶುಪಾಲಕ ವೃತ್ತಿಯನ್ನೇ ಅವಲಂಬಿಸಿದ್ದರು ಎಂಬುದು ತಿಳಿಯುತ್ತದೆ.

ಆದಿಮಾನವನಿಗೆ ಪ್ರಾರಂಭದ ಹಂತದಲ್ಲಿ ಆಹಾರ ಉತ್ಪಾದನೆಯ ಬಗ್ಗೆ ಯಾವುದೇ ತಿಳುವಳಿಕೆ ಇರಲಿಲ್ಲ. ಆಹಾರ ಸಿಗಬಹುದಾದ ಸ್ಥಳಗಳನ್ನು ಹುಡುಕುತ್ತಾ, ಬೇಟೆಯಾಡುತ್ತಾ ಅಲೆಮಾರಿಯಾಗಿದ್ದ. ಇದು ಕೇವಲ ಆಹಾರ ಸಂಗ್ರಹಣೆ ಮಾತ್ರ ಆಗಿತ್ತು. ಆಹಾರ ಉತ್ಪಾದನೆಯನ್ನು ಆದಿಮಾನವನಿಗೆ ಬೇಟೆ ಮತ್ತು ಪಶುಪಾಲನೆಯ ಹಂತದಲ್ಲಿಯೂ ಕಂಡುಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಎಂದೇ ಹೇಳಬೇಕಾಗುತ್ತದೆ. ಆದಿಮಾನವರಲ್ಲಿ ಒಂದು ವರ್ಗ ಮಾಂಸಹಾರವನ್ನೆ ಸೇವಿಸುತ್ತಿದ್ದರೆ ಇನ್ನೊಂದು ವರ್ಗ ಕಾಡಿನಲ್ಲಿಯ ಗೆಡ್ಡೆ-ಗೆಣಸು, ಸೊಪ್ಪು-ಸೆದೆ, ಹಣ್ಣು-ಹಂಪಲ ಸೇವಿಸುತ್ತಾ ಬದುಕುತ್ತಿತ್ತು. ಸಸ್ಯಾಹಾರಿಗಳಾಗಿದ್ದ ಆದಿಮಾನವರು ಮಾಂಸವನ್ನು ಸೇವಿಸುತ್ತಿರಲಿಲ್ಲ ಎಂದು ತಿಳಿದುಕೊಳ್ಳಬಾರದು. ಅವರು ಹೆಚ್ಚಿನ ಪ್ರಮಾಣದಲ್ಲಿ ಸಸ್ಯಾಹಾರವನ್ನು ಸೇವಿಸುತ್ತಿದ್ದರು ಎಂದು ಕಲ್ಪಿಸಿಕೊಳ್ಳಬಹುದು. ಒಂದು ಘಟ್ಟದಲ್ಲಿ ಆದಿಮಾನವನ ಬದುಕು ತೀರಾ

ಸಂಕಷ್ಟದಲ್ಲಿತ್ತು. 'ಪೃಥ್ವಿಯ ಮೇಲೆ ಏನಿದೆಯೋ ಅದನ್ನು ಹುಡುಕಿ, ಸಂಗ್ರಹಿಸಿಕೊಂಡು ಹೇಗಾದರೂ ಪ್ರಾಣವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ. ಬೇರೆ ಪ್ರಾಣಿಗಳಿಗೆ ಹೋಲಿಸಿದಲ್ಲಿ ಈ ಆಹಾರ ಸಂಗ್ರಹಣೆಯ ಬೆಳವಣಿಗೆ ಅತಿ ಉನ್ನತವಾದುದಾಗಿದ್ದಿತು. ಆದರೂ ದೊರೆಯುತ್ತಿದ್ದುದನ್ನಷ್ಟೇ ಸಂಗ್ರಹಿಸಿ ಕೊಂಡು ಬದುಕುವ ಅವಸ್ಥೆ ಅವನದಾಗಿತ್ತು."[೧] ಆದಿಮಾನವ ಆಹಾರ ಸಂಗ್ರಹಣೆಯ ಸಂದರ್ಭದಲ್ಲಿ ಅವನು ಅನುಭವಿಸಿರುವ ಕಷ್ಟ ಬರೆಯಲುಸಾಧ್ಯವಾದದ್ದು.

ಆದಿಮಾನವರಲ್ಲಿಯ ಒಂದು ಗುಂಪು ಕಾಲಾನಂತರ ಬೇಟೆ ಮತ್ತು ಪಶುಪಾಲನೆಯಿಂದ ಆಹಾರ ಸಂಗ್ರಹಣೆ ಮಾಡಿಕೊಂಡು ಬದುಕಲು ಸಾಧ್ಯವಾಗುವುದಿಲ್ಲ ಎಂಬುದನ್ನು ಅರಿತುಕೊಂಡು ಆಹಾರ ಉತ್ಪಾದನೆಗೆ ಕೈ ಹಾಕಿತು. ಆದಿಮಾನವ ಯಾವಾಗ ಆಹಾರ ಉತ್ಪಾದನೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿದನೋ ಅಂದಿನಿಂದ ಭೂಮಿ ಮತ್ತು ಮನುಷ್ಯನ ನಡುವಿನ ಸಂಬಂಧಗಳು ಗಟ್ಟಿಯಾಗತೊಡಗಿದವು. ಆದಿಮಾನವ ಪರಾವಲಂಬಿಯಾಗಿ ಬದುಕುವುದನ್ನು ಹಂತ ಹಂತವಾಗಿ ಕೈಬಿಡತೊಡಗಿದ. ಕಾಡಿನಲ್ಲಿ ದೊರೆಯುವ ವಸ್ತುಗಳ ಮೂಲಕವೇ ಆದಿಮಾನವ ಬದುಕಬೇಕಾದ ಅನಿವಾರ್ಯತೆ ಉಂಟಾಗಲಿಲ್ಲ. ಭೂಮಿಯಿಂದ ಆಹಾರ ಧಾನ್ಯಗಳನ್ನು ಬೆಳೆಯ ತೊಡಗಿದ. ಆದಿಮಾನವ ಆಹಾರ ಸಂಗ್ರಹಣೆಯಿಂದ ಆಹಾರ ಉತ್ಪಾದನೆಯತ್ತ ದಾಪುಗಾಲು ಹಾಕಿದ. ಆಹಾರ ಉತ್ಪಾದನೆಯ ಹಂತ ತಲುಪಬೇಕಾದರೆ ಆದಿಮಾನವನಿಗೆ ಎಷ್ಟೋ ಶತಮಾನಗಳೆ ಬೇಕಾದವು ಎಂಬುದನ್ನು ನಾವು ಗಮನಿಸಬೇಕಾಗುತ್ತದೆ.

ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು ಆದಿಮಾನವರ ವೃತ್ತಿಗಳನ್ನು ವಿಶ್ಲೇಷಿಸುವಾಗ ಮೊದಲು ಬೇಟೆ, ಕೃಷಿ, ನಂತರ ಪಶುಪಾಲನೆ ವೃತ್ತಿಯನ್ನು ಅವಲಂಬಿಸಿದ ಎಂದು ವಿವರಿಸುತ್ತಾರೆ. ಚಟ್ಟೋಪಾಧ್ಯಾಯರ ಈ ಗೃಹಿಕೆಯನ್ನು ಒಪ್ಪಲೇಬೇಕಾಗುತ್ತದೆ. ಕೃಷಿ ನೀತಿಯನ್ನು ಆದಿಮಾನವ ಕಂಡು ಕೊಂಡ ಮೇಲೆ ಕಾಡಿನಲ್ಲಿಯ ಪ್ರಾಣಿಗಳನ್ನು ಪಳಗಿಸಿ ಅವುಗಳ ಪಾಲನೆ ಪ್ರಾರಂಭಿಸಿದ. ಆ ಪ್ರಾಣಿಗಳ ಮರಿಗಳ ಮೂಲಕ ಪಶುಗಳ ಸಂಖ್ಯೆ ಹೆಚ್ಚಾಯಿತು. ಆ ಪ್ರಾಣಿಗಳಿಂದ ಆದಿಮಾನವ ಹಾಲು, ಮಾಂಸ, ಚರ್ಮ ಪಡೆದು ಉಪಯೋಗಿಸತೊಡಗಿದ. ಕೆಲ ಪಶುಗಳನ್ನು ಕೃಷಿಕ ವೃತ್ತಿಗೆ ಬಳಸಿಕೊಳ್ಳತೊಡಗಿದ. ಹೀಗಾಗಿ ಪಶುಪಾಲನೆಗಿಂತ ಕೃಷಿಕ ವೃತ್ತಿ ಪ್ರಾಚೀನವಾದುದು ಎಂದು ಚಟ್ಟೋಪಾಧ್ಯಾಯರು ಅಭಿಪ್ರಾಯ ಪಡುತ್ತಾರೆ. ಭಾರತದಲ್ಲಿಯ ಆದಿವಾಸಿ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡು ಹೇಳಬೇಕಾದರೆ ಪಶುಪಾಲನೆಯ ವೃತ್ತಿಯನ್ನೇ ತಮ್ಮ ಮೂಲ ವೃತ್ತಿಯನ್ನಾಗಿಸಿಕೊಂಡ ಆದಿವಾಸಿ ಸಮುದಾಯಗಳ ಸಂಖ್ಯೆ ತೀರ ಕಡಿಮೆ ಎಂದೇ ಹೇಳ ಬೇಕಾಗುತ್ತದೆ. ಶೇಕಡಾ ೮೫ ರಿಂದ ೯೦ ರಷ್ಟು ಆದಿವಾಸಿ ಸಮುದಾಯಗಳು ಬೇಟೆಯ ಹಂತದಿಂದ ಕೃಷಿಯನ್ನೇ ತಮ್ಮ ಮೂಲವೃತ್ತಿಯಾಗಿ ಪಡೆದುಕೊಂಡಿರುವುದನ್ನು ಕಾಣುತ್ತೇವೆ. ಆದಿಮಾನವರಲ್ಲಿಯ ಒಂದು ಗುಂಪು ಕೃಷಿಯನ್ನು ಪ್ರಾರಂಭಿಸಿ ಆ ಮೂಲಕ ನಾಗರಿಕತೆಯ ಪರಿಸರವನ್ನು ಹುಟ್ಟುಹಾಕಲು ವೇದಿಕೆಯನ್ನು ನಿರ್ಮಾಣ ಮಾಡಿದರೆ, ಇನ್ನೊಂದು ಗುಂಪು ಪಶುಪಾಲನೆಯಲ್ಲಿ ತನ್ನ ಅಸ್ತಿತ್ವವನ್ನು

ಕಂಡುಕೊಂಡಿತು. ಪಶುಪಾಲಕ ವೃತ್ತಿಯನ್ನು ನಿರ್ವಹಿಸುತ್ತಿದ್ದ ಈ ಗುಂಪುಗಳು ಕೃಷಿಯತ್ತ ತಲೆಹಾಕದೇ ಈ ವೃತ್ತಿಯ ಮೂಲಕವೆ ಆಹಾರ ಸಂಗ್ರಹಿಸುತ್ತ ಅಲೆಮಾರಿಗಳಾಗಿ ಜೀವನ ಸಾಗಿಸತೊಡಗಿದರು. ಕಾಲಾನಂತರ ಪಶುಪಾಲನೆ ವೃತ್ತಿಯನ್ನು ಅನುಸರಿಸುತ್ತಿದ್ದ ಸಮುದಾಯಗಳಲ್ಲಿಯ ಅನೇಕರು ಕೃಷಿಯತ್ತ ಆಕರ್ಷಿತರಾಗಿ ಆ ವೃತ್ತಿಯನ್ನು ಆರಂಭಿಸಿರಬಹುದು. ಕೃಷಿಕ ವೃತ್ತಿಯ ಮೂಲಕ ಆಹಾರ ಉತ್ಪಾದನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕ್ರೋಢಿಕರಿಸಿಕೊಳ್ಳುತ್ತಿರುವುದನ್ನು ಹಾಗೂ ನೆಮ್ಮದಿಯ ಬದುಕನ್ನು ಸಾಗಿಸುತ್ತಿರುವ ಕುಟುಂಬ ಗಳನ್ನು ಕಂಡು ಅನೇಕ ಪಶುಪಾಲಕ ವೃತ್ತಿ ಸಮುದಾಯಗಳು ಪಶುಪಾಲನೆಯ ಜೊತೆಗೆ ಕೃಷಿಯನ್ನು ಆರಂಭಿಸಿರಬಹುದು.

"ಆದಿಮಾನವನಿಗೆ ಕೃಷಿ ಕಾರ್ಯದ ತಿಳುವಳಿಕೆ ಉಂಟಾದ ಮೇಲೆ ನಾಗರಿಕತೆಯ ಬೆಳವಣಿಗೆಯಲ್ಲಿ ಶೀಘ್ರಗತಿ ಉಂಟಾಯಿತು. ಇದಕ್ಕೂ ಹಿಂದಿನ ಇತಿಹಾಸಕ್ಕೂ ಹೋಲಿಸಿದಲ್ಲಿ ನಂಬಲಾಗದಷ್ಟು ವೇಗವಾಗಿ ಈ ಬೆಳವಣಿಗೆ ಉಂಟಾಗಿದೆ. ಕೃಷಿಯನ್ನು ಕಲಿತುಕೊಂಡು ಅದರ ಅವಿಷ್ಕಾರದ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಸಂಗ್ರಹಣೆಯನ್ನು ಮಾಡತೊಡಗಿದ ಮೇಲೆ ಆ ಕಾಲದ ಮನುಷ್ಯನಿಗೆ ಇತರೆ ಬೇರೆ ಬೇರೆ ಕೆಲಸಗಳಲ್ಲಿ ಮನಸ್ಸು ತೊಡಗಿಸಲು ಸಾಧ್ಯವಾಯಿತು. ಇದನ್ನು ಮಾನವ ಜನಾಂಗದ ಇತಿಹಾಸದಲ್ಲಿ ಆವಿಷ್ಕಾರದ ಉಚ್ಛ್ರಾಯಕಾಲ ಎಂದು ಕರೆಯಬಹುದು".[೨]

ಬೇಟೆ ಮತ್ತು ಪಶುಪಾಲನೆಯ ವೃತ್ತಿಯಲ್ಲಿ ತೊಡಗಿಕೊಂಡು ಆಹಾರ ಸಂಗ್ರಹಣೆ ಮಾಡುತ್ತಿದ್ದ ಮಾನವ ಸಂಗ್ರಹಿಸಿದ ಆಹಾರ ಸಾಮಗ್ರಿಗಳನ್ನು ಒಂದೆರೆಡು ದಿನಗಳವರೆಗೆ ಸೇವಿಸುತ್ತಿದ್ದ. ಪ್ರಾಣಿಗಳ ಮಾಂಸ, ಹಣ್ಣು-ಹಂಪಲು, ಗೆಡ್ಡೆ-ಗೆಣಸುಗಳನ್ನು ವಾರ-ತಿಂಗಳವರೆಗೆ ಸಂಗ್ರಹಿಸಿಡಲು ಸಾಧ್ಯವಾಗುತ್ತಿರಲಿಲ್ಲ. ಸಂಗ್ರಹಿಸದ ಆಹಾರ ಪದಾರ್ಥಗಳು ಮುಗಿದ ತಕ್ಷಣ ಬೇಟೆಗಾಗಿ, ಗೆಡ್ಡೆ-ಗೆಣಸು, ಹಣ್ಣು ಸಂಗ್ರಹಕ್ಕಾಗಿ ಅಲೆದಾಡಬೇಕಾಗುತ್ತಿತ್ತು. ಇದು ಅನಿವಾರ್ಯವೂ ಆಗಿತ್ತು. ಮತ್ತು ಈ ಕ್ರಮ ನಿರಂತರವಾಗಿತ್ತು. ವರ್ಷವಿಡೀ ಮಾನವ ಆ ಆಹಾರ ಸಂಗ್ರಹಣೆಯಲ್ಲಿಯೇ ಕಾಲ ಕಳೆಯುತ್ತಿದ್ದ. ಈ ಸಂದರ್ಭದಲ್ಲಿ ಅವನಿಗೆ ವಿಶ್ರಾಂತಿ ಎಂಬುದೇ ಇರಲಿಲ್ಲ. ಆಹಾರ ಸಂಗ್ರಹಣೆಯ ಕಾಲಘಟ್ಟದಲ್ಲಿ ಅವನು ಸಂಗ್ರಹಿಸಿದ ಆಹಾರ ಅವನಿಗೊಬ್ಬನಿಗೆ ಮಾತ್ರ ಸಾಕಾಗುತ್ತಿತ್ತು. ಹೀಗಾಗಿ ಈ ಗುಂಪಿನಲ್ಲಿದ್ದ ಪ್ರತಿಯೊಬ್ಬರೂ ಅನಿವಾರ್ಯವಾಗಿ ಆಹಾರ ಸಂಗ್ರಹಣೆಯಲ್ಲಿ ತೊಡಗಬೇಕಾಗಿತ್ತು. ಅನಾರೋಗ್ಯದಿಂದ ಬಳಲುತ್ತಿದ್ದವರು ತಮ್ಮ ಆಹಾರವನ್ನು ಅವರು ಸಂಗ್ರಹಿಸಿಕೊಳ್ಳಲಾಗದೆ ಪ್ರಾಣ ಬಿಡಬೇಕಾಗುತ್ತಿತ್ತು. ಒಟ್ಟಿನಲ್ಲಿ ಬೇಟೆ ಮತ್ತು ಪಶುಪಾಲನೆಯಲ್ಲಿ ತೊಡಗಿಕೊಂಡಿದ್ದ ಮಾನವರ ಗುಂಪುಗಳು ಕೇವಲ ಆಹಾರ ಸಂಗ್ರಹಣಾ ಕಾರ್ಯ ಬಿಟ್ಟು ಇತರೆ ಯಾವ ಯೋಚನೆಯನ್ನು ಮಾಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಇದೇ ಗುಂಪಿನ ಕೆಲ ಮಾನವರು ಕೃಷಿ ಕಾರ್ಯ ಕಲಿತ ಮೇಲೆ ಆಹಾರ ಉತ್ಪಾದನೆ ಹೆಚ್ಚಾಗಿ ತಮ್ಮ ಗುಂಪಿನ ಇತರರನ್ನು ಆಹಾರ ಉತ್ಪಾದನೆಯ ಕೆಲಸದಿಂದ ಬಿಡುಗಡೆ ಮಾಡಲು ಅವರಿಗೆ ಸಾಧ್ಯವಾಯಿತು. ಅನಾರೋಗ್ಯದಿಂದ

ಬಳಲುತ್ತಿದ್ದವರಿಗೆ ಆಹಾರ ನೀಡುವ ಸಾಮರ್ಥ್ಯವನ್ನು ಈ ಗುಂಪಿನವರು ಬೆಳೆಸಿಕೊಂಡರು. ವ್ಯವಸಾಯದಲ್ಲಿ ನಿರತರಾದ ಮೇಲೆ ವರ್ಷಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಕೇವಲ ಅರ್ಧವರ್ಷದಲ್ಲಿ ಪಡೆದುಕೊಂಡು ಉಳಿದರ್ಧ ವರ್ಷದಲ್ಲಿ ಇತರೆ ಯೋಚನೆಗಳನ್ನು ಮಾಡಿ ವಿವಿಧ ವೃತ್ತಿಗಳನ್ನು ಹುಟ್ಟುಹಾಕಿಕೊಂಡು ನೆಮ್ಮದಿಯ ಬದುಕನ್ನು ಸಾಗಿಸಲು ಅನುಕೂಲ ಮಾಡಿಕೊಂಡರು.

ಕೃಷಿಯತ್ತ ತಲೆಹಾಕದೇ ಕೇವಲ ಪಶುಪಾಲನೆಯ ಮೂಲಕವೇ ಬದುಕುತ್ತಿದ್ದ ಮಾನವರ ಗುಂಪುಗಳು ಮಾತ್ರ ನಾಗರಿಕತೆಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಲಿಲ್ಲ ಎಂಬುದನ್ನು ಇಲ್ಲಿ ಗಮನಿಸ ಬೇಕಾಗುತ್ತದೆ. ಈ ಗುಂಪುಗಳು ಕಾಡಿನಲ್ಲಿ ತಮ್ಮ ಪಶುಸಂಪತ್ತನ್ನು ಕಾಪಾಡಿಕೊಳ್ಳುತ್ತ ಅಲೆಮಾರಿಗಳಾಗಿ ಕಾಡಿನಲ್ಲಿ ಸುತ್ತುತ್ತ ಕಾಲಕಳೆಯಬೇಕಾಯಿತು. ಹೀಗಾಗಿ ಕೇವಲ ಪಶುಪಾಲಕ ವೃತ್ತಿಯನ್ನೇ ಅನುಸರಿಸುತ್ತ ಬಂದ ಸಮುದಾಯಗಳು ಮುಂದುವರಿಯಲಿಕ್ಕೆ ಸಾಧ್ಯವಾಗಿಲ್ಲ. ಕರ್ನಾಟಕದಲ್ಲಿ ಪಶುಪಾಲಕ ವೃತ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಬದುಕುತ್ತಿರುವ ಸಮುದಾಯಗಳಾದ ಕಾಡುಗೊಲ್ಲರು, ಕಚ್ಚೇಗೌಳಿಗರು ಮತ್ತು ಅಲೆಮಾರಿ ಕುರುಬರು ಮುಂತಾದವರನ್ನು ಗಮನಿಸಿದಾಗ ಈ ಮಾತು ಸ್ಪಷ್ಟವೆನಿಸುತ್ತದೆ.

ಕರ್ನಾಟಕದಲ್ಲಿ ನೆಲೆಕಂಡುಕೊಂಡಿರುವ ಅಲೆಮಾರಿ ಪಶುಪಾಲಕರಾದ ಕಚ್ಚೆಗೌಳಿಗರನ್ನು ಈ ಸಂದರ್ಭ ದಲ್ಲಿ ಅಧ್ಯಯನ ಮಾಡಿದಾಗ ಈ ಪಶುಪಾಲಕರು ಕೊಲ್ಲಾಪುರ, ಸಾತಾರ, ಮೀರಜ, ಅಂಬೋಲ್ ಮುಂತಾದ ಪ್ರದೇಶಗಳಿಂದ ವಲಸೆ ಬಂದಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಮಹಾರಾಷ್ಟ್ರದ ಗುಡ್ಡಗಾಡು ಪ್ರದೇಶಗಳಲ್ಲಿ ಪಶುಪಾಲನೆಯನ್ನು ಕೈಕೊಂಡಿದ್ದ ಇವರು ಅತೀವೃಷ್ಟಿ, ಅನಾವೃಷ್ಟಿ ಹಾಗೂ ರಾಜಕೀಯ ಕಾರಣಗಳಿಂದ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ ಎಂಬುದು ತಿಳಿಯಿತು. ಮಹಾರಾಷ್ಟ್ರದಲ್ಲಿದ್ದ ಬೇಡರು ಇವರ ಹಸು ಹಾಗೂ ಎಮ್ಮೆಗಳನ್ನು ಅಪಹರಿಸುತ್ತಿದ್ದರು ಮತ್ತು ಮುಸ್ಲಿಂ ಆಡಳಿತಾಧಿಕಾರಿಗಳು, ಸೈನಿಕರು ರೂಪವತಿಯರಾದ ಗೌಳಿಗರ ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ಕೊಡುತ್ತಿದ್ದರು. ಈ ಎಲ್ಲಾ ಸಮಸ್ಯೆಗಳಿಗೆ ತೆರೆ ಎಳೆಯುವುದಕ್ಕೋಸ್ಕರ ಮತ್ತು ಜೀವನಾಧಾರವಾಗಿದ್ದ ಪಶುಗಳನ್ನು ರಕ್ಷಣೆ ಮಾಡುವುದಕ್ಕಾಗಿ ಗೌಳಿಗರು ಕರ್ನಾಟಕದ ಪಶ್ಚಿಮ ಘಟ್ಟಕ್ಕೆ ವಲಸೆ ಬಂದರು. ಪಾರಂಪರಿಕ ಪಶುಗಳ ತಳಿಯ ಮೂಲಕವೇ ಪಶುಪಾಲನೆ ಮಾಡುತ್ತಿದ್ದ ಇವರ ಆರ್ಥಿಕ ಸ್ಥಿತಿಗತಿಗಳು ತೀರ ಕೆಳಮಟ್ಟದಲ್ಲಿವೆ. ಪಶುಪಾಲನೆಯಿಂದ ಉಪಜೀವನ ನಡೆಸುವುದು ಸಾಧ್ಯವಾಗದೇ ಇರುವುದರಿಂದ ಇವರೂ ಸಹ ಪಶುಪಾಲನೆ ವೃತ್ತಿಯನ್ನು ಕೈಬಿಡುತ್ತ ಕಾಡಿನಲ್ಲಿಯ ಭೂಮಿಯನ್ನು ಅತಿ ಕ್ರಮಿಸಿಕೊಂಡು ಅಲ್ಲಿ ಕೃಷಿ ವೃತ್ತಿ ಕೈಕೊಂಡಿರುವುದು ಕಂಡು ಬರುತ್ತದೆ. ಕೆಲವರು ಕೂಲಿ ಕೆಲಸಗಳನ್ನು ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿರುವ ಕುರುಬ ಸಮುದಾಯ ಅದರಲ್ಲೂ ಅಲೆಮಾರಿ ಕುರುಬರು ಪಶುಪಾಲನಾ ವೃತ್ತಿಯನ್ನೇ ನಂಬಿ ಬದುಕುತ್ತಿರುವವರು. ಹಾಲುಮತದ ಸಾಂಸ್ಕೃತಿಕ ನಾಯಕರೆಲ್ಲರೂ (ಬೀರಪ್ಪ, ಮಾಳಿಂಗ ರಾಯ, ರೇವಣಸಿದ್ಧ, ಅಮೋಘಸಿದ್ಧ ಮುಂತಾದವರು) ಸಹ ಪಶುಪಾಲನೆಯನ್ನೇ ತಮ್ಮ ಮೂಲ

ವೃತ್ತಿಯಾಗಿಸಿಕೊಂಡವರು. ಪಶುಗಳ ರಕ್ಷಣೆಗಾಗಿ ಅನೇಕರು ಹೋರಾಟ ಹಾಗೂ ಪ್ರಾಣ ತ್ಯಾಗ ಮಾಡಿರುವ ಕಥೆಗಳು ಮಾಳಿಂಗರಾಯನ ಹಾಗೂ ಹಾಲಮತ ಪುರಾಣದಲ್ಲಿ ಕಂಡುಬರುತ್ತವೆ. ಹಾಲುಮತದ ಸಾಂಸ್ಕೃತಿಕ ನಾಯಕ ಈ ಪಶುಪಾಲಕ ವೃತ್ತಿ ದೈವದತ್ತವಾಗಿ ಬಂದಿರುವುದೆಂದು ನಂಬಿಕೆ ಇಟ್ಟುಕೊಂಡವರಾಗಿದ್ದರು. ಈ ಸಾಂಸ್ಕೃತಿಕ ನಾಯಕರ ವೃತ್ತಿಯನ್ನೇ ಅನುಸರಿಸುತ್ತಿರುವ ಅಲೆಮಾರಿ ಕುರುಬರು ಪಶುಪಾಲನೆಗಾಗಿ ಇಂದು ಪರದಾಡುತ್ತಿರುವುದನ್ನು ಕಾಣುತ್ತೇವೆ. ಇವರು ಸಹ ಶೈಕ್ಷಣಿಕವಾಗಿ, ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಒಟ್ಟಿನಲ್ಲಿ ಇಂದು ಪಶುಪಾಲಕ ವೃತ್ತಿಯನ್ನೇ ಪ್ರಧಾನವಾಗಿಟ್ಟುಕೊಂಡ ಸಮುದಾಯಗಳು ಅದರಲ್ಲೂ ಪಾರಂಪರಿಕ ತಳಿಗಳನ್ನೇ ನಂಬಿ ಬದುಕುತ್ತಿರುವವರು ತೀರ ಹಿಂದುಳಿದಿದ್ದಾರೆ ಎಂದರೆ ಅತಿಶಯೋಕ್ತಿ ಎನಿಸಲಾರದು. ಊರಗೌಳಿಗರು ಆಧುನಿಕ ತಳಿಗಳನ್ನು ಸಾಕುವುದರ ಮೂಲಕ ಉತ್ಪಾದನಾ ವ್ಯವಸ್ಥೆಯನ್ನು ಹೆಚ್ಚಿಸಿಕೊಂಡು ಕನಿಷ್ಟ ನೆಮ್ಮದಿಯ ಬದುಕನ್ನು ಸಾಗಿಸುತ್ತಿರುವುದು ಕಂಡುಬರುತ್ತದೆ.

೩.೧ ಭಾರತೀಯ ಸಂಸ್ಕೃತಿಯಲ್ಲಿ ಪಶುಪಾಲನೆ

ಪಶುಪಾಲನೆ ಭಾರತದಲ್ಲಿ ಅತ್ಯಂತ ಪ್ರಾಚೀನ ಮತ್ತು ಪವಿತ್ರವಾದ ವೃತ್ತಿಯಾಗಿತ್ತು ಎಂಬುದನ್ನು ಪುರಾಣ ಮತ್ತು ಚರಿತ್ರೆಯ ಮೂಲಕ ಕಂಡುಕೊಳ್ಳಬಹುದಾಗಿದೆ. ಪಶುಪಾಲನೆಯಲ್ಲಿ ಅದರಲ್ಲಿಯೇ ಗೋವು ಸಾಕಾಣಿಕೆಯನ್ನು ಪೂಜ್ಯವಾದ ವೃತ್ತಿಯೆಂದು ಕರೆಯುತ್ತಿದ್ದರು. ಹಸುವನ್ನು 'ಕಾಮಧೇನು' ಎಂದು ಪೂಜಿಸುವ ಪರಂಪರೆ ಭಾರತೀಯ ಸಂಸ್ಕೃತಿಯಲ್ಲಿದೆ. ಆರ್ಯರು ತಮ್ಮ ಪಶುಸಂಪತ್ತಿನ ಜೊತೆಗೆ ಭಾರತವನ್ನು ಪ್ರವೇಶ ಮಾಡಿದರು. ಆರ್ಯರಿಗೆ ಪ್ರಾರಂಭದಲ್ಲಿ ಪಶುಪಾಲನೆ ವೃತ್ತಿ ಮಾತ್ರ ತಿಳಿದಿತ್ತು. ಇವರು ತಮ್ಮ ದನಗಳನ್ನೇ ಸಂಪತ್ತು ಎಂದು ಭಾವಿಸಿಕೊಂಡಿದ್ದರು. ಭಾರತದ ಮೂಲ ನಿವಾಸಿಗಳಾದ ದ್ರಾವಿಡರು ಕೃಷಿ ಹಾಗೂ ಪಶುಪಾಲನೆ ಎರಡೂ ವೃತ್ತಿಗಳನ್ನು ನಿರ್ವಹಿಸುತ್ತಿದ್ದರು.

ಪ್ರಾಚೀನ ಭಾರತದಲ್ಲಿ ಆಕಳುಗಳೇ ಅಂದಿನ ಸಂಪತ್ತಾಗಿತ್ತು. ಆಕಳುಗಳು "ಅವರ ಸಮಾಜದ (ಆರ್ಯ ಸಮಾಜದ) ಸ್ಥಾನಮಾನಗಳನ್ನು ನಿರ್ಧರಿಸುವ ಅಳತೆಗೋಲುಗಳಾಗಿದ್ದವು. ೫ ಲಕ್ಷ ಪಶುಸಂಪತ್ತಿನವನ್ನು 'ಉಪನಂದ'ನೆಂದೂ ೯ ಲಕ್ಷ ಪಶು ಸಂಪತ್ತಿನವನನ್ನು 'ನಂದ'ನೆಂದೂ, ಒಂದು ಕೋಟಿ ಪಶುಸಂಪತ್ತಿನವನನ್ನು 'ನಂದರಾಜ'ನೆಂದೂ ಕರೆಯುತ್ತಿದ್ದರೆಂದು 'ಗಾರ್ಗಿ ಸಂಹಿತೆ' ಹೇಳುತ್ತದೆ. ಹೀಗಾಗಿ ಪ್ರಾಚೀನ ರಾಜನಿಂದ ಹಿಡಿದು ಋಷಿಗಳವರೆಗೆ ಎಲ್ಲರೂ ಪಶುಪಾಲಕರೆ ಆಗಿದ್ದರು. ಸೀತೆಯ ತಂದೆ ಜನಕರಾಜ, ಶ್ರೀರಾಮನ ಪೂರ್ವಿಕ ದಿಲೀಪ ವಿದ್ಯಾರ್ಜನೆಗಾಗಿ ಬಂದ ಸತ್ಯಕಾಮ ಇವರೆಲ್ಲ ಪಶುಪಾಲಕರೇ ಆಗಿದ್ದರು".[೩]

ವಸಿಷ್ಠ ಋಷಿಯ ಆಶ್ರಮದಲ್ಲಿದ್ದ 'ಶಬಲೆ' ಎಂಬ ಹೆಸರಿನ ಆಕಳು ಬೇಡಿದ್ದನ್ನೆಲ್ಲ ಕೊಡುವ ಕಾಮಧೇನು ಆಗಿತ್ತು. ರಾಜನಾಗಿದ್ದ ವಿಶ್ವಾಮಿತ್ರ ವಸಿಷ್ಠ ಋಷಿಯ ಆಶ್ರಮಕ್ಕೆ ಹೋದಾಗ ಅವನಿಗೆ ಆಕಳ ಮೂಲಕ ದೊರೆತ ರಾಜವೈಭವ ಮತ್ತು ರಾಜಭೋಜನ ಕಂಡು ಇಂತಹ ವಿಶಿಷ್ಟವಾದ ಆಕಳು

ಅರಮನೆಯಲ್ಲಿರಬೇಕೆಂದು ವಸಿಷ್ಠ ಮುನಿಯನ್ನು ಕೇಳಿದಾಗ ಆ 'ಶಬಲೆ' ನಿನ್ನ ಜೊತೆಗೆ ಬಂದರೆ ಕರೆದುಕೊಂಡು ಹೋಗು ಎನ್ನುವನು. ರಾಜ ಹಾಗೂ ಅವನ ಸೈನ್ಯ ಆ ಆಕಳನ್ನು ತೆಗೆದುಕೊಂಡು ಹೋಗಲು ವಿಫಲರಾಗುತ್ತಾರೆ. ರಾಜನಿಗಿಂತ ಅಧಿಕವಾದ ಶಕ್ತಿ ಹೊಂದಿದ ಆ 'ಶಬಲೆ' ಎಂಬ ಆಕಳಲ್ಲಿರುವ ಶಕ್ತಿಯನ್ನು ಮೀರಿದ ಶಕ್ತಿ ಪಡೆಯಲು ರಾಜನಾದ ವಿಶ್ವಾಮಿತ್ರ ರಾಜ ಪದವಿ ಬಿಟ್ಟು ಸಾಧನೆಗೈದು ಮಹರ್ಷಿಯಾಗುತ್ತಾನೆ.

ಶ್ರೀ ಕೃಷ್ಣಪರಮಾತ್ಮನು ಗೋಪಾಲಕನಾಗಿದ್ದ. ಕೃಷ್ಣನ ಕಾಲಘಟ್ಟ ಹಾಗೂ ಅದಕ್ಕಿಂತ ಪೂರ್ವದಲ್ಲಿಯೂ ಪಶುಪಾಲನ ವೃತ್ತಿ ಅತ್ಯಂತ ಶ್ರೇಷ್ಠ ವೃತ್ತಿಯಾಗಿತ್ತು ಎಂಬುದು ತಿಳಿಯುತ್ತದೆ. "ಕೌರವ ಭೀಷ್ಮನನ್ನು ಅಜ್ಞಾತವಾಸದಲ್ಲಿದ್ದ ಪಾಂಡವರ ನೆಲೆ ಎಲ್ಲಿರಬಹುದೆಂದು ಕೇಳಿದಾಗ ಯಾವ ಪ್ರದೇಶದಲ್ಲಿ ದನಗಳ ಸಂಖ್ಯೆಯು ನಿರಂತರವಾಗಿ ಹೆಚ್ಚುತ್ತಾ ಹೋಗುವುದೋ, ಎಲ್ಲಿ ಹಿಂಡಿನಲ್ಲಿ ನೋಡುವುದಕ್ಕಾದರೂ ಒಂದು ಬಡಕಲು ದನ, ರೋಗದ ದನ ಕಾಣಿಸಿಕೊಳ್ಳುವುದಿಲ್ಲವೋ, ಹಾಲು, ತುಪ್ಪ, ಬೆಣ್ಣೆ, ಮೊಸರುಗಳ ಸಮೃದ್ಧಿ ಇರುತ್ತದೆಯೋ ಆ ಪ್ರದೇಶದಲ್ಲಿ ಧರ್ಮರಾಯ ಇದ್ದೇ ಇರುತ್ತಾನೆ" ಎಂದು ಹೇಳುವ ಮಾತುಗಳನ್ನು ಗಮನಿಸಿದಾಗ ಮತ್ತು ಧರ್ಮರಾಜನು ಲಕ್ಷಾಂತರ ಆಕಗಳುಗಳನ್ನು ಗೋಶಾಲೆಯಲ್ಲಿ ಸಾಕಿ ಅದರ ಅಧ್ಯಕ್ಷನು ಅವನೇ ಆಗಿದ್ದನು".[೪] ಎಂಬುದನ್ನು ಗಮನಿಸಿದಾಗ ಪಾಂಡವರು ಸಹ ಪಶುಪಾಲನೆಯನ್ನು ಪವಿತ್ರ ವೃತ್ತಿ ಎಂದು ತಿಳಿದುಕೊಂಡಿದ್ದರು. ಪಾಂಡವರು ಅಜ್ಞಾತವಾಸದಲ್ಲಿ ವಿರಾಟನಗರದಲ್ಲಿದ್ದಾಗ ಕೌರವರು ವಿರಾಟರಾಜನ ರಾಜ್ಯದ ಪಶುಸಂಪತ್ತನ್ನು ಅಪಹರಿಸಿದಾಗ ಬೃಹನ್ನಳೆ ರೂಪದಲ್ಲಿದ್ದ ಅರ್ಜುನ ಅವರೊಂದಿಗೆ ಯುದ್ಧ ಮಾಡಿ ಪಶುಸಂಪತ್ತನ್ನು ರಕ್ಷಿಸುತ್ತಾನೆ.

ಪ್ರಾಚೀನ ಕಾಲದಿಂದಲೂ ಪಶುಪಾಲನೆಯನ್ನು ಉತ್ತೇಜಿಸುವ ಸಲುವಾಗಿ ರಾಜಮಹಾರಾಜರು ತಮ್ಮ ರಾಜ್ಯದಲ್ಲಿ 'ಗೋಮಾಳ'ಗಳನ್ನು ಬಿಡುತ್ತಿದ್ದರು. ಅಲ್ಲಿ ನೀರಿನ ವ್ಯವಸ್ಥೆಗಾಗಿ ಕೆರೆಗಳನ್ನು ಕಟ್ಟಿಸುತ್ತಿದ್ದರು. ಎಲ್ಲ ದಾನಕ್ಕಿಂತಲೂ ಗೋದಾನ ಅತ್ಯಂತ ಶ್ರೇಷ್ಠವಾದುದೆಂಬ ಕಲ್ಪನೆ ಭಾರತೀಯ ಸಂಸ್ಕೃತಿಯಲ್ಲಿದೆ. ಅನೇಕ ರಾಜರು ಬ್ರಾಹ್ಮಣರಿಗೆ, ಕವಿಗಳಿಗೆ, ಸಾಹಿತಿಗಳಿಗೆ, ಶೂರ ಸೇನಾಧಿಪತಿಗಳಿಗೆ, ಸೈನಿಕರಿಗೆ, ಸನ್ಮಾನಿಸಿ ಅವರಿಗೆ ಗೋದಾನವನ್ನು ನೀಡುತ್ತಿದ್ದರು. ರಾಜರಿಂದ ಗೋದಾನ ಪಡೆದವರನ್ನು ಶ್ರೇಷ್ಠರ ಸಾಲಿನಲ್ಲಿಡ ಲಾಗುತ್ತಿತ್ತು. ಹೀಗಾಗಿ ಗೋವುಗಳನ್ನು ಕದಿಯುವವರ ಸಂಖ್ಯೆ ಆ ಕಾಲಕ್ಕೆ ಹೆಚ್ಚಾಗಿತ್ತು.

"ಪ್ರಾಚೀನ ಕಾಲದಲ್ಲಿ ಗೋವುಗಳನ್ನು ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿತ್ತು. ಕಳ್ಳರು ಬಂದು ಗೋವುಗಳನ್ನು ಕದ್ದಾಗ ಅವುಗಳನ್ನು ಕಾಯುತ್ತಿದ್ದ ಗೋವಳರು ಮತ್ತು ಇತರರು ಹುಯ್ಯಾಲೆನ್ನೆ ಭಿಸುತ್ತಿದ್ದರು (ತುರುಗೋಳಿಗೆ ಹುಯ್ಯಾಲು ಎಂಬ ಹೆಸರೂ ಇದೆ) (EL.VII. S.K. 73 C 1048. AD; E.C. IV. K. P.I.C. 1150 AD) ಊರಿನ ಜನಗಳು ಅವುಗಳನ್ನು ರಕ್ಷಿಸಲು ಮುಂದಾಗುತ್ತಿದ್ದರು 'ತರುಗೋಳ'ದಲ್ಲಿ ಹೋರಾಡಿ ಕಾರ್ಯವನ್ನು ಮೆರೆಯದವನನ್ನು ಜನ ಹೇಡಿ ಎಂದೇ ಭಾವಿಸುತ್ತಿದ್ದರು.

ಮೊದಲನೆಯದಾಗಿ ಗೋವು ಪೂಜ್ಯನೀಯವಾದುದು. ಎರಡನೆಯದಾಗಿ ಅದು ಕಳೆದುಕೊಳ್ಳಲಾಗದ ಆಸ್ತಿ, ಮೂರನೆಯದಾಗಿ ಅವುಗಳನ್ನು ಕಳೆದುಕೊಳ್ಳುವುದರಲ್ಲಿ ಊರಿನ ವ್ಯಕ್ತಿಯ ಮಾನ ಸನ್ಮಾನದ ಪ್ರಶ್ನೆಯೂ ಇದೆ".[೫] ಎಂದು ವಿವರಿಸುತ್ತಾ ಪಶುಸಂಪತ್ತನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡಿ ಪ್ರಾಣ ತ್ಯಾಗ ಮಾಡಿದವರ ನೆನಪಿಗಾಗಿ ರಾಜರು ವೀರಗಲ್ಲು ಹಾಗೂ ಶಾಸನಗಳನ್ನು ಕೆತ್ತಿಸಿರುವುದನ್ನು ಡಾ. ಚಿದಾನಂದಮೂರ್ತಿ ಅವರು ಉಲ್ಲೇಖಿಸಿದ್ದಾರೆ. ಗೋವುಗಳ ರಕ್ಷಣೆಯನ್ನು ಪುರುಷರು ಮಾತ್ರವಲ್ಲದೆ ಸ್ತ್ರೀಯರು ಮಾಡುತ್ತಿದ್ದರು ಎಂಬ ವಿಷಯ ಶಾಸನಗಳ ಮೂಲಕ ತಿಳಿಯುತ್ತದೆ 'ಕ್ರಿ.ಶ ೧೦೪೧ರಲ್ಲಿ ರಚನೆಯಾದ ವೀರಗಲ್ಲು ಇಲ್ಲಿ ಹೆಣ್ಣು ಮಗಳೊಬ್ಬಳು 'ಸರಕನೂರು' ಎಂಬ ಗ್ರಾಮದ ತುರುಗಳನ್ನು ಯಾರೋ ಅಪಹರಿಸಿದಾಗ, ಶತ್ರುಗಳನ್ನು ಅಟ್ಟಿಸಿಕೊಂಡು ಹೋದ ಮಾಚಗಾವುಂಡ ಎಂಬುವವನ ಮಗಳು 'ಲಕ್ಷ್ಮಮ್ಮ ಗಾವುಣ್ಡಿ' ತುರುಗಳನ್ನು ಹಿಂತಿರುಗಿಸಿ ಆ ಹೋರಾಟದಲ್ಲಿ ಸಾಯುತ್ತಾಳೆ. ತನ್ನ ಎದುರಿಗೆ ಆಗುತ್ತಿದ್ದ ಅನ್ಯಾಯವನ್ನು ಸಹಿಸದೆ ಹೆಣ್ಣು ಮಗಳೊಬ್ಬಳು ಹೋರಾಡಿರಬೇಕಾದರೆ, ಸ್ವಾಭಿಮಾನಿಗಳಾಗಿದ್ದ ಗಂಡಸರು ಸ್ವಯಂ ಪ್ರೇರಿತರಾಗಿ ಇಂಥ ಹೋರಾಟಗಳಲ್ಲಿ ಪಾಲುಗೊಂಡು ಹೊಡೆದಾಡಿ ನ್ಯಾಯವನ್ನು ದೊರಕಿಸುತ್ತಿದ್ದಿರಬೇಕು".[೬]

ಭಾರತೀಯ ಸಂಸ್ಕೃತಿಯಲ್ಲಿ ಪಶುಪಾಲನೆ ಅದರಲ್ಲೂ ಆಕಳು ಸಾಕುವ ವೃತ್ತಿ ಶ್ರೇಷ್ಠವಾದ ವೃತ್ತಿಯಾಗಿತ್ತು. 'ಆಕಳ ಹೊಟ್ಟೆಯಲ್ಲಿ ೬೬ ಸಾವಿರ ದೇವತೆಗಳಿರುತ್ತಾರೆ' ಅದಕ್ಕಾಗಿ ಒಂದು ಆಕಳನ್ನು ಪೂಜಿಸಿದರೆ ೬೬ ಸಾವಿರ ದೇವತೆಗಳನ್ನು ಪೂಜಿಸಿದಂತಾಗುತ್ತದೆ ಎಂಬ ಪರಿಕಲ್ಪನೆ ನಮ್ಮಲಿದೆ. ಇಂತಹ ಶ್ರೇಷ್ಠವಾದ ಪಶುಪಾಲನೆಯ ವೃತ್ತಿ ಕಾಡುಗೊಲ್ಲರಲ್ಲಿ ಹೇಗಿತ್ತು ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರೆಲ್ಲರೂ ಪಶುಪಾಲನೆಯಲ್ಲಿಯೇ ತೊಡಗಿಕೊಂಡವರು. ಇವರ ಆರ್ಥಿಕ ಚಟುವಟಿಕೆಗಳೆಲ್ಲವೂ ಪಶುಪಾಲನೆಯ ಮೂಲಕವೇ ಗುರುತಿಸಲ್ಪಡುತ್ತವೆ. ಈ ಸಾಂಸ್ಕೃತಿಕ ನಾಯಕರಿಗೆ ಪಶುಸಂಪತ್ತೆ ದೊಡ್ಡ ಆಸ್ತಿಯಾಗಿತ್ತು. ಪಶುಪಾಲನೆ, ರಕ್ಷಣೆ, ಪಾಲನೆ, ಪೋಷಣೆ ಇವುಗಳಿಗಾಗಿಯೆ ತಮ್ಮ ಜೀವನ ತ್ಯಾಗ ಮಾಡಿರುವುದನ್ನು ಕಾಣುತ್ತೇವೆ.

'ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು ಪಶುಪಾಲನೆಯಲ್ಲಿಯೆ ಸ್ವರ್ಗವನ್ನು ಕಂಡವರು. ಸಂಸಾರಿಗಳಾಗಿದ್ದರೂ ಎಂದೂ ಸಂಸಾರ ಸುಖಕ್ಕೆ ಅಂಟಿಕೊಂಡವರಲ್ಲ 'ಉಂಡೂ ಉಪವಾಸಿ, ಬಳಸಿ ಬ್ರಹ್ಮಚಾರಿ'ಯ ಕುಲಕ್ಕೆ ಸೇರಿದವರು. ಇಡೀ ತಮ್ಮ ಜೀವನವನ್ನೇ ಗೋವುಗಳ ಒಡನಾಟದಲ್ಲೇ ಕಳೆದ ಕರ್ಮಜೀವಿಗಳು, ಪಶುಪಾಲನೆಯಲ್ಲಿಯೇ ಸರ್ವಸುಖವನ್ನು ಕಂಡವರು. ತಾವು ನಂಬಿಕೊಂಡ ಮೌಲ್ಯಗಳಿಗೆ, ತಮ್ಮ ಜನಾಂಗದ ಸಂಸ್ಕೃತಿಗೆ ಎಂದೂ ಚ್ಯುತಿ ಬಾರದಂತೆ ನಡೆದುಕೊಂಡವರು. ತಮ್ಮ ಕುಲ ಶೀಲಗಳಿಗೆ ಭಂಗ ಒದಗಿದಾಗ ಬದುಕನ್ನು ತೃಣವೆಂದು ತಿಳಿದು ಜೀವ ಬಿಟ್ಟವರು. ಕಾಡುಗೊಲ್ಲರ ಪಶುಪಾಲಕ ಸಂಸ್ಕೃತಿಯಲ್ಲಿ ಎತ್ತಪ್ಪ ಜುಂಜಪ್ಪನ್ನು ಸಾಂಸ್ಕೃತಿಕ ವೀರರೆಂದೂ ಉಳಿದ ಅನೇಕ ಮಂದಿಯನ್ನು ಎತ್ತಪ್ಪ ಜುಂಜಪ್ಪನವರಂತೆ ಪಶುಪಾಲನೆ ಮಾಡಿಕೊಂಡಿದ್ದವರನ್ನು 'ಈರಗಾರರು' ಎಂದು ವೀರಾಸಾಬಿಹಳ್ಳಿ ಶಿವಣ್ಣ ಗುರುತಿಸಿದ್ದಾರೆ".[೭]

೩.೧.೧ ಎತ್ತಪ್ಪನ ಪಶುಪಾಲನೆ

ಕಾಡುಗೊಲ್ಲರ ಸಮುದಾಯದ ಮೂಲ ಪುರುಷನಾದ ಎತ್ತಪ್ಪನು ಪಶುಪಾಲನೆಯನ್ನೇ ತನ್ನ ಮೂಲ ವೃತ್ತಿಯಾಗಿಸಿಕೊಂಡವನು. ಇವನು ಪಶುಪಾಲನೆಗಾಗಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಿಂದ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನವರೆಗೂ ಸಂಚರಿಸುತ್ತಿದ್ದನೆಂದು ಮತ್ತು ಸದಾ ಅಡಿವಿಯಲ್ಲಿ ದನಗಳ ಜೊತೆಗೆ ವಾಸಿಸುತ್ತಿದ್ದನೆಂದೂ ತಿಳಿಯುತ್ತದೆ.

ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಎತ್ತಪ್ಪನ ಕಥೆಯನ್ನು ಗಮನಿಸಿದಾಗ ಅನೇಕ ವಿಚಾರಗಳು ಕಂಡುಬರುತ್ತವೆ. 'ಎತ್ತಪ್ಪನಿಗೆ ಪಶುಸಂಪತ್ತು ಹರೇರಾಯ ಮತ್ತು ಮರೇರಾಯರ ಮಕ್ಕಳಾದ ಅಂಬೇರಾಯ ತುಂಬೇರಾಯರಿಂದ ಬಂದಿರುವಂತಹದ್ದು. ಅಣ್ಣತಮ್ಮಂದಿರರಾದ ಅಂಬೇರಾಯ-ತುಂಬೇರಾಯರು ೭ ಗೂಡಿನ ದನಗಳನ್ನು ಹೊಂದಿದ್ದರೆಂದು ತಿಳಿಯುತ್ತದೆ. ಒಂದು ಗೂಡಿನಲ್ಲಿ ಎಷ್ಟು ದನಗಳು ಇರುತ್ತಿದ್ದವೆಂದು ಡಾ. ಗುರುಲಿಂಗಯ್ಯ ಅವರ ಮಾಹಿತಿ ಪಡೆದಾಗ 'ಸಾಮಾನ್ಯವಾಗಿ ಒಂದು ಗೂಡಿನಲ್ಲಿ ಕನಿಷ್ಟ ೧೦ ಗರಿಷ್ಟ ೨೦ ಕ್ಕೂ ಹೆಚ್ಚು ದನಗಳು ಇರುತ್ತಿದ್ದವೆಂದು' ತಿಳಿಸಿದರು. ಅಂದರೆ ಏಳು ಗೂಡಿನ ದನಗಳೆಂದರೆ ಸುಮಾರು ೧೫೦ ಕ್ಕೂ ಹೆಚ್ಚು ದನಗಳನ್ನು ಅವರು ಸಾಕುತ್ತಿದ್ದರು ಎಂಬುದು ತಿಳಿಯುತ್ತದೆ.

ಹಾಲು ಹಾಗೂ ಹಾಲಿನ ಇತರೆ ಉತ್ಪನ್ನಗಳು ಅತ್ಯಂತ ಶ್ರೇಷ್ಟ ಮತ್ತು ಅತ್ಯುತ್ತಮವಾದ ಆಹಾರ ಎಂಬುದು ಎಲ್ಲರಿಗೂ ತಿಳಿದ ವಿಷಯ. ಅಂಬೇರಾಯ ತುಂಬೇರಾಯರು ಪಶುಪಾಲನೆ ಮಾಡುತ್ತಿದ್ದ ಸಂದರ್ಭದಲ್ಲಿ ಬ್ರಾಹ್ಮಣರು ಹಾಲನ್ನು ಪಡೆದುಕೊಳ್ಳಲು ಪ್ರತಿನಿತ್ಯ ಅವರ ಮನೆಗೆ ಬರುತ್ತಿದ್ದರು. ಈ ಪಶುಪಾಲಕರಿಂದ ಬ್ರಾಹ್ಮಣರು ಸಾಕಷ್ಟು ಹಾಲು ಪಡೆದುಕೊಂಡು ಅದಕ್ಕೆ ಪ್ರತಿಯಾಗಿ ಏನನ್ನೂ ಕೊಡುತ್ತಿರಲಿಲ್ಲ. ಅಂಬೇರಾಯ ತುಂಬೇರಾಯರು ಮುದುಕರಾಗುವವರೆಗೆ ಹಾಲನ್ನು ಬ್ರಾಹ್ಮಣರಿಗೆ ಕೊಡುತ್ತಲೇ ಬಂದರು. ತೀರ ವಯಸ್ಸಾದ ಇವರು ಒಂದು ಸಲ ಬ್ರಾಹ್ಮಣರಿಗೆ ಹಾಲು ಕೊಡುವುದನ್ನು ನಿರಾಕರಿಸುತ್ತಾರೆ. ಆಗ ಸಿಟ್ಟಿಗೆದ್ದ ಬ್ರಾಹ್ಮಣರು ಅವರ ಮನೆಗಳ ಮೇಲೆ ಕೆಂಡದ ಮಳೆಯನ್ನು ಸುರಿಸಿ, ಪಶುಸಂಪತ್ತನ್ನು ನಾಶಮಾಡಲು ಪ್ರಯತ್ನಿಸುತ್ತಾರೆ. ಕೆಂಡದ ಮಳೆ ತಿಳಿಸಿದರು. ಬಂದಾಗ ಮರದ ಕೆಳಗೆ ಮತ್ತು ಗುಡಿಸಲೊಳಗೆ ಇದ್ದ ಬಿಳಿ ಹಸುಗಳು ಕಂದುಬಣ್ಣಕ್ಕೆ ತಿರುಗಿಕೊಳ್ಳುತ್ತವೆ. ಬಯಲು ಪ್ರದೇಶದಲ್ಲಿ ನಿಂತ ದನಕರುಗಳು ಸತ್ತುಹೋಗುತ್ತವೆ. ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲೆ ಬಲು ಪ್ರೀತಿ ಹೊಂದಿದ ಬ್ರಾಹ್ಮಣರಿಗೆ ಹಾಲು ದಕ್ಕದಾದಾಗ ಎಂತಹ ಹೀನಾಯ ಕೆಲಸಕ್ಕೆ ಕೈ ಹಾಕುತ್ತಿದ್ದರು ಎಂಬುದನ್ನು ಇಲ್ಲಿ ಗಮನಿಸ ಬೇಕಾಗುತ್ತದೆ. ಇವರು ಶ್ರಮವಿಲ್ಲದೆ ಪ್ರತಿಫಲ ಪಡೆಯಲು ಹವಣಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಅಂಬೇರಾಯ ತುಂಬೇರಾಯರು ಸತ್ತ ಕರುಗಳನ್ನು ನೆಲದಲ್ಲಿ ಹೂಳುತ್ತಾರೆ. ಆ ಕರುಗಳ ಕಂದುಗಳಿಂದ ಬಾಳೆ ಗಿಡಗಳು ಹುಟ್ಟಿ ಅದರಲ್ಲಿ ಬಾಳೆಹಣ್ಣುಗಳಾಗುತ್ತವೆ. ಬ್ರಾಹ್ಮಣರು ಆ ಹಣ್ಣುಗಳನ್ನು ಕಂಡು ಅವುಗಳನ್ನು ಕಿತ್ತು ತಿನ್ನುತ್ತಾರೆ. ಆಗ ಅಂಬೇರಾಯ ತುಂಬೇರಾಯರು ಆ ಬಾಳೆಹಣ್ಣುಗಳು ಸತ್ತ ಕರುಗಳ

[illegible]

ಹೊಟ್ಟೆಯಿಂದ ಹುಟ್ಟಿವೆ. ಅವುಗಳನ್ನು ನೀವು ತಿಂದು ನಿಮ್ಮ ಜಾತಿಯನ್ನು ಕಡೆಸಿದಿರಿ. ಈ ವಿಷಯವನ್ನು ಉಳಿದೆಲ್ಲ ಬ್ರಾಹ್ಮಣರಿಗೆ ತಿಳಿಸುತ್ತೇವೆ ಎಂದಾಗ ಅಂಬೇರಾಯ ತುಂಬೇರಾಯರನ್ನು ಕಾಡುತ್ತಿದ್ದ ಬ್ರಾಹ್ಮಣರು ಅಂಜಿ ಅಲ್ಲಿಂದ ಇವರ ತಂಟೆಗೆ ಬರುವುದಿಲ್ಲ. ಎತ್ತಪ್ಪನ ಈ ಕಥೆಯಲ್ಲಿಯ ಸನ್ನಿವೇಶವನ್ನು ಹಾಗೂ ಕಾಡುಗೊಲ್ಲರು ಬ್ರಾಹ್ಮಣರನ್ನು ಅಸ್ಪೃಶ್ಯರಂತೆ ಕಾಣುವುದನ್ನು ಗಮನಿಸಿದಾಗ ಎತ್ತಪ್ಪನ ಕಾಲಕ್ಕೆ ಬ್ರಾಹ್ಮಣರ ಹಾಗೂ ಕಾಡುಗೊಲ್ಲರ ನಡುವೆ ಸಂಘರ್ಷ ಏರ್ಪಟ್ಟಿರುವುದೇ ಇದಕ್ಕೆ ಕಾಣವಾಗಿರಬಹುದಾಗಿದೆ.

ಪಶುಪಾಲನೆಯನ್ನು ಅತ್ಯಂತ ಪವಿತ್ರ ವೃತ್ತಿ ಎಂದು ನಂಬಿದ್ದ ಅಂಬೇರಾಯ, ತುಂಬೇರಾಯನಿಗೆ ತಮ್ಮ ಪಶುಸಂಪತ್ತನ್ನು ಕಾಪಾಡುವ ಸಮರ್ಥ ವ್ಯಕ್ತಿ ಸಿಗಲಿಲ್ಲವೆಂದು ಗೌರಸಂದ್ರಮಾರಕ್ಕನನ್ನು ಸ್ಮರಿಸಿ ಅವಳು ಬರದಿದ್ದಕ್ಕೆ ನೊಂದು ತಮ್ಮ ಪ್ರಾಣ ತ್ಯಾಗಕ್ಕೆ ಅವರು ಸಿದ್ಧರಾಗುತ್ತಾರೆ. ಅಂದರೆ ಕಾಡುಗೊಲ್ಲರು, ತಮ್ಮ ಪಶುಸಂಪತ್ತನ್ನು ರಕ್ಷಿಸಿಕೊಳ್ಳುವುದಕ್ಕೆ ಪ್ರಾಣ ತ್ಯಾಗಕ್ಕೂ ಸಿದ್ಧರಿದ್ದರೂ ಎಂಬುದು ತಿಳಿಯುತ್ತದೆ.

ಕಾಡುಗೊಲ್ಲರ ಸಾಂಸ್ಕೃತಿಕ ವೀರ ಎತ್ತಪ್ಪನು ಹುತ್ತದಲ್ಲಿರುತ್ತಾನೆ. ಅವನಿಗೆ ಪ್ರತಿನಿತ್ಯ ಒಂದು ಆಕಳು ಬಂದು ಹಾಲು ಕುಡಿಸಿ ಹೋಗುತ್ತಿರುತ್ತದೆ. ಅದನ್ನು ಅಂಬೆರಾಯ ತುಂಬೆರಾಯ ಗೌರಸಂದ್ರಮಾರಕ್ಕನ ಮೂಲಕ ಕಾಣುತ್ತಾರೆ ಮತ್ತು ಅಂಬೆರಾಯ ತುಂಬೆರಾಯರ ಪಶುಸಂಪತ್ತನ್ನು ಹುತ್ತದಲ್ಲಿರುವ ಆ ಬಾಲಕ ರಕ್ಷಿಸುತ್ತಾನೆ ಎಂದು ಮಾರಕ್ಕ ಹೇಳಿದ ಮೇಲೆ ಅವರು ಪ್ರಾಣಬಿಡುತ್ತಾರೆ.

ಹುತ್ತದಿಂದ ಹೊರ ಬಂದ ಎತ್ತಪ್ಪ ಅಂಬೆರಾಯ ತುಂಬೆರಾಯ ಬಿಟ್ಟುಹೋದ ಕಲ್ಲಿ, ಕವೆಗೋಲು, ಸುಕ್ಕೆ, ಸುರನಾರಿ ಹಾಗೂ ಮರಬಿಲ್ಲು ಧರಿಸಿಕೊಂಡು ಆ ಏಳುಗೂಡಿನ ದನಗಳನ್ನು ಹೊಡೆದುಕೊಂಡು ಹೋಗುತ್ತಿದ್ದಾಗ ದನಗಳು ಓಡಹತ್ತಿದವು. ಚಿಕ್ಕಬಾಲಕ ಎತ್ತಪ್ಪನಿಗೆ ಪಶುಪಾಲನೆಯ ವೃತ್ತಿ ತಿಳಿದಿರಲಿಲ್ಲ. ದನಕರುಗಳು ಓಡುತ್ತಿರುವುದನ್ನು ಕಂಡ ಎತ್ತಪ್ಪ ಉತ್ತೇರಿ ಗುಡ್ಡವನ್ನು ಹತ್ತಿ ತನ್ನ ಮಾರುದ್ದದ ತಲೆಗೂದಲನ್ನು ಕಟ್ಟಿಕೊಂಡು ಕೂಗು ಹಾಕುತ್ತಾನೆ. ಎಲ್ಲ ದನಗಳು ಒಂದು ಕಡೆ ನಿಲ್ಲುತ್ತವೆ. ಹೀಗೆ ಎತ್ತಪ್ಪ ತನ್ನ ಏಳುಗೂಡಿನ ಪಶುಸಂಪತ್ತನ್ನು ರಕ್ಷಣೆ ಮಾಡುತ್ತ ಅವುಗಳ ಹಾಲು ಹಿಂಡಿ ಜೀವನ ಸಾಗಿಸುತ್ತಿದ್ದ.

ಹಾಲುಕುರಬರು ಹಂಡೆಕುರುಬರು ಸಾವಿರ ಎತ್ತುಗಳ ಮೇಲೆ ಸಾಮಾನುಗಳನ್ನು ಹೇರಿಕೊಂಡು ವ್ಯಾಪಾರಕ್ಕೆ ಹೋಗುತ್ತಿದ್ದರು. ರಾತ್ರಿ ಕತ್ತಲಾದದ್ದರಿಂದ ಎತ್ತಪ್ಪನ ದನಗಳ ಗೂಡಿನ ಹತ್ತಿರ ಬಂದು ಅಲ್ಲಿಯೆ ರಾತ್ರಿ ಕಳೆಯಲು ಯೋಚಿಸಿದರು. ಎತ್ತಪ್ಪ ತನ್ನ ಪರಿಚಯ ಮಾಡಿಕೊಂಡು ನಾನು ಮಾರನವರ ಗೊಲ್ಲ ಊಟ ಮಾಡಬನ್ನಿ ಎಂದು ಎಬ್ಬಿಸಿದ. ಅವರು ಎತ್ತಪ್ಪ ಮಾಡಿದ ಆಹಾರ ನಮಗೆ ಸಾಕಾಗುವುದಿಲ್ಲ ಎಂದು ತಿಳಿದು ಊಟಕ್ಕೆ ನಿರಾಕರಿಸುತ್ತಿದ್ದರು. ಊಟಕ್ಕೆ ಬಾರದಿದ್ದರೆ ಸುಕ್ಕೆ ಸುರನಾರಿ ಮರಬಿಲ್ಲಿನಿಂದ ಬಾಣ ಪ್ರಯೋಗಿಸಿ ಸಾಯಿಸುವುದಾಗಿ ತಿಳಿಸಿದಾಗ ಅವರು ಊಟಕ್ಕೆ ಬರುತ್ತಾರೆ. ಅವರೆಲ್ಲರಿಗೂ ಊಟಕ್ಕೆ ಹಾಕಿದ ಮೇಲೂ ಅವನು ಮಾಡಿದ ಆಹಾರ ಮೊದಲಿನಷ್ಟೆ ಉಳಿದಿರುವುದನ್ನು ಕಂಡು ಹಾಲುಕುರುಬರು ಮತ್ತು ಹಂಡೆಕುರುಬರು ಅವನೊಬ್ಬ ಪವಾಡ ಪುರುಷ ಎಂದು ತಿಳಿದುಕೊಳ್ಳುತ್ತಾರೆ. ಈ ಕುರುಬರು ಎತ್ತಪ್ಪನ

ಗೂಡಿನಲ್ಲಿದ್ದ ಒಂದು ಹೋರಿಯನ್ನು ತಮಗೆ ಕೊಡಲು ಕೇಳಿದಾಗ ಎತ್ತಪ್ಪ ಅವರಿಗೆ ಆ ಹೋರಿಯನ್ನು ಕೊಡುತ್ತಾನೆ. ದಪ್ಪದಾದ ಹಗ್ಗದಿಂದ ಹೋರಿಗೆ ಮೂಗುದಾರ ಹಾಕಿ ಅದನ್ನು ಕಟ್ಟಿಕೊಂಡು ತೆಗೆದುಕೊಂಡು ತಾವರಕೆರೆಗೆ ಹೋಗುತ್ತಿದ್ದಾಗ ಎತ್ತಪ್ಪನ ವಾದ್ಯದ ಶಬ್ದವನ್ನು ಕೇಳಿದ ಆ ಹೋರಿ ಹಗ್ಗವನ್ನು ಹರಿದುಕೊಂಡು ಎತ್ತಪ್ಪನ ಗೂಡಿಗೆ ಓಡಿಬರುತ್ತದೆ. ಕುರುಬರು ಆ ಹೋರಿಯನ್ನು ತೆಗೆದುಕೊಂಡು ಹೋಗಲು ಮತ್ತೆ ಬಂದಾಗ ಎತ್ತಪ್ಪ ನನಗೆ ಹೊನ್ನಬಾಳೆಗೌಡನ ಮಗಳಾದ ಗೆಜ್ಜೆಕಾಲು ಮಲ್ಲಮ್ಮನನ್ನು ಮದುವೆ ಮಾಡಿಸಿ ಆ ಹೋರಿಯನ್ನು ತೆಗೆದುಕೊಂಡು ಹೋಗಬೇಕು ಎಂದಾಗ, ಅವರು ಕಾಡುಗೊಲ್ಲರ ವೇಷ ಹಾಕಿಕೊಂಡು ಹೊನ್ನಬಾಳೆಗೌಡನ ಮನೆಗೆ ಹೋಗಿ ಎತ್ತಪ್ಪನ ವಿಷಯವನ್ನೆಲ್ಲ ಅವನಿಗೆ ತಿಳಿಸಿ ಮಲ್ಲಮ್ಮ ಎತ್ತಪ್ಪನಿಗೆ ಮದುವೆ ಮಾಡಿಸಿ ಹೋರಿಯನ್ನು ತೆಗೆದುಕೊಂಡು ಹೋಗುತ್ತಾರೆ. ಎತ್ತಪ್ಪನು ತನ್ನ ಮದುವೆಯಲ್ಲಿ ನಮಗೆ ಸರಿಯಾಗಿ ಉಪಚಾರ ಮಾಡಿಲ್ಲವೆಂದು ಸಿಟ್ಟಿಗೆದ್ದ ಬೇವಿನಹಳ್ಳಿ ಕರಿಯಮ್ಮ, ಸೋರೆಕುಂಟೆ ಕರಿಯಮ್ಮ ಮತ್ತು ಒಡ್ಡಿಗೆರೆ ನಾಗಮ್ಮ ಮೂವರು ಎತ್ತಪ್ಪನ ನಾಶಕ್ಕೆ ಮುಂದಾಗುತ್ತಾರೆ. ಇದರಿಂದ ಎತ್ತಪ್ಪನ ರಾಮಲಕ್ಷ್ಮಣ ಎಂಬ ಕಣಜಗಳು ಖಾಲಿಯಾಗಿ ರಾಮಸಾಲೆ ಹೊನ್ನು ಇಕ್ಕೇರಿ ವರಹ ಮಾಯವಾಗಿ ಬಡತನ ಬರುತ್ತದೆ. ಇದರಿಂದ ಎತ್ತಪ್ಪನ ದನಗಳು ಸಾಯತೊಡಗಿದವು. ಮಲ್ಲಮ್ಮ ಬಡತನದಿಂದ ಕೂಲಿ ಕೆಲಸಕ್ಕೆ ಹೋಗುತ್ತಾಳೆ. ಆ ಕಾಲಕ್ಕೆ ಹಂಡೆ ಕುರುಬರು ಹಾಲುಕುರುಬರು ಎತ್ತಪ್ಪನಿದ್ದ ಸ್ಥಳಕ್ಕೆ ಬರುತ್ತಾರೆ. ಎತ್ತಪ್ಪನ ಸ್ಥಿತಿ ಕಂಡು ಮರುಗಿ ತಮ್ಮ ಬಳಿ ಇದ್ದ ಹಸುವನ್ನು ಮತ್ತು ಹಾಕಿದ ಕರು ಬೇಳೆಕಾಳುಗಳನ್ನು ಅವರಿಗೆ ಕೊಟ್ಟುಹೋಗುತ್ತಾರೆ. ಹಾಲು ಹಿಂಡಲು ಮಲ್ಲಮ್ಮ ಹಸುವಿನ ಹತ್ತಿರ ಹೋದಾಗ ಹಸು ಮಾಯವಾಗಿರುತ್ತದೆ. ಅಡುಗೆ ಮನೆಯಲ್ಲಿದ್ದ ಧಾನ್ಯಗಳೂ ಮಾಯವಾಗಿರುತ್ತವೆ. ಎತ್ತಪ್ಪ ಸಾಯುವ ಸ್ಥಿತಿಗೆ ಬಂದಾಗ ಅವರು ಗೌರಸಂದ್ರ ಮಾರಕ್ಕನನ್ನು ಸ್ಮರಿಸಿಕೊಳ್ಳುತ್ತಾರೆ. ಗೌರವಸಂದ್ರ ಮಾರಕ್ಕ ಎತ್ತಪ್ಪನ ಮನೆಗೆ ಬಂದು ಆ ಮನೆಯಲ್ಲಿದ್ದ ಮೂವರು ಮಾರಿಯರನ್ನು ಓಡಿಸುತ್ತಾಳೆ. ಆಗ ಎತ್ತಪ್ಪನ ಬಡತನವೆಲ್ಲ ಮಾಯವಾಗಿ ಮೊದಲಿನ ಸ್ಥಿತಿಗೆ ಬರುತ್ತಾನೆ.

ಗೆಜ್ಜೆಕಾಲು ಮಲ್ಲಮ್ಮನಿಗೆ ಮಕ್ಕಳಾಗದಿದ್ದಾಗ ಅವಳ ತಮ್ಮನಾದ ಹುಲುಗಾನಿಯನ್ನು ಎತ್ತಪ್ಪ ಮನೆಗೆ ಕರೆತಂದು ಅವನಿಗೆ ಹದಿನಾರು ವರ್ಷಗಳಾದ ಮೇಲೆ ಏಳು ಗೂಡಿನ ದನಗಳನ್ನು ನೋಡಿಕೊಳ್ಳುವ ಜವಾಬ್ದಾರಿ ನೀಡುತ್ತಾನೆ ಮತ್ತು ಎತ್ತಪ್ಪನ ಹತ್ತಿರವಿದ್ದ ಚಿನ್ನದ ವಸ್ತ್ರ, ಚಿನ್ನದ ಸಿಳ್ಳಂಗೋವಿ ಮತ್ತು ಚಿನ್ನದ ಸುಣ್ಣದ ಕಾಯಿ ಡಬ್ಬಿಯನ್ನು ಅವನಿಗೆ ಕೊಡುತ್ತಾನೆ. ಹುಲುಗಾನಿಯು ಎತ್ತಪ್ಪನ ಪಶುಸಂಪತ್ತನ್ನು ಅತ್ಯಂತ ನಿಷ್ಠೆ ಪ್ರಾಮಾಣಿಕತೆಯಿಂದ ಕಾಪಾಡುತ್ತಿರುತ್ತಾನೆ.

ಕುದುರೆ ಕುಂಟೆ ಬೇಡ ಸಮುದಾಯದ ನಾಯಕ ಸಾನಿಯರು ಹುಲುಗಾನಿಯನ್ನು ವಶಪಡಿಸಿಕೊಂಡು ಅವನ ಜೊತೆ ಸಂಸಾರ ಮಾಡಬೇಕೆಂದು ಯೋಚಿಸಿ ಅವನಲ್ಲಿದ್ದ ಚಿನ್ನದ ವಸ್ತುಗಳನ್ನು ಅಪಹರಿಸಿ ಅವನ ಬೆನ್ನು ಹತ್ತುತ್ತಾರೆ. ಒಂದು ದಿನ ಚಿನ್ನದ ಸುಣ್ಣದ ಡಬ್ಬಿಯನ್ನು ಇಸಿದುಕೊಂಡು ಮನೆಗೆ ತೆಗೆದುಕೊಂಡು ಹೋಗಿ ಕೊನೆಗೆ ಹುಲುಗಾನಿಯನ್ನು ವಶಪಡಿಸಿಕೊಳ್ಳುತ್ತಾರೆ ಮತ್ತು ಅವನೊಂದಿಗೆ ಸುಖವನ್ನು

ಅನುಭವಿಸುತ್ತಾರೆ. ನಾಯಕ ಸಾನಿಯರು ನಕಲಿ ಚಿನ್ನದ ವಸ್ತ್ರ ಬೆಳ್ಳಂಗೋವಿ ಮತ್ತು ಸುಣ್ಣದ ಡಬ್ಬಿಯನ್ನು ಹುಲುಗಾನಿಗೆ ಕೊಟ್ಟು ಕಳಿಸುತ್ತಾರೆ. ಆ ವಸ್ತುಗಳು ನಕಲಿಯಾಗಿರುವುದನ್ನು ಕಂಡ ಹುಲುಗಾನಿ, ಚಿನ್ನದ ವಸ್ತುಗಳನ್ನು ಅವರಿಂದ ಪಡೆಯಬೇಕೆಂದು ಮತ್ತೆ ನಾಯಕ ಸಾನಿಯರ ಮನೆಗೆ ಹೋಗುತ್ತಾನೆ. ಈ ವಿಷಯ ಎತ್ತಪ್ಪನಿಗೆ ಮಲ್ಲಮ್ಮನಿಗೆ ತಿಳಿಯುತ್ತದೆ. ಎತ್ತಪ್ಪ ಹುಲುಗಾನಿಯನ್ನು ಹೊಡೆದು ಅವರ ಸಂಬಂಧವನ್ನು ಬಿಡುವಂತೆ ಬುದ್ಧಿವಾದ ಹೇಳುತ್ತಾನೆ. ಹುಲುಗಾನಿ ನಾಯಕ ಸಾನಿಯರ ಸಹವಾಸ ಬಿಡುತ್ತಾನೆ. ಆದರೆ ನಾಯಕ ಸಾನಿಯರು ಎತ್ತಪ್ಪ ಹುಲುಸಾಗಿ ಹಾಗೂ ಅವರ ಪಶುಸಂಪತ್ತನ್ನು ನಾಶಮಾಡಲು ನಿರ್ಧರಿಸಿ ಯೋಜನೆಯೊಂದನ್ನು ಸಿದ್ಧಪಡಿಸಿ ಮ್ಯಾಸಬೇಡರಿಗೆ ತಿಳಿಸುತ್ತಾರೆ. ಮ್ಯಾಸಬೇಡರು ತಮ್ಮ ಯೋಜನೆಯನ್ನು ಸಫಲಗೊಳಿಸುವ ಸಲುವಾಗಿ ಎತ್ತಪ್ಪನ ಜೊತೆ ಸ್ನೇಹ ಬೆಳೆಸಿ ಅವನ ದನಗಳ ಜೊತೆಗೆ ತಮ್ಮ ದನಗಳನ್ನು ಮೇಯಿಸುತ್ತಿರುತ್ತಾರೆ. ನಾಯಕ ಸಾನಿಯರು ಅವಕಾಶ ಮಾಡಿಕೊಂಡು ಎತ್ತಪ್ಪನ ದನಗಳ ಮೇಲೆ ಹಸಿರು ಮದ್ದನ್ನು ಹಾಕುತ್ತಾರೆ. ಅಂದಿನಿಂದ ಎತ್ತಪ್ಪನ ದನಗಳು ಅನಾರೋಗ್ಯದಿಂದ ಬಳಲತೊಡಗುತ್ತವೆ. ನಂತರ ಮ್ಯಾಸಬೇಡರು ತಮ್ಮ ದನಗಳನ್ನು ಪ್ರತ್ಯೇಕವಾಗಿ ಮೇಯಿಸ ತೊಡಗುತ್ತಾರೆ. ಒಂದು ದಿನ ಮ್ಯಾಸಬೇಡರು, ಎತ್ತಪ್ಪನ ಎತ್ತುಗಳ ಜೊತೆ ಸ್ಪರ್ಧೆ ಮಾಡುವುದುಕ್ಕಾಗಿ ಕೇಳುತ್ತಾರೆ. ಅದಕ್ಕೆ ಒಪ್ಪುವುದಿಲ್ಲ ಆದರೂ ಮ್ಯಾಸಬೇಡರು ಬಲವಂತದಿಂದ ಎತ್ತುಗಳ ಸ್ಪರ್ಧೆಗೆ ಒಪ್ಪಿಸುತ್ತಾರೆ. ಸ್ಪರ್ಧೆಯಲ್ಲಿ ಎತ್ತಪ್ಪನ ದನಗಳು ಗೆದ್ದರೆ ಮ್ಯಾಸಬೇಡರು ಮತ್ತು ಅವರ ದನಗಳು ಎತ್ತಪ್ಪನ ವಶವಾಗುತ್ತವೆ. ಒಂದು ವೇಳೆ ಮ್ಯಾಸಬೇಡರು ಎತ್ತುಗಳು ಗೆದ್ದರೆ ಎತ್ತಪ್ಪ, ಹುಲುಗಾನಿ ಮತ್ತು ಅವನ ಪಶುಸಂಪತ್ತು ಅವರ ವಶವಾಗಬೇಕು ಎಂಬ ನಿರ್ಣಯದಲ್ಲಿ ಸ್ಪರ್ಧೆ ನಡೆಯುತ್ತದೆ. ಎತ್ತಪ್ಪನ ದನಗಳು ಅನಾರೋಗ್ಯದಿಂದ ಬಳಲುತ್ತಿದ್ದುದರಿಂದ ಅವು ಸೋಲುತ್ತವೆ ಎಂಬ ಚಿಂತೆಯಲ್ಲೇ ಮಲಗಿಕೊಂಡಾಗ ಬೆಳಗಿನ ಜಾವ ಅವನಿಗೆ ಕನಸು ಬೀಳುತ್ತದೆ. ಎತ್ತಪ್ಪನದೇ ಆದ ಹಸುವೊಂದು ಬೇರೊಂದು ಸ್ಥಳದಲ್ಲಿ ಬೆಳೆದು ದೊಡ್ಡದಾಗಿತ್ತು. ಅದು ಕನಸಿನಲ್ಲಿ ಬಂದು ಆ ಸ್ಪರ್ಧೆಯಲ್ಲಿ ಗೆಲುವು ತಂದು ಕೊಡುವುದಾಗಿ ತಿಳಿಸಿತು. ಅದರಂತೆ ಎತ್ತಪ್ಪ ಆ ಹಸು ಸೀಳುತಲೆ ಚಿಕ್ಕರಂಭೆಯನ್ನು ಕರೆತಂದು ಸ್ಪರ್ಧೆಗೆ ನಿಲ್ಲಿಸುತ್ತಾನೆ. ಮ್ಯಾಸಬೇಡರ ದನಗಳು ಜೂಜಿನ ಮರವನ್ನು ಹಾರಲು ಸಾಧ್ಯವಾಗದೇ ಹಿಂತಿರುಗುತ್ತವೆ. ಎತ್ತಪ್ಪನ ದನಗಳ ಪಾಳೆ ಬಂದಾಗ ಅವನ ದನಗಳೂ ಮರವನ್ನು ಹಾರಲು ವಿಫಲವಾಗುತ್ತವೆ. ಕೊನೆಗೆ ಎತ್ತಪ್ಪನ ಹಸು ಸೀಳುತಲೆ ಚಿಕ್ಕರಂಭೆ ಮರವನ್ನು ಹಾರಿ ಕೆಳಕ್ಕೆ ಬೀಳುತ್ತದೆ. ಗರ್ಭಧರಿಸಿದ ಆ ಹಸು ಬಿದ್ದಾಗ ಅದರ ಹೊಟ್ಟೆಯಿಂದ ಕರು ಒಂದು ಸ್ಥಳದಲ್ಲಿ ಬಿದ್ದು ಎರಡೂ ಸತ್ತುಹೋಗುತ್ತವೆ. ಎತ್ತಪ್ಪ ಗೆದ್ದ ಎಂದು ತೀರ್ಪುಗಾರರು ಹೇಳಿದಾಗ ಅದನ್ನು ಮ್ಯಾಸಬೇಡರು ಒಪ್ಪುವುದಿಲ್ಲ. ಎತ್ತಪ್ಪನ ಹಸು ಬದುಕಿದ್ದರೆ ಅವನು ಗೆಲ್ಲುತ್ತಿದ್ದ ಈಗ ಹಸು ಸತ್ತಿದೆ ಎಂದರೆ ಅವನೂ ಸೋತ ಎಂದು ವಾದಿಸುತ್ತಾರೆ. ಆ ಹೊತ್ತಿಗೆ ಸೀಳುತಲೆ ಚಿಕ್ಕರಂಭೆ ಎದ್ದು ಕೂಗುತ್ತದೆ. ಅದರ ಕರು ಓಡಿ ಬಂದು ಹಾಲು ಕುಡಿಯುತ್ತದೆ. ಅದನ್ನು ಕಂಡು ತೀರ್ಪುಗಾರರು ಎತ್ತಪ್ಪ ಜೂಜಿನಲ್ಲಿ ಗೆದ್ದ ಎಂದು ತೀರ್ಮಾನಿಸುತ್ತಾರೆ. ನಂತರ ಹಸು ಮತ್ತು ಕರು ಸತ್ತು ಹೋಗುತ್ತವೆ.

[illegible]

ಬೇಡರು ಎತ್ತಪ್ಪನ ಕಾಲಕ್ಕೆ ಪಶುಪಾಲಕರಾಗಿದ್ದರು ಮತ್ತು ಇವರು ಕಾಡುಗೊಲ್ಲರ ಪಶುಸಂಪತ್ತನ್ನು ಕೊಳ್ಳೆ ಹೊಡೆಯಲು ಅನೇಕ ಯೋಚನೆಗಳನ್ನು ಮಾಡುತ್ತಿದ್ದರು ಎಂಬುದು ತಿಳಿಯುತ್ತದೆ. ಪಶುಗಳನ್ನು ಸ್ಪರ್ಧೆಗೆ ತಂದು ಅವುಗಳನ್ನು ಪಡೆಯುವ ಹುನ್ನಾರು ಸಹ ನಡೆಯುತ್ತಿತ್ತು ಎಂಬುದನ್ನು ಇಲ್ಲಿ ಗಮನಿಸ ಬಹುದು.

ಎತ್ತಪ್ಪ ತನ್ನ ದನಗಳನ್ನು ಮೇಯಿಸುವುದಕ್ಕಾಗಿ ಸಂಡೂರಿನ ಬೊಮ್ಮನ ಕಾವಲಿಗೆ ಹೋಗಲು ಸಿದ್ಧನಾಗುತ್ತಾನೆ. ಎತ್ತಪ್ಪನಿಗೆ ಮುಂದೆ ಬರುವ ಆಪತ್ತನ್ನು ಕಂಡುಕೊಂಡ ಅವನ ಹೆಂಡತಿ ಮಲ್ಲಮ್ಮ ಆ ಕಾವಲಿಗೆ ಹೋಗಬಾರದೆಂದು ಅಲ್ಲಿ ಅಪಾಯವಿದೆ ಎಂದು ಹೇಳುತ್ತಾಳೆ. ಅದನ್ನು ಲೆಕ್ಕಿಸದೆ ಎತ್ತಪ್ಪ ದನಗಳನ್ನು ತೆಗೆದುಕೊಂಡು ಸಂಡೂರಿಗೆ ಹೋಗುತ್ತಾನೆ. ಎತ್ತಪ್ಪ ಯಾವಾಗಲೂ ಮುಂದಿಟ್ಟ ಕಾಲನ್ನು ಹಿಂದೆ ತೆಗೆಯುವವನಲ್ಲವಾದದ್ದರಿಂದ ಅಲ್ಲಿಗೆ ಹೋಗುತ್ತಾನೆ. ದಾರಿಯಲ್ಲಿ ನಾಯಕ ಜಾತಿಗೆ ಸೇರಿದ ವೇಶ್ಯೆಯೊಬ್ಬಳು ಎತ್ತಪ್ಪನನ್ನು ಕಂಡು ಮೋಹಿತಳಾಗಿ ಅವನನ್ನು ವಶಪಡಿಸಿಕೊಳ್ಳಲು ಬಹಳ ಪ್ರಯತ್ನ ಮಾಡಿ ಸೋಲುತ್ತಾಳೆ. ಕೊನೆಗೆ ಎತ್ತಪ್ಪನಿಗೆ ಸಂಡೂರು ಬೊಮ್ಮನಿಂದ ನಿನ್ನತಲೆ ತಗೆಸಿ ಆ ರುಂಡವನ್ನು ನನ್ನ ಬಚ್ಚಲಲ್ಲಿಟ್ಟು ಸ್ನಾನ ಮಾಡಿ ಆ ನೀರನ್ನು ನಿನ್ನ ಮೇಲೆ ಬೀಳವಂತೆ ಮಾಡಿ ನಿನ್ನ ಜಾತಿಯನ್ನು ಕೆಡಿಸುತ್ತೇನೆಂದು ಶಪತಮಾಡಿ ಹೋಗಿ, ಸಂಡೂರು ಬೊಮ್ಮಯ್ಯನಿಗೆ ಎಲ್ಲವನ್ನು ತಿಳಿಸುತ್ತಾಳೆ. ಸಂಡೂರು ಬೊಮ್ಮಯ್ಯ ಎತ್ತಪ್ಪನಿಗೆ ಪತ್ರ ಬರೆದು 'ನೀನು ಗಂಡಸಾಗಿದ್ದರೆ ನನ್ನ ಕಾವಲಿಗೆ ದನಗಳನ್ನು ಬಿಡು ಇಲ್ಲದಿದ್ದರೆ ಬಳೆ ತೊಟ್ಟುಕೊ' ಎಂದು ತಿಳಿಸುತ್ತಾನೆ. ಎತ್ತಪ್ಪ ಹಾಗೂ ಸಂಡೂರು ಬೊಮ್ಮಯ್ಯನ ನಡುವೆ ಕದನ ಪ್ರಾರಂಭವಾಗುತ್ತದೆ. ಎತ್ತಪ್ಪ ತನ್ನ ಜೀವ ಎಲ್ಲಿದೆ ಎಂಬುದರ ಬಗ್ಗೆ ಸತ್ಯ ನುಡಿಯುತ್ತಾನೆ. ಆಗ ಬೊಮ್ಮ ಅವನ ಪ್ರಾಣ ತೆಗೆದು ತಲೆ ಕಡೆದುಕೊಂಡು ವೇಶ್ಯೆಗುಡ್ಡದ ಬೋರಿಗೆ ಕೊಡುತ್ತಾನೆ. ವೇಶ್ಯೆ ಹೇಳಿದಂತೆ ರುಂಡವನ್ನು ಬಚ್ಚಲಲ್ಲಿಟ್ಟು ಸ್ನಾನ ಮಾಡಬೇಕೆಂದು ಯೋಚಿಸುತ್ತಿದ್ದಾಗ ಹುಲುಗಾನಿಗೆ ವಿಷಯ ತಿಳಿದು ಗುಂಗೆಹುಳುವಿನ ರೂಪದಲ್ಲಿ ಬಂದು ಎತ್ತಪ್ಪನ ರುಂಡವನ್ನು ತೆಗೆದುಕೊಂಡು ಮುಂಡ ಇದ್ದ ಸ್ಥಳಕ್ಕೆ ಬರುತ್ತಾನೆ. ರುಂಡವನ್ನು ಮುಂಡದ ಮೇಲಿಟ್ಟು ಮತ್ತೆ ಅದಕ್ಕೆ ಜೀವ ತರಿಸುತ್ತಾನೆ. ಎತ್ತಪ್ಪನ ವ್ರತ ಕೆಡುವುದಿಲ್ಲ. ಆದರೂ ಎತ್ತಪ್ಪ ಬದುಕಲು ಇಷ್ಟಪಡುವುದಿಲ್ಲ. ಈ ಬ್ಯಾಡರ ಕಾಟ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಗುಡ್ಡದ ಬೋರಿ ಎಂಬ ವೇಶ್ಯೆ ನನ್ನ ಮೈಮುಟ್ಟಿ ಮೈಲಿಗೆ ಮಾಡಿದ್ದಾಳೆಂದು ತಿಳಿದು ಕಾಡು ಗೊಲ್ಲರು ಯಾವಾಗಲೂ ತಮ್ಮ ವ್ರತವನ್ನು ಬಿಡಬಾರದೆಂದು ಹೇಳಿ ಎತ್ತಪ್ಪ ಮಲ್ಲಮ್ಮ ಮತ್ತು ಹುಲುಗಾನಿ ಪ್ರಾಣ ಬಿಡುತ್ತಾರೆ.

ಎತ್ತಪ್ಪ ಪಶುಪಾಲಕ ವೃತ್ತಿಯನ್ನು ತನ್ನ ಆರಾಧ್ಯದೈವದ ವೃತ್ತಿಯೆಂದು ಭಾವಿಸಿಕೊಂಡು ಆ ವೃತ್ತಿಯನ್ನು ಅನುಸರಿಸಿಕೊಂಡು ಹೋಗುತ್ತಿರುತ್ತಾನೆ. ಬೇಡರು ದನಗಳನ್ನು ಅಪಹರಿಸುವ ಅಥವಾ ಯುದ್ಧ ಮಾಡಿ ಅವುಗಳನ್ನು ಪಡೆದುಕೊಂಡು ದನಗಳ ಮಾಂಸ ತಿನ್ನುವ ಸನ್ನಿವೇಶ ಇದು ಬೇಡರ ಆರಾಜಕತೆಯ ಬದುಕನ್ನು ಚಿತ್ರಿಸುತ್ತದೆ. ತನ್ನ ಪಶುಸಂಪತ್ತನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡಿದ ಎತ್ತಪ್ಪನ ಸರಳ, ಮುಗ್ಧ,

ನೇರ, ನಡೆ-ನುಡಿಗಳು ಎಲ್ಲರ ಗಮನ ಸೆಳೆಯುತ್ತವೆ. ಪಶುಸಂಪತ್ತಿಗಿಂತ ಶ್ರೇಷ್ಠವಾದ ಸಂಪತ್ತು ಯಾವುದೂ ಇಲ್ಲ ಎಂದು ಭಾವಿಸಿದ್ದ ಎತ್ತಪ್ಪ, ಸಾಯುವಾಗ ಅವುಗಳನ್ನು ಸಹ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ.

೩.೧.೨ ದೇವರ ದಯಾಮಾರನ ಪಶುಪಾಲನೆ

ದೇವರ ದಯಾಮಾರನ ಕಥೆಯಲ್ಲಿ ಪಶುಪಾಲನೆ ಅತ್ಯಂತ ಶ್ರೀಮಂತವಾಗಿತ್ತು ಎಂಬುದನ್ನು ಕಾಣಬಹುದಾಗಿದೆ. ದೇವರ ದಯಾಮಾರನನ್ನು ಸೇರಿಸಿಕೊಂಡು ಏಳು ಜನ ಅಣ್ಣತಮ್ಮಂದಿರು ತಮ್ಮ ಹಟ್ಟಿಗಳಲ್ಲಿ ದನಗಳನ್ನು ಚಿನ್ನದ ಗೂಟಕ್ಕೂ ಕರುಗಳನ್ನು ಬೆಳ್ಳಿಯ ಗೂಟಕ್ಕೂ ಕಟ್ಟುತ್ತಿದ್ದರೆಂದು ತಿಳಿಯುತ್ತದೆ. ಪಶುಪಾಲನೆಯ ಮೂಲಕ ಎಲ್ಲವನ್ನು ಪಡೆದುಕೊಂಡು ವೈಭವದಿಂದ ಬದುಕು ಸಾಗಿಸುತ್ತಿದ್ದ ಕುಟುಂಬ ಅದಾಗಿತ್ತು ಎಂದು ತಿಳಿಯುತ್ತದೆ. ದಯಾಮಾರ ಮಾತ್ರ ತನ್ನ ಮನೆಯಲ್ಲಿಯ ಸಂಪತ್ತನೆಲ್ಲ ಬಿಟ್ಟು ಪಶುಪಾಲನೆಗಾಗಿ ಏಳು ಕರುಗಳನ್ನು ತೆಗೆದುಕೊಂಡು ಕರಿತೊರೆ ಎಂಬ ಹಳ್ಳದ ಕಡೆಹೋಗಿ ಅವುಗಳ ಪಾಲನೆ ಪೋಷಣೆ ಮಾಡುತ್ತಿದ್ದ. ಹುಲಿ, ಕರಡಿ, ಚಿರತೆಗಳಿದ್ದ ಆ ಕಾಡಿನಲ್ಲಿ ದೇವರ ದಯಾಮಾರ ೧೨ ವರ್ಷಗಳ ಕಾಲ ಪಶುಪಾಲನೆ ಕೈಕೊಂಡಿರುತ್ತಾನೆ. ದೇವರ ದಯಾಮಾರನಿಗೆ ಅವನ ಅಣ್ಣಂದಿರು ಮದುವೆ ಮಾಡಲು ಪ್ರಯತ್ನಿಸುತ್ತಿದ್ದರೆ ಅದನ್ನು ಅವನು ನಿರಾಕರಿಸುತ್ತಿದ್ದ. ಪಶುಪಾಲನೆಗಾಗಿಯೇ ಅವನು ಜೀವನ ಮುಡುಪಾಗಿಡಲು ನಿರ್ಧರಿಸಿದ್ದ. ಒತ್ತಾಯಕ್ಕೆ ಮಣಿದ ದಯಾಮಾರ ಮದುವೆಯಾಗಲು ಒಪ್ಪಿ ಮನೆಗೆ ಬರುತ್ತಾನೆ. ಧಾರೆಯ ದಿನ ಅವನಿಗೆ ಮದುವೆಗಿಂತ ಅವನು ಪಶುಸಂಪತ್ತನ್ನೇ ಹೆಚ್ಚಾಗಿ ಪ್ರೀತಿಸುತ್ತಿದ್ದುದರಿಂದ ಮದುವೆಯನ್ನೇ ತ್ಯಜಿಸಿ ಪಶುಪಾಲನೆಗಾಗಿ ಯಾರಿಗೂ ಹೇಳದೆ ಹಿಂತಿರುಗಿ ಹೋಗುವ ಸನ್ನಿವೇಶ ಈ ಕಥೆಯಲ್ಲಿದೆ. ದಯಾಮಾರನ ಪತ್ನಿ ಕಂಬಕ್ಕ ದೇವರ ದಯಾಮಾರನ ಅತ್ತಿಗೆಯರ ಕಾಟ ತಾಳಲಾರದೇ ಅವಳು ದಯಾಮಾರನನ್ನು ಸೇರಿಕೊಂಡು ಪಶುಪಾಲನೆಯಲ್ಲಿ ತೊಡಗಿಕೊಂಡು ಒಂದು ಮಗುವನ್ನು ಹೆತ್ತು (ಕೆಂಗುರಿ ಮಲ್ಲಪ್ಪ) ಇಬ್ಬರೂ ಸಾವನ್ನಪ್ಪುತ್ತಾರೆ.

೩.೧.೩ ಕೆಂಗುರಿ ಮಲ್ಲಪ್ಪನ ಪಶುಪಾಲನೆ

ದೇವರ ದಯಾಮಾರ ಮತ್ತು ಕಂಬಕ್ಕನ ಮಗನಾದ ಕೆಂಗುರಿ ಮಲ್ಲಪ್ಪನು ಪಶುಪಾಲನೆಯ ವೃತ್ತಿಯನ್ನೇ ಅನುಸರಿಸಿರುತ್ತಾನೆ. ಕೆಂಗುರಿ ಮಲ್ಲಪ್ಪನೂ ಕಾಡುಗೊಲ್ಲರ ಪವಾಡ ಪುರುಷ. ಇವನು ತಮ್ಮದೊಡಪ್ಪಂದಿರ ಹಾಗೂ ದೊಡ್ಡಮ್ಮಂದಿರ ಕಾಟ ತಾಳಲಾರದೇ ಮನೆ ಬಿಟ್ಟು ಕಾಡಿನಲ್ಲಿ ಅವರ ದನಗಳ ರಕ್ಷಣೆ ಮಾಡುತ್ತ ಅವುಗಳ ಹಾಲು ಕುಡಿದು ಕಾಲ ಕಳೆಯುತ್ತಿರುತ್ತಾನೆ. ಅಲ್ಲಿಯೂ ಅವರ ತೊಂದರೆ ಹೆಚ್ಚಾಗಿದ್ದರಿಂದ ಅವನು ಸಾಕಿದ ದನಕರುಗಳಿಗೆ ಕಿವಿ ಮಾತು ಹೇಳಿ 'ನನ್ನ ದೊಡ್ಡಪ್ಪಂದಿರು ಅಥವಾ ದೊಡ್ಡಮ್ಮಂದಿರು ಹಾಲು ಕರೆಯಲು ಬಂದರೆ ಅವರನ್ನು ಜಾಡಿಸಿ ಒದೆಯಿರಿ' ಎಂದು ಹೇಳಿ ಕಳುವಾರ ಹಳ್ಳಿಗೆ ಬಂದು ಆಲೇಗೌಡನ ಆಶ್ರಯ ಪಡೆಯುತ್ತಾನೆ. ಮಲ್ಲಪ್ಪ ಕಳುವಾರ ಹಳ್ಳಿಗೆ ಬರುವುದಕ್ಕಿಂತ ಪೂರ್ವ ಆ ಊರಲ್ಲಿ ಬರ ಬಂದು ಎಲ್ಲವೂ ನಾಶವಾಗಿತ್ತು. ಮಲ್ಲಪ್ಪ ಆ ಊರಿಗೆ ಕಾಲಿಟ್ಟಮೇಲೆ ಬರ ಮಾಯವಾಗಿ ಆಲೇಗೌಡನ

[illegible]

[illegible]

[illegible]

[illegible]

[illegible]

ಬಡತನ ನಿವಾರಣೆಯಾಗಿ ಶ್ರೀಮಂತನಾದ. ಇದೆಲ್ಲ ಕೆಂಗುರಿ ಮಲ್ಲಣ್ಣನ ಆಗಮನದಿಂದ ಸಾಧ್ಯವಾಯಿತು ಎಂದು ತಿಳಿದ ಗೌಡ ಮಲ್ಲಣ್ಣನಿಗೆ ಏಳು ಕರುಗಳನ್ನು ಸಾಕಲು ಕೊಟ್ಟ. ಕೆಂಗುರಿ ಮಲ್ಲಪ್ಪ ಬರಗೂರು, ಬಾಣಕೆರೆ, ನಿಡುಗಲ್ಲು ನಿದ್ರಕಟ್ಟೆಯ ಹುಲ್ಲುಗಾವಲಿನಲ್ಲಿ ಕರುಗಳನ್ನು ಮೇಯಿಸಿಕೊಂಡು ಬಂದು ಊರ ಹೊರಗೆ ಕರುಗಳ ಜೊತೆಗೆ ಗುಡಿಸಲಲ್ಲಿ ವಾಸಿಸುತ್ತಿದ್ದ. ಅವನಿಗೆ ಆಲೇಗೌಡ ದಿನಾಲೂ ಬುತ್ತಿ ತಂದು ಕೊಡುತ್ತಿದ್ದ. ಆಲೇಗೌಡನ ಹೆಂಡತಿ ಜಾನಕಲ್ ದೊಡ್ಡಕ್ಕ ಕೆಂಗುರಿ ಮಲ್ಲಪ್ಪನಿಗೆ ಬುತ್ತಿ ಮಾಡಿಕೊಡಲು ನಿರಾಕರಿಸಿದಳು. ಆಗ ಮಲ್ಲಣ್ಣ ಹಾಲುಕುಡಿದು ಬದುಕುತ್ತಿದ್ದ. ಹಸುವಿನ ಮಣಕಗಳು ಸೋಲಿಗೆ ಬಂದಿದ್ದರಿಂದ ಅವುಗಳಿಗಾಗಿ ಹೋರಿ ತರಲು ಮಲ್ಲಣ್ಣ ಆಲೇಗೌಡನ ಹತ್ತಿರ ಹಣ ಕೇಳಲು ಬರುತ್ತಾನೆ. ಗೌಡನ ಹೆಂಡತಿ ಹಣ ಕೊಡಲು ನಿರಾಕರಿಸುತ್ತಾಳೆ. ಗೌಡ ಅವಳನ್ನು ಹೊಡೆದು ಹಣಕೊಡುತ್ತಾನೆ ಮತ್ತು ಹೋರಿ ಹುಡುಕಲು ಅನೇಕ ಕಡೆ ಸುತ್ತಾಡುತ್ತಾರೆ. ಬೀಜದ ಹೋರಿ ಎಲ್ಲಿಯೂ ಸಿಕ್ಕದಾದಾಗ ಕೊನೆಗೆ ಬೇಡರ ಹುಡುಗರ ಹತ್ತಿರವಿದ್ದ ಬಡಕಲ ಹೋರಿಯನ್ನು ಖರೀದಿಸಿ ಅದನ್ನು ಹೊಡೆದುಕೊಂಡು ಬರುತ್ತಾರೆ. ಕೆಂಗುರಿ ಮಲ್ಲಪ್ಪ ಕರಿತೊರೆ ಹಳ್ಳದಲ್ಲಿ ತನ್ನ ಆರಾಧ್ಯದೈವ ಚಿತ್ರದೇವರನ್ನು ಸ್ಮರಿಸುತ್ತಾನೆ ಬಡಕಲು ಹೋರಿ ದಷ್ಟಮುಷ್ಟಿ ಹೋರಿಯಾಗುತ್ತದೆ.

ಕೆಂಗುರಿ ಮಲ್ಲಪ್ಪ ಕಳುವಾರ ಹಳ್ಳಿಯಲ್ಲಿದ್ದಾಗ ಬರಗಾಲ ಬೀಳುತ್ತದೆ. ಅವನು ಪಶುಪಾಲನೆಗಾಗಿ ಮಲೆನಾಡಿನ ಪ್ರದೇಶಕ್ಕೆ ಅನಿವಾರ್ಯವಾಗಿ ಹೋಗಬೇಕಾಗುತ್ತದೆ. ಮಲ್ಲಪ್ಪನ ಕಾಲಕ್ಕಾಗಲೇ ಹುಲ್ಲುಗಾವಲುಗಳು ಪಾಳೇಗಾರರ ವಶದಲ್ಲಿರುತ್ತಿದ್ದವು ಎಂಬುದು ತಿಳಿಯುತ್ತದೆ. ಅದಕ್ಕೆ ಆಲೇಗೌಡ ಚಿನ್ನದ ಕೊಡಲಿಯನ್ನು ಸಿದ್ಧಪಡಿಸಿ ಅದರ ಮೇಲೆ 'ಕೆಂಗುರಿ ಮಲ್ಲಪ್ಪ ಯಾವ ಹುಲ್ಲುಗಾವಲಿನಲ್ಲೂ ದನಗಳನ್ನು ಮೇಯಿಸಿದರೂ ಯಾರೂ ಅದಕ್ಕೆ ಅಡ್ಡಿಬರಬಾರದೆಂದು ಬರೆಯಿಸಿ ಅದರ ಮೇಲೆ ಏಳು ಊರಿನ ಗೌಡರ ಹಾಗೂ ಶಾನಭೋಗರ ಸಹಿ ವಿಳಾಸ ಹಾಕಿಸುತ್ತಾನೆ' ಕೆಂಗುರಿ ಮಲ್ಲಪ್ಪ ಪಶುಪಾಲನೆಗಾಗಿ ಮಲೆನಾಡಿಗೆ ಹೋಗುತ್ತಿರುವಾಗ ಅವನ ಹತ್ತಿರ ಏಳು ಆಕಳ ಕರುಗಳು, ಏಳು ಮೇಕೆ ಮರಿಗಳು ಹಾಗೂ ಏಳು ಕುರಿಮರಿಗಳಿರುತ್ತವೆ. ಮಲೆನಾಡಿಗೆ ಹೋದ ಮೇಲೆ ಇವುಗಳ ಸಂತತಿ ಹೆಚ್ಚಾಗಿ ಏಳು ಗೂಡಿನ ದನಗಳೂ, ಏಳು ಗೂಡಿನ ಮೇಕೆಗಳು ಹಾಗೂ ಏಳುಗೂಡಿನ ಕುರಿಗಳಾಗಿರುತ್ತವೆ. ನಿಷ್ಠೆ ಪ್ರಮಾಣಿಕತೆಯಿಂದ ಪಶುಪಾಲನೆ ಮಾಡಿದ ಕೆಂಗುರಿ ಮಲ್ಲಪ್ಪ ಹನ್ನೆರಡು ವರ್ಷಗಳವರೆಗೆ ಸಂತೋಷದಿಂದ ಈ ವೃತ್ತಿ ಮಾಡುತ್ತಾನೆ.

೩.೧.೪ ಜುಂಜಪ್ಪನ ಪಶುಪಾಲನೆ

ಕೆಂಗುರಿ ಮಲ್ಲಪ್ಪನ ಅಭಿವೃದ್ಧಿಯನ್ನು ಕಂಡು ಅವರ ದೊಡ್ಡಪ್ಪಂದಿರು ಸಹಿಸದಾದರು. ಕಂಬಿಗೊಲ್ಲರ ಚಿನ್ನಮ್ಮನನ್ನು ಕೆಂಗುರಿ ಮಲ್ಲಪ್ಪನಿಗೆ ಮದುವೆ ಮಾಡಬಾರದು ಅವಳನ್ನು ತಮ್ಮ ಮಕ್ಕಳಿಗೆ ತಂದು ಕೊಳ್ಳಬೇಕೆಂದು ಮಲ್ಲಪ್ಪನ ದೊಡ್ಡಪ್ಪಂದಿರು ಪ್ರಯತ್ನಿಸುತ್ತಾರೆ. ಆದರೂ ಚಿನ್ನಮ್ಮ ಕೆಂಗುರಿ ಮಲ್ಲಪ್ಪನನ್ನೇ ಮದುವೆಯಾಗುತ್ತಾಳೆ. ಕೆಂಗುರಿ ಮಲ್ಲಪ್ಪ ತನ್ನ ಹೆಂಡತಿಯೊಡನೆ ಸಂಸಾರ ಮಾಡದೇ ಕುರಿ, ಮೇಕೆ,

[illegible]

[illegible]

[illegible]

ದನಗಳನ್ನು ಕರೆದುಕೊಂಡು ಮೂಡಲಗಿರಿ ತಿಮ್ಮಪ್ಪನ ಕಾವಲಿನಲ್ಲಿ ಪಶುಪಾಲನೆ ಮಾಡುತ್ತಿರುತ್ತಾನೆ. ಕಾಡುಗೊಲ್ಲರ ಎಲ್ಲ ಸಾಂಸ್ಕೃತಿಕ ನಾಯಕರು ಸಾಮಾನ್ಯವಾಗಿ ತಮ್ಮ ಸಂಸಾರ ಹೆಂಡತಿ ಮಕ್ಕಳಿಗಿಂತ ಪಶುಪಾಲನೆಗೆ ಹೆಚ್ಚಿನ ಮಹತ್ವ ಕೊಡುತ್ತಿದ್ದರು ಹಾಗೂ ದನಕರುಗಳನ್ನು ತಮ್ಮ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಅವರು ತಮ್ಮ ಮಕ್ಕಳಿಗಿಂತ ಪಶುಸಂಪತ್ತೇ ದೊಡ್ಡ ಆಸ್ತಿ ಎಂದು ತಿಳಿದುಕೊಂಡಿದ್ದರು. ಮಲ್ಲಪ್ಪನ ಹೆಂಡತಿ ಚಿನ್ನಮ್ಮನಿಗೆ ಮಕ್ಕಳಾಗದಿದ್ದಾಗ ಎಲ್ಲರೂ ಅವಳನ್ನು ಬಂಜೆ ಎಂದು ಕರೆದು ಹಿಯಾಳಿಸುತ್ತಿರುತ್ತಾರೆ. ಗೌರಸಂದ್ರದ ಮಾರಕ್ಕ ಚಿನ್ನಮ್ಮನ ಸ್ಮರಣೆಗೆ ಮೆಚ್ಚಿ ಈಶ್ವರನ ಮಗನಾದ ವೀರಭದ್ರನು ಚಿನ್ನಮ್ಮನ ಮಗನಾಗಿ ಹುಟ್ಟಬೇಕೆಂದು ಕೇಳಿಕೊಳ್ಳುತ್ತಾಳೆ. ಚಿನ್ನಮ್ಮನು ಗಂಡನ ನೆರಳು ಬೀಳಿಸಿಕೊಂಡು ಗೌರಸಂದ್ರ ಮಾರಕ್ಕ ಕೊಟ್ಟ ಮಾವಿನ ಹಣ್ಣು ತಿಂದು ಗರ್ಭವತಿಯಾಗಿ ನಡುಬೆನ್ನಿನಿಂದ ಜುಂಜಪ್ಪ ಹುಟ್ಟಿ ಬರುತ್ತಾನೆ.

ಮಾರಿಹಬ್ಬದಲ್ಲಿ ಕೆಂಗುರಿ ಮಲ್ಲಪ್ಪ ಬಲಿಯಾದ ಮೇಲೆ ಅವನು ಪಡೆದ ಆಸ್ತಿಯಲ್ಲವೂ ಹಾಳಾಗಿ ಹೋಗುತ್ತದೆ. ಏಳು ಗೂಡಿನ ಆವುಗಳೂ, ಏಳು ಗೂಡಿನ ಕುರಿಗಳೂ, ಏಳೂ ಗೂಡಿನ ಮೇಕೆಗಳೂ ಹೀಗೆ ಎಲ್ಲ ಪಶುಸಂಪತ್ತು ಹಾಳಾಗುತ್ತದೆ. ಚಿನ್ನಮ್ಮ ಬಡತನದಲ್ಲಿ ಬೆಂದು ಹೋಗುತ್ತಾಳೆ. ಕೊನೆಗೆ ಜುಂಜಪ್ಪ ತನ್ನ ತಾಯಿಯಾದ ಚಿನ್ನಮ್ಮಳಿಗೆ ಏಳು ಪರೀಕ್ಷೆಗಳನ್ನು ಏರ್ಪಡಿಸುತ್ತಾನೆ. ಅವುಗಳಲ್ಲಿ ಚಿನ್ನಮ್ಮ ಗೆದ್ದು ಶುದ್ಧಳಾಗುತ್ತಾಳೆ. ಅವಳಿಗೆ ಮೊದಲು ಕಳೆದುಕೊಂಡ ಸಂಪತ್ತೆಲ್ಲವೂ ಸಿಗುತ್ತದೆ. ಇಲ್ಲಿ ಅವರಿಗೆ ಎಲ್ಲಕ್ಕಿಂತ ಹೆಚ್ಚಾಗಿ ಪಶುಸಂಪತ್ತು ಸಿಕ್ಕಿದ್ದು ಹೆಚ್ಚಿಗೆ ಸಂತೋಷವನ್ನುಂಟು ಮಾಡಿರುತ್ತದೆ.

ವೀರಭದ್ರನ ಅವತಾರವಾದ ಜುಂಜಪ್ಪನ ಮೂಲ ವೃತ್ತಿಯೂ ಪಶುಪಾಲನೆಯೇ ಆಗಿತ್ತು. ಇವನು ತುಮಕೂರು ಜಿಲ್ಲೆಯಿಂದ ಹಿಡಿದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನವರೆಗೆ ಪಶುಪಾಲನೆಗಾಗಿ ಅಲೆದಾಡುತ್ತಾನೆ ಎಂಬುದು ಅವನನ್ನು ಕುರಿತಾದ ಜನಪದ ಸಾಹಿತ್ಯದ ಮೂಲಕ ತಿಳಿಯುತ್ತದೆ. ಜುಂಜಪ್ಪನ ಕಾಲಕ್ಕೆ ಹುಲ್ಲುಗಾವಲುಗಳು ಪಾಳೇಗಾರರ ವಶದಲ್ಲಿದ್ದು ಅಲ್ಲಿ ಪಶುಪಾಲನೆ ಮಾಡಬೇಕಾದರೆ ಪಾಳೇಗಾರರ ಅನುಮತಿ ಪಡೆಯಬೇಕಾಗುತ್ತಿತ್ತು. ಜುಂಜಪ್ಪ ಆ ಪಾಳೇಗಾರರ ಹುಟ್ಟು ಅಡಗಿಸಿ ಅಲ್ಲಿ ತನ್ನ ದನಗಳನ್ನು ಸಾಕುತ್ತಿದ್ದ ಚಿತ್ರಣ ಕಂಡುಬರುತ್ತದೆ. ಅಂದರೆ ಜುಂಜಪ್ಪನ ಕಾಲಕ್ಕೆ ಪಶುಪಾಲನೆ ವೃತ್ತಿಯನ್ನು ಅನೇಕರು ನಿರ್ವಹಿಸುತ್ತಿದ್ದರು ಮತ್ತು ಈ ವೃತ್ತಿ ಆ ಕಾಲಕ್ಕೆ ಶ್ರೇಷ್ಠವಾದದ್ದಾಗಿತ್ತು ಎಂಬುದನ್ನು ಗಮನಿಸಬಹುದು.

ಪಶುಪಾಲನೆಯ ಜೊತೆಗೆ ಜುಂಜಪ್ಪ ಪವಾಡ ಪುರುಷನಾಗಿ ಮೆರೆದಿದ್ದಾನೆ. ಇವನು ತನ್ನ ಸೋದರ ಮಾವಂದಿರ ದನಗಳಿಗೆ ನೀರು ಕುಡಿಸಲು, ಹುಲ್ಲು ಮೇಯಿಸಲು ಅವಕಾಶ ಕೊಡುತ್ತಿರಲಿಲ್ಲ. ಎಲ್ಲಿ ನೋಡಿದಲ್ಲೆ ಜುಂಜಪ್ಪನ ದನಗಳೇ ಕಾಣುತ್ತಿದ್ದವು. ಜುಂಜಪ್ಪನು ಹೊಂದಿರುವ ಪಶುಸಂಪತ್ತನ್ನು ಮತ್ತು ಅವನಲ್ಲಿರುವ ದೈವಶಕ್ತಿಯನ್ನು ಕಂಡು ಅಸೂಯೆ ಪಡುತ್ತಿದ್ದ ಅವನ ಮಾವಂದಿರು ಹೇಗಾದರೂ ಮಾಡಿ ಜುಂಜಪ್ಪನ ಹುಟ್ಟು ಅಡಗಿಸಬೇಕೆಂದು ಹೊಂಚು ಹಾಕುತ್ತಿದ್ದರು. ಜುಂಜಪ್ಪನ ಮಾವಂದಿರು ಮಾದಿಗರ

ಪುಟ್ಟನ ಬಳಿಗೆ ಹೋಗಿ ಜುಂಜಪ್ಪನ ಎಲ್ಲ ದನಗಳಿಗೆ ಮಾಟ ಮಾಡಿ ಅವುಗಳನ್ನು ಸಾಯಿಸುವುದಾದರೆ ನಿನಗೆ ಏಳು ಕರಗದ ಹೊನ್ನು ಕೊಡುತ್ತೇನೆಂದು ಹೇಳಿ ಆ ಕಾರ್ಯಕ್ಕೆ ಅವನನ್ನು ಒಪ್ಪಿಸುತ್ತಾರೆ. ಕೆರೆಯ ನೀರಿಗೆ ಮಾಟ ಮಾಡಿಸಿ ಜುಂಜಪ್ಪನ ದನಗಳು ಸಾಯಲು ಬೇಕಾದ ವ್ಯವಸ್ಥೆ ಮಾಡುತ್ತಾರೆ. ಜುಂಜಪ್ಪನ ಕಾಲಕ್ಕೆ ಪಶುಗಳ ಅಪಹರಣ ಕಾರ್ಯ ಮಾತ್ರವಲ್ಲದೇ ಅವುಗಳಿಗೆ ಮಾಟ ಮಂತ್ರ, ಮದ್ದು ಹಾಕುವ ಮೂಲಕ ನಾಶ ಮಾಡುವ ಪ್ರವೃತ್ತಿಯೂ ಇತ್ತು ಎಂಬುದುನ್ನು ಗಮನಿಸಬೇಕು.

ಜುಂಜಪ್ಪ ಪಶುಪಾಲನೆ ಮಾಡುತ್ತಿದ್ದ ಕಾಲಕ್ಕೆ ಗೋಮಾಳಗಳೆಲ್ಲ ಅವನ ಮಾವಂದಿರ ಹಿಡಿತದಲ್ಲಿದ್ದು ವೀರನಾದ ಜುಂಜಪ್ಪ ತನ್ನ ಮಾವಂದಿರ ಹುಲ್ಲುಗಾವಲಿನಲ್ಲಿ ದನಗಳನ್ನು ಮೇಯಿಸುತ್ತಿದ್ದುದರಿಂದ ಇವರಿಬ್ಬರ ನಡುವೆ ವೈರತ್ವ ಬೆಳೆದು ಜುಂಜಪ್ಪನ ದನಗಳನ್ನು ನಾಶಮಾಡಲು ಅವರು ಹೊಂಚು ಹಾಕಿರಬೇಕು ಎನಿಸುತ್ತಿದೆ. ಜುಂಜಪ್ಪನ ಸೋದರ ಮಾವಂದಿರು ನೀರಿಗೆ ಮಾಟ ಮಾಡಿಸಿದಾಗ ನ್ಯಾಯ ಪಂಚಾಯಿತಿ ಸೇರುತ್ತದೆ. ಆ ಸಂದರ್ಭದಲ್ಲಿ ಜುಂಜಪ್ಪ ಸಾಮಾನ್ಯವಾಗಿ ಜಗಳ ಬರುವುದು 'ಎತ್ತಿನ ಕಾಲಿನಿಂದ ಹೆಣ್ಣಿನ ಕಾಲಿನಿಂದ' ಎಂದು ಹೇಳುತ್ತಾನೆ.

ಜುಂಜಪ್ಪನ ದನಗಳನ್ನು ನಾಶಮಾಡುವ ಛಲತೊಟ್ಟ ಅವನ ಮಾವಂದಿರು ಮರಡಿ ರಂಗಣ್ಣನ ಹತ್ತಿರ ಹೋಗಿ ಅವನಿಗೆ ಏಳು ಜೊತೆ ಎತ್ತುಗಳನ್ನೂ, ಆರು ಜೊತೆ ಆಕಳು, ಏಳು ಕರಗದ ಹೊನ್ನುಕೊಟ್ಟು, ಏಳು ವರ್ಷದ ವರೆಗೆ ಆ ಪ್ರದೇಶದಲ್ಲಿ ಮಳೆ ಬರದೇ ಬರಗಾಲ ಬೀಳುವಂತೆ ಮಾಡಬೇಕೆಂದು ಕೇಳಿ ಕೊಳ್ಳುತ್ತಾರೆ. ಇದರಿಂದ ಜುಂಜಪ್ಪನ ದನಗಳು ನೀರು ಹುಲ್ಲು ಇಲ್ಲದೇ ಸತ್ತುಹೋಗುತ್ತವೆ ಎಂದು ಸಂತೋಷಪಟ್ಟುಕೊಂಡು ತಮ್ಮ ಪಶುಸಂಪತ್ತನ್ನು ಹಾಗೂ ಹೆಂಡಿರು ಮಕ್ಕಳನ್ನು ಕರೆದುಕೊಂಡು ಬಡಗಲ ಸೀಮೆಗೆ ಹೋಗುತ್ತಾರೆ. ಮರಡಿ ರಂಗಣ್ಣನ ಮಾಟದಿಂದ ಮಳೆಯಾಗದೇ ಬರಗಾಲ ಬಂದು ಜುಂಜಪ್ಪನ ದನಗಳಿಗೆ ಕುಡಿಯಲಿಕ್ಕೆ ನೀರಲ್ಲದೇ ತಿನ್ನಲಿಕ್ಕೆ ಹುಲ್ಲಿಲ್ಲದೆ ಒದ್ದಾಡುವಂತಾಯಿತು. ಜುಂಜಪ್ಪ ತನ್ನ ಪಶುಗಳ ಮೇಲೆ ಜೀವವನ್ನೇ ಇಟ್ಟುಕೊಂಡವ. ಮೂಕಪ್ರಾಣಿಗಳ ಗೋಳಾಟ ನೋಡದೇ ನರಳಾಡಿದ. ಜುಂಜಪ್ಪನ ಏಳು ಗೂಡಿನ ದನಗಳಿಗೆ ಮಲಿಗಿದ ಜಾಗದಲ್ಲೇ ಹುಳುಗಳು ಬೀಳುಹತ್ತಿದವು. ಜುಂಜಪ್ಪ ಶಾಸ್ತ್ರ ಕೇಳಿದ ಕೊನೆಗೆ ಚಿಕ್ಕನ ಸೀರ್ಯದ ಹತ್ತಿರ ಬಂದು ಬಾವಿಯನ್ನು ತೆಗೆದು, ದನಗಳಿಗೆ ನೀರು ಕುಡಿಸಿದ ಮತ್ತು ಅವನ ಸೋದರ ಮಾವಂದಿರು ಏಳು ವರ್ಷದ ವರೆಗೆ ಮಳೆ ಬಾರದಂತೆ ಬರ ಬೀಳುವಂತೆ ಮರಡಿ ರಂಗಣ್ಣನಿಂದ ಮಾಟ ಮಾಡಿಸಿದ್ದಾರೆಂದು ತಿಳಿದು ಮರಡಿ ರಂಗಣ್ಣನಿಂದ ಹತ್ತಿರ ಹೋಗಿ ಅವನಿಗೆ ತಕ್ಕದಾದ ಪಾಠ ಕಲಿಸುತ್ತಾನೆ.

ಬರಗಾಲು ಪ್ರದೇಶದಿಂದ ಜುಂಜಪ್ಪ ತನ್ನ ದನಗಳನ್ನು ಹೊಡೆದುಕೊಂಡು ಚೇಳೂರು ರಂಗಣ್ಣನ ಕಾವಲಿಗೆ ಬರುತ್ತಾನೆ. ಅಲ್ಲಿ ಸಮೃದ್ಧವಾಗಿ ಹುಲ್ಲು ಬೆಳೆದಿರುತ್ತದೆ. ಆ ಕಾವಲಿನಲ್ಲಿ ಯಮದ ಪರೆ ಹುಲ್ಲು, ಕಮಗಡಲೆ ಹುಲ್ಲು, ಚಿಪ್ಪಿಗನ ಹುಲ್ಲು, ಸೀರಣಿಗೆ ಹುಲ್ಲು ಮತ್ತು ಮಾರುವಳ್ಳಿ ಹುಲ್ಲು

ಮುಂತಾದ ಹುಲ್ಲಿನ ತಳಿಗಳು ದನಗಳಿಗೆ ಬರುತ್ತಿದ್ದ ರೋಗಗಳನ್ನು ವಾಸಿಮಾಡುತ್ತಿದ್ದವು. ಇಂತಹ ಹುಲ್ಲುಗಾವಲನ್ನು ನಾಯಕರ ಹುಡುಗರು ಕಾಯುತ್ತಿದ್ದರು. ನಾಯಕರ ಹುಡುಗರಿಗೆ ತಿಳಿ ಹೇಳಿ ಅವರಿಗೆ ಊಟ ಮಾಡಿಸಿ ಹಿಂತಿರುಗುತ್ತಾನೆ. ಆಗಲೇ ಜುಂಜಪ್ಪನ ದನಗಳ ಎತ್ತುಗಳ ಸ್ಥಿತಿಗಳು ಚಿಂತಾಜನಕ ವಾಗಿರುತ್ತವೆ. ಅನೇಕ ದನಗಳಿಗೆ ಹುಳು ಬಿದ್ದಿದ್ದವು. ಅವುಗಳನ್ನು ಬೇರೆ ಕಡೆ ಕಟ್ಟಿ ಜುಂಜಪ್ಪ ಹೊತ್ತು ತಂದಿದ್ದ ಹುಲ್ಲನ್ನು ಕೆಲ ದನಗಳಿಗೆ ಹಾಕುತ್ತಾನೆ ಮತ್ತು ದನಗಳನ್ನು ಚೇಳೂರು ರಂಗಣ್ಣನ ಕಾವಲಿಗೆ ಹೊಡೆದುಕೊಂಡು ಹೋಗಲು ತನ್ನ ತಮ್ಮಂದಿರಾದ ಮಾರಣ್ಣ ಮೈಲಣ್ಣನಿಗೆ ಹೇಳುತ್ತಾನೆ. ಜುಂಜಪ್ಪ ತನ್ನ ದನಗಳನ್ನು ಮೇಯಿಸಲು ಹುಲ್ಲುಗಾವಲನ್ನು ಹೊಂದಿದ ಯಜಮಾನರಿಗೆ ಹಣವನ್ನು ಕೊಡುತ್ತಿದ್ದ. ಮಾರಣ್ಣ ಮೈಲಣ್ಣ ತಮ್ಮ ಪಶುಸಂಪತ್ತನ್ನು ಹೊಡೆದುಕೊಂಡು ಚೇಳೂರು ರಂಗಣ್ಣನ ಕಾವಲಿನ ಹತ್ತಿರ ಹೋಗುತ್ತಾರೆ. ದುಡ್ಡು ತರಲು ಹೋದ ಜುಂಜಪ್ಪ ಬಾರದಿದ್ದನ್ನು ಕಂಡ ಮಾರಣ್ಣ ಮೈಲಣ್ಣರಿಗೆ ಚಿಂತೆಯುಂಟಾಗುತ್ತದೆ. ರಂಗಣ್ಣನ ಕಾವಲಿಗೆ ದನಗಳನ್ನು ನುಗ್ಗಿಸಿದರೆ ಅವನು ನಮಗೆ ಶಿಕ್ಷೆಕೊಡುತ್ತಾನೆಂದು ಅವರು ಅಂಜುತ್ತಾರೆ ಮತ್ತು ತಮ್ಮ ದನಗಳಿಗೆ ಜುಂಜಪ್ಪ ಬರುವವರೆಗೆ ಚೇಳೂರು ರಂಗಣ್ಣನ ಕಾವಲಕ್ಕೆ ಹೋಗಬಾರದೆಂದು ಗೆರೆ ಹಾಕಿ ಆಣೆ ಹಾಕುತ್ತಾರೆ. ಆದರೆ ಜುಂಜಪ್ಪ ಸಾಕಿದ ಬಡಮೈಲ ಇದನ್ನು ಸಹಿಸಿಕೊಳ್ಳದೆ ಚೇಳೂರು ರಂಗಣ್ಣ ಬಂದರೆ ಅವನನ್ನು ಹಾಗೂ ಅವನ ಸಹಚರರನ್ನು ಧೂಳಿಪಟ ಮಾಡುವುದಾಗಿ ಹೇಳಿ ಹುಲ್ಲುಗಾವಲಿನ ಬೇಲಿಯನ್ನು ತನ್ನ ಕೊಂಬಿನಿಂದ ಕಿತ್ತು ಎಲ್ಲ ದನಗಳು ಹುಲ್ಲುಗಾವಿನ ಒಳಗೆ ಮೇಯಲು ಹೋಗುವಂತೆ ಅನುಕೂಲ ಮಾಡಿಕೊಡುತ್ತದೆ. ದನಗಳ ರಕ್ಷಣೆಯನ್ನು ಬಡಮೈಲ ಎಂಬ ಎತ್ತು ಹೊತ್ತುಕೊಳ್ಳುತ್ತದೆ. ಈ ವಿಷಯ ಚೇಳೂರು ರಂಗಣ್ಣನಿಗೆ ತಿಳಿಯಲಿಲ್ಲ.

ಜುಂಜಪ್ಪನ ಸೋದರಮಾವಂದಿರು ಚೇಳೂರು ರಂಗಣ್ಣನಿಗೆ ಏಳು ಕರಗದ ಹೊನ್ನು ಸಾಲ ಕೊಟ್ಟಿರುತ್ತಾರೆ. ಅದನ್ನು ವಸೂಲಿ ಮಾಡಲು ಅವರು ಚೇಳೂರಿಗೆ ಹೋಗುತ್ತಿರುತ್ತಾರೆ. ರಂಗಣ್ಣನ ಕಾವಲಿನಲ್ಲಿ ಜುಂಜಪ್ಪನ ದನಗಳು ಮೇಯುತ್ತಿರುವುದನ್ನು ಕಂಡು ಮೊದಲು ಅವು ಜುಂಜಪ್ಪನ ದನಗಳೆಂಬುದು ಅವರಿಗೆ ತಿಳಿಯಲಿಲ್ಲ. ಆದರೆ ಬಡಮೈಲನನ್ನು ಕಂಡ ಮೇಲೆ ಅವು ಜುಂಜಪ್ಪನ ದನಗಳೆಂದು ತಿಳಿಯಿತು. ಜುಂಜಪ್ಪನ ಸೋದರಮಾವಂದಿರು ಚೇಳೂರು ರಂಗನಿಗೆ ಈ ವಿಷಯವನ್ನು ತಿಳಿಸಿ ಜುಂಜಪ್ಪನ ದನಗಳನ್ನು ನಾಶಮಾಡಲು ನಾವು ಸಹಾಯಮಾಡುತ್ತೇವೆ ಎಂದು ಹೇಳಿ ಅವನೊಂದಿಗೆ ರಂಗಣ್ಣನ ದಂಡು ಬಂದೂಕಿನ ಜೊತೆಗೆ ಮದ್ದುಗುಂಡುಗಳನ್ನು ತೆಗೆದುಕೊಂಡು ಕಾವಲಿಗೆ ಬರುತ್ತಾರೆ. ಅದನ್ನು ಕಂಡ ಬಡಮೈಲ 'ಏಳುಗೂಡಿನ ಎತ್ತು ಅವುಗಳೆ ಚೇಳೂರು ರಂಗ ಏಳು ಪಟಾಲು ದಂಡು ಕಟ್ಟಿಕೊಂಡು ನಮ್ಮ ಮೇಲೆ ಯುದ್ಧಕ್ಕೆ ಬಂದಿದ್ದಾನೆ. ಈಯ್ದ ಹಸುಗಳೆಲ್ಲಾ ಒಂದು ಕಡೆ ನಿಲ್ಲಿ, ಸರಿಯಾದ ಹೋರಿಗಳೆಲ್ಲಾ ಒಂದು ಕಡೆ ನಿಲ್ಲಿ, ಮೇಯುವ ಕರುಗಳೆಲ್ಲಾ ಒಂದು ಕಡೆ ನಿಲ್ಲಿ, ಮೊಲೆಹಾಲು ಕುಡಿಯುತ್ತಿರುವ ಕರುಗಳೆಲ್ಲಾ ಒಂದು ಕಡೆ ನಿಲ್ಲಿ, ಮಣಕಗಳೆಲ್ಲಾ ಒಂದು ಕಡೆ ನಿಲ್ಲಿ, ಎತ್ತುಗಳೆಲ್ಲಾ ಒಂದು ಕಡೆ ನಿಲ್ಲಿ. ಹಿಂದಕ್ಕೆ ಹೆಜ್ಜೆ ತೆಗೆದು ಮುಂದಕ್ಕೆ ಇಡಬೇಡಿ, ಮುಂದಲ ಹೆಜ್ಜೆ ತೆಗೆದು ಹಿಂದಕ್ಕೆ ಇಡಬೇಡಿ, ತಲೆಯತ್ತಿ ನೋಡಬೇಡಿ, ಮೇಯೇದು

ಮಾತ್ರ ಬಿಡಬೇಡಿ ಎಂದು ಹೇಳಿತು. ರಂಗಪ್ಪನ ದಂಡಾಳು ಬಂದೂಕಿನ ಮೂಲಕ ಗುಂಡು ಹಾರಿಸಿದರೂ ಯಾವ ದನಕ್ಕೂ ಏನೂ ಆಗುವುದಿಲ್ಲ ಎಲ್ಲವೂ ಸುರಕ್ಷಿತವಾಗಿರುತ್ತವೆ. ಹುಲ್ಲುಗಾವಲು ಬಿಟ್ಟು ಅಲುಗಾಡುವುದಿಲ್ಲ ಕೊನೆಗೆ ಬಡಮೈಲನ ಆಜ್ಞೆಯಂತೆ ಎಲ್ಲ ದನಗಳು ಚೇಳೂರು ರಂಗಣ್ಣನ ದಂಡಿನ ಮೇಲೆ ಎರಗಿ ಅವರನ್ನ ಸಾಯಿಸಿದ. ರಂಗಣ್ಣ ಹಾಗೂ ಜುಂಜಪ್ಪನ ಸೋದರಮಾವಂದಿರು ಹೇಗೊ ತಪ್ಪಿಸಿಕೊಂಡು ಊರು ಸೇರಿಕೊಂಡರು. ಆಗ ಜುಂಜಪ್ಪನ ಮಾವಂದಿರು ನಿರ್ಧರಿಸಿದರು. ಮಾರಣ್ಣ, ಮೈಲಾರಣ್ಣನನ್ನು ಒಲಿಸಿಕೊಂಡು ಬಡಮೈಲನನ್ನು ಹಿಡಿದು ಕಂಬಕ್ಕೆ ಕಟ್ಟಿ, ಚಿತ್ರಹಿಂಸೆ ಕೊಡುತ್ತಾರೆ. ಈ ವಿಷಯ ಮೂರು ತಿಂಗಳ ನಿದ್ದೆಯಿಂದ ಎದ್ದ ಜುಂಜಪ್ಪನಿಗೆ ತಿಳಿಯುತ್ತದೆ. ಜುಂಜಪ್ಪ ಬಡಮೈಲನಿಗೆ ಚೇಳೂರಿನ ಕಲ್ಲಕಂಬ ಕಿತ್ತು ಬೇಡಿಗಳನ್ನು ಹರಿದು, ಕೋಟೆಯನ್ನು ಕಿತ್ತು ಕೆಡವಿ ಬರಬೇಕೆಂದು ಆಜ್ಞೆ ಮಾಡುತ್ತಾನೆ.

ಜುಂಜಪ್ಪನ ಆಜ್ಞೆಗಾಗಿಯೇ ಕಾಯುತ್ತಿದ್ದ ಬಡಮೈಲಾರ ಕಂಬೇರ ಚೆನ್ನಿಯ ಮಗನ ಹೋರಿಯನ್ನು ಸೋಲಿಸಿ ಚೇಳೂರಿನ ಹೆಂಗಸರಾಗಲಿ ಗಂಡಸರಾಗಲಿ ಯಾರಾದರೂ ಧೈರ್ಯವಿದ್ದವರು ನನ್ನನ್ನು ತಡೆಯಿರಿ ಎಂದು ಬಡಮೈಲ ಕೂಗಿ ಅಬ್ಬರಿಕೆ ಹಾಕಿತು. ಚೇಳೂರಿನ ಕುಟುಂಬದವರೆಲ್ಲ ತಮ್ಮ ಮನೆ ಬಾಗಿಲುಗಳನ್ನು ಅಂಜಿ ಮುಚ್ಚಿಕೊಂಡರು. ಆಗ ಬಡ ಮೈಲ ಕಂಬವನ್ನು ಕಿತ್ತು ಬೇಲಿಯನ್ನು ಹರಿದು, ಚೇಳೂರಿನ ರಂಗನ ಉಪ್ಪರಿಗೆಯನ್ನು ಹಾರಿತು. ಬಡಮೈಲ ಉಪ್ಪರಿಗೆ ಹಾರಿದ ರಬಸಕ್ಕೆ ಮನೆಯಲ್ಲಿದ್ದ ಬಸುರಿಯರಾದ ರಂಗನ ಪತ್ನಿಯರ ಪಿಂಡಗಳು ನೆಲಕ್ಕೆ ಬೀಳುತ್ತವೆ. ಅದನ್ನು ಕಂಡ ರಂಗಣ್ಣ ತಪ್ಪಾಯಿತು ನಾನು ಇನ್ನು ನಿನ್ನ ಹಾಗೂ ಜುಂಜಪ್ಪನ ಹೆಸರು ಹೇಳಿ ಬದುಕುತ್ತೇನೆಂದು ಬೇಡಿಕೊಳ್ಳುತ್ತಾನೆ. ಕೊನೆಗೆ ಬಡಮೈಲ ಚೇಳೂರಿನ ಕೋಟೆಯನ್ನು ಕೆಡವಿ ಜುಂಜಪ್ಪನಿದ್ದ ಸ್ಥಳಕ್ಕೆ ಬರುತ್ತದೆ. ಮೈಲಿಗೆಯಾದ ಬಡಮೈಲನನ್ನು ಜುಂಜಪ್ಪ ಶುದ್ಧೀಕರಿಸಿ ಪೂಜಿಸಿ ಎತ್ತಿನ ಗೂಡಿಗೆ ಸೇರಿಸುತ್ತಾನೆ.

ಜುಂಜಪ್ಪನ ಸೋದರ ಮಾವಂದಿರು ಬಡಮೈಲಿನಿಂದ ನಡೆದ ಘಟನೆಯಿಂದ ಮತ್ತಷ್ಟು ರೋಚ್ಚಿಗೆದ್ದು, ಓದು ಬರಹ ಬಲ್ಲದ ಜುಂಜಪ್ಪನನ್ನು ರಂಗಣ್ಣ ಮೂಲಕ ಪಗಡೆಯಾಡಿಸಿ ಅವನನ್ನು ಸೋಲಿಸಿ ಮಾರಣ್ಣ ಮೈಲಾರ ಜುಂಜಪ್ಪ ಹಾಗೂ ಅವನ ಪಶುಸಂಪತ್ತು ವಶಪಡಿಸಿಕೊಳ್ಳಬೇಕೆಂದು ಹೊಂಚು ಹಾಕಿ ರಂಗಣ್ಣನ ಮೂಲಕ ಜುಂಜಪ್ಪನನ್ನು ಕರೆಕಳಿಸುತ್ತಾರೆ. ಜುಂಜಪ್ಪ ಪಗಡೆ ಆಡಲು ಮೊದಲು ನಿರಾಕರಿಸುತ್ತಾನೆ ಹಾಗೂ ನನ್ನ ದನಗಳು ನಿನ್ನ ಹುಲ್ಲುಗಾವಲಿನಲ್ಲಿ ಮೇಯ್ದದ್ದಕ್ಕಾಗಿ ನಾನು ಹಣ ಕೊಡುತ್ತೇನೆ ಎಂದು ಹೇಳುತ್ತಾನೆ. ಆಗ ರಂಗಣ್ಣ ನೀನು ಗಂಡಸಾಗಿದ್ದರೆ ನನ್ನ ಷರತ್ತಿಗೆ ಒಪ್ಪಿ ಪಗಡೆಯಾಡು. ಇಲ್ಲದಿದ್ದರೆ ಬಳೆ ತೊಟ್ಟುಕೊ ಎನ್ನುತ್ತಾನೆ. ಆಗ ಜುಂಜಪ್ಪ ರಂಗಣ್ಣನ ಷರತ್ತಿಗೆ ಒಪ್ಪಿ ಒಂದು ದಿನ ಊರ ಹೊರಗೆ ಮಾರಣ್ಣ ಮೈಲಾರಣ್ಣನನ್ನು ಹಾಗೂ ಅವನ ಏಳು ಗೂಡಿನ ಪಶುಸಂಪತ್ತನ್ನು ಕರೆದುಕೊಂಡು ಪಗಡೆ ಆಟಕ್ಕೆ ಬರುತ್ತಾನೆ. ಜೂಜಿನಲ್ಲಿ ರಂಗಣ್ಣ ಸೋಲುತ್ತಾನೆ. ಆದರೆ ಜುಂಜಪ್ಪನ ಸೋದರಮಾವಂದಿರು ಜುಂಜಪ್ಪನ

[illegible]

[illegible]

[illegible]

ತಾಯಿಗೆ ನಿನ್ನ ಮಕ್ಕಳು ಜೂಜಿನಲ್ಲಿ ಸೋತಿದ್ದಾರೆ. ಮಾರಣ್ಣ ಮೈಲಾರಣ್ಣ ಹಾಗೂ ಜುಂಜಪ್ಪನನ್ನು ಕೊಂದು ಅವರ ಹೆಣವನ್ನು ಅಗಸೆ ಬಾಗಲಿಗೆ ಹಾಕಿದ್ದಾರೆ ಹಾಗೂ ಬಡಮೈಲನನ್ನು ಕಡಿದು ಅದರ ಮಾಂಸವನ್ನು ತೆಲಗಿನವರಿಗೆ ಹಂಚಿದ್ದಾರೆ ಎಂಬ ಸುದ್ದಿಯನ್ನು ಚಿನ್ನಮ್ಮನಿಗೆ ಮುಟ್ಟಿಸುವರು. ಇದರಿಂದ ನೊಂದುಕೊಂಡ ಜುಂಜಪ್ಪನ ತಾಯಿ ನಾನು ಬದುಕಿದ್ದು ಪ್ರಯೋಜನವಿಲ್ಲವೆಂದು ತಿಳಿದು, ಚಿತೆಗೆ ಹಾರಲು ಸಿದ್ಧಳಾಗಿರುತ್ತಾಳೆ. ಈ ವಿಷಯ ಜುಂಜಪ್ಪನಿಗೆ ಗೊತ್ತಾಗಿ ತನ್ನ ಚಿಪ್ಪುಗೊಡಲಿಯನ್ನು ತಾಯಿಯ ಹತ್ತಿರ ಬೀಳುವಂತೆ ಎಸೆಯುತ್ತಾನೆ. ಅದನ್ನು ಕಂಡು ಚಿನ್ನಮ್ಮ ನನ್ನ ಮಕ್ಕಳು ಸತ್ತಿಲ್ಲವೆಂದು ತಿಳಿದು, ಚಿತೆಗೆ ಹಾರುವುದನ್ನು ನಿಲ್ಲಿಸುತ್ತಾಳೆ. ಜುಂಜಪ್ಪನ ಸೋದರ ಮಾವಂದಿರಿಗೆ ಇಲ್ಲಿಯೂ ಮುಖಭಂಗವಾಗುತ್ತದೆ. ಜುಂಜಪ್ಪ ಚೇಳೂರನ್ನು ಐದು ತಿಂಗಳ ಕಾಲ ಆಳುತ್ತಾನೆ.

ಹುಲಿಕುಂಟೆ ತಮ್ಮಣ್ಣನೆಂಬುವನ ಕಾವಲು ಸಮೃದ್ಧವಾದ ಹುಲ್ಲಿನಿಂದ ತುಂಬಿಕೊಂಡಿತ್ತು. ಅದರಲ್ಲಿ ಜುಂಜಪ್ಪ ತನ್ನ ದನಗಳನ್ನು ಮೇಯಿಸಬೇಕೆಂದು ಯೋಚಿಸಿ, ಮಾರಣ್ಣ ಮೈಲಾರಣ್ಣನಿಗೆ ದನಗಳನ್ನು ಅಲ್ಲಿಗೆ ಹೊಡೆದುಕೊಂಡು ಹೋಗಲು ಹೇಳಿದ ಮತ್ತು ಜುಂಜಪ್ಪ ಹುಲ್ಲುಗಾವಲಿಗೆ ದುಡ್ಡು ಕೊಡಲು ತಾಯಿಯನ್ನು ಕೇಳುತ್ತಾನೆ. ಚಿನ್ನಮ್ಮ ಹುಲಿಕುಂಟೆ ತಮ್ಮಣ್ಣ ಬಹಳ ನೀಚ. ಅವನ ಹುಲ್ಲುಗಾವಲಿಗೆ ಹೋಗಬೇಡ ಎಂದು ಹೇಳುತ್ತಾಳೆ. ಕೋಪಗೊಂಡ ಜುಂಜಪ್ಪ ಮೂರು ತಿಂಗಳು ಮಲಗುತ್ತಾನೆ. ಆಗ ಏಳುಗೂಡಿನ ಎತ್ತುಗಳ ಹಾಗೂ ಆಕಳುಗಳ ಹತ್ತಿರ ಹದ್ದುಗಳು ಹಾರಾಡುತ್ತಿರುತ್ತವೆ. ಮಾರಣ್ಣ ಮೈಲಾರಣ್ಣರಿಗೆ ಬಹಳೇ ಚಿಂತೆಯಾಗುತ್ತದೆ. ಬಡಮೈಲ, ಮಾರಣ್ಣ ಮತ್ತು ಮೈಲಾರಣ್ಣ ಊಟ ನಿದ್ದೆ ಬಿಟ್ಟು ಹದ್ದುಗಳನ್ನು ಓಡಿಸುತ್ತಾರೆ. ಜುಂಜಪ್ಪನ ಪಶುಸಂಪತ್ತಿಗೆ ಬಂದೊದಗಿದ ಆಪತ್ತನ್ನು ಕಂಡ ಗೌರಸಂದ್ರದ ಮಾರಕ್ಕ ಜುಂಜಪ್ಪನಿಗೆ ಎಚ್ಚರವಾಗುವಂತೆ ಮಾಡುತ್ತಾಳೆ. ವಿಷಯ ತಿಳಿದ ಜುಂಜಪ್ಪ ಹುಲಿಕುಂಟೆ ತಮ್ಮಣ್ಣನ ಕಾವಲಿಗೆ ಹೋಗುತ್ತಾನೆ. ಕಾವಲು ಕಾಯುತ್ತಿದ್ದ ನಾಯಕರಿಗೆ ದನಗಳನ್ನು ಹುಲ್ಲುಗಾವಲಿಗೆ ಬಿಡಲು ಹೇಳುತ್ತಾನೆ. ಅದಕ್ಕೆ ಅವರು ನಿರಾಕರಿಸುವರು. ಇದರಿಂದ ಸಿಟ್ಟಿಗೆದ್ದ ಜುಂಜಪ್ಪ ಅವರನ್ನು ಹೊಡೆದು, ದನಗಳನ್ನು ಒಳಗೆ ಬಿಡುತ್ತಾನೆ.

ವಿಷಯ ತಿಳಿದ ಹುಲಿಕುಂಟೆ ತಮ್ಮಣ್ಣ ಜುಂಜಪ್ಪನಿಗೆ ತಕ್ಕಪಾಠ ಕಲಿಸಬೇಕೆಂದು ಎರಡು ಭೂತಗಳನ್ನು ಕರೆದು ಒಂದು ಭೂತವನ್ನು ಜುಂಜಪ್ಪನ ಎತ್ತುಗಳು ಹತ್ತಿರ ಇನ್ನೊಂದನ್ನು ಮಾರಣ್ಣನ ಬಳಿಗೆ ಕಳಿಸುತ್ತಾನೆ. ಎತ್ತುಗಳ ಹತ್ತಿರ ಹೋದ ಭೂತಕ್ಕೆ ಏನನ್ನು ಮಾಡಲಾಗದೇ ಸುಮ್ಮನಾಗುತ್ತದೆ. ಆದರೆ ಮಾರಣ್ಣನ ಹತ್ತಿರ ಹೋದ ಭೂತ ಅವನನ್ನು ಮೂರ್ಛೆಗೊಳಿಸುತ್ತದೆ. ಜುಂಜಪ್ಪ ಗೌರಸಂದ್ರ ಮಾರಕ್ಕನ ಮಾರ್ಗದರ್ಶನದಂತೆ ಭೂತಗಳನ್ನು ಕಟ್ಟಿ ಹಾಕುತ್ತಾನೆ. ಈ ವಿಷಯ ತಮ್ಮಣ್ಣನಿಗೆ ತಿಳಿಯುತ್ತದೆ. ಹುಲಿಕುಂಟೆ ಮಾರಣ್ಣ ಇಷ್ಟಕ್ಕೆ ಸುಮ್ಮನಾಗದೇ ಮಾರಣ್ಣ ಮೈಲಣ್ಣ ಹಾಗೂ ಜುಂಜಪ್ಪನ ಪ್ರಾಣ ತೆಗೆಯಲು ಬೇಕಾದ ಮಾಟವನ್ನು ಸಾಣಿಕೆರೆ ಪುಟ್ಟಣ್ಣನ ಮೂಲಕ ಮಾಡಿಸುತ್ತಾನೆ. ಗೌರಸಂದ್ರ ಮಾರಕ್ಕ ಆ ಮಾಟವನ್ನು ವಿಫಲ

[illegible]

ಗೊಳಿಸುತ್ತಾಳೆ. ಜುಂಜಪ್ಪ ಮತ್ತು ಹುಲಿಕುಂಟೆ ತಮ್ಮಣ್ಣ ಹಾಗೂ ಸಾಣಿಕೆರೆ ಪುಟ್ಟಣ್ಣನನ್ನು ಸಾಯಿಸುತ್ತಾಳೆ. ತನ್ನ ದನಗಳನ್ನು ಹುಲ್ಲುಗಾವಲಿಗೆ ಬಿಟ್ಟು ಚೆನ್ನಾಗಿ ಮೇಯಿಸುತ್ತಾನೆ.

ಸುಮಾರು ೧೫-೧೬ ನೆಯ ಶತಮಾನಕ್ಕೆ ಎತ್ತಪ್ಪ ಜುಂಜಪ್ಪ ಕಾಡುಗೊಲ್ಲರ ಸಮುದಾಯದಲ್ಲಿ ಹುಟ್ಟಿ ಪಶುಪಾಲನೆಯನ್ನೇ ತಮ್ಮ ಮೂಲ ವೃತ್ತಿಯಾಗಿಸಿಕೊಂಡು ಅನೇಕ ಪವಾಡಗಳ ಮೂಲಕ ಆ ಸಮುದಾಯದ ಸಾಂಸ್ಕೃತಿಕ ವೀರರಾಗಿ, ದೈವಗಳಾಗಿ, ಆರಾಧಿಸಲ್ಪಡುತ್ತಿದ್ದಾರೆ.

"ಒಂದು ಕಾಲಕ್ಕೆ ಭಾರತದ ಮಹೋನ್ನತ ಸಂಸ್ಕೃತಿಯ ಪ್ರತೀಕವಾಗಿದ್ದ ಪಶುಪಾಲನೆಯ ಕೊನೆಯ ದಿನಗಳ ಚಿತ್ರಣ ನೀಡುವ ದೃಷ್ಟಿಯಿಂದ ಜುಜಂಪ್ಪನ ಕಾವ್ಯಕ್ಕೆ ವಿಶೇಷ ಮಹತ್ವವಿದೆ. ಪಶುಪಾಲನೆಯನ್ನು ಬಿಟ್ಟು, ಕುರಿಸಾಕಾಣಿಕೆಯ ಹೊರಳು ದಾರಿಯಲ್ಲಿರುವ ಸೂಕ್ಷ್ಮಚಿತ್ರವನ್ನು ಕಾವ್ಯ ನೀಡುತ್ತದೆ. ಕಳೆದ ಶತಮಾನದ ಪಶುಪಾಲನೆಯನ್ನು ಕಣ್ಣಾರೆ ಕಂಡ ಬುಕ್ಯಾನನ್‌ನ ವಿವರಗಳು ಜುಂಜಪ್ಪನ ಕತೆಯ ವಿವರಗಳು ಸಮೀಪದ ಹೋಲಿಕೆ ಹೊಂದಿರುವುದನ್ನು ಗುರುತಿಸಬಹುದು.

ಪಶುಪಾಲನೆಗೋಸ್ಕರ ತಮ್ಮ ಇಡಿ ಬದುಕನ್ನೇ ಧಾರೆ ಎರೆದುಕೊಂಡು ದೇವರ ದಯಾಮಾರ, ಕೆಂಪಿಲೆ ಮಲೆಗೊಂಡ (ಕೆಂಗುರಿ ಮಲ್ಲೇಗೌಡ) ಜುಂಜಪ್ಪ ಎಂದೂ ಸಂಸಾರಕ್ಕೆ ಅಂಟಿಕೊಂಡವರಲ್ಲ. ಜುಂಜಪ್ಪನ ತಾತ ದೇವರದಯಾಮಾರನಂತೂ ಮದುವೆಯಾಗಬೇಕೆಂಬುದನ್ನೇ ಮರೆತು, ಜನಸಂಪರ್ಕವನ್ನೇ ಕಳೆದುಕೊಂಡು, ಅಭೇದ್ಯವಾದ ಕೀಕಾರಣ್ಯದ ಮಧ್ಯ ಪಶುಪಾಲನೆಯಲ್ಲಿಯೇ ಕಾಲಕಳೆದವನು. ಇವನ ಮದುವೆಗೋಸ್ಕರ ಕಾಡೆಲ್ಲ ಅಲೆದರೂ ಸಿಗದಿದ್ದಾಗ ಅನಿವಾರ್ಯವಾಗಿ ಬಾಕಿಗೆ ಧಾರೆ ಎರೆಯಬೇಕಾಗುತ್ತದೆ.

ಜೀವನದಲ್ಲಿ ಹತಾಶಳಾಗಿ ದೇವರ ದಯಾಮಾರನನ್ನು ಹುಡುಕುತ್ತಾ ಹೊರಟ ಅವನ ಪತ್ನಿ ಕಂಬಕ್ಕ ಕಾಡಿನಹಾದಿ ತಪ್ಪಿಸುವ ಭಯಾನಕವಾದ ದುರ್ಗಮವಾದ ಕಣ್ಣಿಗೆ ಕಟ್ಟುವಂತಹ ಕಾಡಿನ ಚಿತ್ರಣ ದೊರೆಯುತ್ತದೆ. ಒಂದು ಕಾಲಕ್ಕೆ ಕೀಕಾರಣ್ಯವಾಗಿದ್ದ ಜಾಗಗಳೆಲ್ಲಾ ಇಂದು ಬಯಲು ಸೀಮೆಗಳಾಗಿ ಪಶುಪಾಲಕ ಸಂಸ್ಕೃತಿಯೇ ನಾಶವಾಗಿರುವ ದುರಂತವನ್ನು ಗ್ರಹಿಸಬಹುದು.

ದೇವರದಯಾಮಾರ ದನಗಳನ್ನು ಎಷ್ಟು ಸೊಗಸಾಗಿ ತರಬೇತುಗೊಳಿಸಿರುತ್ತಾನೆಂದರೆ ಹುಲಿಬಂದರೆ ಅವುಗಳನ್ನು ಕೊಂಬಿನಿಂದಲೇ ಸಿಗಿದುಬಿಡುವ ಉಗ್ರತೆಯನ್ನೂ, ಯಜಮಾನನ ಮಾತು ಕೇಳುವ ಸಂದರ್ಭದಲ್ಲಿ ಅತ್ಯಂತ ಸಾಧುವಾಗಿ ವರ್ತಿಸುವ ಪರಿಯನ್ನು ಕಲಿಸಿರುವುದನ್ನು ನೋಡಿದರೆ ಪಶುಪಾಲನೆಯಲ್ಲಿ ಅವರು ಪಡೆದ ಕುಶಲತೆಯು ಅರಿವಾಗುತ್ತದೆ.

ದನಗಳನ್ನು ಹೆಸರಿಡಿದು ಆತ್ಮೀಯತೆಯಿಂದ ಕರೆಯುವ ಪರಿಯನ್ನು ಗಮನಿಸಿದರೆ ಅವರು ದನಗಳನ್ನು ಎಷ್ಟು ಪ್ರೀತಿಸುತ್ತಿದ್ದರು ಎಂಬುದರ ಅರಿವಾಗುವುದರ ಜೊತೆಗೆ ಅವು ಅವರ ಪಾಲಿಗೆ ಪಶುಗಳಲ್ಲ ಶಿಶುಗಳು ಎಂಬ ಭಾವನೆ ಮೂಡುತ್ತದೆ. ಜುಂಜಪ್ಪನ ತಂದೆಯೂ (ಕೆಂಗುರಿ ಮಲ್ಲಣ್ಣ) ಮದುವೆಯಾಗಿ ಅರಿಷಿಣದ ಮೈ ಆಗಿರುವುದಕ್ಕಿಂತ ಮುಂಚೆಯೇ ದನಕಾಯಲು ತಳುಕಿನ ಗುಡ್ಡಕ್ಕೆ ಹೋದವನು ಹನ್ನೆರಡು ವರ್ಷವಾದರೂ ಬರುವುದಿಲ್ಲ ನಂತರ ಊರಿಗೆ ಬಂದರೂ ಅವನಿಗೆ ದನಗಳದೇ ಧ್ಯಾನ".[೮]

ಪಶುಪಾಲನೆಯ ವೃತ್ತಿ ತಮ್ಮ ಆರಾಧ್ಯ ದೈವದ ವೃತ್ತಿಯಾಗಿದೆ ಎಂದು ತಿಳಿದ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು ಅದನ್ನು ಉಳಿಸಿ ಬೆಳೆಸಿಕೊಳ್ಳಲು ಹೋರಾಡಿ ಜೀವತ್ತೆತ್ತುರುವುದು ನಿಜಕ್ಕೂ ಅವಿಸ್ಮರಣೆಯವಾದದ್ದು. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಿಗೆ ಐಶ್ವರ್ಯ, ಅಂತಸ್ತು, ಹೆಂಡತಿ ಮಕ್ಕಳಿಗಿಂತ ಅವರ ಪಶು ಸಂಪತ್ತೆ ಶ್ರೇಷ್ಠವಾಗಿತ್ತು ಎಂಬುದನ್ನು ಕಾವ್ಯಗಳ ಹಾಗೂ ಕಥೆಗಳ ಮೂಲಕ ಕಂಡುಕೊಳ್ಳುತ್ತವೆ.

ಅಡಿಟಿಪ್ಪಣಿಗಳು

೧. ದೇವಿ ಪ್ರಸಾದ ಚಟ್ಟೋಪಾಧ್ಯಾಯ (ಮೂಲ) ಜಿ. ಕುಮಾರಪ್ಪ (ಅನು) ಮಾತೆಯರು ಮಾನ್ಯರಾಗಿದ್ದಾಗ, ಪು. ೧೫

೨. ಅದೇ ಪು. ೨೧

೩. ಮೀರಾಸಾಬಿಹಳ್ಳಿ ಶಿವಣ್ಣ, ೨೦೦೫, ಕಾಡುಗೊಲ್ಲರ ಬುಡಕಟ್ಟು ವೀರರು, ಪು. ೮೫ ಮತ್ತು ೮೬

೪. ಅದೇ ಪು. ೮೮

೫. ಚಿದಾನಂದ ಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೨೮೨

೬. EC. IX, HL ೧೧, ೧೦೪೧, ಶೇಷಶಾಸ್ತ್ರಿ ಕರ್ನಾಟಕದ ವೀರಗಲ್ಲುಗಳು ಪು. ೧೪೨

೭. ಅದೇ ಪು. ೧೮೦

೮. ಡಾ. ಮೀರಾಸಾಬಿಹಳ್ಳಿ ಶಿವಣ್ಣ ಕಾಡುಗೊಲ್ಲರ ಬುಡಕಟ್ಟು ವೀರರು, ೨೦೦೫, ಪು. ೪೬೨-೬೩

ಅಧ್ಯಾಯ ನಾಲ್ಕು

ಸಾಮಾಜಿಕ ಸಂರಚನೆಯಲ್ಲಿ ಕಾಡುಗೊಲ್ಲರು

೪.೧ ಹುಟ್ಟು

೪.೨ ನಾಮಕರಣ ಶಾಸ್ತ್ರ

೪.೩ ಜವುಳ

೪.೪ ಋತುಮತಿ

೪.೫ ಮದುವೆ

೪.೬ ಸಾವು

೪.೭ ಆಹಾರ ಪದ್ಧತಿ

೪.೮ ವಸತಿ ವ್ಯವಸ್ಥೆ

೪.೯ ಕುಟುಂಬ

೪.೧೦ ಉಡುಗೆ - ತೊಡುಗೆಗಳು

೪.೧೧ ಬೆಡಗುಗಳು

೪.೧೨ ನ್ಯಾಯ ಪದ್ಧತಿ

೪.೧೩ ರಾಜಕೀಯ ವ್ಯವಸ್ಥೆ

೪.೧೪ ವೈದ್ಯಪದ್ಧತಿ

೪.೧೫ ವರ್ತಮಾನದಲ್ಲಿ ಕಾಡುಗೊಲ್ಲರು

೪.೧೬ ವಾರ್ಷಿಕಾವರ್ತನ ಆಚರಣೆಗಳು

೪.೧೭ ಜಾತ್ರೆಗಳು

ಅಧ್ಯಾಯ ೪

ಸಾಮಾಜಿಕ ಸಂರಚನೆಯಲ್ಲಿ ಕಾಡುಗೊಲ್ಲರು

ಒಂದು ಸಮುದಾಯದ ಆಚಾರ-ವಿಚಾರ, ನಂಬಿಕೆ, ಪದ್ಧತಿ ಅವರು ಬದುಕುವ ರೀತಿ-ನೀತಿ, ಉಡುವ ವಸ್ತ್ರ, ಆಹಾರ ಪದ್ಧತಿ, ವಾಸಿಸುವ ಮನೆಗಳ ವಿನ್ಯಾಸ ಮುಂತಾದ ಅನೇಕ ವಿಚಾರಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಅದನ್ನು ಸಮುದಾಯದ 'ಸಂಸ್ಕೃತಿ' ಅಧ್ಯಯನ ಎಂದೇ ಹೇಳುತ್ತೇವೆ. ಕಾಡುಗೊಲ್ಲರು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಅನುಸರಿಸಿಕೊಂಡು ಬಂದವರು. ಅವರ ಸಮುದಾಯದಲ್ಲಿ ಹುಟ್ಟಿನಿಂದ ಸಾಯುವವರೆಗಿನ ಸಂಸ್ಕಾರಗಳು ವಿಶಿಷ್ಟವಾಗಿರುವುದು ಕಂಡುಬರುತ್ತವೆ. ನಗರೀಕರಣ, ಆಧುನೀಕರಣ, ವೈಜ್ಞಾನೀಕರಣದ ಪ್ರಭಾವ ಪ್ರೇರಣೆಯಿಂದ ಕಾಡುಗೊಲ್ಲರ ಸಂಸ್ಕೃತಿಯ ಮೇಲೆ ಅಗಾಧವಾದ ಪರಿಣಾಮಗಳು ಆಗುತ್ತಿವೆ. ಅನೇಕ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದ್ದ ಕೆಲಸಾಂಪ್ರದಾಯಿಕ ಆಚರಣೆಗಳು ಕಡಿಮೆಯಾಗುತ್ತಿವೆ ಎಂಬುದನ್ನು ಗಮನಿಸಬಹುದು.

ಪ್ರತಿಯೊಂದು ಸಮುದಾಯದಲ್ಲಿ ಕಂಡುಬರುವ ಅನೇಕ ಆಚರಣೆ ಹಾಗೂ ಸಂಪ್ರದಾಯಗಳು ಅವರ ಉತ್ಪಾದನೆ ಹಾಗೂ ಆರ್ಥಿಕ ನೀತಿಯ ಮೇಲೆಯೇ ರೂಪಗೊಂಡಿರುತ್ತವೆ. ಆರಂಭದ ಕಾಲದಲ್ಲಿ ಆದಿಮಾನವರು ಬೇಟೆಯ ಮೂಲಕ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು ಎಂಬುದನ್ನು ನಾವು ಕಂಡು ಕೊಂಡಿದ್ದೇವೆ. ಬೇಟೆ ವೃತ್ತಿಯಿಂದ ಕೃಷಿ ವೃತ್ತಿಯನ್ನು ಅನುಸರಿಸಲು ಪ್ರಾರಂಭಿಸಿದ ಮಾನವರ ಗುಂಪು ಹಂತಹಂತವಾಗಿ ಬೆಳೆಯುತ್ತಲೇ ಹೋಯಿತು. ಈ ಸಮುದಾಯಗಳಿಂದಲೇ ನಾಗರಿಕತೆ ನಿರ್ಮಾಣವಾಯಿತು. ಕೃಷಿಕ ವೃತ್ತಿಯಲ್ಲಿ ನಿರತವಾದ ಕುಟುಂಬಗಳೇ ಪಶುಪಾಲನೆಯನ್ನು ಮಾಡತೊಡಗಿದವು. ಬೇಟೆ ವೃತ್ತಿಯಿಂದ ಪಶುಪಾಲನೆಗಿಳಿದ ಆದಿಮಾನವರ ಗುಂಪುಗಳೇ ಆದಿವಾಸಿಗಳಾಗಿಯೇ ಉಳಿಯಬೇಕಾಗಿತು. ಪಶುಪಾಲನೆ ಮತ್ತು ಬೇಟೆಯಲ್ಲಿ ತೊಡಗಿಸಿಕೊಂಡ ಅನೇಕ ಆದಿವಾಸಿ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ,

[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]

ಶೈಕ್ಷಣಿಕವಾಗಿ ಮುಂದುವರೆಯಲಿಕ್ಕೆ ಸಾಧ್ಯವಾಗಲಿಲ್ಲವೆಂದೇ ಹೇಳಬೇಕಾಗುತ್ತದೆ. ಬೇಟೆಯಿಂದ ಕೃಷಿಯನ್ನು ಅವಲಂಬಿಸಿ ಹಂತಹಂತವಾಗಿ ಬೆಳೆದ ಅನೇಕ ಗುಂಪುಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬೆಳೆದವು ಎಂದು ಅರಿತುಕೊಳ್ಳಬೇಕಾಗುತ್ತದೆ.

ದೇವಿಪ್ರಸಾದ ಚಟ್ಟೋಪಾಧ್ಯಾಯರು ತಮ್ಮ ಅಧ್ಯಯನದ ಮೂಲಕ "ಕೃಷಿಯಲ್ಲಿ ನಿರತವಾದ ಸಮುದಾಯಗಳಿಂದಲೇ ಈಜಿಪ್ತ, ಹರಪ್ಪಾ-ಮೊಹೆಂಜೋದಾರೋ ನಗರಗಳು ಹುಟ್ಟಿಕೊಂಡವು" ಎಂಬುದನ್ನು ವಿವರಿಸುತ್ತಾರೆ. ಬೇಟೆ, ಕೃಷಿ ಹಾಗೂ ಪಶುಪಾಲನೆ ವೃತ್ತಿಗಳನ್ನೇ ಪ್ರಧಾನವಾಗಿಟ್ಟುಕೊಂಡು ಜೀವನ ಸಾಗಿಸುತ್ತಿರುವ ಆದಿವಾಸಿ ಸಮುದಾಯಗಳ ಸಾಮಾಜಿಕ ಸಂರಚನೆಯನ್ನು ಗಮನಿಸಿದಾಗ ಸಾಮಾನ್ಯವಾಗಿ ಬೇಟೆಯನ್ನೇ ಅವಲಂಬಿಸಿ ಬದುಕುತ್ತಿದ್ದ ಆದಿವಾಸಿ ಸಮುದಾಯಗಳ ಸಾಮಾಜಿಕ ಸಂರಚನೆ ಅಲ್ಪಸ್ವಲ್ಪ ಬದಲಾವಣೆ ಹೊಂದಿದ್ದರೂ ಒಂದೇ ರೀತಿಯಾಗಿರುವುದು ಕಂಡುಬರುತ್ತದೆ. ಹಾಗೆಯೆ ಪಶುಪಾಲನೆಯನ್ನೇ ಪ್ರಧಾನ ವೃತ್ತಿಯಾಗಿ ಸ್ವೀಕರಿಸಿ ಬದುಕುತ್ತಿರುವ ಸಮುದಾಯಗಳ ಸಾಮಾಜಿಕ ಸಂರಚನೆ ಮೇಲ್ನೋಟಕ್ಕೆ ಒಂದೇ ತೆರನಾಗಿ ಕಾಣುತ್ತದೆ. ಬೇಟೆ ಮತ್ತು ಪಶುಪಾಲನೆಯನ್ನು ಅನುಸರಿಸಿ ಬುದುಕುತ್ತಿರುವ ಅನೇಕ ಸಮುದಾಯಗಳು ಆರ್ಥಿಕವಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ತೀರ ಹಿಂದುಳಿದಿದ್ದರಿಂದ ಮತ್ತು ಅವರ ಆರ್ಥಿಕ ಸ್ಥಿತಿಗತಿಗಳ ಮೇಲೆಯೆ ಸಾಮಾಜಿಕ ಸಂರಚನೆ ಕಟ್ಟಿಕೊಂಡಿರುವುದು ಕಂಡುಬರುತ್ತದೆ. ಕಾಡುಗೊಲ್ಲರು ಆರ್ಥಿಕವಾಗಿ ಬಹಳ ಹಿಂದುಳಿದ ಸಮುದಾಯವಾದದ್ದರಿಂದ ಅವರ ಬದುಕಿನ ಪ್ರತಿಯೊಂದು ಆಚರಣೆ, ಸಂಪ್ರದಾಯಗಳು ಸರಳವಾಗಿರುವುದನ್ನು ಗಮನಿಸಬಹುದು.

೪.೧ ಹುಟ್ಟು

ಪ್ರತಿಯೊಂದು ಸಮುದಾಯ ಮಗುವಿನ ಜನನವನ್ನು ಅತ್ಯಂತ ಸಂಭ್ರಮ ಸಂತೋಷದಿಂದ ಸ್ವೀಕರಿಸುವುದನ್ನು ಕಾಣುತ್ತೇವೆ. ಬುಡಕಟ್ಟು ಸಮುದಾಯಗಳಲ್ಲಿ ಜನನ ಸಂಸ್ಕಾರಗಳು ಸ್ತ್ರೀ ಗರ್ಭಿಣಿಯಾದ ದಿನದಿಂದಲೇ ಪ್ರಾರಂಭವಾಗುತ್ತವೆ. ಅಲ್ಲಿಂದಲೇ ಅನೇಕ ಆಚರಣೆಗಳೂ ನಡೆಯುತ್ತವೆ. ಸಾಮಾನ್ಯವಾಗಿ ಎಲ್ಲ ಬುಡುಕಟ್ಟುಗಳು ಸೂತಕ, ಮುಟ್ಟು ಅಥವಾ ಮೈಲಿಗೆಯನ್ನು ಅತ್ಯಂತ ಕಟ್ಟುನಿಟ್ಟಿನಿಂದ ಪಾಲಿಸುತ್ತಾರೆ. ಹೆರಿಗೆ ಸಂದರ್ಭದಲ್ಲಿ ಆಚರಿಸುವ ಮೈಲಿಗೆ ಮಾನವನ ಹುಟ್ಟಿಗೆ ಸಂಬಂಧರಿಸಿದ ಮೊದಲ ಮೈಲಿಗೆ. ಕಾಡುಗೊಲ್ಲರು ಈ ಮೈಲಿಗೆಯನ್ನು ಅತ್ಯಂತ ಕಟ್ಟುನಿಟ್ಟಿನಿಂದ ಪಾಲಿಸುತ್ತಾರೆ. ಒಂದರ್ಥದಲ್ಲಿ ಸ್ತ್ರೀ ಗರ್ಭಿಣಿಯಾದಾಗಿನಿಂದ ಅವಳು ಮೈಲಿಗೆಯವಳು ಎಂಬ ಭಾವನೆ ಕಾಡುಗೊಲ್ಲರಲ್ಲಿದೆ. ಮಕ್ಕಳನ್ನು ಪಡೆಯದಿದ್ದರೆ ಮುಕ್ತಿ ಇಲ್ಲವೆಂದು ಕಾಡುಗೊಲ್ಲರಲ್ಲಿಯ ನಂಬಿಕೆ.

ಕಾಡುಗೊಲ್ಲರಲ್ಲಿ ಹುಟ್ಟಿನ ಬಗೆಗೆ ಅವರದೆ ಆದ ಆಚರಣೆಗಳಿವೆ. ಹೆಣ್ಣು ಗರ್ಭಿಣಿಯಾದ ಮೇಲೆ ಅವಳು ತನ್ನ ಹಟ್ಟಿಯೊಳಗೆ ಒಂಬತ್ತು ತಿಂಗಳು ಕಳೆಯುತ್ತಾಳೆ. ಒಂಬತ್ತು ತಿಂಗಳು ಮುಗಿಯುತ್ತಿದ್ದಂತೆ ಅವಳಿಗಾಗಿಯೆ ಅವರ ಹಟ್ಟಿಯ ಹೊರಗೆ ನಿರ್ಮಿಸಿದ ಗುಡಿಸಲಿಗೆ ನಾಲ್ಕಾರು ಜನ ಹಿರಿಯ ಹೆಂಗಸರು

[illegible]

[illegible]

[illegible]

[illegible]

[illegible]

[illegible]

ಗರ್ಭಿಣಿಯನ್ನು ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟುಬರುತ್ತಾರೆ. ಹೆರಿಗೆಗಾಗಿ ನಿರ್ಮಿಸಿದ ಗುಡಿಸಲು ವೃತ್ತಾಕಾರದಲ್ಲಿರುತ್ತದೆ. ಅದರ ಕೆಳಗೆ ಹುಲ್ಲು ಹಾಸಿರುತ್ತಾರೆ. ಗುಡಿಸಲು ಪ್ರವೇಶಿಸಲು ಚಿಕ್ಕದಾದ ಬಾಗಿಲು ಮಾಡಿರುತ್ತಾರೆ. ಗುಡಿಸಲಿನ ಒಳಗೆ ಇಬ್ಬರು ಮಲಗಲು ಹಾಗೂ ಒಬ್ಬರು ಕುಳಿತುಕೊಳ್ಳುವಷ್ಟು ಸ್ಥಳ ಮಾತ್ರ ಇರುತ್ತದೆ. ಗಾಳಿ ಬೆಳಕು ಒಳಪ್ರವೇಶಿಸದಂತೆ ಮತ್ತು ಒಳಭಾಗದಲ್ಲಿ ಬೆಚ್ಚಗೆ ಇರುವಂತೆ ಗುಡಿಸಲನ್ನು ನಿರ್ಮಿಸಿರುತ್ತಾರೆ. ಗರ್ಭಿಣಿ ಅಥವಾ ಬಾಣಂತಿಯ ಜೊತೆಗೆ ಹೆಚ್ಚು ಮಾತನಾಡಬಾರದೆಂಬ ಉದ್ದೇಶದಿಂದ ಹೆಚ್ಚು ಜನರು ಗುಡಿಸಲೊಳಗೆ ಕುಳಿತುಕೊಳ್ಳಬಾರದೆಂಬ ಕಾರಣದಿಂದ ಗುಡಿಸಲನ್ನು ಚಿಕ್ಕದಾಗಿ ಕಟ್ಟಿರುತ್ತಾರೆ. ಇದು ಅವರ ಸಂಪ್ರದಾಯ. ಇತರೆ ಬುಡಕಟ್ಟುಗಳಲ್ಲಿ ಪ್ರಚಲಿತವಿರುವಂತೆ ಕಾಡುಗೊಲ್ಲರೂ ನುರಿತ ಸೂಲಗಿತ್ತಿಯರಿಂದ ಹೆರಿಗೆ ಮಾಡಿಸಿಕೊಳ್ಳುತ್ತಾರೆ. ಹೆರಿಗೆಯಾದ ನಂತರ ಬಾಣಂತಿ ಮತ್ತು ಮಗು ಮೂರು ತಿಂಗಳವರೆಗೆ ಮೈಲಿಗೆಯವರು ಎಂದು ತಿಳಿದುಕೊಳ್ಳುತ್ತಾರೆ. ಬಾಣಂತಿ ಮತ್ತು ಮಗು ತಿಂಗಳವರೆಗೆ ಆ ಹೆರಿಗೆ ಗುಡಿಸಲಿನಲ್ಲಿಯೆ ವಾಸವಾಗಿರಬೇಕು. ಬಾಣಂತಿಯರನ್ನು ನೋಡಬಾರದು ಮತ್ತು ಮಾತನಾಡಿಸಬಾರದು ಎಂಬ ನಿಯಮ ಇದೆ. ಬಾಣಂತಿ ಮತ್ತು ಮಗುವಿಗೆ ಬೇಕಾದ ವಸ್ತುಗಳನ್ನು ಒಂದು ಪುಟ್ಟಿ ಅಥವಾ ಮೊರದಲ್ಲಿಟ್ಟು ಕೊಡುತ್ತಾರೆ. ಹೆರಿಗೆಯಾದ ಎರಡನೆಯ ದಿನ ಗುಡಿಸಲನ್ನು ಸ್ವಚ್ಛಗೊಳಿಸುತ್ತಾರೆ. ಹೆರಿಗೆಯಾದ ಎರಡನೆಯ, ಮೂರನೆಯ, ಐದನೆಯ ಮತ್ತು ಏಳನೆಯ ದಿನಕ್ಕೆ ಬಾಣಂತಿ ಕುಳಿತ ಅಥವಾ ಮಲಗಿದ ಸ್ಥಳವನ್ನು ಬದಲಾಯಿಸಬೇಕೆಂಬ ನಿಯಮ ಕಾಡುಗೊಲ್ಲರಲ್ಲಿದೆ. ಬದಲಾಯಿಸಿದ ಸ್ಥಳವನ್ನು ಸಗಣಿಯಿಂದ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ಬಾಣಂತಿ ಸ್ಥಳವನ್ನು ಬದಲಾಯಿಸುವುದಕ್ಕಾಗಿ ಅನುಕೂಲವಾಗಿರುವಂತೆ ಗುಡಿಸಲನ್ನು ನಿರ್ಮಿಸಿರುತ್ತಾರೆ. ಹೆರಿಗೆಯಾದ ಹನ್ನೆರಡನೆಯ ದಿನ ಬಾಣಂತಿ ತನ್ನ ಮಗುವಿನೊಂದಿಗೆ ತನ್ನ ಹಟ್ಟಿಯ ಮೂಡಲ ದಿಕ್ಕಿಗೆ ಬರುತ್ತಾಳೆ. ಆಗ ಆಕೆಯ ಗಂಡ ತನ್ನ ಕುಲದೇವರ ದೇವಸ್ಥಾನಕ್ಕೆ ಹೋಗುತ್ತಾನೆ ಅಥವಾ ಆ ಹಟ್ಟಿಯಲ್ಲಿರುವ ಪೂಜಾರಿಯಿಂದ ಜನ್ನಿಗೆ ಕುರಿಯ ಹಾಲನ್ನು ತರುತ್ತಾನೆ. ಮೈಲಿಗೆಯನ್ನು ಕಳೆದುಕೊಳ್ಳಲು ಕಾಡುಗೊಲ್ಲರಿಗೆ ಜನ್ನಿಗೆ ಕುರಿ ಹಾಲು ಅತ್ಯವಶ್ಯವಾಗಿ ಬೇಕೆಬೇಕು. ಜನ್ನಿಗೆ ಕುರಿ ಹಾಲು ಅತ್ಯಂತ ಪವಿತ್ರವಾದದ್ದೆಂದು ಇವರು ನಂಬಿದ್ದಾರೆ ಮತ್ತು ಜನ್ನಿಗೆ ಕುರಿಯನ್ನು ತಮ್ಮ ದೈವ ಎಂದು ಪೂಜಿಸುವ ಪರಂಪರೆಯೂ ಇವರಲ್ಲಿದೆ. ಬಾಣಂತಿ ಮತ್ತು ಮಗು ಜನ್ನಿಗೆ ಕುರಿ ಹಾಲನ್ನು ಸೇವಿಸಿದ ಮೇಲೆ ಅವಳಿಗೆ ವಾಸಿಸುವ ಹಟ್ಟಿಯ ಬೇಲಿಯನ್ನು ದಾಟಿ ಬರಲು ಮಾತ್ರ ಅವಕಾಶ ಮಾಡಿಕೊಡುತ್ತಾರೆ. ಬೇಲಿಯ ಒಳಗೆ ಬಂದ ನಂತರ ಎರಡನೆಯ ಸುತ್ತು ಮತ್ತೆ ಅವಳಿಗೆ ಜನ್ನಿಗೆ ಕುರಿ ಹಾಲು ಕುಡಿಸುತ್ತಾರೆ. ಆಗಲೂ ಅವಳು ವಾಸಿಸುವ ಹಟ್ಟಿಯನ್ನು ಪ್ರವೇಶಿಸುವಂತಿಲ್ಲ. ಮೂರನೆಯ ಹಂತದಲ್ಲಿ, ಗುಡಿಸಲು ಹತ್ತಿರ ಪೂಜಾರಿ ಪೂಜೆ ಮಾಡಿ ಅಲ್ಲಿಯೂ ಜನ್ನಿಗೆ ಕುರಿ ಹಾಲು ಕುಡಿದ ಮೇಲೆ ಗುಡಿಸಲೊಳಗೆ ಪ್ರವೇಶ ಮಾಡುತ್ತಾಳೆ. ಹೊರಗೆ ಕುಡಿದದ್ದು ಹೊರ ಜನ್ನಿಗೆ, ಬೇಲಿಯೊಳಗೆ ಕುಡಿದದ್ದು ಕರು ಜನ್ನಿಗೆ, ಪೂಜಾರಿ ಕೊಟ್ಟದ್ದು ಒಳ ಜನ್ನಿಗೆ ಎಂದು ಕರೆಯುತ್ತಾರೆ. ಒಳ ಜನ್ನಿಗೆ ಹಾಲನ್ನು ಬಾಣಂತಿ ಕುಡಿದು ಬಂದ ಮೇಲೆ ಮಗುವಿನ ತಂದೆ ಪೂಜಾರಿಗೆ ಎಲೆ ಅಡಿಕೆ ಕೊಡುತ್ತಾನೆ. ಎಲೆ ಅಡಿಕೆ ಪಡೆದ ಪೂಜಾರಿ ಮಗುವಿಗೆ

ನಾಮಕರಣ ಮಾಡುತ್ತಾನೆ. ಮೊದಲ ಸಲ ವಾಸಿಸುವ ಹಟ್ಟಿಯನ್ನು ಪ್ರವೇಶಿಸಿದ ಮಗುವಿಗೆ ಪೂಜಾರಿ ಹಟ್ಟಿಯ ದೈವ ಅಥವಾ ರೂಢಿಯಲ್ಲಿರುವ ಹಟ್ಟಿಯ ಹಿರಿಯರ ಹೆಸರನ್ನು ಇಡುತ್ತಾನೆ. ಪೂಜಾರಿ ತಾನು ಪಡೆದ ಎಲೆ ಅಡಿಕೆಯನ್ನು ಎಲ್ಲರಿಗೂ ಹಂಚುತ್ತಾನೆ. ಅಲ್ಲಿಗೆ ಬಾಣಂತಿಯ ಮೈಲಿಗೆ ಮುಗಿಯುತ್ತದೆ.

ಕಾಡುಗೊಲ್ಲರಲ್ಲಿ ಗರ್ಭಿಣಿಯಾದ ಮಹಿಳೆ ಒಂಬತ್ತು ತಿಂಗಳು ತುಂಬಿದ ಮೇಲೆ ಕಡ್ಡಾಯವಾಗಿ ಹೆರಿಗೆಗಾಗಿ ಪ್ರತ್ಯೇಕವಾಗಿ ನಿರ್ಮಿಸಿದ ಗುಡಿಸಲಲ್ಲೆ ಇರಬೇಕಿತ್ತು. ಮಳೆ, ಚಳಿ, ಬಿಸಿಲು, ಗುಡುಗು, ಸಿಡಲು ಯಾವುದೇ ಬಂದರೂ ಅದನ್ನು ಕಾಡುಗೊಲ್ಲರ ಗರ್ಭೀಣಿಯರು ಬಾಣಂತಿಯರು ಸಹಿಸಿಕೊಳ್ಳಲೇ ಬೇಕಾಗುತ್ತಿತ್ತು. ಇದರಿಂದ ಮಹಿಳೆ ಮತ್ತು ಮಗುವಿನ ಆರೋಗ್ಯದ ಮೇಲೆ ಅನೇಕ ದುಷ್ಪರಿಣಾಮಗಳು ಉಂಟಾಗಿ ಬಾಣಂತಿ ಮತ್ತು ಮಗುವಿನ ಸಾವಿನ ಸಂಖ್ಯೆ ಅಧಿಕವಾಗತೊಡಗಿತು. ಕಾಡುಗೊಲ್ಲರ ಹಿರಿಯರಲ್ಲಿ ಈ ವಿಷಯ ಪ್ರಸ್ತಾಪಿಸಿದರೆ "ವಾಸಿಸುತ್ತಿರುವ ಗುಡಿಸಲಿನಲ್ಲಿ ಹೆರಿಗೆಯಾದರೆ ನಮ್ಮ ಆರಾಧ್ಯ ದೈವಕ್ಕೆ ಮೈಲಿಗೆ ತಗಲುತ್ತದೆ. ಇದರಿಂದ ನಮ್ಮ ದೈವ ಕೋಪಗೊಂಡು ನಮಗೆ ಅನೇಕ ತೊಂದರೆಗಳನ್ನು ಕೊಡುತ್ತದೆ ಮತ್ತು ಮನೆಯಲ್ಲಿ ಹೆರಿಗೆಯಾದರೆ ಬಾಣಂತಿ ಅನಿವಾರ್ಯವಾಗಿ ಮನೆ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಅವಳಿಗೆ ವಿಶ್ರಾಂತಿ ಸಿಗುವುದಿಲ್ಲ. ಊರ ಹೊರಗೆ ಇದ್ದರೆ ಅವಳಿಗೆ ಯಾವ ತೊಂದರೆಗಳೂ ಇರುವುದಿಲ್ಲ. ಆ ಕಾರಣಕ್ಕಾಗಿ ಈ ಪರಂಪರೆ ನಮ್ಮಲ್ಲಿ ಬೆಳೆದು ಬಂದಿದೆ ಎಂದು ಹೇಳುತ್ತಾರೆ. ಗರ್ಭಿಣಿಯರನ್ನು ಆರೈಕೆ ಮಾಡಿ ಹೆರಿಗೆ ಮಾಡಿಸಿ ಮಗು ಹಾಗೂ ಬಾಣಂತಿಯನ್ನು ಸರಿಯಾಗಿ ನೋಡಿಕೊಳ್ಳದೆ ಅವರನ್ನು ಅವರ ಪಾಲಿಗೆ ಬಿಡುವುದು ಮಾನವೀಯ ಲಕ್ಷಣಗಳಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಪ್ರಭಾವ ಮತ್ತು ಅಕ್ಷರಸ್ಥರ ಒತ್ತಾಯಕ್ಕಾಗಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವ ಸಂಪ್ರದಾಯ ವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಆಸ್ಪತ್ರೆಗಳಿಂದ ಬಂದ ಬಾಣಂತಿ ಹಾಗೂ ಮಗುವಿನ ಮೈಲಿಗೆ ಕಳೆಯುವ ಆಚರಣೆ ನಡೆಯುತ್ತವೆ. ಇತ್ತಿತ್ತಲಾಗಿ ಬಾಣಂತಿ ಹಾಗೂ ಮಗುವಿನ ಸಾವಿನ ಪ್ರಮಾಣ ಕಡಿಮೆಯಾಗಿದೆ. ಇಂತಹ ಶೋಷಣೆಯ ವಿರುದ್ಧ ಹಲವಾರು ಹೋರಾಟಗಳು ನಡೆಯುತ್ತಿವೆ. ಜಗತ್ತು ಹುಬ್ಬೇರಿಸುವಷ್ಟು ಪ್ರಕೃತಿಯ ಸಿರಿಸಂಪತ್ತು ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆ ಹೊಂದಿರುವ ಕರ್ನಾಟಕದ ರಾಜ್ಯದಲ್ಲಿ ಮೂಕಪ್ರಾಣಿಯೂ ವಿಸ್ಮಯ ಪಡುವಂತಹ ದರಿದ್ರ ಸಂಪ್ರದಾಯಗಳು ಕಾಡುಗೊಲ್ಲರಲ್ಲಿ ಕಂಡುಬರುತ್ತವೆ".[೨] ಕರ್ನಾಟಕದ ಕಾಡುಗೊಲ್ಲರು ಸಾಂಸ್ಕೃತಿಕವಾಗಿ ಅನ್ಯನ್ಯತೆಯನ್ನು ಹೊಂದಿದ್ದರೂ ಕೂಡ ಪ್ರಾಣಿಗಿಂತ ಕಡೆಯಾಗಿ, ಹೀನಾಯವಾಗಿ ಮಾನವೀಯತೆಯಿಲ್ಲದೆ ಇರುವುದರಿಂದ ಮಹಿಳೆಯರು ಅತಿ ಹೆಚ್ಚು ಶೋಷಣೆ ಯಾಗುತ್ತಿದ್ದುದನ್ನು ಇಲ್ಲಿ ಕಾಣಬಹುದಾಗಿದೆ. ಅದರಂತೆಯೇ "ಕೆಲವೇ ಕೆಲವು ಸರ್ಕಾರೇತರ ಸಂಸ್ಥೆಗಳು (NGOS) ಕಾಡುಗೊಲ್ಲರಲ್ಲಿರುವ ಜನನಕ್ಕೆ ಸಂಬಂಧಿಸಿದ ಸೂತಕಗಳನ್ನು ನಿರ್ಮೂಲನೆ ಮಾಡಲು ಪ್ರಯತ್ನ ನಡೆಸಿವೆ. ಆದರೆ ಅವೆಲ್ಲವೂ ಬದ್ಧತೆಯ ಸ್ವಯಂ ಸಂಸ್ಥೆಗಳಾಗಿಲ್ಲದಿರುವುದು ವಿಷಾದದ ಸಂಗತಿ. ಈ ಸಂಬಂಧವಾಗಿ ದಿನಾಂಕ ೨೨.೧.೨೦೦೧ರಂದು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು ಇವರು ಜಂಟಿಯಾಗಿ

ಅಮಾನವೀಯ ಆಚರಣೆಗಳ ದಾಖಲಾತಿಯನ್ನು ಕೈಗೊಂಡು, ಬೆಂಗಳೂರಿನಲ್ಲಿ ವಿಚಾರ ಸಂಕಿರಣ ಏರ್ಪಡಿಸಿದ್ದವು. ಈ ವಿಚಾರ ಸಂಕಿರಣದಲ್ಲಿ ತಜ್ಞರು, ಸಂಶೋಧಕರು, ಕಾನೂನು ತಜ್ಞರುಗಳು, ಬುದ್ಧಿಜೀವಿಗಳು, ಕಾಡುಗೊಲ್ಲರಲ್ಲಿ ಮುಟ್ಟಾಗುವಿಕೆ ಮತ್ತು ಋತುಮತಿಯ ಸಂದರ್ಭದಲ್ಲಿ ಅನುಸರಿಸುವ ಸಂಪ್ರದಾಯಕ್ಕೆ ಸಂಬಂಧಿಸಿದ ಅಮಾನವೀಯ ಶಾಸನದ ಮೂಲಕ ನಿರ್ಮೂಲನ ಮಾಡಬಹುದೆಂದು ಸಲಹೆ ಇತ್ತರು"[೨]. ಈ ರೀತಿಯ ಸಲಹೆಯನ್ನು ಅಳವಡಿಸಿಕೊಂಡು ಇವರಲ್ಲಿರುವ ಅವಮಾನೀಯ ಕೃತ್ಯಗಳನ್ನು ಹೋಗಲಾಡಿಸುವುದಕ್ಕೆ ಕೆಲಕಾಲ ಹಿಡಿಯಬಹುದು.

ಇತ್ತೀಚಿನ ದಿನಗಳಲ್ಲಿ ಹಳೆಯ ಗೊಡ್ಡು ಸಂಪ್ರದಾಯಗಳು ಕಡಿಮೆಯಾಗುತ್ತಿದ್ದು ಪರಿವರ್ತನೆಯ ವಿಧದಲ್ಲಿ ಸರ್ಕಾರಿ ಅಥವಾ ಖಾಸಗಿ ದವಾಖಾನೆಗಳಲ್ಲಿ ಕಾಡುಗೊಲ್ಲರು ಹೆರಿಗೆ ಮಾಡಿಸಿಕೊಳ್ಳುತ್ತಿದ್ದು, ಆರ್ಥಿಕ ದೃಷ್ಟಿಯಿಂದ ಇದು ಖರ್ಚುದಾಯಕವಾಗಿರುತ್ತದೆ. ಹಿಂದೆ ಹಟ್ಟಿಗಳಲ್ಲಿಯೇ ಹೆರಿಗೆಯಾಗುತ್ತಿದ್ದರಿಂದ ಹಣದ ವೆಚ್ಚ ಅಷ್ಟಾಗಿ ಇರಲಿಲ್ಲ. ಆದರೆ ಈಗ ಆಧುನಿಕ ಆಸ್ಪತ್ರೆಗಳಿಂದ ವೆಚ್ಚ ಹೆಚ್ಚಾಗುತ್ತಿದ್ದು, ದುಡಿಮೆಯ ಬಹುಪಾಲು ಹೆರಿಗೆ ಹಾಗೂ ಆರೋಗ್ಯ ದೃಷ್ಟಿಯಿಂದ ವ್ಯಯವಾಗುತ್ತಿದೆ. ಈ ದೃಷ್ಟಿಯಿಂದ ಆರೋಗ್ಯಕವಾಗಿ ಏರಿಕೆಯಾದರೂ ಆರ್ಥಿಕವಾಗಿ ಕುಸಿಯುತ್ತಿದ್ದಾರೆ.

೪.೨ ನಾಮಕರಣ ಶಾಸ್ತ್ರ

ಮಗುವಿನ ಜನನ ಕ್ರಿಯೆಯ ನಂತರದ ಇನ್ನೊಂದು ಶುಭಕಾರ್ಯವೆಂದರೆ ನಾಮಕರಣ. ಪ್ರಾರಂಭದಲ್ಲಿ ಮಗುವನ್ನು ತೊಟ್ಟಿಲಲ್ಲಿ ಹಾಕುತ್ತಿದ್ದರು. ಅದು ಪೂಜಾರಿಯ ನೇತೃತ್ವದಲ್ಲಿ ನಡೆಯುತ್ತಿತ್ತು. ಇತ್ತೀಚೆಗೆ ನಗರೀಕರಣದ ಪ್ರಭಾವದಿಂದ ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡುವುದಕ್ಕೂ ಒಂದು ದೊಡ್ಡ ಸಮಾರಂಭ ಏರ್ಪಡಿಸುತ್ತಿದ್ದಾರೆ. ಪ್ರಾರಂಭದಲ್ಲಿ ಗಂಡು ಮಕ್ಕಳಾದರೆ ಮಲ್ಲಜ್ಜ, ಚಿಕ್ಕಣ್ಣ, ಮುಕಟ್ಟ, ಕರಿಯಣ್ಣ, ಬೆತ್ತಪ್ಪ ಗಟ್ಟೆಣ್ಣ ಮುಂತಾದ ಹೆಸರುಗಳನ್ನು, ಹೆಣ್ಣುಮಕ್ಕಳಾದರೆ ಚಿಕ್ಕವ್ವ, ಕಾಡಮ್ಮ, ಈರಮ್ಮ, ತಿಮ್ಮವ್ವ ಎಂದು ಹೆಸರಿಡುತ್ತಿದ್ದರು. ಈಗ ಗಂಡು ಮಕ್ಕಳಿಗೆ ಸುನೀಲ್, ಸುರೇಶ, ರಾಜಾ, ಮುಂತಾದ ಹೆಸರುಗಳನ್ನು, ಹೆಣ್ಣುಮಕ್ಕಳಿಗೆ ಶೀಲಾ, ಸರೋಜ, ದ್ರಾಕ್ಷಿಣೆಯಿಣಿ ಮುಂತಾದ ಹೆಸರುಗಳನ್ನಿಡುತ್ತಿರುವುದು ಕಂಡುಬರುತ್ತದೆ.

ಹಳೆಯ ಹೆಸರುಗಳು		ಆಧುನಿಕ ಹೆಸರುಗಳು		ಕುಲದೇವತೆಗಳ ಹೆಸರು
ಗಂಡು	ಹೆಣ್ಣು	ಗಂಡು	ಹೆಣ್ಣು	
ಕಾಟಪ್ಪ	ಕಾಟವ್ವ	ಹರಿದಾಸ	ದ್ರಾಕ್ಷಿಯಿಣಿ	ಚಿತ್ತದೇವರು
ಗೆಟ್ಟೆಣ್ಣ	ಈರಮ್ಮ	ಸುನಿಲ್	ಶಿಲ್ಪಾ	ಎತ್ತಪ್ಪ
ಕರಿಯಣ್ಣ	ಸಿರಿಯಜ್ಜಿ	ಸುರೇಶ್	ಸುಶೀಲಾ	ಜುಂಜಪ್ಪ
ರಂಗಪ್ಪ	ಚಿಕ್ಕಜ್ಜಿ	ರಾಜಾ	ಐಶ್ವರ್ಯ	ಕರಿಯಮ್ಮನಮೂರ್ತಿ
ನಾಗಲಿಂಗಪ್ಪ	ತಂಗಮ್ಮ	ರಾಮು	ರಶ್ಮಿ	ಬಾಲರಂಗನಾಥಸ್ವಾಮಿ

ಮಲ್ಲಣ್ಣ	ಗಿಡ್ಡಮ್ಮ	ರಾಘು	ಕಮಲಾ	ಮರಡಿಹಳ್ಳಿ ಮಾಲಿಂಗ
ಲಿಂಗಣ್ಣ	ಮಾಸ್ತಮ್ಮ	ಸತ್ಯ	ಸರೋಜ	ಕ್ಯಾತಲಿಂಗ

ನಾಮಕರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ಖರ್ಚು ಮಾಡಿ ಊರಿನ ಜನರನ್ನು ಕರೆದು ಊಟಹಾಕುವುದು ಇತ್ತೀಚೆಗೆ ಸಾಮಾನ್ಯವಾಗಿದೆ. ಪ್ರಾರಂಭದಲ್ಲಿ ಪೂಜಾರಿಯ ನೇತೃತ್ವದಲ್ಲಿ ಮಾಡುತ್ತಿದ್ದ ಈ ಶುಭ ಸಮಾರಂಭ ಇತ್ತೀಚೆಗೆ ಬದಲಾವಣೆ ಕಂಡಿದೆ. ಅಧಿಕವಾಗಿ ಹಣವನ್ನು ಖರ್ಚುಮಾಡಿ ಸಂತೋಷ ಪಡುವುದು ಹೆಚ್ಚಾಗಿದ್ದು, ಉಳಿತಾಯ ಕಡಿಮೆಯಾಗಿ ಬಡತನ ಮುಂದುವರಿದಿದೆ ಎನ್ನಬಹುದಾಗಿದೆ. ಇಂತಹ ಸಮಾರಂಭಗಳು ಪ್ರತಿಷ್ಠೆಯ ಪ್ರತಿರೂಪವಾಗಿವೆ.

ಹುಟ್ಟಿದ ಹನ್ನೊಂದನೆಯ ದಿನಕ್ಕೆ ನಾಮಕರಣ ಮಾಡುವ ಪದ್ಧತಿ ಇವರಲ್ಲಿತ್ತು. ಈಗ ನಾಮಕರಣದ ದಿನದಂದು ಸೋದರಮಾವ ಮಗುವಿಗೆ ನಾಮಕರಣ ಮಾಡುತ್ತಾನೆ. ಹಿಂದೆ ಪೂಜಾರಿಯೇ ನಾಮಕರಣ ಮಾಡುತ್ತಿದ್ದ. ಅವರಿಗೆ ಬೆಲ್ಲ, ಅಕ್ಕಿ, ಗೋಧಿ, ಕೊಬ್ಬರಿ, ಎಲೆ, ಅಡಿಕೆ ಮುಂತಾದ ವಸ್ತುಗಳನ್ನು ನೀಡುತ್ತಿದ್ದರು. ಅದು ಕಟ್ಟೆಮನೆ ಅಂದರೆ ದೇವಸ್ಥಾನದ ಮುಂದುಗಡೆ ನಡೆಯುತ್ತಿತ್ತು. ಇತ್ತೀಚೆಗೆ ಬದಲಾಗಿದ್ದು ಸೋದರಮಾವನೆ ಈ ಕಾರ್ಯಕ್ರಮ ನಡೆಸಿಕೊಡುತ್ತಾನೆ. ಇಂತಹ ಸಮಾರಂಭಗಳು ಮನೆಯಲ್ಲಿಯೇ ನಡೆಯುತ್ತಿವೆ.

೪.೩ ಜವುಳ

ಈ ಹಿಂದೆ ಕಟ್ಟೆಮನೆಯ ಮುಂದೆ ಚೊಚ್ಚಲ ಮಗುವಿಗೆ ಜವುಳ ತೆಗೆಸುವ ಕಾರ್ಯಕ್ರಮ ಮಾಡುತ್ತಿದ್ದರು. ಮಗುವಿನ ಜವುಳವನ್ನು ಪೂಜಾರಿಯೇ ತೆಗೆಯುತ್ತಿದ್ದ. ಈ ಕಾರ್ಯಕ್ರಮ ಒಂದು ಅಥವಾ ಮೂರು ವರ್ಷದೊಳಗೆ ನಡೆಸುವ ಸಂಪ್ರದಾಯವಿತ್ತು. ಆದರೆ ಇತ್ತೀಚಿಗೆ ಈ ಸಮಾರಂಭವನ್ನು ಮನೆಯಲ್ಲಿಯೇ ನೆರವೇರಿಸುತ್ತಿದ್ದು, ಈ ಜವುಳದ ಕಾರ್ಯಕ್ರಮಕ್ಕೆ ಒಂದು ಸಾವಿರದಿಂದ ಆರು ಸಾವಿರದ ವರೆಗೆ ಹಣವನ್ನು ಖರ್ಚುಮಾಡುತ್ತಾರೆ. ಅಷ್ಟೇ ಅಲ್ಲದೇ ಅವರ ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಏರ್ಪಡಿಸುತ್ತಾರೆ. ಈ ಬದಲಾವಣೆಗೆ ಆಧುನೀಕರಣದ ಪ್ರಭಾವವೇ ಕಾರಣವಾಗಿದೆ. ಈ ಹಿಂದೆ ಪೂಜಾರಿ ಜವುಳ ತೆಗೆದರೆ ಇತ್ತೀಚಿಗೆ ಸೋದರಮಾವ ಜವುಳ ತೆಗೆಯುತ್ತಾನೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪಿ.ಟಿ. ಹಟ್ಟಿಯಲ್ಲಿ ತಮ್ಮಣ್ಣ ಎನ್ನುವ ಗ್ರಾಮ ಪಂಚಾಯಿತಿ ಸದಸ್ಯರನ್ನು ಹಾಗೂ ಇತರೆ ಹಿರಿಯ ಕಾಡುಗೊಲ್ಲರನ್ನು ಭೇಟಿ ಮಾಡಿದಾಗ ಈ ವಿಷಯವನ್ನು ಪ್ರಸ್ತಾಪಿಸಿದರು. ಇವರುಗಳು ಹೇಳುವಂತೆ "ನಾಮಕರಣ ಮತ್ತು ಜವುಳ ಕಾರ್ಯಕ್ರಮ ಮಾಡುವುದೇ ಕಡಿಮೆ, ಆದರೆ ಇತ್ತೀಚೆಗೆ ಇದು ಬದಲಾವಣೆಯನ್ನು ಕಂಡಿದ್ದು, ಪ್ರತಿಷ್ಠೆಯ ಆಧಾರದ ಮೇಲೆ ಪೈಪೋಟಿಯಿಂದ ಈ ಸಮಾರಂಭವನ್ನು ಏರ್ಪಡಿಸುತ್ತಿದ್ದಾರೆ" ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅದೇನೆ ಇದ್ದರೂ ಆಧುನಿಕ ಭರಾಟೆಯಲ್ಲಿ ಅಲ್ಪ ಪ್ರಮಾಣದಲ್ಲಿ ಸಂಪ್ರದಾಯವನ್ನು ಮೀರುತ್ತಿದ್ದಾರೆ.

೪.೪ ಋತುಮತಿ

ಮಕ್ಕಳ ಬದುಕು ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗುವಾಗ ಅನೇಕ ಸಂಪ್ರದಾಯಗಳನ್ನು ಅನುಸರಿಸುತ್ತಿರುವುದನ್ನು ಕಾಣುತ್ತೇವೆ. ಮಗುವಿನ ಹುಟ್ಟು ಕೂದಲು ತೆಗೆಸುವ, ಹೆಣ್ಣುಮಕ್ಕಳು ಯೌವ್ವನಾವಸ್ಥೆಗೆ ಬಂದಾಗ ಹೀಗೆ ಹತ್ತು ಹಲವಾರು ಆಚರಣೆಗಳು ಬುಡಕಟ್ಟುಗಳಲ್ಲಿ ಇರುವುದನ್ನು ಕಾಣುತ್ತೇವೆ. ಈ ಆಚರಣೆಗಳು ಅವರ ಆರ್ಥಿಕ ಸ್ಥಿತಿಗಳ ಮೇಲೆಯೆ ರೂಪಗೊಂಡಿರುತ್ತವೆ. ಬುಡಕಟ್ಟು ಸಮುದಾಯಗಳು ಆರ್ಥಿಕವಾಗಿ ಬಹಳ ಹಿಂದುಳಿದುದ್ದರಿಂದ ಅವರ ಆಚರಣೆ ಸಂಪ್ರದಾಯಗಳು ಹೆಚ್ಚಾಗಿ ಆಡಂಬರ ರಹಿತವಾಗಿರುತ್ತವೆ ಎಂಬುದನ್ನು ಗಮನಿಸಬಹುದು.

ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣು ಋತುಮತಿಯಾದರೆ ಅದನ್ನು ಮೈಲಿಗೆ ಎಂದು ತಿಳಿದು ಕೊಳ್ಳುತ್ತಾರೆ. ಋತುಮತಿ ಹೆಣ್ಣಿಗೆ ಅವರ ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ಕೆಲ ಆಚರಣೆಗಳನ್ನು ಮಾಡುತ್ತಾರೆ. ತೀರ ಬಡತನದಲ್ಲಿರುವ ಗಿರಿಜನರು ಪರಂಪರಾನುಗತವಾಗಿ ಬಂದ ಕೆಲ ಆಚರಣೆ ಸಂಪ್ರದಾಯಗಳನ್ನು ಸಂಕ್ಷಿಪ್ತವಾಗಿ ಪಾಲಿಸಿಕೊಂಡು ಹೋಗುತ್ತಾರೆ. ಹೆಣ್ಣು ಋತುಮತಿಯಾಗುವುದು ಪ್ರಾಕೃತಿಕ ಸಹಜ ನಿಯಮ "ಒಮ್ಮೆ ಹೆಣ್ಣು ಋತುಮತಿಯಾದ ಮೇಲೆ ಮಧ್ಯೆ ವಯಸ್ಸಿನವರೆಗೆ ಋತುಚಕ್ರ ಸ್ಥಗಿತಗೊಳ್ಳುವವರೆಗಿನ ಘಟ್ಟವನ್ನು ಫಲವಂತಿಕೆಯ ಕಾಲ ಎಂದು ಗುರುತಿಸಲಾಗುವುದು. ಹೆಣ್ಣು ಋತುಮತಿಯಾದಾಗ ತನ್ನ ಬದುಕಿನಲ್ಲಿ ಮೊಟ್ಟಮೊದಲ ಬಾರಿಗೆ ಜೈವಿಕ ಬದಲಾವಣೆ ಆಗುತ್ತಿರುವುದನ್ನು ಅನುಭವಿಸುತ್ತಾಳೆ".[೬] ಹೆಣ್ಣು ಋತುಮತಿಯಾದರೆ ಆ ಹೆಣ್ಣು ಸಂಸಾರಸ್ಥಳಾಗಿ ತಾಯ್ತನದ ಸುಖವನ್ನು ಅನುಭವಿಸಲು ಅರ್ಹತೆ ಹೊಂದಿದಳೆಂದು ತಂದೆ-ತಾಯಿ, ಬಂಧು-ಬಳಗ, ಸೋದರಮಾವಂದಿರು, ಬಾಲ್ಯ ದಲ್ಲಿಯೇ ಮದುವೆಯಾಗಿದ್ದರೆ ಅವಳ ಅತ್ತೆ-ಮಾವ, ಗಂಡ, ಕೇರಿಯ ಎಲ್ಲ ಜನರೂ ಸಂತೋಷ ಪಟ್ಟುಕೊಳ್ಳುತ್ತಾರೆ. ಅವಳನ್ನು ಸಂತೋಷಪಡಿಸುವುದಕ್ಕಾಗಿ ಅನೇಕ ಆಚರಣೆಗಳನ್ನು ಮಾಡುತ್ತಾರೆ.

ಕಾಡುಗೊಲ್ಲರಲ್ಲಿ ಹೆಣ್ಣು ಮೈನೆರೆದರೆ ಅದನ್ನು ಮೈಲಿಗೆ ಎಂದು ಭಾವಿಸುತ್ತಾರೆ. ಹೊಂಗೆ ಮತ್ತು ಬೇವಿನ ಸೊಪ್ಪಿನಿಂದ ನಿರ್ಮಿಸಿದ ಗುಡಿಸಲಿಗೆ ಅವಳನ್ನು ಕಳಿಸುತ್ತಾರೆ. ಹೊಂಗೆ ಮತ್ತು ಬೇವಿನ ಸೊಪ್ಪಿರುವ ಗುಡಿಸಲು ಅವಳ ಆರೋಗ್ಯಕ್ಕೆ ಅತ್ಯುತ್ತಮವಾದ ಕೊಡುಗೆ ನೀಡುತ್ತದೆ ಎಂದು ಕಾಡುಗೊಲ್ಲರು ಭಾವಿಸಿದ್ದಾರೆ. ಋತುಮತಿಗೆ ಹನ್ನೆರಡು ದಿನಗಳವರೆಗೆ ಮೈಲಿಗೆ ಇರುತ್ತದೆ. ಋತುಮತಿಯಾದ ಹೆಣ್ಣು ಒಟ್ಟು ಇಪ್ಪತ್ತೆರಡು ದಿನಗಳ ವರೆಗೆ ವಾಸದ ಹಟ್ಟಿಯಿಂದ ದೂರವಿರಬೇಕೆಂಬ ನಿಯಮ ಕಾಡುಗೊಲ್ಲರಲ್ಲಿದೆ. ಋತುಮತಿ ಹೆಣ್ಣಿನ ಜೊತೆಗೆ ಅವಳ ಸಂಬಂಧಿಕರ ಹಿರಿಯ ವಯಸ್ಸಿನ ಹೆಂಗಸನ್ನು ಸಹಾಯಕ್ಕಾಗಿ ಇಡುತ್ತಾರೆ. ವಯಸ್ಸಾದ ಹೆಂಗಸು ರಾತ್ರಿ ಅವಳೊಂದಿಗಿದ್ದು ಬೇಸರ ಕಳೆಯಲು ಸಹಾಯ ಮಾಡುತ್ತಾಳೆ. ಮೈನೆರೆದವಳ ನೆಲೆಸಿರುವ ಗುಡಿಸಲಿನ ಸುತ್ತಲೂ ಕಾಡುಗೊಲ್ಲರ ಹೆಂಗಸರು ಕುಳಿತು ಹಿಮ್ಮೇಳ ಮುಮ್ಮೇಳದಲ್ಲಿ ಅನೇಕ ತ್ರಿಪದಿಗಳನ್ನು ಹಾಡಿ ಅವಳಲ್ಲಿ ಉತ್ಸಾಹ ತುಂಬುತ್ತಾರೆ.

ಮೈನೆರದ ಮೂರನೆಯ ದಿನಕ್ಕೆ ಮತ್ತೊಂದು ಚಿಕ್ಕ ಗುಡಿಸಲನ್ನು ಹಾಕಿ ಮೊದಲಿದ್ದ ಗುಡಿಸಲಿನಿಂದ ಅವಳನ್ನು ಬದಲಾಯಿಸುತ್ತಾರೆ. ಮೈನೆರದ ದಿನ ಹಾಕಿದ ಗುಡಿಸಲಿನಿಂದ ಅವಳನ್ನು ಬದಲಾಯಿಸುತ್ತಾರೆ. ಮೈನೆರದ ದಿನ ಹಾಕಿದ ಗುಡಿಸಲಿಗಿಂತ ಮೂರನೆಯ ದಿನಕ್ಕೆ ಹಾಕಿದ ಗುಡಿಸಲು ಸ್ವಲ್ಪ ದೂರದಲ್ಲಿರುತ್ತದೆ. ಕಾಡುಗೊಲ್ಲರು ಇತರೆ ಬುಡಕಟ್ಟು ಸಮುದಾಯಗಳಂತೆ ಒಂದೇ ಗುಡಿಸಲಿನಲ್ಲಿ ಪೂರ್ತಿ ಸೂತಕ ಕಳೆಯುವವರೆಗೆ ಇರಲು ಬಿಡುವುದಿಲ್ಲ. ಹದಿಮೂರನೆಯ ದಿನ ಮೂಡಲ ದಿಕ್ಕಿಗೆ ಕುಳಿತು ಸ್ನಾನ ಮಾಡಿ ಮಡಿಬಟ್ಟೆಗಳನ್ನುಟ್ಟುಕೊಂಡು ಬಿಳಿ ಮತ್ತು ಹಸಿರು ಸೊಪ್ಪಿನಿಂದ ತಯಾರಿಸಿದ ಚಪ್ಪರದಲ್ಲಿ ಉಳಿಯುತ್ತಾಳೆ. ಒಟ್ಟು ಹನ್ನೆರಡು ದಿನ ಮೈಲಿಗೆ. ಹತ್ತು ದಿನಗಳನ್ನು ಬೇರೆ ಬೇರೆ ಗುಡಿಸಲಿನಲ್ಲಿ ಋತುಮತಿ ಯಾದವಳು ಕಾಲ ಕಳೆಯಬೇಕಾಗುತ್ತದೆ. ಇಪ್ಪತ್ತೆರಡನೆಯ ದಿನ ಮುತ್ತೈದೆಯರು ಸ್ನಾನ ಮಾಡಿಸಿ, ಮಡಿ ಬಟ್ಟೆಗಳನ್ನು ತೊಡಿಸಿ ಅವಳನ್ನು ವಾಸಿಸುವ ಗುಡಿಸಲಿನ ಒಳಗೆ ಕರೆದುಕೊಳ್ಳುತ್ತಾರೆ. ಅವಳಿಗೆ ಮೈತುಂಬ ಕಂಬಳಿ ಹೊದಿಸಿ ಕೈಯಲ್ಲಿ ದೀಪ ಹಚ್ಚಿದ ಹಣತೆಯನ್ನು ಕೊಟ್ಟು, ನಿಧಾನವಾಗಿ ಆಕೆಯನ್ನು ಗುಡಿಗೆ ಕರೆತರುತ್ತಾರೆ. ಗುಡಿಯ ಪೂಜಾರಿಗೆ ಎಲೆ ಅಡಿಕೆ ಕೊಟ್ಟು ಪೂಜೆ ಮಾಡಿಸಿ ಅವಳನ್ನು ಹಟ್ಟಿಗಳ ಮುಂದೆ ಮೆರವಣಿಗೆಯಲ್ಲಿ ಹಾಡುಗಳನ್ನು ಹೇಳುತ್ತಾ ಕರೆತಂದು ಮನೆ ಸೇರಿಸಿಕೊಳ್ಳುತ್ತಾರೆ. ಅವಳಿಗೆ ಉತ್ತತ್ತಿ, ಬಾಳೆಹಣ್ಣು, ಕೊಬ್ಬರಿ, ಕಡಲೆ, ಹೂವು-ಹಣ್ಣುಗಳಿಂದ ಉಡಿ ತುಂಬುತ್ತಾರೆ.

ಕಾಡುಗೊಲ್ಲರಲ್ಲಿಯ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ಸಂದರ್ಭದಲ್ಲಿ ಋತುಮತಿಯಾದರೆ ಅವಳು ಅಂದಿನಿಂದಲೇ ಶಾಲೆ ಮೆಟ್ಟಿಲು ಹತ್ತುವುದನ್ನು ನಿಲ್ಲಿಸಬೇಕಾಗುತ್ತಿತ್ತು. ಆಧುನಿಕತೆಯ ಪ್ರಭಾವದಿಂದ ಇಂದು ಋತುಮತಿಯಾದರೂ ಅವಳಿಗೆ ಕೆಲವರು ವಿದ್ಯಾಭ್ಯಾಸ ಮಾಡಲು ಅನುಕೂಲ ಮಾಡಿಕೊಡುತ್ತಿದ್ದಾರೆ. ಪ್ರಾರಂಭದಲ್ಲಿ ಋತುಮತಿಯಾದ ಹೆಣ್ಣನ್ನು ಯಾರು ನೋಡುವಂತಿರಲಿಲ್ಲ. ಅವಳಿಗೆ ದೂರದಿಂದಲೇ ನೀರು ಹೊಯ್ಯುತ್ತಿದ್ದರು. ಋತುಮತಿಯಾದ ಹೆಣ್ಣಿನ ನೆರಳು, ಇತರರ ಮೇಲೆ ಬಿದ್ದರೆ ಅಪಶಕುನ ಎಂದು ನಂಬುತ್ತಿದ್ದರು. ಒಂದು ಕಾಲಕ್ಕೆ ಋತುಮತಿಯಾದ ಹೆಣ್ಣನ್ನು ಕಾಡುಗೊಲ್ಲರು ಕೆಲ ಆಚರಣೆಗಳ ಮೂಲಕ ಅವಳನ್ನು ಶೋಷಣೆಗೆ ಒಳಪಡಿಸುತ್ತಿದ್ದರು, ಆದರೆ ಆಧುನಿಕತೆಯ ಗಾಳಿಯಿಂದ ಕಾಡುಗೊಲ್ಲರಲ್ಲಿಯೂ ಪರಿವರ್ತನೆಯಾಗಿದೆ. ಹಂತಹಂತವಾಗಿ ಈ ತರಹದ ಶೋಷಣೆಗಳು ಕಡಿಮೆಯಾಗುತ್ತಿವೆ.

ಕಾಡುಗೊಲ್ಲರು ಋತುಮತಿಯಾದ ಹೆಣ್ಣನ್ನು ಅದ್ದೂರಿಯಾಗಿ ಶೃಂಗರಿಸಿ, ಹನ್ನೊಂದು ದಿನಗಳವರೆಗೆ ಪ್ರತಿ ದಿನವೂ ವಿವಿಧ ಆಹಾರ ಸಾಮಾಗ್ರಿಗಳನ್ನು ತಯಾರಿಸಿ ಅವುಗಳನ್ನು ತಿನ್ನಿಸಿ ಅವಳನ್ನು ಸಂತೋಷ ಪಡಿಸುತ್ತಿದ್ದಾರೆ. ಋತುಮತಿ ಹೆಣ್ಣನ್ನು ಪ್ರತ್ಯೇಕ ಗುಡಿಸಲಿನಲ್ಲಿರಿಸದೇ ಅವರು ವಾಸಿಸುವ ಮನೆಯಲ್ಲಿಯೇ ಒಂದು ಪ್ರತ್ಯೇಕ ಕೋಣೆಯಲ್ಲಿ ಇರಲಿಕ್ಕೆ ವ್ಯವಸ್ಥೆ ಮಾಡುತ್ತಾರೆ. ನಗರೀಕರಣ ಪ್ರಭಾವದಿಂದ ಕಾಡುಗೊಲ್ಲರು ಅತ್ಯಂತ ಕಟ್ಟುನಿಟ್ಟಿನಿಂದ ಆಚರಿಸುತ್ತಿದ್ದ ಆಚರಣೆಗಳು ಮಾಯವಾಗಿ ಆ ಮೂಲಕ ಹೆಣ್ಣಿನ ಶೋಷಣೆ ಕಡಿಮೆಯಾಗುತ್ತಿದೆ.

ಋತುಮತಿ ಹೆಣ್ಣಿನ ಆರೈಕೆಗಾಗಿ ಸರ್ಕಾರ ಕೆಲ ಪ್ರದೇಶಗಳಲ್ಲಿ ಕೊಠಡಿಗಳನ್ನು ಕಟ್ಟಿಸಿಕೊಟ್ಟಿದೆ. ಆದರೆ ಅವುಗಳನ್ನು ಅನೇಕ ಕಾಡುಗೊಲ್ಲರು ಬಳಸುತ್ತಿಲ್ಲ. ಆದು ಮೈಲಿಗೆಯಾಗುತ್ತದೆ ಎಂಬ ಪರಿಕಲ್ಪನೆ ಅವರಲ್ಲಿದೆ.

೪.೫ ಮದುವೆ

"ಮದುವೆ ಎಂಬುದು ಸ್ವರ್ಗದಲ್ಲಿಯೇ ನಿರ್ಧಾರವಾಗಿರುತ್ತದೆ" ಎಂಬ ತಿಳುವಳಿಕೆ ನಮ್ಮಲ್ಲಿದೆ. ದೇವರು ತನ್ನ ಲೋಕದಲ್ಲಿಯೇ ಒಂದು ಗಂಡಿಗೆ ಒಂದು ಹೆಣ್ಣು ಎಂದು ಹಣೆ ಬರಹ ಬರೆದಿರುತ್ತಾನೆಂಬ ಕಲ್ಪನೆಗಳೂ ನಮ್ಮ ಸಂಸ್ಕೃತಿಯಲ್ಲಿ ಕಂಡುಬರುತ್ತವೆ. ಮದುವೆಯಾಗದಿದ್ದರೆ, ಮಕ್ಕಳನ್ನು ಪಡೆಯದಿದ್ದರೆ ಮುಕ್ತಿ ಸಿಗುವುದಿಲ್ಲ ಎಂಬ ನಂಬಿಕೆ ನಮ್ಮ ಸಮಾಜದಲ್ಲಿದೆ. ವಯಸ್ಸಿಗೆ ಬಂದ ಯುವಕನೊಬ್ಬನ ಹಾರಾಟ ಕಂಡು ಅವನಿಗೆ ಮೂಗುದಾಣ ಹಾಕಿದರೆ ಸರಿಹೋಗುತ್ತಾನೆಂದು ಜನಪದರು ಹೇಳುವುದನ್ನು ಗಮನಿಸಿದರೆ ಮದುವೆ ಎಂಬುದರ ಮೂಲಕ ಮನುಷ್ಯನನ್ನು ಅಂಕೆಯಲ್ಲಿ ಇಟ್ಟುಕೊಳ್ಳಬಹುದು ಎಂಬುದು ಅನುಭವದ ಮಾತು. ಮದುವೆ ಮಾಡಿದರೆ ಹೆಂಡತಿ ಹೇಳಿದಂತೆ ಕೇಳಿಕೊಂಡಿರುತ್ತಾನೆ ಮತ್ತು ಮನೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಶಕ್ತಿಯೂ ಅವನಿಗೆ ಬರುತ್ತದೆ ಎಂಬ ತಿಳುವಳಿಕೆ ನಮ್ಮವರಲ್ಲಿದೆ. ಮದುವೆ ಮಾಡಲು ಹೆಣ್ಣಿಗೆ-ಗಂಡು, ಗಂಡಿಗೆ-ಹೆಣ್ಣು ತಕ್ಕ ಕಡೆ ವರಾನ್ವೇಷಣೆ ಮಾಡುವುದನ್ನು ನಾವು ನಾಗರಿಕ ಸಮಾಜದಲ್ಲಿ ಕಾಣುತ್ತೇವೆ. ಸಂಸಾರ ಎಂಬ ರಥ ಸಾಗಿಸಲು ಹೆಣ್ಣು-ಗಂಡು ಎರಡೂ ಮುಖ್ಯ ಎಂಬುದನ್ನು ತಿಳಿದುಕೊಂಡೇ ಸಂಬಂಧಗಳನ್ನು ಬೆಳೆಸಲು ಯತ್ನಿಸುವರು. ವೈವಾಹಿಕ ಸಂಬಂಧ ಬೆಳೆಸುವಾಗ ಒಬ್ಬರಿಗೊಬ್ಬರು ಅರಿತುಕೊಂಡು ನಿರ್ಧಾರಕ್ಕೆ ಬರುತ್ತಾರೆ. ನಾಗರಿಕ ಸಮಾಜದಲ್ಲಿ ಮೊದಲು ಮದುವೆಯಾಗುವ ಗಂಡು-ಹೆಣ್ಣು ಪರಸ್ಪರ ಒಪ್ಪಿಕೊಂಡರೆ ಮಾತ್ರ ಮುಂದಿನ ಮಾತುಕತೆಗಳನ್ನು ಅಂದರೆ ಕುಲಗೋತ್ರಗಳ ಬಗೆಗೆ ಹಿರಿಯರು ವಿಚಾರಿಸಿಕೊಳ್ಳುತ್ತಾರೆ. ಇದು ನಾಗರಿಕ ಸಮಾಜದಲ್ಲಿ ನಡೆಯುವ ಸಂಪ್ರದಾಯ. ಬುಡಕಟ್ಟು ಸಮುದಾಯಗಳಲ್ಲಿ ಅನುಸರಿಸುವ ಪದ್ಧತಿಯೇ ಬೇರೆಯಾಗಿರುತ್ತದೆ. ಬುಡಕಟ್ಟು ಸಮುದಾಯಗಳು ಮೊದಲು ಕುಲ-ಗೋತ್ರ, ಬಳಿಗಳ ಬಗೆಗೆ ವಿಚಾರಿಸಿಕೊಂಡೇ ಹೆಣ್ಣು ನೋಡಲು ಹೋಗುವುದು ಕಂಡು ಬರುತ್ತದೆ. ಇಲ್ಲಿ ಮದುವೆಯಾಗುವವರಿಗೆ ಸ್ವಾತಂತ್ರ್ಯವಿಲ್ಲ. ತಂದೆ-ತಾಯಿ, ಹಿರಿಯರು ಹೇಳಿದ ಮಾತುಗಳನ್ನು ಗಂಡು-ಹೆಣ್ಣು ಕೇಳಲೇಬೇಕು.

ಬುಡಕಟ್ಟು ಸಮುದಾಗಳು ತಂದೆಯ ಕುಲ ಗೋತ್ರ ಅಥವಾ ಬಳಿಗೆ ಸಂಬಂಧಿಸಿದಂತೆ ವೈವಾಹಿಕ ಸಂಬಂಧಗಳನ್ನು ನಡೆಸುವುದನ್ನು ಅವರು ತೀವ್ರವಾಗಿ ವಿರೋಧಿಸುತ್ತಾರೆ ಹಾಗೂ ತಾಯಿಯ ಅಕ್ಕ-ತಂಗಿಯರ ಮಕ್ಕಳ ವಿವಾಹಗಳನ್ನು ನಿಷೇಧಿಸುತ್ತಾರೆ. ತಂದೆಯ ಸೋದರಿ ಅಥವಾ ಸೋದರತ್ತೆಯ ಮಕ್ಕಳಲ್ಲಿ, ತಾಯಿಯ ಸಹೋದರರ ಮಕ್ಕಳಲ್ಲಿ ವಿವಾಹಕ್ಕೆ ಸಂಬಂಧಿಸಿದ ಕೊಡುಕೊಳ್ಳುವಿಕೆ ನಡೆಯುವುದು ಈ ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಒಂದೇ ಕುಲ ಬಳಿ ಅಥವಾ ಗೋತ್ರದ ಜೊತೆಗೆ ಸಂಬಂಧ ಬೆಳೆಸುವುದನ್ನು

ಯಾವ ಬುಡಕಟ್ಟುಗಳು ಒಪ್ಪುವುದಿಲ್ಲ. ತೆರ ಕೊಡುವ ಪದ್ಧತಿ ಸಾಮಾನ್ಯವಾಗಿ ಎಲ್ಲ ಬುಡಕಟ್ಟುಗಳಲ್ಲಿಯೂ ಕಂಡುಬರುತ್ತದೆ. ಹೆಣ್ಣು ಕೇಳಲು ಗಂಡಿನವರೆ ಹೆಣ್ಣಿನ ಮನೆಗೆ ಹೋಗುವುದು ಸಾಮಾನ್ಯವಾದ ಚಿತ್ರಣ. ಯಾವುದೆ ಕಾರಣಕ್ಕೂ ನಮ್ಮಲ್ಲಿ ಹೆಣ್ಣು ಇದೆ. ನಿಮ್ಮ ಮಗನಿಗೆ ಸಂಬಂಧ ಬೆಳೆಸಿ ಎಂಬುದಾಗಿ ಗಂಡಿನ ಮನೆಯ ಕಟ್ಟೆ ಹತ್ತುವುದು ಒಂದು ಕಾಲದಲ್ಲಿ ಕಂಡುಬರುತ್ತಿರಲಿಲ್ಲ. ಇಂದು ಕಾಲ ಬದಲಾಗಿದೆ. ಬುಡಕಟ್ಟು ಸಮುದಾಯಗಳಲ್ಲಿ ಅದರಲ್ಲಿ ಮಧ್ಯಮ ವರ್ಗದ ಮತ್ತು ಉನ್ನತ ಮಟ್ಟದಲ್ಲಿರುವ ಕುಟುಂಬಗಳಲ್ಲಿಯ ಹಿರಿಯರು ತಮ್ಮ ಮನೆಯಲ್ಲಿರುವ ಹೆಣ್ಣುಮಕ್ಕಳ ಜೀವನ ಮಟ್ಟಕ್ಕಾಗಿ ಅವಳಿಗೆ ತಕ್ಕ ಯೋಗ್ಯ ವರನನ್ನು ಹುಡುಕುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಆರ್ಥಿಕವಾಗಿ ತೀರ ಹಿಂದುಳಿದಿರುವ ಬುಡಕಟ್ಟು ಸಮುದಾಯ ಗಳು ಮಾತ್ರ ನನ್ನ ಮನೆಯಲ್ಲಿ ಯವ್ವನಕ್ಕೆ ಬಂದ ಹೆಣ್ಣು ಇದ್ದಾಳೆ ನೀವು ಅವಳನ್ನು ನಿಮ್ಮ ಮಗನಿಗೆ ತಂದುಕೊಳ್ಳಿ ಎಂದು ಬೆನ್ನುಹತ್ತುವುದು ಸಾಮಾನ್ಯವಾಗಿ ಕಂಡುಬರುವುದಿಲ್ಲ.

ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳು ದೂರದ ಸಂಬಂಧಗಳನ್ನು ಬೆಳೆಸುವುದನ್ನು ಇಷ್ಟ ಪಡುವುದಿಲ್ಲ. ಹೆಣ್ಣನ್ನು ಸೋದರಮಾವನಿಗೆ ಕೊಡುವ ಸಂಪ್ರದಾಯವಿತ್ತು. ಈ ಸಂಪ್ರದಾಯವೂ ಇಂದು ಕಡಿಮೆಯಾಗುತ್ತಿದೆ. ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಒಂದು ಕಾಲಕ್ಕೆ ಬಹುಪತ್ನಿತ್ವ ಕಂಡುಬರುತ್ತಿತ್ತು. ಇಂದು ಅದು ಸಾಮಾನ್ಯವಾಗಿ ಕಾಣುವುದಿಲ್ಲ. ಒಂದು ವೇಳೆ ಬಹುಪತ್ನಿತ್ವ ಕಂಡುಬಂದರೂ ಅದು ಹೆಚ್ಚಾಗಿ ಕೂಡಿಕೆಯ ರೂಪದಲ್ಲಿರುತ್ತದೆ.

ಪ್ರತಿಯೊಂದು ಬುಡಕಟ್ಟು ಸಮುದಾಯ ತನ್ನದೇ ಆದ ವಿಶಿಷ್ಟ ಆಚರಣೆ ಹಾಗೂ ಸಂಪ್ರದಾಯಗಳ ಮೂಲಕ ಮದುವೆ ಮಾಡುವ ಪದ್ಧತಿಯನ್ನು ಅತ್ಯಂತ ಪ್ರಾಚೀನ ಕಾಲದಿಂದ ರೂಢಿಸಿಕೊಂಡು ಬಂದಿದೆ. ತನ್ನ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡೆ ಈ ಕಾರ್ಯಗಳನ್ನು ಅದು ನೇರವೇರಿಸುತ್ತಾ ಬಂದಿದೆ. ಪ್ರತಿಯೊಂದು ಸಮುದಾಯದಲ್ಲಿ ವೈವಿಧ್ಯಮಯವಾಗಿ ಶತಶತಮಾನಗಳಿಂದ ಆಚರಿಸಲ್ಪಡುತ್ತಿದ್ದ ಮದುವೆಯ ಆಚರಣೆಗಳು ಇಂದು ಮಾಯವಾಗುತ್ತಿವೆ. ಇದಕ್ಕೆಲ್ಲ ಕಾರಣ ಆಧುನಿಕತೆ. ಇಂದು ಒಂದಿಲ್ಲ ಒಂದು ರೀತಿಯಿಂದ ಬುಡಕಟ್ಟು ಸಮುದಾಯಗಳು ಆಧುನಿಕತೆಗೆ ಮುಖಾಮುಖಿಯಾಗುವುದು ಅನಿವಾರ್ಯ ವಾಗಿದೆ ಈ ಸಂದರ್ಭದಲ್ಲಿ ಅವರು ತಮ್ಮ ಮೂಲ ಆಚರಣೆಗಳನ್ನು ಕೈಬಿಡುವ ಅಥವಾ ಅವುಗಳಿಗೆ ಹೊಸ ರೂಪ ಕೊಡುವುದನ್ನು ರೂಢಿಸಿಕೊಳ್ಳುತ್ತಿವೆ. ಬುಡಕಟ್ಟು ಸಮುದಾಯಗಳು ವಾಸಿಸುತ್ತಿರುವ ಪ್ರದೇಶದಲ್ಲಿಯ ಪ್ರಬಲ ಸಂಸ್ಕೃತಿಯ ಸಮುದಾಯಗಳ ಪ್ರಭಾವದಿಂದ ಮದುವೆ, ನಾಮಕರಣ, ಋತುಮತಿ ಶಾಸ್ತ್ರ, ಜವುಳ ಮುಂತಾದ ಅನೇಕ ಶುಭಕಾರ್ಯಗಳಲ್ಲಿ ಬದಲಾವಣೆಯಾಗುತ್ತಿರುವುದು ಕಂಡುಬರುತ್ತಿದೆ. ಈ ಬದಲಾವಣೆಯೂ ಸಹ ಸಹಜವಾಗಿರುತ್ತದೆ. ಸಾಮಾನ್ಯವಾಗಿ ಬುಡಕಟ್ಟುಗಳಲ್ಲಿ ನಡೆಯುವ ಮಂಗಳ ಕಾರ್ಯಗಳೆಲ್ಲವೂ ಇಂದು ತನ್ನ ಮೂಲ ರೂಪಗಳನ್ನು ಕಳೆದುಕೊಂಡಿವೆ ಎಂದು ಹೇಳಿದರೆ ತಪ್ಪಾಗಲಾರದು. ಆರ್ಥಿಕವಾಗಿ ಹಿಂದುಳಿದ ಬುಡಕಟ್ಟು ಕುಟುಂಬಗಳಲ್ಲಿ ಅಲ್ಲಲ್ಲಿ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಮೂಲ ರೂಪಗಳು ಉಳಿದುಕೊಂಡಿರುವ ಸಾಧ್ಯತೆಗಳಿವೆ.

ಕಾಡುಗೊಲ್ಲರಲ್ಲಿಯೂ ಇತರೆ ಬುಡಕುಟ್ಟುಗಳಂತೆ ಹೆಣ್ಣು ಹೆತ್ತವರಿಗೆ ಮೊದಲ ಆದ್ಯತೆ. ಕಾಡುಗೊಲ್ಲರೂ ಸಹ ಹೆಣ್ಣು ನೋಡಲು ಹೆಣ್ಣಿನ ಮನೆಗೆ ಹೋಗುವುದು ಸಂಪ್ರದಾಯ. ಕಾಡುಗೊಲ್ಲರು ಹೆಣ್ಣು ನೋಡಲು ಹೋಗುವಾಗಿನಿಂದ ಹಿಡಿದು ಮದುವೆ ಕಾರ್ಯ ಮುಗಿದು ಹೆಣ್ಣನ್ನು ಮನೆ ತುಂಬಿಸಿಕೊಳ್ಳುವವರೆಗೆ ಶುಭ-ಅಶುಭ ಶಕುನಗಳನ್ನು ನಂಬುತ್ತಾರೆ. ಈ ಶುಭಕಾರ್ಯಕ್ಕೆ ಹೋಗುವಾಗ ಒಂಟಿ ಬ್ರಾಹ್ಮಣ, ಬೆಕ್ಕು ಅಡ್ಡಬರುವುದು, ಸೌದೆ ಹೊರೆ ಎದುರಿಗೆ ಬರುವುದು, ಹಾವು ಕಾಣಿಸಿಕೊಳ್ಳುವುದು, ಕ್ಷೌರಿಕ ಎದುರಾದರೆ, ಮುಟ್ಟಾದ ಹೆಣ್ಣು ಮಕ್ಕಳು ಎದುರಾದರೆ ಅದನ್ನು ಅಶುಭ ಎಂದು ತಿಳಿದುಕೊಂಡು ಪ್ರಯಾಣವನ್ನು ಮುಂದಕ್ಕೆ ಹಾಕುವುದುಂಟು. ಆಧುನಿಕತೆಯ ಇಂದಿನ ಯುಗದಲ್ಲಿಯೂ ಶುಭ-ಅಶುಭ ನಂಬಿಕೆಗಳನ್ನು ಕಾಡುಗೊಲ್ಲರು ಪಾಲಿಸುತ್ತಿರುವುದು ಕಂಡುಬರುತ್ತದೆ.

೪.೫.೧ ನಿಶ್ಚಿತಾರ್ಥ

ಕಾಡುಗೊಲ್ಲರು ಸಹ ಸಾಮಾನ್ಯವಾಗಿ ತಮಗೆ ಗೊತ್ತಿರುವ ಮತ್ತು ನಿಕಟ ಹಾಗೂ ಹತ್ತಿರದ ಸಂಪರ್ಕದಲ್ಲಿರುವ ಕುಟುಂಬಗಳಲ್ಲಿಯ ಹೆಣ್ಣುಗಳನ್ನೇ ಆಯ್ಕೆ ಮಾಡುವುದು ಹೆಚ್ಚಾಗಿ ಕಂಡುಬರುತ್ತದೆ. ಇತ್ತಿತ್ತಲಾಗಿ ದೂರದ ಸಂಬಂಧಗಳನ್ನು ಇಷ್ಟಪಡುತ್ತಿರುವುದನ್ನು ಕಾಣಬಹುದಾಗಿದೆ. ಕಾಡುಗೊಲ್ಲರಲ್ಲಿಯೆ ಮಧ್ಯಮ ವರ್ಗದ ಕುಟುಂಬಗಳು ಮತ್ತು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರೆದು, ನಗರ ಪ್ರದೇಶ ಗಳಲ್ಲಿ ತಮ್ಮ ಅಸ್ಥಿತ್ವ ಪಡೆದುಕೊಂಡವರು ದೂರದ ಸಂಬಂಧಗಳನ್ನು ಇಷ್ಟಪಡುತ್ತಿದ್ದಾರೆ.

ಗಂಡಿನ ಮನೆಯವರು ಹೆಣ್ಣನ್ನು ನೋಡಲು ಹೋಗುವಾಗ ಹಿರಿಯ ಹೆಣ್ಣುಮಗಳೊಬ್ಬಳ ತಲೆಯ ಮೇಲೆ ಸುಣ್ಣದ ಬೊಟ್ಟು ಹಚ್ಚಿರುವ ಮಡಿಕೆಯನ್ನು ಹೊರಿಸಿಕೊಂಡು ಹೋಗುವುದು ಸಂಪ್ರದಾಯ. ಈ ಸಂಪ್ರದಾಯ ಹಂತಹಂತವಾಗಿ ಮಾಯವಾಗುತ್ತಿದೆ. ಆ ಮಡಿಕೆಯ ಒಳಗೆ ಅಕ್ಕಿ, ವೀಳ್ಯೆದೆಲೆ, ಬಾಳೆಹಣ್ಣು ಹಾಕಿ ಬಟ್ಟೆಯಿಂದ ಅದರ ಮುಚ್ಚಳವನ್ನು ಬಿಗಿದಿರುತ್ತಾರೆ. ಇವಳ ಜೊತೆಗೆ ಐದು ಜನ ಗಂಡಸರು ಒಂದಿಬ್ಬರು ಹೆಂಗಸರು ಇರುತ್ತಾರೆ. ಹೆಣ್ಣಿನ ಮನೆಗೆ ಹೋಗುವಾಗ ಶಕುನಗಳನ್ನು ಗಮನಿಸುತ್ತಾರೆ. ಗಂಡಿನವರು ಬರುವುದನ್ನು ಅರಿತ ಹೆಣ್ಣಿನ ಮನೆಯವರು ತಮ್ಮ ಮನೆಯಲ್ಲಿ ಹಣತೆಯ ದೀಪ ಹಚ್ಚಿಟ್ಟಿರುತ್ತಾರೆ. ಗಂಡಿನವರು ಮನೆ ಪ್ರವೇಶಿಸಿದ ಕೂಡಲೇ ಆ ಹಣತೆ ದೀಪ ನೋಡಬೇಕೆಂಬ ಪರಂಪರೆ ಇವರಲ್ಲಿದೆ ಮತ್ತು ಆ ದೀಪ ನೋಡುವುದನ್ನು ಶುಭದ ಸಂಕೇತ ಎಂದು ಭಾವಿಸಲಾಗುತ್ತದೆ. ಕಾಡುಗೊಲ್ಲರು ಪಶುಪಾಲಕರು. ಇವರು ಹಸುಗಳ ಹಾಗೂ ದೀಪದ ಶಕುನ ನಂಬುತ್ತಾರೆ. ಗಂಡಿನವರು ಹೆಣ್ಣಿನ ಮನೆಯ ಕೊಟ್ಟಿಗೆಗೆ ಹೋಗಿ ಅಲ್ಲಿಯ ಪಶುಸಂಪತ್ತನ್ನು ಪರೀಕ್ಷಿಸುತ್ತಾರೆ. ದನ ಕರುಗಳು ತಮ್ಮ ಕಿವಿಗಳನ್ನು ನಿಮಿರಿಸಿಕೊಂಡು ಮೆಲಕು ಹಾಕುತ್ತಿದ್ದರೆ ಶುಭ ಎಂದು ತಿಳಿದುಕೊಳ್ಳುವರು. ಹೆಣ್ಣಿನ ಮನೆಯಲ್ಲಿ ಈ ಸಂದರ್ಭದಲ್ಲಿ ಹಚ್ಚಿಟ್ಟ ದೀಪ ಬೆಳತನಕ ಉರಿದರೆ ಗಂಡ-ಹೆಂಡತಿಯ ಸುತ್ತ ನೆಂಟರ ಸಂಬಂಧಗಳು ಚೆನ್ನಾಗಿರುತ್ತವೆ ಎಂಬ ಪರಿಕಲ್ಪನೆ ಅವರಲ್ಲಿದೆ.

ಗಂಡಿನವರು ಹೆಣ್ಣಿನ ಮನೆಗೆ ಬಂದಾಗ ಶುಭ ಶಕುನಗಳು ಗೋಚರಿಸಿದ ಮೇಲೆ ಹೆಣ್ಣಿನ ಕುಲ, ಗೋತ್ರ, ಬಳಿ, ಸಂಬಂಧಿಕರ ಬಗ್ಗೆ ವಿಚಾರಿಸಿ ತಮ್ಮ ಒಪ್ಪಿಗೆ ತಿಳಿಸುವರು. ನಿಶ್ಚಿತಾರ್ಥವನ್ನು ಮನೆ ನೋಡುವುದು, ತಾಂಬೂಲ ಬದಲಾಯಿಸಿಕೊಳ್ಳುವುದು, ಹೆಣ್ಣು ಗಟ್ಟಿಗೊಳಿಸುವುದು ಎಂದು ಕರೆಯುವರು. ಗಂಡಿನವರಿಗೆ ಹೆಣ್ಣು ಮತ್ತು ಹೆಣ್ಣಿನ ಮನೆತನ ಒಪ್ಪಿಗೆಯಾದ ಮೇಲೆ ಒಂದು ಶುಭ ದಿನದಲ್ಲಿ ಹೆಣ್ಣು ಗಟ್ಟಿಮಾಡುವ ಕಾರ್ಯ ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ.

ನಿಶ್ಚಿತಾರ್ಥಕ್ಕೆ ಹೆಣ್ಣಿನ ಮನೆಗೆ ಗಂಡಿನವರು ಬಂದಾಗ ಮೊದಲು 'ಜಾಡಿಪೂಜೆ' ನಡೆಯುತ್ತದೆ. ನಂತರ ಹೆಣ್ಣಿನವರು ತಮ್ಮ ಮಗಳನ್ನು ಕರೆತಂದು ನೆಲದ ಮೇಲೆ ಹಾಸಿರುವ ಕರಿಕಂಬಳಿ ಗದ್ದುಗೆಗೆ ನಮಸ್ಕರಿಸಿ ಕುಳಿತುಕೊಳ್ಳಲು ಹೇಳುತ್ತಾರೆ. ಐದು ಜನ ಮುತ್ತೈದೆಯರು ಗಂಡಿನವರು ತಂದಿರುವ ಸೀರೆ, ಕುಪ್ಪಸ, ಹಣ್ಣು, ಕಾಯಿ, ಕೊಬ್ಬರಿ, ಅರಿಷಿಣ ಬೇರು, ಉತ್ತತ್ತಿ, ನೆನಗಡಲೆ (ಕಡ್ಲಿ)ಯನ್ನು ಮದುವೆಯಾಗುವ ಹೆಣ್ಣಿಗೆ ಉಡಿ ತುಂಬುವರು. ಹುಡುಗ ಮತ್ತು ಹುಡುಗಿಯ ಕಡೆಯ ಯಜಮಾನರೊಬ್ಬರು ಸೇರಿ ಕಂಬಳಿ ಗದ್ದುಗೆಯ ಎದುರು ಬದರು ನಿಂತು ತಲೆಗೆ ರುಮಾಲು ಸುತ್ತಿಕೊಂಡು "ನಮ್ಮ ಹೆಣ್ಣನ್ನು ನಿಮಗೆ ಕೊಟ್ವಿ" ಎಂದು ಹೆಣ್ಣಿನ ಯಜಮಾನ ಹೇಳಿದರೆ ಗಂಡಿನ ಯಜಮಾನ "ನಿಮ್ಮ ಹೆಣ್ಣನ್ನು ನಾವು ಕೊಂಡ್ವಿ" ಎಂದು ಹೇಳಿ ನಿಶ್ಚಿತಾರ್ಥ ಕಾರ್ಯಕ್ರಮ ಮುಗಿಸುತ್ತಾರೆ. ನಿಶ್ಚಿತಾರ್ಥ ಮುಗಿದ ಮೇಲೆ ಯಾವುದೇ ಕಾರಣಕ್ಕೂ ಹೆಣ್ಣಿನ ಬಗ್ಗೆ ಅಪಸ್ವರ ಎತ್ತಕೂಡದು ಮತ್ತು ಮದುವೆ ರದ್ದುಗೊಳಿಸಲಾಗದು ಎಂಬ ನಿಯಮ ಕಾಡುಗೊಲ್ಲ ರಲ್ಲಿದೆ. ಇತ್ತೀಚೆಗೆ ನಿಶ್ಚಿತಾರ್ಥ ಮಾಡಿದ ದಿನವೇ ಮದುವೆಯ ಸಮಯವನ್ನು ನಿಗದಿಪಡಿಸುವುದನ್ನು ಕಾಣುತ್ತಿದ್ದೇವೆ.

ಒಂದು ಶುಭ ದಿನದಂದು ಧಾರೆ ಕಾರ್ಯವನ್ನು ನಡೆಸಲು ಹಿರಿಯರು ತೀರ್ಮಾನಿಸುತ್ತಾರೆ. ಆಷಾಡ ಮಾಸದಲ್ಲಿಯೂ ಕಾಡುಗೊಲ್ಲರು ಮದುವೆ ಕಾರ್ಯಗಳನ್ನು ನಡೆಸುವುದುಂಟು. ಇವರ ಪಂಚಾಂಗ, ಒಳ್ಳೆಯ ಮೂಹೂರ್ತ ಮುಂತಾದವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ನಿಶ್ಚಿತಾರ್ಥದ ಸಮಯದಲ್ಲಿ ಹೆಣ್ಣಿಗೆ ಕೊಡಬೇಕಾದ 'ತೆರವಿನ' ಬಗ್ಗೆ ಚರ್ಚೆಯಾಗುತ್ತದೆ. ತೆರ ಕೊಡುವ ಪದ್ಧತಿ ಇವರಲ್ಲಿಯೂ ಪ್ರಾಚೀನ ಕಾಲದಿಂದ ಬೆಳೆದು ಬಂದಿದೆ. ತೆರ ಕೊಡುವ ವಾಗ್ದಾನ ಮುಗಿದ ಮೇಲೆಯೇ ಹೆಣ್ಣಿನ ಕಡೆಯ ಹಿರಿಯ 'ನಮ್ಮ ಹೆಣ್ಣನ್ನು ನಿಮಗೆ ಕೊಟ್ವಿ' ಎಂದು ಹೇಳಿದರೆ ಗಂಡಿನ ಕಡೆಯ ಹಿರಿಯ "ನಿಮ್ಮ ಹೆಣ್ಣನ್ನು ನಾವು ಕೊಂಡ್ವಿ" ಎಂದು ಹೇಳುವುದು. ನಾವು ಹಣವನ್ನು ತೆರವಿನ ರೂಪದಲ್ಲಿ ನಿಮಗೆ ನೀಡಿ ನಿಮ್ಮ ಹೆಣ್ಣನ್ನು ಪಡೆದುಕೊಂಡೆವು ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಕಾಡುಗೊಲ್ಲರು ಹದಿನಾರು, ಇಪ್ಪತ್ನಾಲ್ಕು, ಮೂವತ್ತು ಅಥವಾ ನೂರು ರೂಪಾಯಿ ತೆರ ಕೊಡುವುದು ಕಂಡುಬರುತ್ತದೆ. ಆ ಮೇಲೆ ಹೆಣ್ಣಿಗೆ ಗಂಡಿನವರು ಯಾವ ಯಾವ ತರದ ಬಟ್ಟೆಗಳನ್ನು ಹಾಗೂ ಒಡವೆಗಳನ್ನು ತರಬೇಕು ಎಂಬುದನ್ನು ತೀರ್ಮಾನಿಸುತ್ತಾರೆ. ಮದುವೆಗೆ ಸಂಬಂಧಿಸಿದ ಸಿದ್ಧತೆಗಳನ್ನು

ಎರಡು ಕಡೆಯವರು ಮಾಡಿಕೊಳ್ಳಲು ಸಿದ್ಧರಾಗುತ್ತಾರೆ ಮತ್ತು ಈ ಸಂದರ್ಭದಲ್ಲಿ ಪರಸ್ಪರ ವೀಳ್ಯೆ ಬದಲಾಯಿಸಿಕೊಳ್ಳುವ ಕಾರ್ಯವೂ ನಡೆಯುತ್ತದೆ. ನಿಶ್ಚಿತಾರ್ಥದ ಎಲ್ಲ ಕಾರ್ಯಗಳು ಮುಗಿದ ಮೇಲೆ ಹೆಣ್ಣಿನವರು ಮುತ್ತೈದೆಯ ತಲೆಯ ಮೇಲೆ ಸುಣ್ಣದ ಬೊಟ್ಟು ಹಚ್ಚಿರುವ ಕರಗ ಹೊರಿಸಿಕೊಂಡು, ಐದು ಜನ ಗಂಡಸರು ಗಂಡಿನ ಮನೆಗೆ ಹೋಗುವ ಸಂಪ್ರದಾಯವಿದೆ. ಗಂಡಿನ ಮನೆಯಲ್ಲಿಯೂ ಹೆಣ್ಣಿನವರು ಶುಭ ಸೂಚನೆಗಳನ್ನು ಗಮನವಿಟ್ಟು ನೋಡುತ್ತಾರೆ.

ನಿಶ್ಚಿತಾರ್ಥ ಕಾರ್ಯಕ್ರಮಗಳನ್ನು ಕಾಡುಗೊಲ್ಲರು ಹೆಚ್ಚಾಗಿ ಸಾಯಂಕಾಲದ ಸಮಯದಲ್ಲಿ ಇಟ್ಟುಕೊಳ್ಳುತ್ತಾರೆ. ಈ ಸಂದರ್ಭದಲ್ಲಿಯೂ ಸುತ್ತಮುತ್ತಲಿನ ಶಕುನಗಳನ್ನು ಗಮನಿಸುತ್ತಾರೆ. ಬೆಕ್ಕು ಒಂದೇ ಸವನೇ ಕುಯ್ ಗುಡುತ್ತಿದ್ದರೆ, ಮಡಿಕೆಗಳು ತಾವಾಗಿ ಬಿದ್ದು ಒಡೆದರೆ, ಹಾವು ಅಥವಾ ಬೆಕ್ಕು ಅಡ್ಡಬಂದರೆ, ಗಂಡಿನವರು ಮಲಗಿದಾಗ ಕೆಟ್ಟ ಕನಸುಗಳನ್ನು ಕಂಡರೆ ಅದನ್ನು ಅಶುಭ ಎಂದು ತಿಳಿದು ಮದುವೆಗೆ ಸಂಬಂಧಿಸಿದ ಮಾತುಕತೆಗಳನ್ನು ಇದ್ದಕ್ಕಿದ್ದಂತೆ ಇತ್ಯರ್ಥಗೊಳಿಸುವರು. ನಿಶ್ಚಿತಾರ್ಥದ ದಿನ ಮದುವೆಯಾಗುವ ಹುಡುಗ ಹೆಣ್ಣಿನ ಮನೆಗೆ ಬರಬಾರದೆಂಬ ನಿಯಮವಿದೆ. ನಿಶ್ಚಿತಾರ್ಥದ ದಿನ ಗಂಡು ಅಂದು ಹೊಲದಲ್ಲಿ ಕೃಷಿ ಕೆಲಸದಲ್ಲಿ ತೊಡಗಿಸಿಕೊಂಡಿರಬೇಕು ಅಥವಾ ದನ ಹಾಗೂ ಕುರಿ ಕಾಯುವ ಕೆಲಸದಲ್ಲಾದರೂ ಅವನು ನಿರತನಾಗಿರಬೇಕೆಂಬ ನಿಯಮ ಇವರಲ್ಲಿದೆ. ಆದರೆ ಈ ಪದ್ಧತಿ ಇಂದು ಕಡಿಮೆಯಾಗಿದೆ. ಮದುವೆಯಾಗುವ ಹುಡುಗನೂ ನಿಶ್ಚಿತಾರ್ಥ ಕಾರ್ಯದಲ್ಲಿ ಭಾಗವಹಿಸಿ ತನ್ನ ಬೇಡಿಕೆಗಳನ್ನು ಹಿರಿಯರ ಮುಂದೆ ಒಪ್ಪಿಸುತ್ತಾನೆ ಮತ್ತು ಈ ಸಂದರ್ಭದಲ್ಲಿ ಹೆಣ್ಣು-ಗಂಡನ್ನು ಕುಳ್ಳಿರಿಸಿ ಅವರಿಗೆ ಮಾಲೆ ಹಾಕಿ ಆರತಿ ಮಾಡುವ ಸಂಪ್ರದಾಯವನ್ನು ಕಾಡುಗೊಲ್ಲರು ಏರ್ಪಡಿಸುತ್ತಿರುವುದು ಕಂಡುಬರುತ್ತಿದೆ.

೪.೫.೨. ಮದುವಣಗಿತ್ತಿ ಶಾಸ್ತ್ರ

ಮದುವೆಯಾಗುವ ಹೆಣ್ಣಿಗೆ ಮಾಡುವ ಶಾಸ್ತ್ರವನ್ನೇ 'ಮದುವಣಗಿತ್ತಿ ಶಾಸ್ತ್ರ' ಎಂದು ಕರೆಯುವರು. ಈ ಶಾಸ್ತ್ರ ಇತರೆ ಸಮುದಾಯದವರಿಗಿಂತ ಭಿನ್ನವಾಗಿರುತ್ತದೆ. ಮದುವೆಗಾಗಿ ಅಲಂಕರಿಸಿದ ಕನ್ಯೆಯನ್ನು ಮುತ್ತೈದೆಯರು ಕೈಯಲ್ಲಿ ಕಳಸವನ್ನು ಹಿಡಿದುಕೊಂಡು, ಜೊತೆಗೆ ಕರಿಕಂಬಳಿ, ತೆಂಗಿನ ಕಾಯಿ, ಎಲೆ, ಅಡಿಕೆ, ಮತ್ತು ಒಂದು ತಂಬಿಗೆ ನೀರು ತೆಗೆದುಕೊಂಡು ಕುರಿಯ ಹಟ್ಟಿಯೊಳಗೆ ಹೋಗುವರು. ಕುರಿ ಹಟ್ಟಿಯಲ್ಲಿ ಕಂಬಳಿ ಹಾಸಿ ಅದರ ಮೇಲೆ ಅಕ್ಕಿಯನ್ನು ಹಾಕಿ ಹಸೆ ಬರೆದು ಕನ್ಯೆಯನ್ನು ಅದರ ಮೇಲೆ ಕುಳ್ಳರಿಸುವರು. ನಂತರ ದೇವರ ಜಡೆವು (ಜನ್ನಿಗೆ ಕುರಿ) ಪೂಜಿಸಿ ಕಾಯಿ ಒಡೆದು, ಐದಾರು ಜನ ಹೆಂಗಸರು ಕನ್ಯೆಗೆ ಅರಿಷಿಣ ಮತ್ತು ಎಣ್ಣೆ ಹಚ್ಚಿ ಆ ಮೇಲೆ ತಲೆಗೆ ಜನ್ನಿಗೆ ಕುರಿ ಹಾಲು ಒತ್ತುತ್ತಾರೆ. ಮದುವೆಯ ಹೆಣ್ಣನ್ನು ಮನೆಯೊಳಗೆ ಕರೆತರುವರು. ಈ ಸಂದರ್ಭದಲ್ಲಿ ಹೆಂಗಸರು ಅನೇಕ ಹಾಡುಗಳನ್ನು ಹಾಡುತ್ತಾರೆ. ಬಳಿಕ ಹೆಣ್ಣಿಗೆ ಸ್ನಾನ ಮಾಡಿಸಿ ಮದುವೆಗೆ ತಂದಿರುವ ಸೀರೆ ಒಡವೆಗಳನ್ನು ಇಟ್ಟು ಪೂಜಿಸುತ್ತಾರೆ.

ಹೆಣ್ಣಿನ ಮನೆಯ ಮುಂದೆ ನೆಲದಲ್ಲಿ ರಂಗೋಲಿ ಹಾಕಿ ನಾಲ್ಕು ತೆಗ್ಗುಗಳನ್ನು ತೋಡಿ ಅದರಲ್ಲಿ ನೆಲ್ಲು ಹಾಕಿ ಮುತ್ತೈದೆಯರಿಂದ ಒನಕೆಯ ಮೂಲಕ ನೆಲ್ಲು(ಭತ್ತ) ಕುಟ್ಟುವ ಸಂಪ್ರದಾಯ ಮಾಡಿಸುತ್ತಾರೆ. ಇದಕ್ಕೆ 'ಒಳ್ಳಕ್ಕಿಪೂಜಾ ಶಾಸ್ತ್ರ' ಎಂದು ಕರೆಯುವರು.

೪.೫.೩. ಚಪ್ಪರ ಹಾಕುವ ಮತ್ತು ಅರುಣೆ ತರುವ ಶಾಸ್ತ್ರ

ಕಾಡುಗೊಲ್ಲರ ಮದುವೆಯಲ್ಲಿ ಅರುಣೆ ತರುವ ಶಾಸ್ತ್ರ ಅತಿ ಮುಖ್ಯವಾದದ್ದು. ಅರುಣೆ ಎಂದರೆ 'ಮಡಿಕೆ'. ಮಡಿಕೆ ಇಲ್ಲದೆ ಕಾಡುಗೊಲ್ಲರಲ್ಲಿ ಮದುವೆ ಶಾಸ್ತ್ರ ನಡೆಯುವುದೇ ಇಲ್ಲ. ಈ ಕಾರ್ಯವನ್ನು ಸಾಮಾನ್ಯವಾಗಿ ಹೆಂಗಸರೆ ನಿರ್ವಹಿಸುತ್ತಾರೆ. ಒಂದು ಮುಕ್ಕರಿಗೆ ಒಂದು ಕಟ್ಟು ವೀಳ್ಯದ ಎಲೆ, ಅಡಿಕೆ, ತೆಂಗಿನ ಕಾಯಿ, ಒಂದು ಕುಡಿಕೆ ಎಣ್ಣೆ ತುಂಬಿಡುತ್ತಾರೆ. ಅರುಣೆ ತರುವವರು ಆ ಮುಕ್ಕರಿಯನ್ನು ಹೊತ್ತುಕೊಂಡು ಕುಂಬಾರನ ಮನೆಗೆ ಹೋಗಬೇಕು. ಕುಂಬಾರನ ಮನೆಗೆ ಹೋಗುವಾಗ ಮುತ್ತೈದೆಯರು ಕಳಸ ಹಾಗೂ ಅಕ್ಕಿ, ಬೆಲ್ಲ, ಬೇಳೆ, ಎಲೆ, ಅಡಿಕೆ, ಕಾಯಿ ಮತ್ತು ದಕ್ಷಿಣೆಯನ್ನು ತೆಗೆದುಕೊಂಡು ಹೋಗುವರು. ಅದನ್ನೆಲ್ಲವನ್ನು ಕುಂಬಾರನಿಗೆ ಕೊಟ್ಟು ಕುಂಬಾರ ಬಳಸುವ ಚಿಕ್ಕಗಂಡು ಪೂಜಿಸಿ ಅಲ್ಲಿಂದ ಮುತ್ತೈದೆಯರು ಐದು ಮಣ್ಣಿನ ಮಡಿಕೆಗಳನ್ನು ಹೊತ್ತು ತರುತ್ತಾರೆ. ಹೆಣ್ಣಿನ ಮನೆಯ ಮುಂದೆ ಪ್ರತ್ಯೇಕವಾಗಿ ಕಟ್ಟಿರುವ 'ಅರುಣೆಗುಡ್ಲು' ಎಂಬ ಸ್ಥಳದಲ್ಲಿ ಅವುಗಳನ್ನು ಇಡುತ್ತಾರೆ. ಮಹಿಳೆಯರು ಆ ಅರುಣೆಗಳಿಗೆ ಸುಣ್ಣಹಚ್ಚಿ, ಬಣ್ಣ ಇಲ್ಲವೇ ತೊಂಡೆ ಸೊಪ್ಪಿನ ರಸದಿಂದ ಅವುಗಳನ್ನು ಅಲಂಕಾರ ಮಾಡುವರು. ಅವುಗಳ ಮೇಲೆ ಚಿತ್ತಾರ ಬರೆಯುತ್ತಾರೆ. ಅರುಣೆ ತರುವುದನ್ನು ಇವರಲ್ಲಿದೆ. ಕೆಲವರು 'ಐರಾಣಿ ತರುವುದು' ಎಂದೂ ಕರೆಯುವರು. ಕಾಡುಗೊಲ್ಲರು ಈ ಅರುಣೆಗಳಿಗೆ ಮೈಲಿಗೆಯಾಗದಂತೆ ಕಾಪಾಡುತ್ತಾರೆ. ನಾಯಿ ಅಥವಾ ಬೆಕ್ಕು ಈ ಅರುಣೆಗಳನ್ನು ಮುಟ್ಟಿದರೆ ಮೈಲಿಗೆಯಾಗುತ್ತದೆಂದು ತಿಳಿದು ಅವುಗಳನ್ನು ಕಾಯುವುದಕ್ಕಾಗಿ ಒಬ್ಬರನ್ನು ನೇಮಿಸಿರುತ್ತಾರೆ. ಕಾಡುಗೊಲ್ಲರ ಮದುವೆ ಸಂದರ್ಭದಲ್ಲಿ ಅರುಣೆಗಳು ಅತಿ ಪವಿತ್ರವಾದ ವಸ್ತುಗಳಾಗಿವೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಚಪ್ಪರ ಹಾಕುವ ಕೆಲಸವನ್ನು ಪುರುಷರೆ ನಿರ್ವಹಿಸುತ್ತಾರೆ. ಚಪ್ಪರ ಹಾಕಲು ಬರುವ ಗಂಡಸರಿಗೆ ಐದು ಸೇರು ಅಕ್ಕಿ, ತೆಂಗಿನಕಾಯಿ, ಬೆಲ್ಲ, ಉತ್ತತ್ತಿ, ಬೆಳ್ಳುಳ್ಳಿ ಕೊಡುತ್ತಾರೆ. ಚಪ್ಪರಕ್ಕೆ ಬೇಕಾಗುವ ವಸ್ತುಗಳನ್ನು ಕಡಿದು ತರಲು ಬಳಸುವ ಕುಡುಗೋಲು, ಮಚ್ಚೆ, ಕೊಡ್ಲಿ ಮುಂತಾದ ಆಯುಧಗಳನ್ನು ಮೊದಲು ಪೂಜಿಸಿ ತೆಗೆದುಕೊಂಡು ಹೋಗುವರು. ಮದುವೆ ಹೆಣ್ಣಿನ ಮನೆಯಲ್ಲಿ ನಡೆದರೂ ಗಂಡಿನ ಮನೆಯಲ್ಲಿಯೂ ಚಪ್ಪರ ಹಾಕುವ ಸಂಪ್ರದಾಯ ಕಾಡುಗೊಲ್ಲರಲ್ಲಿದೆ. ಮೊದಲು ದೊಡ್ಡ ಚಪ್ಪರವನ್ನು ಹಾಕಿದ ಮೇಲೆ, ಐದು ಕಳ್ಳಿಯ ಗೂಟಗಳನ್ನು ನೆಟ್ಟು ಹೆಣ್ಣಿಗಾಗಿ ಚಪ್ಪರ ನಿರ್ಮಿಸಿದರೆ, ಗಂಡಿಗಾಗಿ ತೆಂಗಿನ ಗರಿಗಳಿಂದ ಕೂಡಿದ ಹಾಗೂ ಹೊಂಗೆ ಸೊಪ್ಪು ಹೊದಿಸಿದ ಚಪ್ಪರ ಸಿದ್ಧಪಡಿಸುತ್ತಾರೆ.

೪.೫.೪ ಧಾರೆ ಕಾರ್ಯ

ಧಾರೆಗಿಂತ ಮೊದಲು ಕಾಡುಗೊಲ್ಲರು ಸುರಗಿ ನೀರನ್ನು ಹಾಕುವ ಸಂಪ್ರದಾಯ ಮಾಡುತ್ತಾರೆ. ಈ ಕಾರ್ಯವನ್ನು ಮುಂಜಾನೆ ನೆರವೇರಿಸುತ್ತಾರೆ. ಹೆಣ್ಣಿಗೆ ಮುಂಜಾನೆಯ ಸಮಯದಲ್ಲಿ ಮುತ್ತೈದೆಯರು ಎಣ್ಣೆ, ಅರಿಷಿಣ ಹಚ್ಚಿ ನೀರು ಹಾಕುತ್ತಾರೆ. ಅವಳಿಗೆ ಬಿಳಿ ಸೀರೆ ತೊಡಿಸಿ ಮನೆಯ ಮುಂದೆ ಮಾಡಿರುವ ಅರುಣೆ ಗುಡ್ಲಿಗೆ ಕರೆತರುತ್ತಾರೆ. ಅಲ್ಲಿ ಕನ್ಯೆ ಅರುಣೆಗಳಿಗೆ ಪೂಜೆ ಸಲ್ಲಿಸಿ ಅರುಣೆಯನ್ನು ತಲೆಯ ಮೇಲೆ ಹೊತ್ತುಕೊಂಡು ವಧುವಿಗಾಗಿ ನಿರ್ಮಿಸಿದ ಚಪ್ಪರದಲ್ಲಿ ಅರುಣೆಯನ್ನು ಇಡುತ್ತಾಳೆ. ಹೆಣ್ಣಿನ ಚಪ್ಪರಕ್ಕೆ ಅವಳನ್ನು ಕರೆತಂದು ಹೆಣ್ಣಿಗೆ ಮೂರು ಹಸೆಯನ್ನು, ಗಂಡಿಗೆ ನಾಲ್ಕು ಹಸೆಯನ್ನು ಹಚ್ಚುವರು. ಹೆಣ್ಣಿನ ಚಪ್ಪರದ ನಾಲ್ಕೂ ಮೂಲೆಗಳಲ್ಲಿ ಇಟ್ಟಿರುವ ಗಡಿಗೆ ಮಗಿಗಳ ಮಧ್ಯೆ ಒಂದು ಕುಣಿಯನ್ನು ತೋಡಿ ಅದಕ್ಕೆ ಕುರಿ ಗೊಬ್ಬರ ಹಾಕಿ ಅದರ ಮೇಲೆ ಆ ಅರುಣೆಗಳನ್ನು ಇಡುತ್ತಾರೆ. ಈ ನಾಲ್ಕು ಗಡಿಗೆಗಳಿಗೆ ಹಂಗುದಾರವನ್ನು ಸುತ್ತಿವರಿಸಿರುತ್ತಾರೆ. ಹೆಣ್ಣನ್ನು ಧಾರೆಯ ಹಸೆಯ ಮೇಲೆ ಕುಳ್ಳಿರಿಸಿ ಬಂಧು-ಬಳಗದವರೆಲ್ಲರೂ ಅವಳ ತಲೆಗೆ ಹಾಲನ್ನು ಒತ್ತುತ್ತಾರೆ. ಗಂಡನ್ನು ಸಹ ಚಪ್ಪರಕ್ಕೆ ಕರೆತಂದು ವಧುವಿನ ಪಕ್ಕದಲ್ಲಿ ಕುಳ್ಳಿರಿಸಿ ಅಕ್ಕಿ ಮತ್ತು ಅರಳನ್ನು ಗಂಡಿನ ಕಡೆಯವರು ಹೆಣ್ಣಿನವರಿಗೆ, ಹೆಣ್ಣಿನವರು ಗಂಡಿನವರ ಮೇಲೆ ಹಾಕುವರು. ಪೂಜಾರಿ, ಗೌಡ, ಹಿರಿಯರು ಹಾಗೂ ಮೂರು ಕಟ್ಟೆಯ ಮನೆಯವರೆಲ್ಲರೂ ಧಾರೆಗೆ ಅಪ್ಪಣೆ ಕೊಡಬೇಕೆಂದು ಅಲ್ಲಿರುವ ಜನರನ್ನೆಲ್ಲ ಕೇಳುತ್ತಾರೆ. ವರನನ್ನು ಮೂಡಲದಿಕ್ಕಿಗೆ ಕುಳ್ಳರಿಸಿ ಅವನಿಗೆ ಹಾಲು ನೀರು ಬಿಡುವರು. ವರನ ಕೈಕೆಳಗೆ ವಧು ತನ್ನ ಕೈಯನ್ನು ಬೊಗಸೆ ಮಾಡಿ ಹಿಡಿಯುತ್ತಾಳೆ. ವರನ ಕೈಗೆ ಹಾಕಿದ ಹಾಲು ನೀರು ವಧುವಿನ ಕೈಗೆ ಬರುತ್ತವೆ. ಈ ಆಚರಣೆ ಮುಗಿದ ಮೇಲೆ ವಧು-ವರರನ್ನು ಎದುರು ಬದುರು ನಿಲ್ಲಿಸಿ ಅವರ ಮಧ್ಯದಲ್ಲಿ ಬಿಳಿ ಬಟ್ಟೆಯ ತೆರೆಯನ್ನು ಹಿಡಿಯುವರು. ಅವರ ಸುತ್ತ ಇರುವ ನಾಲ್ಕು ಮಡಿಕೆಗಳಿಗೆ ನೂಲನ್ನು ಐದು ಸಲ ಸುತ್ತುವರು. ಹೆಣ್ಣಿನ ತಾಯಿ ಒಂದು ತಟ್ಟೆಯನ್ನು ತೆಗೆದುಕೊಂಡು ಅದನ್ನು ವಧುವಿನ ತಲೆಯ ಮೇಲೆ ಹಿಡಿಯುತ್ತಾಳೆ. ಆಗ ಮುತ್ತೈದೆಯರು ಗಡಿಗೆಗಳಲ್ಲಿ ತುಂಬಿದ ಸುಳ್ಳೀರನ್ನು ವಧುವಿನ ತಲೆಯ ಮೇಲೆ ತಟ್ಟೆಯ ಮೂಲಕ ಹಾಕುತ್ತ ಸೋಬಾನೆ ಹಾಡುಗಳನ್ನು ಹಾಡುವರು. ಮದುವೆಗಾಗಿ ಆಗಮಿಸಿದವರೆಲ್ಲ ಸ್ವಲ್ಪ ಸ್ವಲ್ಪ ಹಾಲನ್ನು ತಟ್ಟೆಯ ಮೇಲೆ ಹಾಕುತ್ತಾರೆ. ವರನನ್ನು ಮಣಿಯ ಮೇಲೆ ಕುಳ್ಳರಿಸಿ ವಧುವಿಗೆ ಮಾಡಿದ ಆಚರಣೆಯಂತೆ ಹಾಲು ತುಪ್ಪ ಹಾಕುವರು. ಎಲೆ, ಅಡಿಕೆ, ಹೂ-ಹಣ್ಣುಗಳನ್ನಿಟ್ಟು, ತಟ್ಟೆಯಲ್ಲಿ ತಾಳಿಯನ್ನಿಟ್ಟು ಅದನ್ನು ಎಲ್ಲರಿಂದಲೂ ಮುಟ್ಟಿಸಿ ವರನ ಕೈಗೆ ಕೊಡುವರು. ವರ ಸೂರ್ಯ-ಚಂದ್ರರ, ಗುರು-ಹಿರಿಯರ, ತಂದೆ-ತಾಯಿಗಳ ಸಾಕ್ಷಿಯಾಗಿ ನಾನು ನಿನ್ನನ್ನು ಹೆಂಡತಿಯನ್ನಾಗಿ ಸ್ವೀಕರಿಸಿದ್ದೇನೆ ಎಂದು ಹೇಳುತ್ತಾನೆ. ಹಾಗೆಯೇ ವಧು ಕೂಡ ಎಲ್ಲರ ಸಾಕ್ಷಿ ಹೇಳಿ ನೀವೆ ನನ್ನ ಪತಿ ಎಂದು ಹೇಳುವಳು. ನಂತರ ವರ ವಧುವಿಗೆ ತಾಳಿ ಕಟ್ಟುತ್ತಾನೆ. ಧಾರೆ ಕಾರ್ಯಕ್ರಮವನ್ನು ಹಟ್ಟಿಯ ಪೂಜಾರಿ ನೆರವೇರಿಸಿಕೊಡುತ್ತಾನೆ.

೪.೫.೫ ಮದುವೆ ಊಟ

ಕಾಡುಗೊಲ್ಲರಲ್ಲಿ ಮದುವೆಯಾದ ಮೇಲೆ ಊಟದ ವ್ಯವಸ್ಥೆಯಲ್ಲಿ ವಿಶೇಷತೆ ಇರುವುದನ್ನು ಕಾಣುತ್ತೇವೆ. ಕಾಡುಗೊಲ್ಲರು ಇದಕ್ಕೆ 'ಬೂವ್ವ ಮಾಡುವ ಶಾಸ್ತ್ರ' ಎಂದು ಕರೆಯುವರು. ಅನ್ನದ ಉಂಡೆಗೆ ಇವರು 'ಬೂವದ ಮುದ್ದೆ' ಎನ್ನುವರು. ಧಾರೆ ಆಚರಣೆಯ ನಂತರ ಕಾಡುಗೊಲ್ಲರ ಪವಿತ್ರಸ್ಥಳವೆಂದೆ ನಂಬಿರುವ 'ಕುರಿ ಹಟ್ಟಿ'ಯಲ್ಲಿ ಒಲೆ ಗುಂಡು ಹೂಡಿ ಈ ಶಾಸ್ತ್ರವನ್ನು ಮಾಡುವರು. ಗಂಡಿನವರು ಮತ್ತು ಹೆಣ್ಣಿನವರು ತಲಾ ಮೂರು ಸೇರು ಅಕ್ಕಿ, ಒಂದು ಸೇರು ತುಪ್ಪ, ಬೆಲ್ಲ, ತೆಂಗಿನಕಾಯಿ ಕೊಟ್ಟಿರುತ್ತಾರೆ. ಒಂದು ಹೊಸ ಗಡಿಗೆಗೆ ಪೂಜೆ ಮಾಡಿ ಅದರಲ್ಲಿ ಮಡಿಯಿಂದ ಅನ್ನ ತಯಾರಿಸುವರು. ಅಗಸರು ಕೊಟ್ಟ ಮಡಿ ಬಟ್ಟೆಯಲ್ಲಿ ಅನ್ನ ಹಾಕಿ ಅದಕ್ಕೆ ತೆಂಗಿನಕಾಯಿ ತುರಿ, ಬೆಲ್ಲ, ತುಪ್ಪ, ಜೇನುತುಪ್ಪ ಸೇರಿಸಿ ಅನ್ನವನ್ನು ಅದರಲ್ಲಿ ಚನ್ನಾಗಿ ಕಲಸಿ ಐದು ದೊಡ್ಡ ಉಂಡೆಗಳನ್ನು ಮಾಡುವರು. ಪ್ರತಿಯೊಂದು ಉಂಡೆಯನ್ನು ಪ್ರತ್ಯೇಕ ತಟ್ಟೆಯಲ್ಲಿಟ್ಟು ದೇವಸ್ಥಾನದ ಹತ್ತಿರ ಒಂದು ಕರಿಕಂಬಳಿ ಗದ್ದಿಗೆಯ ಮೇಲೆ ಆ ಉಂಡೆಗಳನ್ನಿಟ್ಟು ಪೂಜಾರಿ ಅವುಗಳಿಗೆ ಪೂಜೆ ಮಾಡುವನು. ಈ ಸಂದರ್ಭದಲ್ಲಿ ವಧೂ-ವರರು ಪಕ್ಕದಲ್ಲಿಯೇ ಕುಳಿತಿರುತ್ತಾರೆ. ಈ ಉಂಡೆಗಳಿಗೆ ಊರ ಗೌಡ ತನ್ನ ಉಂಗುರದ ಮೂಲಕ ಮುದ್ರೆಯನ್ನು ಒತ್ತಿರುತ್ತಾನೆ. ಈ ಉಂಡೆಗಳಲ್ಲಿ ಗಂಡು ಮತ್ತು ಹೆಣ್ಣಿನ ಕಡೆಯವರು ತಲಾ ಎರಡು ಉಂಡೆಗಳನ್ನು ತೆಗೆದುಕೊಂಡು ಜೋರಾಗಿ ತಿನ್ನಬೇಕು. ಯಾರು ಎರಡು ಉಂಡೆಗಳನ್ನು ತ್ವರಿತವಾಗಿ ತಿಂದು ತಟ್ಟೆಯನ್ನು ಬಾರಿಸುತ್ತಾರೊ ಅವರು ಗೆದ್ದಂತೆ. ಈ ಬೂವ್ವದಲ್ಲಿ ಮೂರು ಪ್ರಕಾರಗಳಿವೆ. ೧. ತಾಯಿ ಮುದ್ದೆ ಬೂವ್ವ. ೨. ಬಳಗದ ಮುದ್ದೆ ಬೂವ್ವ. ೩. ಗೌಡನ ಮುದ್ದೆ ಬೂವ್ವ. ಇಲ್ಲಿ ಗೌಡನ ಮುದ್ದೆ ಬೂವ್ವವನ್ನು ಮದುವೆಗೆ ಆಗಮಿಸಿದವರೆಲ್ಲ ತಿನ್ನುತ್ತಾರೆ. ಬೂವ್ವ ಶಾಸ್ತ್ರವನ್ನು ಕಾಡುಗೊಲ್ಲರು ತಮ್ಮ ಮದುವೆಗಳಲ್ಲಿ ತಪ್ಪದೇ ಆಚರಿಸುವುದನ್ನು ಕಾಣುತ್ತೇವೆ.

೪.೫.೬ ಜಾಡಿ ತೀರಿಸುವ ಶಾಸ್ತ್ರ

ಊಟವಾದ ಮೇಲೆ ಕಾಡುಗೊಲ್ಲರು 'ಜಾಡಿ ತೀರಿಸುವ ಶಾಸ್ತ್ರ' ಎಂಬ ಆಚರಣೆಯನ್ನು ಮಾಡುವುದುಂಟು, ಈ ಶಾಸ್ತ್ರದಲ್ಲಿ ಎಲೆ ಅಡಿಕೆ ಪ್ರಧಾನ ಪಾತ್ರ ವಹಿಸುತ್ತದೆ. ಕಾಡುಗೊಲ್ಲರ ಮದುವೆಯಲ್ಲಿ ಎಲೆ ಅಡಿಕೆ ಹೆಚ್ಚಿನ ಪಾತ್ರ ವಹಿಸುತ್ತದೆ. ಈ ಸಂದರ್ಭದಲ್ಲಿ ಎಲೆ ಅಡಿಕೆ ಹೆಚ್ಚಿನ ಪ್ರಮಾಣದಲ್ಲಿ ಖರ್ಚಾಗುತ್ತದೆ. ಈ ಆಚರಣೆಯಲ್ಲಿ ಒಂದು ಗಡಿಗೆ ತುಂಬ ಅಡಿಕೆಯನ್ನು ತುಂಬಿರುತ್ತಾರೆ. ಅದರ ಮುಚ್ಚಳವನ್ನು ಬಾಳೆ ಎಲೆಯಿಂದ ಮುಚ್ಚಿ ಅದರ ಮೇಲೆ ಮೂರು ಕಟ್ಟೆಮನೆಗಳ ಗೌಡರು ಮುದ್ರೆ ಉಂಗುರಗಳನ್ನು ಅದರ ಮೇಲಿಟ್ಟು, ಸಗಣಿ ಉಂಡೆಗೆ ಉಂಗುರಗಳನ್ನು ಒತ್ತಬೇಕು. ಅದನ್ನು ಯಾರೂ ಮುಟ್ಟುವಂತಿಲ್ಲ. ಅದಕ್ಕೆ ಮೂರು ಜನ ಗೌಡರು ಮೊಹರು ಹಾಕಿರುತ್ತಾರೆ ಎಂಬ ವಿಷಯ ಎಲ್ಲರಿಗೂ ತಿಳಿದಿರುತ್ತದೆ. ಇದರ ಜೊತೆಗೆ ಹತ್ತಾರು ಎಲೆ ಕಟ್ಟುಗಳನ್ನು ಇಟ್ಟಿರುತ್ತಾರೆ. ಹೆಣ್ಣಿನ ಮನೆಯವರು ಈ ಎಲೆ ಕಟ್ಟುಗಳನ್ನು ತೆಗೆದುಕೊಂಡು ಗಂಡಿನ ಮನೆಯ ವೀಳ್ಯ, ಪೂಜಾರಿಯ ವೀಳ್ಯ, ಗ್ರಾಮದ ಪಟೇಲ ಹಾಗೂ ಶಾನಭೋಗರ ವೀಳ್ಯ, ಕುಲದವರ ವೀಳ್ಯ, ಹಾಗೂ ಪೂಜಾರಿಯ ವೀಳ್ಯ ಎಂದು ವಿಂಗಡಿಸುತ್ತಾರೆ.

ಈ ಕಾರ್ಯವನ್ನು 'ಕರಡಿವಂಶ'ದ ಗೊಲ್ಲರು ಮಾಡುತ್ತಾರೆ. ಕರಡಿಗೊಲ್ಲರಿಗೆ ಮಾತ್ರ ಮದುವೆಯ ಸಂದರ್ಭದಲ್ಲಿ ಜಾಡಿ ಹಾಸುವ ಮತ್ತು ಅದನ್ನು ತೆಗೆಯುವ ಅಧಿಕಾರ ಇರುತ್ತದೆ. ಮದುವೆ ಹಾಗೂ ಇತರೆ ಸಮಾರಂಭಗಳಲ್ಲಿ ಕಾಡುಗೊಲ್ಲರಲ್ಲಿ ಇಂತಿಂತಹ ವಂಶದವರು ಇಂತಹ ಕೆಲಸಗಳನ್ನು ಕಡ್ಡಾಯವಾಗಿ ಪೂರೈಸಬೇಕೆಂಬ ನಿಯಮವಿದೆ.

೪.೫.೭ ಮನೆತುಂಬಿಕೊಳ್ಳುವ ಶಾಸ್ತ್ರ

ಧಾರೆಯ ಎಲ್ಲ ಆಚರಣೆಗಳು ಹೆಣ್ಣಿನ ಮನೆಯಲ್ಲಿ ಮುಗಿದ ಮೇಲೆ ಅಂದೇ ಸಾಯಂಕಾಲ ನವ ವಧೂ-ವರರನ್ನು ಗಂಡಿನ ಮನೆಗೆ ಕರೆತಂದು ಮನೆ ತುಂಬಿಸಿಕೊಳ್ಳುವ ಶಾಸ್ತ್ರವನ್ನು ಗಂಡಿನ ಮನೆಯಲ್ಲಿ ನೆರವೇರಿಸುವರು. ಗಂಡಿನ ಮನೆಗೆ ಬಂದ ನವ ದಂಪತಿಗಳನ್ನು ಮನೆಯ ಹೊಸ್ತಿಲಿನಲ್ಲಿ ನಿಲ್ಲಿಸಿ ವರನ ತಂಗಿ ಅಥವಾ ಅಕ್ಕ ಮತ್ತು ಅಣ್ಣ ಅತ್ತಿಗೆಯರು ನವ ದಂಪತಿಗಳ ಕಾಲನ್ನು ತೊಳೆದು, ಅಕ್ಕ ಅಥವಾ ತಂಗಿ ನನ್ನ ಮಗನಿಗೆ ಹೆಣ್ಣು ಹೆತ್ತು ಕೊಡಬೇಕೆಂದು ಕೇಳುತ್ತಾಳೆ. ಜೊತೆಗೆ ನನಗೆ ವಿವಿಧ ಉಡುಗೊರೆಗಳನ್ನು ಕೊಡಬೇಕಾಗಿ ಕೇಳುತ್ತಾಳೆ. ಅಣ್ಣನಾದವನು ನಿನಗೆ ಹೆಣ್ಣು ಹೆತ್ತು ಕೊಡುತ್ತೇನೆಂದು ಹೇಳುವವರೆಗೆ ತಂಗಿ ಅಥವಾ ಅಕ್ಕಂದಿರು ಅವನ ಕಾಲನ್ನು ಬಿಡುವುದಿಲ್ಲ. ಅಣ್ಣ ಹೆಣ್ಣು ಕೊಡುತ್ತೇನೆಂದು ಒಪ್ಪಿದ ಮೇಲೆ ಅವರಿಗೆ ಆರತಿ ಮಾಡಿ ಒಳಗೆ ಕರೆದುಕೊಳ್ಳುತ್ತಾರೆ. ನವ ದಂಪತಿಗಳನ್ನು ಒಳಗೆ ಕರೆಯುವುದಕ್ಕಿಂತ ಪೂರ್ವದಲ್ಲಿ ಅವನ ಹೆಂಡತಿಯ ಕೈಗೆ ಅಕ್ಕಿ ಕೊಡುತ್ತಾರೆ. ಅವಳು 'ನನ್ನ ಅತ್ತೆ ಮಾವರ ಮನೆ ಹಾಲು ಉಕ್ಕಿದಂತೆ ಉಕ್ಕಲಿ' ಎಂದು ಹೇಳುತ್ತಾ ಅಕ್ಷತೆಯನ್ನು ತಟ್ಟೆಗೆ ಹಾಕುವಳು. ನಂತರ ಗಂಡಿನ ಎಡಗಾಲು ಹೆಬ್ಬೆರಳಿನ ಸಂದಿಯಲ್ಲಿ ಹಾಗೂ ಹೆಂಡತಿಯ ಬಲಗಾಲು ಹೆಬ್ಬೆರಳಿನ ಸಂದಿಯಲ್ಲಿ ಮಳೆಯನ್ನು ಬಡಿಯುವರು. ಗಂಡ ಹೆಂಡತಿ ಈ ಮನೆಯಲ್ಲಿ ಶಾಶ್ವತವಾಗಿ ಉಳಿಯಲಿ ಎಂಬುದೇ ಈ ಆಚರಣೆಯ ಮುಖ್ಯ ಉದ್ದೇಶವಾಗಿರುತ್ತದೆ.

ಈ ಆಚರಣೆಯ ನಂತರ ಅತ್ತೆಯ ಜವಾಬ್ದಾರಿಯನ್ನು ಸೊಸೆಗೆ ಹತ್ತಾಂತರಿಸುವ ಕಾರ್ಯಕ್ರಮ ನಡೆಯುತ್ತದೆ. ಈ ಆಚರಣೆಯಲ್ಲಿ ಮನೆಯ ಮುಖ್ಯ ಬಾಗಿಲು ಹತ್ತಿರ ಒಂದು ಗೂಟವನ್ನು ನೆಟ್ಟು, ಹೊಸ ಗಡಿಗೆಯಲ್ಲಿ ಮೊಸರು ಹಾಕಿ ಒಂದು ತಂಬಿಗೆ ನೀರನ್ನು ಹಾಗೂ ಕಡಗೋಲನ್ನು ಇಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಹೊಸದಾಗಿ ಮನೆಗೆ ಬಂದ ಸೊಸೆಯ ಕೈಯಿಂದ ಗೂಟಕ್ಕೆ ಮತ್ತು ಮೊಸರಿನ ಗಡಿಗೆ ಚಿಗಳಿ, ತಂಬಿಟ್ಟು, ಹಣ್ಣು, ಕಾಯಿ ಇಟ್ಟು ಪೂಜೆ ಮಾಡಿಸುತ್ತಾರೆ. ಸೊಸೆಯಾದವಳು ಕಡಗೋಲಿನಿಂದ ಆ ಮೊಸರನ್ನು ಕಡೆಯುತ್ತಾಳೆ. ಮಜ್ಜಿಗೆಯನ್ನು ಬೇರೊಂದು ಗಡಿಗೆಯಲ್ಲಿ ಹಾಕಿಕೊಂಡು ಮಜ್ಜಿಗೆ ಹಾಗೂ ಬೆಣ್ಣೆಮಾರಲು ಹೋಗುವ ಸನ್ನಿವೇಶವನ್ನು ಏರ್ಪಡಿಸುತ್ತಾರೆ. ಹೀಗೆ ಸೊಸೆ ಮಜ್ಜಿಗೆ ಮಾರಲು ಹೋಗುತ್ತಿರುವಾಗ ಕಾಡುಗೊಲ್ಲರ ಮುತ್ತೈದೆಯರು ಕೃಷ್ಣಗೊಲ್ಲರ ಪದ್ಯಗಳನ್ನು ಹಾಡುತ್ತಾರೆ. ಇಲ್ಲಿಗೆ ಅತ್ತೆಯ ಜವಾಬ್ದಾರಿಯನ್ನು ಸೊಸೆಗೆ ಹಸ್ತಾಂತರ ಮಾಡುವ ಸಾಂಕೇತಿಕ ಕಾರ್ಯಕ್ರಮ ಮುಗಿಯುತ್ತದೆ.

[illegible]

[illegible]

[illegible]

[illegible]

೪.೫.೮ ಗಂಗೆಪೂಜೆ

ಪ್ರತಿಯೊಂದು ಶುಭಕಾರ್ಯದಲ್ಲಿ ಗಂಗೆ ಪೂಜೆ ಮಾಡುವುದು ಕಾಡುಗೊಲ್ಲರಲ್ಲಿ ಕಡ್ಡಾಯ. ಹೆಣ್ಣನ್ನು ಗಂಡಿನ ಮನೆಗೆ ತುಂಬಿಸಿಕೊಂಡ ಮಾರನೆಯ ದಿನ ಗಂಗೆ ಪೂಜೆಯನ್ನು ಹಮ್ಮಿಕೊಂಡಿರುತ್ತಾರೆ. ತಮ್ಮ ಹಟ್ಟಿಯ ಹತ್ತಿರವಿರುವ ಬಾವಿ, ಕೆರೆ, ಹಳ್ಳ, ಹೊಳೆ ಅಥವಾ ನೀರಿನ ಟ್ಯಾಂಕ ಹತ್ತಿರ ಐದು ಜನ ಮುತ್ತೈದೆಯರು ಸೊಸೆಯನ್ನು ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಗಂಗೆಯ ಪೂಜೆಯನ್ನು ಮಾಡಿಸಿ ಕೊಡದಲ್ಲಿ ನೀರು ತುಂಬಿಕೊಂಡು ಆ ಕೊಡವನ್ನು ಮದುವೆಯಾದ ಹೊಸ ಹೆಣ್ಣಿನ ತಲೆಯ ಮೇಲೆ ಹೊರಿಸಿಕೊಂಡು ಗಂಡಿನ ಮನೆಗೆ ಕರೆತರುತ್ತಾರೆ. ಅವಳು ಕೊಡವನ್ನು ಹೊತ್ತುಕೊಂಡು ಬಾಗಿಲಿಗೆ ಬಂದಾಗ ಗಂಡನಾದವನು ಆ ಕೊಡಕ್ಕೆ ಪೂಜೆ ಮಾಡಿ ಕೊಡದೊಳಗೆ ದಕ್ಷಿಣ ಹಾಕಿ ಕೊಡವನ್ನು ಇಳಿಸಿಕೊಳ್ಳುತ್ತಾನೆ. ಇಲ್ಲಿಗೆ ಗಂಗೆಯ ಪೂಜೆಯ ಆಚರಣೆ ಮುಗಿಯುತ್ತದೆ.

ಕಾಡುಗೊಲ್ಲರಲ್ಲಿಯ ಮದುವೆ ಸಮಾರಂಭಗಳು ಒಂದು ವಾರದ ವರೆಗೆ ಜರಗುತ್ತಿದ್ದವು. ಆಧುನಿಕತೆಯ ಪ್ರಭಾವದಿಂದ ಅವರಲ್ಲಿಯೂ ಸಹ ಈ ಆಚರಣೆ ಒಂದರಿಂದ ಎರಡು ಅಥವಾ ಮೂರು ದಿನಕ್ಕೆ ಇಳಿದಿದೆ. ಇಂದು ಕಾಡುಗೊಲ್ಲರಲ್ಲಿಯೆ ಶ್ರೀಮಂತ ಹಾಗೂ ಮಧ್ಯಮ ವರ್ಗದ ಕುಟುಂಬಗಳು ಮದುವೆ ಕಾರ್ಯಗಳನ್ನು ಕಲ್ಯಾಣ ಮಂಟಪಗಳಲ್ಲಿ ಹಮ್ಮಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಆಧುನಿಕತೆಯ ಪರಿಣಾಮ ದಿಂದ ಅನೇಕ ಕಾಡುಗೊಲ್ಲರ ಕುಟುಂಬಗಳು ತಮ್ಮ ಪಾರಂಪರಿಕ ಆಚರಣೆಗಳನ್ನು ಕಡಿಮೆ ಮಾಡಿ ಒಂದೇ ದಿನದಲ್ಲಿ ಮದುವೆ ಎಂಬ ಕಾರ್ಯವನ್ನು ಮುಗಿಸುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಕಾಡುಗೊಲ್ಲರಲ್ಲಿ ಆರ್ಥಿಕವಾಗಿ ತೀರ ಹಿಂದುಳಿದಿರುವ ಕುಟುಂಬಗಳು ಮಾತ್ರ ತಮ್ಮ ಹಟ್ಟಿಯಲ್ಲಿಯೇ ಮದುವೆ ಕಾರ್ಯಗಳನ್ನು ಮಾಡುತ್ತಿದ್ದಾರೆ. ಮಧ್ಯಮ ವರ್ಗದ ಕುಟುಂಬಗಳು ಮದುವೆಗಾಗಿ ಸಾಕಷ್ಟು ಪ್ರಮಾಣದಲ್ಲಿ ಹಣ ಖರ್ಚು ಮಾಡಿ, ಸಾಲದಿಂದ ನರಳುತ್ತಿರುವ ಕೆಲ ಕುಟುಂಬಗಳು ಅಲ್ಲಲ್ಲಿ ಕಂಡುಬರುತ್ತವೆ. ತೆರ ಕೊಡುವ ಸಂಪ್ರದಾಯ ಹೆಸರಿಗೆ ಮಾತ್ರ ಇವರಲ್ಲಿ ಕಾಣಸಿಗುತ್ತಿವೆ. ಅನೇಕ ಕಾಡುಗೊಲ್ಲರು ಇಂದು ವರದಕ್ಷಿಣೆಯನ್ನು ಪಡೆಯುತ್ತಿರುವುದು ಸಾಮಾನ್ಯವಾಗಿದೆ. ಈ ವರದಕ್ಷಿಣೆ ಪಡೆಯುವುದು ಅವರವರ ಆರ್ಥಿಕ ಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಅನೇಕ ಬಡ ಕುಟುಂಬಗಳು ಮದುವೆಯ ಖರ್ಚು-ವೆಚ್ಚ ನಿಭಾಯಿಸುವುದಕ್ಕಾಗಿ ಪರದಾಡುತ್ತಿರುವುದನ್ನು ಕಾಣುತ್ತೇವೆ. ಉಡುಗೆ-ತೊಡುಗೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಖರ್ಚುಮಾಡು ತ್ತಿರುವುದು ಕೆಲ ಕುಟುಂಬಗಳು ಮದುವೆಯ ಊಟಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ವೆಚ್ಚಮಾಡುತ್ತಿದ್ದಾರೆ. ಇತರೆ ಸಮುದಾಯಗಳಂತೆ ಸಾಲ ಮಾಡಿದರೂ ಚಿಂತೆಯಿಲ್ಲ ಮದುವೆಗಳನ್ನು ವಿಜ್ರಂಭಣೆಯಿಂದ ಮಾಡಬೇಕು ಎಂಬ ಮನೋಭಾವನೆ ಅನೇಕ ಕಾಡುಗೊಲ್ಲರ ಕುಟುಂಬಗಳು ಬೆಳೆಸಿಕೊಂಡಿವೆ.

ಸಂಗಾತಿಯ ಆಯ್ಕೆ ಒಂದು ಕಾಲದಲ್ಲಿ ಹಿರಿಯರ ಮೂಲಕವೇ ನಡೆಯುತ್ತಿತ್ತು. ಇಂದು ಅನೇಕ ಯುವಕರು ತಮ್ಮ ಆಯ್ಕೆಯನ್ನು ತಾವೇ ಮಾಡಿಕೊಳ್ಳಲು ಹವಣಿಸುತ್ತಿರುವುದನ್ನು ಅಲ್ಲಲ್ಲಿ ಕಾಣುತ್ತೇವೆ.

[illegible]

ಅಂತರ್‌ಜಾತಿ ವಿವಾಹಗಳನ್ನು ಕಾಡುಗೊಲ್ಲರು ಎಂದೂ ಒಪ್ಪುವುದಿಲ್ಲ. ಒಂದು ವೇಳೆ ಅವರಲ್ಲಿ ಯಾರಾದರೂ ಅಂತರ್‌ಜಾತಿ ವಿವಾಹ ಮಾಡಿಕೊಂಡರೆ ಅವರನ್ನು ಕುಲದಿಂದ ಬಹಿಷ್ಕಾರ ಹಾಕುವುದು ಸಾಮಾನ್ಯವಾಗಿದೆ. ಕುಟುಂಬದ ನಿರ್ವಹಣೆಗಾಗಿ ನಗರಗಳಿಗೆ ವಲಸೆ ಹೋದ ಕಾಡುಗೊಲ್ಲರು ತಮ್ಮ ಪಾರಂಪರಿಕ ಆಚರಣೆಗಳನ್ನು ಪಾಲಿಸದೇ ಇರುವುದನ್ನು ಕಾಣಬಹುದಾಗಿದೆ.

ಕಾಡುಗೊಲ್ಲರಲ್ಲಿ ಸುಮಾರು ೮೫/-ರಷ್ಟು ಜನರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಸುಮಾರು ಶೇಕಡಾ ೭೫ ರಷ್ಟು ಹೆಚ್ಚು ಕುಟುಂಬಗಳು ತೀರ ಬಡತನದಲ್ಲಿರುವುದನ್ನು ಗಮನಿಸಬಹುದು. ತೀರ ಬಡತನದಲ್ಲಿರುವ ಕುಟುಂಬ ವರ್ಗದವರೂ ತಮ್ಮ ಆದಾಯವನ್ನು ಗಮನಿಸದೇ ಮದುವೆಗಳಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಖರ್ಚು ಮಾಡಿ ಸಾಲದಲ್ಲಿಯೇ ಕಾಲಕಳೆಯುತ್ತಿರುವವರನ್ನು ಕಾಣುತ್ತೇವೆ. ಇಂತಹ ಕುಟುಂಬಗಳು ಅತೀ ಕಡಿಮೆ ಎಂದರೂ ಒಂದು ಮದುವೆಗಾಗಿ ೩೪ರಿಂದ ೪೦ ಸಾವಿರ ರೂಗಳನ್ನು ಖರ್ಚು ಮಾಡುತ್ತಿದ್ದಾರೆಂದು ತಿಳಿದುಬರುತ್ತಿದೆ. ಮಧ್ಯಮ ವರ್ಗದ ಕಾಡುಗೊಲ್ಲರು ಒಂದು ಲಕ್ಷದವರೆಗೆ ಖರ್ಚುಮಾಡಿ ಮದುವೆ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಕಾಡುಗೊಲ್ಲರು ತಮ್ಮ ಆರ್ಥಿಕ ಚಟುವಟಿಕೆಗಳನ್ನು ಮೀರಿ ಮದುವೆ ಮಾಡುತ್ತಿರುವುದಂತೂ ಸತ್ಯ.

೪.೫.೯ ವಿಧವಾ ವಿವಾಹ

ಇಂದು ಕಾಡುಗೊಲ್ಲರಲ್ಲಿ ವಿಧವಾ ವಿವಾಹಕ್ಕೆ ಸಾಮಾನ್ಯವಾಗಿ ಅವಕಾಶವಿಲ್ಲ. ಆದರೂ ಅದು ಕೂಡಿಕೆಯ ರೂಪದಲ್ಲಿ ಅಲ್ಲಲ್ಲಿ ಕಂಡುಬರುತ್ತಿದೆ. ಗಂಡ ಸತ್ತರೂ ಅವಳನ್ನ ಸುಮಂಗಲಿಯಾಗಿಯೆ ಇದ್ದಾಳೆ ಎಂದು ಕಾಡುಗೊಲ್ಲರು ತಿಳಿದುಕೊಂಡಿರುತ್ತಾರೆ. ಸಾಮಾನ್ಯವಾಗಿ ಕಾಡುಗೊಲ್ಲರ ಹೆಣ್ಣುಮಕ್ಕಳನ್ನು 'ಗೋಪಿಕಾಸ್ತ್ರೀಯರು' ಎಂದು ಅರ್ಥೈಸಿಕೊಳ್ಳುವುದುಂಟು. ಇವರು ಮಾನಸಿಕವಾಗಿ ಶ್ರೀಕೃಷ್ಣಪರಮಾತ್ಮನನ್ನೇ ತಮ್ಮ ಪತಿಯಾಗಿ ಸ್ವೀಕರಿಸಿದವರು. ಶ್ರೀ ಕೃಷ್ಣನಿಗೆ ಸಾವು ಎಂಬುದೇ ಇಲ್ಲ. ಅದಕ್ಕಾಗಿ ನಾವು ನಿತ್ಯ ಸುಮಂಗಲಿಯರು ಎಂಬ ಪರಿಕಲ್ಪನೆ ಅವರಲ್ಲಿದೆ. ಕಾಡುಗೊಲ್ಲರಲ್ಲಿ ಗಂಡನನ್ನು ಕಳೆದುಕೊಂಡ ಮಹಿಳೆ ತನ್ನ ಕುಂಕುಮ, ತಾಳಿಯನ್ನು ಕಿತ್ತು ಹಾಕುವುದಿಲ್ಲ. ಮಂಗಲ ಕರವಾದ ಆ ವಸ್ತುಗಳನ್ನು ಅವಳು ಧರಿಸಿಕೊಂಡೆ ಜೀವನ ನಡೆಸುತ್ತಾಳೆ. ಈ ಮಂಗಲಕರವಾದ ವಸ್ತುಗಳು ಶ್ರೀಕೃಷ್ಣನಿಂದ ಬಂದವು ಎಂಬ ನಂಬಿಕೆ ಅವರಲ್ಲಿದೆ. ಈ ಕಾರಣಕ್ಕಾಗಿ ಕಾಡುಗೊಲ್ಲರಲ್ಲಿ ಮಹಿಳೆಯರಿಗೆ ಹೆಚ್ಚಿನ ಗೌರವಗಳಿವೆ.

ಕಾಡುಗೊಲ್ಲರಲ್ಲಿ ವಿಧವಾ ವಿವಾಹಕ್ಕೆ ಮನ್ನಣೆ ಪುರಸ್ಕಾರಗಳು ಹಾಗೂ ಅಧಿಕೃತವಾದ ಒಪ್ಪಿಗೆ ಇರದೇ ಇದ್ದರೂ ವಿಧವಾ ವಿವಾಹಕ್ಕೆ ವಿರೋಧಿಸುವುದು ಇವರಲ್ಲಿ ಕಂಡುಬರುವುದಿಲ್ಲ. ವಿಧವೆ ಮತ್ತು ಅವಳ ಮಕ್ಕಳಿಗೆ ಬಾಳು ಕೊಡಲು ಮುಂದಾಗಿ ಬಂದ ಗಂಡನ್ನು ಇವರು ತೀರ ತುಚ್ಛವಾಗಿ ಕಾಣುವುದಿಲ್ಲ. ಮಾನವೀಯ ಅನುಕಂಪದ ಮೂಲಕ ವಿಧವಾ ವಿವಾಹಕ್ಕೆ ಸಮ್ಮತಿ ಸೂಚಿಸುವುದನ್ನು ಕಾಡುಗೊಲ್ಲರಲ್ಲಿ ಕಾಣಬಹುದಾಗಿದೆ. ಈ ವಿಧವಾ ವಿವಾಹಗಳು ಕೂಡಿಕೆ ಮೂಲಕ ನಡೆಯುತ್ತವೆ ಎಂದು ಹೇಳಬೇಕಾಗುತ್ತದೆ.

ವಿಧವೆ ಕೂಡಿಕೆ ಮಾಡಿಕೊಳ್ಳದೆ ಸ್ವತಂತ್ರವಾಗಿ ಬದುಕಲಿಚ್ಚಿಸಿದರೂ ಅವಳನ್ನು ಅತ್ಯಂತ ಗೌರವದಿಂದ ಕಾಡುಗೊಲ್ಲರು ಕಾಣುತ್ತಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಆಧುನಿಕತೆ ಎಷ್ಟೇ ಪ್ರಭಾವ ಬೀರಿದ್ದರೂ ವಿಧವೆಯಾದವಳು ಸುಮಂಗಲಿಯರ ರೂಪದಲ್ಲಿಯೆ ಬದುಕುತ್ತಿರುವುದನ್ನು ಕಾಡುಗೊಲ್ಲರ ಸಮುದಾಯದಲ್ಲಿ ಕಾಣುತ್ತೇವೆ. ಒಂದರ್ಥದಲ್ಲಿ ವಿಧವೆಯರನ್ನು ಸಮಾಜ ಕಾಣುವುದಕ್ಕೂ ಮತ್ತು ಕಾಡುಗೊಲ್ಲರೂ ಕಾಣುವುದಕ್ಕೂ ಬಹಳ ವ್ಯತ್ಯಾಸವಿದೆ. ಆಧುನಿಕ ಸಮಾಜ ವಿಧವೆಯರನ್ನು ಶೋಷಣೆಗೆ ಒಳಪಡಿಸುತ್ತಿದ್ದರೆ ಇಲ್ಲಿ ಆ ಶೋಷಣೆ ಕಂಡುಬರುವುದಿಲ್ಲ. ಕಾಡುಗೊಲ್ಲರು ತಮ್ಮ ಸಮುದಾಯದ ವಿಧವೆಯನ್ನು ಕೂಡಿಕೆ ಮಾಡಿಕೊಂಡರೆ ಸುಮ್ಮನಿರುತ್ತಾರೆ. ಆದರೆ ಬೇರೆ ಸಮುದಾಯದ ವಿಧವೆಯನ್ನು ಕೂಡಿಕೆ ಮಾಡಿಕೊಂಡರೆ ಅಥವಾ ಮದುವೆ ಮಾಡಿಕೊಂಡರೆ ಮಾನವೀಯತೆಯನ್ನು ಮರೆತು ವರ್ತಿಸುತ್ತಿರುವುದು ಕಂಡುಬರುತ್ತದೆ. ಹೀಗಾಗಿ ಇವರಲ್ಲಿ ಅಂತರ್‌ಜಾತಿ ವಿವಾಹಗಳಿಗೆ ಎಂದೂ ಮನ್ನಣೆ ಸಿಗುವುದಿಲ್ಲ.

೪.೬ ಸಾವು

ಮಾನವ ಹುಟ್ಟಿನಿಂದ ಸಾಯುವವರೆಗೆ ಅನೇಕ ಆಚರಣೆಗಳಿಗೆ ಒಳಪಡುತ್ತಾನೆ. ಮನುಷ್ಯ ಬದುಕಿರುವಾಗಿನ ಆಚರಣೆಗಳಿಗಿಂತ ಅವನು ಸತ್ತ ಮೇಲೆ ಅನೇಕ ವಿಶಿಷ್ಟ ಆಚರಣೆಗಳಿಗೆ ಒಳಗಾಗುವುದನ್ನು ಅನೇಕ ಸಮುದಾಯಗಳಲ್ಲಿ ಕಾಣುತ್ತೇವೆ. ಮಾನವನ ಜೀವನದಲ್ಲಿ ಹುಟ್ಟು, ಜವುಳ, ಋತುಮತಿ, ಮದುವೆ ಮುಂತಾದ ಸಂದರ್ಭದಲ್ಲಿ ಆಚರಿಸುವ ಆಚರಣೆಗಳಿಗಿಂತ ಸಾವು ಮತ್ತು ಸಾವಿನ ನಂತರದಲ್ಲಿ ಆಚರಿಸುವ ಆಚರಣೆಗಳು ಅತ್ಯಂತ ವಿಶಿಷ್ಟವಾಗಿರುವುದನ್ನು ಆದಿವಾಸಿ ಸಮುದಾಯಗಳಲ್ಲಿ ಕಾಣುತ್ತೇವೆ. ಮಾನವ ತನ್ನ ಜೀವಿತ ಕಾಲದಲ್ಲಿ ಆಚರಿಸಿಕೊಳ್ಳುವ ಆಚರಣೆಗಳಲ್ಲಿ ಕೆಲ ಕೊರತೆಗಳಾದರೂ ಅದು ನಡೆಯುತ್ತದೆ. ಸತ್ತ ವ್ಯಕ್ತಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಹೆಚ್ಚು ಕಡಿಮೆಯಾದರೆ ಸತ್ತ ವ್ಯಕ್ತಿಯ ಆತ್ಮ ಇದ್ದವರನ್ನು ಕಾಡುತ್ತದೆ ಎಂಬ ಬಲವಾದ ನಂಬಿಕೆ ಇದೆ. ಅದಕ್ಕಾಗಿ ಎಷ್ಟೇ ಕಷ್ಟಬಂದರೂ ಸತ್ತವ್ಯಕ್ತಿಯ ಕ್ರಿಯೆಗಳನ್ನು ಚಾಚೂ ತಪ್ಪದೇ ಆಚರಿಸುವ ಪರಂಪರೆ ಬುಡಕಟ್ಟು ಸಮುದಾಯಗಳಲ್ಲಿ ಬೆಳೆದು ಬಂದಿದೆ. ಶವ ಸಂಸ್ಕಾರಕ್ಕೆ ಸಂಬಂಧಿಸಿದ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ, ಜಾತಿಯಿಂದ ಜಾತಿಗೆ ಮತ್ತು ಅವರವರ ಆರ್ಥಿಕ ಸ್ಥಿತಿಗತಿಗನುಗುಣವಾಗಿ ವಿಭಿನ್ನವಾಗಿರುವುದನ್ನು ಕಾಣುತ್ತೇವೆ. ಬುಡಕಟ್ಟುಗಳಲ್ಲಿ ಸಾವು ಮತ್ತು ಸಾವಿನ ನಂತರದ ಆಚರಣೆಗಳು ಅನಿವಾರ್ಯವಾಗಿ ಪರಂಪರಾನುಗಾತವಾಗಿ ಉಳಿದುಕೊಂಡು ಬಂದಿವೆ. ಇದಕ್ಕೆ ಕಾರಣ ಅವರಲ್ಲಿರುವ ಭಯ.

ಸತ್ತವರ ದೇಹಕ್ಕೆ ಸಲ್ಲಿಸುವ ಗೌರವವೇ ಶವಸಂಸ್ಕಾರ. ಆ ಮೇಲೆ ಸತ್ತವರ ಆತ್ಮಕ್ಕೆ ಶಾಂತಿ ಸಿಗಲೆಂದು ಉತ್ತರ ಕ್ರಿಯೆಗಳನ್ನು ಮಾಡುತ್ತಾರೆ. ಅಂತ್ಯ ಸಂಸ್ಕಾರದ ವಿಧಿಗಳಲ್ಲಿ ವ್ಯಕ್ತಿಯೊಬ್ಬ ಮರಣ ಹೊಂದಿದ ತಕ್ಷಣದಿಂದ ಹಿಡಿದು ಸತ್ತವನ ಆತ್ಮವನ್ನು ಪೂರ್ವಜರ ಆತ್ಮಗಳೊಂದಿಗೆ ಸೇರಿಸದೇ ಹೋದರೆ ಅದು ಬದುಕಿದ ವ್ಯಕ್ತಿಗಳಿಗೆ ಅನೇಕ ತೊಂದರೆಗಳನ್ನು ಕೊಡುತ್ತದೆ ಎಂಬ ಪರಿಕಲ್ಪನೆ ಸಾಮಾನ್ಯವಾಗಿ ಎಲ್ಲ

ಸಮುದಾಯಗಳಲ್ಲಿ ಕಂಡುಬರುತ್ತದೆ. ಸತ್ತ ನಂತರ ನಡೆಯುವ ಆಚರಣೆಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಬಹುದು. ೧. ದೇಹಕ್ಕೆ ಸಂಬಂಧಿಸಿದ ಸಂಸ್ಕಾರದ ಆಚರಣೆಗಳು. ೨. ಆತ್ಮ ಸಂಸ್ಕಾರದ ಆಚರಣೆಗಳು. ದೇಹ ಸಂಸ್ಕಾರಕ್ಕೆ ಸಂಬಂಧಿಸಿದ ಆಚರಣೆಗಳು ಸತ್ತದಿನ ಅಂದರೆ ಶವವನ್ನು ಚಿತೆ ಅಥವಾ ಮಣ್ಣು ಮಾಡುವವರೆಗಿನ ಆಚರಣೆಗಳು. ಈ ಕ್ರಿಯೆಯ ನಂತರ ಸತ್ತ ಮೂರನೆಯ, ಐದನೆಯ, ಏಳನೆಯ, ಒಂಬತ್ತನೆಯ, ಹನ್ನೊಂದನೆಯ ಮತ್ತು ಇಪ್ಪತ್ತೊಂದನೆಯ ದಿನಗಳವರೆಗೆ ಆಯಾ ಸಮುದಾಯಗಳಲ್ಲಿ ಪ್ರಚಲಿತವಿದ್ದಂತೆ ಆತ್ಮ ಸಂಸ್ಕಾರಕ್ಕೆ ಸಂಬಂಧಿಸಿದ ವಿಧಿ-ವಿಧಾನಗಳು ನಡೆಯುತ್ತವೆ. ಮಾನವನ ದೇಹ ಪಂಚಭೂತಗಳಿಂದ ನಿರ್ಮಾಣವಾದಂತಹದ್ದು. ವ್ಯಕ್ತಿ ಸತ್ತ ಮೇಲೆ ಅವನ ಭೌತಿಕವಾದ ಶರೀರಕ್ಕೆ ಸಂಸ್ಕಾರ ಮಾಡಿದರೆ, ದೇಹ ಪ್ರಕೃತಿಯಲ್ಲಿನ ಪಂಚಭೂತಗಳೊಂದಿಗೆ ಸೇರಿಕೊಳ್ಳುತ್ತದೆ. ಸತ್ತ ವ್ಯಕ್ತಿಯ ದೇಹಕ್ಕೆ ಸಂಸ್ಕಾರ ಆಗುವವರೆಗೆ ಸತ್ತ ವ್ಯಕ್ತಿಯ ಆತ್ಮ ಆ ದೇಹದಲ್ಲಿಯೇ ಇರುತ್ತದೆ. ನಂತರದ ಆಚರಣೆಗಳ ಮೂಲಕ ನಡೆಯುವ ಸಂಸ್ಕಾರಗಳಿಂದ ಆತ್ಮಕ್ಕೆ ಶಾಂತಿಯಾಗಿ, ಅದು ಪೂರ್ವಜರನ್ನು ಸೇರಿಕೊಳ್ಳುತ್ತದೆ ಎಂಬ ನಂಬಿಕೆ ಸಮುದಾಯಗಳಲ್ಲಿದೆ. ಒಂದು ವೇಳೆ ಸತ್ತವರ ಆತ್ಮಕ್ಕೆ ಸಂಬಂಧಿಸಿದ ಸಂಸ್ಕಾರಗಳನ್ನು ಸರಿಯಾದ ಕ್ರಮದಲ್ಲಿ ಕೈಗೊಳ್ಳದೆ ಇದ್ದರೆ ಸತ್ತವರ ಆತ್ಮ ಭೂತ, ಪ್ರೇತ, ದೆವ್ವ ಅಥವಾ ಗಾಳಿಯಾಗಿ ಮಾನವರನ್ನು ಕಾಡುತ್ತದೆ ಎಂಬ ನಂಬಿಕೆ ಎಲ್ಲ ಆದಿವಾಸಿ ಸಮುದಾಯಗಳಲ್ಲಿದೆ.

ಆಧುನಿಕತೆಯ ಗಾಳಿ ಆದಿವಾಸಿ ಸಮುದಾಯಗಳ ಪ್ರತಿಯೊಂದು ಆಚರಣೆಯ ಮೇಲಾಗಿ ಅವರ ಅನೇಕ ಆಚರಣೆ ನಂಬಿಕೆಗಳು ಬದಲಾಗಿವೆ ಮತ್ತೆ ಕೆಲವು ರೂಪಾಂತರಗೊಂಡಿವೆ. ಆದರೆ ಸಾವು ಮತ್ತು ಸಾವಿನ ನಂತರದ ಆಚರಣೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಬದಲಾವಣೆಗಳಾಗಿರುವುದು ಆದಿವಾಸಿ ಸಮುದಾಯಗಳಲ್ಲಿ ಗೋಚರಿಸುವುದಿಲ್ಲ. ಇದಕ್ಕೆ ಅವರಲ್ಲಿಯ ಭಯ ಮತ್ತು ಆತಂಕ ಕಾರಣವಾಗಿದೆ. ಸಾವಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಸತ್ತವರ ಆತ್ಮಗಳು ಬದುಕಿರುವವರನ್ನು ಕಾಡಿಸದೆ ಇರಲಾರವು. ಆ ಕಾರಣಕ್ಕಾಗಿ ನಾವು ಎಷ್ಟೇ ನಾಗರಿಕತೆಯ ಪ್ರಭಾವಕ್ಕೊಳಗಾಗಿದ್ದರೂ ಸಾವು ಮತ್ತು ಸಾವಿನ ನಂತರದ ಆಚರಣೆಗಳನ್ನು ಪರಂಪರಾನುಗತವಾಗಿ ಆಚರಿಸಿಕೊಂಡು ಬರುತ್ತಿರುವ ರೀತಿಯಲ್ಲಿಯೆ ಅವುಗಳನ್ನು ನಾವು ಇಂದು ಆಚರಿಸುತ್ತಿದ್ದೇವೆ ಎಂದು ಅನೇಕ ಕಾಡುಗೊಲ್ಲರ ಹಿರಿಯರು, ತಿಳುವಳಿಕೆದಾರರು ತಮ್ಮ ಅಭಿಪ್ರಾಯಗಳನ್ನು ನನ್ನ ಮುಂದೆ ವ್ಯಕ್ತಪಡಿಸಿದರು.

ಕಾಡುಗೊಲ್ಲರು ಸತ್ತವರನ್ನು ಮಣ್ಣು ಮಾಡುವ ಪರಂಪರೆಯನ್ನು ಬೆಳೆಸಿಕೊಂಡಿದ್ದಾರೆ. ಗರ್ಭಿಣಿ, ಬಾಣಂತಿ, ಆತ್ಮಹತ್ಯೆ ಮತ್ತು ದುರ್ಮರಣಕ್ಕೀಡಾದವರನ್ನು ಮಾತ್ರ ಸುಡುವರು. ಸತ್ತವರ ಮುಖವನ್ನು ಕೊನೆಗೆ ಎಲ್ಲರೂ ನೋಡಲಿ ಎಂಬ ಉದ್ದೇಶದಿಂದ ಸತ್ತವರ ಬಂಧು-ಬಳಗದವರನ್ನೆಲ್ಲ ಶವಸಂಸ್ಕಾರದ ಸಂದರ್ಭದಲ್ಲಿ ಕರೆಯಿಸಿಕೊಳ್ಳುವ ಸಂಪ್ರದಾಯ ಕಾಡುಗೊಲ್ಲರಲ್ಲಿದೆ. ಕಾಡುಗೊಲ್ಲರು ಈ ಪರಂಪರೆಯನ್ನು ಅನುಸರಿಸುತ್ತಿರಲಿಲ್ಲ. ಆದರೆ ಇಂದು ತಮ್ಮ ಸುತ್ತಲಿನ ಜನರ ಪ್ರಭಾವದಿಂದ ಸತ್ತವರ ಅಂತಿಮ ದರ್ಶನ

[illegible]

[illegible]

ಎಲ್ಲರಿಗೂ ಲಭಿಸಲಿ ಎಂಬ ಕಾರಣದಿಂದ ಎಲ್ಲರನ್ನೂ ಈ ಸಂದರ್ಭದಲ್ಲಿ ಕೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. 'ಮಾದಿಗರಿಗೆ' ಕಾಡುಗೊಲ್ಲರು 'ಮಣೆಗಾರರು' 'ಹೊರದಾಸರು' ಎಂದು ಕರೆಯುತ್ತಾರೆ. ಇವರನ್ನು ಕಾಡುಗೊಲ್ಲರು ಮನೆಯೊಳಗೆ ಸೇರಿಸಿಕೊಳ್ಳುವುದಿಲ್ಲ. ಈ ಮಣೆಗಾರರೇ ಕಾಡುಗೊಲ್ಲರಲ್ಲಿಯ ಸಾವಿನ ಸುದ್ಧಿಯನ್ನು ಅವರ ಬಂಧು-ಬಳಗದವರಿಗೆ ತಿಳಿಸುವ ಕಾರ್ಯ ಮಾಡುತ್ತಾರೆ. ಈ ಮಣೆಗಾರರು, ಕಾಡುಗೊಲ್ಲರ ಮನೆಯ ಮುಂದೆ ಹೋಗಿ ಸಾವಿನ ಸುದ್ಧಿಯನ್ನು ತಿಳಿಸಿ ಬರಬೇಕಾಗುತ್ತದೆ.

ಸತ್ತವರ ಹೆಣವನ್ನು ಮನೆಯ ಹೊರಗೆ ತಂದು ಅದಕ್ಕೆ ಸ್ನಾನ ಮಾಡಿಸಿ ಮಡಿ ಬಟ್ಟೆ ತೊಡಿಸುವರು. ಗಂಡಸಾಗಿದ್ದರೆ ತಲೆಗೆ ರುಮಾಲು ಸುತ್ತುತ್ತಾರೆ. ಹೆಣವನ್ನು ನೆಲಕ್ಕೆ ಮಲಗಿಸಿ ಸತ್ತವನ ಕೊನೆಯ ಆಶೆ ಈಡೇರಿಸುವುದಕ್ಕಾಗಿ ಹೆಣದ ಬಾಯಿಗೆ ಎಲೆ-ಅಡಿಕೆ ಇಡುವುದು, ಹಣೆಗೆ ವಿಭೂತಿ ಹಚ್ಚಿ, ತೆಂಗಿನಕಾಯಿ ಒಡೆದು, ಕೊರಳಿಗೆ ಕಾಡು ಹೂವಿನಮಾಲೆ ಹಾಕುತ್ತಾರೆ. ಹೀಗೆ ಅಂತಿಮ ಪೂಜೆ ಸಲ್ಲಿಸಿ ನಂತರ ಶವದ ಮೇಲೆ ಬಿಳಿಯ ಬಟ್ಟೆ ಹೊದಿಸುತ್ತಾರೆ.

ಹೆಣವನ್ನು ತೆಗೆದುಕೊಂಡು ಹೋಗಲು ಚಟ್ಟವನ್ನು ಬಳಸುವ ಕಾಡುಗೊಲ್ಲರು ಈ ಚಟ್ಟವನ್ನು ಸಹ ತಮ್ಮ ಸಂಬಂಧಿಕರೇ ನಿರ್ಮಿಸಬೇಕೆಂಬ ಸಂಪ್ರದಾಯವಿದೆ. ಹಾಲು ಬರುವಂತಹ ಕಳ್ಳಿ ಕಟ್ಟಿಗೆಯನ್ನು ಬಳಸಿಕೊಂಡು ಚಟ್ಟವನ್ನು ನಿರ್ಮಿಸುವರು. ಈ ನಿಯಮವನ್ನು ಅವರು ಕಟ್ಟುನಿಟ್ಟಿನಿಂದ ಪಾಲಿಸುವರು. ಬಿದಿರು ಅಥವಾ ಗಳಗಳನ್ನು ಬಳಸಿಕೊಂಡು ಅದಕ್ಕೆ ಕಳ್ಳಿಕಟ್ಟಿಗೆಯನ್ನು ಸೇರಿಸಿ ಚಟ್ಟ ತಯಾರಿಸುವರು. ಕೆಲವರು ಕುಣಿ ತೆಗೆಯಲು ಸ್ಮಶಾನಕ್ಕೆ ಹೋಗುವರು.

ಕಾಡುಗೊಲ್ಲರಲ್ಲಿ ಮದುವೆಯಾಗಿ ಸತ್ತವರನ್ನು, ಮದುವೆಯಾಗದೆ ಸತ್ತವರನ್ನು, ಮಕ್ಕಳನ್ನು, ಬಾಣಂತಿಯರನ್ನು, ಗರ್ಭಿಣಿಯರನ್ನು ಪೂಜಾರಿಗಳನ್ನು, ದುರ್ಮಣಕ್ಕೀಡಾದವರನ್ನು ಭಿನ್ನ ಭಿನ್ನವಾದ ಸಂಪ್ರದಾಯದ ಮೂಲಕ ಶವಸಂಸ್ಕಾರ ಮಾಡುವ ಪದ್ಧತಿ ಅನುಸರಿಸುತ್ತಿರುವುದನ್ನು ಕಾಣುತ್ತೇವೆ.

ಕಾಡುಗೊಲ್ಲರು ಮದುವೆಯಾಗಿ ಸತ್ತವರನ್ನು ಚಟ್ಟಕಟ್ಟಿ ಹೆಣವನ್ನು ಮಲಗಿಸಿಕೊಂಡು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವರು. ಮದುವೆಯಾಗದೆ ಸತ್ತಿರುವವರನ್ನು ಕಂಬಳಿಯ ಜೋಲಿಯಲ್ಲಿ ಹಾಕಿಕೊಂಡು ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವರು. ಪೂಜಾರಿಗಳು ಸತ್ತರೆ ಅವರ ಹೆಣವನ್ನು ಚಟ್ಟದಲ್ಲಿ ಕುಳ್ಳರಿಸಿಕೊಂಡು ಸ್ಮಶಾನಕ್ಕೆ ಹೋಗುವರು. ಚಿಕ್ಕಮಕ್ಕಳು ಸತ್ತಿದ್ದರೆ ಅವರ ಶವವನ್ನು ಕೈಯಲ್ಲಿಯೆ ಹಿಡಿದುಕೊಂಡು ಹೋಗುವರು. ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಉರುಮೆ ಬಾರಿಸುತ್ತ ಶವದ ಮೇಲೆ ಎಲೆ-ಅಡಿಕೆ, ಮಂಡಕ್ಕಿ ತೂರುತ್ತಾ ಹೋಗುವುದು ಇವರ ಸಂಪ್ರದಾಯ. ಇತ್ತಿತ್ತಲಾಗಿ ಸ್ವಲ್ಪ ಸ್ಥಿತಿವಂತರಾದ ಕಾಡುಗೊಲ್ಲರಲ್ಲಿ ಕೆಲವರು ಬ್ಯಾಂಡ್ ಬಾರಿಸುತ್ತ ಪಟಾಕಿ ಶಬ್ದ ಮಾಡುತ್ತ ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಿರುವುದನ್ನು ಕಾಣುತ್ತೇವೆ. ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋದ ಮೇಲೆ, ಕುಣಿಯ ಸುತ್ತ ಮೂರು ಸಲ ಶವಕ್ಕೆ ಪ್ರದಕ್ಷಣೆ ಹಾಕಿಸಿ ಆ ಮೇಲೆ ಶವದ ತಲೆಯನ್ನು

ದಕ್ಷಿಣಕ್ಕೆ, ಕಾಲುಗಳನ್ನು ಉತ್ತರಕ್ಕೆ ಮಾಡಿ ಸಮಾಧಿಯಲ್ಲಿ ಇಳಿಸುವರು. ಕೆಲ ಪ್ರದೇಶಗಳಲ್ಲಿ ಶವದ ತಲೆಯನ್ನು ಪೂರ್ವಕ್ಕೆ ಹಾಗೂ ಕಾಲುಗಳನ್ನು ಪಶ್ಚಿಮಕ್ಕೆ ಮಾಡಿ ಸಂಸ್ಕಾರ ಮಾಡುವರು. ಶವಕ್ಕೆ ಮಣ್ಣು ಮುಚ್ಚುವ ಸಂದರ್ಭದಲ್ಲಿ ಶವಸಂಸ್ಕಾರಕ್ಕೆ ಬಂದವರೆಲ್ಲ ತಂಗಡಿ ಗಿಡದ ಸೊಪ್ಪು ಮತ್ತು ಮೂರು ಹಿಡಿ ಮಣ್ಣು ಹಾಕುವರು. ಮಣ್ಣನ್ನು ಪೂರ್ತಿಯಾಗಿ ಮುಚ್ಚಿ ಗುಡ್ಡೆಹಾಕಿ ಸಮಾಧಿಯ ಮೇಲೆ ಒಂದು ದೊಡ್ಡ ಕಲ್ಲು ಇಡುವರು. ಸತ್ತ ವ್ಯಕ್ತಿ ಗುರುದೀಕ್ಷೆ ಆಧ್ಯಾತ್ಮಿಕ ದೀಕ್ಷೆ ಪಡೆದಿದ್ದರೆ ಅಂಥವರನ್ನು ಸಮಾಧಿಯಲ್ಲಿಟ್ಟು ಉಪ್ಪು, ವಿಭೂತಿ ಹಾಗೂ ಒಂದೆರಡು ಕಳ್ಳಿಗಿಡದ ತುಂಡುಗಳನ್ನು ಹಾಕಿ ಮಣ್ಣು ಮುಚ್ಚುವರು. ಮದುವೆಯಾಗದೆ ಸತ್ತವರ ಮುಖವನ್ನು ಕೆಳಗೆ ಮಾಡಿ, ಬೆನ್ನು ಆಕಾಶ ನೋಡುವ ಹಾಗೆ ಮಲಗಿಸಿ ಮಣ್ಣು ಮುಚ್ಚುವರು. ಗರ್ಭಿಣಿ ಸತ್ತಿದ್ದರೆ ಅವಳ ಹೊಟ್ಟೆಯ ಮೇಲೆ ಬಾಳೆ ಎಲೆ ಇಟ್ಟು ಅದನ್ನು ಎರಡು ಭಾಗ ಮಾಡುತ್ತಾರೆ. ಹಿಂದೆ ಗರ್ಭಿಣಿಯರು ಸತ್ತಿದ್ದರೆ ಅವರ ಹೊಟ್ಟೆಯನ್ನು ಬಗೆದು ಅದರಲ್ಲಿರುವ ಮಗುವನ್ನು ಹೊರಕ್ಕೆ ತೆಗೆದು ಇಬ್ಬರಿಗೂ ಬೇರೆ ಬೇರೆ ಕುಣಿಗಳನ್ನು ಸಿದ್ಧಪಡಿಸಿ ಮಣ್ಣು ಮಾಡುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಗರ್ಭಿಣಿಯರ ಹೆಣವನ್ನು ಸಿದಗಿಯ ಬದಲಾಗಿ ಕಂಬಳಿ ಜೋಲಿಯಲ್ಲಿ ತೆಗೆದುಕೊಂಡು ಸ್ಮಶಾನಕ್ಕೆ ಹೋಗುವರು. ಒಂದೇ ಕುಣಿಯಲ್ಲಿ ಅಥವಾ ಚಿತೆಯಲ್ಲಿ ಎರಡು ಜೀವಿಗಳ ಸಂಸ್ಕಾರ ನಡೆಯಬಾರದು ಎಂಬ ಪದ್ಧತಿ ಒಂದು ಕಾಲಕ್ಕೆ ಕಾಡುಗೊಲ್ಲರಲ್ಲಿತ್ತು. ಆ ಆಚರಣೆ ಹೊಟ್ಟೆಯಲ್ಲಿರುವ ಮಗುವನ್ನು ತೆಗೆಯುವುದರ ಸಂಕೇತವಾಗಿದೆ.

ಕಾಡುಗೊಲ್ಲರ ಸತ್ತವ್ಯಕ್ತಿಯ ಮಕ್ಕಳು ಅಥವಾ ಮೊಮ್ಮಕ್ಕಳ ಮೂಲಕ 'ತೆಲೆಗೊಳ್ಳಿ' ತಿವಿಯುವ ಸಂಪ್ರದಾಯ ಮಾಡಿಸುತ್ತಾರೆ. ಶವಕ್ಕೆ ಮಣ್ಣು ಮಾಡಿದ ನಂತರ ಈ ಆಚರಣೆ ಮಾಡುವರು. ತಲೆಗೊಳ್ಳಿ ತಿವಿಯುವ ವ್ಯಕ್ತಿ ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಗಡಿಗೆಯಲ್ಲಿರುವ ನೀರಿನ ಬುಡ್ಡಿಯನ್ನು ಹೆಗಲ ಮೇಲೆ ಹೊತ್ತುಕೊಂಡು, ಸಮಾಧಿಗೆ ಮೂರು ಸಲ ಪ್ರದಕ್ಷಣೆ ಹಾಕಿ, ಕೊನೆಗೆ ಶವದ ತಲೆಭಾಗ ಇರುವ ಸ್ಥಳಕ್ಕೆ ಹಿಮ್ಮುಖವಾಗಿ ನಿಂತು, ನೀರಿನ ಬುಡ್ಡಿಯನ್ನು ಹೆಗಲ ಮೇಲಿಂದ ಕೆಳಕ್ಕೆ ಬೀಳಿಸುತ್ತಾನೆ. ಆಗ ಆ ನೀರಿನಿಂದ ಬುಡ್ಡೆ ಒಡೆಯುತ್ತದೆ. ತಲೆಗೊಳ್ಳಿ ಇಟ್ಟವನು ಆ ಸಮಾಧಿಯನ್ನು ನೋಡದೆ ಮನೆಗೆ ಹೋಗುವನು. ಇದು ಸತ್ತ ವ್ಯಕ್ತಿಯ ಸಣ್ಣ ಜೀವ ಹೋಯಿತು ಎಂಬುದರ ಸಂಕೇತವಾಗಿ ಆಚರಿಸುವ ಆಚರಣೆಯಾಗಿದೆ.

ಕಾಡುಗೊಲ್ಲರು ಶವಸಂಸ್ಕಾರಕ್ಕೆ ಬಂದವರಿಗೆಲ್ಲ ಎಲೆ ಅಡಿಗೆ ಕೊಡುವ ಸಂಪ್ರದಾಯ ಬೆಳೆಸಿ ಕೊಂಡಿದ್ದಾರೆ. ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡವರೆಲ್ಲ ಸತ್ತವನ ಮನೆಗೆ ಬಂದು ಮನೆಯಲ್ಲಿ ಹಚ್ಚಿರುವ ಜ್ಯೋತಿಯನ್ನು ನೋಡಿಕೊಂಡೆ ಹೋಗಬೇಕೆಂಬ ನಿಯಮವಿದೆ. ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋದ ಮೇಲೆ ಮನೆಯಲ್ಲಿ ಉಳಿದವರು ಮನೆಯ ಅಂಗಳದ ಬಾಗಿಲಿಗೆ ನೇರವಾಗಿ ಒಂದು ಸ್ಥಳದಲ್ಲಿ ಕುರಿಗೊಬ್ಬರ ಹಾಕಿ, ಅದರ ಮೇಲೆ ಮಣ್ಣಿನ ಮಡಿಕೆ ಇಟ್ಟು, ಅದರೊಳಗೆ ಎಕ್ಕೆ ಗಿಡದ ಟೊಂಗೆಯನ್ನಿಡುವರು.

ಈ ಮಣ್ಣಿನ ಮಡಿಕೆ ಮೂರನೆಯ ದಿನದ ಕಾರ್ಯ ನಡೆಯುವವರೆಗೆ ಅದೆ ಸ್ಥಳದಲ್ಲಿರಬೇಕೆಂಬ ನಿಯಮವಿದೆ. ಸತ್ತವನ ಮನೆಯಲ್ಲಿಟ್ಟಿರುವ ಜ್ಯೋತಿಯನ್ನು ನೋಡಲು ಬರುವವರೆಲ್ಲ ಎಕ್ಕೆ ಎಲೆ ಅಥವಾ ಕಳ್ಳಿಯ ಕೊನೆ ಹಿಡಿದುಕೊಂಡು ಬಂದು ಅಂಗಳದಲ್ಲಿಟ್ಟಿರುವ ಮಣ್ಣಿನ ಮಡಿಕೆಗೆ ಹಾಕಿ ನಂತರ ಒಳಗೆ ಹೋಗಿ ದೀಪಕ್ಕೆ ಕೈ ಮುಗಿದು ಹೋಗುವ ಪದ್ಧತಿ ಕಂಡುಬರುತ್ತದೆ ಮತ್ತು ತಮ್ಮ ತಮ್ಮ ಹಟ್ಟಿಗಳಿಗೆ ಹೋಗುವಾಗ ಅವರು ನಾವು ಮನೆಗೆ ಅಥವಾ ಊರಿಗೆ ಹೋಗುತ್ತೇವೆ ಎಂದು ಸತ್ತವರ ಮನೆಯವರಿಗೆ ಹೇಳುವುದಿಲ್ಲ.

ಮೂರು ದಿನಗಳವರೆಗೆ ಸತ್ತಮನೆಯಲ್ಲಿ ಸೂತಕ ಆಚರಿಸುವುದು ಕಾಡುಗೊಲ್ಲರಲ್ಲಿದೆ. ಹೆಣ ಹೆತ್ತವರನ್ನು ಹಾಗೂ ತಲೆಗೊಳ್ಳಿ ತಿವಿದವರನ್ನು ಸೂತಕದವರೆಂದು ಪರಿಗಣಿಸುವರು. ಇವರು ಮೂರನೇ ದಿನದ 'ಕೂಳು' ಮುಗಿಯುವ ತನಕ ಯಾರ ಮನೆಗೂ ಹೋಗುವಂತಿಲ್ಲ ಹಾಗೂ ಇವರನ್ನು ಯಾರು ಮುಟ್ಟಿಸಿಕೊಳ್ಳುವಂತಿಲ್ಲ. ಇದು ಕಡ್ಡಾಯ. ಮೂರು ದಿನಗಳವರೆಗೆ ಇವರಿಗೆ ದೂರದಿಂದಲೇ ಅನ್ನ ನೀರು ಹಾಕುವ ಪರಂಪರೆ ಇದೆ. ಆದರೆ ಸತ್ತವರ ಮನೆಯವರನ್ನು ಅವರ ಬಂಧುಗಳು ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಸ್ನಾನ ಮಾಡಿಸಿ ಊಟ ಹಾಕುವ ಸಂಪ್ರಾಯವಿದೆ.

ಕಾಡುಗೊಲ್ಲರಲ್ಲಿ ಸತ್ತದಿನ ಶವಸಂಸ್ಕಾರ ಹಾಗೂ ದೀಪ ನೋಡುವ ಕಾರ್ಯಕ್ರಮ ಇದು ಒಂದು ಹಂತದ ಆಚರಣೆಯಾದರೆ ಎರಡನೆಯ ದಿನ ಮನೆಯನ್ನು ಸ್ವಚ್ಛಗೊಳಿಸಿ ಸುಣ್ಣ ಹಚ್ಚಿ, ಸಗಣಿಯಿಂದ ನೆಲ ಸಾರಿಸುವರು. ಅಗಸರ ಮೂಲಕ ಗೋಮೂತ್ರವನ್ನು ಬೇವಿನ ಕೊನೆಯಿಂದ ಮನೆ ಹಾಗೂ ಮನೆಯ ಎಲ್ಲ ವಸ್ತುಗಳಿಗೆ ಮತ್ತು ಮನೆಯವರಿಗೆಲ್ಲ ಸಿಂಪಡಿಸಿಕೊಳ್ಳುವರು. ಈ ಆಚರಣೆಯಿಂದ ಸತ್ತ ಮನೆಯವರೆಲ್ಲ ಶುದ್ಧರಾದಂತೆ.

೪.೬.೧ ಹೆಗಲು ಇಳಿಸೊ ಶಾಸ್ತ್ರ

ಸತ್ತ ಮೂರನೆಯ ದಿನ ಹೆಗಲ ಇಳಿಸೊ ಶಾಸ್ತ್ರ ಮಾಡುವರು. ಇದು ಕಾಡುಗೊಲ್ಲರಲ್ಲಿ ಅತ್ಯಂತ ಮುಖ್ಯವಾದ ಆಚರಣೆಯಾಗಿದೆ. ಮೂರನೆಯ ದಿನ ಹೆಣ ಹೊತ್ತವರು ಹೊಳೆಗೆ ಹೋಗಿ ಸ್ನಾನ ಮಾಡಿಕೊಂಡು ಬರುತ್ತಾರೆ. ಈ ಆಚರಣೆಗಾಗಿ ಸತ್ತ ವ್ಯಕ್ತಿಯ ಮನೆಯ ಮುಂದೆ ಎರಡು ಒನಕೆಗಳನ್ನು ನೆಲದ ಮೇಲೆ ಮಲಗಿಸಿರುತ್ತಾರೆ. ಹೆಣ ಹೊತ್ತ ಇಬ್ಬರು ಎರಡು ಒನಕೆಗಳ ಮೇಲೆ ಒಬ್ಬೊಬ್ಬರು ಎದುರು ಬದುರು ಕುಳಿತುಕೊಳ್ಳುವರು. ಇವರ ಹೆಗಲಿಗೆ ಒಂದೊಂದು ಚೆಂಬು ನೀರು ಹಾಕಿ, ನಂತರ ಹಾಲು, ಮಜ್ಜಿಗೆ, ಬೆಣ್ಣೆ ಮತ್ತು ಗೋಮೂತ್ರವನ್ನು ಕೂಡಿಸಿ ಅದನ್ನು ಬೇವಿನ ಕೊನೆಯಿಂದ ಅವರ ಹೆಗಲಿಗೆ ಸಿಂಪಡಿಸುವರು. ಶವ ಹೊತ್ತವರು ತಮ್ಮ ಸ್ಥಾನಗಳನ್ನು ಬದಲಾಯಿಸಿಕೊಳ್ಳುವರು ಮತ್ತೆ ಅವರಿಗೆ ನೀರು ಹಾಗೂ ಗೋಮೂತ್ರವನ್ನು ಸಿಂಪಡಿಸುವರು. ಹೀಗೆ ಈ ಕ್ರಿಯೆ ಮೂರು ಸಲ ನಡೆಯುತ್ತದೆ. ಕೊನೆಯ ಸಲ 'ಹೆಗಲು ಇಳಿಸಿಕೊಂಡೆಯಾ' ಎಂದು ಕೇಳುವರು. ಅವರು 'ಹೆಗಲು ಇಳಿಸಿಕೊಂಡೆವು' ಎಂದು ಹೇಳಿ ಒನಕೆಯಿಂದ ಇಳಿಯುವರು. ಅವರಿಗೆ ಅಗಸರು ಮಡಿ ಮಾಡಿರುವ ಬಟ್ಟೆಗಳನ್ನು ಕೊಡುತ್ತಾರೆ. ಮತ್ತಿಬ್ಬರು ಇದೆ ರೀತಿಯಾಗಿ ಹೆಗಲು ಇಳಿಸಿಕೊಳ್ಳುವರು.

ಹೆಗಲು ಇಳಿಸಿಕೊಳ್ಳುವ ಆಚರಣೆ ಪ್ರಾದೇಶಿಕವಾಗಿ ಭಿನ್ನ ಭಿನ್ನ ರೀತಿಯಲ್ಲಿ ನಡೆಯುವುದನ್ನು ಕಾಣಬಹುದಾಗಿದೆ. ಇನ್ನೊಂದು ಮಾಹಿತಿಯ ಪ್ರಕಾರ ವ್ಯಕ್ತಿ ಸತ್ತ ದಿನ ಅನ್ನ ಬೇಯಸಿದ ವಿಧವೆಯನ್ನು ಮೂರನೆಯ ದಿನ ಕರೆತರುತ್ತಾರೆ. ಅವಳಿಂದಲೇ ಮತ್ತೆ ಮೂರ್‍ನಾಲ್ಕು ಬೊಗಸೆ ಮಡಿಕೆಯಲ್ಲಿ ಅಕ್ಕಿ ಹಾಕಿಸಿ ಅನ್ನ ಸಿದ್ಧಪಡಿಸುತ್ತಾರೆ. ಆ ಸಮಯಕ್ಕೆ ಸತ್ತ ವ್ಯಕ್ತಿಯ ಮಕ್ಕಳು ತಲೆ ಬೋಳಿಸಿಕೊಂಡು ಬರುತ್ತಾರೆ. ಸತ್ತವನ ಸಂಬಂಧಿಕರು ಬೇಯಿಸಿದ ಅನ್ನವನ್ನು ತೆಗೆದುಕೊಂಡು ಸ್ಮಶಾನಕ್ಕೆ ಹೋಗಿ ಸಮಾಧಿಯ ಬಳಿ ಅದನ್ನು ಇಟ್ಟು ನಮಸ್ಕರಿಸುತ್ತಾರೆ. ಆ ಅನ್ನವನ್ನು ಕಾಗೆಗಳು ತಿಂದರೆ ವ್ಯಕ್ತಿ ಸ್ವರ್ಗಕ್ಕೆ ಹೋಗುತ್ತಾನೆ ಎಂಬ ಪರಿಕಲ್ಪನೆ ಕಾಡುಗೊಲ್ಲರಲ್ಲಿದೆ. ಈ ಆಚರಣೆ ನಂತರ ಹೆಣ ಹೊತ್ತವರನ್ನು ಒಳಗೆ ಸೇರಿಸಿಕೊಳ್ಳುವ ಆಚರಣೆ ಪ್ರಾರಂಭವಾಗುತ್ತದೆ. ಈ ಸಂದರ್ಭದಲ್ಲಿ ಮತ್ತೆ ವಿಧವೆ ಒಂದು ಸೇರು ಅಕ್ಕಿ ಹಾಕಿ ಅನ್ನ ತಯಾರಿಸುತ್ತಾಳೆ. ಎರಡು ಒನಕೆಗಳನ್ನು ತೆಗೆದುಕೊಂಡು ಅವುಗಳಿಗೆ ಸುಣ್ಣ ಕೆಮ್ಮಣ್ಣು ಹಚ್ಚಿ ನೆಲದ ಮೇಲೆ ಇಡುತ್ತಾಳೆ. ಹೆಣ ಹೊತ್ತವರ ಹೆಗಲಿಗೆ ಕೋಳಿ ಪುಚ್ಚದಿಂದ ಎಣ್ಣೆ ಹಚ್ಚುತ್ತಾಳೆ. ಹೆಣ ಹೊತ್ತವರು ಒನಕೆಯ ಮೇಲೆ ಕುಳಿತುಕೊಂಡು "ಹೆಣ ಹೊತ್ತ ನಾನು ಭಾರ ಇಳಿಸಿಕೊಂಡೆ" ಎಂದು ಹೇಳುತ್ತಾರೆ. ಆ ಮೇಲೆ ವಿಧವೆ ಭಾರ ಇಳಿಸಿಕೊಂಡವರಿಗೆ ತಾನು ಮಾಡಿದ ಅನ್ನವನ್ನು ಬಡಿಸುತ್ತಾಳೆ. ಹೀಗೆ ಮೂರನೆಯ ದಿನದ ಮೈಲಿಗೆ ಕಳೆದುಕೊಳ್ಳುವ ಆಚರಣೆ ನಡೆಯುತ್ತದೆ ಮತ್ತು ಅಂದು ಮೃತನ ಮನೆಯಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆ ಇರುತ್ತದೆ.

ಮೀರಾಸಾಬಿಹಳ್ಳಿ ಶಿವಣ್ಣ ಅವರು "ಹೆಗಲು ಇಳಿಸಿಕೊಳ್ಳುವ ಶಾಸ್ತ್ರದ ನಂತರ ಹೆಗಲಿಗಿಳಿಸಿಕೊಂಡವರು ಅಂಗಡಿಗಳಿಗೆ ಹೋಗಿ ಒಂದೊಂದು ಬೊಗಸೆ ಅಕ್ಕಿ ತಂದು ಕೊಡುತ್ತಾರೆ. ಸತ್ತವರ ಮನೆ ಅಂಗಳದಲ್ಲಿ ಒಲೆ ಹೂಡಿ, ಹೊಸ ಮಣ್ಣಿನ ಮಡಿಕೆಯಲ್ಲಿ ಅಕ್ಕಿ ಹಾಕಿ ಅನ್ನ ಬೇಯಿಸುತ್ತಾರೆ. ಆ ಅನ್ನವನ್ನು ಕಂಚಿನ ತಟ್ಟೆಗೆ ಹಾಕಿ, ಅದಕ್ಕೆ ಹಸಿ ಹಾಲು ಮತ್ತು ಬೆಣ್ಣೆ ಹಾಕಿ ಅದನ್ನು ಕಲಿಸಿ ಸತ್ತವರ ಗುಡ್ಡೆಯ ಹತ್ತಿರ ಅದನ್ನು ತೆಗೆದುಕೊಂಡು ಹೋಗಿ ಇಡುತ್ತಾರೆ. ಆ ಅನ್ನವನ್ನು ಕಾಗೆಗಳು ಮುಟ್ಟಬೇಕು. ಒಂದು ವೇಳೆ ಆ ಅನ್ನವನ್ನು ಕಾಗೆಗಳು ಮುಟ್ಟದಿದ್ದರೆ ಅನ್ನವನ್ನು ಹಸಿರು ಗಿಡದ ಬುಡಕ್ಕೆ ಹಾಕುವರು. ಈ ಆಚರಣೆ ಮದುವೆಯಾಗಿ ಸತ್ತವರಿಗೆ ಮಾತ್ರ ಮಾಡಲಾಗುತ್ತದೆ. ಮದುವೆಯಾಗದೆ ಸತ್ತವರಿಗೆ ಯಾವ ಆಚರಣೆಗಳೂ ಇರುವುದಿಲ್ಲ. ವ್ಯಕ್ತಿ ಸತ್ತ ಮೂರನೆಯ ದಿನ ತಂದೆ-ತಾಯಿಗಳು ಮಾತ್ರ ಒಂದು ಮಿಳ್ಳಿಯಲ್ಲಿ ಹಾಲು ಮತ್ತು ರೊಟ್ಟಿಯನ್ನು ತೆಗೆದುಕೊಂಡು ಹೋಗಿ ಸಮಾಧಿಯ ಮೇಲಿಟ್ಟು ಬರುವ ಪದ್ಧತಿ ಇದೆ" ಎಂದು ಹೇಳುತ್ತಾರೆ.

ಕಾಡುಗೊಲ್ಲರಲ್ಲಿಯ ಶವಸಂಸ್ಕಾರದ ಆಚರಣೆಗಳಲ್ಲಿ ಪ್ರಾದೇಶಿಕವಾಗಿ ಅನೇಕ ಬದಲಾವಣೆಗಳಾಗಿರುವುದನ್ನು ಶಿವಣ್ಣ ಅವರು ಗುರುತಿಸಿದ್ದಾರೆ. ಕಾಡುಗೊಲ್ಲರಲ್ಲಿ ಯಾರಾದರೂ ಸತ್ತರೆ ಆ ಸೂತಕ ದೇವರಿಗೂ ತಗಲುತ್ತದೆ ಎಂಬ ಕಲ್ಪನೆ ಒಂದು ಕಾಲಕ್ಕಿತ್ತು. ಅದಕ್ಕಾಗಿ ಅವರು ದೇವರ ಗುಡಿಗಳಿಗೆ

ಕಳ್ಳಿಕಟ್ಟುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಇದನ್ನು ಅವರು "ಬಾಗಿಲು ಕಟ್ಟುವುದು" ಎನ್ನುತ್ತಿದ್ದರಂತೆ. ಮೂರು ದಿನದ ಒಲೆ ತೀರುವ ತನಕ ಗುಡಿಯ ಬಾಗಿಲನ್ನು ಅವರು ತೆರೆಯುತ್ತಿರಲಿಲ್ಲ. ಈ ಆಚರಣೆ ಕೆಲ ಹಟ್ಟಿಗಳಲ್ಲಿ ಮಾತ್ರ ಕಾಣುತ್ತದೆ ಎಂದು ಶಿವಣ್ಣ ಅವರು ಅಭಿಪ್ರಾಯ ಪಡುತ್ತಾರೆ.

೪.೬.೨ ತಿಥಿ ಆಚರಣೆ

ವ್ಯಕ್ತಿ ಸತ್ತ ಮೂರನೆಯ ದಿನ ತಿಥಿ ಮಾಡುವ ಸಂಪ್ರದಾಯ ಕಾಡುಗೊಲ್ಲರಲ್ಲಿದೆ. ತಿಥಿ ಆಚರಣೆಗಾಗಿ ಬರುವ ಕಾಡುಗೊಲ್ಲರು ತಮ್ಮ ಕೈಯಿಂದ ಸಾಧ್ಯವಾದಷ್ಟು ಧಾನ್ಯಗಳನ್ನು, ತರಕಾರಿಯನ್ನು ಹಾಗೂ ಇತರೆ ವಸ್ತುಗಳನ್ನು ತರುತ್ತಾರೆ. ಆ ವಸ್ತುಗಳನ್ನೆಲ್ಲ ಬಳಸಿಕೊಂಡು ಅಡುಗೆ ಮಾಡಿ ಊಟ ಮಾಡುತ್ತಾರೆ. ಕೆಲವರು ಹೀಗೆ ಮಾಡಿದ ಅಡುಗೆಯನ್ನು ಊಟ ಮಾಡುವುದಿಲ್ಲ ಎಂಬ ಕಾರಣಕ್ಕಾಗಿ ಅವರಿಗಾಗಿಯೆ ಮನೆಯವರು ಬೇರೆ ಅಡುಗೆ ಮಾಡಿಸಿರುತ್ತಾರೆ. ಗಂಡ ತೀರಿಕೊಂಡಿದ್ದರೆ ಹೆಣ್ಣಿನ ತವರು ಮನೆಯವರು ಹೊಸ ಬಟ್ಟೆ ತಂದು ಮೂರನೆಯ ದಿನ ಕೊಡುವ ಪದ್ಧತಿ ಇದೆ. ಹೆಂಡತಿ ತೀರಿಕೊಂಡಿದ್ದರೆ ಗಂಡನಾದವನು ಮೂರು ತಿಂಗಳ ವರೆಗೆ ವನವಾಸ ಆಚರಿಸಬೇಕೆಂಬ ನಿಯಮ ಕಾಡುಗೊಲ್ಲರಲ್ಲಿದೆ. ಈಗ ಯಾರೂ ಮೂರು ತಿಂಗಳವರೆಗೆ ಹೋಗುವುದಿಲ್ಲ. ಅದನ್ನೇ ಮಾರ್ಪಡಿಸಿಕೊಂಡು ಮೂರು ದಿನಕ್ಕೆ ಇಳಿಸಿಕೊಂಡಿದ್ದಾರೆ. ಗಂಡನಾದವನು ಸತ್ತ ಹೆಂಡತಿಯನ್ನು ಮಣ್ಣು ಮಾಡಿದ ತಕ್ಷಣ ತನ್ನ ಊರ ಸೀಮೆಯನ್ನು ಬಿಟ್ಟು ಹೊರಡುತ್ತಾನೆ. ಇವನ ಜೊತೆಗೆ ಹೆಣ ಹೊತ್ತವರು ಹೊರಡಬೇಕೆಂಬ ನಿಯಮವಿದೆ. ಮಣ್ಣಿಗೆ ಬಂದವರು ಇವರ ಉಪಜೀವನಕ್ಕೆ ಸ್ವಲ್ಪ ಹಣ ಕೊಡುತ್ತಾರೆ. ಇವರು ಊರ ಗಡಿ ದಾಟಿ ಅವರಿವರಿಂದ ಬೇಡಿಕೊಂಡು ಮೂರು ದಿನಗಳ ಕಾಲ ಕಳೆಯುತ್ತಾರೆ. ಮೂರನೆಯ ದಿನ ಒಂದು ಸ್ಥಳದಲ್ಲಿ ಒಲೆ ಹಚ್ಚಿ ಹೊಸ ಮಡಿಕೆಯಲ್ಲಿ ಅನ್ನ ಮಾಡುತ್ತಾ ಕುಳಿತುಕೊಳ್ಳುತ್ತಾರೆ. ಅನ್ನದ ಉಕ್ಕು ಬಂದ ತಕ್ಷಣ ಅದನ್ನು ಕಾಲಿನಿಂದ ಒದ್ದು ಹಿಂತಿರುಗಿ ನೋಡದೆ ಊರಿಗೆ ಬಂದು ಊರದೇವರಿಗೆ ಕೈ ಮುಗಿದು ಮನೆ ಸೇರಿಕೊಳ್ಳುತ್ತಾರೆ. ಇದು ಒಂದು ರೀತಿಯಲ್ಲಿ ಸೂತಕದ ಆಚರಣೆಯೇ ಆಗಿದೆ.

೪.೬.೩ ಸಾವಿನ ನಂತರದ ಆಚರಣೆಗಳು

ಬುಡಕಟ್ಟು ಸಮುದಾಯಗಳು ಸಾವಿನ ನಂತರ ದೆವ್ವ-ಭೂತ, ಪಿಶಾಚಿಗಳ ಬಗೆಗೆ ಸಾಕಷ್ಟು ನಂಬಿಕೆ ಇಟ್ಟುಕೊಂಡಿದ್ದಾರೆ. ಸತ್ತ ವ್ಯಕ್ತಿಯ ಆತ್ಮಕ್ಕೆ ಕೆಲವರು 'ಗಾಳಿ' ಎಂದು ಕರೆಯುವರು. ಇದು ಸದಾ ಸುತ್ತುತ್ತಿರುತ್ತದೆ ಎಂಬ ಭಾವನೆ ಅವರಲ್ಲಿದೆ. ಹೀಗಾಗಿ ದೈವಗಳಿಗಿಂತಲೂ ಭಯ ಭಕ್ತಿಯಿಂದ ಸತ್ತವರ ಆತ್ಮಗಳನ್ನು ಕರೆದು ಪ್ರತಿವರ್ಷ ಅವುಗಳಿಗೆ ಪೂಜೆ, ನೈವೇದ್ಯ ಮಾಡುವ ಸಂಪ್ರದಾಯ ಬೆಳೆಸಿ ಕೊಂಡಿರುವುದನ್ನು ಬುಡಕಟ್ಟು ಸಮುದಾಯಗಳಲ್ಲಿ ಕಾಣುತ್ತೇವೆ. ಕಾಡುಗೊಲ್ಲರು ಇದರಿಂದ ಹೊರತಾಗಿಲ್ಲ. ಕಾಡುಗೊಲ್ಲರಲ್ಲಿ ಸಾವಿನ ನಂತರದ ಅನೇಕ ಆಚರಣೆಗಳಿರುವುದನ್ನು ಕಾಣುತ್ತೇವೆ. ಒಂದು ಕಾಲಕ್ಕೆ ಕಾಡುಗೊಲ್ಲರು ಅಲೆಮಾರಿಗಳಾಗಿದ್ದರಿಂದ ಅವರು ಪ್ರಾದೇಶಿಕವಾಗಿ ಹಂಚಿ ಹೋಗಿದ್ದರಿಂದ ಅವರ ಆಚರಣೆಗಳಲ್ಲಿ ಭಿನ್ನತೆಗಳು ಕಂಡುಬರುವುದು ಸಹಜ.

[illegible]

ಕಾಡುಗೊಲ್ಲರು ಸತ್ತ ವ್ಯಕ್ತಿಯ ದಿನ ಕರ್ಮಗಳನ್ನು ಪೂರೈಸಿದ ತಿಂಗಳ ಮೇಲೆ ಗೊತ್ತು ಪಡಿಸಿದ ದಿನ ಸತ್ತವರ ಮಕ್ಕಳು ಮತ್ತು ಬಳಗದವರು ಹಣ್ಣು, ಹೂವು, ಕಾಯಿಗಳನ್ನು ತೆಗೆದುಕೊಂಡು ಸಮಾಧಿ ಸ್ಥಳಕ್ಕೆ ಹೋಗುವರು. ಆ ಪೂಜೆಯಲ್ಲಿ ಹಟ್ಟಿಯ ಜನರೆಲ್ಲರೂ ಪಾಲ್ಗೊಳ್ಳುತ್ತಾರೆ. ಸತ್ತವರಿಗೆ ಹಟ್ಟಿಯವರೆಲ್ಲ ಸಾಮೂಹಿಕವಾಗಿ ಪೂಜೆ ಮಾಡುವುದರಿಂದ ಸತ್ತವರಿಂದ ಯಾವ ತೊಂದರೆಗಳೂ ಯಾರಿಗೂ ಬಾರದಿರಲೆಂಬುದೆ ಇವರ ಮೂಲ ಉದ್ದೇಶ. ಸತ್ತವರ ಮಕ್ಕಳು ಸಮಾಧಿಗೆ ಪೂಜೆ ಮಾಡಿದ ಮೇಲೆ ಎಲ್ಲರೂ ಒಂದೊಂದು ಹೂವು ಒಂದೊಂದು ತೊಟ್ಟು ಹಾಲನ್ನು ಸಮಾಧಿಯ ಮೇಲೆ ಹಾಕುತ್ತಾರೆ. ಸತ್ತವರ ಆತ್ಮಕ್ಕೆ ಶಾಂತಿ ಸಿಗಲೆಂದು ಈ ಆಚರಣೆ ಅನುಸರಿಸುವರು. ಈ ಸಂದರ್ಭದಲ್ಲಿ ಸತ್ತವರಿಗೆ ಸಂಬಂಧಿಸಿದ ಮಕ್ಕಳು ಎರಡು ಚಿಕ್ಕ ಮಡಿಕೆಗಳಲ್ಲಿ ಸಮಾಧಿಯ ಮಣ್ಣನ್ನು ತುಂಬುತ್ತಾರೆ. ಒಂದು ಮಡಿಕೆಯಲ್ಲಿರುವ ಮಣ್ಣನ್ನು ನೀರಿಗೆ ಇನ್ನೊಂದನ್ನು ತಮ್ಮ ಜಮೀನಿನಲ್ಲಿ ಗುಂಡಿ ತೋಡಿ ಅದರಲ್ಲಿಟ್ಟು ಮಣ್ಣು ಮುಚ್ಚಿ ಅದರ ಮೇಲೆ ಕಲ್ಲು ನೆಟ್ಟು ಅದನ್ನೇ ಸಮಾಧಿಯೆಂದು ಕಲ್ಪಿಸಿಕೊಳ್ಳುವರು.

ಪ್ರತಿ ವರ್ಷ ಸತ್ತವರ ಆತ್ಮಗಳನ್ನು ಆವ್ಹಾನಿಸಿ ಪೂಜೆ ಮಾಡುವ ಪರಂಪರೆಯನ್ನು ಕಾಡುಗೊಲ್ಲರಲ್ಲಿ ಕಾಣುತ್ತೇವೆ. ಸಾಮಾನ್ಯವಾಗಿ ಮಹಾಲಯ ಅಮಾವಾಸ್ಯೆಯ ದಿನ ಸತ್ತವರ ಆತ್ಮಗಳ ಪೂಜೆ, ಹಿರಿಯರ ಪೂಜೆ ಅಥವಾ ಅಮಾವಾಸ್ಯೆ ಕಾರ್ಯ ಎಂದು ಪೂಜೆ ಮಾಡುವರು. ಕೆಲವರು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ವರ್ಷದಲ್ಲಿ ಅನುಕೂಲವಾದ ಒಂದು ಅಮಾವಾಸ್ಯೆಯ ದಿನ ಈ ಆಚರಣೆ ಮಾಡುವರು. ಅಮಾವಾಸ್ಯೆಯ ದಿನದಂದೇ ಹಿರಿಯರ ಪೂಜೆ ಮಾಡಬೇಕೆಂಬ ನಿಯಮ ಇವರಲ್ಲಿದೆ. ಸತ್ತವರ ಆತ್ಮಗಳನ್ನು ಸಂತೈಸುವುದರಿಂದ, ಪೂಜೆ ಮಾಡುವುದರಿಂದ ಯಾವ ತೊಂದರೆಗಳೂ ಬರುವುದಿಲ್ಲ ಎಂಬ ನಂಬಿಕೆ ಅವರಲ್ಲಿದೆ. ಈ ಆತ್ಮಗಳ ಪೂಜೆಗೆಂದೆ ಒಬ್ಬ ಪೂಜಾರಿಯನ್ನು ಗೊತ್ತುಪಡಿಸಿರುತ್ತಾರೆ. ಈ ಪೂಜಾರಿಯನ್ನು ಬಿಟ್ಟು ಉಳಿದ ಯಾವ ಪೂಜಾರಿಗಳೂ ಈ ಅಮಾವಾಸ್ಯೆ ಪೂಜೆ ಮಾಡುವಂತಿಲ್ಲ. ಇಂತಹ ಪೂಜಾರಿಗಳನ್ನು ಅಮಾವಾಸ್ಯೆ ಪೂಜಾರಿಗಳೆಂದು ಕರೆಯುವರು. ಒಂದು ಸ್ಥಳದಲ್ಲಿ ವಾಸಿಸುತ್ತಿರುವ ಕಾಡುಗೊಲ್ಲರೆಲ್ಲರೂ ಸೇರಿ ಈ ಅಮಾವಾಸ್ಯೆ ಪೂಜೆ ಮಾಡುವ ಪರಂಪರೆಯನ್ನು ಬೆಳೆಸಿಕೊಂಡಿದ್ದಾರೆ. ಇವರು ಪ್ರತ್ಯೇಕವಾಗಿ ಪೂಜೆ ಮಾಡುವುದಿಲ್ಲ. ಕಾಡುಗೊಲ್ಲರು ತಮ್ಮ ತಮ್ಮ ಮನೆಗಳಲ್ಲಿ ಒಟ್ಟು ಮೃತರಾದವರ ಸಂಖ್ಯೆ ಎಷ್ಟು ಎಂಬುದನ್ನು ಲೆಕ್ಕ ಹಾಕಿ ಒಂದು ಆತ್ಮಕ್ಕೆ ಇಷ್ಟು ಹಣ ಎಂದು ನಿಗದಿಪಡಿಸಿ ಹಣ ಕೊಡುತ್ತಾರೆ. ಹಟ್ಟಿಯಲ್ಲೆಲ್ಲ ಸಂಗ್ರಹಿಸಿದ ಹಣವನ್ನು ಅಮಾವಾಸ್ಯೆ ಪೂಜಾರಿಗೆ ಕೊಡುತ್ತಾರೆ. ಈ ಹಿರಿಯರ ಪೂಜೆಯನ್ನು ಕಾಟಮದೇವರ ಮತ್ತು ಚಿತ್ರದೇವರ ಗುಡಿಯಲ್ಲಿಯೇ ಮಾಡಬೇಕೆಂಬ ನಿಯಮವಿದೆ. ಕಾಟಮದೇವರು ಮತ್ತು ಚಿತ್ರದೇವರನ್ನು ಅಮಾವಾಸ್ಯೆ ದೇವರೆಂದು ಪೂಜಿಸುತ್ತಾರೆ. ಕರಡಿಗೊಲ್ಲರು ತಮ್ಮ ಮೂಲಪುರುಷನನ್ನು ಕಾಟಯ್ಯ ಹಾಗೂ ಚಿತ್ರದೇವರು ಎಂದು ಅಜ್ಜಿಯರ ಗೊಲ್ಲರ ಮೂಲ ಪುರುಷರು ಗುಡಿಗಳಲ್ಲಿ ಈ ಅಮಾವಾಸ್ಯೆ ಪೂಜೆ ನೆರವೇರಿಸುವುದರಿಂದ ಮೂಲ ಪುರುಷನಿಂದ ಹಿಡಿದು ಎಲ್ಲರನ್ನು ಪೂಜಿಸಿ ತೃಪ್ತಿಪಡಿಸಿದಂತಾಗುತ್ತದೆ ಎಂಬ ಪರಿಕಲ್ಪನೆ ಇವರಲ್ಲಿದೆ. ಕಾಡುಗೊಲ್ಲರು ವಾಸಿಸುವ ಎಲ್ಲ

ಸ್ಥಳಗಳಲ್ಲಿ ಕಾಟಮದೇವರ ಮತ್ತು ಚಿತ್ರದೇವರ ಗುಡಿಗಳು ಇರುವುದಿಲ್ಲ. ಯಾವ ಹಟ್ಟಿಯಲ್ಲಿ ಈ ದೇವಸ್ಥಾನಗಳು ಇರುತ್ತವೆಯೋ ಅಲ್ಲಿಗೆ ಅಥವಾ ಆ ಹಟ್ಟಿಯ ಜನ ನಿರ್ಧಿಷ್ಟಪಡಿಸಿದ ಹಟ್ಟಿಯ ದೇವಸ್ಥಾನಕ್ಕೆ ಹೋಗಿ ಹಿರಿಯರ ಪೂಜೆಗೆ ಏರ್ಪಾಡು ಮಾಡುತ್ತಾರೆ.

ಅಮಾವಾಸ್ಯೆಯ ಪೂಜಾರಿ ಹಿರಿಯರ ಹಬ್ಬಕ್ಕಾಗಿ ಕಬ್ಬಿನ ಜಲ್ಲೆ, ಹೊಂಬಾಳೆ, ತೆಂಗಿನ ಕಾಯಿ, ಬಾಳೆಹಣ್ಣು, ಅಡಿಕೆ, ವೀಳ್ಯೆದೆಲೆ, ಅಕ್ಕಿಹಿಟ್ಟು, ಬೆಲ್ಲ, ತುಪ್ಪ, ಹಾಲು, ಮೊಸರು, ಹಂಗುದಾರ, ಊದುಕಡ್ಡಿ, ಕರ್ಪೂರ, ಒಂದುಗಜ ಬಿಳಿಯ ಬಟ್ಟೆ ಮುಂತಾದ ವಸ್ತುಗಳನ್ನು ತರುತ್ತಾನೆ.

ಅಮಾವಾಸ್ಯೆ ಪೂಜಾರಿ ಈ ಹಿರಿಯರ ಹಬ್ಬಕ್ಕೆಂದೇ ಹೂಜಿಯ ಆಕಾರವುಳ್ಳ ಮಣ್ಣಿನ ಮಡಿಕೆಯನ್ನು ವಿಶೇಷವಾಗಿ ತಯಾರಿಸಲು ಕುಂಬಾರನಿಗೆ ಹೇಳುತ್ತಾನೆ. ಈ ಮಣ್ಣಿನ ಮಡಿಕೆಯನ್ನು 'ಅಮಾವಾಸ್ಯೆ ಕೇಲು' ಎಂದು ಕರೆಯುವರು. ಅಮಾವಾಸ್ಯೆ ಕೇಲನ್ನು ಯಾವಾಗ, ಯಾವ ಸಂದರ್ಭ, ಯಾವ ದಿನ, ಯಾವ ಸಮಯದಲ್ಲಿ ಅದನ್ನು ತಯಾರಿಸಬೇಕೆಂಬುದನ್ನು ಕಾಟಮದೇವರಿಂದ ಶಾಸ್ತ್ರ ಕೇಳುತ್ತಾರೆ. ಕಾಟಮದೇವರ ಪೂಜಾರಿ ಗಣೆ ಊದಿ ಕೇಲು ತಯಾರಿಸುವ ದಿನ ಮತ್ತು ಸಮಯ ಹೇಳುತ್ತಾನೆ. ಈಗ ಕೆಲ ಕಾಡುಗೊಲ್ಲರು ಪುರೋಹಿತರಿಂದ ಒಳ್ಳೆಯ ತಿಥಿ, ನಕ್ಷತ್ರ ಕೇಳಿ ಕೇಲು ತಯಾರಿಸಲು ಸೂಚಿಸುತ್ತಾರೆ. ಕಾಟಮದೇವರ ಪೂಜಾರಿ ತಿಳಿಸಿದ ದಿನದಂದು ಕುಂಬಾರ ತೆಂಗಿನ ಎಳೆನೀರಿನಲ್ಲಿ ಮಣ್ಣು ಕಲಿಸಿ ಹಸಿ ಕೇಲನ್ನು ತಯಾರಿಸುತ್ತಾನೆ. ನಂತರ ಜಾಲಿಯ ಮರದ ಹಸಿರು ಚಪ್ಪರ ಹಾಕಿ ಅದರೊಳಗೆ ಶ್ರೀಗಂಧದ ಕಟ್ಟಿಗೆಯಿಂದ ಬೆಂಕಿ ಮಾಡಿ ಕೇಲನ್ನು ಸುಡುತ್ತಾನೆ. ಕೇಲು ಆರಿದ ಮೇಲೆ ಪೂಜಾರಿ ಅದನ್ನು ಹೊತ್ತುಕೊಂಡು ಕಾಟಮದೇವರ ದೇವಸ್ಥಾನದಲ್ಲಿಡುತ್ತಾನೆ. ಹಿರೇರ ಹಬ್ಬಕ್ಕೆ ಬಳಸಲ್ಪಡುವ ಈ ಅಮಾವಾಸ್ಯೆ ಕೇಲು ಅತ್ಯಂತ ಪವಿತ್ರವಾದುದ್ದು, ಇದಕ್ಕೆ ಸಂಬಂಧಿಸಿದ ಆಚರಣೆಗಳನ್ನು ಕಟ್ಟುನಿಟ್ಟಿನಿಂದ ಪಾಲಿಸದಿದ್ದರೆ ನಮ್ಮ ಸಮುದಾಯಕ್ಕೆ ಕೇಡು ಬರುವುದೆಂದು ಕಾಡುಗೊಲ್ಲರು ನಂಬಿದ್ದಾರೆ.

ಮಹಾಲಯ ಅಮಾವಾಸ್ಯೆಯ ಹಿಂದಿನ ದಿನ ಅಮಾವಾಸ್ಯೆ ಕೇಲನ್ನು ತಂದು ಕಾಟಮದೇವರ ಗುಡಿಯಲ್ಲಿಟ್ಟು, ಅಮಾವಾಸ್ಯೆ ದಿನ ಈ ಪೂಜಾರಿ ಹಸಿ ಜಾಲಿಯ ಅಥವಾ ಹಸಿ ಬೇವಿನ ಮರದ ಕೊಂಬೆಗಳನ್ನು ಕಡಿದು ತಂದು ಅದರಿಂದ ಗುಡಿಸಲು ನಿರ್ಮಿಸಿ, ಅದರ ಮೇಲೆ ಹಸಿರು ಸೊಪ್ಪು ಹಾಕಿ ಅದನ್ನು ಕಂಬಳಿಯಿಂದ ಹೊದಿಸುತ್ತಾನೆ. ಈ ಗುಡಿಸಲಿಗೆ 'ಬೆರಗು' ಎಂದು ಕರೆಯುವರು. ಈ ಗುಡಿಸಲು ಕಾಟಮದೇವರ ದೇವಸ್ಥಾನದ ಎದುರಿಗೆ ಇರುತ್ತದೆ. ಹಿರೇರ ಹಬ್ಬ ಮಾಡುವ ಅಮಾವಾಸ್ಯೆ ಪೂಜಾರಿ ಅಂದು ಉಪವಾಸವಿರುತ್ತಾನೆ. ಈ ಬೆರಗಿನಲ್ಲಿ ಪೂಜಾರಿ ಇದ್ದುಕೊಂಡು ಪೂಜೆಗೆ ಬರುತ್ತಿರುವವರನ್ನು ಕಾಯುತ್ತಿರುತ್ತಾನೆ.

ಈ ಹಬ್ಬವನ್ನು ಆಚರಿಸುವ ದಿನ ಕಾಡುಗೊಲ್ಲರೆಲ್ಲರೂ ತಮ್ಮ ತಮ್ಮ ಗುಡಿಸಲಿಗೆಲ್ಲ ಸುಣ್ಣ ಬಳಿದು, ನೆಲಸಾರಿಸಿ ಸ್ನಾನಮಾಡಿ ಕಾಟಮದೇವರ ದೇವಸ್ಥಾನಕ್ಕೆ ಹೊರಡುವರು. ಇವರು ದೇವಸ್ಥಾನಕ್ಕೆ

ಹೋಗುವಾಗ ಮನೆಯಿಂದ ಮೀಸಲು ಹಾಲು ತೆಗೆದುಕೊಂಡು ಹೋಗುವರು. ಮೀಸಲು ಹಾಲು ಹೊತ್ತುಕೊಂಡು ಹೋಗುವವನಿಗೆ ಇವರಲ್ಲಿ ಅನೇಕ ನಿರ್ಬಂಧಗಳಿವೆ. ಹಾಲು ಹೊತ್ತುಕೊಂಡವ ದೇವಸ್ಥಾನಕ್ಕೆ ಹೋಗುವವರೆಗೆ ಯಾರ ಜೊತೆಗೆ ಮಾತನಾಡಬಾರದೆಂಬ ನಿಯಮವಿದೆ. ಚಪ್ಪಲಿ ಧರಿಸದೇ ನಡೆದುಕೊಂಡು ಹೋಗಬೇಕು. ಮೀಸಲು ಹಾಲನ್ನು 'ಸೆಳೇವು' ಎಂದು ಕರೆಯುವರು. ಈ ಸೆಳೇವು ಹೊತ್ತುಕೊಂಡು ದೇವಸ್ಥಾನಕ್ಕೆ ಹೋಗುವ ವ್ಯಕ್ತಿಯ ಕಾಲನ್ನು ತೊಳೆದು ದಾರಿಯುದ್ದಕ್ಕೂ ನೀರು ಹಾಕುತ್ತಾ ಹೋಗುತ್ತಾರೆ. ಈ ಸೆಳೇವನ್ನು ತಂದು ಕಾಟಮದೇವರ ದೇವಸ್ಥಾನದಲ್ಲಿ ಇಡುತ್ತಾರೆ.

ಹಿರಿಯರ ಆತ್ಮಗಳ ಪೂಜೆಗೆಂದು ಕಾಡುಗೊಲ್ಲರೆಲ್ಲರೂ ಸೇರಿದ ಮೇಲೆ ಅಮಾವಾಸ್ಯೆ ಪೂಜಾರಿ ಬಿಟ್ಟು ಬೇರೆ ಇಬ್ಬರು ಪೂಜಾರಿಗಳ ಉಗುಳು ಅಕಸ್ಮಾತ್ ಬಾಯಿಯಿಂದ ಹೊರಬಂದು ಪೂಜಾರಿಗೆ ಹಾಗೂ ಇತರರಿಗೆ ತಗುಲಿ ಮೈಲಿಗೆ ಆಗಬಾರದೆಂದು ಬಾಯಿಗೆ ಟವಲ್ ಸುತ್ತಿಕೊಂಡು ಮುತ್ತೈದೆಯರನ್ನು ಕರೆದುಕೊಂಡು 'ಬಾಯಿಬತ್'ದಲ್ಲಿ ಗಂಗೆ ನೀರು ತರಲು ವಾಲಗ ಸಮೇತ ಕೆರೆ, ಹೊಳೆ ಅಥವಾ ಬಾವಿಗೆ ಹೋಗುತ್ತಾರೆ. ಗಂಗೆ ತರಲು ಹೋಗುವ ಪೂಜಾರಿಗಳ ಕೊರಳಿಗೆ ತುಳಸಿ ಮಾಲೆ ಹಾಕುವ ಸಂಪ್ರದಾಯವಿದೆ. ಮುತ್ತೈದೆಯರೆಲ್ಲ ಗಂಗೆ ಪೂಜೆ ಮಾಡಿದ ಮೇಲೆ ಪೂಜಾರಿಗಳು ಹೊಸ ಮಡಿಕೆಯಲ್ಲಿ ನೀರು ತುಂಬಿಕೊಂಡು ಬೆರಗಿಗೆ ಬಂದು ಆ ಪವಿತ್ರ ನೀರನ್ನು ಅಮಾವಾಸ್ಯೆ ಪೂಜಾರಿಯ ಕೈಗೆ ಕೊಡುತ್ತಾರೆ.

ಹಿರಿಯರ ಹಬ್ಬದ ಆಚರಣೆಯ ವಿಧಿ-ವಿಧಾನಗಳು ಪ್ರಾದೇಶಿಕವಾಗಿ ಭಿನ್ನ ಭಿನ್ನವಾಗಿರುವುದನ್ನು ಕಾಣುತ್ತೇವೆ. ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರು ಸಂಗ್ರಹಿಸಿದ ಮಾಹಿತಿಯಲ್ಲಿ ಅಮಾವಾಸ್ಯೆ ಕೇಲು ತಯಾರಿಸುವ ಬಗೆಗೆ ಯಾವ ಮಾಹಿತಿಯನ್ನೂ ಅವರು ನೀಡಿಲ್ಲ. ಡಾ. ತೀನಂ. ಶಂಕರನಾರಾಯಣ ಅವರು ಅಮಾವಾಸ್ಯೆ ಕೇಲು ಸಿದ್ಧಪಡಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಮೀಸಲು ಹಾಲು ಹಾಗೂ ಗಂಗೆ ತರುವುದನ್ನು ಇವರು ಪ್ರಸ್ತಾಪ ಮಾಡಿಲ್ಲ. ಹೀಗಾಗಿ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಡಾ. ತೀ.ನಂ. ಶಂಕರನಾರಾಯಣ ಮತ್ತು ಕೃಷ್ಣಮೂರ್ತಿ ಹನೂರು ಹೇಳಿರುವ ವಿಷಯಗಳನ್ನು ಇಲ್ಲಿ ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರ ಪ್ರಕಾರ ಅಮಾವಾಸ್ಯೆ ಪೂಜಾರಿ ಅಂದು ರಾತ್ರಿ ಗಡಿಗೆಯಲ್ಲಿರುವ ಗಂಗೆಯನ್ನು ತೆಗೆದುಕೊಂಡು ಬತ್ತಲೆಯಾಗಿದ್ದುಕೊಂಡೆ ಪೂಜೆಯನ್ನು ಪ್ರಾರಂಭಿಸುತ್ತಾನೆ. ಈ ಪೂಜಾರಿ ಯಾರಿಗೂ ಕಾಣದಂತೆ ಬೆರಗಿನ ಸುತ್ತಲೂ ಕಂಬಳಿ ಕಟ್ಟಿರುತ್ತಾರೆ. ಗಂಗೆ ತಂದ ಗಡಿಗೆಗಳ ಮೇಲೆ ಈ ಅಮಾವಾಸ್ಯೆ ಪೂಜಾರಿ ಒಂದೊಂದು ತೆಂಗಿನಕಾಯಿ ಇಟ್ಟು, ಒಂದು ಗಡಿಗೆಗೆ ಸೀರೆ ಕುಪ್ಪಸದ ಬಟ್ಟೆ ಸುತ್ತುತ್ತಾನೆ. ಇನ್ನೊಂದಕ್ಕೆ ಪಂಚೆ, ರುಮಾಲು ಸುತ್ತಿ, ಒಂದು ಗಂಡಿನ ಇನ್ನೊಂದು ಹೆಣ್ಣಿನ ರೂಪಮಾಡಿ ಹಿರಿಯರನ್ನು ಪೂಜಿಸುತ್ತಾನೆ. ಈ ಹಿರಿಯರೊಂದಿಗೆ ಅನೇಕ ಕೇಲುಗಳನ್ನಿಟ್ಟು ಅವರಿಗೂ ಪೂಜೆ ಮಾಡಿ ಎಡೆ ಹಿಡಿಯುತ್ತಾನೆ. ಹಾಲು, ತುಪ್ಪ, ಜೇನುತುಪ್ಪ, ಬಾಳೆಹಣ್ಣು, ಮೊಸರು, ಸೇರಿಸಿಕೊಂಡು ಪಂಚಾಮೃತವನ್ನು

ಸಿದ್ಧಪಡಿಸಿಕೊಂಡಿರುತ್ತಾನೆ. ಈ ಪೂಜೆ ಒಂದೆರಡು ಗಂಟೆಗಳ ಕಾಲ ನಡೆಯುತ್ತದೆ. ಈ ಪೂಜೆಯನ್ನು ಯಾರೂ ನೋಡಬಾರದೆಂದು ಹೇಳುತ್ತಾರೆ. ಪೂಜೆಯ ನಂತರ ಪೂಜಾರಿ ಕಂಬಳಿ ಹೊದ್ದುಕೊಂಡು ಹೊರಗೆ ಬಂದು ಅಲ್ಲಿ ಸೇರಿದವರೆಲ್ಲರಿಗೂ ಹಾಗೂ ಪೂಜೆಮಾಡಿಸಿದವರಿಗೆ ಪಂಚಾಮೃತದ ಅಭಿಷೇಕ ಕೊಡುತ್ತಾನೆ. ಎಲ್ಲರೂ ಪೂಜಾರಿಗೆ ನಮಸ್ಕರಿಸುವರು. ಪೂಜೆಗಾಗಿ ಉಪವಾಸವಿದ್ದ ಜನರೆಲ್ಲ ಅಭಿಷೇಕದ ಪ್ರಸಾದ ಪಡೆದು ಉಪವಾಸದ ವ್ರತ ಮುಗಿಸುವರು. ಆಮೇಲೆ ಎಲ್ಲರೂ ಊಟಕ್ಕೆ ಕುಳಿತುಕೊಳ್ಳುವರು. ಅಮಾವಾಸ್ಯೆ ಪೂಜಾರಿ ಹಿರಿಯರ ಪೂಜೆಗಾಗಿ ತಯಾರಿಸಿದ ಎರಡು ಎಡೆಗಳನ್ನು ತಂದು, ಗಂಡು ದೇವರಿಗೆ ಮಾಡಿದ ಎಡೆಯನ್ನು ಗಂಡಸರ ಪಂಕ್ತಿಗೂ, ಹೆಣ್ಣು ದೇವರಿಗೆ ಮಾಡಿದ ಎಡೆಯನ್ನು ಹೆಂಗಸರ ಪಂಕ್ತಿಗೂ ಕೊಡುತ್ತಾನೆ. ಆ ಎಡೆಯನ್ನೂ ಎಲ್ಲರೂ ಹಂಚಿಕೊಂಡು ಊಟ ಮಾಡುತ್ತಾರೆ. ಊಟ ಮಾಡಿದ ಎಲೆಗಳನ್ನು ಮತ್ತು ಮುಸುರಿಯನ್ನು ಅಂದು ಎಲ್ಲಿಯೂ ಬಿಸಾಡಬಾರದು ಮತ್ತು ಯಾರೂ ತುಳಿಯಬಾರದು. ಆ ಎಂಜಲು ಪದಾರ್ಥವನ್ನು ಯಾವ ಕಾರಣಕ್ಕೂ ಕಾಗೆ ಹಾಗೂ ನಾಯಿ ಮುಟ್ಟಬಾರದು. ಒಂದು ವೇಳೆ ಮುಟ್ಟಿದರೆ ಅದು ಅಪವಿತ್ರವಾಗುತ್ತದೆ ಹಾಗೂ ಕೆಡಕಾಗುತ್ತದೆ ಎಂಬ ಪರಿಕಲ್ಪನೆ ಇವರಲ್ಲಿದೆ. ಹೀಗಾಗಿ ಅಂದು ಊಟ ಮಾಡಿದ ಎಲೆ ಹಾಗೂ ಮುಸುರೆಯನ್ನು ಒಟ್ಟುಗೂಡಿಸಿ ಒಂದು ತೆಗ್ಗು ತೆಗೆದು ಅದರಲ್ಲಿ ಹಾಕಿ ಮೇಲೆ ಮಣ್ಣು ಮುಚ್ಚುತ್ತಾರೆ.

ಈ ಹಬ್ಬ ಮಾಡಿದ ರಾತ್ರಿಯೇ 'ಕಮರು ಕಳೆದುಕೊಳ್ಳುವ ಕಾರ್ಯೋವು' ಎಂಬುದನ್ನು ಆಚರಿಸುತ್ತಾರೆ. ಇದನ್ನು ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರು 'ಕರ್ಮಕಳೆದುಕೊಳ್ಳುವ' ಕ್ರಿಯೆ ಎನ್ನುವರು. ಈ ಆಚರಣೆಗಾಗಿ ಕಾಡುಗೊಲ್ಲರು 'ಕಾಲು ಕಣಬ ಹೂಬಾಲ ಹುಣಿಸುಕ್ಕೆ' ಇರುವ ಒಂದು ವಿಶಿಷ್ಟ ಕುರಿ ತಂದು ಅದನ್ನು ಮಧ್ಯರಾತ್ರಿ ಅಂಗಾತ ಹಾಕಿ ಅದರ ಹೊಟ್ಟೆ ಮತ್ತು ಕತ್ತು ಸೀಳಿ (ಕೊಯ್ಯುವುದಿಲ್ಲ) ಆ ಕುರಿಯ ಮಾಂಸದ ಅಡುಗೆ ಮಾಡಿ ಎಲ್ಲರೂ ಊಟ ಮಾಡುತ್ತಾರೆ. ಕಾಡುಗೊಲ್ಲರಲ್ಲಿ ಈ ಹಿರಿಯರ ಪೂಜೆಯನ್ನು ಸಾಮೂಹಿಕವಾಗಿ ನಡೆಸಿದರೂ ತಮ್ಮ ತಮ್ಮ ಕೇಲುಗಳನ್ನು ಮನೆಗೆ ತಂದು ಪೂಜೆ ಮಾಡುವ ಪದ್ಧತಿ ಬೆಳೆಸಿಕೊಂಡಿದ್ದಾರೆ. ದೇವಸ್ಥಾನದಲ್ಲಿ ಒಂದು ದಿನ 'ಹಿಂಡು ಕಲೆಸಿ' ಬಂಧುಬಳಗ ಸೇರಿಸಿ ಪೂಜೆ ಸಲ್ಲಿಸಿದರೆ ಮನೆಯಲ್ಲಿ ಹಿರಿಯರೆಂದು ಅಥವಾ ಅಜ್ಜ-ಅಜ್ಜಿ ಎಂದು ಭಾವಿಸಿ ಪೂಜಿಸುವರು. ಈ ಹಿರಿಯರ ಹಬ್ಬದಲ್ಲಿ ಪೂಜಾರಿ ಕೊಟ್ಟ ಕೇಲು ಒಂದು ವೇಳೆ ಒಡೆದರೆ ಅದರ ಬದಲಾಗಿ ಹಾಲು ಬುಡ್ಡಿ ಅಥವಾ ಮಜ್ಜಿಗೆ ಬುಡ್ಡಿ ಇಟ್ಟು ಪೂಜೆ ಮಾಡುತ್ತಾರೆಂದು ತಿಳಿಯುತ್ತದೆ.

ಡಾ. ತೀ.ನಂ. ಶಂಕರನಾರಾಯಣ ಮತ್ತು ಕೃಷ್ಣಮೂರ್ತಿ ಹನೂರು ಅವರು ಅಮಾವಾಸ್ಯೆಯ ಈ ಪೂಜೆಯನ್ನು ಕುರಿತು ಮಹಾಲಯ ಅಮಾವಾಸ್ಯೆ ಕತ್ತಲೆ ಪ್ರಾರಂಭವಾದ ಮೇಲೆ ಅಮಾವಾಸ್ಯೆ ಪೂಜಾರಿ ಬತ್ತಲೆಯಾಗಿ ಕಾಟಮದೇವರ ಗುಡಿಯಲ್ಲಿ ಮತ್ತು ಬೆರಗು ಹಾಕಿದಲ್ಲಿ ಒಂದೊಂದು ದೀಪ ಹಚ್ಚುತ್ತಾನೆ. ಕಾಟಮದೇವರ ಗುಡಿಯಲ್ಲಿರುವ ಅಮಾವಾಸ್ಯೆ ಕೇಲು ತೆಗೆದುಕೊಂಡು ಅದರೊಳಗೆ ವಾರ ಕರೆದ ಹಾಲಿನಿಂದ ಮಾಡಿದ ಮೊಸರು ಹಾಕಿ ಆ ಕೇಲು ಪೂಜೆ ಮಾಡುತ್ತಾನೆ. ನಂತರ ಹೊಸದಾಗಿ ತಂದ ಬಿಳಿಯ ಬಟ್ಟೆಯನ್ನು

ನೀರಿನಲ್ಲಿ ಎದ್ದಿ ಎಷ್ಟು ಜನ ಸತ್ತವರಿಗೆ ಅಮಾವಾಸ್ಯೆ ಕಾರ್ಯಮಾಡಬೇಕಾಗಿದೆಯೋ ಅಷ್ಟು ಸಂಖ್ಯೆಯ ಎಳೆಗಳನ್ನು ಆ ಬಟ್ಟೆಯಿಂದ ಒಂದೊಂದಾಗಿ ತೆಗೆದು ಕೋಲಿನ ಮೇಲಿಡುತ್ತಾನೆ. ಉಳಿದ ಬಟ್ಟೆಯನ್ನು ಕೇಲಿನ ಮೇಲಿಟ್ಟು ಮತ್ತೆ ಅದಕ್ಕೆ ಪೂಜೆ ಮಾಡುತ್ತಾನೆ. ಈ ಪೂಜೆ ಅರ್ಧರಾತ್ರಿಯ ವರೆಗೆ ನಡೆಯುತ್ತದೆ. ಈ ಪೂಜಾರಿ ಅಂಗೈಯಲ್ಲಿ ಮೂರು ಸಾರೆ, ಮುಂಗೈಯಲ್ಲಿ ಮೂರುಸಾರೆ ಅಕ್ಕಿಯನ್ನು ತೆಗೆದುಕೊಂಡು ಮಡಿಕೆಗೆ ಹಾಕಿ ಅನ್ನ ಮಾಡುತ್ತಾನೆ. ಅಮಾವಾಸ್ಯೆಯ ಕೋಲಿನಲ್ಲಿರುವ ಸ್ವಲ್ಪ ಮೊಸರನ್ನು ಸ್ವಲ್ಪ ಅನ್ನಕ್ಕೆ ಹಾಕಿಕೊಂಡು ಪೂಜಾರಿ ಊಟ ಮಾಡುತ್ತಾನೆ. ನಂತರ ಪೂಜಾರಿ ಮತ್ತೆ ಅನ್ನವನ್ನು ಮಾಡಿ ಕೋಲಿನಲ್ಲಿರು ಮೊಸರಿಗೆ ಅನ್ನ ಬೆರೆಸಿ ಹನ್ನೆರಡು ಎಲೆಗಳಲ್ಲಿ ಎಡೆ ಮಾಡುತ್ತಾನೆ. ಕಣ್ಣು, ಕೈ, ಕಾಲು ಮೊದಲಾದ ಎಲ್ಲ ಅಂಗಗಳು ಸರಿಯಾಗಿರುವ ಹನ್ನೆರಡು ಜನರನ್ನು ಊಟಕ್ಕೆ ಕರೆಯುತ್ತಾನೆ. ಕೆಲ ಪ್ರದೇಶಗಳಲ್ಲಿ ಊಟಕ್ಕೆ ಪಾಯಿಸ ಬಡಿಸುವುದುಂಟು. ಈ ಹನ್ನೆರಡು ಜನರ ಊಟವಾದ ಮೇಲೆ ಪೂಜಾರಿ ಕಂಬಳಿ ಪರದೆ ತೆಗೆದು ಎಲ್ಲರಿಗೂ ತಂಬಿಟ್ಟು, ಬಾಳೆಹಣ್ಣು, ತೆಂಗಿನಕಾಯಿ ಪ್ರಸಾದ ಕೊಡುತ್ತಾನೆ. ಪೂಜಾರಿ ಮತ್ತು ಊಟ ಮಾಡಿದ ಹನ್ನೆರಡು ಜನಸೇರಿ ಕಾಟಮದೇವರನ್ನು ಕೆರೆಗೆ ತೆಗೆದುಕೊಂಡು ಹೋಗಿ ಗಂಗಾ ಸ್ನಾನ ಮಾಡಿಸಿಕೊಂಡು ಅಮಾವಾಸ್ಯೆ ಕಾರ್ಯದ ಮೈಲಿಗೆ ಕಳೆದುಕೊಂಡು ಹಟ್ಟಿಗೆ ಬರುತ್ತಾರೆ ಎಂದು ಹೇಳುತ್ತಾರೆ ಮತ್ತು ಕರೇ ಒಬೇನಹಳ್ಳಿ ಕಟ್ಟೆಮನೆಗೆ ಸೇರಿದ ಕಾಡುಗೊಲ್ಲರಿಗೆ ಚಿತ್ರದೇವರೇ ಅಮಾವಾಸ್ಯೆ ದೇವರು. ಈ ದೇವರ ಹೆಸರಿನಲ್ಲಿಯೇ ಹಟ್ಟಿಯಿಂದ ಹೊರಗೆ ಅಮಾವಾಸ್ಯೆ ಪೂಜಾರಿ ಅಮವಾಸ್ಯೆ ಕಾರ್ಯ ಮಾಡುತ್ತಾನೆ. ಈ ಸಂಪ್ರದಾಯದ ಅಮಾವಾಸ್ಯೆ ಪೂಜಾರಿ ಜನರಿಂದ ಸಂಗ್ರಹವಾದ ಹಣದಲ್ಲಿ ಒಂದು ಕುರಿಯನ್ನು ತಂದು ಚಿತ್ರದೇವರಿಗೆ ಬಲಿಕೊಟ್ಟು ಅದರಿಂದ ಅಡುಗೆ ಮಾಡಿ ಹನ್ನೆರಡು ಜನರಿಗೆ ಮಣೇವು ಹಾಕುತ್ತಾನೆ. ಈ ಮಣೇವನ್ನು ತೀರಿಸಿದವರು ಮತ್ತು ಅಮಾವಾಸ್ಯೆ ಪೂಜಾರಿ ಸ್ನಾನಮಾಡಿಕೊಂಡು ಹಟ್ಟಿಯನ್ನು ಪ್ರವೇಶಿಸುತ್ತಾರೆ ಎಂದು ಡಾ. ತೀ.ನಂ. ಶಂಕರನಾರಾಯಣ ಅವರು ಹೇಳುತ್ತಾರೆ.

ಆಧುನಿಕ ಪರಿಸರದಿಂದ ಹಾಗೂ ಇತರೆ ಸಮುದಾಯಗಳ ಪ್ರಭಾವದಿಂದ ಆರ್ಥಿಕವಾಗಿ ಮುಂದುವರೆದ ಕಾಡುಗೊಲ್ಲರು ಇಂದು ಈ ಆಚರಣೆಯನ್ನು ಪ್ರತ್ರ್ಯೇಕವಾಗಿ ಆಚರಿಸುತ್ತಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಮಹಾಲಯ ಅಮಾವಾಸ್ಯೆ ದಿನ ಕರಿಯ ಕಂಬಳಿ, ಸೀರೆ, ಪಂಚೆ, ರುಮಾಲು ಮತ್ತು ಮನೆಯಲ್ಲಿ ಮಾಡಿದ ಅಡುಗೆಯನ್ನು ತೆಗೆದುಕೊಂಡು ಅವರ ಹಿರಿಯರನ್ನು ಹೂಳಿದ ಸಮಾಧಿಗೆ ಹೋಗುತ್ತಾರೆ. ಸಮಾಧಿಯ ಮೇಲೆ ಎಲ್ಲ ವಸ್ತುಗಳನ್ನಿಟ್ಟು ಪೂಜೆ ಮಾಡಿ ಎಡೆ ಹಿಡಿದು ನಮಸ್ಕರಿಸಿ ಬರುತ್ತಾರೆ. ಸಮಾಧಿ ಪೂಜೆಗೆಂದು ತಂದ ಬಟ್ಟೆಗಳನ್ನು ಅಮಾವಾಸ್ಯೆ ಪೂಜಾರಿಗೆ ಕೊಡುತ್ತಾರೆ ಮತ್ತು ಅಂದು ಮನೆಯಲ್ಲಿ ಸಿಹಿ ಅಡುಗೆಯನ್ನು ಮಾಡಿ ನಾಲ್ಕಾರು ಜನರಿಗೆ ಊಟ ಹಾಕುತ್ತಾರೆ. ಎಚ್.ವಿ. ನಂಜುಂಡಯ್ಯ ಮತ್ತು ಎಚ್.ಕೆ. ಅನಂತ ಕೃಷ್ಣ ಅಯ್ಯರ್ ಅವರೂ ಕೂಡ ಕಾಡುಗೊಲ್ಲರಲ್ಲಿಯ ಅಮಾವಾಸ್ಯೆ ಪೂಜೆ ಕುರಿತು ಮಹಾಲಯ ಅಮಾವಾಸ್ಯೆ ದಿನ ಅನ್ನ,ತುಪ್ಪ, ಬೆಲ್ಲ ಇವುಗಳನ್ನು ಒಂದು ಬಾಳೆ ಎಲೆಯಲ್ಲಿಟ್ಟು ಎಡೆ ಮಾಡಿ ಅದರೊಂದಿಗೆ ಹೊಸ ಬಟ್ಟೆಯನ್ನಿಟ್ಟು ಅಮಾವಾಸ್ಯೆ ಪೂಜಾರಿಗೆ ಕೊಡುವ ಪದ್ಧತಿ ಇತ್ತೆಂದು ಹೇಳುತ್ತಾರೆ.

ಒಟ್ಟಿನಲ್ಲಿ ಮನುಷ್ಯ ಬದುಕಿದ್ದಾಗ ಮಾಡುವ ಆಚರಣೆಗಳಿಗಿಂತ ಸತ್ತ ಮೇಲೆ ಮಾಡುವ ಆಚರಣೆಗಳು ವಿಶಿಷ್ಟವಾಗಿರುತ್ತವೆ. ಮತ್ತು ಈ ಸಾವಿನ ನಂತರದ ಆಚರಣೆಗಳನ್ನು ಕಟ್ಟುನಿಟ್ಟಿನಿಂದ ಆಚರಿಸದಿದ್ದರೆ ಸತ್ತವರ ಆತ್ಮಗಳು ದೆವ್ವ ಭೂತಗಳಾಗಿ ಜನರನ್ನು ಕಾಡುತ್ತವೆ ಎಂಬ ಭಯ ಕಾಡುಗೊಲ್ಲರಲ್ಲಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ.

೪.೭ ಆಹಾರ ಪದ್ಧತಿ

ಪ್ರತಿಯೊಂದು ಸಮುದಾಯವೂ ತನ್ನದೇ ಆದ ವಿಶಿಷ್ಟವಾದ ಆಹಾರ ಪದ್ಧತಿ ಹೊಂದಿರುವುದನ್ನು ಒಂದು ಕಾಲಕ್ಕೆ ಕಾಣುತ್ತಿದ್ದೆವು. ಈಗ ಆ ವೈಶಿಷ್ಟ್ಯತೆ ಕಂಡುಬರುವುದಿಲ್ಲ. ಸಮುದಾಯಗಳು ಸೇವಿಸುವ ಆಹಾರದ ಮೂಲಕವೂ ಶ್ರೇಣಿಕರಣಗೊಳಿಸಿರುವ ವ್ಯವಸ್ಥೆಯನ್ನು ನಮ್ಮ ಸಂಸ್ಕೃತಿಯಲ್ಲಿ ಕಾಣುತ್ತೇವೆ. “ಅನ್ನ ದೇವರ ಮುಂದೆ ಇತರೆ ದೇವರು ಉಂಟೇ, ಅನ್ನವಿರುವ ತನಕ ಪ್ರಾಣವು ಜಗದೊಳ ನನ್ನದೇ ದೈವ” ಎಂದು ಸರ್ವಜ್ಞನು ಹೇಳುವಂತೆ ಮಾನವನ ಜನಾಂಗಕ್ಕೆ ಆಹಾರವು ಅತ್ಯವಶ್ಯಕವಾಗಿದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ, ಬಯಲುಸೀಮೆಗಳ (ಉಟೋಪಚಾರಕ್ಕಾಗಲ್ಲಿ) ಆಹಾರ ಪದ್ಧತಿಯಲ್ಲಿ ವಿಭಿನ್ನತೆಯನ್ನು ಕಾಣಬಹುದಾಗಿದೆ. “ಆಹಾರ ಪಾನೀಯಗಳು ಮಾನವನಿಂದ ಮಾನವ ಜನಾಂಗಕ್ಕೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಭಿನ್ನವಾಗುತ್ತ ಸಾಗುತ್ತದೆ. ವಸ್ತುಸ್ಥಿತಿ ಹೀಗಿರುವುದರಿಂದಲೇ ಆಹಾರ ಪಾನೀಯ ಪದ್ಧತಿಗಳ ಸಂಸ್ಕೃತಿಯ ದ್ಯೋತಕವೆನಿಸಿಕೊಂಡಿತ್ತು. ಅವುಗಳ ಅಧ್ಯಯನವೇ ಒಂದು ಸಮಾಜದ ಒಂದು ಸಂಸ್ಕೃತಿಯ ಪುನರಚನೆಯಾಗುತ್ತದೆ”.[೪] ಹೀಗೆ ಸಮುದಾಯದಿಂದ ಸಮುದಾಯಗಳಿಗೆ ಆಹಾರ ಪದ್ಧತಿಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಆದಿಮಾನವ ಮೂಲತಃ ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆ ಯಾಡುವುದರ ಮುಖಾಂತರ ಜೀವನ ಸಾಗಿಸುತ್ತಿದ್ದು, ಕಾಲನಂತರ ಸರ್ಕಾರ ಅರಣ್ಯ ಇಲಾಖೆಯನ್ನು ವಶಪಡಿಸಿಕೊಂಡಾಗ ಬೇಟೆಗೆ ತೊಂದರೆಯಾಯಿತು. ಈ ಸಂದರ್ಭದಲ್ಲಿ ಗಡ್ಡೆ-ಗೆಣಸು, ತಿನ್ನುವುದರ ಮೂಲಕ ಹಸಿವು ನೀಗಿಸಿಕೊಳ್ಳುತ್ತಿದ್ದರು. ನಂತರ ಪಶುಸಂಗೋಪನೆ, ಕೃಷಿಯ ಮೂಲಕ ಆಹಾರ ಧಾನ್ಯಗಳನ್ನು ಬೆಳೆದು ಹೊಟ್ಟೆ ತುಂಬಿಸಿಕೊಂಡು ಜೀವನ ನಡೆಸತೊಡಗಿದರು.

ಬಯಲು ಸೀಮೆಯಲ್ಲಿ ವಾಸಮಾಡುತ್ತಿರುವ ಕಾಡುಗೊಲ್ಲರು ಮಾಂಸಹಾರಿ ಮತ್ತು ಸಸ್ಯಹಾರಿ ಗಳಾಗಿದ್ದಾರೆ ಮತತು ಇವರು ಸಂದರ್ಭಕ್ಕೆ ತಕ್ಕಂತೆ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಾರೆ. ಮಾಂಸವನ್ನು ಹೆಚ್ಚಾಗಿ ಬಳಸುತ್ತಿದ್ದ ಕಾಡುಗೊಲ್ಲರು ಪಶುಪಾಲನೆ ವೃತ್ತಿಯನ್ನು ಕೈಗೊಂಡ ಮೇಲೆ ಕುರಿ ಮತ್ತು ಮೇಕೆ ಮಾಂಸ ಹೆಚ್ಚಾಗಿ ಬಳಸುತ್ತಿದ್ದಾರೆ. ಇವರಿಗೆ ಮಾಂಸವು ಬೇರೆ ಸಮುದಾಯದವರಂತೆ ದುಬಾರಿಯೆನಿಸುವುದಿಲ್ಲ. ಮೊಟ್ಟೆ, ಮೀನು, ಕುರಿ, ಮೇಕೆ ಮಾಂಸವನ್ನು ಆಹಾರಕ್ಕಾಗಿ ಬಳಸುತ್ತಾರೆ. ಬಯಲು ಸೀಮೆಯಲ್ಲಿ ವಾಸಿಸುವವರಿಗೆ ರಾಗಿಮುದ್ದೆ, ಅನ್ನ, ಸಾರು ಪ್ರೀಯವಾದ ಮತ್ತು ದಿನನಿತ್ಯದ ಆಹಾರಗಳಾಗಿವೆ. ಕಾಡುಗೊಲ್ಲರಲ್ಲಿ ದಿನನಿತ್ಯದ ಅಡುಗೆಗಳು, ಹಬ್ಬ, ಧಾರ್ಮಿಕ ಸಂದರ್ಭದ ಅಡುಗೆಗಳು ಮತ್ತು ತಿಥಿ ಸಂದರ್ಭದ ಅಡುಗೆಗಳು ಭಿನ್ನವಾಗಿರುತ್ತವೆ.

ಇವರು ಪಶುಪಾಲಕರಾಗಿದ್ದರಿಂದ ಊಟಕ್ಕೆ ಹೆಚ್ಚಾಗಿ ಹಾಲು, ತುಪ್ಪ, ಮೊಸರು, ಬೆಣ್ಣೆಯನ್ನು ಬಳಸುವುದನ್ನು ಕಾಣಬಹುದು. ಆಹಾರದ ಬಗ್ಗೆ ಹಿರಿಯರನ್ನು ವಿಚಾರಿಸಿದಾಗ "ನಾವು ಹಿಂದೆ ತುಪ್ಪದಲ್ಲಿ ಕೈತೊಳೆಯುತ್ತಿದ್ದೆವು" ಎನ್ನುವ ಮಾತನ್ನು ಗಮನಿಸಿದಾಗ ಹಾಲು, ಮೊಸರು, ತುಪ್ಪವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿದ್ದರು ಎಂದು ತಿಳಿಯುತ್ತದೆ. ಕಾಡುಗೊಲ್ಲರ ಅಡುಗೆ ಪದ್ಧತಿ ಸರಳವಾಗಿದೆ. ಇಂದು ಇವರು ಬೇಸಾಯವನ್ನು ಅವಲಂಬಿಸಿರುವುದರಿಂದ ಹೊಲ-ಗದ್ದೆ, ತೋಟಗಳಲ್ಲಿ ಕೆಲಸ ಮಾಡುವ ಶಕ್ತಿ ಬರುವಂಥ ರಾಗಿಮುದ್ದೆ, ಸೊಪ್ಪಿನ ಸಾರು, ರಾಗಿ ರೊಟ್ಟಿಯನ್ನು ಹೆಚ್ಚಾಗಿ ಬಳಸುತ್ತಾರೆ. ಬೆಳಗಿನ ಉಪಹಾರವಾಗಿ ರಾಗಿಮುದ್ದೆ, ಇಲ್ಲವೇ ಅನ್ನಸಾರು ಊಟ ಮಾಡಿ ಹೊಲ-ಗದ್ದೆಗಳಿಗೆ ಹೊರಡುತ್ತಾರೆ. ಕೃಷಿ ಚಟುವಟಿಕೆಯಲ್ಲಿ ತೊಡಗಬೇಕಾದರೆ ಕನಿಷ್ಟ ಮಟ್ಟದ ಗಟ್ಟಿ ಆಹಾರವನ್ನು ಬಳಸಲೇಬೇಕಾಗುತ್ತದೆ. ಕಾಡಿನಲ್ಲಿ ದೊರೆಯುವ ಅಲೆಸೊಪ್ಪ, ಅನೆಸೊಪ್ಪು, ದಂಟಿನ ಸೊಪ್ಪು, ಅರಿವೆಸೊಪ್ಪು ಮತ್ತು ಇವುಗಳ ಜೊತೆಗೆ ತರಕಾರಿ, ಹಣ್ಣು-ಹಂಪಲಗಳನ್ನು ಉಪಯೋಗಿಸುತ್ತಾರೆ. ಇವರು ಕುರಿ ಮತ್ತು ಮೇಕೆಯ ಹಾಲಿನಿಂದ ಚಹಾ, ಕಾಫಿಯನ್ನು ಮಾಡುತ್ತಾರೆ. ಕಾಡುಗೊಲ್ಲರಲ್ಲಿ ಏನು ಇಲ್ಲದಿದ್ದರೂ ಕೊನೆಗೆ ಖಾರ ಇಲ್ಲವೇ ಖಾರದೊಂದಿಗೆ ಈರುಳ್ಳಿಯನ್ನು ಬೆರೆಸಿ ತಿನ್ನುತ್ತಾರೆ.

ನಗರೀಕರಣದಿಂದಾಗಿ ಅನೇಕ ಕಾಡುಗೊಲ್ಲ ಸಮುದಾಯದವರು ನಗರಗಳಿಗೆ ಸರ್ಕಾರಿ ಉದ್ಯೋಗಕ್ಕಾಗಿ, ಕೂಲಿಗಾಗಿ ಹೋಗಿ ನೆಲೆಸಿದ್ದಾರೆ. ನಗರವಾಸಿಗಳಾದ ಕೆಲ ಕಾಡುಗೊಲ್ಲರು ಸಂಪ್ರದಾಯಿಕ ಆಡುಗೆ ಪದ್ಧತಿ ಯಿಂದ ಆಧುನಿಕ ಅಡುಗೆ ಪದ್ಧತಿಗೆ ಮಾರುಹೋಗಿದ್ದಾರೆ. ಮತ್ತು ಇತರೆ ಸಮುದಾಯದವರಂತೆ ವಿವಿಧ ಭಕ್ಷ್ಯಗಳನ್ನು ತಯಾರಿಸಿ ತಿನ್ನುವುದನ್ನು ಕಾಣುತ್ತೇವೆ. ನಗರವಾಸಿ ಗೊಲ್ಲರು ರಾಗಿಯನ್ನು ಅಥವಾ ಮುದ್ದೆಯನ್ನು ಮುಖ್ಯ ಆಹಾರವಾಗಿ ಬಳಸಿ ಜೊತೆಗೆ ಅಕ್ಕಿಯನ್ನು ಅನ್ನಕ್ಕಾಗಿ ಬಳಸುತ್ತಿದ್ದಾರೆ.

೪.೮ ವಸತಿ ವ್ಯವಸ್ಥೆ

"ಕಾಡುಗೊಲ್ಲರು ಊರಿನ ಜನರನ್ನು ಮೈಲಿಗೆಯವರು ಎಂದು ಕರೆಯುತ್ತಾರೆ. ಜುಂಜಪ್ಪನ ಕಾವ್ಯವನ್ನು ಅವಲೋಕಿಸಿ ಹೇಳುವುದಾದರೆ ಬಹುಶಃ ಮೊದಲಿಗೆ ಪೂರ್ಣ ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದ ಇವರು ಕ್ರಮೇಣ ಹಟ್ಟಿಗಳನ್ನು ಕಟ್ಟಿಕೊಂಡಂತೆ ಕಾಣುತ್ತದೆ". ಊರಿನಿಂದ ಆಚೆಯಿರುವ ಪ್ರದೇಶದಲ್ಲಿ ಇವರು ಹಟ್ಟಿಗಳನ್ನು ನಿರ್ಮಿಸಿಕೊಂಡಿರುವುದನ್ನು ಹೆಚ್ಚಾಗಿ ಕಾಣಬಹುದಾಗಿದೆ. ಈ ಗುಡಿಸಲುಗಳು ಹುಲ್ಲಿನ ಗುಡಿಸಲುಗಳಾಗಿವೆ. ಇವುಗಳಿಗೆ ತೆಂಗಿನಗರಿ ಅಥವಾ ಅಂಚಿನ ಹುಲ್ಲಿನ ಹೊದಿಕೆಯನ್ನು ಹೊದಿಸಿರುತ್ತಾರೆ. "ಗೊಲ್ಲರ ಗುಡಿಸಲಗಳು ಹತ್ತು ಅಡಿ ಅಗಲದ ವೃತ್ತಾಕಾರಕ್ಕೆ ಕಟ್ಟಲ್ಪಟ್ಟ ಅದರ ಮೇಲೆ ಅಂಚಿನ ಹುಲ್ಲು, ಬಾದೆಹುಲ್ಲು, ಹೊದಿಸಲ್ಪಟ್ಟಿರುತ್ತವೆ. ಸ್ವಲ್ಪ ಅನುಕೂಲವಿರುವವರು ಚೌಕಾಕಾರಕ್ಕೆ ನಾಲ್ಕು ಸುತ್ತ ಗೋಡೆ ಹಾಕಿ ಅದು ಎಂಟು ಅಡಿ ಅಗಲದ ಎತ್ತರಕ್ಕೆ ಇರುತ್ತದೆ. ಅದರ ಮೇಲೆ ಅಡ್ಡಡ್ಡ ಮರಗಳನ್ನು ಹಾಕಿ ಅಂಗರಿಕೆ ಬರಲನ್ನು ಮುಚ್ಚುವರು. ಈ ಸೊಪ್ಪು ಸದೆಯ ಮೇಲೆ ಚೆನ್ನಾಗಿ ಕಲಿಸಿದ ಮಣ್ಣನ್ನು ಮೆತ್ತುತ್ತಾರೆ.

ಇದು ಮಾಳಿಗೆ ಮನೆ ಎಂದು ಕರೆಯಿಸಿಕೊಳ್ಳುತ್ತದೆ. ಯಾವುದೇ ಮಳೆಯಿಂದ ಮೇಲೆ ಹಾಕಿದ ಮಣ್ಣು ಸೋರುವುದಿಲ್ಲ, ಕಿಟಕಿಗಳ ವ್ಯವಸ್ಥೆ ಇಲ್ಲದಿದ್ದರೂ ಅದು ಬೇಸಿಗೆಯಲ್ಲಿ ತಂಪಾಗಿಯೂ, ಚಳಿಗಾಲದಲ್ಲಿ ಬೆಚ್ಚಗೆಯೂ ಇರುತ್ತದೆ"." ಇವರು ಈ ತರಹದ ಹಟ್ಟಿಗಳನ್ನು ಕಟ್ಟಿಕೊಂಡಿರುತ್ತಾರೆ. ಕಾಡುಗೊಲ್ಲ ಗುಡಿಸಲನ್ನು ಕಟ್ಟುವಾಗ ವಾಸ್ತುಶಾಸ್ತ್ರ, ದಿಕ್ಕಿನ ಬಗೆಗೆ ಕೇಳದೆ ತಮಗೆ ಸರಿಯೆನಿಸಿದ ಹಾಗೂ ಅನುಕೂಲವಾಗುವ ರೀತಿಯಲ್ಲಿ ಗುಡಿಸಲನ್ನು ಕಟ್ಟಿರುತ್ತಾರೆ. ಇಂತಹ ಗುಡಿಸಲುಗಳು ಚಪ್ಪಟೆಯಾಗಿರದೇ ಗೋಲಾಕಾರವಾಗಿರುತ್ತವೆ. ಗುಡಿಸಲುಗಳ ಗೋಡೆಯನ್ನು ಮಣ್ಣಿನಿಂದ ಕಟ್ಟಿ ಅದಕ್ಕೆ ಹಂಚಿನಹುಲ್ಲು, ಬಾದೆ ತೆಂಗಿನಗರಿಗಳನ್ನು ಹೊದಿಸುತ್ತಾರೆ. ತೆಂಗಿನ ಗರಿಗಳಿಂದಲೇ ಬಾಗಿಲು ಸಿದ್ಧಪಡಿಸಿರುತ್ತಾರೆ. ಗುಡಿಸಲುಗಳಿಗೆ ಮಣ್ಣಿನ ಮಡಿಕೆಯಿಂದ ಗವಾಕ್ಷಿ ಮಾಡಿಕೊಂಡಿರುತ್ತಾರೆ. ಇದಕ್ಕೆ ಅಡಿಕೆ ಪಟ್ಟಿಯಿಂದ ತಯಾರಿಸಿದ ಮುಚ್ಚಳ ಮುಚ್ಚುತ್ತಾರೆ.

ಕಾಡುಗೊಲ್ಲರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗುಡಿಸಲು ಹೊಂದಿರುವುದನ್ನು ಕಾಣುತ್ತೇವೆ. ವೃತ್ತಕಾರವಾಗಿ ಗುಡಿಸಲು ಒಂದೇ ಇರುತ್ತದೆ. ಅದರಲ್ಲಿಯೆ ಪಡಶಾಲೆ, ಅಡುಗೆ ಕೋಣೆ ಮಾಡಿಕೊಂಡಿರುತ್ತಾರೆ. ಅಡುಗೆ ಮಾಡುವ ಮಹಿಳೆ ಕಾಣಬಾರದೆಂದು ಅಡ್ಡಗೋಡೆ ಕಟ್ಟಿರುತ್ತಾರೆ. ಈ ಗೋಡೆಯ ಮೇಲೆ ದೀಪ ಇಡುತ್ತಾರೆ. ಇದು ಎಣ್ಣೆ ಬತ್ತಿಯ ದೀಪವಾಗಿರುತ್ತದೆ. ದಿನಬಳಕೆಯ ವಸ್ತುಗಳನ್ನು ಗೋಡೆಯ ಪಕ್ಕದಲ್ಲಿಟ್ಟು ಅಡುಗೆ, ಮಲಗಿಕೊಳ್ಳುವುದು, ಮುಂತಾದ ಎಲ್ಲ ಚಟುವಟಿಕೆಗಳು ಒಂದೇ ಕೋಣೆಯಲ್ಲಿ ನಡೆಯುತ್ತವೆ.

ಆದಿಮಾನವರು ಕಾಡು-ಮೇಡುಗಳಲ್ಲಿ ಅಲೆಯುತ್ತಾ ಆಹಾರ ಉತ್ಪನ್ನಗಳನ್ನು ಬಳಸಿ ಗುಹೆಗಳಲ್ಲಿ, ಪೊದೆಗಳಲ್ಲಿ ವಾಸಮಾಡುತ್ತಿದ್ದರು. ಕಾಲನಂತರದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಕಂಡು ಹಿಡಿದರು. ಬದುಕಲಿಕ್ಕೆ ಅನ್ನ, ನೀರು ಅದರ ಜೊತೆಗೆ ಮಳೆ, ಚಳಿ, ಬಿಸಿಲಿನಿಂದ ರಕ್ಷಣೆಗೋಸ್ಕರ ವಸತಿ ವ್ಯವಸ್ಥೆಯನ್ನು ನಿರ್ಮಿಸಿಕೊಂಡು ಕಾಡಿನಿಂದ ನಾಡಿಗೆ ಒಂದು ವಿವಿಧ ಹಂತಗಳಲ್ಲಿ ಬೆಳೆದ. ಇಂದು ಎಷ್ಟೋ ಆದಿವಾಸಿ ಸಮುದಾಯಗಳು ನಾಡಿನ ಸಂಪರ್ಕದಿಂದ ದೂರವುಳಿದಿದ್ದು ಕಾಣಬಹುದಾಗಿದೆ. ಭೌಗೋಳಿಕವಾಗಿ ಕರ್ನಾಟಕದ ಉದ್ದಗಲಕ್ಕೂ ವಿಶಿಷ್ಟ ವಿನ್ಯಾಸ ಮತ್ತು ಮಾದರಿಗಳ ವಸತಿಗಳು ಕರ್ನಾಟಕದ ಉದ್ದಗಲಕ್ಕೂ ಕಂಡುಬರುತ್ತವೆ. ಇತಿಹಾಸದ ಪುಟಗಳನ್ನು ತೆಗೆದು ನೋಡಿದಾಗ ವಸತಿಗಾಗಿ ಮನೆಯನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದಿರುವುದು ಸುಮಾರು ಏಳು ಸಾವಿರ ವರ್ಷಗಳ ಹಿಂದೆ. ಆದಿಮಾನವ ಅಲೆಮಾರಿ ಜೀವನ ಮುಕ್ತಾಯಗೊಳಿಸಿ ಒಂದು ಕಡೆ ನೆಲೆನಿಂತು ಜನರೊಡನೆ ಗುಂಪುಗೂಡಿ ವಾಸಮಾಡಲಾರಂಭಿಸಿದ. ತಾನು, ತನ್ನದು ಎಂಬ ಭಾವನೆ ಮೂಡಿ ಕುಟುಂಬ ಪದ್ಧತಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಗುಡಿಸಲನ್ನು ಕಟ್ಟುತ್ತಾ, ಗಾಳಿ, ಮಳೆಯಿಂದ ಸಂರಕ್ಷಣೆ ಪಡೆಯುವುದಕ್ಕೆ ನಿರ್ಮಾಣವಾದ ಗುಡಿಸಲುಗಳು ಅವನ ವೃತ್ತಿ ಪ್ರವೃತ್ತಿಗಳು ಬೆಳೆದಂತೆ ಅವನು ವಿವಿಧ ಮಾದರಿಯ ಮನೆಗಳನ್ನು ಕಟ್ಟುತ್ತಾ ಬಂದನು.

ಕಾಡುಗೊಲ್ಲರು ನಾಗರಿಕ ಸಂಪರ್ಕದಿಂದ ದೂರವಿದ್ದು ತಮ್ಮದೇ ಆದ ಹಟ್ಟಿಗಳನ್ನು ಕಟ್ಟಿಕೊಂಡು ಸ್ವತಂತ್ರ್ಯ ಜೀವನವನ್ನು ನಡೆಸುತ್ತಿದ್ದಾರೆ. ಕಾಡುಗೊಲ್ಲರ ಹಟ್ಟಿಗಳು ಸಾಮಾನ್ಯವಾಗಿ ಗುಡಿಸಲುಗಳಿಂದ

[illegible]

ಕೂಡಿರುತ್ತವೆ. ಇವರ ಮೂಲವೃತ್ತಿ ಪಶುಪಾಲನೆ. ಪಶುಗಳೊಂದಿಗೆ ಕಾಡಿನಲ್ಲಿರಬೇಕಾಗಿದ್ದುದರಿಂದ ಹಾಗೂ ತಮ್ಮನ್ನು ಮತ್ತು ಪಶುಗಳನ್ನು ರಕ್ಷಿಸಿಕೊಳ್ಳುವುದಕೋಸ್ಕರ ಇವರು ಕಳ್ಳಿ ಬೇಲಿಯನ್ನು ಕಟ್ಟಿಕೊಳ್ಳುತ್ತಿದ್ದರು. ಇದಕ್ಕೆ ಧಾರ್ಮಿಕ ಸ್ವರೂಪ ಪಡೆದಂತೆ ಹಟ್ಟಿಯೊಳಗಿನ ದೇವರನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಇತರರು ಹಟ್ಟಿಯೊಳಗೆ ನುಗ್ಗಬಾರದೆಂಬ ಕಾರಣಕ್ಕೆ ಈ ಸಂಪ್ರದಾಯ ಮುಂದುವರಿಯಿತು. ಕರ್ನಾಟಕದ ಒಳನಾಡಿನ ಮಧ್ಯಭಾಗದ ತುಮಕೂರು, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ವಿಶೇಷವಾಗಿ ಕಂಡಬರುವ ಕಾಡುಗೊಲ್ಲರು ತಮ್ಮ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಭೂಪ್ರದೇಶಗಳು ಕೂಡ ಅಷ್ಟೇ ವಿಶಿಷ್ಟವಾಗಿವೆ. ಕುರುಚಲು ಕಾಡುಗಳು, ಸಾಮಾನ್ಯವಾದ ಗುಡ್ಡ-ಬೆಟ್ಟಗಳು ಹಾಗೂ ಹುಲ್ಲಾಗಾವಲುಗಳೇ ಪ್ರಧಾನವಾದ ಈ ಪ್ರದೇಶ ಇವರ ವೃತ್ತಿಗೆ ಪೂರಕವಾದುದ್ದು. ಊರುಗಳ ಸಂಸ್ಕೃತಿಗೆ ಪರ್ಯಾಯವಾಗಿ ತಮ್ಮದೇ ಹಟ್ಟಿಗಳ ಸಂಸ್ಕೃತಿಯನ್ನು ಪೋಷಿಸುತ್ತಾ ಯಾವ ಕಾರಣಕ್ಕೂ ಊರಿನ ಕಲಾಪಗಳ ಜೊತೆ ಒಂದಾಗದ ಕಾಡುಗೊಲ್ಲರು ಕಲ್ಲು, ಮಣ್ಣನ್ನು ಹೆಚ್ಚಾಗಿ ಬಳಸಿ, ಗುಡಿಸಲು ಮನೆ ಕಟ್ಟುತ್ತಾರೆ. ಮಾಳಿಗೆಯ ಮನೆಯನ್ನು ಕಟ್ಟುವುದಕ್ಕಾಗಿ ಮಣ್ಣು, ಮರ, ಬಿದಿರನ್ನು ಉಪಯೋಗಿಸಿ ಚೌಕಾಕರದಲ್ಲಿ ಮಣ್ಣಿನ ಇಟ್ಟಿಗೆಯಿಂದ ಗೋಡೆಯನ್ನು ನಿರ್ಮಿಸುವರು. ಇದರ ಮೇಲೆ ಬಿದಿರಿನ ಕಡ್ಡಿ ಇಲ್ಲವೇ ತೆಂಗಿನ ಗರಿಗಳನ್ನು ಹಾಕಿ, ಮಣ್ಣನ್ನು ಉದುರಿಸಿ, ಅದರ ಮೇಲೆ ಮಣ್ಣು ಹಾಕುತ್ತಾರೆ. ಬೆಳಕಿಗೋಸ್ಕರ ಮಾಳಿಗೆಯ ಮೇಲೆ ಒಂದು ಕಿಂಡಿಯನ್ನು ತೆಗೆಯುತ್ತಾರೆ. ಕಾಡುಗೊಲ್ಲರು ತಮ್ಮ ಗುಡಿಸಲುಗಳಿಗೆ ಸಿಮೆಂಟ್, ಕಬ್ಬಿಣ, ಆಧುನಿಕ ರೀತಿಯ ಬಣ್ಣವನ್ನು ಬಳಿಯದೆ ಮನೆಗೆ ಅಲ್ಲೇ ಸಿಗತಕ್ಕಂತ ಕೆಮ್ಮಣ್ಣು ಬಳಸಿ ಅದಕ್ಕೆ ಅಲಂಕಾರಿಕವಾಗಿ ಚಿತ್ರಗಳನ್ನು ಗೋಡೆಯ ಮೇಲೆ ಬಿಡಿಸುತ್ತಾರೆ. ಅಲ್ಲಿ ಕಾಡುಗೊಲ್ಲರ ಕಲೆಯನ್ನು ನೋಡಬಹುದು.

ಕಾಡುಗೊಲ್ಲರು ಮನೆಗಳಲ್ಲಿ ಒಲೆಗಳನ್ನು ಬಳಸುತ್ತಿದ್ದು ಅಲ್ಲಿ ಬಳಸುವ ಪಾತ್ರೆಗಳು ಮಣ್ಣಿನವುಗಳಾಗಿವೆ. ಹೆಚ್ಚಾಗಿ ಮಣ್ಣಿನ ಮಡಿಕೆಗಳನ್ನು ಬಳಸುತ್ತಿದ್ದು ಅವುಗಳಲ್ಲಿ ಹಾಲು, ಬೆಣ್ಣೆ, ಮೊಸರು ಹಾಕಿ ಹಗ್ಗದ ನೆಲವುಗಳನ್ನು ಗುಡಿಸಲಿಗೆ ಅಡ್ಡ ಬೆಲಗಿಗೆ ಕಟ್ಟಿ ಇಳಿಬಿಡುತ್ತಾರೆ. ಇತ್ತೀಚೆಗೆ ಹಿಂಡಾಲಿಯಂ, ಸ್ಟಿಲ್, ಹಿತ್ತಾಳೆ ಮತ್ತು ಕಂಚಿನ ಪಾತ್ರೆಗಳನ್ನು ಬಳಸುತ್ತಿದ್ದಾರೆ. ಖಾರ ಅರೆಯುವುದಕ್ಕಾಗಿ ಗುಂಡು, ಬಂಡೆ, ಒಳಕಲನ್ನು ಬಳಸುವರು.

ಗುಡಿಸಲಿನ ಅಥವಾ ಮನೆಯ ಪಕ್ಕದಲ್ಲಿ ದನ ಕರುಗಳನ್ನು ಕಟ್ಟುವುದಕ್ಕಾಗಿ ಅವುಗಳ ರಕ್ಷಣೆಗಾಗಿ ಕೊಟ್ಟಿಗೆಯನ್ನು ನಿರ್ಮಿಸಿರುತ್ತಾರೆ. ಮನೆ ಅಥವಾ ಗುಡಿಸಲನ್ನು ಕಟ್ಟುವಾಗ ಮನೆಯ ಬಾಗಿಲಿನ ಎರಡು ಕಡೆ ಇಲ್ಲವೆ ವರಾಂಡದಲ್ಲಿ ಬಾಗಿಲಿನ ಎಡಗಡೆ, ಬಲಗಡೆ ಯಾವುದಾದರು ಒಂದು ಕಡೆ ಕೊಟ್ಟಿಗೆ ನಿರ್ಮಿಸಿರುತ್ತಾರೆ. ಬಿದಿರಿನ ದರ್ಬೆ, ಕಾಡಿನ ಹುಲ್ಲು, ತೆಂಗಿನ ಗರಿಗಳಿಗಿಂದ ಕೊಟ್ಟಿಗೆ ಕಟ್ಟಿರುತ್ತಾರೆ.

ಕಾಡುಗೊಲ್ಲರು ತಮ್ಮ ಪಶುಗಳನ್ನು ದೈವಗಳೆಂದು ತಿಳಿದು, ಅವುಗಳನ್ನು ಮಕ್ಕಳಂತೆ ಸಾಕುತ್ತಾರೆ. ಅವುಗಳ ಆರೈಕೆಯನ್ನು ತಮಗಿಂತ ಹೆಚ್ಚಾಗಿ ನೋಡಿಕೊಳ್ಳುವರು. ಇವುಗಳನ್ನು ಸಾಕುವುದಕ್ಕೆ ಕೊಟ್ಟಿಗೆಯನ್ನು

ನಿರ್ಮಿಸಿ ಅವುಗಳಲ್ಲಿ ದನ, ಕರು, ಎಮ್ಮೆ, ಕುರಿ, ಮೇಕೆಗಳನ್ನು ಕಟ್ಟುತ್ತಾರೆ. ಈ ಕೊಟ್ಟಿಗೆಗಳು ಮನೆ ಮುಂದಿದ್ದು, ಒಳಗೆ ಪ್ರವೇಶಿಸಬೇಕಾದರೆ ಕೊಟ್ಟಿಗೆ ಮೂಲಕವೇ ಹೋಗಬೇಕಾಗುತ್ತದೆ. ಪಶುಗಳಿಗೆ ಹುಲ್ಲುಹಾಕುವುದಕ್ಕೆ ಗೊಂದಲಿ (ಹಲ್ಲು ಹಾಕಲು ಕಟ್ಟಿರುವ ಕಟ್ಟೆ) ಕಟ್ಟಿರುತ್ತಾರೆ. ಇದರಿಂದ ದನಗಳಿಗೆ ಹುಲ್ಲನ್ನು ತಿನ್ನಲು ಸಹಾಯವಾಗುತ್ತದೆ. ಇಲ್ಲಿ ಹಾಕಿದ ಹುಲ್ಲು ಚೆಲ್ಲಾಪಿಲ್ಲಿಯಾಗದೇ ಗೊಂದಲಿಗಳಲ್ಲಿಯೇ ಇರುತ್ತದೆ. ಇದರಿಂದ ತಿನ್ನುವ ಆಹಾರ ಗಂಜಲು ಮತ್ತು ಸೆಗಣಿಯ ಜೊತೆ ಸೇರದೆ ಸ್ವಚ್ಛವಾಗಿರುತ್ತದೆ. ದನಗಳ ಕೊಟ್ಟಿಗೆಗಳು ಇಳಿಜಾರಾಗಿದ್ದು ಆದರಿಂದ ಗಂಜಲು ಇಳಿದು ಬರುವಂತೆ ಮಾಡಿ ಕೆಳಗೆ ಒಂದು ಗುಂಡಿಯನ್ನು ತೋಡಿರುತ್ತಾರೆ. ಈ ಗಂಜಲನ್ನು ಸೂತಕ ಕಳೆಯುವುದಕ್ಕೆ ಉಪಯೋಗಿಸುತ್ತಾರೆ. ಇದರಲ್ಲಿ ವಿಶೇಷವಾಗಿ ಕರುವಿನ ಗಂಜಲು ಕೆಳಗೆ ನೆಲಕ್ಕೆ ಬೀಳದಂತೆ ನೋಡಿಕೊಳ್ಳುವುದರಿಂದ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆಯಿಂದ ಕೊಟ್ಟಿಗೆಯನ್ನು ಸ್ವಚ್ಛವಾಗಿಡುತ್ತಾರೆ. ಅಲ್ಲಿ ಸಗಣಿ, ಗಂಜಲು ಬಿದ್ದರೆ ತಕ್ಷಣ ಸ್ವಚ್ಛಗೊಳಿಸುತ್ತಾರೆ ಜೊತೆಗೆ ಅಲ್ಲಿಯೇ ಮಲಗುತ್ತಾರೆ. ಆದುದರಿಂದ ಇವರು ಹಟ್ಟಿಯನ್ನು ಮಾತ್ರವಲ್ಲದೆ ಗಂಜಲನ್ನು ಕೂಡ ಸ್ವಚ್ಛಗೊಳಿಸುತ್ತಾರೆ.

ಕಾಡುಗೊಲ್ಲರು ಗುಡಿಸಲು ಅಥವಾ ಮನೆಯ ಮುಂದೆ ಮುಳ್ಳಿನ ಬೇಲಿಯನ್ನು ವೃತ್ತಕಾರದಲ್ಲಿ ನಿರ್ಮಾಣ ಮಾಡಿರುತ್ತಾರೆ. ಇದನ್ನು ರೊಪ್ಪವೆಂದು ಕರೆಯುತ್ತಾರೆ. ಕಾಡುಗೊಲ್ಲರು ಸಾಕುವ ಹತ್ತು ಸಾವಿರಕ್ಕಿಂತ ಹೆಚ್ಚು ಕುರಿಗಳು ಇರುವಾಗ ಅವುಗಳನ್ನು ಕಳ್ಳರಿಂದ ತೋಳಗಳಿಂದ ಹಾಗೂ ಇತರೆ ಪ್ರಾಣಿಗಳಿಂದ ರಕ್ಷಿಸುವುದಕ್ಕಾಗಿ ರೊಪ್ಪದ ಮಧ್ಯದಲ್ಲಿ ಮಂಚಿಗೆಯನ್ನು ಹಾಕಿರುತ್ತಾರೆ. ರಾತ್ರಿ ಮಂಚದ ಮೇಲೆ ಮಲಗಿ ಕೊಂಡು ಎಚ್ಚರದಿಂದ ಕಾಯುತ್ತಾರೆ. ಕುರಿ ಹಾಗೂ ಪಶುಗಳ ರಕ್ಷಣೆಗಾಗಿ ನಾಯಿಗಳನ್ನು ಸಾಕಿರುತ್ತಾರೆ. ನಾಯಿ ಬೊಗಳಿದರೆ ಎದ್ದು ಕೂಗನ್ನು ಹಾಕುತ್ತಾ ನಾನು ಎಚ್ಚರದಿಂದ್ದೇನೆ ಎನ್ನುವ ಅರ್ಥದಲ್ಲಿ ಪ್ರಾಣಿಗಳಿಗೆ ಮನುಷ್ಯ ಇದ್ದಾನೆ ಎನ್ನುವ ಭಯ ಮೂಡಿಸುತ್ತಾರೆ.

ಕಾಡುಗೊಲ್ಲರ ಹಟ್ಟಿಗಳಿಗೆ ವಿದ್ಯುತ್ ಸೌಲಭ್ಯ ಇಲ್ಲದೆ ಇರುವುದರಿಂದ ತೋಳಗಳು ಇತರೆ ಪ್ರಾಣಿಗಳು ಹಟ್ಟಿಯೊಳಗೆ ಬಂದು ಆಡು ಕುರಿಗಳನ್ನು ಸುಲಭವಾಗಿ ತಿಂದು ಹೋಗುತ್ತಿದ್ದವು. ಆದರೆ ಇತ್ತಿಚೆಗೆ ಕುರಿಗಾರರು ಭದ್ರವಾದ ಗೊಡೆಗಳನ್ನು ನಿರ್ಮಿಸಿ ರೊಪ್ಪೆಗಳನ್ನು ಕಟ್ಟಿಸುತ್ತಿದ್ದಾರೆ.

ಕಾಡುಗೊಲ್ಲರ ಗುಡಿಸಲಿನ ಮಧ್ಯದೊಳಗೆ ದೇವಸ್ಥಾನಗಳಿರುತ್ತವೆ. ಜುಂಜಪ್ಪ, ಎತ್ತಪ್ಪ, ಕ್ಯಾತಪ್ಪ, ಸಿರಿಯಣ್ಣ ಮುಂತಾದ ದೇವತೆಗಳ ಗುಡಿಗಳಿರುತ್ತವೆ. ಇವರು ಬಳಸುತ್ತಿರುವ ವಸ್ತುಗಳಾದ ಕತ್ತಿ, ಕಠಾರಿ, ಬಿಲ್ಲು, ಬಾಣ ಮತ್ತು ಪೆಟ್ಟಿಗಳನ್ನು ಅಲ್ಲಿ ಇಟ್ಟು ಪೂಜೆ ಮಾಡುತ್ತಾರೆ. ಪೆಟ್ಟಿಗೆಗಳಲ್ಲಿ ಲಿಂಗ, ಸಾಲಿಗ್ರಾಮ ಅಥವಾ ಅವರ ಹಿಂದಿನ ಕಾಲದಲ್ಲಿದ್ದ ಒಡವೆ, ವಸ್ತ್ರಗಳನ್ನು ಕಾಣಬಹುದು. ಮುಗ್ಧರು ಮತ್ತು ಸಂಪ್ರದಾಯಸ್ಥರಾದ ಕಾಡುಗೊಲ್ಲರು ಇವುಗಳನ್ನು ಪವಿತ್ರವೆಂದು ತಿಳಿದು ಪೂಜಿಸುತ್ತಾರೆ. ದೇವರು ಗುಬ್ಬಗಳಿಗೆ ಮುಳ್ಳಿನ ಬೇಲಿಯನ್ನು ಹಾಕಿರುತ್ತಾರೆ. ಇವರು ತಮ್ಮ ಹಾಗೂ ಪಶುಗಳ ರಕ್ಷಣೆಗಾಗಿ ತಮ್ಮ ದೇವತೆಗಳಿಗೆ ಮೊರೆ ಹೋಗುವುದಕ್ಕಾಗಿ ಅವರ ಗುಡಿಗಳನ್ನು ಹಟ್ಟಿಗಳ ಮಧ್ಯಯದಲ್ಲಿಯೆ ನಿರ್ಮಿಸಿರುತ್ತಾರೆ.

ಕಾಡುಗೊಲ್ಲರು ಆಧುನೀಕರಣ ಮತ್ತು ನಗರೀಕರಣದ ಪ್ರಭಾವದಿಂದಾಗಿ ಹಳೆಯ ಮಾದರಿಯ ಮನೆಗಳು ಇಂದು ಮಾಯವಾಗುತ್ತಿದೆ. ಗುಡಿಸಲಿಗಿಂತ ಹೆಂಚಿನ ಮನೆಗಳು, ತಾರಸಿಯ ಮನೆಗಳು ಹೆಚ್ಚಾಗುತ್ತಿವೆ. ಆದರೆ ಚಿತ್ರದುರ್ಗ, ತುಮಕೂರು ಜಿಲ್ಲೆಯ ಅನೇಕ ಹಟ್ಟಿಗಳಲ್ಲಿ ಇಂದಿಗೂ ಹೆಚ್ಚಾಗಿ ಗುಡಿಸಲುಗಳು ಕಂಡುಬರುತ್ತವೆ. ಕೆಲವರು ಗುಡಿಸಲುಗಳನ್ನು ಮನೆಗಳನ್ನಾಗಿ ಮಾರ್ಪಾಡಿಸಿಕೊಳ್ಳುತ್ತಿದ್ದಾರೆ. ತಮ್ಮ ಹಟ್ಟಿಗಳ ಸುತ್ತ ಕಳ್ಳಿಬೇಲಿಯನ್ನು ಹಾಕಿಕೊಂಡು ವಾಸ ಮಾಡುತ್ತಿದ್ದಾರೆ. ಆದರೆ ತೀರಾ ಸಂಪ್ರದಾಯಕ್ಕೆ ಕಟ್ಟುಬಿದ್ದ ಕೆಲವು ಹಟ್ಟಿಗಳ ಬೇಲಿಗಳು ಬಲವಾಗಿದ್ದರೆ ಬದಲಾವಣೆಗೆ ಕಾಲಿಟ್ಟ ಕಾಡುಗೊಲ್ಲರಲ್ಲಿಯ ಬೇಲಿಗಳು ಕಾಟಾಚಾರಕ್ಕೆ ಎಂಬಂತಿವೆ. ಸರ್ಕಾರದ ಆಶ್ರಯ ಯೋಜನೆಗಳಿಂದ ಇವರಿಗೆ ಮನೆಗಳು ಸಿಗುತ್ತಿವೆ. ಪರಂಪರಾನುಗತವಾಗಿ ಬಂದಿರುವ ಗುಡಿಸಲುಗಳು ಮನೆಗಳಾಗುತ್ತಿವೆ.

ವಸತಿಗಳ ಮಾದರಿ

ಕ್ಷೇತ್ರಕಾರ್ಯದ ಮಾಹಿತಿಯಿಂದ ಐದು ಹಟ್ಟಿಗಳಲ್ಲಿ ಒಟ್ಟು ೪೭೯ ಕುಟುಂಬಗಳಲ್ಲಿ ೧೦೧ ಗುಡಿಸಲು, ೪ ಗುಡಾರಗಳು, ೫ ಟಿನ್ ಮನೆಗಳು, ೩೦೨ ಮಾಳಿಗೆ, ೧೨ ಆರ್.ಸಿ.ಸಿ., ೨೭ ಹೆಂಚಿನ ಮನೆ, ೨೨ ಜನತಾ ಹಾಗೂ ೬ ಬಾಡಿಗೆ ಮನೆಗಳಿರುವುದು ಈ ಕೆಳಗಿನ ಕೋಷ್ಟಕದಿಂದ ತಿಳಿಯಬಹುದು.

ಕೋಷ್ಟಕ ೪.೧ ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲರ ವಸತಿ ವ್ಯವಸ್ಥೆ

ತಾಲೂಕುಗಳು	ನೆಲೆಗಳು	ಕುಟುಂಬ	ಮನೆಗಳ ಮಾದರಿಗಳು							
			ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಜನತಾ	ಬಾಡಿಗೆ
ಚಳ್ಳಕೆರೆ	ಹನುಮಂತನಹಳ್ಳಿ	೬೨	-	೧೨	೧	೩೭	-	-	೧೧	೧
	ಜೋಗಿಹಟ್ಟಿ	೭೨	-	೯	-	೬೧	-	-	೨	-
	ಯಲಗಟ್ಟಿ ಗೊಲ್ಲರಹಟ್ಟಿ	೧೯೪	-	೫೮	೧	೧೨೫	೧	೬	-	೩
	ಬೆಳಗೆರೆ ಗೊಲ್ಲರಹಟ್ಟಿ	೧೦೫	೪	೧೮	೩	೫೦	೧೦	೧೯	-	೧
ಮೊಳಕಾಲ್ಮೂರು	ಗುಂಡ್ಲೂರು	೪೬	-	೪	-	೨೯	೧	೨	೯	೧
ಒಟ್ಟು		೪೭೯	೪	೧೦೧	೫	೩೦೨	೧೨	೨೭	೨೨	೬

ಮೇಲ್ಕಂಡ ಕೋಷ್ಟಕದಲ್ಲಿ ಎಲ್ಲಾ ಕುಟುಂಬಗಳು ವಸತಿ ವ್ಯವಸ್ಥೆಯನ್ನು ಹೊಂದಿರುವುದನ್ನು ಕಾಣುತ್ತೇವೆ. ಒಟ್ಟಾರೆ ೪೭೯ ಕುಟುಂಬಗಳಲ್ಲಿ ಶೇ. ೦.೮೩ರಷ್ಟು ಗುಡಾರದಲ್ಲಿ, ಶೇ. ೨೧.೦೮ರಷ್ಟು ಗುಡಿಸಲುಗಳಲ್ಲಿ, ಶೇ. ೧.೦೪ರಷ್ಟು ಟಿನ್‌ಮನೆಗಳಲ್ಲಿ, ಶೇ. ೬೩.೦೪ರಷ್ಟು ಮಾಳಿಗೆ ಮನೆಗಳಲ್ಲಿ, ಶೇ. ೨.೫೦ರಷ್ಟು ಆರ್.ಸಿ.ಸಿ. ಮನೆಗಳಲ್ಲಿ, ಶೇ. ೫.೬೩ರಷ್ಟು ಹೆಂಚಿನಮನೆಗಳಲ್ಲಿ, ಶೇ. ೪.೫೯ರಷ್ಟು ಜನತಾ ಮನೆಗಳಲ್ಲಿ ಹಾಗೂ ಶೇ. ೧.೨೫ರಷ್ಟು ಕುಟುಂಬಗಳು ಬಾಡಿಗೆ ಮನೆಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಈ ಅಂಕಿ-ಅಂಶಗಳನ್ನು ಗಮನಿಸಿದಾಗ ಅತಿ ಹೆಚ್ಚಿನ ಪ್ರಮಾಣದಲ್ಲಿ ಮಾಳಿಗೆ ಮತ್ತು

ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಹಿಂದೆ ಅತಿಹೆಚ್ಚಿನ ಪ್ರಮಾಣದಲ್ಲಿ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಆದರೆ ಇತ್ತೀಚಿನ ದಿನಮಾನಗಳಲ್ಲಿ ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಮಾಳಿಗೆ ಮನೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಿರುವುದನ್ನು ಕಾಣುತ್ತೇವೆ.

೪.೯ ಕುಟುಂಬ

ಇಂದು ಸಾಮಾನ್ಯವಾಗಿ ಎಲ್ಲ ಆದಿವಾಸಿ ಸಮುದಾಯಗಳಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯೇ ಕಂಡುಬರುತ್ತದೆ. ಆದರೆ ಮನೆಯ ಜವಾಬ್ದಾರಿಯನ್ನೆಲ್ಲ ಕುಟುಂಬದ ಯಜಮಾನನೆ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಎಲ್ಲ ಆದಿವಾಸಿ ಸಮುದಾಯಗಳಲ್ಲಿ ಒಂದು ಕಾಲಕ್ಕೆ ಮಾತೃಪ್ರಧಾನ ಕುಟಂಬ ವ್ಯವಸ್ಥೆಯೇ ಜಾರಿಯಲ್ಲಿತ್ತು. ಆರ್ಯರು ಭಾರತಕ್ಕೆ ಬಂದ ಮೇಲೆ ಈ ವ್ಯವಸ್ಥೆ ಬದಲಾವಣೆ ಕಂಡಿತು ಎಂದು ಹೇಳಬಹುದು. ಪಿತೃಪ್ರಧಾನ ಕುಟುಂಬ ಎನ್ನುವುದು ಕೇವಲ ಮೇಲ್ನೋಟದಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಇಡೀ ಕುಟುಂಬದ ನಿರ್ವಹಣೆಯನ್ನೆಲ್ಲ ಮಹಿಳೆ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಕಾಡುಗೊಲ್ಲರಲ್ಲಿಯೂ ಒಂದು ಕಾಲಕ್ಕೆ ಮಾತೃಪ್ರಧಾನ ವ್ಯವಸ್ಥೆ ಇದ್ದು ಅದನ್ನು ಪುರುಷ ಪ್ರಧಾನ ಸಮಾಜ ಆಕ್ರಮಿಸಿಕೊಂಡಿದೆಯಾದರೂ ಕುಟುಂಬದ ಪ್ರತಿಯೊಂದು ಆಗುಹೋಗುಗಳನ್ನು ಮಹಿಳೆಯರೆ ನೋಡಿಕೊಳ್ಳುತ್ತಿರವುದನ್ನು ಅಲ್ಲಿ ಕಾಣುತ್ತೇವೆ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಆಸ್ತಿಯ ಹಕ್ಕು ಕೇವಲ ಹೆಣ್ಣು ಮಕ್ಕಗಳಿಗೆ ಮಾತ್ರ ಇರುತ್ತಿತ್ತು. ಅಳಿಯನಾದವನು ತನ್ನ ಹೆಂಡತಿಯ ಮನೆಯಲ್ಲಿಯೆ ವಾಸಿಸ ಬೇಕಾಗುತ್ತಿತ್ತು. ಇವರಿಗೆ ಹುಟ್ಟಿದ ಮಕ್ಕಳು ತಾಯಿಯ ವಂಶವನ್ನೆ ಹೇಳುತ್ತಿದ್ದವು. ಈಗ ಇದಕ್ಕೆ ವಿರುದ್ಧವಾಗಿ ತಂದೆಯ ವಂಶವನ್ನು ಹೇಳುವುದನ್ನು ಕಾಣುತ್ತೇವೆ. ಆದಿವಾಸಿಗಳು ಮಹಿಳೆಯನ್ನು ಎಷ್ಟು ಗೌರವದಿಂದ ಕಾಣುತ್ತಾರೆಂದರೆ ಅವಳನ್ನು ತೆರ ಕೊಟ್ಟು ಮದುವೆ ಮಾಡಿಕೊಂಡು ಬರುತ್ತಾರೆ.

ಸಮಾಜದ ಅತ್ಯಂತ ಚಿಕ್ಕ ಘಟಕ ಕುಟುಂಬ ಹಾಗೂ ಇದೊಂದು ಸಾಮಾಜಿಕ ಸಂಸ್ಥೆಯಾಗಿರುತ್ತದೆ. ಸಿ.ಎಚ್. ಕೊಲೆಯವರು ಕುಟುಂಬವನ್ನು ಪ್ರಾಥಮಿಕ ಸಮೂಹಕ್ಕೆ ಸೇರಿಸಿದ್ದಾರೆ. ನಾನು ಕಾಡುಗೊಲ್ಲರ ಈ ಅಧ್ಯಯನಕ್ಕಾಗಿ ೪೭೭ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಅವರ ಕೌಟುಂಬಿಕ ವ್ಯವಸ್ಥೆ ಹೇಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ.

ಕುಟುಂಬವು ಸಾಮಾಜಿಕ ಜೀವನಕ್ಕೆ ಒಂದು ನೆಲೆ, ಬೆಲೆ, ಸ್ಥಿರತೆ ಹಾಗೂ ಭದ್ರತೆಯನ್ನು ಕೊಡುತ್ತದೆ ಮತ್ತು ಮಾನವನ ವಿಕಾಸಕ್ಕೆ ಅವಕಾಶ ಮಾಡಿಕೊಡುತ್ತದೆ. ಕುಟುಂಬ ಒಂದು ಸಮುದಾಯಿಕ ನೆಲೆಯಲ್ಲಿ ರೂಪ ತಾಳುತ್ತದೆ. ಅದು ತಂದೆ, ತಾಯಿ ಹಾಗೂ ಮಕ್ಕಳಿಂದ ಕೂಡಿರುತ್ತದೆ. ಸಮ್ನರ ಮತ್ತು ಕೆಲ್ಲರ ಎಂಬ ಸಮಾಜಶಾಸ್ತ್ರಜ್ಞರು ಕುಟುಂಬವನ್ನು ಕುರಿತು ಹೀಗೆ ವ್ಯಾಖ್ಯಾನಿಸಿದ್ದಾರೆ. "ರಕ್ತ ಸಂಬಂಧಿಗಳಿಂದ ಕೂಡಿದ ಮತ್ತು ಕನಿಷ್ಠ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತೀ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ" ಎಂದಿದ್ದಾರೆ.

[illegible]

ಕಾಡುಗೊಲ್ಲರಲ್ಲಿ ಒಂದು ಕಾಲಕ್ಕೆ ಹೆಚ್ಚಾಗಿ ಅವಿಭಕ್ತ ಕುಟುಂಬಗಳೇ ಹೆಚ್ಚಾಗಿದ್ದವು. ಕಾಡುಗೊಲ್ಲರ ಮೂಲ ವೃತ್ತಿ ಪಶುಪಾಲನೆ. ಈ ಪಶುಪಾಲನೆ ಕೈಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಜನರ ಅವಶ್ಯಕತೆ ಇರುತ್ತದೆ. ಕೇವಲ ಗಂಡ ಹೆಂಡತಿ ಮಕ್ಕಳನ್ನು ಒಳಗೊಂಡಿರುವ ವಿಭಕ್ತ ಕುಟುಂಬಗಳು ಪಶುಪಾಲನೆಯಂತಹ ವೃತ್ತಿಯನ್ನು ಮಾಡಲು ಸಾಧ್ಯವಾಗದು ಎಂಬ ಕಾರಣಕ್ಕಾಗಿ ಕಾಡುಗೊಲ್ಲರು ಎರಡು ಮೂರು ತಲೆಮಾರಿನ ಜನರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಕಾಡುಗೊಲ್ಲರು ಅನುಸರಿಸುತ್ತಿರುವ ವೃತ್ತಿಯ ಕಾರಣದಿಂದಾಗಿ ಅವರಲ್ಲಿ ಅವಿಭಕ್ತ ಕುಟುಂಬಗಳು ಇಲ್ಲಿಯವರೆಗೆ ಹೆಚ್ಚಿನ ಪ್ರಮಾಣದಲ್ಲಿ ಉಳಿದುಕೊಂಡು ಬರಲು ಸಾಧ್ಯವಾಗಿತ್ತು ಎಂದು ಹೇಳಬೇಕಾಗುತ್ತದೆ. ಕಾಡುಗೊಲ್ಲರ ಭಾವನಾತ್ಮಕ ಸಂಬಂಧಗಳಿಗೆ ಹೆಚ್ಚಿನ ಗೌರವ ನೀಡುತ್ತಾರೆ. ಹೀಗಾಗಿ ಅವರು ಒಟ್ಟಾಗಿ ಬದುಕಲು ಹೆಚ್ಚಿನ ಆಸಕ್ತಿ ತೋರಿಸುತ್ತಾರೆಂದು ಹೇಳಿದರೆ ತಪ್ಪಾಗಲಾರದು. ನಾನು ಕ್ಷೇತ್ರಕಾರ್ಯ ಮಾಡಿದ ೪೭೬ ಕುಟುಂಬಗಳಲ್ಲಿ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳು ಕಂಡುಬಂದಿದೆ. ಇತ್ತೀಚೆಗೆ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಕಾಣುತ್ತೇವೆ. ಇದಕ್ಕೆ ಅವರು ಅನುಸರಿಸುತ್ತಿರುವ ವೃತ್ತಿಗಳೇ ಕಾರಣಗಳಾಗಿವೆ. ಗೊಲ್ಲರ ಹಟ್ಟಿಗಳಲ್ಲಿ ಜನರು ಕೂಲಿ ಕೆಲಸಗಳನ್ನು ಆರಿಸಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಪಶುಪಾಲನೆ ವೃತ್ತಿ ಕಡಿಮೆಯಾದಂತೆಲ್ಲ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕಾಡುಗೊಲ್ಲರಲ್ಲಿ ಪಿತೃಪ್ರಧಾನ ವ್ಯವಸ್ಥೆ ಜಾರಿಯಲ್ಲಿದ್ದರೂ ಮಾತೃಪ್ರಧಾನತೆಗೆ ಹೆಚ್ಚಿನ ಗೌರವಗಳಿರುವುದನ್ನು ಕಾಣುತ್ತೇವೆ. ಮನೆಯ ಪ್ರತಿಯೊಂದು ಜವಾಬ್ದಾರಿಯನ್ನು ಹೆಣ್ಣು ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ನಗರ ಪ್ರದೇಶಗಳ ಪ್ರಭಾವ ಪ್ರೇರಣೆ ಕಾಡುಗೊಲ್ಲರ ಕೌಟುಂಬಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿದೆ. ಗಂಡ ಹೆಂಡತಿ ಮಕ್ಕಳಿಂದ ಮಾತ್ರ ಕೂಡಿದ ಸಂಸಾರಕ್ಕೆ ಹೆಚ್ಚಿನ ಒಲವನ್ನು ಅವರು ತೋರಿಸುತ್ತಿರುವುದು ಕಂಡುಬರುತ್ತದೆ. ಮೂಲತಃ ಆಸ್ತಿಯನ್ನು ಹೊಂದರದೇ ಇದ್ದ ಕಾಡುಗೊಲ್ಲರು ಆಸ್ತಿಗಾಗಿ ಹೊಡೆದಾಡಿ ವಿಭಕ್ತ ಕುಟುಂಬ ಗಳಾಗಿರುವುದನ್ನು ಸಾಮಾನ್ಯವಾಗಿ ನಾವು ಕಾಣುವುದಿಲ್ಲ. ಗೋಲ್ಲರ ಹಟ್ಟಿಗಳಲ್ಲಿಯ ವಿಭಕ್ತ ಕುಟುಂಬಗಳಲ್ಲಿ ಜೀವನ ನಡೆಸುವವರು ಸಹ ಊರಿನಲ್ಲಿ ಮನೆ ಮಾಡಿಕೊಂಡು ವಾಸಿಸುವುದನ್ನು ಕಾಣುವುದಿಲ್ಲ.

ಕಾಡುಗೊಲ್ಲರ ಪ್ರತಿಯೊಂದು ಕುಟುಂಬದಲ್ಲಿ ತಂದೆಯಾದವನೇ ಮುಖ್ಯ ಯಜಮಾನನಾಗಿರುತ್ತಾನೆ. ಕುಟುಂಬದ ಎಲ್ಲ ಜವಾಬ್ದಾರಿಗಳು ಇವರ ಮೇಲಿರುತ್ತದೆ. ಹೆಂಡತಿ ಮಕ್ಕಳು ದುಡಿದು ಯಜಮಾನ ಕೈಗೆ ಕೊಡುವರು. ಆ ಹಣದಿಂದ ಕುಟುಂಬ ನಿರ್ವಹಣೆ ಮಾಡುತ್ತಾನೆ. ಕಾಡುಗೊಲ್ಲರಲ್ಲಿ ಸ್ಥಿರಾಸ್ತಿಯು ತಂದೆಯಿಂದ ಗಂಡು ಮಕ್ಕಳಿಗೆ ಹಸ್ತಾಂತರವಾಗುತ್ತದೆ. ಹೆಣ್ಣು ಮಕ್ಕಳಿಗೆ ಆಸ್ತಿ ಕೊಡುವ ಪರಂಪರೆ ಇವರಲ್ಲಿ ಇಲ್ಲ. ಅವಿಭಕ್ತ ಕುಟುಂಬಗಳಲ್ಲಿ ಒಂದು ತಲೆಮಾರಿನೀಂದ ಮೂರು ತಲೆಮಾರಿನವರು ವಾಸಿಸುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ವಿಭಕ್ತ ಕುಟುಂಬಗಳನ್ನು ಹೊಂದಿದ ಕಾಡುಗೊಲ್ಲರು ಹಬ್ಬ ಜಾತ್ರೆ ಉತ್ಸವಗಳಲ್ಲಿ ಒಂದು ಕಡೆ ಸೇರುವುದನ್ನು ಕಾಣುತ್ತೇವೆ.

೪.೧೦ ಉಡುಗೆ - ತೊಡುಗೆಗಳು

ಪ್ರತಿಯೊಂದು ಸಮುದಾಯ ತನ್ನದೇ ಆದ ಪರಂಪರಾನುಗತವಾದ ಉಡುಗೆ ತೊಡುಗೆಗಳನ್ನು ಹೊಂದಿರುತ್ತದೆ. ಆ ಉಡುಗೆ ತೊಡುಗೆಗಳಲ್ಲಿ ವಿಶೇಷತೆಯೂ ಇರುತ್ತದೆ. ಒಂದು ಸಮುದಾಯದ ವೇಷಭೂಷಣಗಳು ಆ ಸಮುದಾಯದ ಸಂಸ್ಕೃತಿಯನ್ನು ತಿಳಿಸುವಂತೆ, ಕಾಡುಗೊಲ್ಲರ ಸಮುದಾಯದ ವಿಶಿಷ್ಟ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಸಮುದಾಯದಲ್ಲಿನ ವಿಶಿಷ್ಟ ಉಡುಗೆ ತೊಡುಗೆಗಳು ಸಮಯ ಸಂದರ್ಭಕ್ಕೆ ತಕ್ಕಂತೆ ವಾತಾವರಣಕ್ಕೆ ಸಂಬಂಧಿಸಿದಂತೆ ಹೊಂದಿಕೊಳ್ಳುವ ಹಾಗೂ ಘನತೆ ಗೌರವಗಳನ್ನು ಸೂಚಿಸುವ ನಿದರ್ಶನಗಳಾಗಿರುತ್ತವೆ. ಅವರು ಧರಿಸುವ ಬಟ್ಟೆಗಳ ಮೂಲಕ ಅವರ ಸ್ಥಿತಿಗತಿಗಳನ್ನು ಹಾಗೂ ಅವರು ಅನುಸರಿಸುವ ವೃತ್ತಿಗಳನ್ನು ತಿಳಿದುಕೊಳ್ಳಬಹುದಾಗಿದೆ.

೪.೧೦.೧ ಪುರುಷರು

ಕಾಡುಗೊಲ್ಲರ ಪುರುಷರ ಉಡುಗೆ ತೊಡುಗೆಗಳು ಅತ್ಯಂತ ಸರಳವಾಗಿರುತ್ತವೆ. ಇವರಲ್ಲಿ ವಿಶೇಷವಾದ ಉಡುಗೆಗಳು ಕಂಡುಬರುವುದಿಲ್ಲ. ಪಶುಪಾಲಕರಾದ ಇವರು ಮೈತುಂಬಾ ಬಟ್ಟೆಯನ್ನು ಹಾಕಿಕೊಳ್ಳುವ ಪರಂಪರೆ ಹೊಂದಿದವರಲ್ಲ. ಆರಂಭದಲ್ಲಿ ಮೊಣಕಾಲಿನ ಮೇಲೆ ಇರುವ ಹಾಗೆ ಧೋತ್ರವನ್ನು ಉಟ್ಟುಕೊಂಡು, ಹೆಗಲಮೇಲೆ ಕಂಬಳಿಯನ್ನಿಟ್ಟುಕೊಂಡು, ತಲೆಗೆ ವಸ್ತ್ರವನ್ನು ಸುತ್ತಿ, ನಿಲುವಂಗಿ ಧರಿಸಿ ಕಾಲಿಗೆ ಚರ್ಮದ ಪಾದರಕ್ಷೆಗಳನ್ನು ಹಾಕಿಕೊಳ್ಳುತ್ತಿದ್ದರು. ಕಾಡುಗೊಲ್ಲರ ಗಂಡಸರಿಗೆ ಮಾತ್ರ ಕಂಬಳಿ ಇರಬೇಕು. ಪಾದದವರೆಗೆ ಧೋತ್ರ ಉಟ್ಟುಕೊಳ್ಳುವುದು ಇವರಲ್ಲಿ ತೀರಾ ಅಪರೂಪ ಎಂದೇ ಹೇಳಬೇಕಾಗುತ್ತದೆ. ಕಾಡುಗೊಲ್ಲರ ಪಾರಂಪರಿಕ ವಸ್ತುಗಳನ್ನು ಇಂದು ಕಾಣುವುದಿಲ್ಲ. ಆಧುನಿಕತೆಯ ಪ್ರಭಾವದಿಂದಾಗಿ ಯುವಕರು ಪ್ಯಾಂಟು, ಶರ್ಟ್, ಟೀ ಶರ್ಟ್ ಮುಂತಾದವುಗಳನ್ನು ಧರಿಸುತ್ತಾರೆ. ಕಂಬಳಿ ಯುವಕರಿಂದ ದೂರವಾಗಿದೆ. ಮನೆಯಲ್ಲಿ ಮಲಗಲು ಮತ್ತು ಹಾಸಲು ಮಾತ್ರ ಕಂಬಳಿಯನ್ನು ಉಪಯೋಗಿಸುತ್ತಿದ್ದಾರೆ. ಮದುವೆ ಸಂದರ್ಭದಲ್ಲಿ ಗಂಡಸರಿಗೆ ವಿಶೇಷವಾದ ಬಟ್ಟೆಗಳನ್ನು ತೊಡಿಸುವುದು ಕಂಡುಬರುವುದಿಲ್ಲ. ಮದುವೆ ಸಂದರ್ಭದಲ್ಲಿ ಮುಂಗೈ ಉದ್ದ ಬಲಗೈ ತೋಳಿಗೆ ಬಟ್ಟಿನ ಸಲಿಗೆ, ಕಿವಿಗಳಿಗೆ ಪಾಟಲಾಕು, ಬಲಗಿವಿಗೆ ಅರೆಮುರು, ಎಡಗಿವಿಗೆ ಸಿಂದ ಮುರುವು, ಕೊರಳಿಗೆ ಚೈನು, ಹೆಗಲಿಗೆ ಕರಿಕಂಬಳಿ, ಸೊಂಟಕ್ಕೆ ಕಂಚಿದಟ್ಟಿ, ತಲೆಗೆ ರುಮಾಲು, ಕಾಲಿಗೆ ಮೆಟ್ಟು, ಅಡಿಕೆ ಚೀಲ, ಕೊಡುವ ಸಂಪ್ರದಾಯವಿದೆ. ಇತ್ತೀಚೆಗೆ ಮದುವೆ ಸಂದರ್ಭದಲ್ಲಿ ಪ್ಯಾಂಟ್, ಶರ್ಟ್ ಕೊಡುತ್ತಿದ್ದಾರೆ. ಶೈಕ್ಷಣಿಕವಾಗಿ ಆರ್ಥಿಕವಾಗಿ ಮುಂದುವರೆದಂತೆಲ್ಲ ಅವರ ವೇಷಭೂಷಣಗಳಲ್ಲಿ ಮಾರ್ಪಾಡುಗಳಾಗುತ್ತಿವೆ.

೪.೧೦.೨ ಸ್ತ್ರೀಯರು

ಕಾಡುಗೊಲ್ಲರ ಮಹಿಳೆಯರ ಉಡುಗೆ ತೊಡುಗೆಗಳು ಸರಳವಾಗಿವೆ. ಪಶುಪಾಲನೆಯ ವೃತ್ತಿಗೆ ಅನುಕೂಲವಾಗುವ ದೃಷ್ಟಿಯನ್ನಿಟ್ಟುಕೊಂಡು ಇವರ ಉಡುಗೆ ತೊಡುಗೆಗಳನ್ನು ಧರಿಸಿಕೊಂಡಿರುತ್ತಾರೆ.

[illegible]

ಕಾಡುಗೊಲ್ಲರ ಸಂಪ್ರದಾಯಸ್ಥ ಮಹಿಳೆಯರು ಕುಬ್ಬಸವನ್ನು ತೊಡುವುದಿಲ್ಲ. ಇವರ ಕುಬ್ಬಸವನ್ನು ಶ್ರೀಕೃಷ್ಣನು ಅಪಹರಿಸಿದ್ದಾನೆಂಬ ಕಾರಣಕ್ಕಾಗಿ ಅವರು ಅದನ್ನು ಧರಿಸುತ್ತಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಕೆಂಪು ಪಟ್ಟೆಯ ಬಿಳಿಯ ಸೀರೆಯನ್ನು ಈ ಸಮುದಾಯದ ಮಹಿಳೆಯರು ಉಡುವುದಿಲ್ಲ. ಕೆಂಪು, ಕಪ್ಪು, ಹಸಿರು ಬಣ್ಣದ ಸೀರೆಗಳನ್ನು ಇವರು ಹೆಚ್ಚಾಗಿ ಇಷ್ಟಪಟ್ಟು ಧರಿಸುತ್ತಾರೆ.

ಆಧುನಿಕತೆಯ ಪ್ರಭಾವದಿಂದ ನಗರಗಳಲ್ಲಿ ಸಿಗುವ ಆಧುನಿಕ ಮಾದರಿಯ ಸೀರೆ ರವಿಕೆಗಳನ್ನು ತೊಡುತ್ತಿರುವುದನ್ನು ಇತ್ತೀಚೆಗೆ ಬೆಳೆಸಿಕೊಂಡಿದ್ದಾರೆ. ಯುವತಿಯರು ಚೂಡಿದರದಂತಹ ಬಟ್ಟೆಗಳನ್ನು ತೊಡುತ್ತಿದ್ದಾರೆ. ಮದುವೆ ಹೆಣ್ಣಿಗೆ ಗೆಜ್ಜೆಪಟ್ಟಿ, ಸುತ್ತುಂಗರ, ಮಿಂಚು, ಸಿಲ್ಲಿ ಬೇಸರಿ ಮೊದಲಾದ ಆಭರಣಗಳನ್ನು ಹಾಕುತ್ತಿದ್ದರು. ಇಂದು ನಕ್ಲೇಸ್, ಚೈನ್, ಕಾಲುಚೈನ ಮುಂತಾದ ಆಧುನಿಕ ಆಭರಣಗಳನ್ನು ಮದುವೆಗಳಲ್ಲಿ ಹಾಕುತ್ತಾರೆ. ಇದು ಅವರವರ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ.

೪.೧೧ ಬೆಡಗುಗಳು

ಬೆಡಗುಗಳು ಸಾಮಾಜಿಕ ಕುಟುಂಬದಲ್ಲಿ ಸಂಕೀರ್ಣವಾದವುಗಳಾಗಿವೆ. ನಾಗರಿಕ ಸಂಸ್ಕೃತಿಯ ವಿಕಾಸದ ಚಾರಿತ್ರಿಕ ಹೆಜ್ಜೆ ಗುರುತುಗಳೇ ಈ ಬೆಡಗುಗಳು. ಇವುಗಳನ್ನು ಕುಲ, ಗೋತ್ರ, ಪಂಥ ಮತ್ತು ವಂಶ ಎಂದು ಕರೆಯುವರು. ಪ್ರಾಚೀನ ಕಾಲದಿಂದಲೂ ಮಾನವ ಆಚಾರ-ವಿಚಾರ, ನಂಬಿಕೆ-ನಿಷೇಧ, ವಿಧಿ-ವಿಧಾನಗಳು ಅನುಸರಿಸುತ್ತಾ ಬಂದಿದ್ದಾನೆ. ಪ್ರತಿಯೊಂದು ಕುಟುಂಬದ ಚರಿತ್ರೆಯನ್ನು ಬೆಡಗುಗಳ ಮೂಲಕ ತಿಳಿದುಕೊಳ್ಳಬಹುದು. ಬುಡಕಟ್ಟು ಸಮುದಾಯಗಳು ರಕ್ತ ಸಂಬಂಧವನ್ನು ಏರ್ಪಡಿಸಿಕೊಳ್ಳಬೇಕೆಂದರೆ ಬೆಡಗುಗಳು ಗೋತ್ರಗಳು ಮುಖ್ಯವಾಗಿರುತ್ತವೆ. ಕಾಡುಗೊಲ್ಲರು ಇವುಗಳನ್ನು ಬೆಡಗುಗಳೆಂದು ಕರೆಯುತ್ತಾರೆ. ಒಂದು ಬೆಡಗಿನ ಆಧಾರದ ಮೇಲೆ ಆ ಮನೆತನದ ವೃತ್ತಿ, ದೇವರು, ಸಂಸ್ಕೃತಿ, ಮೂಲ ಪುರುಷನ ಇತಿಹಾಸ, ಆಚಾರ-ವಿಚಾರ, ವಿಧಿ-ನಿಷೇಧಗಳನ್ನು ತಿಳಿದುಕೊಳ್ಳಬಹುದು. ಕಾಡುಗೊಲ್ಲರು ವೈವಾಹಿಕ ಸಂಬಂಧಗಳನ್ನು ಬೆಳೆಸುವಾಗ ಬೆಡಗುಗಳ ಬಗ್ಗೆ ಕಟ್ಟುನಿಟ್ಟಿನಿಂದಿರುತ್ತಾರೆ. ಬೆಡಗಿಗೆ ಸಮಾನವಾಗಿ ಕುಲಗೊತ್ರಗಳೆಂದೂ ಕಾಡುಗೊಲ್ಲರು ಕರೆಯುವುದುಂಟು. ಕಾಡುಗೊಲ್ಲರಲ್ಲಿ ಚಿತ್ತಮುತ್ತಿ, ಚಂದಮುತ್ತಿ ಹಾಗೂ ರಾಮೇಗೌಡನ ಕುಲ ಬಹುಮುಖ್ಯವಾದವುಗಳಾಗಿವೆ. ಈ ಕುಲಗಳಲ್ಲಿ ಬೇರೆ ಬೇರೆ ಪಂಗಡಗಳಿವೆ. ಚಿತ್ತಮುತ್ತಿ ಕುಲದಲ್ಲಿ ಕರಡಿಗೊಲ್ಲರು ಪ್ರಮುಖರು. ಚಂದಮುತ್ತಿ ಕುಲದಲ್ಲಿ ಸನ್ನರು, ಅಜ್ಜಿಯವರು, ಸೋಮನವರು, ಯಗಟಿನವರು, ಅರೇನರು, ಮಾಸಿನವರು, ಬೇರನವರು, ಕಂಬೇರ ಗೊಲ್ಲರು, ಕಹಳೆಯವರು, ಒಡೆಯವರು, ಒನಕೆಯವರು, ಮಾಸಿನವರು, ಬೇರನವರು, ಬೆಳ್ಳೂರಿನವರು ಎಂಬ ಅನೇಕ ಪಂಗಡಗಳಿವೆ. ಇಲ್ಲಿ ಒಂದೆ ಕುಲದ ಉಪಪಂಗಡಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುವುದು ನಿಷೇಧ. ಉದಾಹರಣೆಗೆ ಚಂದಮತ್ತಿ ಕುಲದ ಎಲ್ಲ ಉಪಪಂಗಡದವರು ಚಿತ್ತಮುತ್ತಿ ಕಾಲದ ಎಲ್ಲ ಉಪಪಂಗಡದವರ ಜೊತೆಗೆ ವೈವಾಹಿಕ ಸಂಬಂಧ ಬೆಳೆಸಬಹುದು. ಆದರೆ ಚಿತ್ತಮುತ್ತಿ ಕುಲದ ಉಪಪಂಗಡಳಲ್ಲಿಯೆ ವೈವಾಹಿಕ ಸಂಬಂಧ ಏರ್ಪಡಿಸಿಕೊಂಡರೆ ಇದನ್ನು ಕಾಡುಗೊಲ್ಲರು ವಿರೋಧಿಸುತ್ತಾರೆ.

ಚಿತ್ತಮುತ್ತಿ ಕುಲದವರು ಸೂರ್ಯನ ವಂಶಸ್ಥರೆಂದೂ, ಚಂದಮುತ್ತಿ ಕುಲದವರು ಚಂದ್ರನ ವಂಶಸ್ಥರೆಂದು ಹೇಳಿಕೊಳ್ಳುವರು. ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯದ ತೌಲನಿಕ ಅಧ್ಯಯನ ಮಾಡಿದ ಸಣ್ಣೆಕೇರಿ ಸಣ್ಣೋಬಯ್ಯ ಅವರು ಒಟ್ಟು ಕಾಡುಗೊಲ್ಲರಲ್ಲಿ ೭೩ ಬೆಡಗುಗಳಿವೆ ಎಂದು ಗುರುತಿಸಿದ್ದಾರೆ.

ಕಾಡುಗೊಲ್ಲರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ ಒಂದೆ ಬೆಡಗಿನವರ ಜೊತೆಗೆ ವೈವಾಹಿಕ ಸಂಬಂಧಗಳನ್ನು ಮಾತ್ರ ಬೆಳೆಸುವುದಿಲ್ಲ. ರಕ್ತಸಂಬಂಧಿಗಳ ಜೊತೆ ವೈವಾಹಿಕ ಸಂಬಂಧ ಗಳನ್ನು ಬೆಳೆಸಿದರೆ ತಮ್ಮ ಆರಾಧ್ಯದೈವಗಳು ಅನೇಕ ತೊಂದರೆಗಳನ್ನು ಕೊಡುತ್ತವೆ ಎಂಬ ಬಲವಾದ ನಂಬಿಕೆ ಇದೆ.

೪.೧೨ ನ್ಯಾಯ ಪದ್ಧತಿ

ಕಾಡುಗೊಲ್ಲರ ಜೀವನ, ವಿಧಿವಿಧಾನಗಳಿಗೆ ಸಂಬಂಧಿಸಿದಂತೆ ಅವರ ಸಾಮಾಜಿಕ ಸಂರಚನೆಯಲ್ಲಿ ಅವರು ಅನುಸರಿಸಬೇಕಾದ ಕುಲದ ಕಟ್ಟಳೆ ಮತ್ತು ನ್ಯಾಯ ಪದ್ಧತಿ ಅಡಕವಾಗಿರುತ್ತದೆ. ಸಮುದಾಯದ ಜನರ ವರ್ತನೆಗಳನ್ನು ಹದ್ದುಬಸ್ತಿನಲ್ಲಿಡಲು, ನಿಯಂತ್ರಿಸಲು ಮತ್ತು ಅವರ ವರ್ತನೆಗಳ ಮೇಲೆ ಕಡಿವಾಣ ಹಾಕಲು ನ್ಯಾಯಪಂಚಾಯತಿ ಪ್ರಮುಖ ಕಾರ್ಯ ನಿರ್ವಹಿಸುತ್ತದೆ. ಕಾಡುಗೊಲ್ಲರಲ್ಲಿಯ ನ್ಯಾಯ ಪಂಚಾಯತಿಯನ್ನು ಇತರೆ ಸಮುದಾಯಗಳಲ್ಲಿ ಕಾಣುವುದಿಲ್ಲ ಎಂದೆ ಹೇಳಬೇಕಾಗುತ್ತದೆ. ಕಾಡುಗೊಲ್ಲರಲ್ಲಿಯ ಎಲ್ಲ ವ್ಯಾಜ್ಯಗಳು ನ್ಯಾಯ ಪಂಚಾಯತಿಯಲ್ಲೆ ತೀರ್ಮಾನವಾಗಬೇಕೆಂಬ ಕಟ್ಟಳೆ ಇದೆ. ಕಾಡುಗೊಲ್ಲರು ನೋಡಲು ಒರಟಾಗಿ ಕಂಡರೂ ಬಹಳ ಮುಗ್ದರು. ನ್ಯಾಯ ಅನ್ಯಾಯಗಳ ಬಗ್ಗೆ ಅಂಜುತ್ತಾರೆ. ಕುಟುಂಬದ ಒಳಗಿನ ವ್ಯಾಜ್ಯಗಳನ್ನು ಎಂದು ಕೋರ್ಟ ಕಛೇರಿಗೆ ತೆಗೆದುಕೊಂಡು ಹೋಗಲು ಇಷ್ಟಪಡುವುದಿಲ್ಲ.

ಕಾಡುಗೊಲ್ಲರ ಪ್ರತಿಯೊಂದು ಹಟ್ಟಿಯಲ್ಲಿಯೂ ಸಮುದಾಯದ ಜನರ ನಿಯಂತ್ರಣಕ್ಕಾಗಿ ಒಂದು ನ್ಯಾಯ ಪಂಚಾಯತಿ ಇದ್ದೆ ಇರುತ್ತದೆ. ಇಲ್ಲಿ ಹಟ್ಟಿಯ ಯಜಮಾನ, ಗೌಡ ಅಥವಾ ಪಟೇಲ ನ್ಯಾಯ ಪಂಚಾಯಿತಿಯ ಮುಖ್ಯಸ್ಥನಾಗಿರುತ್ತಾನೆ. ಈ ಅಧಿಕಾರ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಹಟ್ಟಿಯಲ್ಲಿಯ ಎಲ್ಲ ತಂಟೆ ತಕರಾರುಗಳನ್ನು ಇವನೆ ಬಗೆಹರಿಸುತ್ತಾನೆ. ಹೆಣ್ಣುಮಕ್ಕಳಿಗೆ ಈ ಅವಕಾಶವಿಲ್ಲ. ಇಲ್ಲಿಯ ನ್ಯಾಯ ಪಂಚಾಯತಿ ಇದೊಂದು ಸಾಮಾಜಿಕ ಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತದೆ. ಪರಂಪರಾನುಗತವಾಗಿ ಬಂದ ಅಲಿಖಿತ ಶಾಸನದ ಮೂಲಕ ಕುಲದ ಭದ್ರತೆ ಹಾಗೂ ಅದರ ಯೋಗಕ್ಷೇಮದ ಜೊತೆಗೆ ಜನರ ಹಿತ ಕಾಪಾಡುತ್ತಿರುತ್ತದೆ. ಹೆಂಗಸರಿಗೆ ನ್ಯಾಯ ಪಂಚಾಯತಿ ಮುಖ್ಯಸ್ಥರ ಹುದ್ದೆಯನ್ನು ಈ ಸಮುದಾಯದಲ್ಲಿ ನೀಡುವ ಪದ್ಧತಿ ಇಲ್ಲ.

ನ್ಯಾಯ ಪಂಚಾಯತಿಯಲ್ಲಿ ಗೌಡ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸಿದರೆ ಪೂಜಾರಿಯದು ಅಷ್ಟೆ ಪ್ರಮುಖ ಪಾತ್ರವಿರುತ್ತದೆ. 'ದಳವಾಯಿ' ನ್ಯಾಯ ಪಂಚಾಯತಿಗೆ ಸಂಬಂಧಿಸಿದ ವಿಷಯವನ್ನು ಊರಲ್ಲಿ ಡಂಗುರ ಹಾಕಿ ಹೇಳುತ್ತಾನೆ.

ಕಾಡುಗೊಲ್ಲರ ನ್ಯಾಯ ಪಂಚಾಯತಿಯಲ್ಲಿ ಸಾಮಾನ್ಯವಾಗಿ ಅವರ ದೇವರಿಗೆ ಸಂಬಂಧಿಸಿದ ಜಾತ್ರೆ, ಹಬ್ಬ, ಉತ್ಸವಗಳನ್ನು ಆಚರಿಸಲು, ಸಂಘಟನೆ ಮಾಡುವುದಕ್ಕಾಗಿ, ಹಣ ಸಂಗ್ರಹಕ್ಕಾಗಿ, ಮದುವೆ, ಋತುಮತಿ, ಸಾವು, ಮಡಿ, ಮೈಲಿಗೆ, ಸಣ್ಣ-ಪುಟ್ಟ ವ್ಯಾಜ್ಯಗಳನ್ನು ಬಗೆಹರಿಸುವುದಕ್ಕಾಗಿ ಸೇರುತ್ತಾರೆ. ಅನೈತಿಕ ಸಂಬಂಧ ಹಾಗೂ ಕುಲಾಚಾರದ ನಿಯಮಗಳನ್ನು ವಿರೋಧಿಸಿದವರಿಗೆ ಕಠಿಣ ಕ್ರಮಕೈಗೊಳ್ಳಲು ನ್ಯಾಯಪಂಚಾಯತಿ ನಡೆಯುತ್ತದೆ.

ಕಾಡುಗೊಲ್ಲರ ಸಣ್ಣಪುಟ್ಟ ಜಗಳಗಳನ್ನು ಗುಡಿಗಟ್ಟೆಗಳಲ್ಲಿ ಬಗೆಹರಿಸುವರು. ಜಟಿಲವಾದ ಸಮಸ್ಯೆಗಳಿದ್ದರೆ ಅವುಗಳನ್ನು 'ಕಟ್ಟೆಮನೆ'ಗಳಲ್ಲಿ ನಿರ್ಣಯಿಸುತ್ತಾರೆ. ಯಾವುದೇ ಕಾರಣಕ್ಕೂ ಕೋರ್ಟು ಕಛೇರಿ ಕಟ್ಟೆ ಹತ್ತಲು ಈ ಸಮುದಾಯದ ಹಿರಿಯರು ಬಿಡುವುದಿಲ್ಲ.

ಗಂಡ-ಹೆಂಡಿರ ಮನಸ್ತಾಪ, ಅಂತರ್‌ಜಾತಿ ವಿವಾಹ, ಕೋಳಿ ತಿಂದರೆ, ಮಚ್ಚಿನಿಂದ ಹೊಡೆದರೆ ಅಥವಾ ಹೊಡೆಸಿಕೊಂಡರೆ, ಅನೈತಿಕ ಸಂಬಂಧ ಹೊಂದಿದ್ದರೆ, ಶುಭಕಾರ್ಯದಲ್ಲಿ ಕುಲಸ್ಥರಿಗೆ ಊಟ ಹಾಕದಿದ್ದರೆ, ದೇವರಿಗೆ ಕಾಸು ಮೀಸಲು ಕೊಡದಿದ್ದರೆ, ಸೋಮವಾರ ಎತ್ತನ್ನು ಹೂಡಿದರೆ, ಸ್ವಗೋತ್ರದಲ್ಲಿ ವಿವಾಹವಾದರೆ, ಹರಿಜನರ ಮನೆಯಲ್ಲಿ ಊಟ ಮಾಡಿದರೆ, ಹಟ್ಟಿಯ ಯಜಮಾನ ಅಥವಾ ಪೂಜಾರಿಗೆ ಅವಮಾನ ಮಾಡಿದರೆ ಮತ್ತು ಕಾಡುಗೊಲ್ಲರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಅವಮಾನ ಎಸಗುವಂತಹ ಕಾರ್ಯ ಮಾಡಿದರೆ ಅವುಗಳನ್ನೆಲ್ಲಾ ಕಟ್ಟೆಮನೆ ಅಥವಾ ಗುಡಿಕಟ್ಟೆಗಳಲ್ಲಿ ಬಗೆಹರಿಸುತ್ತಾರೆ.

ಕಾಡುಗೊಲ್ಲರು ತಪ್ಪಿತಸ್ಥರಿಗೆ ಕೊಡುವ ಉಗ್ರವಾದ ಶಿಕ್ಷೆ ಎಂದರೆ ಕುಲದಿಂದ ಮತ್ತು ಹಟ್ಟಿಯಿಂದ ಬಹಿಷ್ಕಾರ ಹಾಕುವುದು. ಸಣ್ಣಪುಟ್ಟ ತಪ್ಪುಗಳಿಗೆ ದಂಡ ಹಾಕುವುದನ್ನು ಕಾಣುತ್ತೇವೆ. ಕಟ್ಟೆಮನೆ ಅಥವಾ ಗುಡಿಕಟ್ಟೆ ಯಜಮಾನ ನಿಷ್ಪಕ್ಷಪಾತನಾಗಿರುತ್ತಾನೆ.

೪.೧೨.೧ ಗುಡಿಕಟ್ಟೆ

ಸಾಮಾನ್ಯವಾಗಿ ಗುಡಿಕಟ್ಟೆಗಳು ಹಟ್ಟಿಯಲ್ಲಿಯೆ ಇರುತ್ತವೆ. ಈ ನ್ಯಾಯ ಪಂಚಾಯಿತಿ ದೇವಸ್ಥಾನದ ಎದುರಿಗೆ ನಡೆಯುತ್ತದೆ. ಹಟ್ಟಿಯ ಆಗು ಹೋಗುಗಳನ್ನೆಲ್ಲ ಇಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ. ಜಾತ್ರೆ, ಉತ್ಸವ, ಹಬ್ಬಗಳ, ನಿರ್ವಹಣೆ, ಖರ್ಚುವೆಚ್ಚದ ಚರ್ಚೆ ಇಲ್ಲಿ ನಡೆಯುತ್ತದೆ. ಸ್ತ್ರೀಯೊಬ್ಬಳ ಮೇಲೆ ವ್ಯಭಿಚಾರ ನಡೆದರೆ, ಸ್ತ್ರೀಯಳೆ ವ್ಯಭಿಚಾರ ನಡೆಸಿದರೆ, ಕುಲಸ್ಥರ ನಡುವೆ ಜಗಳವಾದರೆ, ಗಂಡ ಹೆಂಡತಿಯ ಜಗಳ ಮನೆಯಲ್ಲಿ ಬಗೆ ಹರಿಯದಿದ್ದರೆ, ಗುಡಿಕಟ್ಟೆಯಲ್ಲಿ ಯಜಮಾನ, ಗೌಡ, ಪೂಜಾರಿ, ಹಾಗೂ ದೈವದವರು ಸೇರಿ ತೀರ್ಪುಗಳನ್ನು ನೀಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತಾರೆ.

ಶಿಕ್ಷೆಯ ಸ್ವರೂಪಗಳು

೧. ಅಪರಾಧಿಯಿಂದ ಎಲೆ, ಅಡಿಕೆ ಅಥವಾ ದಂಡದ ರೂಪದಲ್ಲಿ ಹಣ ಪಡೆದುಕೊಳ್ಳುವುದು.

೨. ದೇವರ ಗುಡಿಯ ದೀಪಕ್ಕೆ ಎಣ್ಣೆ ಹಾಕಿಸುವುದು.

೩. ಬೇವಿನ ಕಡ್ಡಿಯಿಂದ ನಾಲಿಗೆ ಸುಡುವುದು.

೪. ದೇವರ ಎತ್ತುಗಳಾದ ಕಿಲಾರಿಗಳ ರೂಪದಲ್ಲಿ ತೀರ್ಥ ಹಾಕಿ ಶುದ್ಧಗೊಳಿಸುವುದು.

೫. ಊರಿನಿಂದ ಬಹಿಷ್ಕಾರ ಹಾಕುವುದು.

೬. ಬೆಂಕಿ ನೀರು ಕೊಡದೆ ಊರಲ್ಲಿ ಬಹಿಷ್ಕಾರ ಹಾಕುವುದು.

ಗುಡಿಕಟ್ಟೆಯಲ್ಲಿಯೆ ಮುಗಿಯಬೇಕಾದ ಸಣ್ಣ ಸಮಸ್ಯೆಗಳು ಕೆಲ ಸಂದರ್ಭದಲ್ಲಿ ದೊಡ್ಡದಾಗಿ ಬೆಳೆದರೆ ಅದನ್ನು ಕಟ್ಟೆಮನೆಗೆ ವರ್ಗಾಯಿಸುತ್ತಾರೆ.

೪.೧೨.೨ ಕಟ್ಟೆಮನೆಗಳು

ಕಾಡುಗೊಲ್ಲರಲ್ಲಿ ಒಟ್ಟು ಐದು ಕಟ್ಟೆಮನೆಗಳಿವೆ.

೧. ಕ್ಯಾತಲಿಂಗೇಶ್ವರ, ಚನ್ನವ್ವ ನಾಗತಿಹಳ್ಳಿ, ಚಳ್ಳಕೆರೆ ತಾಲ್ಲೂಕು.

೨. ಕಾಟಮಲಿಂಗೇಶ್ವರ, ಇಕ್ಕನೂರು, ಹಿರಿಯೂರು ತಾಲ್ಲೂಕು.

೩. ಚಿತ್ರಲಿಂಗೇಶ್ವರ, ಚಿತ್ರಹಳ್ಳಿ, ಹೊಳಲ್ಕೆರೆ ತಾಲ್ಲೂಕು.

೪. ರಾಮಲಿಂಗೇಶ್ವರ, ರಾಮನಹಳ್ಳಿ, ಚಿತ್ರದುರ್ಗ ತಾಲ್ಲೂಕು.

೫. ಪಾತೇಲಿಂಗೇಶ್ವರ, ಕೂಡಲಹಳ್ಳಿ, ಹಿರಿಯೂರು ತಾಲ್ಲೂಕು.

ಈ ಕಟ್ಟೆಮನೆಗಳು ಸಾಮಾನ್ಯವಾಗಿ ಎಲ್ಲ ತರಹದ ವ್ಯಾಜ್ಯಗಳನ್ನು ಬಗೆಹರಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ.

ಕಾಡುಗೊಲ್ಲರ ನ್ಯಾಯ ಪಂಚಾಯಿತಿ ಪ್ರಬಲವಾಗಿದ್ದರೂ ಇಂದು ನಗರಗಳಿಂದ ಸ್ವಲ್ಪ ದೂರದಲ್ಲಿರುವ ಹಟ್ಟಿಗಳಲ್ಲಿಯ ವ್ಯಾಜ್ಯಗಳು ಕೋರ್ಟು ಕಛೇರಿಯನ್ನು ಹತ್ತಿರುವ ಬಗ್ಗೆ ತಿಳಿಯುತ್ತದೆ. ಅಂದರೆ ಕಾಡುಗೊಲ್ಲರಲ್ಲಿಯ ನ್ಯಾಯ ಪಂಚಾಯತಿ ಸಡಿಲಗೊಳ್ಳುತ್ತಿದೆ ಎಂದು ಅರ್ಥವಾಗುತ್ತದೆ.

೪.೧೩ ರಾಜಕೀಯ ವ್ಯವಸ್ಥೆ

ಸಂಘಟನೆ ಕೊರತೆಯಿರುವ ಕಾಡುಗೊಲ್ಲರು ಅಲೆಮಾರಿಗಳಾಗಿ ಜೀವನ ನಡೆಸುತ್ತಿದ್ದವರಿಗೆ ರಾಜಕೀಯ ಎಂದರೇನು? ಸರ್ಕಾರ ಎಂದರೇನು? ಆಡಳಿತ ಎಂದರೇನು? ತಮಗೆ ಯಾವ ಹಕ್ಕುಗಳಿವೆ? ಮತದಾನ ಎಂದರೇನು? ಓಟಿನ ಮಹತ್ವವನ್ನು ತಿಳಿಯದ ಸ್ಥಿತಿಯಲ್ಲಿ ಅನೇಕ ಕಾಡುಗೊಲ್ಲರಿದ್ದಾರೆ. ಕಾಡುಗೊಲ್ಲರು ಕೇವಲ ಕುರಿಗಳನ್ನು ಸಾಕುತ್ತಾ, ಊರಿನಿಂದ ಊರುಗಳಿಗೆ ಅಲೆಯುತ್ತಾ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡು ಜೀವನ ಮಾಡುತ್ತಿದ್ದವರು. ಕುರಿಗಳನ್ನು ದನಗಳನ್ನು ಸಾಕುವುದು, ಸೊಪ್ಪುತರುವುದು, ನಾಯಿಗಳಿಗೆ ಆಹಾರ ಹಾಕುವುದು, ಕುರಿಗಳನ್ನು ಅತ್ಯಂತ ಜವಾಬ್ದಾರಿಯಿಂದ ಕಾಯುವುದು ಇವರ ಮುಖ್ಯವಾದ ಕೆಲಸ. ತಮ್ಮದೇ ಆದ ಹಟ್ಟಿಗಳನ್ನು ಕಟ್ಟಿಕೊಂಡು ಜೀವನ ನಡೆಸುವವರಿಗೆ ರಾಜಕೀಯ

ಬೇಡವಾಗಿದೆ. ಆದರೂ ಕೂಡ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಅನೇಕ ಸಂಘಟಿತ ಪ್ರಯತ್ನಗಳು ನಡೆದಿವೆ. "ರಾಜ್ಯದಲ್ಲಿ ೧೯೯೨ಕ್ಕೆ ಮೊದಲು ಗೊಲ್ಲ ಜನಾಂಗವು ಸೇರಿದಂತೆ ಎಲ್ಲಾ ಹಿಂದುಳಿದ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಯಾವುದೇ ಮೀಸಲಾತಿ ಇರಲಿಲ್ಲ. ಆದರೆ ೧೯೯೨ರಲ್ಲಿ ಸಂವಿಧಾನಕ್ಕೆ ೭೩ನೇ ತಿದ್ದುಪಡಿ ತಂದು ಪಂಚಾಯತ ರಾಜ್ಯವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಯನ್ನು ಮಾಡಲಾಯಿತು. ಇದರ ಪರಿಣಾಮವಾಗಿ ರಾಜ್ಯದಲ್ಲಿಯೂ ೧೯೯೩ರಲ್ಲಿ ಸಂಪೂರ್ಣವಾಗಿ ಹೊಸ ಪಂಚಾಯುತ ರಾಜ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಯಿತು. ಈ ಐತಿಹಾಸಿಕ ಮಹತ್ವದ ಮುಖ್ಯವಾದಂತಹ ಪರಿಣಾಮವೇನೆಂದರೆ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಪ್ರಥಮ ಬಾರಿಗೆ ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ, ಬುಡಕಟ್ಟು ಹಾಗೂ ಹಿಂದುಳಿದ ವರ್ಗಗಳಿಗೆ ಮೂರನೆಯ ಒಂದರಷ್ಟು ಮೀಸಲಾತಿಯನ್ನು ಕಲ್ಪಿಸಿದುದು. ೧೯೯೪ರಲ್ಲಿ ರಾಜ್ಯ ಸರ್ಕಾರ ರಾಜ್ಯದ ಎಲ್ಲ ಹಿಂದುಳಿದ ಸಮುದಾಯಗಳನ್ನು ಎರಡು ಗುಂಪುಗಳಾಗಿ ಅಂದರೆ ಅತ್ಯಂತ ಹಿಂದುಳಿದ ಜಾತಿಗಳನ್ನು 'ಎ' ಗುಂಪಿಗೆ ಮತ್ತು ಹಿಂದುಳಿದ ಜಾತಿಗಳನ್ನು 'ಬಿ' ಗುಂಪಿಗೆ ಸೇರಿಸಿ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿಯನ್ನು ಒದಗಿಸಿತು. ಸಹಜವಾಗಿಯೇ ಗೊಲ್ಲ ಜನಾಂಗವು 'ಎ' ಗುಂಪಿನಡಿಯಲ್ಲಿ ರಾಜಕೀಯ ಮೀಸಲಾತಿಯನ್ನು ಪಡೆಯಿತು. ಇದರಿಂದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ನಗರ ಸಭೆ, ಪುರಸಭೆ, ನಗರಪಾಲಿಕೆ, ಮಹಾನಗರಪಾಲಿಕೆ, ಪಟ್ಟಣ ಪಂಚಾಯ್ತಿಗಳಲ್ಲಿ ಸ್ಪರ್ದಿಸುವಂತೆ ಮಾಡಿತು".[೬]

ಕಾಡುಗೊಲ್ಲರಿಗೆ ಮೀಸಲಾತಿ ಕೊಟ್ಟರೂ ರಾಜಕೀಯದಿಂದ ದೂರ ಉಳಿದಿದ್ದಾರೆ. ಕುರಿಗಳನ್ನು ಕಾಯುತ್ತಾ, ವ್ಯವಸಾಯವನ್ನು ಮಾಡುತ್ತಾ ಜೀವನ ಕಳೆಯುತ್ತಿದ್ದಾರೆ. ಓಟು ಹಾಕೋಣ ಬಾ ಎಂದು ಕರೆದರೆ "ಓಟು ಹಾಕಿದರೆ ನನಗೇನು ಕೂಲಿ ಮಾಡುವುದು ತಪ್ಪುತ್ತಾ?" ಎನ್ನುವ ಪ್ರವೃತ್ತಿ ಕಾಡುಗೊಲ್ಲರಲ್ಲಿದೆ. ಎಷ್ಟೋ ವರ್ಷಗಳವರೆಗೆ ಕಾಡುಗೊಲ್ಲರಿಗೆ ಮತದಾನದ ಹಕ್ಕು ಕೂಡ ಸಿಕ್ಕಿರಲಿಲ್ಲ. ಇತ್ತೀಚೆಗೆ ರಾಜ್ಯ ಮಟ್ಟದ ಗೊಲ್ಲ ಸಮುದಾಯದ ಸಮಾವೇಶಗಳು ನಡೆದ ಮೇಲೆ ರಾಜಕೀಯವಾಗಿ ಪ್ರಾತಿನಿಧ್ಯಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಸಮಾವೇಶಗಳಲ್ಲಿ ಊರುಗೊಲ್ಲರು ಹಾಗೂ ಕಾಡುಗೊಲ್ಲರು ಭಾಗವಹಿಸುತ್ತಿದ್ದುದರಿಂದ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮುಂದುವರೆದ ಊರುಗೊಲ್ಲರೆ ರಾಜಕೀಯವಾದ ಲಾಭ ಪಡೆದುಕೊಳ್ಳುತ್ತಿದ್ದಾರೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಕಾಡುಗೊಲ್ಲರು ಹೆಚ್ಚಿನ ಪ್ರಮಾಣದಲ್ಲಿ ವಾಸಿಸುತ್ತಿರುವ ಪ್ರದೇಶಗಲ್ಲಿ ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳ ಚುನಾವಣೆಗಳಲ್ಲಿ ಕಾಡುಗೊಲ್ಲರು ಭಾಗವಹಿಸಲು ಅವಕಾಶಗಳು ಸಿಗುತ್ತಿವೆ.

ಶೈಕ್ಷಣಿಕವಾಗಿ ಮುಂದುವರೆದು ಸರ್ಕಾರಿ ಹಾಗೂ ಸಂಘುಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕಾಡುಗೊಲ್ಲರು ರಾಜಕೀಯ ಪ್ರವೇಶಿಸಿ ತಮ್ಮ ಅಸ್ಥಿತ್ವಗಳನ್ನು ಬಲಪಡಿಸಿಕೊಳ್ಳಲು ಹೋರಾಡುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ರಾಜಕೀಯ ಪ್ರವೇಶದಿಂದಲೆ ನಮ್ಮ ಅಭಿವೃದ್ಧಿ ಸಾಧ್ಯವೆಂದು ತಿಳಿದುಕೊಂಡ ಅನೇಕ ಅಕ್ಷರಸ್ಥ ಕಾಡುಗೊಲ್ಲರು ಸಣ್ಣಪುಟ್ಟ ರಾಜಕಾರಣ ಮಾಡುತ್ತಾ ಸಮುದಾಯದ ಕಣ್ಣು ತೆರೆಸುತ್ತಿದ್ದಾರೆ.

[illegible]

ನಾನು ಅಧ್ಯಯನ ಕೈಗೊಂಡ ಗೊಲ್ಲರ ಹಟ್ಟಿಗಳಲ್ಲಿ ಹಿರಿಯರನ್ನು ಪ್ರಶ್ನಿಸಿದಾಗ ಅವರಲ್ಲಿ ರಾಜಕೀಯದ ಆಸಕ್ತಿ, ಅಭಿರುಚಿ ಇಲ್ಲದಿರುವುದು ಕಂಡುಬಂದಿತು. ರಾಜಕೀಯ ಕ್ಷೇತ್ರದಲ್ಲಿ ಪ್ರವೇಶ ಮಾಡಿ ಮಾನ, ಮಾರ್ಯದೆ ಕಳೆದುಕೊಂಡು ಬದುಕುವುದಕ್ಕಿಂತ ಚೆನ್ನಾಗಿ ದುಡಿದು ಮಕ್ಕಳಿಗೆ ಶಿಕ್ಷಣ ನೀಡಿ ಅವರನ್ನು ಸುಶೀಕ್ಷಿತರನ್ನಾಗಿ ಮಾಡಿದರೆ ಅದಕ್ಕಿಂತ ದೊಡ್ಡದು ಯಾವುದೂ ಇಲ್ಲವೆಂಬ ಅಭಿಪ್ರಾಯಗಳು ಅವರಿಂದ ವ್ಯಕ್ತವಾಗುತ್ತವೆ.

೪.೧೪ ವೈದ್ಯಪದ್ಧತಿ

ವೈದ್ಯ ವಿದ್ಯೆ ಆದಿವಾಸಿ ಸಮುದಾಯಗಳು ಧಾನಸ್ಥ ಸ್ಥಿತಿಯಲ್ಲಿದ್ದಾಗ ರೂಪಗೊಂಡ ಪಾರಂಪರಿಕ ಜ್ಞಾನ ಅದರ ವೈವಿಧ್ಯಗಳು ಜೀವಂತಿಕೆ, ಹಂತಹಂತವಾಗಿ ಬೆಳೆಯುತ್ತಾ ಬಂದಿದೆ. ಪರಂಪರಾನುಗತವಾಗಿ ಬೆಳೆಸಿಕೊಂಡು ಬಂದ ಆದಿವಾಸಿ ವೈದ್ಯ ವಿದ್ಯೆಯನ್ನು ಬೇರೆ ಬೇರೆ ನೆಲೆಗಳಲ್ಲಿ ನಿಂತು ಅಧ್ಯಯನ ಮಾಡುವ ಮತ್ತು ವಿಶ್ಲೇಷಿಸುವ ಅಗತ್ಯ ಇದೆ.

ವೈದ್ಯವಿದ್ಯೆ ಮಾನವನಷ್ಟೆ ಪ್ರಾಚೀನವಾದುದ್ದು ಮತ್ತು ಮಾನವನೊಂದಿಗೆ ಹುಟ್ಟಿ ಬಂದಿರುವಂತಹದ್ದು. ಈ ವೈದಕೀಯ ಜ್ಞಾನ ಮಾನವನ ಪ್ರಯತ್ನಗಳು ಬೆಳೆದಂತೆಲ್ಲಾ ಅದು ಬೆಳೆಯಿತು. ಈ ಪಾರಂಪರಿಕ ವೈದ್ಯಕೀಯ ಜ್ಞಾನ ಒಬ್ಬ ವ್ಯಕ್ತಿಯಿಂದಾಗಲಿ ಒಂದು ಸಮೂಹದಿಂದಾಗಲಿ ಬೆಳೆದು ಬಂದಿರುವಂತದ್ದಲ್ಲ. ಈ ಜ್ಞಾನಶಾಖೆಯ ಹಿಂದೆ ಹಲವಾರು ಆದಿವಾಸಿ ಸಮುದಾಯಗಳ ವಿಶಿಷ್ಟವಾದ ಅನುಭವಗಳು ಇವೆ. ಜಗತ್ತಿನ ವೈದ್ಯಕೀಯ ಪರಂಪರೆಗೆ ಆದಿವಾಸಿಗಳ ವೈದ್ಯಪದ್ಧತಿ ವಿಶೇಷವಾದ ಕೊಡುಗೆ ನೀಡಿದೆ. ವೈದ್ಯೆ ವಿದ್ಯೆ ಸಿಂಧೂ ಸಂಸ್ಕೃತಿ, ವೇದ ಸಂಸ್ಕೃತಿಗಳಲ್ಲಿ ರೂಪ ಪಡೆಯುವುದಕ್ಕಿಂತ ಮೊದಲೇ ಆದಿವಾಸಿ ಸಮುದಾಯಗಳಲ್ಲಿ ವೈದ್ಯಪದ್ಧತಿ ಇತ್ತು. ವೇದಕಾಲದಲ್ಲಿ ಆದಿವಾಸಿ ವೈದ್ಯ ಪದ್ಧತಿ ಹೊಸ ಹೊಸ ಪ್ರಯೋಗಗಳಿಗೆ ಒಳಪಟ್ಟು ಖಚಿತತೆ ಪಡೆದುಕೊಂಡು ಶರೀರ ವಿಜ್ಞಾನ, ಆರೋಗ್ಯದ ಕಲ್ಪನೆ ಕುರಿತು ಅನೇಕ ಅಧ್ಯಯನಗಳು ಪ್ರಾರಂಭವಾದವು. "ಆಯುರ್ವೇದ ವೈದ್ಯಪದ್ಧತಿ ಎನ್ನುವುದು ಭೂತ ಮತ್ತು ವರ್ತಮಾನಗಳ ಸಂಯೋಗದಿಂದ ನಿರಂತರ ವಿಕಾಸಶೀಲ ಪ್ರವೃತ್ತಿಯನ್ನು ರೂಪಿಸಿಕೊಂಡಿದೆ.ಈ ಕಾರಣಕ್ಕಾಗಿ ಇದಿಷ್ಟು ಆದಿವಾಸಿಗಳದ್ದು, ಇದಿಷ್ಟು ವೇದ ಕಾಲದ್ದು ಎಂದು ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ಆದಿವಾಸಿಗಳ ಪಾರಂಪರಿಕ ವೈದ್ಯ ವಿದ್ಯೆ ವೇದ ಕಾಲಕ್ಕೆ ನಿರಂತರ ಶೋಧಗಳಿಗೆ ಒಳಗಾಗಿ ಒಂದು ಚೌಕಟ್ಟನ್ನು ಮರುಹುಟ್ಟನ್ನು ಪಡೆದುಕೊಂಡಿತು. ಅನಾಗರಿಕ ಸಮುದಾಯ ಆದಿವಾಸಿಗಳ ಅತ್ಯುತ್ತಮ ಜ್ಞಾನ ಶಿಸ್ತುಗಳನ್ನು ತಮ್ಮವೆಂದು ದಕ್ಕಿಸಿಕೊಂಡ ಸಾಂಸ್ಕೃತಿಕ ಪ್ರಭುತ್ವವು ಸಾವಿರಾರು ವರ್ಷಗಳಿಂದ ಅಧಿಕಾರ ಕೇಂದ್ರವನ್ನು ಹಿಡಿದುಕೊಂಡೆ ಬಂದಿವೆ. ಶತಶತಮಾನಗಳಿಂದ ಒಂದು ಸಮುದಾಯದ ಅಂತರಂಗ ವನ್ನು ತೊರೆದ ಜ್ಞಾನಶಿಸ್ತು ಇದ್ದಕ್ಕಿದ್ದಂತೆ ನೆನಪಿಸಿ ಸ್ಥರಗಳ ಹಿಂದಕ್ಕೆ ಅಡಗಿ ಕೊರಬಲ್ಲದೆ ಪುರೋಹಿತಶಾಹಿ, ವಸಾಹತುಶಾಹಿ, ಆಧುನಿಕತೆ, ಜಾಗತೀಕರಣ, ವೈಜ್ಞಾನಿಕರಣ ಯಾವುದೇ ಆಗಲಿ ಅದು ಸಾವಿರಾರು

ವರ್ಷಗಳಿಂದ ಜೀವಂತವಾಗಿ ಬೆಳೆದುಕೊಂಡು ಬಂದಿರುವ ಜ್ಞಾನಶಿಸ್ತನ್ನು ನಾಶ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಆದಿವಾಸಿಗಳ ಮೇಲೆ ಎಷ್ಟೇ ಆಕ್ರಮಗಳು ನಡೆದರೂ ಅವು ತಮ್ಮ ಪಾರಂಪರಿಕ ಜ್ಞಾನದ ಹಿನ್ನಲೆಯಲ್ಲೇ ಬದುಕುತ್ತವೆ. ಆದಿವಾಸಿ ಪಾರಂಪರಿಕ ಜ್ಞಾನ ಜೀವಂತವಾಗಿರುತ್ತದೆ.

ಬ್ರಿಟಿಷರು ಭಾರತವನ್ನು ಜ್ಞಾನ ಜೀವಂತವಾಗಿರುತ್ತದೆ. ಭಾರತಕ್ಕೆ ಬಂದ ಕ್ರೈಸ್ತ ಮಿಶನರಿಗಳಲ್ಲಿ ಕೆಲವರು ಗಿರಿಜನ ನಾಡನ್ನು ಪ್ರವೇಶಿಸಿ, ಆದಿವಾಸಿಗಳ ವಿಶಿಷ್ಟವಾದ ಬದಕು ಕಂಡು ಅವರೊಂದಿಗೆ ಬದುಕಿ, ಆದಿವಾಸಿಗಳು ಬೆಳೆಸಿಕೊಂಡು ಬಂದಿದ್ದ ಪರಂಪರಾನುಗತವಾದ ಜ್ಞಾನಶಿಸ್ತುಗಳನ್ನು ಕುರಿತು ಅಧ್ಯಯನ ಮಾಡಿ ನಾಗರಿಕ ಲೋಕಕ್ಕೆ ಪರಿಚಯಿಸಿದರು. ಕ್ರೈಸ್ತಮಿಶನರಿಗಳು ಆದಿವಾಸಿಗಳನ್ನು ಮತಾಂತರ ಗೊಳಿಸುವ ಉದ್ದೇಶವನ್ನಿಟ್ಟುಕೊಂಡಿದ್ದರೂ, ಆದಿವಾಸಿಗಳ ಅನನ್ಯವಾದ ಬದಕನ್ನು ಕಂಡು ತಮ್ಮ ಉದ್ದೇಶವನ್ನು ಗೌಣಗೊಳಿಸಿ, ಅವರ ಬದುಕಿನ ಅಧ್ಯಯನ ಕೈಗೊಂಡಿರುವ ವಿಷಯ ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಪಾಶ್ಚಾತ್ಯ ವೈದ್ಯರು, ಆದಿವಾಸಿಗಳು ರೋಗ ನಿವಾರಣೆಗಾಗಿ ಬಳಿಸುತ್ತಿದ್ದ ಗಿಡಮೂಲಿಕೆಗಳ ಮೇಲೆ ಪ್ರಯೋಗ ನಡೆಸಿ ಮಲೇರಿಯಾ ರೋಗದಂತ ಮಾರಕ ರೋಗಗಳಿಗೆ ಔಷಧಿ ಕಂಡುಹಿಡಿದರು.

ಇಂದು ಜಗತ್ತಿನಾದ್ಯಂತ ಅನೇಕ ಭಯಂಕರ ರೋಗಗಳು ಹುಟ್ಟಿಕೊಳ್ಳುತ್ತಿದೆ. ಅವೆಲ್ಲ ಮನುಕುಲವನ್ನೆ ನಾಶಮಾಡಬಲ್ಲ ಶಕ್ತಿಯನ್ನು ಹೊಂದಿದೆ. ಆಧುನಿಕ ವೈದ್ಯಕೀಯ ಸಂಶೋಧನೆಗಳಿಂದ ಅವುಗಳನ್ನು ಬಹಳ ಎಚ್ಚರಿಕೆಯಿಂದ ನಿಯಂತ್ರಣದಲ್ಲಿಡಬಹುದೆ ವಿನಃ ಪೂರ್ಣ ಪ್ರಮಾಣದ ಪರಿಹಾರ ಕಂಡುಕೊಳ್ಳಲಾಗದು. ಜಗತ್ತಿನ ಅನೇಕ ವೈದ್ಯಕೀಯ ಸಂಶೋಧಕರು ಭಾರತ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಲ್ಲಿ ವಾಸವಾಗಿರುವ ಆದಿವಾಸಿಗಳ ವೈದ್ಯ ವಿಜ್ಞಾನ ಪರಂಪರೆಯನ್ನು ಅಧ್ಯಯನ ಮಾಡುತ್ತಿದ್ದಾರೆ. ನ್ಯಾಶನಲ್ ಜಿಯೋಗ್ರಫಿ ಮತ್ತು ಡಿಸ್ಕವರಿಯಂತಹ ಪ್ರಕಾರ ಮಾಧ್ಯಮಗಳನ್ನು ಗಮನಿಸಿದಾಗ, ಆದಿವಾಸಿಗಳ ಪಾರಂಪರಿಕ ಜ್ಞಾನ ಕುರಿತ ನಿರಂತರ ಅಧ್ಯಯನ ಸಂಶೋಧನೆ ಮಾಡುತ್ತಿರುವುದು ಕಂಡುಬರುತ್ತದೆ. ಇಂದು ನಾವು ಎದುರಿಸುತ್ತಿರುವ ಅನೇಕ ರೋಗಗಳಿಗೆ ಪರಿಹಾರ ಕಂಡುಕೊಳ್ಳಲು ಆದಿವಾಸಿಗಳ ಪಾರಂಪರಿಕ ಜ್ಞಾನದ ಕಡೆಗೆ ಗಮನಹರಿಸಬೇಕಾಗಿದೆ. ಹೀಗಾಗಿ ಆಧುನಿಕ ಜಗತ್ತು ಆದಿವಾಸಿಗಳನ್ನು ಅನಾಗರಿಕರು, ಅವೈಚಾರಿಕರು ಮೂರ್ಖರು ಎಂದೆ ಕರೆಯುತ್ತಿದ್ದದನ್ನು ಬಿಡಬೇಕಾಗಿದೆ ಮತ್ತು ನಮ್ಮ ಆದಿವಾಸಿ ಸಮುದಾಯಗಳಲ್ಲಿ ಆಳದಲ್ಲಿರುವ ಪಾರಂಪರಿಕ ವೈದ್ಯಕೀಯ ಜ್ಞಾನವನ್ನು ಅಧ್ಯಯನ ಮಾಡಲೇಬೇಕಾಗಿದೆ”.[೮]

ಕಾಡುಗೊಲ್ಲರಲ್ಲಿ ಅನೇಕ ತಜ್ಞ ವೈದ್ಯರಿದ್ದಾರೆ. ಮಾನವರಿಗೆ ತಗಲುವ ರೋಗಗಳಿಗೆ ಸೂಕ್ತವಾದ ಗಿಡಮೂಲಿಕೆಗಳನ್ನು ನೀಡುವ ಪರಿಣತಿಯನ್ನು ಅವರು ಪಡೆದುಕೊಂಡಿದ್ದಾರೆ. ಕಾಡುಗೊಲ್ಲರು ಒಂದು ಕಾಲಕ್ಕೆ ಆಸ್ಪತ್ರೆಗಳ ಬಳಿಯೂ ಸಹ ಸುಳಿದಾಡುತ್ತಿರಲಿಲ್ಲ. ತಮ್ಮದೇ ಆದ ಗಿಡಮೂಲಿಕೆಗಳನ್ನು ಬಳಸಿಕೊಂಡು ರೋಗಗಳನ್ನು ವಾಸಿ ಮಾಡಿಕೊಳ್ಳುತ್ತಿದ್ದರು. ಆದರೆ ಇಂದು ಅವರಲ್ಲಿ ವೈದ್ಯಕೀಯ ಪರಿಣತಿಯನ್ನು ಪಡೆದವರ ಸಂಖ್ಯೆ ಕಡಿಮೆಯಾಗುತ್ತಿದೆ. ಅನಿವಾರ್ಯವಾಗಿ ದೊಡ್ಡ ದೊಡ್ಡ ಖಾಯಿಲೆಗಳು ಬಂದರೆ ಮಾತ್ರ ಆಸ್ಪತ್ರೆಗಳಿಗೆ ಹೋಗುತ್ತಿರುವುದು ಕಂಡುಬರುತ್ತದೆ.

೪.೧೪.೧ ಮಾನವ ವೈದ್ಯ

ಕಾಡುಗೊಲ್ಲರು ಪ್ರಕೃತಿ ದತ್ತವಾಗಿ ಸಿಗುತ್ತಿದ್ದ ಗಿಡಮೂಲಿಕಗಳಾದ ಸೊಪ್ಪು, ನಾರು, ಬೇರುಗಳಿಂದ ತಯಾರಿಸಿದ ಔಷಧಿಯನ್ನೆ ಸೇವಿಸುತ್ತಿದ್ದರು. ಹಿಂದೆ ಊರಿಗೆ ಒಬ್ಬರಂತೆ ನಾಟಿ ವೈದ್ಯರಿದ್ದರು. ಇವರು ಆಸ್ಪತ್ರೆಗಳ ಸಂಪರ್ಕವಿಲ್ಲದೆ ತಮ್ಮದೇ ಆದ ವೈದ್ಯ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ಕಾಡುಗೊಲ್ಲರಿಗೆ ಜ್ವರ, ನೆಗಡಿ, ಕೆಮ್ಮು, ಬೇದಿ, ಮುಂತಾದ ಚಿಕ್ಕ ಖಾಯಿಲೆಗಳು ಬಂದರೆ ಅವರು ನಾಟಿ ವೈದ್ಯರಲ್ಲಿಗೆ ಹೋಗುತ್ತಾರೆ. ಈ ನಾಟಿ ವೈದ್ಯಪದ್ಧತಿಯ ಮೂಲಕ ಔಷಧಿ ನೀಡುವವರು. ಅಪಾರ ಜ್ಞಾನವುಳ್ಳವರಾಗಿದ್ದಾರೆ. ಇವರು ತಯಾರಿಸಿದ ಔಷಧಿಗಳನ್ನು ಸೇವಿಸಿದರೆ ವಾಸಿಯಾಗುತ್ತದೆ ಎಂಬ ನಂಬಿಕೆ ಅವರಲ್ಲಿದೆ. ಪ್ರಾದೇಶಿಕವಾಗಿ ಈ ಪದ್ಧತಿಯಲ್ಲಿ ಭಿನ್ನತೆ ಇರುವುದು ಕಂಡುಬರುತ್ತದೆ. ಕಾಡುಗೊಲ್ಲರು ಸಾಮಾನ್ಯವಾಗಿ ಪರಿಣಿತ ವೈದ್ಯರಿಂದ ಮಾತ್ರ ಔಷಧಿಯನ್ನು ಪಡೆಯುತ್ತಿರುವುದು ಕಂಡುಬರುತ್ತದೆ. ಬೇರೆ ಸಮುದಾಯದ ಪರಿಣಿತ ವೈದ್ಯರನ್ನು ಇವರು ನಂಬುವುದು ಅಪರೂಪ. ನಾಟಿ ವೈದ್ಯರಾದ ಕಾಡುಗೊಲ್ಲರಾರೂ ಓದು, ಬರಹ ಕಲಿತವರಲ್ಲ. ಪರಂಪರಾನುಗತವಾಗಿ ತಂದೆಯಿಂದ ಅಥವಾ ಅಜ್ಜನಿಂದ ಬಂದ ತಿಳುವಳಿಕೆಯನ್ನೆ ಇವರು ಮುಂದುವರೆಸಿಕೊಂಡು ಬಂದಿದ್ದಾರೆ. ಈ ನಾಟಿ ವೈದ್ಯರು ರೋಗಕ್ಕೆ ಖಚಿತವಾದ ಗಿಡಮೂಲಿಕೆಯನ್ನು ಕೊಡುವಲ್ಲಿ ನಿಸ್ಸೀಮರು. ಹೀಗಾಗಿ ಕಾಡುಗೊಲ್ಲರಲ್ಲದೆ ಇತರೆ ಸಮುದಾಯದವರೂ ಇವರ ಹತ್ತಿರ ಔಷಧಿಗಳನ್ನು ಪಡೆಯಲು ಬರುತ್ತಾರೆ.

ನಗರೀಕರಣ ಮತ್ತು ಆಧುನೀಕರಣದ ಪ್ರಭಾವದಿಂದ ಇಂತಹ ನಾಟಿವೈದ್ಯರು ಕಡಿಮೆಯಾಗುತ್ತಿದ್ದಾರೆ. ಇದೆ. ಇದಕ್ಕೆ ಮುಖ್ಯಕಾರಣವೆಂದರೆ ನಾಟಿವೈದ್ಯರು ತಾವು ಕೊಡುತ್ತಿದ್ದ ಔಷಧಿಯ ಬಗ್ಗೆ ಇತರರಿಗೆ ಮಾಹಿತಿಯನ್ನು ನೀಡುತ್ತಿರಲಿಲ್ಲ. ನೀವು ಯಾಕೆ ಈ ವೈದ್ಯ ಪದ್ಧತಿಯನ್ನು ಇತರರಿಗೆ ಹೇಳಿಕೊಡುವುದಿಲ್ಲ ಎಂದು ಪ್ರಶ್ನಿಸಿದರೆ. "ಈ ವೈದ್ಯ ಪದ್ಧತಿಯನ್ನು ಇತರರಿಗೆ ಹೇಳಿ ಕೊಟ್ಟರೆ ಆ ಔಷಧಗಳ ಶಕ್ತಿ ಕಡಿಮೆಯಾಗುತ್ತದೆ" ಎಂಬ ಭಾವನೆ ಇವರಲ್ಲಿದೆ. ಹೀಗಾಗಿ ಪಾರಂಪರಿಕವಾಗಿ ಈ ವೃತ್ತಿಯನ್ನು ಮಾಡುತ್ತಿದ್ದ ಅನೇಕರು ಮಾಯವಾಗುತ್ತಿದ್ದಾರೆ. ನುರಿತ ಸೂಲಗಿತ್ತಿಯವರ ಸಂಖ್ಯೆಯೂ ಇಂದು ಕಡಿಮೆಯಾಗುತ್ತಿದೆ. ಅನೇಕ ಹಟ್ಟಿಗಳಲ್ಲಿ ಮಹಿಳೆಯರು ಹೆರಿಗೆಗಾಗಿ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಆರ್ಥಿಕವಾಗಿ ತೀರಾ ಹಿಂದುಳಿದ ಕಾಡುಗೊಲ್ಲರು ಮಾತ್ರ ಪಾರಂಪರಿಕ ವೈದ್ಯಕೀಯ ಆಶ್ರಯ ಪಡೆದುಕೊಂಡಿದ್ದಾರೆ.

ಕಾಡುಗೊಲ್ಲರಲ್ಲಿಯ ಪಾರಂಪರಿಕ ವೈದ್ಯಪದ್ಧತಿಯು ಕಡಿಮೆಯಾಗುವುದಕ್ಕೆ ಅವರಲ್ಲಿ ಹೆಚ್ಚಿನ ಸಂಖ್ಯೆ ಯಲ್ಲಿ ವಿದ್ಯಾವಂತರಾಗುತ್ತಿರುವುದು ಇದಕ್ಕೆ ಕಾರಣವಾಗಿದೆ. ಇತ್ತೀಚೆಗೆ ಇಂಗ್ಲಿಷ ವೈದ್ಯಪದ್ಧತಿಗೆ ಮಾರು ಹೋಗಿದ್ದಾರೆ. ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಡುಗೊಲ್ಲರನ್ನು ಸಂದರ್ಶಿಸಿದಾಗ ನೀವು ಅನಾರೋಗ್ಯದಿಂದ ಬಳಲುತ್ತಿದ್ದರೆ ಯಾವ ವೈದ್ಯರ ಹತ್ತಿರ ಹೋಗುತ್ತೀರಿ ಎಂಬ ಪ್ರಶ್ನೆಗೆ ನಾವು ಮೊದಲು ನಾಟಿ ವೈದ್ಯರಲ್ಲಿಗೆ ಹೋಗುತ್ತೇವೆ. ಗುಣಮುಖರಾಗದೆ ಇದ್ದಾಗ ಮಾತ್ರ ಆಲೋಪಥಿಕ್ ವೈದ್ಯರಿಂದ ಚಿಕಿತ್ಸೆಯನ್ನು ಪಡೆಯುತ್ತೇವೆ ಎನ್ನುತ್ತಾರೆ. ಇದೆ ಪ್ರಶ್ನೆಯನ್ನು ವಿದ್ಯಾವಂತರಲ್ಲಿ ಕೇಳಿದರೆ ನಾವು ನಾಟಿವೈದ್ಯರಲ್ಲಿ

[illegible]

ಹೋಗುವುದೇ ಇಲ್ಲ. ನಾವೆಲ್ಲರೂ ನಮ್ಮ ತಾಲ್ಲೂಕು ಅಥವಾ ಪಟ್ಟಣಗಳ ಆಸ್ಪತ್ರೆಗಳಿಗೆ ಹೋಗುತ್ತೇವೆ ವಿನಃ ಬೇರೆ ಎಲ್ಲಿಗೂ ಹೋಗುವುದಿಲ್ಲ ಎಂದು ಹೇಳುತ್ತಾರೆ.

ಕಾಡುಗೊಲ್ಲರು ಸ್ವಚ್ಛತೆಗೆ ಹೆಚ್ಚಿನ ಮಹತ್ವ ಕೊಡುವುದಿಲ್ಲ. ಒಂದು ಕಾಲಕ್ಕೆ ಇವರು ವಾರಕ್ಕೆ ಒಂದು ಸಲ ಸ್ನಾನ ಮಾಡುತ್ತಿದ್ದರು. ಇದರಿಂದ ಅವರಿಗೆ ಚರ್ಮಕ್ಕೆ ಸಂಬಂಧಿಸಿದ ರೋಗಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದವು. ಇವರು ಚರ್ಮಕ್ಕೆ ಸಂಬಂಧಿಸಿದ ರೋಗಗಳಿಗೆ ನಿಖರವಾದ ಔಷಧಗಳನ್ನು ಕೊಡುತ್ತಿದ್ದರು. ಈಗ ಸ್ವಚ್ಛತೆಯ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಈಗ ಇವರಲ್ಲಿ ಚರ್ಮರೋಗಗಳು ಕಡಿಮೆಯಾಗುತ್ತಿವೆ. ಕೆಮ್ಮು, ದಮ್ಮು, ಕಾಮಣಿ, ಜ್ವರ, ಕೀಲುನೋವು, ಮುಂತಾದವುಗಳಿಗೆ ಕಾಡುಗೊಲ್ಲರು ಅನೇಕ ಗಿಡಮೂಲಿಕೆಗಳನ್ನು ಕೊಡುತ್ತಿದ್ದರು. ಇತ್ತೀಚೇಗೆ ಒಂದೊಂದು ಹಟ್ಟಿಯಲ್ಲಿ ಒಬ್ಬೊಬ್ಬರು ಮಾತ್ರ ನಾಟಿ ವೈದ್ಯ ಪದ್ಧತಿಯಲ್ಲಿ ಔಷಧಿಯನ್ನು ಕೊಡುವವರು ಉಳಿದುಕೊಂಡಿದ್ದಾರೆ.

೪.೧೪.೨ ಪಶುವೈದ್ಯ

ಮನುಷ್ಯರಂತೆ ಪ್ರಾಣಿಗಳಿಗೆ ರೋಗಬರುವುದು ಸಹಜ. ಪಶುಗಳಿಗೆ ಕಾಲುಜ್ವರ, ದೊಮ್ಮರೋಗ, ಪ್ರಸವದ ತೊಂದರೆ, ಕಾಲು ಮುರಿದರೆ, ಕಣ್ಣು ಕಾಣದಾದಾಗ, ಬಾಯಿಯಲ್ಲಿ ಹುಳುಬಿದ್ದರೆ ಇವುಗಳಿಗೂ ಕೂಡ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿಯನ್ನು ಕೊಡುತ್ತಾರೆ. ಪಶುಪಾಲಕರಾದ ಇವರು ಪಶುಗಳಿಗೆ ಸಂಬಂಧಿಸಿದ ಯಾವುದೆ ರೋಗ ಬಂದರೂ ಅದನ್ನು ತಕ್ಷಣ ಕಂಡುಹಿಡಿದು ಅದಕ್ಕೆ ಸರಿಯಾದ ಚಿಕಿತ್ಸೆ ಮಾಡುವುದರಲ್ಲಿ ನಿಸ್ಸೀಮರು. ಇವರಿಗೆ ಮನುಷ್ಯರಿಗಿಂತ ಪಶುಗಳ ಮೇಲೆ ಅತ್ಯಂತ ಪ್ರೀತಿ. ತೀ.ನಂ. ಶಂಕರನಾರಯಣವರು ಕಾಡುಗೊಲ್ಲರ ಪಶುವೈದ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಿದ್ದಾರೆ. ಧೂಪ, ಕಣಿಗಲ ಗಿಡಿದ ಮೂರು ಎಲೆ, ದೊಡ್ಡಕಾಯಿ ಗಿಡದಲ್ಲಿ ಪೂರ್ವದಿಕ್ಕಿಗೆ ಹಬ್ಬಿರುವ ಬಳ್ಳಿಯಲ್ಲಿರುವ ಮೂರು ಎಲೆ, ಬಿಳಿ ಎಕ್ಕದ ಬೇರು, ಒಂದು ಹಿಡಿ ಬಿಳಿಯ ಗುಲಗಂಜಿ ಸೊಪ್ಪು, ಒಂದು ಹಿಡಿ ಕರಿಗುಲಗಂಜಿಯ ಸೊಪ್ಪು, ಒಂದು ಹಿಡಿ ದಾಸವಾಳದ ಸೊಪ್ಪು, ಒಂದು ಮೊಲದ ಕಿವಿಗಡ್ಡೆ, ಒಂದು ಹಿಡಿ ಮೋಟುಳ್ಳಿ ಸೊಪ್ಪು, ಒಂಬತ್ತು ನಿಂಬೆಕಾಯಿ, ಮೂರು ತುಂಡು ಹಸಿಯ ಅರಸಿಣ ಇವೆಲ್ಲವನ್ನು ಒಟ್ಟಿಗೆ ಸೇರಿಸಿ ಒರಳಲ್ಲಿ ಹಾಕಿ ಕುಟ್ಟಬೇಕು ಮತ್ತು ಇದನ್ನು ಕರು ಹಾಕಿದ ಎಮ್ಮೆಯ ಹಾಲಿನಲ್ಲಿ ಬೆರೆಸಿ ಅದನ್ನು ಕುರಿಯ ಅಥವಾ ಮೇಕೆಯ ರೊಪ್ಪದಲ್ಲಿ ಚೆಲ್ಲಿದರೆ ಅದರ ವಾಸನೆಯನ್ನು ಕುರಿ ಮತ್ತು ಮೇಕೆಗಳು ಸೇವಿಸುತ್ತದೆ. ಹೀಗೆ ಮೂರು ಸಲ ಮಾಡಿದರೆ ಕುರಿಗಳಿಗೆ ಮತ್ತು ಮೇಕೆಗಳಿಗೆ ಬರುವ ಕೆರೆಗಾಮ ರೋಗ ವಾಸಿಯಾಗುತ್ತದೆ.

೪.೧೪.೨.೧ ಕುರಿಗಳಿಗೆ ಬಳಸುವ ವೈದ್ಯಪದ್ಧತಿ

ಕಾಡುಗೊಲ್ಲರು ತಮ್ಮದೆ ಆದ ಹಟ್ಟಿಗಳನ್ನು ಕಟ್ಟಿಕೊಂಡು ಊರಿನ ಸಂಪರ್ಕದಿಂದ ದೂರವಿದ್ದವರು. ಇವರು ಯಾವುದೇ ರೋಗ-ರುಜಿನಗಳು ಬಂದಾಗ ದೈವದ ಮೊರೆ ಹೋಗುತ್ತಿದ್ದರು. ದೈವ ಬಲದೊಂದಿಗೆ ತಮಗೆ ಗೊತ್ತಿರುವ ಗಿಡಮೂಲಿಕೆಗಳನ್ನು ಉಪಯೋಗಿಸಿ ಔಷಧಿಯನ್ನು ಕುರಿಗಳಿಗೆ ಕೊಡುತ್ತಿದ್ದರು.

೧. ಹೊಗೇಟು ಹಾಕುವುದು

ಮಾನವರಿಗೆ ನೆಗಡಿಯಾದಂತೆ ಕುರಿಗಳ ಮೂಗಲ್ಲಿ ಗೊಣ್ಣೆ ಸುರಿಯುತ್ತದೆ. ಆಗ ಹೊಗೇಟು ಹಾಕುತ್ತಾರೆ. ಸದಾ ಫಲಗಿಡ, ಅರಳಿ-ಬೇವು, ಸಿಪ್ಪಿಗಿಡ, ಕರಿಗುಲಗಂಜಿ, ಬಿಳಿಗುಲಗಂಜಿ, ದೊಡ್ಡ ಕಾಯಿಯ ಕರಲು ಹೊಟ್ಟೆಗಿಡ, ನೆಲತಂಗಡಿ ಗಿಡ, ಕರಿಹೊಟ್ಟೆಗಿಡ, ಮಾಡಿ ಹೆರಿದ ಬಿಳಿ ಎಕ್ಕೆ ಬೇರು ಇವೆಲ್ಲವನ್ನು ಚೆನ್ನಾಗಿ ಕುಟ್ಟಿ, ಹಂದಿ ತುಪ್ಪದಲ್ಲಿ ಅಥವಾ ಹಸುವಿನ ಬೆಣ್ಣೆಯಲ್ಲಿ ಅಥವಾ ಮೇಕೆ ಹಾಲಿನಲ್ಲಿ ನೆನೆ ಇಡಬೇಕು. ನಂತರ ರಾತ್ರಿ ವೇಳೆ ಕುರಿಗಳನ್ನೆಲ್ಲಾ ಹೊಡೆದುಕೊಂಡು ಹೋಗಿ ಚೆನ್ನಾಗಿ ಒಣಗಿರೋ ತಂಗಟೆ ಕಟ್ಟಿಗೆಯ ಬೆಂಕಿ ಮಾಡಿ ಅದರ ಮೇಲೆ ಸಂಗ್ರಹಿಸಿದ ವಸ್ತುಗಳನ್ನಿಟ್ಟಾಗ ಅವುಗಳಿಂದ ಬರುವ ಹೊಗೆಯು ಕುರಿಗಳ ಮೇಲೆ ಹೋಗುವಂತೆ ಮಾಡುತ್ತಾರೆ. ಇದರಿಂದ ಕುರಿಗಳ ಕೆಮ್ಮು, ಗೊಣ್ಣೆ ಸೋರವಿಕೆ ನಿಂತುಹೋಗುತ್ತದೆ.

೨. ಜ್ವರಕ್ಕೆ ಔಷಧಿ

ಕುರಿಗಳಿಗೆ ಜ್ವರ ಬಂದಾಗ ಮೇವು ಬಿಡುತ್ತವೆ. ಕಾಲುಜ್ವರ ಬಂದಾಗ ಕಾಲುಗಳಲ್ಲಿ ಗಾಯ, ಬಾಯಿಯಲ್ಲಿ ಹುಣ್ಣು ಆಗುತ್ತವೆ. ಅದಕ್ಕೆ ರಾಗಿ ಅಂಬಲಿಯನ್ನು ಮಾಡಿ, ಹಸು ಅಥವಾ ಎಮ್ಮೆ ಮಜ್ಜಿಗೆಗೆ ಸ್ವಲ್ಪ ಖಾರದ ಪುಡಿ ಮಿಶ್ರಣ ಮಾಡಿಕೊಂಡು, ಬಿಸಿನೀರಿನಲ್ಲಿ ಕುರಿಗಳ ಬಾಯಿ ತೊಳೆಯವರು. ಅಥವಾ ಬಾಳೆಹಣ್ಣು, ಇಂಗು, ಪಚ್ಚಕರ್ಪೂರ, ಹಂಪಿ ಇವುಗಳನ್ನು ಕಲಿಸಿ ತಿನ್ನಿಸುತ್ತಾರೆ. ಇದಕ್ಕೂ ವಾಸಿ ಆಗದೆ ಇದ್ದಾಗ ಮೆಳ್ಳೆಮೀನನ್ನು ತಂದು ನೀರಲ್ಲಿ ಹಾಕಿ, ಅರೆದು, ಕುರಿಗಳ ಮೈಮೇಲೆ ಚೆಲ್ಲಿದರೆ ಅವು ಒಂದನ್ನೊಂದು ಮೂಸಿದಾಗ ಈ ಔಷಧಿ ಮೂಗಿನ ಮೂಲಕ ಒಳಗೆ ಹೋಗಿ ಕುರಿಗಳ ಜ್ವರ ಕಡಿಮೆಯಾಗುತ್ತದೆ.

೩. ಗರ್ಭಧಾರಣಾ ಮೂಲಿಕೆ

ಮುಂಗಾರು ಮಳೆಯ ಆರಂಭದಲ್ಲಿ ಹಾಗೂ ದೀಪಾವಳಿಯ ಸಮಯದಲ್ಲಿ ಸಾಮಾನ್ಯವಾಗಿ ಹೆಚ್ಚು ಕುರಿಗಳು ಗರ್ಭಧರಿಸುತ್ತವೆ. ಈ ಋತುಚಕ್ರದಲ್ಲಿ ಕುರಿಗಳು ಗರ್ಭಧರಿಸದೆ ಇದ್ದರೆ ಅವುಗಳ ಸಂತಾನಾಭಿವೃದ್ಧಿಗೆ ಕಾಡುಗೊಲ್ಲರು ಔಷಧಿಯನ್ನು ಕೊಡುತ್ತಾರೆ. ಕುರಿಗಳು ಗರ್ಭಧರಿಸಬೇಕಾದರೆ ಔಷಧಿ ತಯಾರಿಸಲು, ನಸುಗುನ್ನಿ ಕಾಯಿಯನ್ನು ಮೇಕೆ ಹಾಲಿನಲ್ಲಿ ಅರೆದು ಚೆಲ್ಲಿದರೆ ಹಾಕಿದ ಒಂದು ಗಂಟೆಯಲ್ಲಿ ಕುರಿಗಳು ಬೆದಿಗೆ ಬರುತ್ತದೆ. ಗರ್ಭವು ನಿಲ್ಲುತ್ತದೆ. ಹುತ್ತದ ಮೇಲಿನ ಆಲೆಸೊಪ್ಪನ್ನು ಮೇಕೆ ಹಾಲಿನಲ್ಲಿ ಚೆನ್ನಾಗಿ ಅರೆದು, ಕುರಿಗಳ ಮೇಲೆ ಚೆಲ್ಲಿದರೂ ಬೆದಿಗೆ ಬರುತ್ತವೆ ಹಾಗೂ ಗರ್ಭವೂ ನಿಲ್ಲುತ್ತದೆ ಎಂಬ ನಂಬಿಕೆ ಕಾಡುಗೊಲ್ಲರಲ್ಲಿದೆ.

೪. ಮುಸರೆ ಹಾಕುವುದು

ಕುರಿಗಳಿಗೆ ಮುಸರೆ ಹಾಕುವುದು ಎರಡು ರೀತಿಯಲ್ಲಿದೆ. ಇದು ಸರ್ವರೋಗ ನಿವಾರಕವಾಗಿದೆ. ಮೊದಲನೆಯದು ಮೂರು ಮನೆಗಳ ಊಟ ಆದ ನಂತರ ಪಾತ್ರೆಯ ತಳದಲ್ಲಿ ಉಳಿದಿರುವುದನ್ನು ಸಂಗ್ರಹಿಸಿ, ಕುರಿಹಟ್ಟಿಯಲ್ಲಿರುವ ಕುರಿಗಳ ಮೇಲೆ ಹಾಕುತ್ತಾರೆ. ಕುರಿಗಳು ಮೇಯಲು ಹೋಗುವಾಗ

[illegible]

ಹಟ್ಟಿಯ ಮುಂದೆ ಮುಸುರೆ ಹಾಕುವುದುಂಟು ಮತ್ತು ಕುರಿಗಳು ಸಾಯಂಕಾಲ ಹಿಂತಿರುಗುವಾಗಲೂ ಕುರಿಗಳಿಗೆ ಇದೇ ತರಹ ಮುಸುರೆ ಹಾಕುತ್ತಾರೆ.

ಕುರಿ ಮರಿಹಾಕಿ ಹಾಲು ಹಿಂಡದೆ ಇದ್ದಾಗ ಮುಸುರೆ ಹಾಕುತ್ತಾರೆ. ಇದನ್ನು ಹಾಲುಬಳ್ಳಿ, ಕೋಣದಬಳ್ಳಿ, ಕರಿಗುಲಗಂಜಿ, ಸಣ್ಣಕಾಯಿ, ಬಿಳಿಗುಲಗಂಜಿ, ಬಿಲ್ವಪತ್ರೆ, ಎಕ್ಕದ ಗಿಡ ಎಲ್ಲವನ್ನು ಸೇರಿಸಿ ಮಜ್ಜಿಗೆಯಲ್ಲಿ ಚೆನ್ನಾಗಿ ಅರೆದು ನೆನಸಬೇಕು. ನಂತರ ಕಸ್ತೂರಿ, ಅರಿಸಿಣ, ನಿಂಬೆಹಣ್ಣು ಸೇರಿಸಿ, ಮೂರು ದಿನಗಳವರಿಗೆ ಎಮ್ಮೆ ಮಜ್ಜಿಗೆಯಲ್ಲಿ ಕುರಿಗಳಿಗೆ ಕೊಡಬೇಕು. ಹೀಗೆ ಚೆನ್ನಾಗಿ ನೆನೆದ ಪರಿಮಳ ಸೂಸುವ ಮುಸೆರೆಯನ್ನು ಕುರಿಗಳಿಗೆ ಚೆಲ್ಲಬೇಕು. ಇದರ ವಾಸನೆಯನ್ನು ತೆಗೆದುಕೊಂಡಾಗ ಕುರಿಗಲು ಸಮೃದ್ಧವಾಗಿ ಹಾಲು ಕೊಡುತ್ತವೆ.

೫. ಕಾಲುಮುರಿದಾಗ

ಕುರಿಗಳು ಕಳ್ಳತನದಿಂದ ಹೊಲಗಳಿಗೆ ಹೋಗಿ ಮೇಯುವ ಸಂದರ್ಭದಲ್ಲಿ ಕಲ್ಲು ಎಸೆದಾಗ ಕಾಲುಮುರಿಯುವುದುಂಟು. ಇದಕ್ಕೆ ಮೇಕೆ ಹಾಲು, ಕಳ್ಳಿಹಾಲು, ಕುರಿಸಗಣಿ ಕಲಸಿ ಚೆನ್ನಾಗಿ ನೆನಸಿ ಕಾಲು ಮುರಿದ ಭಾಗಕ್ಕೆ ಸುತ್ತಿ ೧೧/೨ ಇಂಚು ಅಗಲ ೬ ಇಂಚು ಉದ್ದ ರೀತಿಯ ಬಿದಿರ ದಿಬ್ಬೆಗಳ ತುಂಡನ್ನು ಜೋಡಿಸಿಕೊಂಡು ಆ ಮಿಶ್ರಣದ ಮೇಲೆ ಮುರಿದ ಭಾಗಕ್ಕೆ ಹಚ್ಚುವರು. ಮತ್ತು ಹುರಳಿಕಾಳನ್ನು ದಿನಾಲು ಕುರಿಗಳಿಗೆ ತಿನ್ನಲು ಕೊಡುವುದರಿಂದ ಮುರಿದ ಕಾಲು ಸರಿಯಾಗುತ್ತದೆ.

೬. ದೊಮ್ಮೆ ರೋಗ

ದೊಮ್ಮೆ ರೋಗಕ್ಕೆ ಹೆಚ್ಚಾಗಿ ಕುರಿಗಳು ಸಾಯುತ್ತವೆ. ಈ ರೋಗದ ಪರಿಹಾರಕ್ಕೆ ಕಾಡುಗೊಲ್ಲರು ಹೆಚ್ಚಾಗಿ ಆಸ್ಪತ್ರೆಗೆ ಹೋಗುತ್ತಾರೆ. ಅಥವಾ ಹುಣಸೆ ಹಣ್ಣಿನ ಹುಳಿ, ಖಾರದ ಹಾಲು ಹಾಕುತ್ತಾರೆ. ಕುರಿಗಳ ದೊಮ್ಮಗೆ ಏಟು ಬಿದ್ದರೆ, ಕುರಿಗಳು ಗುದ್ದಾಡಿದರೆ ಜಾಲಚೆಕ್ಕೆ, ಬ್ಯಾಲದ ಚೆಕ್ಕೆ, ಅರಳಿಮರದ ಚೆಕ್ಕೆಗಳನ್ನು ನೀರಿಗೆ ಹಾಕಿ ಕುದಿಸಿ, ನೀರು ಬಸಿದು. ಅದಕ್ಕೆ ಬೆಲ್ಲ ಹಾಕಿ ಪಾಯಸ ಮಾಡಿ ಸಣ್ಣ ಬಿಂದಿಗೆಗೆ ಸುರಿದುಕೊಂಡು ಕುರಿ ಬಾಯಿಗೆ ಹಾಕುತ್ತಾರೆ.

೭. ಗಾಯಗಳಲ್ಲಿ ಹುಳುಬಿದ್ದಾಗ

ಕುರಿಗಳಿಗೆ ಗಾಯವಾದಾಗ ಆ ಜಾಗಕ್ಕೆ ಹೊಗೆಸೊಪ್ಪಿನ ಪುಡಿಯೊಂದಿಗೆ ಸುಣ್ಣ, ಜೇಡಿಮಣ್ಣಿನ್ನು ಸೇರಿಸುತ್ತಾರೆ ಹಾಗೂ ಬ್ಯಾಟರಿ ಶೆಲ್‌ಗಳ ಒಳಗಿರುವ ಇಂಗಾಲದ ಡೈ ಆಕ್ಸಡ್ ಪುಡಿಯನ್ನು ಹರಳೆಣ್ಣೆ ಯೊಂದಿಗೆ ಸೇರಿಸಿ ಗಾಯದ ಮೇಲೆ ಲೇಪಿಸುತ್ತಾರೆ. ಹೀಗೆ ಮಾಡುವುದರಿಂದ ಕುರಿಗಳಿಗೆ ಹುಳು ಬಿದ್ದು ಸಾಯುವುದನ್ನು ತಪ್ಪಸಬಹುದಾಗಿದೆ.

೮. ತಲೋಕು ಅಥವಾ ಬುರಡೆ ನಡುಗುವುದು

ಮಳೆಗಾಲ ಬಂದರೆ ಈ ರೋಗ ಕುರಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆಗ ಕುರಿಗಳಿಗೆ ಲಂಟನ್ನ ಸೊಪ್ಪು ತಿನ್ನಿಸಿದರೆ ವಾತವರಣದ ಬದಲಾವಣೆಯಿಂದ ಬರುವ ಕುರಿಗಳ ರೋಗಗಳು ಮಾಯವಾಗುತ್ತವೆ. ಕೆಲವರು

ಇದಕ್ಕೆ ಈರೆಸೊಪ್ಪ, ಮೇಕೆಹಾಲು, ಮೆಣಸು, ಬೆಳ್ಳುಳ್ಳಿ ಮಿಶ್ರಣ ಮಾಡಿ ತಿನ್ನುಸುವುದರಿಂದರೂ ಕಡಿಮೆಯಾಗುತ್ತದೆಂದು ಹೇಳುತ್ತಾರೆ.

೯. ಕಣ್ಣು ಕಾಣದಾಗ

ಕುರಿಗಳ ಕಣ್ಣುಗಳಿಗೆ ಮುಳ್ಳಿನ ಕಂಟಿ ತಗುಲಿದಾಗ, ಮೇಯುವಾಗ ಕಡ್ಡಿ ಚುಚ್ಚಿ ಇದರಿಂದ ಕುರಿಗಳು ಕುರುಡಾಗುತ್ತವೆ. ಇಂತಹ ಸಮಯದಲ್ಲಿ ಕುರಿಯ ತೊಡೆಯ ಸಂಧಿಯಲ್ಲಿಯ ಬೆವರು ತೆಗೆದು, ಕುರಿಹಾಲು ಮತ್ತು ಪಾಪ್ಪಿನೊಂದಿಗೆ ಚೆನ್ನಾಗಿ ಕಲಿಸಿ ಕಣ್ಣಿನೊಳಿಗೆ ಹಾಕುವುದರಿಂದ ಎರಡು ಮೂರು ದಿನಕ್ಕೆ ಕಣ್ಣಿನ ಹಾಗೂ ಗಾಯ ವಾಸಿಯಾಗುತ್ತದೆ.

೧೦. ಪ್ರಸವದ ತೊಂದರೆ

ಕುರಿಗೆ ಮೊದಲನೆಯ ಮರಿಹಾಕುವಾಗ ತುಂಬಾ ತೊಂದರೆಯಾಗುತ್ತದೆ. ಆಗ ಕಾಡುಗೊಲ್ಲರು ಅದರ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾರೆ. ಕುರಿಯ ಪ್ರಸವದ ಸಂದರ್ಭದಲ್ಲಿ ಕುರಿಮರಿ ಹೊಟ್ಟೆಯಲ್ಲಿ ಅಡ್ಡ ಬಂದಾಗ ಕೂಡಲೆ ಆ ಕುರಿಯನ್ನು ಹಿಡಿದು ನೆಲದ ಮೇಲೆ ಮಲಗಿಸುತ್ತಾರೆ. ಮುಂದಿನ ಎರಡು ಕಾಲುಗಳನ್ನು ಒಬ್ಬನು ಎಳೆದು ನಾಲ್ಕು ಸಲ ಹೊರಳಾಡಿಸುತ್ತಾನೆ. ಕುರಿಯ ಹಿಂಗಾಲನ್ನು ಬಿಟ್ಟು ಮುಂಗಾಲಿನ ಮೇಲಕ್ಕೆ ಹೊಟ್ಟೆಯ ಭಾಗವನ್ನು ಎಡಗಾಲಿನಿಂದ ನೀವಿ, ಕುರಿಯನ್ನು ಎತ್ತಿ ಬಿಡುತ್ತಾರೆ. ಹೀಗೆ ಮಾಡಿದ ಒಂದೆರಡು ತಾಸಿನಲ್ಲಿ ಮರಿ ಹಾಕುತ್ತದೆ. ಮರಿ ಹೊರ ಬಂದಮೇಲೆ ಕುರಿಯನ್ನು ಅದಿಮಿಡಿದು ಅದರ ಮಡಿಲು ಹಿಗ್ಗಿಸಿ, ಮರಿ ಹೊರಬಂದ ಮೇಲೆ ಕೈಯಿಂದ ತೆಗೆದು, ಮೊಲೆ ಸ್ವಚ್ಛಗೊಳಿಸಿ ಹಾಲು ಕುಡಿಸುವರು. ನಂತರ ಕುರಿ ಮಾಸನ್ನು ಮಲವನ್ನು ಶುಭ್ರಗೊಳಿಸುವರು. ಹೀಗೆ ಮಾಡುವುದರಿಂದ ಕುರಿಮರಿಗೆ ವಾಸನೆಯ ಗುರುತು ಸಿಗುತ್ತದೆ. ವಾಸನೆ ಬದಲಾವಣೆಯಾದರೆ ಕುರಿ ಹಾಲು ಉಣಿಸುವುದಿಲ್ಲ.

ಕಾಡುಗೊಲ್ಲರು ಪರಂಪರಾನುಗತವಾಗಿ ಬಂದ ಗಿಡಮೂಲಿಕೆಗಳನ್ನು ಬಳಸಿ ಕುರಿಗಳಿಗೆ ಬರುತ್ತಿದ್ದ ರೋಗಗಳನ್ನು ವಾಸ ಮಾಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಈ ನಾಟಿ ವೈದ್ಯಪದ್ಧತಿಯು ಕಡಿಮೆ ಯಾಗುತ್ತಿದೆ. ಕಾಡುಗೊಲ್ಲರು ತಮ್ಮ ಹಸುಗಳಿಗೆ ರೋಗಗಳು ಬಂದರೆ ಅವರು ಹಾಗೂ ಮೊಳಕಾಲ್ಮೂರು ಚೆಳ್ಳಿಕೆರೆ ತಾಲ್ಲೂಕಿನ ಪಶುವೈದ್ಯರಲ್ಲಿ ತೋರಿಸುವುದುಂಟು. ಒಂದು ಸಾರಿ ಕರೆದುಕೊಂಡು ಹೋದರೆ ೧೦೦ ರೂಪಾಯಿ ಖರ್ಚಾಗುತ್ತದೆ ಎನ್ನುತ್ತಾರೆ. ಕಾಡುಗೊಲ್ಲರು ತಮ್ಮ ಪಶುಗಳನ್ನು ಸಾರ್ವಜನಿಕ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ತೋರಿಸುವುದಕ್ಕೆ ಹೋಗುವುದಿಲ್ಲ. ಅಲ್ಲಿ ಸರಿಯಾಗಿ ನೋಡುವುದಿಲ್ಲವೆಂದು ಅವರು ಖಾಸಗಿ ದವಾಖಾನೆಗಳಲ್ಲಿ ತೋರಿಸುತ್ತಾರೆ. ಅಲ್ಲಿ ೨೦೦ ರಿಂದ ೩೦೦ ರೂಪಾಯಿಗಳವರೆಗೆ ಖರ್ಚಾಗುತ್ತದೆ. ಪಶುಗಳ ವೈದ್ಯಕೀಯ ಖರ್ಚು ಇತ್ತೀಚಿನ ದಿನಗಳಲ್ಲಿ ದುಬಾರಿಯಾಗುತ್ತಿದೆ. ಈ ಖರ್ಚಿನಿಂದ ನಮಗೆ ಚೇತರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಕಾಡುಗೊಲ್ಲರು ಅಭಿಪ್ರಾಯಪಡುತ್ತಾರೆ.

೪.೧೫ ವರ್ತಮಾನದಲ್ಲಿ ಕಾಡುಗೊಲ್ಲರು

ಮಾನವನ ಚಲನಶೀಲತೆಯಿಂದ ಬದಲಾವಣೆಗಳು ಆಗುವುದು ಸಹಜ. ಏಕೆಂದರೆ ಮಾನವನು ತನ್ನ ಆದಿಮ ಸ್ಥಿತಿಯಿಂದ ಕಂಪ್ಯೂಟರ್ ಯುಗದವರೆಗೆ ಬದಲಾವಣೆಯಾಗಿದ್ದಾನೆಂದರೆ ಕಾಡುಗೊಲ್ಲರ ಸಮುದಾಯ ದವರು ಎಷ್ಟರ ಮಟ್ಟಿಗೆ ಬದಲಾವಣೆಯನ್ನು ಕಾಣುತ್ತಿದ್ದಾರೆ. ಅಲೆಮಾರಿಗಳಾದ ಕಾಡುಗೊಲ್ಲರು ಹಳೆ ವಿಧಾನಗಳನ್ನು ತಮ್ಮ ಜೀವನಕ್ಕೆ ತಳಕು ಹಾಕಿಕೊಂಡು ನಾಗಲೋಟದಲ್ಲಿ ಸ್ಪರ್ಧೆಯನ್ನು ಕೊಡುತ್ತಿರುವ ಆಧುನಿಕ ತಂತ್ರಜ್ಞಾನಗಳು ಕಾಡುಗೊಲ್ಲರ ಜೀವನ ಶೈಲಿಯನ್ನು ಅಣುಕಿಸುತ್ತಿವೆ. ಇದನ್ನು ಕಾಡುಗೊಲ್ಲರು ಸವಾಲಾಗಿ ಸ್ವೀಕರಿಸಿ ಮೇಲೇಳುವ ಅವಶ್ಯಕತೆ ಇದೆ. ಕಾಡುಗೊಲ್ಲರ ಈ ಅಧ್ಯಯನಕ್ಕಾಗಿ ಒಂದು ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳನ್ನು ನಾನು ಇಲ್ಲಿ ಆಯ್ಕೆಮಾಡಿಕೊಂಡಿದ್ದೇನೆ.

ಅಲೆಮಾರಿಗಳಾದ ಕಾಡುಗೊಲ್ಲರು ಊರಿನಿಂದ ಊರಿಗೆ ಪಶುಪಾಲನೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ಆದರೆ ಇತ್ತೀಚಿಗೆ ಈ ವೃತ್ತಿಯು ಕಡಿಮೆಯಾಗುತ್ತಿದೆ. ಐಶರಾಮಿ ಜೀವನಕ್ಕಾಗಿ ಕಾಡನ್ನು ಕಡಿದು ಹುಲ್ಲಗಾವಲು ಪ್ರದೇಶವು ಹಾಳಾಗುತ್ತಾ, ಪಶುಸಂಗೋಪನೆ ವೃತ್ತಿಯು ನಾಗರಿಕ ಜಗತ್ತಿನಲ್ಲಿ ಪೈಪೋಟಿಗಿಳಿದು ನಿರ್ವಹಿಸುವ ಕಸುಬುಗಳ ಮೂಲಕ ಹೊಟ್ಟೆಗೆ ಹಿಟ್ಟಿಲ್ಲದಂತಾಗಿ ಅವರು ಕೃಷಿಯ ಕಡೆಗೆ ವಾಲುತ್ತಿದ್ದಾರೆ. ಕಾಡುಗೊಲ್ಲರು ಬಡತನದಲ್ಲೇ ಹೆಚ್ಚು ಕಾಲ ಕಳೆದಿದ್ದಾರೆ ಮತ್ತು ಕಳೆಯುತ್ತಿದ್ದಾರೆ. ನಾಗರೀಕ ಸಮಾಜದೊಂದಿಗೆ ಸಂಪರ್ಕವನ್ನಿಟ್ಟುಕೊಂಡ ಅನೇಕ ಕಾಡುಗೊಲ್ಲರು ಮದುವೆ, ಜನನ, ಸಾವು ಇವುಗಳಲ್ಲಿ ಹುಟ್ಟಿನಿಂದ ಸಾಯುವರೆಗೂ ತಮ್ಮದೇ ಆದ ವಿಧಿ-ವಿದಾನಗಳನ್ನು ಅನುಸರಿಸುತ್ತಾ ತಮ್ಮ ಆಚರಣೆಗಳನ್ನು ಮುಂದುವರೆಸುತ್ತಾ ಬಂದಿದ್ದಾರೆ. ಇದನ್ನು ನಾವು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಾಣಬಹು ದಾಗಿದೆ. ಕಾಡುಗೊಲ್ಲರಲ್ಲಿ ಯಾವುದೊ ಕಾರಣಕ್ಕೆ ಜಗಳಗಳಾದರೆ ತಮ್ಮಲ್ಲಿರತಕ್ಕಂತ ಕುಲಪಂಚಾಯ್ತಿಗಳ ಮೂಲಕವೆ ಬಗೆಹರಿಸಿ ಕೊಳ್ಳುತ್ತಾರೆ ವಿನಃ ಕೊರ್ಟುಗಳಿಗೆ ಹೋಗುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಸ್ವಲ್ಪಮಟ್ಟಿಗೆ ಇಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ.

ಕಾಡುಗೊಲ್ಲರಲ್ಲಿ ಶಿಕ್ಷಣವನ್ನು ಪಡೆಯುತ್ತಿರುವವರ ಸಂಖ್ಯೆ ಕಡಿಮೆ. ಇತ್ತೀಚೆಗೆ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಓದುವವರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಕಾಡುಗೊಲ್ಲರ ಮಕ್ಕಳು ಹತ್ತನೇ ಕ್ಲಾಸಿನವರೆಗೆ ವಿದ್ಯಾಭ್ಯಾಸ ಮಾಡುತ್ತಾರೆ. ಆದರೆ ಅವರ ಆರ್ಥಿಕ-ಸ್ಥಿತಿ ತುಂಬಾ ಹದಗೆಟ್ಟ ಕಾರಣದಿಂದ ಅವರನ್ನು ಶಾಲೆ ಬಿಡಿಸಿ ಪಶುಪಾಲನೆ ಇಲ್ಲವೇ ಕೂಲಿ ಕೆಲಸಕ್ಕೆ ಹಚ್ಚುತ್ತಾರೆ.

ಕಾಡುಗೊಲ್ಲರಲ್ಲಿ ಪೂಜೆಗಾಗಿ ಪ್ರಾಣಿಗಳನ್ನು ಬಲಿಕೊಡುವುದು ಹೆಚ್ಚಾಗಿದ್ದು, ಇಂತಹ ಕ್ರೂರ ಆಚರಣೆಗಳು ಮುಂದುವರೆಯುತ್ತಿವೆ. ಇಂತಹ ಆಚರಣೆಯ ಮುಖಾಂತರ ದೇವರನ್ನು ತೃಪ್ತಿಪಡಿಸುತ್ತೇವೆ ಎಂದು ಹೇಳುತ್ತಾರೆ. ಕಾಡುಗೊಲ್ಲರು ಮಾಡಿದ ತಪ್ಪಿಗೆ ಕ್ಷಮೆ ಪಡೆಯುವುದಕ್ಕಾಗಿ ಪ್ರಾಣಿ ಬಲಿ ನೀಡುತ್ತಾರೆಂದು ತಿಳಿಯುತ್ತದೆ. ಈ ಆಚರಣೆಯು ಮುಂದುವರಿಯುತ್ತಿದ್ದು ಇದಕ್ಕೆ ಕೊನೆ ಇಲ್ಲದಂತಾಗಿದೆ. ಇವರು ಬೇರೆ

[illegible]

ಸಮುದಾಯದವರೊಂದಿಗೆ ಬೆರೆಯದೆ, ತಮ್ಮದೇ ಆದ ಸಾಮಾಜಿಕ ಮೌಲ್ಯಗಳನ್ನು ಬಿಟ್ಟು ಬರದೆ, ಶ್ರೇಣಿಕೃತ ಜಾತಿವ್ಯವಸ್ಥೆಯಲ್ಲಿ ಬೆರೆಯದೆ, ತಮ್ಮದೇ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಸರ್ಕಾರದ ಅಭಿವೃದ್ಧಿ ಯೋಜನೆಗಳು ಇವರಿಗೆ ಸಿಗುತ್ತಿಲ್ಲ. ಪುನರ್‌ವಸತಿ ಯೋಜನೆಗಳು ಕಾಡುಗೊಲ್ಲರಿಗೆ ದಕ್ಕಿದರೂ, ಅವು ಬಡವರಿಗೆ ಸಿಗದೆ ಮಧ್ಯಮ ವರ್ಗದ ಕಾಡುಗೊಲ್ಲರ ಪಾಲಾಗುತ್ತಿವೆ. ಕಾಡುಗೊಲ್ಲರಿಗೆ ವೈದ್ಯಕೀಯ ಸೇವೆ ದೊರಕದೆ ಸಾವು, ನೋವುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅವರು ವೈದ್ಯರ ಹತ್ತಿರ ಬರಬೇಕಾದರೆ ಸಾರಿಗೆ ಸಂಪರ್ಕದ ತೊಂದರೆಯೂ ಇದಕ್ಕೆ ಕಾರಣ. ಇದರಿಂದ ಸಾವುಗಳ ಸಂಖ್ಯೆ ಹೆಚ್ಚಾಗುತ್ತಿದೆ. ವಿಶೇಷವಾಗಿ ಮಹಿಳೆಯರಿಗೆ ಹೆರಿಗೆ ಸಂದರ್ಭದಲ್ಲಿ ಮತ್ತು ಮೈನರದಾಗ ಹೆಚ್ಚಾಗಿ ಅನಾಹುತಗಳು ಸಂಭವಿಸುತ್ತಿದೆ. ಕಾಡುಗೊಲ್ಲರಲ್ಲಿ ಪರಂಪರಾನುಗತವಾಗಿ ಬಂದ ಹೆರಿಗೆ ಹಾಗೂ ಋತುಮತಿ ಸಂದರ್ಭದ ಅವಮಾನೀಯವಾದ ಆಚರಣೆಗಳು ಅಲ್ಲಲ್ಲಿ ಇನ್ನು ಮುಂದುವರೆಯುತ್ತಿರುವುದು ಕಂಡುಬರುತ್ತದೆ. ಕೆಲ ಗೊಲ್ಲರ ಹಟ್ಟಿಗಳಲ್ಲಿ ಈ ಆಚರಣೆಗಳು ಕಡಿಮೆಯಾಗುತ್ತಿವೆ. ಕಾಡುಗೊಲ್ಲರು ಗರ್ಭಿಣಿಯರನ್ನು ಹೆರಿಗೆ ಸಮಯಕ್ಕಿಂತ ಮುಂಚೆ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಹೆರಿಗೆ ಮಾಡಿಸುತ್ತಿದ್ದಾರೆ.

ಕಾಡುಗೊಲ್ಲರ ಪಾರಂಪರಿಕ ಕೃಷಿ ಪದ್ಧತಿಯಲ್ಲೆ ಕಾಲ ಕಳೆಯುತ್ತಿದ್ದಾರೆ. ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸಿಕೊಳ್ಳದೆ ಇರುವುದು ಕಂಡುಬರುತ್ತದೆ. ಕಾಡುಗೊಲ್ಲರಿಗೆ ಸುಗ್ಗಿಯ ಸಂದರ್ಭದಲ್ಲಿ ಕೂಲಿ ಕೆಲಸಗಳು ದೊರೆಯುತ್ತವೆ. ಆದರೆ ಇತರೆ ಸಂದರ್ಭದಲ್ಲಿ ಅವರಿಗೆ ಕೆಲಸಗಳು ಸಿಗದೆ ನಗರಗಳಿಗೆ ಕೂಲಿ ಆರಿಸಿಕೊಂಡು ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಕಾಡುಗೊಲ್ಲರಲ್ಲಿಯ ಶ್ರೀಮಂತ ಹಾಗೂ ಮಧ್ಯಮ ವರ್ಗದ ಕುಟುಂಬದವರು ಬಡತನರೇಖೆಗಿಂತ ಕೆಳಗಿರುವವರಿಗೆ ಸರಿಯಾದ ಮಾರ್ಗದರ್ಶನ ಮಾಡದೆ ಇರುವುದು ಕಂಡುಬರುತ್ತದೆ. ಕಾಡುಗೊಲ್ಲರನ್ನು ಕುರಿತು ಅಧ್ಯಯನ ಮಾಡಿದ ಹಾಗೂ ಮಾಡುತ್ತಿದ್ದ ಸಂಶೋಧಕರು ಕಾಡುಗೊಲ್ಲರ ಆಧುನಿಕತೆಗೆ ಮುಖಾಮುಖಿಯಾಗುತ್ತ ಹಂತ ಹಂತವಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ವಾಸ್ತವ ಅಂಶ ಬೇರೆಯೆ ಇದೆ. ಕಾಡುಗೊಲ್ಲರು ಪ್ರತಿಶತ ನೂರಕ್ಕೆ ೬೫ರಷ್ಟು ಜನ ಬಡತನದಿಂದ ಕೂಲಿ ಕೆಲಸಗಳಿಲ್ಲದೆ ಸೊರಗುತ್ತಿದ್ದಾರೆ.

ಕಾಡುಗೊಲ್ಲರ ಬದುಕಿನಲ್ಲಿ ಬದಲಾವಣೆ ಆಗುತ್ತಿದೆ. ಅದು ಅವರ ಆಹಾರ ಪದ್ಧತಿ, ವೇಷಭೂಷಣ, ಮಂಗಲಕರವಾದ ಆಚರಣೆಗಳಲ್ಲಿ, ಜಾತ್ರೆ, ಉತ್ಸವಗಳಲ್ಲಿ ಈ ಬದಲಾವಣೆ ಎದ್ದು ಕಾಣುತ್ತಿದೆ. ಆದರೆ ಅವರ ಆರ್ಥಿಕ ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳಲ್ಲಿ ಯಾವುದೇ ಬದಲಾವಣೆಗಳಾಗದೆ ಇರುವುದು ಕಂಡುಬರುತ್ತದೆ.

ಕಾಡುಗೊಲ್ಲರ ಹಟ್ಟಿಗಳಿಗೆ ಸಾರಿಗೆ ಸಂಪರ್ಕಗಳ ಕೊರತೆ ಹೆಚ್ಚಾಗಿದೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕಾಡುಗೊಲ್ಲರು ಹೋಗಬೇಕಾದರೆ ನಡೆದುಕೊಂಡೊ ಅಥವಾ ಸೈಕಲ್ ಮೇಲೆ

ಹೋಗಬೇಕಾಗುತ್ತದೆ. ಕಾಡುಗೊಲ್ಲರಲ್ಲಿಯ ಕಲೆಯನ್ನು ಆರಾಧಿಸುವ ಮತ್ತು ಅದರ ರಸಾನುಭವವನ್ನು ಅನುಭವಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಶಿಕ್ಷಣ ಪಡೆಯುತ್ತಿರುವ ಹೆಣ್ಣು ಮಕ್ಕಳು ಋತುಮತಿಯಾದರೆ ಅವರ ಮುಂದಿನ ಶಿಕ್ಷಣಕ್ಕೆ ಇತ್ತೀಚೆಗೆ ಒಲವು ತೋರಿಸುತ್ತಿರುವುದು ಕಂಡುಬರುತ್ತದೆ. ಮೊದಲು ಈ ಸಂದರ್ಭದ ನಂತರ ಶಿಕ್ಷಣವನ್ನು ಮುಂದುವರೆಸಲು ಹೆಣ್ಣು ಮಕ್ಕಳಿಗೆ ಅವಕಾಶಗಳೆ ಇರಲಿಲ್ಲ. ಮಹಿಳೆಯರಿಗಿಂತ ಪುರುಷರಿಗೆ ಶಿಕ್ಷಣ ಪಡೆಯುವಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿದೆ. ಹಿಂದುಳಿದ ವರ್ಗದಿಂದ ಪರಿಶಿಷ್ಟ ಪಂಗಡಕ್ಕೆ ಕಾಡುಗೊಲ್ಲರ ಸಮುದಾಯ ಸೇರಿಸಬೇಕೆಂದು ಈ ಸಮುದಾಯದ ಎಲ್ಲ ಜನರ ಆಶಯವಾಗಿದೆ. ಕೂಲಿ ಕೆಲಸ ಸಿಗದಿದ್ದಾಗ ಅನೇಕ ಸ್ತ್ರೀ-ಪುರುಷರು ಕುರುಚಲು ಕಾಡಿನಲ್ಲಿ ಕಟ್ಟಿಗೆ ಸಂಗ್ರಹಿಸಿ ಪೇಟೆಗಳಲ್ಲಿ ಅಲೆದಾಡಿ ಮಾರಾಟ ಮಾಡಿ ಉಪಜೀವನ ನಡೆಸುತ್ತಿರುವುದು ಕಂಡುಬರುತ್ತಿದೆ. ಕಾಡುಗೊಲ್ಲರು ಆಚರಿಸುವ ಹಬ್ಬಗಳಲ್ಲಿ ನವೀನತೆ ಉಂಟಾಗುತ್ತಿರುವುದು ಗೋಚರಿಸುತ್ತಿದೆ. ಒಟ್ಟಾರೆಯಾಗಿ ಕಾಡುಗೊಲ್ಲರ ಬಾಹ್ಯ ಪ್ರಪಂಚದಲ್ಲಿ ಬದಲಾವಣೆಗಳಾಗುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿವೆ. ಕಾಡುಗೊಲ್ಲರನ್ನು ಊರಗೊಲ್ಲರ ಜೊತೆಗೆ ಸೇರಿಸದೆ ಅವರಿಗೆ ಆದ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ರೂಪಿಸಿ ಜಾರಿಗೆ ಗೊಳಿಸಿದರೆ ಖಂಡಿತವಾಗಿಯೂ ಕಾಡುಗೊಲ್ಲರು ತಮ್ಮ ಸ್ಥಿತಿಗತಿಗಳನ್ನು ಉತ್ತಮ ಪಡಿಸಿ ಕೊಳ್ಳಲು ಸಾಧ್ಯವಾಗುತ್ತದೆ.

೪.೧೬ ವಾರ್ಷಿಕಾವರ್ತನ ಆಚರಣೆಗಳು

ಕಾಡುಗೊಲ್ಲರು ವರ್ಷದುದ್ದಕ್ಕೂ ಅನೇಕ ಆಚರಣೆಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ. ಈ ಆಚರಣೆಗಳಲ್ಲಿ ನವೀನತೆ ತುಂಬಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರತಿಯೊಂದು ಸಮುದಾಯದಲ್ಲಿ ಆಚರಿಸುವ ಆಚರಣೆಗಳು ಭಿನ್ನವಾಗಿರುತ್ತವೆ. ಕಾಡುಗೊಲ್ಲರಲ್ಲಿಯೆ ಪ್ರಾದೇಶಿಕವಾಗಿ ಆಚರಿಸುವ ಆಚರಣೆಗಳಲ್ಲಿ ಅನೇಕ ಭಿನ್ನತೆಗಳಿರುವುದನ್ನು ಗಮನಿಸಬಹುದು. ಕಾಡುಗೊಲ್ಲರು ಆಧುನಿಕತೆಗೆ ಮುಖಾಮುಖಿಯಾಗುತ್ತ ಹೋದಂತೆಲ್ಲ ಅವರು ಆಚರಿಸುವ ಹಬ್ಬ, ಉತ್ಸವಗಳೆಲ್ಲ ವರ್ಷದಿಂದ ವರ್ಷಕ್ಕೆ ಹೊಸತನವನ್ನು ಪಡೆದುಕೊಳ್ಳುತ್ತ ನಡೆಯುತ್ತವೆ ಎಂಬುದನ್ನು ಗಮನಿಸಿದಾಗ ತಿಳಿಯುತ್ತದೆ. ಕಾಡುಗೊಲ್ಲರು ಹಿಂದೂಗಳು ಆಚರಿಸುವ ಎಲ್ಲ ಹಬ್ಬಗಳನ್ನು ಆಚರಿಸುತ್ತಿರುವುದು ಕಂಡುಬರುತ್ತಿದೆ. ಒಂದು ಕಾಲಕ್ಕೆ ಕಾಡುಗೊಲ್ಲರು ನಿರ್ದಿಷ್ಟ ಪಡಿಸಿದ ಹಬ್ಬಗಳನ್ನು ಮತ್ತು ಜಾತ್ರೆಗಳನ್ನು ಮಾತ್ರ ಮಾಡುತ್ತಿದ್ದರು. ತನ್ನ ಸುತ್ತಮುತ್ತಲಿನ ಪರಿಸರದ ಪ್ರಭಾವದಿಂದ ಸಾಮೂಹಿಕವಾಗಿ ಆಚರಿಸುವ ಎಲ್ಲ ಹಬ್ಬಗಳನ್ನು ಕಾಡುಗೊಲ್ಲರು ಅನುಸರಿಸುತ್ತಿದ್ದಾರೆ.

ಕಾಡುಗೊಲ್ಲರನ್ನು ಅಧ್ಯಯನ ಮಾಡಿದ ನಂಜುಂಡಯ್ಯ ಹಾಗೂ ಲೂಯಿಸ ಅವರು ಗುಗ್ಗರಿಹಬ್ಬ, ಶಿವರಾತ್ರಿ, ಯುಗಾದಿ, ನಾಗರಪಂಚಮಿ, ಹಿರಿಯರಹಬ್ಬ, ದೀಪಾವಳಿ, ಮಾರೆಮ್ಮನ ಹಬ್ಬಗಳನ್ನು ವೈಶಿಷ್ಟ್ಯವಾಗಿ ಆಚರಿಸುತ್ತಾರೆಂದು ತಿಳಿಸಿದ್ದಾರೆ.

[illegible]

[illegible]

[illegible]

[illegible]

೪.೧೬.೧ ನಾಗರ ಪಂಚಮಿ

ಕಾಡುಗೊಲ್ಲರು ನಾಗರಪಂಚಮಿ ಹಬ್ಬವನ್ನು ನಾಗಪ್ಪನ ಹಬ್ಬವೆಂದೂ, ಪಂಚಮಿ ಎಂದು ಕರೆಯುತ್ತಾರೆ. ಶ್ರಾವಣ ಮಾಸದಲ್ಲಿ ಬರುವ ಈ ಹಬ್ಬದಲ್ಲಿ ಹೆಣ್ಣುಮಕ್ಕಳು ಗಂಡನ ಮನೆಯಿಂದ ತವರು ಮನೆಗೆ ಬಂದು ಆಚರಿಸುವ ಹಬ್ಬವಾಗಿದೆ. ಹಬ್ಬದ ದಿನದಂದು ಸಮುದಾಯದ ಮಹಿಳೆಯರು ಮನೆಯನ್ನು ಸಾರಿಸಿ, ಸುಣ್ಣ-ಬಣ್ಣವನ್ನು ಬಳೆದು ನಾಗದೇವತೆಯನ್ನು ಪೂಜಿಸುತ್ತಾರೆ. ತವರು ಮನೆಗೆ ಬಂದಿರುವ ಮಗಳಿಗೆ ಹೊಸ ವಸ್ತ್ರಗಳನ್ನು ತಂದಿರುತ್ತಾರೆ. ಅವುಗಳನ್ನು ಧರಿಸಿ ತಮ್ಮ ಹಟ್ಟಿಯ ಸುತ್ತಲೂ ಇರುವ ಹುತ್ತಗಳಿಗೆ ಹೋಗಿ ಅಲ್ಲಿ ಮೀಸಲು ಅಡುಗೆಯ ತಂಬಿಟ್ಟು, ಚಿಗಳೆ, ನೆನೆಯಕ್ಕಿ, ಬಾಳೆ ಹಣ್ಣು ತೆಂಗಿನಕಾಯಿ ಇಟ್ಟು ನಾಗರಾಜನಿಗೆ ಪೂಜೆ ಮಾಡುತ್ತಾರೆ. ನೈವೇದ್ಯವನ್ನು ಹಾವಿನ ಹುತ್ತದಲ್ಲಿ ಬಿಟ್ಟು ನಂತರ ಹಾಲನ್ನು ಹುತ್ತದೊಳಗೆ ಹಾಕುವರು. ಈ ಹಬ್ಬದಲ್ಲಿ ಗೋದಿಹಿಟ್ಟಿನ ಪಾಯಸ ಮಾಡುತ್ತಾರೆ. ಇಲ್ಲಿ ಗೊಲ್ಲರಹಟ್ಟಿಯ ಜನರೆಲ್ಲರೂ ಪ್ರಸಿದ್ಧವಾದ ದೇವಸಮುದ್ರದ ಗಂಗಮ್ಮ ಮತ್ತು ನಾಗಪ್ಪನ ಬೆಟ್ಟಕ್ಕೆ ಹೋಗುತ್ತಾರೆ. ಅಲ್ಲಿ ನಾಗಪ್ಪನ ಮತ್ತು ಗಂಗೆಪೂಜೆ ಮಾಡುತ್ತಾರೆ. ಕುಟುಂಬದಲ್ಲಿ ಯಾವುದೇ ತರಹದ ಸರ್ಪದೋಷ, ಹಾವಿನ ಕಾಟ, ಕಿವಿಸೋರುವಿಕೆ, ಹುಣ್ಣು, ಮುಂತಾದ ಕಾಯಿಲೆಗಳು ವಾಸಿಯಾಗಲು ಹರಕೆ ಹೊರುತ್ತಾರೆ. ಹರಕೆ ಈಡೇರಿದಾಗ ಬೆಳ್ಳಿಯ ನಾಗರಹೆಡೆಯನ್ನು ಕೊಡುತ್ತಾರೆ ಮತ್ತು ಮಕ್ಕಳಿಗೆ ನಾಗರಾಜ, ನಾಗಪ್ಪ, ನಾಗಲಾಂಬಿಕೆ, ಗಂಗಮ್ಮ ಮುಂತಾದ ಹೆಸರುಗಳನ್ನು ಇಡುತ್ತಾರೆ. ಎಷ್ಟೋ ಸಂದರ್ಭದಲ್ಲಿ ಕಾಡುಗೊಲ್ಲರು ತಮ್ಮಲ್ಲಿಯ ಆದಾಯ ಮೀರಿ ದೇವರ ಪೂಜೆಗಾಗಿ ಹೆಚ್ಚಿನ ಖರ್ಚುವೆಚ್ಚ ಮಾಡುತ್ತಾರೆ. ಸಾಲ ಮಾಡಿದರೂ ಸರಿ ದೇವರನ್ನು ಸಂತೈಸಬೇಕು ಎಂಬುದು ಇವರ ತತ್ವ. ಈ ಹಬ್ಬದಲ್ಲಿ ಹೆಚ್ಚಾಗಿ ಹಣ ಜಾಸ್ತಿ ಖರ್ಚಾಗುತ್ತದೆ. ಏಕೆಂದರೆ ಕಾಡುಗೊಲ್ಲರ ಮಹಿಳೆಯರು ಗಂಡನ ಮನೆಯಿಂದ ತವರು ಮನೆಗೆ ಬಂದಾಗ ಅವಳಿಗೆ ಮತ್ತು ಅವಳ ಮಕ್ಕಳಿಗೆ ಹೊಸ ಬಟ್ಟೆಗಳನ್ನು ತರಬೇಕಾಗುತ್ತದೆ. ಹೀಗಾಗಿ ಅವರು ಸಾಲಮಾಡಿಯಾದರೂ ಈ ಹಬ್ಬವನ್ನು ಆಚರಿಸಬೇಕಾಗುತ್ತದೆ.

೪.೧೬.೨ ಯುಗಾದಿ

ಚೈತ್ರ ಮಾಸದಲ್ಲಿ ಬರುವ ಈ ಹಬ್ಬವನ್ನು ಮೂರು ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸುತ್ತಾರೆ. ಕೃಷಿ ಕೆಲಸಗಳನ್ನು ಮುಗಿಸಿ ಬಿಡವು ಮಾಡಿಕೊಂಡು ಯುಗಾದಿಯನ್ನು ಆಚರಿಸುವರು. ಯುಗಾದಿ ಎಲ್ಲ ಸಮುದಾಯಗಳಿಗೆ ಹೊಸ ವರ್ಷವಾದಂತೆ, ಕಾಡುಗೊಲ್ಲರು ಕೂಡ ಇದನ್ನು ವಿಶೇಷವಾಗಿ ಆಚರಿಸುತ್ತಾರೆ. ಇವರು ಯುಗಾದಿ ದಿನದಂದು ಬೆಳ್ಳಿಗ್ಗೆ ಎದ್ದು ಬೇವಿನ ಸೊಪ್ಪನ್ನು ನೀರಿನಲ್ಲಿ ಬೆರಿಸಿ, ಸ್ನಾನ ಮಾಡಿ, ದೇವರ ಪೂಜೆಗೆ ಬೇಕಾಗುವ ಬಾಳೆಹಣ್ಣು, ತೆಂಗಿನಕಾಯಿ, ಸಿಹಿತಿಂಡಿ ಮಾಡಿ ಉಪವಾಸದಿಂದಲೇ ಪೂಜೆ ಮಾಡಿ ನೈವೇದ್ಯವನ್ನು ಇಡುತ್ತಾರೆ. ಮೊದಲನೆಯ ದಿನ ಪೂಜೆಯು ಬಹಳ ವೈಭವದಿಂದ ನಡೆಯುತ್ತದೆ. ಎರಡನೆಯ ದಿನ ಕಾಡುಗೊಲ್ಲರ ಸಮುದಾಯದವರೆಲ್ಲ ಕಾಡಿಗೆ ಬೇಟೆಯಾಡುವುದಕ್ಕೆ ಹೋಗುತ್ತಾರೆ. ಕಾಡಿನಲ್ಲಿ ಯಾವುದಾದರೂ ಪ್ರಾಣಿಯನ್ನು ಬೇಟೆಯಾಡಿ ಅಂದು ತರಲೇಬೇಕಾಗುತ್ತದೆ. ಬೇಟೆಯಾಡಿ ತಂದ

ಪ್ರಾಣಿಯನ್ನು ಹಟ್ಟಿಯ ಒಳಗೆ ತರುವುದಕ್ಕಿಂತ ಮುನ್ನ ಮುತ್ತೈದೆಯರು ಮಂಗಳರಾತಿ ಮಾಡಿ ಹಟ್ಟಿಯ ಒಳಗೆ ಸ್ವಾಗತಿಸುತ್ತಾರೆ. ಇದು ವಿಜಯದ ಸಂಕೇತವಾಗಿದೆ. ಆ ದಿನ ಬೇಟೆಯಾಡಿ ತಂದ ಪ್ರಾಣಿಗಳನ್ನು ಬೇಯಿಸಿ ಅಡುಗೆ ಮಾಡಿ ಎಲ್ಲರಿಗೂ ಬಡಿಸುತ್ತಾರೆ. ಮೂರನೆಯ ದಿನ ಸಾಯಂಕಾಲದವರೆಗೆ ಸಿಹಿ ಅಡುಗೆ ಮಾಡಿ ಪೂಜೆ ಮಾಡಿದ ನಂತರ ಸಾಯಂಕಾಲ ಮಹಿಳೆಯರು ತಮ್ಮ ಮಕ್ಕಳಿಗೆ ಚಂದ್ರನನ್ನು ತೋರಿಸುತ್ತಾರೆ. ಈ ಸಂದರ್ಭಕ್ಕೆ ಕೃಷಿ ಕೆಲಸಕಾರ್ಯಗಳು ಮುಗಿದು ಅದರ ಲಾಭ-ನಷ್ಟಗಳನ್ನು ತಿಳಿದುಕೊಂಡು ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದಲ್ಲಿ ಕಾಡುಗೊಲ್ಲರಲ್ಲಿಯ ಐಕ್ಯತೆ ಎದ್ದು ಕಾಣುತ್ತದೆ. ಈ ದಿನ ಇಲ್ಲಿ ಹಟ್ಟಿಯ ದೇವರನ್ನು ಪೂಜೆ ಮಾಡುವುದರ ಜೊತೆಗೆ ಸಾಂಸ್ಕೃತಿಕ ವೀರರ ಪೂಜೆಯನ್ನು ಮಾಡುತ್ತಾರೆ.

೪.೧೬.೩ ಶಿವರಾತ್ರಿ

ಕಾಡುಗೊಲ್ಲರು ಮಹಾಶಿವರಾತ್ರಿಯ ದಿನವನ್ನು ಶಿವನ ನಾಮಸ್ಮರಣೆಯ ಮೂಲಕ ಭಜನೆ ಮಾಡುವರು. ಮಾಘಮಾಸದ ಕೃಷ್ಣಪಕ್ಷದ ಚತುದರ್ಶಿಗೆ ಶಿವರಾತ್ರಿ ಎನ್ನುವರು. ಅಂದು ಕಾಡುಗೊಲ್ಲರು ಸ್ನಾನ ಮಾಡಿ ಶಿವನ ಮುಂದೆ ದೀಪವನ್ನಿಟ್ಟು ನೈವೇದ್ಯಗಳಿಂದ ಪೂಜಿಸಿದರೆ ಸಹಸ್ರ ವರ್ಷಗಳವರೆಗೆ ತಪಸ್ಸು ಮಾಡಿದ ಫಲವು ಸಿದ್ದಿಸುವುದೆಂದು ಅವರು ತಿಳಿದುಕೊಂಡಿದ್ದಾರೆ. ಭಯ ಭಕ್ತಿಯಿಂದ ಪೂಜೆ ನೆರವೇರಿಸಿದರೆ ಪವಿತ್ರವಾದ ಗಂಗಾನದಿಯಲ್ಲಿ ಮುಳಗಿ ಕಾಶಿ ವಿಶ್ವೇಶ್ವರನ ದರ್ಶನ ಪಡೆದಷ್ಟು ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಕಾಡುಗೊಲ್ಲರ ಪ್ರಮುಖ ದೈವಗಳಾದ ಚಿತ್ರಲಿಂಗ, ಕಾಟಮಲಿಂಗ, ಪಾತೇಲಿಂಗ, ಕ್ಯಾತೆಲಿಂಗ ಮತ್ತು ರಾಮಲಿಂಗ ಎಂಬ ಪಂಚಲಿಂಗಗಳು ಈಶ್ವರನ ಪ್ರತಿರೂಪಗಳೆಂದು ಭಾವಿಸಿ ಶಿವರಾತ್ರಿಯಂದು ಮಹಿಳೆಯರು ಮತ್ತು ಪುರುಷರು ಎಲ್ಲರೂ ಸೇರಿ ಶಿವನ ನಾಮಸ್ಮರಣೆ ಮಾಡುತ್ತಾರೆ. ವಿಶೇಷವಾಗಿ ಶಿವನಲೀಲಾ ಜಾಲಗಳನ್ನು ಹಾಗೂ ಪಂಚಾಕ್ಷರಿ ಮಂತ್ರವನ್ನು ಹೇಳುವುದರ ಮೂಲಕ ಶಿವನ ನಾಮಸ್ಮರಣೆಯನ್ನು ಜಾಗರಣೆಯ ಮೂಲಕ ಮಾಡುತ್ತಾರೆ.

೪.೧೬.೪ ಕಾರಹುಣ್ಣಿಮೆ

ಕಾಡುಗೊಲ್ಲರಲ್ಲಿ ಈ ಆಚರಣೆಯು ವಿಶಿಷ್ಟವಾದದ್ದು. ಜೂನ್ ತಿಂಗಳನಲ್ಲಿ ಆಚರಿಸುವ ಈ ಹಬ್ಬದಲ್ಲಿ ಎತ್ತು ಹಾಗೂ ಹಸುಗಳನ್ನು ಮೆರವಣಿಗೆ ಮಾಡುತ್ತಾರೆ. ಪಶುಪಾಲನೆ ವೃತ್ತಿಯನ್ನು ಮೂಲ ವೃತ್ತಿಯನ್ನಾಗಿ ಮಾಡಿಕೊಂಡಿರುವ ಕಾಡುಗೊಲ್ಲರು ವರ್ಷಕ್ಕೆ ಒಂದು ಸಲ ಅವುಗಳ ಮೆರವಣಿಗೆ ಮಾಡುವರು. ಕಾರಹುಣ್ಣಿಮೆಯ ಸಮಯದಲ್ಲಿ ಹಟ್ಟಿಯ ಜನರೆಲ್ಲರೂ ಸೇರಿ ತಮ್ಮ ಎತ್ತು, ಹಸುಗಳನ್ನು ಶೃಂಗರಿಸುತ್ತಾರೆ. ಮತ್ತು ಅವುಗಳನ್ನು ಹಟ್ಟಿಯ ದೇವಸ್ಥಾನದಲ್ಲಿ ಸಾಯಂಕಾಲ ಮನೆಗೊಬ್ಬರಂತೆ ಕರೆದುಕೊಂಡು ಹೋಗಿ, ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿಸಿ, ಊರಿನ ಸುತ್ತಲ್ಲೆ ವೇಗವಾಗಿ ಓಡಿಸುತ್ತಾ, ಊರಿನಿಂದ ಸ್ವಲ್ಪ ದೂರವಿರುವ ಬಸವನ ದೇವಸ್ಥಾನಕ್ಕೆ ಬಂದು, ಅಲ್ಲಿ ತಮ್ಮ ರಾಸುಗಳಿಗೆ ಪೂಜೆ ಸಲ್ಲಿಸಿ, ಊರ ಹಟ್ಟಿಯ ದ್ವಾರಬಾಗಿಲಿನಲ್ಲಿಯ ಹಸಿರು ತೋರಣವನ್ನು ಹರಿದು, ಕುಣಿದು ಕುಪ್ಪಳಿಸಿ ತಮ್ಮ ರಾಸುಗಳಿಗೆ ತಯಾರಿಸಿದ ವಿಶೇಷ ಆಹಾರ ಒಂದು ಭಾಗವನ್ನು "ಎಡೆಯ" ರೂಪದಲ್ಲಿ ತಿನ್ನಿಸುತ್ತಾರೆ. ನಂತರ ಅವರು ಊಟ

[illegible]

ಮಾಡುತ್ತಾರೆ. ಪಶುಪಾಲಕರಾದ ಕಾಡುಗೊಲ್ಲರಲ್ಲಿ ತಮ್ಮ ರಾಸುಗಳು ಚೆನ್ನಾಗಿದ್ದರೆ ನಮ್ಮ ಹಟ್ಟಿಯ ಜನರೆಲ್ಲರೂ ಚೆನ್ನಾಗಿರುತ್ತಾರೆ ಅವುಗಳು ನಮಗೆ ದೇವರಿದ್ದಂತೆ ಎನ್ನುವ ನಂಬಿಕೆಯನ್ನು ಕಾಣಬಹುದು. ಕಾಡುಗೊಲ್ಲರ ಪ್ರತಿಯೊಬ್ಬರ ಮನೆಮುಂದೆ ಪಶುಸಂಪತ್ತನ್ನು ಕಾಣಬಹುದಾಗಿದೆ. ಒಟ್ಟಿನಲ್ಲಿ ಕಾರಹುಣ್ಣಿಮೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಈ ಆಚರಣೆ ಪ್ರಾದೇಶಿಕವಾಗಿ ಭಿನ್ನತೆ ಹೊಂದಿದ್ದರೂ ಆಚರಣೆಯ ಉದ್ದೇಶ ಒಂದೆಯಾಗಿರುತ್ತದೆ.

೪.೧೬.೫ ಗುಗ್ಗರಿಹಬ್ಬ

ಕಾಡುಗೊಲ್ಲರ ಸಮುದಾಯದದಲ್ಲಿ ಮಾಘಮಾಸದಲ್ಲಿ ಆಚರಿಸುವ ಕಾಳೆ ಹಬ್ಬವನ್ನು "ಗುಗ್ಗರಿ ಹಬ್ಬ" ಎಂದು ಕರೆಯುತ್ತಾರೆ. ಪುರುಷರು ಹಟ್ಟಿಯಿಂದ ಹೊರಗಡೆ ತಾತ್ಕಲಿಕವಾಗಿ ಕಳ್ಳಿಪಾಳಿಯನ್ನು ಕಟ್ಟಿ ಅದರ ಮಧ್ಯಭಾಗದಲ್ಲಿ ಹುಲ್ಲು ಗುಡಿಸಲನ್ನು ಕಟ್ಟಿ, ಅದರಲ್ಲಿ ದೇವರನ್ನು ಇಟ್ಟು ಪೂಜೆಯನ್ನು ಮಾಡುತ್ತಾರೆ. ಕಾಡುಗೊಲ್ಲರು ಬೆಳೆದ ಹೊಸ ದವಸ ಧಾನ್ಯಗಳನ್ನು ಅದರಲ್ಲೂ ಹುರುಳಿ ಮತ್ತು ಅಕ್ಕಿಯನ್ನು ಭಕ್ತಿಯಿಂದ ತಮ್ಮ ದೇವರುಗಳಿಗೆ ಅರ್ಪಿಸುತ್ತಾರೆ. ಇಲ್ಲಿ ಮಹಿಳೆಯರು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ಉಪ್ಪುಹಾಕದೆ ಗುಗ್ಗರಿಯನ್ನು ಬೇಯಿಸಿ, ದೇವರಿಗೆ ಎಡೆ ಮಾಡುತ್ತಾರೆ. ಈ ಹಬ್ಬದಲ್ಲಿ ಈರಣ್ಣ, ಚಿತ್ತಯ್ಯ, ಬಮ್ಮಯ್ಯ ದೇವರುಗಳನ್ನಿಟ್ಟು ವಿಜೃಂಭಣೆಯಿಂದ ಪೂಜಿಸುವರು. ಈ ಪೂಜೆಯಲ್ಲಿ ಮೊದಲು ಗಂಗೆಯನ್ನು ಪೂಜಿಸಿದ ನಂತರವೇ ಉಳಿದ ಕಾರ್ಯಗಳು ಆರಂಭವಾಗುತ್ತವೆ. ಶುಕ್ರವಾರ ಗುಂಡೆರಳ್ಳಕ್ಕೆ ಹೋಗಿ ಚಿಲುಮೆ ತೋಡಿ ಗಂಗೆಯ ಪೂಜೆಯಲ್ಲಿ ಕಳಸವನ್ನು ಹಿಡಿಯುತ್ತಾ ಪದಗಳನ್ನು ಹಾಡುತ್ತಾ ಬರುವ ದೃಶ್ಯವನ್ನು ನೋಡುವುದುದಕ್ಕೂ ಮತ್ತು ಕೇಳುವುದಕ್ಕೂ ಸುಂದರವಾಗಿರುತ್ತದೆ. ಶನಿವಾರ ಕುಂಬಾರರಲ್ಲಿ ಐದು ಗಡಿಗೆಗಳನ್ನು ತೆಗೆದುಕೊಂಡು ಅವುಗಳಲ್ಲಿ ನೀರು ತುಂಬಿ ಗಂಗೆ ಪೂಜೆ ಮಾಡಿ, ಗಡಿಗೆಗಳನ್ನು ತರುತ್ತಾರೆ. ರಾತ್ರಿ ಮೂರುವರೆ ಗಂಟೆಯ ಸಮಯಕ್ಕೆ ಐದು ಒಲೆಗಳನ್ನು ಹಚ್ಚಿ ಆ ಒಲೆಗಳ ಮೇಲೆ ಗಡಿಗೆಗಳನ್ನಿಟ್ಟು ಅವುಗಳಲ್ಲಿ ಕಾಳು, ಹಸುವಿನ ಹಾಲು, ಎಳೆನೀರು, ಜೇನುತುಪ್ಪ, ಬಾಳೆಹಣ್ಣು ಹಾಕಿ ಬೇಯಿಸುತ್ತಾರೆ. "ಬಾಯಿ ಬತದ" ಮೂಲಕ ಒಂದ್ಹೊತ್ತಿನಿಂದ ಒಳ ವಸ್ತ್ರವನ್ನು ಉಟ್ಟ ಪೂಜಾರಿಯ ಹೆಂಡತಿ ಗಡಿಗೆಗಳ ಮುಂದೆ ಪೂರ್ವಾಭಿಮುಖವಾಗಿ ನಿಂತು ಕೊಳ್ಳುತ್ತಾಳೆ. ಬಂದಳಿಕೆ, ಲಕ್ಕೆ ಸೊಪ್ಪಿನಿಂದ ಮೊರೆಮಾಡಿ ಅವರೆಕಾಳು ಬೆಂದ ಮೇಲೆ ದೇವರ ಪೂಜಾರಿ ಬಂದು ಆ ಮಣ್ಣಿನ ಮಡಿಕೆಗಳಿಗೆ ಪೂಜೆ ಮಾಡಿ "ಗುರುತಾಯಿ" ಕುದಿಯುವ ಮಣ್ಣಿನ ಗಡಿಗೆಯಲ್ಲಿ ಮೂರುಸಾರಿ ಕೈಯನ್ನಿಟ್ಟು ಕಾಳನ್ನು ತಿರುಗಿಸಿ ತೋರಿಸುವ ಈ ಆಚರಣೆಗೆ "ಸೌರ ಇಳಿಸುವುದು" ಎಂದು ಕರೆಯುತ್ತಾರೆ.

ಈ ಪೂಜೆಗೆ ಪಟ್ಟದ ಪೂಜಾರಿ ಹೆಂಡತಿಯಾದ ಗುರುತಾಯಿಯೇ ಪ್ರಮುಖ ಪಾತ್ರವಹಿಸುವಳು. ಈ ಪೂಜೆಯ ಸಂದರ್ಭದಲ್ಲಿ ಲೈಟ ಹಾಕುವುಂತಿಲ್ಲ. ಒಂದು ವೇಳೆ ಲೈಟನ್ನು ಬಳಸಿದರೆ ದೇವರ ಶಕ್ತಿಗೆ ಕುಂದು ಬರುತ್ತದೆ ಎನ್ನುವ ನಂಬಿಕೆ ಇದೆ. ಸೌರ ಇಳಿಸಿದ ಮಾರನೆಯ ದಿನವಾದ ಭಾನುವಾರ ಮುಂಜಾನೆ ಪೂರ್ವದಿಕ್ಕಿನಲ್ಲಿ ಶಮೀವೃಕ್ಷದ ಹತ್ತಿರ ಎಲ್ಲ ವಾದ್ಯಗಳೊಂದಿಗೆ ಪಂಪೆಯಿಟ್ಟುಕೊಂಡು ಹೋಗಿ ಸೂರ್ಯ

ನಾರಾಯಣನಿಗೆ ಬಾಳೆ ಎಲೆಯಲ್ಲಿ ಅವರೆ ಕಾಳು, ಆಕಳದ ಹಾಲು, ತುಪ್ಪ, ಬಾಳೆಹಣ್ಣುಗಳನ್ನು ಇಟ್ಟು, ಎಡೆಹಾಕಿ ಪೂಜೆಸಲ್ಲಿಸಿದ ನಂತರ ಬನ್ನಿ ಮರದ ಪಕ್ಕದಲ್ಲಿರತಕ್ಕ ನೆಲವನ್ನು ಮುಟ್ಟಿ ಪೂರ್ವಕ್ಕೆ ಮೂರು ಹೆಜ್ಜೆ, ಪಶ್ಚಿಮಕ್ಕೆ ಮೂರು ಹೆಜ್ಜೆ ಹಾಕಿ ಭೂಮಿತಾಯಿಯನ್ನು ಮುಟ್ಟಿ ಎದುರಿಸುತ್ತಿರುವ ಸೂರ್ಯನಿಗೆ ನಮಸ್ಕರಿಸುತ್ತಾ ಶಮೀ ವೃಕ್ಷದಿಂದ ವಾಪಾಸ್ಸು ಬರುವಾಗ ಭಕ್ತಾದಿಗಳು ಹರಕೆಯನ್ನು ಪೂರ್ತಿಗೊಳಿಸುತ್ತಾ ದಾರಿಗೆ ಬಿಳಿವಸ್ತ್ರಧರಿಸಿ ಅಡ್ಡಲಾಗಿ ಮಲಗಿಕೊಂಡಿರುತ್ತಾರೆ. ಆಗ ದೇವರ ಪೂಜಾರಿ ಆವೇಶದಿಂದ ಒಬ್ಬಬ್ಬರನ್ನು ತಳ್ಳುತ್ತಾ ತುಳಿಯುತ್ತಾ ಸಾಗಿ ಬರುತ್ತಾನೆ. ದೇವರನ್ನು ಹೊತ್ತುಕೊಂಡು ಯಾರನ್ನು ತುಳಿಯಾತ್ತನೆಯೋ ಅವರು ಜೀವನದಲ್ಲಿ ಯಶಸ್ವಿಯಾಗುತ್ತಾರೆ. ತುಳಿದವರಿಗೆ ಒಂದು ತೆಂಗಿನಕಾಯಿಯನ್ನು ವರದಾನವಾಗಿ ಕೊಡುತ್ತಾನೆ. ಇಷ್ಟೆಲ್ಲಾ ನಡೆದ ಮೇಲೆ ಸೂರ್ಯಮುಕ್ಕಿಗೆ ಹೋಗಿ ಬಂದ ಮೇಲೆ ದೊರೆಗಳ ಜೇಷ್ಠ ಪುತ್ರ ಗುರುತಾಯಿಗೆ ಕಾಸು ದಾಸೋಹ ಕಾರ್ಯಕ್ರಮ, ಆಕಳ ಪೂಜೆ ಮಾಡಿಸುವುದು, ದನಗಳನ್ನು ಕಾದಿರುವ 'ಕಿಲಾರಿ'ಗೆ ಕಾಸು ಹಾಕುವುದು, ದೇವರು ಎತ್ತುಗಳನ್ನು ಓಡಿಸುವುದು. ಮಹಾಮಂಗಾಳಾರತಿ ಯೊಂದಿಗೆ ಗುಗ್ಗರಿ ಹಬ್ಬದ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

೪.೧೬.೬ ಹಿರಿಯರ ಹಬ್ಬ

ಯುಗಾದಿ, ದಸರಾ ಹಬ್ಬಗಳಲ್ಲಿ ಗಂಡುಮಕ್ಕಳ ಮನೆಯಲ್ಲಿ ಹಿರಿಯರ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವನ್ನು ಅಶ್ವಿನಿ ಮಾಸದ ಮಹಾನವಮಿಯಂದೇ ಆಚರಿಸುವರು. ಸತ್ತವರು ದೇವರುಗಳ ಸಾಲಿನಲ್ಲಿ ಸೇರುತ್ತಾರೆಂದು ತಿಳಿದು ಅವರ ಮೂರ್ತಿಗಳನ್ನು ಇಲ್ಲವೇ ಫೋಟೋಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ಆದರೆ ಇತ್ತೀಚೆಗೆ ಈ ಆಚರಣೆಯಲ್ಲಿ ಬದಲಾವಣೆಯಾಗಿದೆ. ಸತ್ತವರ ಹೆಸರಿನಲ್ಲಿ ತಾಮ್ರ ಅಥವಾ ಕಂಚಿನ ತಂಬಿಗೆ ಅಥವಾ ಮಣ್ಣಿನ ಮಗಿಯನ್ನಿಟ್ಟು ಪೂಜೆ ಮಾಡುತ್ತಾರೆ. ತಾಮ್ರದ ತಂಬಿಗೆಯನ್ನು ಗಂಡೆಂದು, ಮಣ್ಣಿನ ಮಗಿಯನ್ನು ಹೆಣ್ಣೆಂದು ಭಾವಿಸಿ, ಅದರ ಕೆಳಗೆ ನಿಧಿಹಾಕಿ ಗದ್ದುಗೆ ಸಿದ್ಧಪಡಿಸಿ ತಂಬಿಗೆಯಲ್ಲಿ ನೀರು ತುಂಬಿ ಅದನ್ನು ಬಲಭಾಗದಲ್ಲಿ, ಮಗಿಯನ್ನು ಎಡಭಾಗದಲ್ಲಿಟ್ಟು ಅವುಗಳ ಕಂಠಕ್ಕೆ ಹಂಗನೂಲಿನ ಕಂಕಣ ಕಟ್ಟಿ, ಅವುಗಳ ಮೇಲೆ ಎಲೆಯನ್ನಿಟ್ಟು ತೆಂಗಿನಕಾಯಿನ್ನು ಜೋಡಿಸಿ, ಕುಂಭಕಳಶ ತಯಾರಿಸಿ, ಅದಕ್ಕೆ ಹೊಸಬಟ್ಟೆ ಮತ್ತು ಒಡವೆಗಳನ್ನು ತೊಡುಸುತ್ತಾರೆ. ಈ ಹಬ್ಬದಲ್ಲಿ ಸತ್ತ ವ್ಯಕ್ತಿಗಳು ಜೀವಂತನಾಗಿದ್ದ ಸಂದರ್ಭದಲ್ಲಿ ಬಳಸುತ್ತಿದ್ದ ಬಿಲ್ಲು, ಬಾಣ, ಬರ್ಜಿ, ಕತ್ತಿ, ಕಠಾರಿ, ಚಾಕು, ಗಂಡುಗೊಡಲಿ, ಉಳಿ, ಬಾಳ್ಯ, ಕೊಡು, ಕುಡುಗೋಲು, ಮುಂತಾದ ವಸ್ತುಗಳನ್ನಿಟ್ಟು ಎಲೆ ಅಡಿಕೆ ತಂಬಿಟ್ಟು, ತೆಂಗಿನಕಾಯಿ ಬಾಳೆಹಣ್ಣು, ಮೀಸಲು ಅಡಿಗೆಯನ್ನು ಇಟ್ಟು ಹುಗ್ಗಿ, ಅನ್ನ, ಸಾರು ಮೊದಲಾದ ಆಹಾರ ಪದಾರ್ಥವನ್ನು ಇಟ್ಟು ಎಡೆ ಮಾಡುತ್ತಾರೆ. ಅವರು ಜೀವಿತದ ಅವಧಿಯಲ್ಲಿ ಸೇವಿಸುತ್ತಿದ್ದ ಆಹಾರ ಪದಾರ್ಥಗಳಾದ ಎಲೆ, ಅಡಿಕೆ, ಬೀಡಿ, ಹೊಗೆಸೊಪ್ಪು, ಹಣ, ಬೆಳ್ಳಿ, ಬಂಗಾರ ಮುಂತಾದ ವಸ್ತುಗಳನ್ನಿಟ್ಟು ಇದರ ಜೊತೆಗೆ ಸಿಹಿತಿನಿಸನ್ನು ಇಟ್ಟು ಪೂಜಿಸುತ್ತಾರೆ.

ಈ ಹಬ್ಬ ಆಚರಿಸಿದ ರಾತ್ರಿ ಅವರು ಸತ್ತಹೋದ ವ್ಯಕ್ತಿಗಳ ಆತ್ಮಗಳು ಬಂದು ತಾಂಬೂಲ

ಸ್ವೀಕರಿಸುತ್ತಾರೆ ಎಂಬ ನಂಬಿಕೆ ಇದೆ. "ದಸರಾದಲ್ಲಿ ಹಿರಿಯರ ಹಬ್ಬ ಆಚರಿಸಿದರೆ, ಯುಗಾದಿಯಲ್ಲಿ ಸತ್ತವರ ಸಮಾಧಿಗೆ ಎಡೆ ಹಾಕುತ್ತಾರೆ." ಹೀಗೆ ನಿಧಿಯನ್ನಿಟ್ಟು ಪೂಜೆ ಮಾಡಿದ ನಂತರ ಕೆಳಗಿಟ್ಟಿದ ನಿಧಿಯನ್ನು ಕಾಡುಗೊಲ್ಲರು ದಾಸಯ್ಯನಿಗೆ ಭಿಕ್ಷೆಯಾಗಿ ಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಹಬ್ಬವು ಕಡಿಮೆಯಾಗುತ್ತಿದ್ದು ಕಾಡುಗೊಲ್ಲರಲ್ಲಿ ಮಾತ್ರ ಹಾಗೆಯೆ ಉಳಿದಿದೆ.

೪.೧೬.೭ ಆಕಳ ಹಬ್ಬ

ಈ ಹಬ್ಬವನ್ನು ಕಾಡುಗೊಲ್ಲರ ಸಮುದಾಯದವರು ಮಾತ್ರ ಆಚರಿಸುತ್ತಾರೆ. ಈ ಹಬ್ಬದ ವಿಶೇಷತೆ ಅಂದರೆ ಕುರಿ-ಮೇಕೆ, ದನಗಳನ್ನು ದೇವರ ಸುತ್ತ ಮೂರು ಸಲ ಪ್ರದಕ್ಷಿಣೆ ಹಾಕಿಸುತ್ತಾರೆ. ಇವರು ದೀಪಾವಳಿ ಸಂದರ್ಭದಲ್ಲಿ ಈ ಹಬ್ಬವನ್ನು ಆಚರಿಸುತ್ತಿದ್ದು, ಎಲ್ಲ ಹಿರಿಯರು ಸೇರಿ ತಮ್ಮ ತಮ್ಮ ಶಕ್ತಿಯಿದ್ದಷ್ಟು ಖರ್ಚು ವೆಚ್ಚಗಳನ್ನು ಹಾಕಿಕೊಂಡು ದೇವರ ಕಾರ್ಯಕ್ಕೆ ಬೇಕಾಗುವ ಸಾಮಾನುಗಳನ್ನು ತರುವರು. ಇಲ್ಲಿ ಕುಲದೇವರನ್ನು ಬುಟ್ಟಿಯಲ್ಲಿಟ್ಟು ಹೊತ್ತುಕೊಂಡು ತಮ್ಮ ದೇವರ ಸೂಚಿಸಿದ ಊರಿನ ಹೊರಗಿನ ಅಡವಿಗೆ ಹೋಗುವರು. ಇವರು ಹೋಗುವ ಮೊದಲೆ ತುಗ್ಲಿ ಕಟ್ಟಿಗೆಯಿಂದ ದೇವರು ಕೂಡುವ ಸುತ್ತ ಕಳ್ಳಿಯನ್ನು ಹಾಕಿ ಅಲ್ಲಿ ದೇವರನ್ನು ಹೊತ್ತುಕೊಂಡು ಬಂದು ಗೂಡಕಟ್ಟಿರುವ ಜಾಗದಲ್ಲಿ ಇಳಿಸುತ್ತಾ, ಅಲ್ಲಿ ಪೂಜೆಯನ್ನು ನೆರವೇರಿಸುತ್ತಾರೆ. ಪೂಜೆ ಮುಗಿಸಿದ ನಂತರ ಆಕಳುಗಳಿಗೆ ಪೂಜೆ ಮಾಡಿ, ಆರತಿಯನ್ನು ಬೆಳಗುವರು. ಹೀಗೆ ಕಾಡುಗೊಲ್ಲರು ಆಕಳು, ಕುರಿ, ಮೇಕೆಗಳನ್ನು ಸುತ್ತುವರಿಸುತ್ತಾ ತಮ್ಮ ಹಿಂಡುಗಳು ಹೆಚ್ಚಾಗಲಿ ಎಂದು ಬೇಡಿಕೊಳ್ಳುವರು. ಎಡೆ ಮಾಡಿದ ನಂತರ ಸಮುದಾಯದವರೆಲ್ಲ ಊಟ ಮಾಡಿ ದೇವರನ್ನು ಹೊತ್ತುಕೊಂಡು ಕುಣಿಯುತ್ತಾ ಬಂದರೆ, ಮಹಿಳೆಯರು ಹಾಡುಗಳನ್ನು ಹಾಡುತ್ತಾ ಬರುತ್ತಾರೆ. ಊರಿನ ಹೊರಗಡೆ ಮಾರಮ್ಮನ ಕಟ್ಟೆಯ ಮೇಲೆ ದೇವರನ್ನಿಳಿಸಿ, ಮನೆಗೆ ಬಂದು ಊಟಮಾಡಿ ಮತ್ತೆ ರಾತ್ರಿಯೆಲ್ಲಾ ಕುಣಿಯುತ್ತಾರೆ. ಮಹಿಳೆಯರು ಪದಗಳನ್ನು ಹಾಡುತ್ತಾ ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುತ್ತಾರೆ.

೪.೧೬.೮ ಮಾರಮ್ಮನ ಹಬ್ಬ

ಮೊಳಕಾಲ್ಮೂರು ತಾಲ್ಲೂಕಿನಿಂದ ೨೦ ಕಿ.ಮೀ. ದೂರದಲ್ಲಿರುವುದು ಗೌರಸಂದ್ರ ಮಾರಮ್ಮನ ಪ್ರಮುಖ ಕೇಂದ್ರ. ಈ ಹಬ್ಬವನ್ನು ಭಾದ್ರಪದ ಮಾಸದ ಮೊದಲನೆಯ ಮಂಗಳವಾರದಂದು ಹೆಚ್ಚಾಗಿ ಆಚರಿಸುವರು. ಎತ್ತಪ್ಪ, ಜುಂಜಪ್ಪ, ಮೊದಲಾದ ಸಾಂಸ್ಕೃತಿಕ ವೀರರ ಕಥೆಗಳಲ್ಲಿ ಎಷ್ಟೋ ಕಷ್ಟದ ಸಂದರ್ಭಗಳಲ್ಲಿ ಪಾರು ಮಾಡಿದ ಗೌರಸಂದ್ರ ಮಾರಕ್ಕನ ಪಾತ್ರವನ್ನು ಕಾಣಬಹುದಾಗಿದೆ. ಕಾಡುಗೊಲ್ಲರು ಈ ಹಬ್ಬವನ್ನು ಆಚರಿಸುವ ಮುಖ್ಯ ಉದ್ದೇಶವೇನೆಂದರೆ ಈ ಸಮುದಾಯದ ಮೂಲಪುರುಷರಾದ ಅಂಬೇರಾಯ ಮತ್ತು ತಂಬೇರಾಯರು ಪಶುಪಾಲನೆ ವೃತ್ತಿಯನ್ನು ಕೈಗೊಂಡು ಇವರಿಗೆ ವಯಸ್ಸಾದ ನಂತರ ಎಲ್ಲಿ ನಮ್ಮ ಜನಾಂಗ ಅಳಿಸಿ ಹೋಗುತ್ತದೆಯೊ ಎನ್ನುವ ಭಯದಿಂದ ಗೌರಸಂದ್ರ ಮಾರಮ್ಮನ ಮೊರೆ ಹೋದಾಗ ಗೌರಸಂದ್ರ ಮಾರಮ್ಮ ನಿಮ್ಮ ಕುಲಕ್ಕೆ ತಕ್ಕನಾದವನನ್ನು ಹುಡುಕಿ ನಿಮ್ಮ ರಾಸುವನ್ನು

[illegible]

[illegible]

[illegible]

ರಕ್ಷಿಸುತ್ತೇನೆ ಎಂದಾಗ ಅವರು ಮರಣವನ್ನಪ್ಪಿದರು. ಆಗ ಗೌರಸಂದ್ರ ಮಾರಮ್ಮ ಶಿವಪಾರ್ವತಿಯರನ್ನು ಕುರಿತು ತಪ್ಪಸ್ಸು ಮಾಡಿದಾಗ ಪಶುಪಾಲನೆಗೆ ತಕ್ಕನಾದ ವೀರನುಬೇಕೆನ್ನುವ ಬೇಡಿಕೆಯಿಟ್ಟು ಶಿವಪಾರ್ವತಿ ತಪಸ್ಸಿನ ಪ್ರತಿಫಲವಾಗಿ ವೀರಭದ್ರನ ಅವತಾರವಾದ ಜುಂಜಪ್ಪ ಜನ್ಮತಾಳುತ್ತಾನೆ. ಜುಂಜಪ್ಪನನ್ನು ಹುಟ್ಟಿಸಿ ಪಶುಪಾಲನೆ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಅನುವು ಮಾಡಿದ ತಾಯಿಗೆ ಪ್ರತಿವರ್ಷ ಈ ಹಬ್ಬವನ್ನು ಮಾಡುತ್ತಾರೆ.

ನವಶಕ್ತಿಗಳಲ್ಲಿ ಒಬ್ಬಳಾದ ಮಾರಮ್ಮನ ಜಾತ್ರೆಗೆ ಮೊಳಕಾಲ್ಮೂರು ತಾಲ್ಲೂಕಿನ ಸುತ್ತಮುತ್ತಲಿನ ಕಾಡುಗೊಲ್ಲರ ಸಮುದಾಯದವರು ಎತ್ತಿನ ಗಾಡಿಗಳನ್ನು ಕಟ್ಟಿಕೊಂಡು ತಮ್ಮ ಕುಟುಂಬದವರೊಂದಿಗೆ ಹೋಗಿ ಮಾರಮ್ಮನಿಗೆ ಬಲಿ ಕೊಡುತ್ತಾರೆ. ಪ್ರತಿಯೊಬ್ಬರು ಅರಿಶಿಣ, ಕುಂಕುಮ ಇಟ್ಟು ಪೂಜೆಮಾಡುತ್ತಾರೆ. ಇಲ್ಲಿ ಮಕ್ಕಳಿಗೆ ದಡಾರ, ಸಿಡುಬು, ತೊಟ್ಟು, ಅಮ್ಮ, ಮೊದಲಾದ ರೋಗಗಳು ಬಂದಾಗ, ಈ ರೋಗದ ರಕ್ಷಣೆಗಾಗಿ ಮಾರಮ್ಮನಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ರೋಗಗಳು ವಾಸಿಯಾದಾಗ ಮಾರೆಮ್ಮನ ಗುಡಿ ಹತ್ತಿರ ಬೇವಿನ ಸೀರೆ ಉಟ್ಟು, ಗೋಧಿಯ ಹಿಟ್ಟಿನಿಂದ ಆರತಿ ಮಾಡಿ, ತಲೆ ಮೇಲೆ ಹೊತ್ತುಕೊಂಡು ಪ್ರದಕ್ಷಿಣೆ ಹಾಕುತ್ತಾರೆ. ಪೂಜೆ ಮತ್ತು ಆಚರಣೆಯಲ್ಲಿ ಬಹಳ ನೇಮ ನಿತ್ಯದಿಂದಿರಬೇಕು. ಇದಕ್ಕೆ ತಪ್ಪದರೆ ಮತ್ತೆ ಕೇಡನ್ನು ಮಾರಮ್ಮ ಉಂಟುಮಾಡುತ್ತಾಳೆಂಬ ಭಯ ಇವರಲ್ಲಿದೆ.

ಕಾಡುಗೊಲ್ಲರ ಸಮುದಾಯದ ಪುರುಷರು ವರ್ಷಕ್ಕೊಂದು ಸಲ ಆಚರಿಸುವ ಈ ಹಬ್ಬದಲ್ಲಿ ಎಲ್ಲರೂ ಕುರಿ-ಮೇಕೆಗಳನ್ನು ಬಲಿ ಕೊಡುತ್ತಾರೆ. ಎಂತಹ ಬಡವರಾದರೂ ಕೂಡ ಮಾರೆಮ್ಮನ ಹಬ್ಬಕ್ಕೆ ಕುರಿಗಳ ಬೇಟೆ ಕೊಡುವ ಸಂಪ್ರದಾಯವಿದೆ.

ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರದೇಶಗಳಾದ ಚೆಳ್ಳಿಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕು ಪ್ರದೇಶಗಳಲ್ಲಿಯ ಸಮುದಾಯದ ತಿಳುವಳಿಕೆದಾರರನ್ನು ಸಂದರ್ಶಿಸಿದಾಗ ಪ್ರತಿವರ್ಷವೂ ಬಲಿಕೊಡುವುದು ಯಾಕೆ? ಇದರಿಂದ ನಿಮ್ಮ ಉಳಿತಾಯ ಮಾಡಿದ ಹಣ ಪೋಲಾಗುವುದಿಲ್ಲವೊ ಎಂದು ಕೇಳಿದಾಗ ಮಾರೆಮ್ಮ ನಮ್ಮ ತಾಯಿ, ಅವಳು ಚೆನ್ನಾಗಿದ್ದರೆ ನಮಗೆ ಸುಖ-ಶಾಂತಿ ಇರುತ್ತದೆ. ಆದುದರಿಂದ ಪ್ರತಿವರ್ಷ ಬಲಿಕೊಡುತ್ತೇವೆ. ಬಲಿಕೊಡದ್ದಿದರೆ ನಮ್ಮ ತಾಯಿ ಸಿಟ್ಟುಗೆದ್ದು ಕುರಿಗಳಿಗೆ ಪಶುಗಳಿಗೆ ರೋಗಗಳು ಬಂದು ಸಾಯುತ್ತವೆ. ಅದರ ಜೊತೆಗೆ ಬರ ಬಂದು ಕೃಷಿಯಲ್ಲಿಯೂ ಕೂಡ ನಷ್ಟವನ್ನು ಅನುಭವಿಸುತ್ತೇವೆ ಎಂದು ಚಿತ್ರಯ್ಯ ಗುಂಡಣ್ಣ ಅವರು ಅಭಿಪ್ರಾಯ ಪಡುತ್ತಾರೆ.

ಕಾಡುಗೊಲ್ಲರು ತಮ್ಮಲ್ಲಿ ಹಣವಿರದಿದ್ದರೂ ಕೂಡ ದಲ್ಲಾಳಿಗಳ, ಊರಿನ ಮುಖ್ಯಸ್ಥರ ಹತ್ತಿರ ಸಾಲ ತೆಗೆದುಕೊಂಡು ಈ ಹಬ್ಬವನ್ನು ಆಚರಿಸುತ್ತಾರೆ. ಆಚರಣೆಯಲ್ಲಿ ಆದಾಯದ ಅಸಮಾನತೆ ಎದ್ದು ಕಾಣುತ್ತಿದ್ದು ಶ್ರೀಮಂತರು ಬಹಳ ವಿಜೃಂಭಣೆಯಿಂದ ಆಚರಿಸಿದರೆ, ಬಡವರು ತಮ್ಮಲ್ಲಿರತಕ್ಕಂತ ಆದಾಯದ ಮಿತಿಯೊಳಗೆ ಈ ಹಬ್ಬವನ್ನು ಆಚರಿಸುತ್ತಾರೆ. ಒಟ್ಟಾರೆಯಾಗಿ ಕಾಡುಗೊಲ್ಲರಲ್ಲಿ ಆಚರಿಸುವ ಪ್ರಮುಖ ಹಬ್ಬಗಳಲ್ಲಿ

ಅತಿಪ್ರಮುಖವಾದ ಹಬ್ಬ ಇದಾಗಿದ್ದು, ಎಂತಹ ಬಡವರಾದರೂ ಈ ಹಬ್ಬ ಆಚರಿಸುವುದನ್ನು ಕಾಣಬಹುದಾಗಿದೆ. ಇವರು ಆಚರಿಸುವ ಹಬ್ಬವನ್ನು ನೋಡಿದಾಗ ಬೇಟೆ ವೃತ್ತಿಯ ನೆನಪು ಮರಕಳಿಸುತ್ತದೆ. ಗೌರಮ್ಮನಲ್ಲಿ ನಮ್ಮ ಆರ್ಥಿಕ-ಸ್ಥಿತಿ, ಬಡತನ ಸುಧಾರಿಸಲಿ ಎಂದು ಕೇಳಿಕೊಳ್ಳುವಾಗ ಕಾಡುಗೊಲ್ಲರಲ್ಲಿಯ ಮುಗ್ಧತೆಯನ್ನು ಕಾಣುತ್ತೇವೆ.

೪.೧೬.೯ ಕರಿಯಮ್ಮನ ಹಳ್ಳಿ ಮಾರಮ್ಮ

ನಾಗಸಮುದ್ರದ ಗ್ರಾಮದ ಕಾಡುಗೊಲ್ಲರ ಹಟ್ಟಿಯ ಜನರು ಆಚರಿಸುವಂತಹ ಜಾತ್ರೆ ಇದಾಗಿದೆ. ಇದು ಮೊಳಕಾಲ್ಮೂರು ತಾಲ್ಲೂಕಿನಿಂದ ೧೮ ಕಿ.ಮೀ. ಅಂತರದಲ್ಲಿದೆ. ಈ ಹಟ್ಟಿಯ ಕಾಡುಗೊಲ್ಲರು ಮಾರೆಮ್ಮ ದೇವಿಗೆ ಹೊಸ ಸೀರೆ, ಕುಂಕುಮ, ಬುಕ್ಕಿಟ್ಟು, ಹಸಿರು ಬಳೆ, ಹೊಂಬಾಳೆ, ಬೆಲ್ಲ, ಹೊಸ ಬಿದಿರಿನ ಪುಟ್ಟಿ, ಹೊಸಗಡಿಗೆ, ಧೂಪಕ್ಕೆ ಬೇಕಾಗುವ ಸಾಮ್ರಾಣಿ ಕಾಯಿ ಕರ್ಪೂರವನ್ನು ತೆಗೆದುಕೊಡುತ್ತಾರೆ. ತಮ್ಮ ತಮ್ಮ ಮನೆಗಳಿಗೆ ಸುಣ್ಣ ಬಳೆದು, ಗುಡಿಸಲುಗಳನ್ನು ಕೆಮ್ಮಣ್ಣಿನಿಂದ ಸಾರಿಸಿ, ಸ್ವಚ್ಛಗೊಳಿಸಿ ಪೂಜೆಗೆ ಸಿದ್ಧರಾಗುತ್ತಾರೆ. ಊರಿನಿಂದ ದಕ್ಷಿಣ ದಿಕ್ಕಿನ ಕೆರೆ ಅಂಗಳದಲ್ಲಿ ಮುತ್ತೈದೆಯರು ಹಾಡುಗಳನ್ನು ಹಾಡುತ್ತಾ ಪೂಜಾರಿ ಮತ್ತು ಹಟ್ಟಿಯ ಜನರೆಲ್ಲರೂ ಸೇರಿ ಚಿಲುಮೆಯನ್ನು ತೋಡುವರು. ದೇವಿಯನ್ನು ಕೂಡ್ರಿಸಲಿಕ್ಕೆ ಮಣೇವು ಹಾಕಿ, ಕರಿಯ ಕಂಬಳಿ ಮೇಲೆ ಗದ್ದುಗೆಯನ್ನು ಹಾಕಿ ನೂರಾ ಒಂದು ವಿಳ್ಳೆದೆಲೆ, ನೂರಾ ಒಂದು ಅಡಿಕೆ, ನೂರಾ ಒಂದು ಹಸಿಟ್ಟಿ, ನೂರಾ ಒಂದು ಚಿಗಳಿ, ತಂಬಿಟ್ಟು, ತೆಂಗಿನಕಾಯಿ ಇಟ್ಟು ಪೂಜೆಮಾಡಿ, ಹೊಲಗಳಿಗೆ ಅವರನ್ನು ಕರೆದುಕೊಂಡು ಹೋಗಿ ಗಂಗಮ್ಮ ಮತ್ತು ಮಾರೆಮ್ಮಳನ್ನು ಕರೆದುಕೊಂಡು ಬರುತ್ತಾರೆ. ಗಂಗಮ್ಮ ಮತ್ತು ಮಾರೆಮ್ಮನನ್ನು ಅರ್ಧದಾರಿಗೆ ಕರೆದುಕೊಂಡು ಬಂದು "ಧೂಳುಮರಿ" ಎಂದು ಕರೆಯುವ ಕುರಿಮರಿಯೊಂದನ್ನು ದೇವಿಗೆ ಅರ್ಪಿಸಿ, ಅದನ್ನು ಮಧ್ಯಭಾಗದಲ್ಲಿ ಕಡಿಯುವರು. ಪುರುಷರೆಲ್ಲರೂ ಕೇಕೆಹಾಕುತ್ತಾ ಕುಣಿಯುವರು. ಕುರಿ ಮಾಂಸವನ್ನು ಪಂಜು ಹಿಡಿದ ಮಡಿವಾಳರಿಗೆ ಕೊಡುತ್ತಾರೆ. ಪುರುಷರು ಕೇಕೆ ಹಾಕುತ್ತಾ ಮತ್ತು ಮಹಿಳೆಯರು ಹಾಡುಗಳನ್ನು ಹಾಡುತ್ತಾ ದೇವಿ ಮತ್ತು ಗಂಗಮ್ಮನನ್ನು ಹಟ್ಟಿಗೆ ಕರೆದುಕೊಂಡು ಬಂದಾಗ ಈರುಳ್ಳಿ ಮತ್ತು ಕರಿಕುಂಬಳ ಕಾಯಿಯಿಂದ ಪುನಃ ನಿವಾಳಿಸಿ ದೇವಿಯನ್ನು ಒಳಗಡೆ ಕರೆದುಕೊಳ್ಳುವರು.

೪.೧೭ ಜಾತ್ರೆಗಳು

ಆಧುನಿಕತೆಯ ಪ್ರಭಾವ ಮತ್ತು ಆರ್ಥಿಕ ಸ್ಥಿತಿಗತಿಗಳ ಭದ್ರತೆಯ ಹಿನ್ನೆಲೆಯಲ್ಲಿ ಕಾಡುಗೊಲ್ಲರು ಜಾತ್ರೆ, ಹಬ್ಬಗಳನ್ನು ಇತ್ತೀಚೆಗೆ ಬಹಳ ಆಡಂಬರದಲ್ಲಿ ನಡೆಸುತ್ತಿದ್ದಾರೆ. ಸಾಂಸ್ಕೃತಿಕವಾಗಿ ಶ್ರೀಮಂತರಾಗಿರುವ ಕಾಡುಗೊಲ್ಲರು ದೈವದ ಬಗ್ಗೆ ಅತಿಯಾದ ನಂಬಿಕೆಯನ್ನಿಟ್ಟಿರುವರು. ಇವರು ದೈವಗಳ ಬಗ್ಗೆ ಎಷ್ಟು ನಂಬಿಕೆಯಿಟ್ಟಿರವರು ಎನ್ನುವುದಕ್ಕೆ ಒಂದು ಉದಾಹರಣೆ, ಹೆರಿಗೆಯಾದ ಸಂದರ್ಭದಲ್ಲಿ ತಮ್ಮ ದೇವರುಗಳಿಗೆ ಮೈಲಿಗೆ ಅಥವಾ ಸೂತಕ ತಟ್ಟಬಹುದು ಎಂಬ ಭಯದಿಂದ ಗರ್ಭಿಣಿ, ಬಾಣಂತಿ ಹಾಗೂ ಋತುಮತಿಯಾದ ಹೆಣ್ಣನ್ನು ಊರಿನ ಹೊರಗೆ ಇಡುತ್ತಾರೆ. ದೈವಗಳ ಮೇಲೆ ಅಪಾರ ನಂಬಿಕೆಯುಳ್ಳ ಇವರು ಜಾತ್ರೆಗಳನ್ನು,

[illegible]

[illegible]

[illegible]

ಹಬ್ಬಗಳನ್ನು ಭಕ್ತಿಯಿಂದ ಪೂಜೆ ಮಾಡುವವರು. ಮತ್ತು ಅದಕ್ಕಾಗಿ ಹಣವನ್ನು ಹೆಚ್ಚಾಗಿ ವ್ಯಯಮಾಡುತ್ತಾರೆ. ವಿಶೇಷವಾಗಿ ಮಾರಿ ಹಬ್ಬವನ್ನು ಸಾಲ ಮಾಡಿಯಾದರೂ ವಿಜೃಂಭಣೆಯಿಂದ ಆಚರಿಸುವುದನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ. ಎಂತಹ ಬಡವನಿದ್ದರೂ ಈ ಹಬ್ಬಕ್ಕೆ ಕುರಿ ಬಲಿ ಕೊಡಲೇಬೇಕು.

ಕಾಡುಗೊಲ್ಲರು ನಡೆಸುವ ಹಬ್ಬ, ಜಾತ್ರೆಗಳನ್ನು ಗಮನಿಸಿ ಹೇಳುವುದಾದರೆ ಕಾಡುಗೊಲ್ಲರು ತಮ್ಮ ಆದಾಯಕ್ಕೆ ಮೀರಿ ಖರ್ಚು ಮಾಡುತ್ತಾರೆ. ಹೀಗಾಗಿ ಕಾಡುಗೊಲ್ಲರು ಸಾಮಾನ್ಯವಾಗಿ ಉಳಿತಾಯ ಮಾಡುತ್ತಾರೆ ಎಂಬ ಮಾತು ಬಹಳ ದೂರ ಉಳಿಯಿತು. ಕಾಡುಗೊಲ್ಲರು ಮಾರೆಮ್ಮನಿಗೆ ಕುರಿಯನ್ನು ಬಲಿಕೊಡಲು ಸಾಲಮಾಡಿ ಖರೀದಿಸಿ ಜಾತ್ರೆ ನೆರವೇರಿಸುವರು. ಹೀಗೆ ಮಾಡುವುದರಿಂದ ಒಂದು ಕಡೆ ಅವರಿಗೆ ಖುಷಿ ಕೊಟ್ಟರೆ ಇನ್ನೊಂದು ಕಡೆ ಬಡತನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗಿ ಅದರಿಂದ ಅವರಿಗೆ ಚೇತರಿಸಿ ಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೆ ಹೇಳಬೇಕಾಗುತ್ತದೆ. ಕಾಡುಗೊಲ್ಲರಲ್ಲಿ ೧೦೦ಕ್ಕೆ ೭೫ರಷ್ಟು ಕುಟುಂಬಗಳು ಬಡತನದಲ್ಲಿಯೆ ಹುಟ್ಟಿ ಬಡತನದಲ್ಲಿಯೆ ಸಾಯುತ್ತಿದ್ದಾರೆಂದರೆ ತಪ್ಪಾಗಲಾರದು. ಉಳಿದ ೨೫ರಷ್ಟು ಕುಟುಂಬಗಳಲ್ಲಿ ಮಧ್ಯಮ ಮತ್ತು ಶ್ರೀಮಂತ ವರ್ಗದ ಕುಟುಂಬಗಳಿವೆ.

ಜಾತ್ರೆಗಳ ಆಚರಣೆ ಕಾಡುಗೊಲ್ಲರಲ್ಲಿ ಇದೊಂದು ಸಾಮೂಹಿಕ ಕ್ರಿಯೆಯಾಗಿ ಆಚರಿಸಲ್ಪಡುತ್ತದೆ. ಶ್ರಮವಹಿಸಿ ದುಡಿದು ವಿರಾಮದ ಸಂದರ್ಭದಲ್ಲಿ ಜಾತ್ರೆಗಳನ್ನು ಆಚರಿಸುವುದನ್ನು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಾಣುತ್ತೇವೆ. ಕಾಡುಗೊಲ್ಲರು ದುಡಿದ ಹಣವನ್ನು ಹೆಚ್ಚಾಗಿ ಇದರಲ್ಲಿಯೆ ತೊಡಗಿಸುವರು. ಈ ಹಿಂದೆಯೂ ಇಂತಹ ಸಂಪ್ರದಾಯಗಳು ಹೆಚ್ಚಾಗಿದ್ದು, ಜಾತ್ರೆಗಳನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಿದ್ದರು.

ಪ್ರತಿಯೊಂದು ಸಮುದಾಯಕ್ಕೆ ತನ್ನದೇ ಆದ ದೈವಗಳಿದ್ದು ಅವುಗಳನ್ನು ಪೂಜಿಸುವುದು, ಆರಾಧಿಸುವುದರಲ್ಲಿ ಅನೇಕ ಭಿನ್ನತೆಗಳಿವೆ. ಭಯಾನಕ ಘಟನೆಗಳಿಂದ ರಕ್ಷಣೆ ಪಡೆಯುವುದಕ್ಕೋಸ್ಕರ ಆದಿಮಾನವನಿಂದಲೆ ಆಚರಣೆಗಳು ಹುಟ್ಟಿಕೊಂಡವು. ಮತ್ತು ತಮ್ಮ ಆರಾಧ್ಯ ದೈವಗಳ ಆರಾಧನೆಯ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದರು. ಈ ಪರಂಪರೆ ಇಂದಿಗೂ ಉಳಿದುಕೊಂಡು ಬಂದಿದೆ.

ಡಾ. ಸಿದ್ಧಲಿಂಗಯ್ಯನವರು "ಮನುಷ್ಯನ ಆರ್ಥಿಕ ಚಟುವಟಿಕೆ ಆತನ ಸಂಸ್ಕೃತಿ ನಿರ್ಮಾಣದಲ್ಲಿ ಅಪೂರ್ವವಾದ ಪಾತ್ರವಹಿಸುತ್ತದೆ. ಹುಟ್ಟನಿಂದ ಇಲ್ಲಿಯವರೆಗೆ ಈ ಮಾನವ ಜೀವಿ ಹಲವು ಬಗೆಯ ಆರ್ಥಿಕ ಚಟುವಟಿಕೆಗಳ ಹಂತಗಳನ್ನು ದಾಟಿ ಬಂದಿದ್ದಾನೆ. ಈ ಎಲ್ಲಾ ಹಂತಗಳಲ್ಲಿ ಅವನು ಉಳಿವಿಗಾಗಿ ಹೋರಾಡಿದ, ಆಹಾರ ಗಳಿಕೆಯೇ ಅವನ ಮುಖ್ಯ ಕಾಳಜಿಯಾಗಿತ್ತು. ಇದಕ್ಕಾಗಿ ಮನುಷ್ಯ ಅನುಸರಿಸಿದ ತಂತ್ರ, ಬಳಸಿದ ಉಪಕರಣಗಳ ಚರಿತ್ರೆ ಕುತೂಹಲಕಾರಿಯಾದದ್ದು, ಈ ಚಟುವಟಿಕೆಯೆ ಅವನ ಆಲೋಚನೆಯನ್ನು ರೂಪಿಸಿತು. ಮನುಷ್ಯನ ವರ್ತನಾ ವಿನ್ಯಾಸದ ಮೂಲವೆ ಇದು ಎಂದರೆ ತಪ್ಪಾಗಲಾರದು. ಐದು ಬಗೆಯ ಆರ್ಥಿಕ ಚಟುವಟಿಕೆಗಳಲ್ಲಿ ಮಾನವ ತನ್ನನ್ನು ತೊಡಗಿಸಿಕೊಂಡಿದ್ದಾನೆ. ಅವು ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ ಮತ್ತು ಕೈಗಾರಿಕೆ ಕೊನೆಯ ಹಂತದಲ್ಲಿ ಇರುವ ಮನುಷ್ಯ ಮೊದಲ ನಾಲ್ಕು

ಘಟ್ಟಗಳನ್ನು ದಾಟಿ ಬಂದಿರಲೇಬೇಕು. ಇಂದು ಪ್ರಪಂಚದ ನಾನಾ ಕಡೆಗಳಲ್ಲಿ ಆಹಾರ ಸಂಗ್ರಹಣೆಯ ಹಂತದಲ್ಲೇ ನಿಂತು ಹೋಗಿರುವ ಜನರನ್ನು ಕಾಣಲು ಸಾಧ್ಯವಿದೆ. ಕೆಲವರು ಬೇಟೆಯ ಹಂತವನ್ನು ಇನ್ನೂ ದಾಟಿರುವುದು ಕಂಡುಬಂದರೆ ನೀಲಗಿರಿಯ ತೋಡರು ಪಶುಪಾಲನೆಯನ್ನು ಮಾಡುತ್ತಾ ಕೃಷಿಗೆ ಕಾಲಿಟ್ಟಿಲ್ಲ. ದೇವತೆಗಳ ಈ ಆಚರಣೆಗಳು ಹುಟ್ಟಿದ್ದು ಈ ಚಟುವಟಿಕೆಗಳ ಹಿನ್ನೆಲೆಯಲ್ಲೆ. ಆಹಾರ ಸಂಗ್ರಹಣೆಯ ಹಂತದ ಅನೇಕ ಆಚರಣೆಗಳು ಇನ್ನೂ ವಿಚಿತ್ರ ರೂಪದಲ್ಲಿ ನಮ್ಮ ನಡುವೆ ಸಿಗುತ್ತವೆ. ಇಂದಿಗೂ ಇವರಲ್ಲಿ ಬಿಲ್ಲುಬಾಣ ಹಿಡಿದು ಕಾಡುಪ್ರಾಣಿಗಳ ಮೇಲೆ ಸವಾರಿ ಮಾಡುವ ದೇವತೆಗಳು ಹುಟ್ಟಿದ್ದು ಬೇಟೆಯ ಕಾಲದಲ್ಲಿ. ಪಶುಪಾಲನೆಯ ಹಂತದ ದೇವತೆಗಳು ದನಕಾಯುವ ವೃತ್ತಿಯನ್ನು ಪ್ರಧಾನವಾಗಿ ಆರಿಸಿಕೊಂಡಿವೆ. ಮನುಷ್ಯ ಈ ಬೆಟ್ಟದಲ್ಲಿ ಇದ್ದಾಗಲೇ ಆಕಾಶ ದೇವತೆಗಳು ವಾಯುಮಂಡಲ ಹುಟ್ಟಿದ್ದು".[೮]

೪.೧೭.೧ ಪಾತೇದೇವರ ಜಾತ್ರೆ

ಈ ಜಾತ್ರೆಯು ಹಿರಿಯೂರು ತಾಲ್ಲೂಕಿನ ಕೊಡಲಹಳ್ಳಿಯಲ್ಲಿ ನಡೆಯುತ್ತದೆ. ಪಾತದೇವರ ಜಾತ್ರೆಯು ಐದು ಅಥವಾ ಹತ್ತು ವರ್ಷಗಳಿಗೊಮ್ಮೆ ನಡೆಯುತ್ತದೆ. ಈ ಜಾತ್ರೆಯು ಸಾಮಾನ್ಯವಾದ ಜಾತ್ರೆಯಂತಿರದೆ, ಭಕ್ತರು ಹರಕೆ ಹೊತ್ತಾಗ ಮಾತ್ರ ನಡೆಯುತ್ತದೆ. ಮೂರು ದೇವತೆಗಳ ಸಂಗಮದಿಂದ ಜಾತ್ರೆ ನಡೆಯುತ್ತದೆ. ಮೂಡಲ ಗೊಲ್ಲರಹಳ್ಳಿ ಅಮ್ಮ, ಬೇಡರಹಳ್ಳಿ ತಿಮ್ಮಪ್ಪ ಮತ್ತು ನಂದಿಹಳ್ಳಿ ರಂಗಪ್ಪ ಇವರ ಸಂಗಮವನ್ನೇ ಜಾತ್ರೆಯಾಗಿ ಆಚರಿಸುವರು. ಈ ದೈವಗಳನ್ನು ಪೂಜಿಸುವ ಪೂಜಾರಿಗಳು ಹಾಗೂ ವಂಶಸ್ಥರು ಕಡ್ಡಾಯವಾಗಿ ಜಾತ್ರೆಯಲ್ಲಿ ಪಾಲ್ಗೊಂಡು ಎಲ್ಲ ವ್ಯವಸ್ಥೆಯನ್ನು ಮಾಡುವ ಪರಂಪರೆ ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಮೊದಲು ಪಾತೇದೇವರನ್ನು ದೇವಸ್ಥಾನದಿಂದ ಹೊರಡಿಸುವ ಕಾರ್ಯಕ್ರಮ ನಡೆಯುತ್ತದೆ. ಪಾತೇದೇವರು ಲಿಂಗದ ರೂಪದಲ್ಲಿದ್ದು ಅದನ್ನು ಲೋಹದ ಅಥವಾ ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟಿರುತ್ತಾರೆ. ಇದನ್ನು ಶಿವನ ಮೂರನೆಯ ಕಣ್ಣು ಎಂದು ಪೂಜಿಸುತ್ತಾರೆ ಎಂಬ ಕಾರಣದಿಂದಲೆ ಪೆಟ್ಟಿಗೆಯ ಮುಚ್ಚಳವನ್ನು ಯಾರು ತೆಗೆಯದೆ ಭಯಭಕ್ತಿಗಳಿಂದ ಪ್ರತಿನಿತ್ಯ ಪೂಜಿಸುವರು. ಜಾತ್ರೆ ನಡೆಯುವ ಆರು ದಿನಗಳಲ್ಲಿಯೂ ಪೂಜೆ ನಡೆಯುತ್ತದೆ. ಕಾಡುಗೊಲ್ಲರ ನಂಬಿಕೆಯಂತೆ ಈ ದೈವವು ಅಗ್ನಿಸ್ವರೂಪದ್ದು. ಶಿವರಾತ್ರಿಯ ಸಂದರ್ಭದಲ್ಲಿ ಜಾತ್ರೆ ನಡೆಸುವರು.

ಹರಕೆ ಹೊತ್ತವರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹರಕೆಯನ್ನು ತೀರಿಸುತ್ತಾರೆ. ಹರಕೆಯನ್ನು ಪಾತೇದೇವರು ದೇವಸ್ಥಾನದಿಂದ ಹೊರಗೆ ಬಂದಾಗ ಮಾತ್ರ ನೇರವೇರಿಸಬೇಕೆಂಬ ನಿಯಮವಿದೆ. ಪಾತೇದೇವರು ಹೊರಗೆ ಬಂದ ಸಂದರ್ಭದಲ್ಲಿ ಹೆಂಗಸರು ಮತ್ತು ಚಿಕ್ಕಮಕ್ಕಳು ಮನೆಯಿಂದ ಹೊರಗಡೆ ಬರಬಾರದೆಂಬ ನಿಯಮವಿದೆ. ಕಾರಣ ಈಗಾಗಲೇ ತಿಳಿಸಿರುವಂತೆ ಪಾತೇದೇವರು ಅಗ್ನಿಯ ಸ್ವರೂಪಿ. ಈ ದೇವರನ್ನು ದೇವಸ್ಥಾನದಿಂದ ಹೊರಗೆ ತರುವುದಕ್ಕಿಂತ ಮುನ್ನ ಓಕಳಿಯನ್ನು ಮತ್ತು ನಿಂಬೆಹಣ್ಣನ್ನು ಎರಚುತ್ತಾರೆ. ನಂತರ ತೆಂಗಿನಕಾಯಿಯನ್ನು ಒಡೆಯಲಾಗುತ್ತದೆ. ಇಲ್ಲಿ ಪೂಜಾರಿಯೆಂದರೆ ಅವನು ದೇವರ ಮನುಷ್ಯ. ಕಾಡುಗೊಲ್ಲರ ಭಾಷೆಯಲ್ಲಿ ಅವನು ಪೋತರಾಜನಾಗಿರುತ್ತಾನೆ. ಉಳಿದ ಜನರು ಪಾತೇದವರು ಹೊರಗೆ

[illegible]

[illegible]

[illegible]

ಬರುವಾಗ ತಲೆ ತಗ್ಗಿಸಿಕೊಂಡೆ ನಿಂತಿರುತ್ತಾರೆ. ಈ ಆಚರಣೆ ಐದು ದಿನಗಳು ನಡೆದು ಆರನೆಯ ದಿನ ಗಂಡಸರು ಮಾತ್ರ ಪಾದೇದೇವರನ್ನು ಕ್ರಮಬದ್ಧವಾಗಿ ಪೂಜಿಸಿ ಗುಡಿಯೊಳಗೆ ಸೇರಿಸುವರು. ಜಾತ್ರೆಯಲ್ಲಿ ಭಾಗವಹಿಸಿದ ತಿಮ್ಮಪ್ಪ, ರಂಗಪ್ಪ ದೇವರುಗಳನ್ನು ಆಯಾ ಊರುಗಳಿಗೆ ಹಿಂದಿರುಗಿಸುತ್ತಾರೆ. ಇದರೊಂದಿಗೆ ಜಾತ್ರೆ ಮುಕ್ತಾಯವಾಗುತ್ತದೆ.

೪.೧೭.೨. ಗಂಗಸಮುದ್ರ

ಗಂಗಸಮುದ್ರ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಿಂದ ೨೦ ಕಿ.ಮಿ. ದೂರದಲ್ಲಿದೆ. ಕಾರ್ತಿಕ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ೧೫ ದಿನಗಳ ಹಿಂದಿನ ದಿನಗಳಲ್ಲಿ ಜಾಂಡೇವು ಎತ್ತುತ್ತಾ ಮೊದಲನೆಯ ದಿನ ಬಾಳೆದಿಂಡಿನ ಅಲಂಕಾರ ಮಾಡಿ, ಎರಡನೆಯ ದಿನದಲ್ಲಿ ಹಿರಿಯರನ್ನು ನೆನೆಯುತ್ತಾ ಅನ್ನಸಂತರ್ಪಣೆ ಮಾಡುತ್ತಾ ಮೂರನೆಯ ದಿನ ಜುಂಜಪ್ಪನ ಹೆಸರಿನಲ್ಲಿ ಪಾನಕದ ಗಾಡಿ ಹೂಡುತ್ತಾ ಹೆಸರಿಗೆ ಬಿಟ್ಟ ಟಗರನ್ನು ಬಲಿಕೊಡುವರು.

೪.೧೭.೩ ಗಂಜಿಗಟ್ಟೆ ಕಾಳಿಹಬ್ಬ

ಗಂಜಿಕಟ್ಟೆ ಕಾಳಿಹಬ್ಬದಲ್ಲಿ ಈ ದೇವಿಗೆ ವಿಶೇಷವಾದ ಪೂಜೆ ನಡೆಯುತ್ತದೆ. ಇದು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ರಸ್ತೆಯಲ್ಲಿರುವ ೧೨ ಕಿ.ಮಿ. ದೂರದಲ್ಲಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇವರ ಹಟ್ಟಿ ಊರಿನ ಹೊರಗಡೆ ಇರದೆ ಊರೊಳಗೆ ಇದ್ದು ಇಲ್ಲಿ ಆಚರಿಸಲ್ಪಡುವ ಆಚರಣೆ, ಸಂಪ್ರದಾಯಗಳು ಸರಳವಾಗಿವೆ. ಹೆರಿಗೆ, ಋತುಮತಿ ಸಂದರ್ಭದಲ್ಲಿ ಸೂತಕವಾದವರಿಗೆ ಅವರನ್ನು ಐನೂರು ಗದ್ದಿಗೆಯ ಮೇಲೆ ಕೂರಿಸಿ ವಿಭೂತಿ ಹಚ್ಚುವುದರ ಮೂಲಕ ಅವರ ಸೂತಕವನ್ನು ಕಳೆಯುತ್ತಾರೆ. ಕಾಳಿ ಹಬ್ಬದಲ್ಲಿ ಜಾತ್ರೆ ನಡೆಯುತ್ತದೆ. ಅವರೆ, ತೊಗರಿ ಹಾಗೂ ಕಡ್ಲೆಕಾಳು ತಂದು ದೇವಸ್ಥಾನದಲ್ಲಿ ಹಾಕುತ್ತಾರೆ. ಈ ಕಾಳುಗಳನ್ನು ನೈವೆದ್ಯವನ್ನಾಗಿ ಹಂಚುತ್ತಾರೆ. ಇಲ್ಲಿ ವಿಶೇಷವಾಗಿ ಎತ್ತಪ್ಪನ ಬುಟ್ಟಿಯಲ್ಲಿರುವ ಈಶ್ವರ ಲಿಂಗ, ಬೆಳ್ಳಿಕಟ್ಟುಹಾಕಿದ ಎರಡು ವಿಭೂತಿ, ಬೆಳ್ಳಿನಾಗರ, ಇವುಗಳನ್ನು ಹೊಳೆಯಲ್ಲಿ ಶುದ್ಧೀಕರಿಸುತ್ತಾರೆ.

೪.೧೭.೪ ಜಂಗಮರಹಳ್ಳಿ

ಜಂಗಮರಹಳ್ಳಿ ಪಾವಗಡ ತಾಲ್ಲೂಕಿನಿಂದ ೩೦ ಕಿ.ಮೀ. ಅಂತರದಲ್ಲಿದ್ದು, ಇಲ್ಲಿಯ ಗುಡಿಯು ವೃತ್ತಾಕಾರದಲ್ಲಿದ್ದ. ಕಲ್ಲಗಡಿಗೆ, ಹುಲ್ಲಿನ ಹೊದಿಕೆ ಹಾಕುತ್ತಾರೆ. ಎತ್ತಯ್ಯನನ್ನು 'ಜಲನಿಧಿಗೆ' ಹೊರಡಿಸುವ ಆಚರಣೆಯನ್ನು ಇಲ್ಲಿ ಮಾಡುತ್ತಾರೆ. ಇದಕ್ಕೆ ದೊಡ್ಡ ದೇವರು ಮಾಡೊದು ಎಂದು ಹೇಳುತ್ತಾರೆ. ೫-೬ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಪ್ರತಿವರ್ಷ ಹಾಲು ಹೊಯ್ಯುವ ಹಬ್ಬವನ್ನು ಮಾಡುತ್ತಾರೆ. ಮೊದಲನೆಯ ದಿನ ಶನಿವಾರದಂದು ಕುಟುಂಬದವರೊಂದಿಗೆ ಸ್ನಾನ ಮಾಡಿ ಹಾಲು ಕೊಡುವ ಪ್ರಾಣಿಯ ಹಾಲನ್ನು ಹಿಂಡದೆ ಅದರ ಹಾಲನ್ನು ಕರುಗಳಿಗೆ ಕುಡಿಸುತ್ತಾರೆ. ಎರಡನೆಯ ದಿನ ಅಂದರೆ ಭಾನುವಾರ ಕಳ್ಳಿಯನ್ನು ಕಡಿದು, ಹಚ್ಚಿಸಿ 'ನಸುರೆ' ಹಾಕುತ್ತಾರೆ. ಮಾರನೆಯ ದಿನ ಸೋಮವಾರ ಬೆಳಿಗ್ಗೆ ಎದ್ದು ಸ್ನಾನ ಮಾಡಿ ಹೊಸ ಚಿಲುಮೆಯನ್ನು ತೋಡಿ ಗಂಗಮ್ಮನ ಪೂಜೆ ಮಾಡಿ ಕಳಸ ಏರಿಸುತ್ತಾರೆ. ಕಟ್ಟೆಯೊಳಗೆ

[illegible]

ಬೆನಕನನ್ನು ಇಟ್ಟು ಸ್ವಲ್ಪ ಹಾಲನ್ನು ಬಿಟ್ಟ ನಂತರ ಹಟ್ಟಿಯ ಯಾಜಮಾನ ಹಾಲು ಬಿಡುತ್ತಾನೆ. ನಂತರ ಹೆಣ್ಣುಮಕ್ಕಳು ಹಾಲು ಬಿಟ್ಟ ಬಳಿಕ ಕಂಬಳಿಯಿಂದ ಹಾಲುಕಟ್ಟೆಯನ್ನು ಮುಚ್ಚುತ್ತಾನೆ. ಕೊನೆಗೆ ದಾಸಪ್ಪನನ್ನು ಕರೆಸಿ ಗೋವಿಂದ, ಗೋವಿಂದ ಎನ್ನಿಸಿ ಊಟಮಾಡುತ್ತಾರೆ.

೪.೧೭.೫ ಕಾಟಮದೇವರ ಜಾತ್ರೆ

ಈ ಜಾತ್ರೆಯು ಹಿರಿಯೂರು ತಾಲ್ಲೂಕಿನ ಯರಬಳ್ಳಿಯ ಗೊಲ್ಲರಹಟ್ಟಿಯಲ್ಲಿ ನಡೆಯುತ್ತದೆ. ಈ ಜಾತ್ರೆಯು ಶಿವರಾತ್ರಿಗೆ ಒಂದು ವಾರ ಮೊದಲೆ ನಡೆಯುತ್ತದೆ. ಇಲ್ಲಿ ಕಾಟಮದೇವರು, ಹಾಲು ಕಡಿದಪ್ಪ ಮತ್ತು ನಾಗಪ್ಪ ದೇವರ ಗುಬ್ಬಗಳಿಗೆ. ಜಾತ್ರೆ ಮಾಡುತ್ತಾರೆ. ಈ ದೇವರುಗಳ ಗುಬ್ಬಗಳಿಗೆ ಜಾಲಿ ಮುಳ್ಳಿನ ಬೇಲಿಯನ್ನು ಹಾಕಿರುತ್ತಾರೆ. ಪೂಜಾರಿಗಳಿಗೆ ಮಾತ್ರ ಇಲ್ಲಿ ಪ್ರವೇಶವಿದ್ದು, ಸಾಮಾನ್ಯ ಭಕ್ತರಿಗೆ ದರ್ಶನ ಮಾಡಲು ಬೇಲಿಯಿಂದ ತಯಾರಿಸಿದ ಬಾಗಿಲನ್ನು ತೆಗೆದಿರುತ್ತಾರೆ. ಹರಕೆಯನ್ನು ಹೊತ್ತುವರು ಮೊದಲನೆಯ, ಎರಡನೆಯ ದಿನ ಗಾಡಿಯಲ್ಲಿ ಜಾಲಿ ಮುಳ್ಳನ್ನು ತಂದು ದಂತು ಹಾಕುತ್ತಾರೆ. ಈ ಜಾತ್ರೆಯಲ್ಲಿ ಇಪ್ಪತ್ತೈದು ಅಡಿಗಳಷ್ಟು ಬೇಲಿ ನಿರ್ಮಾಣವಾಗಿರುತ್ತದೆ. ಮೂರು ಹಾಗೂ ನಾಲ್ಕನೆಯ ದಿನ ದೇವರ ದೀಪಕ್ಕೆ ತುಪ್ಪವನ್ನು ಅರ್ಪಿಸುತ್ತಾರೆ. ಐದನೆಯ ದಿನ ಹಟ್ಟಿಯ ಬಳಿಯಿದ್ದ ಹುತ್ತಕ್ಕೆ ಕರಿಕಂಬಳಿ ಹಾಕಿ ನಾಗಪ್ಪನ ಪೂಜೆಮಾಡಿ ಆರನೆಯ ದಿನ ಪೂಜಾರರು ನನ್ನಿವಾಳ ಗುಡ್ಡದಲ್ಲಿ ಜಾಗ ಮಾಡಿ ಶೂನ್ಯದ ಗೂಡನ್ನು ಹಾಕುತ್ತಾರೆ. ನನ್ನಿವಾಳದಲ್ಲಿ ಚಿತ್ತಯ್ಯ ಮತ್ತು ಕಾಟಯ್ಯನ ನೆಲೆಯಿದ್ದು ಅದು ಪವಿತ್ರವಾದ ಸ್ಥಳವಾಗಿದೆ. ಶೂನ್ಯದ ಗೂಡನ್ನು ಕಾಲಿ ಇಡುತ್ತಾರೆ. ನಂತರ ಮೂರು ದೇವರುಗಳ ಹೆಸರಿನಲ್ಲಿ ಗೂಡನ್ನು ಹಾಕುತ್ತಾರೆ. ಗೂಡಿನಲ್ಲಿ ದನಗಳನ್ನು ಕೂಡು ಹಾಕಿ ಕುರಿಯನ್ನು ಬಲಿಕೊಟ್ಟು, ಅದರ ರಕ್ತವನ್ನು ಮೂರು ಗುಬ್ಬಗಳ ಸುತ್ತ ಹಾಕಿ ಹುರುಳಿ ಮತ್ತು ನವಣೆಯಿಂದ ತಯಾರಿಸಿದ ಅಡುಗೆ ಮಾಡಿ ಊಟ ಮಾಡಿ ಮನೆಗೆ ಬಂದು ಜಾತ್ರೆಯಲ್ಲಿ ತಂದ ತೀರ್ಥವನ್ನು ತಮ್ಮ ಗುಡಿಸಲುಗಳಿಗೆ ಚಿಮುಕಿಸುತ್ತಾರೆ. ಈ ಸಂದರ್ಭದಲ್ಲಿ ನನ್ನಿವಾಳದಲ್ಲಿಯ ಕಾಟಯ್ಯ ಮತ್ತು ಚಿತ್ತಯ್ಯಗೂ ಪೂಜೆ ಸಲ್ಲಿಸುತ್ತಾರೆ.

೪.೧೭.೬ ಕತದೇವರ ಜಾತ್ರೆ

ಈ ಜಾತ್ರೆಯನ್ನು ಪ್ರತಿವರ್ಷವೂ ಆಚರಿಸುತ್ತಾರೆ. ಚಳ್ಳಕೆರೆ ತಾಲೂಕಿನ ಚೆನ್ನಮ್ಮನಾಗತಿಯಲ್ಲಿ ಜಾತ್ರೆ ನಡೆಯುತ್ತದೆ. ಇಪ್ಪತ್ತೊಂದು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಜನವರಿ ನಾಲ್ಕನೆಯ ತಾರೀಖಿನಂದು ಜಾತ್ರೆ ಪ್ರಾರಂಭವಾಗುತ್ತದೆ. ಜಾತ್ರೆ ಮುಗಿಯುವರೆಗೂ ಹುರಳಿಯ ಮತ್ತು ನವಣೆಯನ್ನು ಹೊರಗಿಡುವರು. ಇವುಗಳನ್ನು ಮುಟ್ಟದಿರುವ ಪದ್ಧತಿಗೆ ಹುರುಳಿ ಕೈ ಹಾಗೂ ನವಣೆ ಕೈ ಎಂದು ಕರೆಯುತ್ತಾರೆ. ೫ನೇ ತಾರೀಖಿನಂದು ಜಾತ್ರೆಯ ಕಾರ್ಯಕ್ರಮದ ಪಟ್ಟಿಯನ್ನು ತಿಳಿಸುತ್ತಾರೆ. ಕಾರ್ಯಕ್ರಮದ ಪಟ್ಟಿಯ ಪ್ರಕಾರ ಪೂಜೆ, ಇತರೆ ಆಚರಣೆಗಳು ಪುನಸ್ಕಾರಗಳು ನಡೆಯುತ್ತವೆ. ಜಾತ್ರೆಯಲ್ಲಿ ತುಗ್ಗಲಿ ಮರಕ್ಕೆ ವಿಶೇಷ ಸ್ಥಾನವಿದೆ. ಇದಕ್ಕೆ 'ಕತದೇವರ ಮರ' ಎಂದೇ ಕರೆಯುತ್ತಾರೆ. ಪೂಜೆಗಾಗಿ ಈ ಮರವನ್ನೆ ಬೆಳಸುತ್ತಿದ್ದರಿಂದ ಕತದೇವರ ಪೂಜೆ ಎಂದೆ ಕರೆಯುತ್ತಾರೆ.

ಹೀಗೆ ನಾಲ್ಕರಿಂದ ಇಪ್ಪತ್ತೆಂಟು ತಾರೀಖಿನವರೆಗೂ ನಡೆಯುವ ಜಾತ್ರೆಯಲ್ಲಿ ನವಣೆ ಹಿಟ್ಟನ್ನು ಇಟ್ಟು ಪೂಜೆ ಮಾಡುತ್ತಾರೆ. ವಾದ್ಯಗಳೊಂದಿಗೆ ಕತದೇವರನ್ನು ಬಂಜಿಗೆರೆ ಈರಣ್ಣ, ತಾಳಿದೇವರನ್ನು ಚೆನ್ನಮ್ಮನಾಗತಿಯನ್ನು ಕರೆದುಕೊಂಡು ಬರುತ್ತಾರೆ. ಅಲ್ಲಿ ಮೂರು ದೇವರುಗಳ ಮೆರವಣಿಗೆ ಮಾಡುತ್ತಾರೆ. ಫೆಬ್ರವರಿ ತಿಂಗಳಿನಲ್ಲಿ ನೈವೇದ್ಯ ಮಾಡಿ ಹುರುಳಿ ಬಿತ್ತನೆ ಮಾಡುತ್ತಾರೆ. ಕೊನೆಗೆ ಭಕ್ತರು ತಂದಿರುವ ಕಾಣಿಕೆಯನ್ನು ಅರ್ಪಿಸಿ ಪ್ರಸಾದವನ್ನು ಸ್ವೀಕರಿಸಿ ಹೋಗುತ್ತಾರೆ.

೪.೧೭.೭ ಎತ್ತಪ್ಪ, ಜುಂಜಪ್ಪ ಮತ್ತು ಚಿತ್ರದೇವರ ಜಾತ್ರೆಗಳು

ದೀಪಾವಳಿ ಸಂದರ್ಭದಲ್ಲಿ ನಡೆಸುವ ಈ ಜಾತ್ರೆಯನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ವಿಶೇಷವಾಗಿ ಜಾಂಡೇವು (ಬಾವುಟ) ಹಾರಿಸುತ್ತಾರೆ. ಇಲ್ಲಿ ಹರಕೆ ತೀರಿಸುವುದು, ದೀಪ ಏರಿಸುವುದು, ದೇವರಿಗೆ ಗಂಗಾಸ್ನಾನ ಮಾಡಿಸುವುದು, ಪ್ರಮುಖವಾಗಿ ನಡೆಯುತ್ತವೆ. ಭಕ್ತರು ಮೀಸಲು ತುಪ್ಪವನ್ನು ತೆಗೆದುಕೊಂಡು ದೀಪಕ್ಕೆ ಹಾಕಿ ಹಚ್ಚುತ್ತಾರೆ. ದನಗಳಿಗೆ ಹಾವು, ಚೇಳು, ಕಡಿದು ಅವುಗಳಿಗೆ ಹುಣ್ಣುಗಳಾಗಿದ್ದರೆ ಹಾಗೂ ಅವುಗಳ ಆರೋಗ್ಯ ಸರಿಯಿರದಿದ್ದರೆ ಮೂರು ದೇವತೆಗಳಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ಹರಕೆ ತೀರಿಸುವಾಗ ಚಿನ್ನದ, ಬೆಳ್ಳಿಯ ಹಾವು, ಚೇಳುಗಳನ್ನು ಮಾಡಿಸಿ ದೇವರಿಗೆ ಅರ್ಪಿಸುತ್ತಾರೆ. ಇಲ್ಲಿ ಹಣ್ಣುಕಾಯಿಗಳಿಂದ ಪೂಜೆ ಮಾಡಿ ಪ್ರಸಾದವನ್ನು ನೀಡುತ್ತಾರೆ. ಜಾತ್ರೆ ಮುಗಿದ ನಂತರ ಜಾಂಡೇವು ಇಳಿಸುತ್ತಾರೆ. ಇಲ್ಲಿಗೆ ಜಾತ್ರೆ ಕೊನೆಗೊಳ್ಳುತ್ತದೆ.

೪.೧೭.೮ ಜುಂಜಪ್ಪನ ಜಾತ್ರೆ

ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಜುಂಜಪ್ಪನ ಆರಾಧನಾ ಕೇಂದ್ರಗಳು ಕಾಣಸಿಗುತ್ತನೆ. ಸಾಂಸ್ಕೃತಿಕ ವೀರನೆನಿಸಿಕೊಂಡಿರುವ ಜುಂಜಪ್ಪನನ್ನು ಶ್ರೀಕೃಷ್ಣನ ಪ್ರತಿರೂಪವಾಗಿ ಇಲ್ಲಿ ಕಾಣಲಾಗುತ್ತಿದೆ. ಕಾಡುಗೊಲ್ಲರ ಆರಾಧ್ಯದೈವವಾದ ಜುಂಜಪ್ಪ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹಾಗಲಾವಡಿಯಲ್ಲಿ ಕಾಡುಗೊಲ್ಲರ ಸಮುದಾಯದ ಧಾರ್ಮಿಕ ಕೇಂದ್ರವಿದೆ. ಜುಂಜಪ್ಪನು ಕಾಡುಗೊಲ್ಲರ ಬೆಡಗಾದ ಕರಡಿಗೊಲ್ಲರ ಮನೆದೇವರು. ನವೆಂಬರ್ ತಿಂಗಳಿನ ಮಧ್ಯದಲ್ಲಿ ಜುಂಜಪ್ಪನ ಬೃಹತ್ ದೀಪಾವಳಿ ಹಬ್ಬ ಜರುಗುತ್ತಿದ್ದು, ಇದನ್ನು ಕಾಡುಗೊಲ್ಲ ಸಮುದಾಯದವರು "ಕಿರುದೀವಣಿಗೆ" ಎಂದು ಕರೆಯುತ್ತಾರೆ. ಎರಡು ದಿನಗಳ ಕಾಲ ಬೃಹತ್ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ರಾತ್ರಿ ಕೋಲಾಟ ಹಾಗೂ ವಾದ್ಯಗಳೊಂದಿಗೆ ಜುಂಜಪ್ಪನನ್ನು ಅಲಂಕರಿಸಿ ಮೆರವಣಿಗೆ ಮಾಡುತ್ತಾರೆ. ದೇವಸ್ಥಾನಕ್ಕೆ ಬರುವವರು ಅನೇಕ ಹರಕೆ ಹೊತ್ತಿರುತ್ತಾರೆ. ಹರಕೆಗಳು ಈಡೇರಿದಾಗ ಬೆಳ್ಳಿಯಲ್ಲಿ ಹಾವು, ಚೇಳುಗಳನ್ನು ಮಾಡಿಸಿ ದೇವರಿಗೆ ಅರ್ಪಿಸುತ್ತಾರೆ. ಜುಂಜಪ್ಪನ ದೇವಾಲಯದ ಸುತ್ತ ಕಾರೆಮುಳ್ಳಿನ ಬೇಲಿಯನ್ನು ನಿರ್ಮಿಸಿ, ದೇವಾಲಯದ ಗುಬ್ಬವನ್ನು ಬಾಳೆಗಿಡದ ನಾರಿನಿಂದ ಮಾಡುತ್ತಾರೆ. ಆದರೆ ಇತ್ತೀಚಿಗೆ ಇಟ್ಟಿಗೆ, ಕಲ್ಲು, ಮರಳು, ಸಿಮೆಂಟ್‌ನಿಂದ ಕೂಡಿದ ಆಧುನಿಕ ಕಟ್ಟಡವನ್ನು ಕಟ್ಟಿಸಿದ್ದಾರೆ. ಹಾಗಲವಾಡಿಯ ಜುಂಜಪ್ಪನ ದೇವಸ್ಥಾನದ ಪೂಜಾರಿ ಬೈಲಪ್ಪನವರು ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ.

೪.೧೭.೯ ಗೂಡಿನಹಬ್ಬ

ಚಿತ್ರದುರ್ಗ ಜಿಲ್ಲೆಯ ಚೆಳ್ಳಕೆರೆ ತಾಲೂಕಿನ ಯಲಗಟ್ಟೆ ಗೊಲ್ಲರ ಹಟ್ಟಿಯಲ್ಲಿ ನಡೆಯುವ ಹಬ್ಬವಾಗಿದೆ. ಇದನ್ನು ಸಾಂಸ್ಕೃತಿಕ ವೀರನಾದ ಎತ್ತಪ್ಪನ ನೆಲೆಯಲ್ಲಿ ನಡೆಸುವರು. ವಿಶೇಷವಾಗಿ ಪಶುಪಾಲನ ಸಂಸ್ಕೃತಿಯನ್ನು ಮುಂದುವರಿಸಿ ಬೇಸಾಯದ ಬೆನ್ನೆಲುಬಾದ ಎತ್ತಪ್ಪನನ್ನು ಆರಾಧಿಸುವ ಹಬ್ಬವಾಗಿದೆ. ಈ ಹಬ್ಬದಲ್ಲಿ ದನ-ಕುರಿ, ಹಸು-ಕರುಗಳ 'ಹಿಂಡು ಹೆಚ್ಚಲಿ' ಎಂದು ನಡೆಸುವ ಫಲಸಮೃದ್ಧಿಯ ಹಬ್ಬವಾಗಿದೆ. ಗೊಡು ಎಂದರೆ 'ರೊಪ್ಪ' ಕಳ್ಳಿಬೇಲಿಯ ರಕ್ಷಣೆಯೊಳಗಿರುವ ಪ್ರಾಣಿ ಸಮೂಹವನ್ನು ಗೂಡು ಎಂದು ಕರೆಯುತ್ತಾರೆ. ಈ ಹಬ್ಬವನ್ನು ದಸರಾಹಬ್ಬದ ಒಂಭತ್ತು ದಿನಗಳ ನಂತರ ಬರುವ ಶುಕ್ರವಾರ ಆಚರಿಸುತ್ತಾರೆ. ಇಲ್ಲಿ ಪಶುಪಾಲನೆಯಲ್ಲಿ ಒಸುವ ಕಂಬಿ (ಹಾಲುಪೊರುವ ದಂಡಿಗೆ), ನಾರುಕಲ್ಲಿ ನಾರಿನಿಂದ ಮಾಡಿ ಬುತ್ತಿ ಕೊಂಡಯ್ಯುವ ಉದ್ದನೆಯ ಚೀಲ, ಉಳಿಬಾಳೆ ಕೋಲು(ಬಿದಿರಿನ ಕೋಲು)ಗಳನ್ನು ಹೊರ ತೆಗೆದು ಪೂಜೆ ಮಾಡುತ್ತಾರೆ. ಹಬ್ಬದ ಹಿಂದಿನ ದಿನ ಕಳ್ಳಿಯನ್ನು ಕಡೆದು ಕರುವಿನ ಗೊಡು, ದನವಿನ ಗೂಡು ಸಿದ್ಧಪಡಿಸುತ್ತಾರೆ. ಪೂರ್ವ, ಪಶ್ಚಿಮ ಅಥವಾ ಉತ್ತರಕ್ಕೆ ಬಾಗಿಲು ಬಿಡುವ ನಿಯಮವಿದೆ. ಕಾಡುಗೊಲ್ಲರ ಹಟ್ಟಿಯಲ್ಲಿ ಸುತ್ತಲೂ ಕಳ್ಳಿಬೇಲಿಯಲ್ಲೂ ಏಳು ಕಡೆ ಉದಿ ಬಾಗಿಲು ಬಿಟ್ಟಿರುತ್ತಾರೆ. ಹಬ್ಬದ ಹಿಂದಿನ ದಿನ ಕರುವಿನ ಗೂಡಿನಲ್ಲಿ ದನವನ್ನು ಬಯಲಿನಲ್ಲಿ ಇಡುತ್ತಾರೆ (ದನಗೂಡುವಿನ ದನಗಳನ್ನು ಹೂಡುವುದಿಲ್ಲ). ಅಕ್ಕಿ, ಬೆಲ್ಲ, ರಾಗಿ, ಹಿಟ್ಟು, ನುಚ್ಚು, ಉಪ್ಪು, ಬದನೆಕಾಯಿ, ಹಸಿಮೆಣಸಿನಕಾಯಿ ಇಟ್ಟು ಹೀಗೆ ಗೊತ್ತು ಮಾಡಿದನ್ನು ಕೊಟ್ಟು ಪೂಜೆ ಮಾಡುತ್ತಾರೆ. ದನದ ಗೂಡಿನಲ್ಲಿ ರಾತ್ರಿಯಲ್ಲಾ ಸೋಬಾನಪದ ಹಾಡುತ್ತಾರೆ. ಶನಿವಾರ ಹಟ್ಟಿಯ ಕಂಬಿನಿಂದ ಹೂವಿನ ಅಲಂಕಾರ ಮಾಡಿರುತ್ತಾರೆ. ಹಾಲು ಮತ್ತು ನೀರಿನ ಬುಟ್ಟಿಯ ಕುಂಭಗಳನ್ನು ತೆಗೆದುಕೊಂಡು ಇದರ ಜೊತೆಗೆ ಕದರಿ ನರಸಣ್ಣ ಮತ್ತು ಸಿರಿಯಣ್ಣ ದೇವರುಗಳು ಹೋಗುತ್ತಾರೆ. ಎತ್ತಯ್ಯನಕೊಂಬಿ ಹೊರುವವರೆ ಹೊಂದ್ಹೊತ್ತು ಇರುತ್ತಾರೆ. ಕರುವಿನ ಗೂಡು ಮತ್ತು ದನದ ಗೂಡು ಕಟ್ಟಿ ಅದರಲ್ಲಿ ಬಟ್ಟಣ್ಣ, ಮೈಬಣ್ಣ, ಗೊಡ್ಡಗಾಳಿ, ಅಕ್ಕರಂಬೆ, ಚಿಕ್ಕರಂಬೆ, ದನಗಳ ಅಲಂಕಾರ ಮಾಡಿ ಸಾಂಕೇತಿಕವಾಗಿ ಕಟ್ಟಿರುವ ಆ ಗೂಡಿನಲ್ಲಿ ಇಡುತ್ತಾರೆ. ರಾಗಿಮುದ್ದೆ, ಬದನೆಕಾಯಿಯ ಎಡೆಹಾಕಿ ಬಾಯಬತದ ಮೂಲಕ ಮೂರು ಮಗಿ ಮೀಸಲು ಹಾಲನ್ನು ಸಂಗ್ರಹಿಸುತ್ತಾರೆ. ಹಟ್ಟಿಯಿಂದ ತಂದ ಕಂಬಿ, ಕಲ್ಲಿ, ಕೊಡಲಿ, ಉಳೆವಾಳೆಕೂಳಲಿಗೆ ಪೂಜೆ ಸಲ್ಲಿಸಿ ದಾಸೋಹ ನಡೆಸುತ್ತಾರೆ. ನಂತರ ದನಗಳಿಗೆ ಕಿಚ್ಚು ಹಾಯಿಸಿ ಆ ಗೂಡಿಗೆ ಮೂರು ಸಲ ಪ್ರದಕ್ಷಿಣೆ ಹಾಕಿ ಹಟ್ಟಿಗೌಡರ ಪೂಜಾರಿಗಳು ಸಾಸೀವೆ ಅಕ್ಕಿ ತೆಗೆದು ದನಗಳ ಮೇಲೆ ಚೆಲ್ಲಿ ಎಲ್ಲ ರೋಗರುಜಿನಿಂದ ರಕ್ಷಣೆ ದೊರೆಯಲಿ ಎಂದು ಅವುಗಳನ್ನು ದನಗಳ ಮೇಲೆ ಎಸೆಯುತ್ತಾರೆ. ಯಲ್ಲಗಟ್ಟೆ ಗೊಲ್ಲರಹಟ್ಟಿಯ ಉತ್ತರ ದಿಕ್ಕಿಗೆ ಇರುವ ಎತ್ತಪ್ಪನ ಗುಡ್ಡದ ಕಡೆ ಮುಖ ಮಾಡಿ ಕಂಬಳಿ ಹಾಸಿ ಪೂಜೆ ಮಾಡುತ್ತಾರೆ. ಕಾಟಮದೇವರ ಪೂಜೆ ಮಾಡುತ್ತಾ, ಪೂಜಾರಿಗಳು ಒಂದ್ಹೊತ್ತು ಬಿಟ್ಟ ಗೂಡಿನೊಳಗಿರುವ ದೇವರ ಮುಂದೆ ಊಟ ಮಾಡುತ್ತಾರೆ. ಸೊಬಾನೆ ಪದಗಳ ಮುಖಾಂತರ ಹಬ್ಬ ಮುಗಿಸುತ್ತಾರೆ.

ಈ ಹಬ್ಬದಲ್ಲಿ ಹತ್ತು ಸಾವಿರಕ್ಕಿಂತಲ್ಲೂ ಹೆಚು ಕುರಿಗಳನ್ನು, ದನಗಳನ್ನು ಹೊಂದಿರುವಂತಹ ಕಾಡುಗೊಲ್ಲರ ಮೇಲೆ ಇತರರ ಕೆಟ್ಟ ಕಣ್ಣುಗಳು ಬೀಳದಿರಲೆಂದು, ಅವುಗಳನ್ನು ಯಾರೂ ಕದಿಯದಿರಲೆಂದು ಮತ್ತು ಅವುಗಳಿಗೆ ಯಾವುದೆ ರೋಗರುಜಿನಗಳು ಬಾರದಿರಲಿ ಎಂದು ಹಾರೈಸುತ್ತಾ ಈ ಪೂಜೆಯನ್ನು ಕೈಗೊಳ್ಳುತ್ತಾರೆ. ಯಾವುದೆ ಕಾರಣಕ್ಕೂ ಅವರ ಪಶುಸಂಪತ್ತು ಹಾಳಾಗದಿರಲೆಂದು ಇಂತಹ ಹಬ್ಬಗಳನ್ನು ಆಚರಿಸುವುದು ಕಂಡುಬರುತ್ತದೆ. ಇದು ಅತ್ಯಧಿಕವಾದ ಖರ್ಚುಗಳಿಂದ ಕೂಡಿದ ಹಬ್ಬವಾಗಿದೆ. ವರ್ಷದಲ್ಲಿ ಉಳಿತಾಯ ಮಾಡಿದ ಹಣವನ್ನೆಲ್ಲ ಈ ಹಬ್ಬ ಜಾತ್ರೆಗಳಲ್ಲಿ ಖರ್ಚು ಮಾಡುತ್ತಾರೆ.

ಕೃಷಿ ಪ್ರಧಾನವಾಗಿರುವ ದನಗಳನ್ನು ನೆನೆಯುವುದು ಈ ಹಬ್ಬದಲ್ಲಿ ಮುಖ್ಯವಾಗಿದ್ದು, ಜುಂಜಪ್ಪನಿಗೆ ಬಿಟ್ಟ ಪ್ರಾಣಿಗಳ ನೆಪದಲ್ಲಿ ಬಸವನ ಹಬ್ಬವನ್ನು ಮಾಡುತ್ತಾರೆ. ಎತ್ತಿಲ್ಲದೆ ಬೇಸಾಯ ಎತ್ತತ್ತಲೊ ಎಂಬಂತೆ ವ್ಯವಸಾಯದ ಜೊತೆ ಜೊತೆಗೆ ದುಡಿದು ರೈತನ ಏಳಿಗೆಗೆ ಕಾರಣವಾದ ಎತ್ತುಗಳಿಗೆ ಕೃತಜ್ಞತೆ ಸಲ್ಲಿಸುವುದಕ್ಕಾಗಿ ಎತ್ತಿನಹಬ್ಬ ಮಾಡುತ್ತಾರೆ.

ಅಡಿಟಿಪ್ಪಣಿಗಳು

೧. ನಾಗರಾಜು ಬಿ.ವಿ., ಗೊಲ್ಲರಹಟ್ಟಿ, ೧೯೮೮, ಪು. ೧

೨. ಗುರುಲಿಂಗಯ್ಯ ಎಂ., ಕರ್ನಾಟಕ ಗೊಲ್ಲ ಸಮುದಾಯ, ೨೦೦೫, ಪು. ೩೦

೩. ಭಾನುಮತಿ ವೈ.ಸಿ., ಮಲೆನಾಡಿ ಶೈವ ಒಕ್ಕಲಿಗರು, ೨೦೦೦ ಪು. ೨೩-೨೪

೪. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕ ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫, ಪು. ೪೭

೫. ಕೃಷ್ಣಮೂರ್ತಿ ಹನೂರು, ಕಾಡುಗೊಲ್ಲರು, ೧೯೯೮, ಪು. ೮೧

೬. ಗುರುಲಿಂಗಯ್ಯ ಎಂ., ಕರ್ನಾಟಕ ಗೊಲ್ಲ ಸಮುದಾಯ, ೨೦೦೫. ಪು. ೧೦೧

೭. ಗಂಗಾಧರ ದೈವಜ್ಞ, ಬುಡಕಟ್ಟು ವೈದ್ಯ ಪದ್ಧತಿ, ಆದಿವಾಸಿ ಆಖ್ಯಾನ, ೨೦೦೬, ಪು. ೨೧೨

೮. ಬೋರಲಿಂಗಯ್ಯ ಹಿ.ಚಿ., ಮಂಟೇಸ್ವಾಮಿ, ೧೯೯೭, ಪು. xvii

ಅಧ್ಯಾಯ ಐದು

ಕಾಡುಗೊಲ್ಲರ ಆರ್ಥಿಕ ಸ್ಥಿತಿಗಳು

೫.೧ ವೃತ್ತಿಗಳು

೫.೧.೧ ಕೃಷಿ

೫.೧.೨ ಪಶುಪಾಲನೆ

೫.೧.೩ ಪಶುಪಾಲನೆಯ ಸಾಧಕ ಬಾಧಕಗಳು

೫.೧.೪ ದಿನಗೂಲಿ ನೌಕರರು

೫.೧.೫ ಸಣ್ಣ ವ್ಯಾಪಾರ

೫.೧.೬. ಸರ್ಕಾರಿ ನೌಕರರು

೫.೧.೭ ಖಾಸಗಿ ಹುದ್ದೆಗಳು

೫.೧.೭ ಇತರೆ ವೃತ್ತಿಗಳು

೫.೨ ಕಾಡುಗೊಲ್ಲರ ಸಮುದಾಯದಲ್ಲಿನ ವೃತ್ತಿ ಸಮಸ್ಯೆಗಳು ಮತ್ತು ಪರಿಹಾರಗಳು

೫.೩ ಆದಾಯ, ಖರ್ಚು, ಉಳಿತಾಯ

೫.೪. ಬಡತನ

೫.೫. ಸಾರಿಗೆ ವ್ಯವಸ್ಥೆ

೫.೬. ಶೈಕ್ಷಣಿಕ ಸ್ಥಿತಿಗತಿಗಳು

ಅಧ್ಯಾಯ ೫

ಕಾಡುಗೊಲ್ಲರ ಆರ್ಥಿಕ ಸ್ಥಿತಿಗಳು

"Might is right ಎಂಬ ಕಾಲವೊಂದಿತ್ತು. ಇಲ್ಲಿ ಅಶಕ್ತ ಜೀವಿಗಳಿಗೆ ಉಳಿಗಾಲವಿರಲಿಲ್ಲ ನ್ಯಾಯ ಅನ್ಯಾಯಗಳ ಪರಿವೆ ಅವುಗಳಿಗೆ ಇರಲಿಲ್ಲ. ಬಲಿಷ್ಟವಾದವು ಬದುಕುತ್ತಿದ್ದವು. ಒಂದು ಇನ್ನೊಂದನ್ನು ತಿಂದು ಬದುಕುವುದು ಸಹಜವಾಗಿತ್ತು".[೧] ಇಂತಹ ಪರಿಸ್ಥಿತಿಯನ್ನು ತೊಡೆದು ಹಾಕಿ ತಮ್ಮದೇ ಆದ ಸಮಾಜಿಕ, ಆರ್ಥಿಕ ಚೌಕಟ್ಟುಗಳನ್ನು ಹಾಕಿಕೊಂಡು ಸಮಾಜ ಜೀವಿಯಾಗಿ ಬದಕಲು ಕಲಿತಿದ್ದು ನಂತರದಲ್ಲಿ. ಇಂಥಾ ಚೌಕಟ್ಟುಗಳನ್ನು ನಿರ್ಮಿಸಿಕೊಳ್ಳಲು ಮೂಲವಾಗಿ ಕಾರಣ ಅವರ ಆರ್ಥಿಕ ಸ್ಥಿತಿಗತಿಗಳಾಗಿವೆ. ಇಲ್ಲಿ ಆರ್ಥಿಕತೆ ಎಂದರೆ "ಮಾನವನ ಹಾಗೂ ಸರ್ಕಾರದ ವ್ಯವಹಾರಿಕೆ ಮತ್ತು ಹೊಟ್ಟೆ ತುಂಬಿಸಿಕೊಳ್ಳಲು ಮಾಡುವ ಚಟುವಟಿಕೆಯಾಗಿದೆ".[೨] ಇಂತಹ ಆರ್ಥಿಕತೆಯನ್ನು ಭದ್ರಪಡಿಸಿಕೊಂಡ ನಂತರವೇ ಮಾನವ ತನ್ನ ಸಮಾಜವನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದನು. ಇವರ ಸಮಾಜಕ್ಕೆ ಆರ್ಥಿಕತೆಯೇ ಭದ್ರವಾದ ಬುನಾದಿಯಾಗಿದೆ.

ಆರ್ಥಿಕತೆ ಎಂಬ ಪರಿಕಲ್ಪನೆ ಮಾನವನಲ್ಲಿ ಬರುವ ಮೊದಲು ಭೂಮಿಯ ಮೇಲೆ ಎಲ್ಲ ಹಚ್ಚ ಹಸಿರಾಗಿತ್ತು. ಮಂಗ ಮಾನವ ಸಂಸ್ಕೃತಿಗಿಂತಲೂ ಹಿಂದೆ ಈ ಪರಿಸರ ಅಕ್ಷತವಾದ್ದು ಸುರಕ್ಷಿತವಾಗಿತ್ತು. ಹಸಿವನ್ನು ನೀಗಿಸಿಕೊಳ್ಳಲು ಮಾನವ ಮೊದಲು ಹಣ್ಣು ಕಿತ್ತನೋ ಅಥವಾ ಪ್ರಾಣಿಗಳನ್ನು ಕೊಂದನೋ ನಿಖರವಾಗಿ ಹೇಳಲಾಗದು. ಕೋಟ್ಯಂತರ ವರ್ಷಗಳ ಅನಂತರದ ದಿನಗಳ ಬದುಕಿನಲ್ಲಿ ಹೊಟ್ಟೆ ತುಂಬಿಸಿಕೊಳ್ಳಲು ಮಾನವ ಅಲೆಮಾರಿಯಾಗಿ ಆಹಾರಕ್ಕಾಗಿ ಅಲೆದಾಡುತ್ತಾ ಕೊನೆಗೆ ಪರಿಸರ ಸಿದ್ಧಪಡಿಸಿದ ಆಹಾರ, ಗೆಡ್ಡೆ-ಗೆಣಸು, ಹಣ್ಣು, ನಾರು-ಬೇರುಗಳನ್ನು ತಿಂದು ಬದಕಲು ಕಲಿತು ಪ್ರಾಣಿಗಳ ಬೇಟೆಯನ್ನು ಆರಂಭಿಸಿದ. ಸುರಕ್ಷಿತ ವಾಸಕ್ಕೆ ಹಾಗೂ ಆಹಾರ ಸಂಗ್ರಹಣೆಗಾಗಿ ತನ್ನ ಬದುಕಿನ ಪ್ರಕೃತಿಯ ಕೂಸಾಗಿ ಬದುಕಿದ ನಂತರದಲ್ಲೆ ನೀರಿರುವ ಕಡೆ ನೆಲೆನಿಂತು ಒಕ್ಕಲುತನ ಪ್ರಾರಂಭಿಸಿದ. ಇದರ ಜೊತೆಗೆ

[illegible]

[illegible]

[illegible]

[illegible]

ಪಶುಪಾಲನೆಯನ್ನು ಸಹ ಮಾಡತೊಡಗಿದೆ. ಹೀಗೆ ಆರ್ಥಿಕ ಮೂಲಗಳಲ್ಲಿ ಕೃಷಿಯ ಜೊತೆಗೆ ಪಶುಪಾಲನೆಯು ಜೊತೆಗೂಡಿತು. ಒಂದು ಮೂಲದ ಪ್ರಕಾರ ಬೇಟೆ, ಪಶುಪಾಲನೆಯು ಮತ್ತು ವ್ಯವಸಾಯ ಕ್ರಮವಾಗಿ ಸಮಾಜದ ಬೆಳವಣಿಗೆಯ ಮೂರು ಹಂತಗಳಾಗಿವೆ. ಆದರೆ ಇತ್ತೀಚಿಗೆ ಮಾನವ ಅನೇಕ ವೃತ್ತಿಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ. ಕೆಲವು ಸಮುದಾಯಗಳಂತೂ ವೃತ್ತಿಗಳಿಂದಲೇ ತಮ್ಮ ಜಾತಿಯನ್ನು ಗುರುತಿಸಿಕೊಂಡಿವೆ. ಅಂತಹ ವೃತ್ತಿಸೂಚಕ ಜಾತಿಗಳಲ್ಲಿ ಕಾಡುಗೊಲ್ಲರ ಸಮುದಾಯವು ಒಂದಾಗಿದೆ.

ಕಾಡುಗೊಲ್ಲರು ಮೂಲತಃ ಪಶುಪಾಲಕರಾಗಿದ್ದು, ಇತ್ತೀಚೆಗೆ ಕೃಷಿ, ಗುಡಿಕೈಗಾರಿಕೆ, ವ್ಯಾಪಾರ, ಸರ್ಕಾರಿ ಮತ್ತು ಖಾಸಗಿ, ಇನ್ನಿತರ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತಾದೆ. ಇವರು ಅರಣ್ಯ ಸಂಸ್ಕೃತಿಯ ಹಿನ್ನೆಲೆಯುಳ್ಳವರು, ಕಾಡಿನಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಂಡವರು. ಭಾರತದಲ್ಲಿ ಅರಣ್ಯ ಕಾಯಿದೆ ಹಾಗೂ ಪ್ರಾಣಿ ಸಂರಕ್ಷಣಾ ಕಾಯಿದೆಯ ಜಾರಿಯಿಂದ ಪಶುಪಾಲನೆ ಇತ್ತೀಚಿನ ದಿನಮಾನದಲ್ಲಿ ಕಡಿಮೆಯಾಗುತ್ತಿದ್ದು ತಮ್ಮ ಮೂಲವೃತ್ತಿಯಿಂದ ಹಿಂದೆ ಸರಿಯುತ್ತಿದ್ದಾರೆ.

ಕಾಡುಗೊಲ್ಲರು ಕೃಷಿಯಿಂದಲೇ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಸಮುದಾಯದಲ್ಲಿ ಸುಮಾರು ಅರ್ಧದಷ್ಟು ಜನ ಕೃಷಿ ಮತ್ತು ಕೃಷಿಯಾಧರಿತ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದೇ ಇದಕ್ಕೆ ಸಾಕ್ಷಿ. ಆಧುನಿಕ ಸಂದರ್ಭದಲ್ಲಿ ಈ ಸಮುದಾಯದ ಆರ್ಥಿಕ ಸ್ಥಾನ-ಮಾನಗಳು ಕೆಳಸ್ತರದಲ್ಲಿವೆ. ತಾವು ದುಡಿದು ಬಂದ ಆದಾಯವು ಅತ್ಯಲ್ಪವಾಗಿದ್ದು, ಅವರ ಜೀವನ ನಿರ್ವಹಣೆಗೆ ಇದು ಸಾಕಾಗುತ್ತಿರಲಿಲ್ಲ. ಈ ಕೊರತೆಯನ್ನು ತುಂಬಲು ಕೃಷಿಯಿಂದ ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಇವರಲ್ಲಿ ಇರುವಂಥ ಭೂಮಿ ಬಹುಪಾಲು ಮಳೆ ಆಧಾರಿತವಾದದ್ದು ಹಾಗೂ ಬೇರೆಯವರ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ಉಳುಮೆ ಮಾಡುವಂತಹದ್ದು ಇದರಿಂದಾಗಿ ಬಹುತೇಕ ಕಾಡುಗೊಲ್ಲರ ಆರ್ಥಿಕ ಸ್ಥಿತಿ ತುಂಬಾ ನಿಕೃಷ್ಟ ಮಟ್ಟದಲ್ಲಿದೆ ಎಂದೇ ಹೇಳಬಹುದು.

ಇತ್ತೀಚಿನ ದಿನಗಳಲ್ಲಿ ಅಳವಡಿಸಿಕೊಂಡಿರುವ ವೃತ್ತಿಗಳು ಕೊಂಚ ಮಟ್ಟಿಗೆ ಉತ್ತಮ ಮಟ್ಟದ ಆದಾಯವನ್ನು ತರುತ್ತಿದ್ದು, ಇದರಿಂದಾಗಿ ಜೀವನ ನಿರ್ವಹಣೆಗೆ ಅನುಕೂಲವಾಗಿದ್ದರೂ ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ಇವರ ವ್ಯಾಪಾರವು ಬಂಡವಾಳ ಸಾಂದ್ರವಾಗಿರದೆ ಶ್ರಮ ಸಾಂದ್ರವಾಗಿರುವುದೆ ಕಾರಣವಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡಂತೆ ಕೆಲವರು ಮಾತ್ರ ಬಂಡವಾಳಸಾಂದ್ರ ವೃತ್ತಿಯನ್ನು ಮಾಡುತ್ತಿದ್ದು, ಬೆರಳೆಣಿಕೆಯಷ್ಟು ಕುಟುಂಬಗಳು ಉತ್ತಮ ಜೀವನ ನಿರ್ವಹಿಸುತ್ತಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಕಾಡುಗೊಲ್ಲರು ಆರ್ಥಿಕ ಚೌಕಟ್ಟಿನೊಳಗೆ ವೃತ್ತಿಗಳನ್ನು, ವ್ಯವಹಾರಗಳನ್ನು ಹಾಗೂ ಆದಾಯವನ್ನು ಒಳಗೊಂಡಿದ್ದು, ಇವರ ಪ್ರತಿಯೊಂದು ಚಟುವಟಿಕೆಯ ಮೂಲ ಕೂಡ ಇವೇ ಆಗಿವೆ ಎನ್ನಬಹುದು. ಮಾನವನ ಬೌದ್ಧಿಕ ಮಟ್ಟ ಬೆಳೆದಂತೆ ಹಾಗೂ ಸರ್ಕಾರ ತಂದಿರುವ ನಿಷೇದದಿಂದಾಗಿ

ಬೇಟೆಯಾಡುವುದನ್ನು ಬಿಟ್ಟು, ಒಂದು ಕಡೆ ನೆಲೆನಿಂತು ಭೂಮಿಯಲ್ಲಿ ಕೃಷಿ ಮಾಡುತ್ತಾ, ಪ್ರಾಣಿಗಳನ್ನು ಸಾಕುತ್ತಾ ಜೀವನ ನಡೆಸತೊಡಗಿದ್ದಾರೆ. "ಆಧುನಿಕ ಮಾನವನ ಬೌದ್ಧಿಕ ಮಟ್ಟ ವಿಕಾಸವಾದಂತಲ್ಲಾ ಕೈಗಾರಿಕಾ ಸೇವಾವಲಯಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಮೂಲಭೂತ ಸೌಕರ್ಯಗಳಾದ ಸಾರಿಗೆ ಸಂಪರ್ಕ, ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ವಸತಿ, ಕುಡಿಯುವ ನೀರು ಇತ್ಯಾದಿ ಸೌಲಭ್ಯಗಳನ್ನು ಪಡೆದು ನಾಗರೀಕನಾಗಿ ಜೀವನ ಸಾಗಿಸತೊಡಗಿದ್ದಾನೆ. ಆರಂಭದ ದಿನಗಳಿಂದ ಆಧುನಿಕವರೆಗಿನ ದಿನಗಳನ್ನು ಆಧಾರವಾಗಿಟ್ಟುಕೊಂಡು ಮಾನವನ ಜೀವನದಲ್ಲಿ ಸಾಗಿಬಂದಿರುವ ಕ್ರಮವನ್ನು ಕೃಷಿ (ಪ್ರಾಥಮಿಕ) ವಲಯ, ಕೈಗಾರಿಕ (ದ್ವಿತೀಯ) ವಲಯ, ಸೇವಾ (ತೃತೀಯ) ವಲಯಗಳಾಗಿ ವಿಂಗಡಿಸಲಾಗುವುದು. ಈ ಮೂರು ವಲಯಗಳನ್ನು ಗಣನೆಗೆ ತೆಗೆದುಕೊಂಡಾಗ ಯಾವ ರಾಷ್ಟ್ರಗಳು ಕೈಗಾರಿಕೆ ಮತ್ತು ಸೇವಾವಲಯದಲ್ಲಿ ಹೆಚ್ಚು ತೊಡಗಿಸಿಕೊಂಡಿವೆಯೋ ಆ ರಾಷ್ಟ್ರೀಯ ಉತ್ಪನ್ನ ಮತ್ತು ನೈಜ ತಲಾ ಆದಾಯ ಅಧಿಕವಿದ್ದು ಮುಂದುವರೆದ ಆರ್ಥಿಕತೆ ಎನಿಸಿಕೊಂಡಿವೆ".[೩] ಆದರೆ ಕಾಡುಗೊಲ್ಲರು ಶೈಕ್ಷಣಿಕವಾಗಿ ತೀರಾ ಕೆಳಮಟ್ಟ ದಲ್ಲಿದ್ದು, ತಮ್ಮ ಪರಂಪಾರನುಗತ ಪಶುಪಾಲನೆ ಮತ್ತು ಕೃಷಿಯಲ್ಲಿಯೇ ತೊಡಗಿಕೊಂಡಿದ್ದಾರೆ. ಅವರ ಮೂಲವೃತ್ತಿಗಳಲ್ಲಿ ವೈಜ್ಞಾನಿಕತೆ ಬೆಳೆದಿದ್ದರೂ ಅವುಗಳನ್ನು ಅಳವಡಿಸಿಕೊಳ್ಳಲಾಗದೇ ತಮ್ಮ ಉತ್ಪಾದನಾ ವ್ಯವಸ್ಥೆಯನ್ನು ಉನ್ನತ ಮಟ್ಟಕೇರಿಸಿಕೊಳ್ಳಲಾಗದೆ ಬದುಕುತ್ತಿರುವುದನ್ನು ಕಾಣುತ್ತೇವೆ.

೫.೧ ವೃತ್ತಿಗಳು

ಹರ್ಸ್ಕೋವಿಟ್ ಅವರು "There is no Society without methods of production, distribution, consumption and some from exchange. There is no group without and some expenssion of value, even through may not be formulated in terms of some Community accepted monetary symbol".[4] ಎಂದಿದ್ದಾರೆ. ಒಂದು ಬುಡಕಟ್ಟಿನ ಆರ್ಥಿಕ ಜೀವನ ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಅಂತೆಯೇ ಅವರ ಆರ್ಥಿಕ ಜೀವನವು ಅವಲಂಬಿಸಿರುವುದು ಅವರು ಮಾಡುವಂತ ಕಸುಬುಗಳಿಂದಾಗಿದೆ. ಹೀಗಾಗಿ ತುಂಬಾ ಮುಂದುವರೆದ ಸಮಾಜದ ಆರ್ಥಿಕ ಜೀವನವು ನೈಪುಣ್ಯತೆಯಿಂದ ಕೂಡಿರುತ್ತದೆ. ಆದರೆ ಅರಣ್ಯವಾಸಿ ಸಮುದಾಯಗಳಲ್ಲೂ ಅವಶ್ಯಕತೆಗಳು ಸೀಮಿತವಾದವುಗಳಾಗಿವೆ. ಇವರಲ್ಲಿರುವ ಅಲ್ಪ ತಾಂತ್ರಿಕ ನೈಪುಣ್ಯತೆ ಯಿಂದಲೆ ತಮಗೆ ಬೇಕಾದದ್ದನ್ನು ಪೂರೈಕೆ ಮಾಡಿಕೊಂಡು ಚೊಕ್ಕವಾಗಿ ಜೀವನ ಸಾಗಿಸುವ ಕೆಲಸವನ್ನು ಮಾಡುತ್ತಾರೆ.

ಈ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕಾಡುಗೊಲ್ಲರ ಆರ್ಥಿಕ ಜೀವನ ಅವರ ಪರಂಪರಾಗತ ಬದುಕಿಗೆ ಅಂಟಿಕೊಂಡು ಬಂದದ್ದು. ಅವರ ಜೀವನ ಒಂದು ವಿಧದಲ್ಲಿ "ಒಗ್ಗದ್ದಕ್ಕೆ ಹೊಲ, ಕಾಡು ಲೇಸು" ಎಂಬ ಗಾದೆಯ ಮಾತನ್ನು ಅನುಸರಿಸಿ ನಿಂತಿರುವಂತಹದ್ದು. ಇವರು ಮೂಲತಃ ಊರಿನಿಂದ ದೂರವಿದ್ದು, ಇಂದು ನಾಡಿಗೆ ಬಂದು ಜೀವನ ಸಾಗಿಸುವ ಪರಿಸ್ಥಿತಿ ಎದುರಾಗಿದೆ. ಕಾಡಿನ ಮಕ್ಕಳಾದ

[illegible]

[illegible]

[illegible]

ಇವರು ನಾಡಿನಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೂ ತಮ್ಮ ಹೊಟ್ಟೆಪಾಡಿಗಾಗಿ ಕೃಷಿ, ಪಶುಪಾಲನೆ, ಕುರಿಸಾಕಾಣಿಕೆ, ಕಾಡುಜನ್ಯ ವಸ್ತುಗಳ ಮಾರಾಟ ಮುಂತಾದ ವೃತ್ತಿಗಳಲ್ಲಿ ತೊಡಗಿಕೊಂಡಿರುವುದು ಕ್ಷೇತ್ರ ಅಧ್ಯಯನದಿಂದ ತಿಳಿದುಬಂದಿದೆ. ಇವರು ತಮ್ಮ ಜೀವನ ನಿರ್ವಹಣೆಗಾಗಿ ಶ್ರಮದ ಬದುಕನ್ನು ಅವಲಂಬಿಸಿದ್ದಾರೆ. ಇತ್ತೀಚೆಗೆ ಬೆರಳೆಣಿಕೆಯಷ್ಟು ಜನರು ಸರ್ಕಾರಿ ಹುದ್ದೆಯಲ್ಲಿದ್ದು ಮತ್ತೆ ಕೆಲವರು ಸಣ್ಣ-ಪುಟ್ಟ ಖಾಸಗಿ ಕಂಪನಿಗಳಲ್ಲಿ ವಿವಿಧ ವೃತ್ತಿಗಳಲ್ಲಿ ದುಡಿಯುತ್ತಿದ್ದಾರೆ.

ನಾನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕಾಡುಗೊಲ್ಲರ ಐದು ಹಟ್ಟಿಗಳಲ್ಲಿ ವೃತ್ತಿಗಳ ಚಿತ್ರಣ ಈ ಕೆಳಗಿನಂತಿದೆ.

ಕೋಷ್ಟಕ ೫.೧

ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವ ಒಟ್ಟಾರೆ ಲಿಂಗವಾರು ಪ್ರಮಾಣ

ಕ್ರ.ಸಂ.	ವೃತ್ತಿಗಳು	ಗಂಡು	ಹೆಣ್ಣು	ಒಟ್ಟು
೧	ಕೃಷಿ	೧೩೮	೧೦೯	೨೪೭
೨	ಕೃಷಿಕೂಲಿ	೪೭೨	೪೭೩	೯೪೫
೩	ದಿನಗೂಲಿ	೫೩	೦೮	೬೧
೪	ಸಣ್ಣ ವ್ಯಾಪಾರ	೧೫	೦೪	೧೯
೫	ಸರ್ಕಾರಿ	೦೬	೦೧	೦೭
೬	ಖಾಸಗಿ	೦೯	೦೧	೧೦
೭	ಇತರೆ	೧೯	೦೮	೨೭
	ಒಟ್ಟು	೭೧೨	೬೦೪	೧೩೧೬

ಕೋಷ್ಟಕ ೧ರಲ್ಲಿ ತೋರಿಸಿದಂತೆ ಒಟ್ಟಾರೆ ೧೩೧೬ ಜನ ದುಡಿಯುವವರಾಗಿದ್ದು. ಅದರಲ್ಲಿ ಶೇ. ೫೪.೧೦ (೭೧೨)ರಷ್ಟು ಪುರುಷರಿದ್ದು, ಶೇ. ೪೫.೮೯ (೬೦೪)ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ಕೃಷಿಯಲ್ಲಿ ತೊಡಗಿರುವವರ ಪ್ರಮಾಣ ಶೇ. ೧೮.೭೬ (೨೪೭)ರಷ್ಟು ಜನ, ಇದರಲ್ಲಿ ಪುರುಷರು ೫೫.೮೭ ಹಾಗೂ ಮಹಿಳೆಯರು ೪೪.೧೨ ಆಗಿದ್ದಾರೆ. ಕೃಷಿಕೂಲಿಗಳು ಶೇ. ೭೧.೮೦ (೯೪೫ ಜನ ಇದರಲ್ಲಿ ಪುರುಷರು ಮತ್ತು ಕ್ರಮೇಣವಾಗಿ ಶೇ. ೪೯.೯೪ರಷ್ಟು ಹಾಗೂ ೫೦.೦೫ ಕಂಡುಬರುತ್ತಾರೆ. ದಿನಗೂಲಿಗಳಾಗಿ ಶೇ. ೪.೬೩ರಷ್ಟು (೬೧ ಜನ ಗಂಡು ಶೇ. ೮೬.೮೩, ಹೆಣ್ಣು ಶೇ. ೧೩.೪ರಲ್ಲಿದ್ದಾರೆ.) ಕಂಡುಬರುತ್ತಾರೆ. ಸಣ್ಣ ವ್ಯಾಪಾರದಲ್ಲಿ ಶೇ. ೧.೪೪ರಷ್ಟು (೧೯ ಜನ ಅದರಲ್ಲಿ ಗಂಡು ಮತ್ತು ಹೆಣ್ಣು ಕ್ರಮೇಣವಾಗಿ ಶೇ. ೭೮.೯೪ ಹಾಗೂ ಶೇ. ೨೧.೦೫) ಮತ್ತು ಸರ್ಕಾರಿ ಹುದ್ದೆಯಲ್ಲಿ ಶೇ. ೦.೫೩ರಷ್ಟು (೭ ಜನ ಇದರಲ್ಲಿ ಗಂಡು ಶೇ. ೮೫.೭೧, ಹೆಣ್ಣು ಶೇ. ೧೪.೨೮ರಷ್ಟು) ಇದ್ದಾರೆ. ಅದೇ ರೀತಿಯಾಗಿ ಖಾಸಗಿ ಹುದ್ದೆಯಲ್ಲಿ


[illegible]

[illegible]	[illegible]	[illegible]

[illegible]

ಶೇ. ೦.೭೫ (೧೦ ಜನ ಅದರಲ್ಲಿ ಶೇ. ೯೦ ಗಂಡು, ಶೇ. ೧೦ರಷ್ಟು ಸ್ತ್ರೀಯರಿದ್ದಾರೆ) ಕಾಡುಗೊಲ್ಲರು ವಿವಿಧ ವೃತ್ತಿಗಳಲ್ಲಿ ತೋರಿಸಲಾಗಿದ್ದು ಇದು ಶೇ. ೨.೦೫ (೨೭ ಜನ ಇದರಲ್ಲಿ ಪುರುಷ ಶೇ. ೭೦.೩೭ರಷ್ಟು ಹಾಗೂ ಮಹಿಳೆ ಶೇ. ೨೯.೬೨) ರಷ್ಟಿದ್ದಾರೆ.

ವೃತ್ತಚಿತ್ರ ೫.೧ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವ ಒಟ್ಟಾರೆ ಲಿಂಗವಾರು ಪ್ರಮಾಣ



ಕಾಡುಗೊಲ್ಲರ ಈ ಮೇಲಿನ ವೃತ್ತಿಗಳ ಚಿತ್ರಣವನ್ನು ಗಮನಿಸಿದಾಗ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಮತ್ತು ಕೃಷಿಕೂಲಿಗಳಾಗಿರುವುದು ಕಂಡುಬರುತ್ತದೆ. ಅದರಲ್ಲಿಯೂ ಕೃಷಿಕೂಲಿಗಳ ಪ್ರಮಾಣ ಶೇ. ೭೧.೮೦ರಷ್ಟಿರುವುದರಿಂದ ಇವರ ಜೀವನದ ಭೌತಿಕ ಮಟ್ಟ ಕಡಿಮೆ ಇದೆ ಎಂದೇ ಹೇಳಬಹುದು. 'ಕಸುಬು' ಅಥವಾ 'ಕೆಲಸ' ಎಂದರೆ ಅದು ಒಂದು ಆರ್ಥಿಕ ಚಟುವಟಿಕೆ. ಆರ್ಥಿಕ ಚಟುವಟಿಕೆಗಳು ಒಬ್ಬ ವ್ಯಕ್ತಿಯ ಶಿಕ್ಷಣದ ಮಟ್ಟವನ್ನು ಅನುಸರಿಸಿ ಸಂಬಂಧವನ್ನು ಹೊಂದಿರುತ್ತದೆ. ಉದಾಹರಣೆಗೆ ಹೆಚ್ಚು ಕಡಿಮೆ ನಿರಕ್ಷರಿಗಳು (ಭಾರತದಂತಹ ಮುಂದುವರೆಯುತ್ತಿರುವ ದೇಶದಲ್ಲಿ) ಕೃಷಿಕ ವೃತ್ತಿಯನ್ನಲ್ಲದೇ ಬೇಟೆಗಾರಿಕೆ, ಕುರಿಸಾಕಣಿಕೆ ಮುಂತಾದವುಗಳನ್ನು ಮೇಲೆ ಅವಲಂಬಿಸಿದ್ದಾರೆ. ಇದಕ್ಕೆ ವ್ಯತಿರಿಕ್ತವಾದ ಓದು-ಬರಹ ಬಂದ ಮತ್ತು ನೈಪುಣ್ಯತೆಗಳನ್ನು ಹೊಂದಿದ ಜನ ಔದ್ಯಮಿಕ ರಂಗ ಮತ್ತು ಸೇವಾರಂಗ ಕಾರ್ಯಗಳಲ್ಲಿ ತೊಡಗಿದ್ದಾರೆ. ಕೃಷಿಯನ್ನೇ ಅವಲಂಬಿಸಿರುವವರ ಆದಾಯದ ಮಟ್ಟ ಕಡಿಮೆ ಪ್ರಮಾಣದಲ್ಲಿದೆ. ಔದ್ಯಮಿಕ ಮತ್ತು ಸೇವಾರಂಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜನರ ಆದಾಯ ಮಟ್ಟ ಅಧಿಕ ಪ್ರಮಾಣದಲ್ಲಿದೆ. ಒಬ್ಬ ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ನಿರ್ಮಿಸುವಲ್ಲಿ ಅವನ ವೃತ್ತಿ ಪ್ರಮುಖವಾಗಿರುತ್ತದೆ. ಅಂತೆಯೇ ಕಾಡುಗೊಲ್ಲರಲ್ಲಿ ಅನಕ್ಷರತೆಯ ಪ್ರಮಾಣ ಹೆಚ್ಚಾಗಿರುವುದರಿಂದ ಬೇರೆ ಬೇರೆ ವಲಯದಲ್ಲಿ ಇವರಿಗೆ ಅವಕಾಶಗಳು ಕಡಿಮೆಯಿರುವುದರಿಂದ ಕೃಷಿ ಮತ್ತು ಕೃಷಿಗೆ ಸಂಬಂಧಿಸಿ ವೃತ್ತಿಗಳನ್ನೇ ನಂಬಿ ಬದುಕುವಂತಾಗಿದೆ.

ಕಾಡುಗೊಲ್ಲರು ಮಾಡುವಂತ ವಿವಿಧ ವೃತ್ತಿಗಳನ್ನು ಒಂದೊಂದಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

೫.೧.೧ ಕೃಷಿ

ಕೃಷಿಯು ಮಾನವ ಮತ್ತು ಪ್ರಕೃತಿಯ ನಡುವಿನ ಹೊಂದಾಣಿಕೆಯ ವೃತ್ತಿಯಾಗಿದ್ದು, -ಇಲ್ಲಿ ಬಹುಪಾಲು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿರುವುದರಿಂದ ಕೃಷಿ ಭಾರತದ ಆರ್ಥಿಕತೆಯ ಬೆನ್ನೆಲುಬಾಗಿದೆ".[೫] ಕೃಷಿಯಲ್ಲಿ ಕೆಲಸ ಮಾಡತಕ್ಕಂತ ರೈತರು ಭೂಮಿಯನ್ನು ಹದಗೊಳಿಸಿ ಉತ್ತಿ, ಬಿತ್ತಿ, ಬೆವರು ಸುರಿಸಿ ಬೆಳೆದು ದೇಶದ ಜನರ ಹೊಟ್ಟೆ ತುಂಬಿಸುವ ಅನ್ನದಾತ. ಆದರೆ ಇವರ ಜೀವನ ಸುಖಕರವಾಗಿಲ್ಲ. ಏಕೆಂದರೆ ಸರಿಯಾದ ಮಳೆ-ಬೆಳೆ ಹಾಗೂ ವರ್ಷದಲ್ಲಿ ದುಡಿದ ಬೆಳೆಗೆ ಸರಿಯಾದ ಬೆಲೆ ಸಿಗದೇ ಇದ್ದಾಗ ವೆಚ್ಚ ಸರಿದೂಗಿಸಲು ಸಿಗದ ಬೆಲೆ ಹಾಗೂ ಹಳೆ ಮಾದರಿಯ ಬೇಸಾಯ ಪದ್ಧತಿಯನ್ನು ಅವಲಂಬಿಸಿರುವುದರಿಂದ ನಮ್ಮ ರೈತರ ಬದುಕು ಕಷ್ಟಕರವಾಗಿದೆ. ಕೃಷಿಯ ಅಭಿವೃದ್ಧಿ ಆದಾರದ ಮೇಲೆ ಕೈಗಾರಿಕೆ, ಸಾರಿಗೆ, ಸಂಪರ್ಕ, ವ್ಯಾಪಾರ ಇನ್ನು ಅನೇಕ ವಲಯಗಳು ಅಭಿವೃದ್ಧಿಯಾಗುತ್ತಿದೆ. ೧೯೯೭ರ ಹೊತ್ತಿಗೆ ಭೌಗೋಳಿಕ ಪ್ರದೇಶದಲ್ಲಿ ಶೇ. ೬೬ರಷ್ಟು ಜನ ಭೂಪ್ರದೇಶದಲ್ಲಿ ಕೃಷಿಯನ್ನೆ ಮೂಲ ಉದ್ಯೋಗವನ್ನು ಮಾಡಿಕೊಂಡು ಬದುಕುವವರು ಭಾರತದಲ್ಲಿದ್ದಾರೆ. ಆದುದರಿಂದ ಭಾರತವನ್ನು ಕೃಷಿ ಯಾಧಾರಿತ ದೇಶವೆಂದೇ ಹೇಳುತ್ತಾರೆ.

ಬುಡಕಟ್ಟಿನ ಜನರು ಕೃಷಿಯನ್ನು ಅವಲಂಬಿಸಿರುವುದರಿಂದ ಮತ್ತು ಶ್ರೀಮಂತರಲ್ಲದ್ದರಿಂದ ಅವರ ಸಾಮಾಜಿಕ ಅಂತಸ್ತು ಹೆಚ್ಚಿನ ಮಟ್ಟದಾಗಿರುವುದಿಲ್ಲ. ಭಾರತವು ಕೃಷಿ ಪ್ರಧಾನ ಅರ್ಥವ್ಯವಸ್ಥೆಯಾಗಿದ್ದು ದೇಶದ ಶೇ. ೭೦ರಷ್ಟು ಜನ ಕೃಷಿಯಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. "ಭಾರತದಂತೆ ಕರ್ನಾಟಕವೂ ಕೃಷಿ ಪ್ರಧಾನ ರಾಜ್ಯ. ಇದು ೧.೯೫ ಲಕ್ಷ ಚ.ಕಿ.ಮೀ. ವಿಸ್ತೀರ್ಣದೊಂದಿಗೆ ಕರ್ನಾಟಕವು ಪ್ರಧಾನವಾಗಿ ಮಳೆಯಾಶ್ರಿತ ಬೇಸಾಯದ ರಾಷ್ಟ್ರವಾಗಿದೆ".[೬] ಇಂತಹ ರಾಜ್ಯದಲ್ಲಿ ಕೃಷಿಯನ್ನೇ ನಂಬಿ ಜೀವನ ನಿರ್ವಹಿಸುವ ಸಮುದಾಯಗಳಲ್ಲಿ ಕಾಡುಗೊಲ್ಲರ ಸಮುದಾಯವು ಒಂದು. ಈ ಸಮುದಾಯವು ಕೃಷಿಯಲ್ಲಿ ಗಂಡು ಹೆಣ್ಣು ಎಂಬ ಭೇದಭಾವವಿಲ್ಲದೆ ದುಡಿಯುತ್ತಾರೆ. ಇವರು ವ್ಯವಸಾಯದಲ್ಲಿ ಹಿಂದುಳಿದವರಾಗಿದ್ದು, ಕೃಷಿಗೆ ಜಮೀನು ಕಡಿಮೆಯಿದ್ದು, ಅದರಲ್ಲಿ ಸಣ್ಣ ಭೂಹಿಡುವಳಿದಾರರು, ಸಣ್ಣ ರೈತರು, ಅತಿಸಣ್ಣ ರೈತರು ಹಾಗೂ ಕೃಷಿಕಾರ್ಮಿಕರೇ ಹೆಚ್ಚಾಗಿ ಕಾಣಸಿಗುತ್ತಾರೆ. ಇವರಲ್ಲಿ ಹೆಚ್ಚಾಗಿ ಒಣ ಬೇಸಾಯ ಪದ್ಧತಿ ಇರುವುದು ಕಂಡಬರುತ್ತದೆ. ಈ ಕಾರಣದಿಂದ ಇವರು ಕೃಷಿಯ ಮೂಲಕ ಆರ್ಥಿಕವಾಗಿ ಸದೃಢರಾಗಲು ಸಾಧ್ಯವಾಗಿಲ್ಲ.

ಪ್ರಸ್ತುತ ಕ್ಷೇತ್ರಕಾರ್ಯ ಮಾಡಿದ ಹಳ್ಳಿಗಳಲ್ಲಿ ಕೃಷಿ ಮಾಡುವ ಕಾಡುಗೊಲ್ಲರ ಅಂಕಿ ಸಂಖ್ಯೆಗಳನ್ನು ಈ ಕೆಳಗಿನ ಕೋಷ್ಟಕದ ಮೂಲಕ ಕಾಣಬಹುದಾಗಿದೆ.

ಕೋಷ್ಟಕ ೫.೨

ಕೃಷಿಯಲ್ಲಿ ತೊಡಗಿಸಿಕೊಂಡಿರುವ ಲಿಂಗವಾರು ಪ್ರಮಾಣ

ಕ್ರ.ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೧೨	೨೦	೩೨
			ಜೋಗಿಹಟ್ಟಿ	೦೫	೦೨	೦೭
			ಯಲಗಟ್ಟೆ ಗೊಲ್ಲರಹಟ್ಟಿ	೫೮	೪೭	೧೦೫
			ಬೆಳಗೆರೆ ಗೊಲ್ಲರಹಟ್ಟಿ	೪೩	೩೪	೭೭
		ಮೊಳಕಾಲ್ಮೂರು	ಗುಂಡ್ಲೂರು	೨೦	೦೬	೨೬
			ಒಟ್ಟು	೧೩೮	೧೦೯	೨೪೭

ಮೇಲ್ಕಾಣಿಸಿದ ಕೋಷ್ಟಕ ಗಮನಿಸಿದಾಗ ಒಟ್ಟಾರೆ ಕಾಡುಗೊಲ್ಲರಲ್ಲಿ ಶೇ. ೧೮.೭೬ ರಷ್ಟು ಜನರು ಕೃಷಿಯಲ್ಲಿ ತೊಡಗಿದವರಾಗಿದ್ದಾರೆ. ಇದರಲ್ಲಿ ಶೇ. ೫೫.೮೭ರಷ್ಟು ಗಂಡು ಮತ್ತು ಶೇ. ೪೪.೧೨ರಷ್ಟು ಹೆಣ್ಣುಮಕ್ಕಳು ಕಂಡುಬರುತ್ತಾರೆ. ಕಾಡುಗೊಲ್ಲರ ವಾಸಿಸುವ ಹಟ್ಟಿಗಳಲ್ಲಿಯ ಕೃಷಿ ಚಿತ್ರಣವನ್ನು ಗಮನಿಸಿದಾಗ ಹನುಮಂತನಹಳ್ಳಿಯಲ್ಲಿ ಶೇ. ೧೨.೯೫ರಷ್ಟು (ಇದರಲ್ಲಿ ಪುರುಷ ಹಾಗೂ ಮಹಿಳೆಯರು ಕ್ರಮವಾಗಿ ಶೇ. ೩೭.೫ ಮತ್ತು ಶೇ. ೬೨.೫ರಷ್ಟಿದ್ದಾರೆ). ಹಾಗೂ ಜೋಗಿಹಟ್ಟಿಯಲ್ಲಿ ಶೇ. ೨.೮೩ (ಪುರುಷ ಹಾಗೂ ಮಹಿಳೆಯರು ಕ್ರಮವಾಗಿ ಶೇ. ೭೧.೪೨ ಮತ್ತು ಶೇ. ೨೮.೫೭)ರಷ್ಟು. ಅತಿ ಕಡಿಮೆ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿದವರಾಗಿ ಕಂಡುಬರುತ್ತಿದ್ದರೆ. ಅತಿ ಹೆಚ್ಚಿನ ಪ್ರಮಾಣದಲ್ಲಿ ಯಲಗಟ್ಟೆಯಲ್ಲಿ ಕಂಡುಬರುತ್ತಿದ್ದು ಅದು ಶೇ. ೪೨.೫೧ (ಅದರಲ್ಲಿ ಗಂಡು ಶೇ. ೫೫.೨೩ ಹಾಗೂ ಹೆಣ್ಣು ಶೇ. ೪೪.೭೬)ರಷ್ಟಿದೆ. ಹಾಗೆಯೇ ಬೆಳಗೆರೆಯಲ್ಲಿ ಶೇ. ೩೧.೧೭ (ಇದರಲ್ಲಿ ಪುರುಷ ಹಾಗೂ ಮಹಿಳೆಯರು ಕ್ರಮವಾಗಿ ಶೇ. ೫೫.೮೧ ಮತ್ತು ಶೇ. ೪೪.೧೫)ರಷ್ಟಿದ್ದಾರೆ. ಗುಂಡ್ಲೂರಿನಲ್ಲಿ ಶೇ. ೧೦.೫೨ (ಇದರಲ್ಲಿ ಗಂಡು ಶೇ. ೭೬.೯೨ ಹಾಗೂ ಹೆಣ್ಣು ಶೇ. ೨೩.೦೭)ರಷ್ಟಿದ್ದಾರೆ.

ಒಟ್ಟಾರೆಯಾಗಿ ಯಲಗಟ್ಟೆಯಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿದವರು ಕಂಡು ಬಂದರೆ ಬೆಳಗೆರೆ, ಹನುಮಂತನಹಳ್ಳಿ ಹಾಗೂ ಗುಂಡ್ಲೂರುಗಳಲ್ಲಿ ಸಾಧಾರಣ ಪ್ರಮಾಣದಲ್ಲಿ ಕಂಡುಬರುತ್ತಾರೆ. ಆದರೆ ಜೋಗಿಹಟ್ಟಿಯಲ್ಲಿ ಮಾತ್ರ ಕಡಿಮೆ ಪ್ರಮಾಣದ ಕೃಷಿಕರಿರುವುದು ಕಂಡುಬರುತ್ತದೆ. ಈ ರೀತಿ ಇರಲು ಕಾರಣ ಜೋಗಿಹಟ್ಟಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಡುಗೊಲ್ಲರ ಭೂಹಿಡುವಳಿಗಳಿದ್ದು, ಇಲ್ಲಿ ಹೆಚ್ಚಾಗಿ ಕೃಷಿ ಕೂಲಿಗಳಿದ್ದಾರೆ.

೫.೧.೧.೧ ಭೂಹಿಡುವಳಿ

ದೇಶದ ಅನೇಕ ಭಾಗಗಳನ್ನು ನೋಡಿದಾಗ ಬೇಸಾಯದಲ್ಲಿ ತೀವ್ರ ಬಿಕ್ಕಟ್ಟಿನ ಪರಿಸ್ಥಿತಿಯಿದೆ ಎನ್ನುವ ವಾಸ್ತವವನ್ನು ಅಲ್ಲಗಳೆಯುವಂತಿಲ್ಲ. ಪ್ರತಿಯೊಂದು ಪ್ರದೇಶದ ಪ್ರತಿಕೂಲ ಪರಿಸ್ಥಿತಿಯ ನಡುವೆ ಕೃಷಿಕಾರ್ಯ ನಡೆಯುತ್ತಿದೆ ಎನ್ನುವ ಭಾವನೆ ನಮ್ಮಲ್ಲಿ ಮೂಡುತ್ತದೆ. ಇದಕ್ಕೆ ಅನೇಕ ಕಾರಣಗಳಿದ್ದು, ಆದರೆ ಅಂತಿಮ ಉತ್ತರ ಒಂದೇ ಆಗಿದೆ. ಬಹುಪಾಲು ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ ಎನ್ನುವುದು ಇದಕ್ಕೆ ಕಾಡುಗೊಲ್ಲರು ಹೊರತಾಗಿಲ್ಲ. ಕಾಡುಗೊಲ್ಲರ ಭೂಮಿಯು ಮಳೆಯಾಧರಿತ ಒಣ ಬೇಸಾಯ ಪದ್ಧತಿಯಿಂದ ಕೂಡಿದ್ದು ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ.

ಕಾಡುಗೊಲ್ಲರು ಕೃಷಿಯಲ್ಲಿ ತುಂಬಾ ಹಿಂದುಳಿದವರಾಗಿದ್ದು, ಭೂ ಹಿಡುವಳಿ ಹೊಂದಿದವರ ಸಂಖ್ಯೆ ಕಡಿಮೆಯಿದೆ. ಇವರಲ್ಲಿ ಅತಿ ಹೆಚ್ಚಾಗಿ ಸಣ್ಣಹಿಡುವಳಿದಾರರೇ ಇದ್ದು ಹೆಚ್ಚು ಒಣ ಬೇಸಾಯ ಪದ್ಧತಿಯನ್ನು ಅವಲಂಬಿಸಿದವರಾಗಿದ್ದಾರೆ. “ರಾಜ್ಯದ ಮೂರನೆಯ ಹಿಂದುಳಿದ ವರ್ಗದ ಆಯೋಗವು ರಾಜ್ಯದೆಲ್ಲೆಡೆ ನಡೆಸಿದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪ್ರಕಾರ ಕಾಡುಗೊಲ್ಲರ ಸಮುದಾಯವು ಅತ್ಯಂತ ಹೆಚ್ಚಿನ ಭೂರಹಿತ ಮತ್ತು ಜಾಗರಹಿತ ಸಮುದಾಯಗಳಲ್ಲಿ ಒಂದು ಎಂಬುದಾಗಿ ತಿಳಿಸಿದೆ”.[೭] ಒಂದು ವೇಳೆ ಅಲ್ಲಲ್ಲಿ ಕೆಲವರಿಗೆ ಸ್ವಲ್ಪ ಪ್ರಮಾಣದ ಜಮೀನಿದ್ದರೆ ಆ ಜಮೀನು ದಿನ್ನೆಯೇ, ಜೌಗು ಪ್ರದೇಶವೋ ಅಥವಾ ನೀರಾವರಿಗೆ ಸಮರ್ಪಕವಲ್ಲದ ಬಂಜರು ಭೂಮಿಯಾಗಿದ್ದು, ಕೃಷಿಗೆ ಯೋಗ್ಯವಲ್ಲದ ಭೂಮಿಯಾಗಿರುತ್ತದೆ.

ಕಾಡುಗೊಲ್ಲರಿಗೆ ತಮ್ಮ ಪೂರ್ವಜರಿಂದ ಬಂದ ಕೃಷಿ ಭೂಮಿಯಿಲ್ಲ. ಈಗಿರುವ ಭೂಮಿಯು ಮಧ್ಯದಲ್ಲಿ ಬಂದಂತಹದ್ದು. ಕಾಡುಗೊಲ್ಲರು ಭೂಮಿ ಹೊಂದದೆ ಇರುವುದಕ್ಕೆ ಮೂಲತಃ ಅಲೆಮಾರಿ ಗಳಾಗಿರುವುದೇ ಇದಕ್ಕೆ ಕಾರಣ. ಭೂಮಿಯನ್ನು ಹೊಂದಿದ ಕಾಡುಗೊಲ್ಲರ ಜಮೀನುಗಳು ಬಯಲು ಪ್ರದೇಶಗಳಲ್ಲಿರುತ್ತವೆ. ಕಾರಣವೇನೆಂದರೆ ತಮ್ಮ ದನಗಳನ್ನು, ಕುರಿಗಳನ್ನು ಮೇಯಿಸಲು ಯೋಗ್ಯವಾದ ಬಯಲು ಪ್ರದೇಶಗಳಲ್ಲಿ ನೆಲೆಯೂರಿದ್ದಾರೆ.

ನಾನು ಅಧ್ಯಯನ ಮಾಡಿದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕುಗಳಲ್ಲಿ ಕಾಡುಗೊಲ್ಲರು ಹೊಂದಿರುವ ಒಣ ಮತ್ತು ನೀರಾವರಿ ಭೂಹಿಡುವಳಿಗಳ ಅಂಕಿ-ಸಂಖ್ಯೆಗಳನ್ನು ಈ ಕೆಳಗಿನ ಕೋಷ್ಟಕದ ಮೂಲಕ ಗಮನಿಸಬಹುದು.


ಕೋಷ್ಟಕ ೫.೩

ಕಾಡುಗೊಲ್ಲರು ಹೊಂದಿರುವ ಒಣ ಮತ್ತು ನೀರಾವರಿ ಭೂಹಿಡುವಳಿ (ಎಕರೆಗಳಲ್ಲಿ)

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬ	ಒಣ	ನೀರಾವರಿ	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೬೨	೨೪೬	೩೫	೨೮೧
			ಜೋಗಿಹಟ್ಟಿ	೭೨	೩೨೨	೧೩.೫	೩೩೫.೫
			ಯಲಗಟ್ಟಿ ಗೊಲ್ಲರಹಟ್ಟಿ	೧೯೪	೧೧೯೨	೨೧೭.೫	೧೪೦೯.೫
			ಬೆಳಗೆರೆ ಗೊಲ್ಲರಹಟ್ಟಿ	೧೦೫	೪೦೭	೪೦.೯	೪೪೭.೯
		ಮೊಳಕಾಲ್ಮೂರು	ಗುಂಡ್ಲೂರು	೪೬	೧೫೪	೪೩.೫	೧೯೭.೫
			ಒಟ್ಟು	೪೭೯	೨೩೨೧	೩೫೦.೪	೨೬೭೧.೪

ಮೇಲಿನ ಕೋಷ್ಟಕದಲ್ಲಿಯ ಅಂಕಿಸಂಖ್ಯೆಗಳನ್ನು ಗಮನಿಸಿದಾಗ ಕಾಡುಗೊಲ್ಲರು ೨೬೭೧.೪ ಎಕರೆಗಳಷ್ಟು ಭೂಹಿಡುವಳಿಯನ್ನು ಹೊಂದಿದವರಾಗಿದ್ದಾರೆ. ಅದರಲ್ಲಿ ಶೇ. ೮೬.೮ (೨೩೨೧ ಎಕರೆ ಒಣಭೂಮಿ ಇದ್ದು ಶೇ. ೧೩.೧೧ (೩೫೦.೪ ಎಕರೆ ರಷ್ಟು ನೀರಾವರಿ ಭೂಮಿಯನ್ನು ಹೊಂದಿದವರಾಗಿದ್ದಾರೆ. ಕಾಡುಗೊಲ್ಲರು ಐದು ಗ್ರಾಮಗಳಲ್ಲಿ ಹೊಂದಿರುವ ಒಣಬೇಸಾಯದ ಭೂಮಿಯನ್ನು ಹೋಲಿಸಿ ನೋಡಿದಾಗ ಯಲಗಟ್ಟಿ ಅತಿ ಹೆಚ್ಚು ಶೇ. ೫೧.೩೫ರಷ್ಟಿದ್ದು. ಎರಡನೆಯದಾಗಿ ಬೆಳಗೆರೆ ಶೇ. ೧೭.೫೩ರಷ್ಟು, ಮೂರನೆಯದಾಗಿ ಜೋಗಿಹಟ್ಟಿ ಶೇ. ೧೩.೮೭ರಷ್ಟಾದರೆ, ನಾಲ್ಕನೆಯದಾಗಿ ಶೇ. ೧೦.೫೯ ರಷ್ಟು ಹನುಮಂತನಹಳ್ಳಿ, ಕೊನೆಯದಾಗಿ ಗುಂಡ್ಲೂರು ಶೇ. ೬.೬೩ರಷ್ಟು ಒಣ ಭೂಹಿಡುವಳಿಗಳನ್ನು ಹೊಂದಿರುವುದು ಕಂಡುಬರುತ್ತದೆ. ಇದೇ ರೀತಿ ನೀರಾವರಿಯ ಭೂಹಿಡುವಳಿಗಳಲ್ಲಿ ಅತಿಹೆಚ್ಚು ಯಲಗಟ್ಟಿಯಲ್ಲಿ ಶೇ. ೬೨.೦೭ರಷ್ಟಿದ್ದು, ಅತಿ ಕಡಿಮೆ ಅಂದರೆ ಜೋಗಿಹಟ್ಟಿಯಲ್ಲಿ ಶೇ. ೩.೮೫ರಷ್ಟಿದೆ. ಎರಡನೆಯದಾಗಿ ಗುಂಡ್ಲೂರು ಶೇ. ೧೨.೪೧ರಷ್ಟು ಹಾಗೂ ಮೂರನೆಯದಾಗಿ ಬೆಳಗೆರೆ ಶೇ. ೧೧.೬೭ ರಷ್ಟಿದ್ದು, ಶೇ. ೯.೯೮ರಷ್ಟು ಹನುಮಂತನಹಳ್ಳಿ ನೀರಾವರಿ ಭೂ ಹಿಡುವಳಿ ಹೊಂದಿರುವುದನ್ನು ಕಾಣುತ್ತೇವೆ.

ಲಂಬಚಿತ್ರ ೫.೧ ಕಾಡುಗೊಲ್ಲರು ಹೊಂದಿರುವ ಒಣ ಮತ್ತು ನೀರಾವರಿ ಭೂಹಿಡುವಳಿ (ಎಕರೆಗಳಲ್ಲಿ)



[illegible]

[illegible]

ಕಾಡುಗೊಲ್ಲರು ಹೊಂದಿರುವ ಭೂಮಿಯ ಸ್ಥಿತಿಗತಿಗಳನ್ನು ಗಮನಿಸಿದಾಗ ಸಾಮಾನ್ಯವಾಗಿ ಮಳೆಯಾಧಾರಿತ ಭೂಮಿಯನ್ನು ಹೊಂದಿದವರೇ ಹೆಚ್ಚಾಗಿದ್ದು ಸಕಾಲಕ್ಕೆ ಮಳೆಯಾಗದೇ, ಸರಿಯಾಗಿ ಬೆಳೆ ಬೆಳೆಯಲಾರದೆ ಆರ್ಥಿಕವಾಗಿ ದುರ್ಬಲರಾಗುತ್ತಾ ನಡೆಯುತ್ತಿರುವುದು ಕಂಡುಬರುತ್ತದೆ. ಬೋರ್‌ವೆಲ್ ಹಾಕಿಸಿಕೊಂಡು ನೀರಾವರಿ ಸೌಕರ್ಯ ಪಡೆದುಕೊಂಡು ಕೃಷಿ ವೃತ್ತಿಯನ್ನು ಕೈಕೊಳ್ಳಬೇಕೆಂದರೆ ಇವರಲ್ಲಿ ಬಂಡವಾಳವಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹಲ್ಲಿದ್ದರೆ ಕಡ್ಲಿ ಇಲ್ಲ, ಕಡ್ಲಿ ಇದ್ದರೆ ಹಲ್ಲಿಲ್ಲ ಎಂಬ ಗಾದೆ ಮಾತಿನಂತಾಗಿದೆ ಇಲ್ಲಿಯ ಕಾಡುಗೊಲ್ಲರ ಸ್ಥಿತಿಗತಿಗಳು. ಭೂಮಿಯನ್ನು ಹೊಂದಿದ ಕಾಡುಗೊಲ್ಲರ ಕುಟುಂಬಗಳ ವಿವರಗಳು ಈ ಕೆಳಗಿನಂತಿದೆ.

ಕೋಷ್ಟಕ ೫.೪


ಕಾಡುಗೊಲ್ಲರ ಶ್ರೇಣೀಕೃತ ಭೂಹಿಡುವಳಿ

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬ	*ಎ	*ಬಿ	*ಸಿ	*ಡಿ	*ಇ	*ಎಫ್
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೬೨	೧	೪	೮	೧೬	೨೯	೪
			ಜೋಗಿಹಟ್ಟಿ	೭೨	೧	೫	೭	೩೪	೨೧	೨
			ಯಲಗಟ್ಟಿ ಗೊಲ್ಲರಹಟ್ಟಿ	೧೯೪	೧೦	೨೮	೫೦	೫೨	೨೪	೩೪
			ಬೆಳಗೆರೆ ಗೊಲ್ಲರಹಟ್ಟಿ	೧೦೫	೨	೬	೧೮	೨೫	೨೯	೨೩
		ಮೊಳಕಾಲ್ಮೂರು	ಗುಂಡ್ಲೂರು	೪೬	-	೩	೮	೧೬	೧೨	೭
			ಒಟ್ಟು	೪೭೯	೧೪	೪೬	೯೧	೧೪೩	೧೧೫	೭೦

ಮೇಲಿನ ಕೋಷ್ಟಕದಲ್ಲಿಯ ಕಾಡುಗೊಲ್ಲರ ಒಟ್ಟು ಕುಟುಂಬಗಳ ಭೂಹಿಡುವಳಿಯನ್ನು ಶ್ರೇಣಿಗಳಲ್ಲಿ ವಿಂಗಡಿಸಲಾಗಿದ್ದು ಈ ಗುಂಪಿನಲ್ಲಿ ಬರುವ ಕುಟುಂಬಗಳು *ಎ= ೨೫ ಎಕರೆಗಿಂತಲೂ ಹೆಚ್ಚಿನ ಭೂಮಿಯನ್ನು ಹೊಂದಿದ ಕುಟುಂಬಗಳು ದೊಡ್ಡ ಭೂಹಿಡುವಳಿದಾರರಾಗಿರುತ್ತಾರೆ. *ಬಿ= ೧೦.೧ ಎಕರೆಯಿಂದ ೨೫ ಎಕರೆಯ ಗಾತ್ರದ ಭೂಮಿ ಇರುವಂತಹ ಕುಟುಂಬಗಳು ಮಧ್ಯಮ ಭೂಹಿಡುವಳಿದಾರರಾಗಿ ಹಾಗೂ *ಸಿ= ೫.೧ ರಿಂದ ೧೦ ಎಕರೆಯ ಗಾತ್ರದ ಭೂಮಿಯನ್ನು ಹೊಂದಿದ ಕುಟುಂಬಗಳು ಅರೆ ಮಧ್ಯಮ ಭೂಹಿಡುವಳಿದಾರರು ಮತ್ತು *ಡಿ= ೨.೫೧ ಎಕರೆಯಿಂದ ೫ ಎಕರೆವರೆಗಿನ ಭೂಮಿಯನ್ನು ಹೊಂದಿದ ಕುಟುಂಬಗಳು ಸಣ್ಣ ಪ್ರಮಾಣದ ಭೂಹಿಡುವಳಿದಾರರಾಗಿ ಹಾಗೂ *ಇ= ೦.೫೦ ರಿಂದ ೨.೫೦ ಎಕರೆವರೆಗಿನ ಭೂಮಿಯನ್ನು ಹೊಂದಿದ ಕುಟುಂಬಗಳು ಅತಿಸಣ್ಣ ಭೂಹಿಡುವಳಿದಾರರೆಂದು ಮತ್ತು *ಎಫ್= ಶ್ರೇಣಿಯನ್ನು ಹೊಂದಿರುವ ಕುಟುಂಬಗಳು ಭೂರಹಿತ ಕುಟುಂಬಗಳಾಗಿವೆ ಎಂದು ವರ್ಗೀಕರಿಸಲಾಗಿದೆ.

[illegible]

ವೃತ್ತಚಿತ್ರ ೫.೨ ಕಾಡುಗೊಲ್ಲರ ಶ್ರೇಣೀಕೃತ ಭೂಹಿಡುವಳಿ



ಕೋಷ್ಟಕ ೫.೪ರಲ್ಲಿ ನೀಡಿರುವ ಅಂಕಿ-ಸಂಖ್ಯೆಗಳನ್ನು ಗಮಿನಿಸಿದಾಗ ಕಾಡುಗೊಲ್ಲರಲ್ಲಿ ದೊಡ್ಡ ಭೂಹಿಡುವಳಿದಾರರು ಶೇ. ೨.೯೨ರಷ್ಟು ಕುಟುಂಬಗಳು ಕಂಡುಬರುತ್ತವೆ. ಇದರಲ್ಲಿ ಹನುಮಂತನಹಳ್ಳಿ ಶೇ. ೭.೧೪ರಷ್ಟು, ಗುಂಡ್ಲೂರಿನ ಶೇ. ೦.೧ರಷ್ಟು ಹಾಗೂ ಜೋಗಿಹಟ್ಟಿಯ ಶೇ. ೭.೧೪ರಷ್ಟು, ಯಲಗಟ್ಟೆಯಲ್ಲಿ ಅತಿ ಹೆಚ್ಚು ಶೇ. ೭೧.೪೨ರಷ್ಟಿದ್ದಾರೆ. ಬೆಳಗೆರೆಯಲ್ಲಿ ಶೇ. ೧೪.೨೮ರಷ್ಟು 'ಎ*' ಶ್ರೇಣಿಯ ದೊಡ್ಡ ಭೂಹಿಡುವಳಿಗಳನ್ನು ಹೊಂದಿರುವ ಕುಟುಂಬಗಳು ಕಂಡುಬರುತ್ತವೆ.

ಒಟ್ಟಾರೆ ಶೇ. ೯.೬೦ರಷ್ಟು ಮಧ್ಯಮ ಗಾತ್ರದ ಭೂಹಿಡುವಳಿಗಳನ್ನು ಹೊಂದಿರುವ ಕಾಡುಗೊಲ್ಲ ಕುಟುಂಬಗಳು ಕಂಡುಬರುತ್ತಿದ್ದು, ಇದರಲ್ಲಿ ಹನುಮಂತನಹಳ್ಳಿಯಲ್ಲಿ ಶೇ. ೮.೬೯ರಷ್ಟು ಅತಿ ಕಡಿಮೆ ಗುಂಡ್ಲೂರು ಶೇ. ೬.೫೨ರಷ್ಟು, ಜೋಗಿಹಟ್ಟಿಯಲ್ಲಿ ಶೇ. ೧೦.೮೬ರಷ್ಟು ಅತಿ ಹೆಚ್ಚು ಯಲಗಟ್ಟೆಯಲ್ಲಿ ಶೇ. ೬೦.೮೬ರಷ್ಟು ಹಾಗೂ ಬೆಳಗೆರೆಯಲ್ಲಿ ಶೇ. ೧೩.೦೪ರಷ್ಟು 'ಬಿ*' ಶ್ರೇಣಿಯ ಮದ್ಯಮ ಭೂಹಿಡುವಳಿಗಳನ್ನು ಹೊಂದಿರುವ ಕುಟುಂಬಗಳು ಕಂಡುಬರುತ್ತವೆ.

ಇದೇ ರೀತಿಯಾಗಿ 'ಸಿ*' ಶ್ರೇಣಿಯ ಅರೆಮಾಧ್ಯಮ ಗಾತ್ರದ ಭೂಹಿಡುಳಿಯ ಕುಟುಂಬಗಳು ಶೇ. ೧೮.೯೯ರಷ್ಟಿದ್ದು ಅದರಲ್ಲಿ ಹನುಮಂತನಹಳ್ಳಿಯಲ್ಲಿ ಶೇ. ೮.೭೯ರಷ್ಟು ಕುಟುಂಬಗಳು, ಗುಂಡ್ಲೂರಿನಲ್ಲಿ ಶೇ. ೮.೭೯ರಷ್ಟು, ಜೋಗಿಹಟ್ಟಿಯಲ್ಲಿ ಶೇ. ೭.೬೯ರಷ್ಟು, ಯಲಗಟ್ಟೆಯಲ್ಲಿ ಅತಿಹೆಚ್ಚು ಶೇ. ೫೪.೯೪ರಷ್ಟು ಹಾಗೂ ಕೊನೆಯದಾಗಿ ಬೆಳೆಗೆರೆಯಲ್ಲಿ ಶೇ. ೧೯.೭೮ರಷ್ಟು ಕಾಣಸಿಗುತ್ತಾರೆ.

ಒಟ್ಟಾರೆ ಶೇ. ೨೯.೮೫ರಷ್ಟು 'ಡಿ*' ಶ್ರೇಣಿಯ ಸಣ್ಣ ಭೂಹಿಡುವಳಿದಾರರು ಕಂಡುಬರುತ್ತಿದ್ದು



ಇದರಲ್ಲಿ ಶೇ. ೧೧.೧೮ರಷ್ಟು ಹನುಮಂತನಹಳ್ಳಿಯಲ್ಲಿ, ಶೇ. ೧೧.೧೮ರಷ್ಟು ಗುಂಡ್ಲೂರಿನಲ್ಲಿ, ಶೇ. ೨೩.೭೭ರಷ್ಟು ಜೋಗಿಹಟ್ಟಿಯಲ್ಲಿ, ಶೇ. ೩೬.೩೬ರಷ್ಟು ಯಲಗಟ್ಟಿಯಲ್ಲಿ ಮತ್ತು ಶೇ. ೧೭.೪೮ರಷ್ಟು ಬೆಳಗೆರೆ ಗೊಲ್ಲರಹಟ್ಟಿಯಲ್ಲಿ ಕಂಡುಬರುತ್ತದೆ.

ಅದೇ ರೀತಿ 'ಇ*' ಶ್ರೇಣಿಯ ಅತಿ ಸಣ್ಣ ಭೂಹಿಡುವಳಿದಾರರು ಶೇ. ೨೪ರಷ್ಟು ಕಂಡುಬರುತ್ತಿದ್ದು, ಇದರಲ್ಲಿ ಶೇ. ೨೦.೮೬ರಷ್ಟು ಯಲಗಟ್ಟಿಯಲ್ಲಿ ಶೇ. ೨೫.೨೧ರಷ್ಟು ಬೆಳಗೆರೆಯಲ್ಲಿ ಕಾಣಸಿಗುತ್ತದೆ.

'ಎಫ್*' ಶ್ರೇಣೀಯ ಭೂರಹಿತ ಕಾಡುಗೊಲ್ಲರ ರೈತರ ಕುಟುಂಬಗಳು ಶೇ. ೧೪.೬೧ ರಷ್ಟಿದ್ದು, ಇದರಲ್ಲಿ ಹನುಮಂತನಹಳ್ಳಿ, ಗುಂಡ್ಲೂರು, ಜೋಗಿಹಟ್ಟಿ, ಯಲಗಟ್ಟಿ ಹಾಗೂ ಬೆಳಗೆರೆಯಲ್ಲಿ ಕ್ರಮೇಣವಾಗಿ ಶೇ. ೫.೭೧ರಷ್ಟು, ಶೇ. ೧೦ರಷ್ಟು, ಶೇ. ೨.೫೮ರಷ್ಟು, ಶೇ. ೪೮.೫೭ರಷ್ಟು ಹಾಗೂ ಶೇ. ೩೨.೮೫ರಷ್ಟು ಕಾಡುಗೊಲ್ಲರ ಭೂರಹಿತ ಕುಟುಂಬಗಳು ಇರುವುದು ಕಂಡುಬರುತ್ತದೆ.

ಮೇಲಿನ ಗ್ರಾಮವಾರು ಕಾಡುಗೊಲ್ಲರ ಭೂಶ್ರೇಣಿಗಳನ್ನು ಗಮನಿಸಿದರೆ ಹೆಚ್ಚಿನ ಕುಟುಂಬಗಳು ಸಣ್ಣ ಭೂಹಿಡುವಳಿಗಳನ್ನು ಹೊಂದಿರುವುದು ಕಂಡುಬರುತ್ತದೆ. ಆದರೆ ಕೆಲವು ಪ್ರದೇಶಗಳಲ್ಲಿ ಭೂರಹಿತ ಕುಟುಂಬಗಳು ಇತರೆ ಪ್ರವೃತ್ತಿಗಳಲ್ಲಿ ಹಾಗೂ ಶ್ರೀಮಂತ ಭೂಮಾಲಿಕರ ಹೊಲ-ಗದ್ದೆಗಳಲ್ಲಿ ದುಡಿದು ಜೀವನ ನಿರ್ವಹಣೆಯನ್ನು ಸಾಗಿಸುತ್ತಿದ್ದಾರೆ.

ಇವರಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರ ಸ್ಥಿತಿ ಅತ್ಯಂತ ಗಂಭೀರವಾಗಿದ್ದು, ಇದು ಇವರ ಆರ್ಥಿಕ ಹಿಂದುಳಿದಿರುವಿಕೆಯನ್ನು ಹಾಗೂ ಜೀವನದ ಅಭದ್ರತೆಯನ್ನು ತೋರಿಸುತ್ತದೆ. ಅವರು ತಾಂತ್ರಿಕ ಕಾರಣಗಳಿಂದಾಗಿ ತಮ್ಮ ಕೃಷಿ ಪದ್ಧತಿಗೆ ಹೊಸ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಇವರಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಸಾಧ್ಯವಾಗದೇ, ಗ್ರಾಮೀಣ ಮತ್ತು ಇನ್ನಿತರ ಬ್ಯಾಂಕುಗಳು ಸಾಲ ನೀಡದೇ ಹಾಗೂ ಮಳೆಯ ವೈಫಲ್ಯತೆಯಿಂದಾಗಿ ರೈತರು ವ್ಯವಸಾಯದಲ್ಲಿ ಹಿಂದುಳಿದಿದ್ದಾರೆ. ಈ ಕಾರಣದಿಂದ ಒಣಭೂಮಿ ವ್ಯವಸಾಯದಲ್ಲಿ ರೈತರು ರಾಗಿ, ಜೋಳ, ಸಜ್ಜೆ, ಸೂರ್ಯಕಾಂತಿ, ಕಡ್ಲೆ, ಶೇಂಗಾ, ಮುಂತಾದ ದವಸ ಧಾನ್ಯಗಳನ್ನು ಬೆಳೆಯುತ್ತಿರುವುದು ಕಂಡುಬರುತ್ತದೆ.

೫.೧.೧.೨ ಫಸಲು ಬೆಳೆಯುವ ವಿಧಾನ

ಎಲ್ಲ ಬುಡಕಟ್ಟು ಸಮುದಾಯಗಳಂತೆ ಕಾಡುಗೊಲ್ಲರು ಸಹ ಹಿಂದೆ ಕೆತ್ಲು ಬೇಸಾಯ ಮಾಡುತ್ತಿದ್ದರು. ಕೆತ್ಲು ಬೇಸಾಯವನ್ನು ಸ್ಥಳಾಂತರ ಬೇಸಾಯ ಎಂದು ಸ್ಟೆಫಿನ್ ಫೆಂಚಸ್‌ರವರು ಕರೆದಿದ್ದಾರೆ. ಇವರು ಸ್ಥಳಾಂತರ ಬೇಸಾಯದ ಬಗ್ಗೆ ಈ ರೀತಿ ಹೇಳುತ್ತಾರೆ. "Orginally most tribes were shifting cultivation, burning the forest and sowing their seeds in the fertile ashes. Many

tribes in South India, in Central India, in Chota Nagapur and Bengal on the slope of the Himalays and in Assam practised, until fairly uncemt time this slash and burn cultivation for which no plough animals were evequired the only implement uequired for tise type of cultivation the axe and the digging stick"[8] ಎಂದು ಹೇಳಿದ್ದಾರೆ. ಭಾರತದ ಬಹುತೇಕ ಬುಡಕಟ್ಟುಗಳು ಸ್ಥಳಾಂತರ ಬೇಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದರು. ಸ್ಟೈಫಿನ್ ಅವರ ಅಭಿಪ್ರಾಯದಂತೆ ಕಾಡುಗೊಲ್ಲರು ಇಂದು ಒಂದೆಡೆ ನೆಲೆನಿಂತು ವ್ಯವಸಾಯ ಮಾಡುತ್ತಿದ್ದಾರೆ.

ಕಾಡುಗೊಲ್ಲರ ವ್ಯವಸಾಯ ಸಾಮಾನ್ಯವಾಗಿ ಒಣ ಬೇಸಾಯ ಪದ್ಧತಿಯಿಂದ ಕೂಡಿದ್ದು, ಇದರಲ್ಲಿ ಬೆಳೆಯುವ ಬೆಳೆ ವಿಧಾನವು ಅಷ್ಟೇನೂ ಲಾಭದಾಯಕವಾಗಿಲ್ಲ. ಇಲ್ಲಿ ಬೆಳೆ ಬೆಳೆಯುವ ಪದ್ಧತಿ ಸರಳ ವಾಗಿರುತ್ತದೆ. ಒಣ ಭೂಮಿಯಲ್ಲಿ ನೇಗಲಿನ ಮೂಲಕ ಭೂಮಿಯನ್ನು ಹದಗೊಳಿಸಿ ಕುಂಟೆ, ರಂಟೆ, ಕೊಡ್ಡ ಹೊಡೆದು ಭೂಮಿಯನ್ನು ಹದಗೊಳಿಸುತ್ತಾರೆ. ಪಿ.ವಿ.ಜಾನ್ ಎಂಬುವವರು "ಒಬ್ಬ ರೈತ ತನ್ನ ಭೂಮಿಯಲ್ಲಿ ತೆಗೆಯುವ ಬೆಳೆಗಳ ಮಿಶ್ರಣಭರಿತವಾದ ಅಂದರೆ ಬೆಳೆ ತೆಗೆಯುವಲ್ಲಿ ವಿಭಿನ್ನ ಬದಲಾವಣೆಗಳನ್ನು ಹೊಂದಿರುವುದೇ ಬೆಳೆ ವಿಧಾನ"[೯] ಎಂದಿದ್ದಾರೆ. ಕಾಡುಗೊಲ್ಲರಲ್ಲಿ ಬೆಳೆ ವಿಧಾನವು ಸಂಪೂರ್ಣವಾಗಿ ಮಳೆಯಾಶ್ರಿತ ಒಣಭೂಮಿಗೆ ಸಂಬಂಧಿಸಿದ್ದಾಗಿದೆ. ಇವರಲ್ಲಿ ಒಣ ಭೂಮಿ ಹೆಚ್ಚಾಗಿ ಇರುವುದರಿಂದ ಆಹಾರ ಧಾನ್ಯಗಳನ್ನೇ ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳನ್ನೂ ಸಹ ಅಲ್ಪ ಪ್ರಮಾಣದಲ್ಲಿ ಬೆಳೆಯುವುದನ್ನು ಅಲ್ಲಲ್ಲಿ ಕಾಣುತ್ತೇವೆ.

ವ್ಯವಸಾಯದ ಮೂಲಕ ಬೆಳೆಯುವ ಬೆಳೆಗಳನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸ ಬಹುದಾಗಿದೆ. ಒಂದು ಆಹಾರ ಮತ್ತೊಂದು ವಾಣಿಜ್ಯ ಬೆಳೆಗಳು. ಈ ಆಹಾರ ಹಾಗೂ ವಾಣಿಜ್ಯ ಬೆಳೆಗಳು ಆಯಾ ವ್ಯವಸಾಯದ ಪ್ರಗತಿಯನ್ನು ಸೂಚಿಸುವ ಸೂಚಕಗಳಾಗಿವೆ. "ಸಾಮಾನ್ಯವಾಗಿ ದೊಡ್ಡ ಗಾತ್ರದ ಭೂ-ಹಿಡುವಳಿಗಳಲ್ಲಿ ವಾಣಿಜ್ಯ ಬೆಳೆಗಳನ್ನು ಮತ್ತು ಸಣ್ಣ, ಅತಿಸಣ್ಣ ಭೂಹಿಡುವಳಿಗಳನ್ನು ಹೊಂದಿರುವ ರೈತರು ಅಧಿಕವಾಗಿ ಆಹಾರದ ಬೆಳೆಗಳನ್ನೇ ಬೆಳೆಯುತ್ತಾರೆ".[೧೦] ಈ ಹಿನ್ನೆಲೆಯಲ್ಲಿ ಕಾಡು ಗೊಲ್ಲರಲ್ಲಿ ಸಣ್ಣ ಮತ್ತು ಅತಿಸಣ್ಣ ಭೂಹಿಡುವಳಿದಾರರು ಕ್ರಮವಾಗಿ ಶೇ. ೨೯.೮೫ ಹಾಗೂ ಶೇ. ೨೪ರಷ್ಟು (ಕೋಷ್ಟಕ ೪ರಲ್ಲಿ ನೋಡಿ) ಕಂಡುಬರುತ್ತಿದ್ದು ಇವರೆಲ್ಲ ಆಹಾರ ಬೆಳೆಗಳನ್ನೇ ಹೆಚ್ಚಾಗಿ ಬೆಳೆಯುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣಗಳು ಹಲವಾರು ಇದ್ದು ಅವು ಈ ಕೆಳಗಿನಂತಿವೆ.

೧. ಸಣ್ಣ ಭೂಹಿಡುವಳಿದಾರರಾದ ಕಾಡುಗೊಲ್ಲರಿಗೆ ಸಾಲ ಸೌಲಭ್ಯಗಳನ್ನು ಬ್ಯಾಂಕುಗಳು ಕೊಡದೆ ಇರುವುದು.

೨. ನೀರಾವರಿ ಸೌಲಭ್ಯವಿಲ್ಲದಿರುವುದು.

೩. ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವುದು.

೪. ಸುಧಾರಿತ ಬಿತ್ತನೆ ಬೀಜಗಳ ಪೂರೈಕೆಯಾಗದಿರುವುದು.

೫. ಪ್ರಕೃತಿ ವೈಪರಿತ್ಯದಿಂದ ಬೆಳೆ ನಾಶ.

೬. ಕಾಡು ಮೃಗಗಳಿಂದ ಬೆಳೆ ನಾಶವಾಗುವುದು.

೭. ಮಧ್ಯವರ್ತಿಗಳ ಹಾವಳಿ

೮. ಕೃಷಿ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದೇ ಇರುವುದು ಮುಂತಾದವುಗಳು.

ಈ ಮೇಲಿನ ಕಾರಣಗಳು ಮಾತ್ರವಲ್ಲದೇ ಇನ್ನು ಹಲವಾರು ಕಾರಣಗಳಿಂದಲೂ ವಾಣಿಜ್ಯ ಬೆಳೆಗಳನ್ನು ಅವರಿಗೆ ಬೆಳೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಕೇವಲ ಆಹಾರದ ಬೆಳೆಗಳನ್ನು ಮಾತ್ರ ಬೆಳೆಯುತ್ತಿರುವುದರಿಂದ ಇವರು ಉತ್ತಮ ಜೀವನ ಮಟ್ಟವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂಬ ಕಾರಣದಿಂದಲೂ ಇವರು ಆರ್ಥಿಕವಾಗಿ ದುರ್ಬಲರಾಗುತ್ತ ಜೀವನವನ್ನು ಸಂಕಷ್ಟದಲ್ಲಿಯೇ ಕಳೆಯುವಂತಾಗಿದೆ. "ಬೇಸಾಯದವನು ಬೇಗ ಸಾಯು" ಎನ್ನುವ ಮಾತು ಕಾಡುಗೊಲ್ಲರಿಗೆ ವಿಶೇಷವಾಗಿ ಅನ್ವಯಿಸುತ್ತದೆ. ಇವರಲ್ಲಿ ಕೆಲವರು ಇತ್ತೀಚಿಗೆ ವಾಣಿಜ್ಯ ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ. ನೀರಾವರಿ ಭೂಮಿ ಹೊಂದಿರುವವರು ಇಂತಹ ಬೆಳೆಗಳನ್ನು ಬೆಳೆಯುವ ಪ್ರಯತ್ನ ಮಾಡಿದ್ದಾರೆ.

ಕೋಷ್ಟಕ ೫.೫

ಕಾಡುಗೊಲ್ಲರು ಬೆಳೆಯುವ ಬೆಳೆಗಳು

ವಾಣಿಜ್ಯ ಬೆಳೆಗಳು		**ಆಹಾರಬೆಳೆಗಳು**	
ತೊಗರಿ	ಮೆಕ್ಕೆಜೋಳ	ರಾಗಿ	ಅಲಸಂದಿ
ಮೆಣಸು	ವೀಳ್ಯದೆಲೆ	ಜೋಳ	ಕಡ್ಲೆ
ಎಳ್ಳು	ಹತ್ತಿ	ಮೆಕ್ಕೆಜೋಳ	ನವಣೆ
ಹೆಸರು	ಹುಚ್ಚೆಳ್ಳು	ಅವರೆ	ಈರುಳ್ಳಿ
ಔಡಲ	ಅಡಿಕೆ	ಸಜ್ಜೆ	ಭತ್ತ
ತೆಂಗು	ನೆನಗಡಲೆ (ಶೆಂಗಾ)	ಹುರುಳಿ	ಮೆಟಗಿಕಾಳು
		ತರಕಾರಿ ಮತ್ತು	ಹಣ್ಣುಗಳು

ಕಾಡುಗೊಲ್ಲರು ಹೆಚ್ಚಾಗಿ ಆಹಾರದ ಬೆಳೆಗಳನ್ನು ಬೆಳೆಯುತ್ತಿರುವುದನ್ನು ಗಮನಿಸಬಹುದು. ಮಳೆಯಾಶ್ರಿತ ಭೂಮಿಗಳಲ್ಲಿ ಸಾಮಾನ್ಯವಾಗಿ ರಾಗಿ, ಜೋಳ, ಹುರುಳಿ, ಹಲಸಂದಿ, ನವಣೆ, ಕಡ್ಲೆ, ಅವರೆ, ತೊಗರಿ, ಹೆಸರು, ಹೊಚ್ಚೆಳ್ಳು, ಔಡಲು, ಮುಂತಾದವುಗಳನ್ನು ಬೆಳೆಯುತ್ತಾರೆ. ನೀರಿನ ಸೌಲಭ್ಯವಿರುವ ನೀರಾವರಿ ಭೂಮಿಗಳಲ್ಲಿ ಭತ್ತ, ತೆಂಗು, ಅಡಿಕೆ, ವೀಳ್ಯೆದೆಲೆ ಮುಂತಾದವುಗಳನ್ನು ಬೆಳೆಯುತ್ತಾರೆ.

[illegible]

[illegible]

[illegible]

[illegible]

[illegible]	[illegible]
[illegible]	[illegible]

[illegible]

ಇವರಲ್ಲಿ ಕೆಲವರು ಮಿಶ್ರ ಬೇಸಾಯವನ್ನು ಮಾಡುತ್ತಿದ್ದು ಅದರಲ್ಲಿ ಹೆಚ್ಚಾಗಿ ತರಕಾರಿ ಮತ್ತು ಹಣ್ಣು ಬೆಳೆಯುತ್ತಾರೆ. ತರಕಾರಿಯಲ್ಲಿ ಬದನೆಕಾಯಿ, ಬೆಂಡೆಕಾಯಿ, ನೆಲ್ಲವರೆ, ಸೋರೆ, ಹೀರೆ, ತುಪ್ಪೀರೆ, ಕುಂಬಳ, ಟೋಮೆಟೋ, ಗೋರಿ, ಪಟ್ಟಲ, ಈರುಳ್ಳಿ, ಮೆಣಸಿನಕಾಯಿ, ಕೊತ್ತಂಬರಿ, ಸೌತೆ ಮತ್ತು ಗೆಣಸು, ಹಣ್ಣುಗಳಲ್ಲಿ ಪರಂಗಿ, ದಾಳಿಂಬೆ, ನಿಂಬೆ, ಸೀಬೆ, ಕಲ್ಲಂಗಡಿ ಮುಂತಾದವುಗಳನ್ನು ಬೆಳೆಯುತ್ತಾರೆ.

೫.೧.೧.೩ ವ್ಯವಸಾಯ ಪದ್ಧತಿಯಲ್ಲಿನ ಆಚರಣೆಗಳು

ಕಾಡುಗೊಲ್ಲರು ವ್ಯವಸಾಯದ ಪ್ರಾರಂಭದ ದಿನಗಳಿಂದ ಅಂತ್ಯದವರೆಗೂ ಅನೇಕ ಆಚರಣೆಗಳನ್ನು ಮಾಡುತ್ತಾರೆ. ವ್ಯವಸಾಯ ಕಾಡುಗೊಲ್ಲರಿಗೆ ಒಂದು ಪವಿತ್ರವಾದ ಕೆಲಸ. ವ್ಯವಸಾಯದಲ್ಲಿ ಇತರೆ ಜನರಿಂದ ಪ್ರಭಾವಿತವಾದ ಅನೇಕ ಆಚರಣೆಗಳು ರೂಢಿಯಲ್ಲಿವೆ. ಇವರ ಭೂಮಿ ಕಪ್ಪು ಮಿಶ್ರಿತ ಎರೆ ಬಣ್ಣದ್ದು ವ್ಯವಸಾಯಕ್ಕೆ ಅಷ್ಟೇನೂ ಸೂಕ್ತವಲ್ಲದ ಭೂಮಿಯಾಗಿದೆ. ಈ ಭೌಗೋಳಿಕ ಪ್ರದೇಶಗಳು ಬೇಸಿಗೆ ಕಾಲ, ಮಳೆಗಾಲ, ಚಳಿಗಾಲ ಎಂಬ ಮೂರು ಬಗೆಯ ಋತುಮಾನಗಳು ವರ್ಷವನ್ನು ಸುತ್ತುಗಟ್ಟುತ್ತಿರುತ್ತವೆ. ಅಲ್ಲದೆ ಮಳೆಯ ಸರಾಸರಿ ಪ್ರಮಾಣವು ವರ್ಷದಲ್ಲಿ ತುಂಬಾ ಕಡಿಮೆಯಿದೆ. ಈ ಕಾರಣದಿಂದ ಭೂಮಿಯ ಉತ್ಪಾದಕತೆ ಹೆಚ್ಚಾಗಿಲ್ಲದಿರುವುದು ಕಂಡುಬರುತ್ತದೆ.

ಮುಂಗಾರು	=	ಜೂನ್	- ಸೆಪ್ಟೆಂಬರ್
ಹಿಂಗಾರು ಮಳೆ	=	ಅಕ್ಟೋಬರ್	- ಡಿಸೆಂಬರ್
ಚಳಿಗಾಲ	=	ಡಿಸೆಂಬರ್	- ಫೆಬ್ರವರಿ
ಬೇಸಿಗೆ ಕಾಲ	=	ಮಾರ್ಚ್	- ಮೇ

ಸಾಮಾನ್ಯವಾಗಿ ಕರ್ನಾಟಕದಲ್ಲಿ ಜೂನ್ ತಿಂಗಳಿನಿಂದ ಮುಂಗಾರು ಮಳೆ ಪ್ರಾರಂಭವಾಗುತ್ತದೆ. ಜೂನ್ ನಿಂದ ಅಕ್ಟೋಬರ್ ತಿಂಗಳಿನವರೆಗೂ ನೈರುತ್ಯದಲ್ಲಿ ಬೀಸುವ ಗಾಳಿಯಿಂದ ಮಳೆ ಹೆಚ್ಚಾಗುತ್ತದೆ. ನವೆಂಬರ್‌ನಿಂದ ಫೆಬ್ರವರಿವರೆಗೆ ರಾಜ್ಯದ ಮೇಲೆ ಈಶಾನ್ಯ ಮಳೆಗಾಳಿಗಳು ಬೀಸುತ್ತವೆ. ಕಾಡುಗೊಲ್ಲರು ಜೂನ್ ತಿಂಗಳಲ್ಲಿ ಮಳೆ ಪ್ರಾರಂಭವಾದ ತಕ್ಷಣ ಭಿತ್ತನೆ ಪ್ರಾರಂಭಿಸುತ್ತಾರೆ.

ನೀರಾವರಿ ಭೂಮಿ ಹೊಂದಿರುವವರು ವರ್ಷದಲ್ಲಿ ಎರಡು ಬೆಳೆಗಳನ್ನು ತೆಗೆಯುತ್ತಿದ್ದು, ಒಣ ಬೇಸಾಯ ಮಾಡುವವರು ವರ್ಷದಲ್ಲಿ ಒಂದು ಬೆಳೆಯನ್ನು ಮಾತ್ರ ಬೆಳೆಯುತ್ತಾರೆ. ಚಂದ್ರಮಾನ ಯುಗಾದಿಯ ವರ್ಷದ ಆರಂಭದ ದಿನ. ಈ ದಿನದಂದು ಕಾಡುಗೊಲ್ಲರು ಮಡಕೆಯನ್ನು (ನೇಗಿಲು) ಕಟ್ಟುತ್ತಾರೆ. ಈ ಸಂದರ್ಭದಲ್ಲಿ ಮೊದಲಿಗೆ ಇವರು ವ್ಯವಸಾಯಕ್ಕೆ ಬಳಸುವ ಸಾಮಗ್ರಿಗಳಾದ ಕೊಡಲಿ, ಹಾರೆ, ಕೂರಿಗೆ, ಮೇಣಿ, ಮೊಗ, ಈಸು, ಕುಂಟೆ, ಹಲುಬೆ, ಗ್ಯಾರೆ, ಅಂಡುಮರ, ರೋಣು, ಜರಡಿ, ಮೊರ, ಗೊಡೆ, ಮುಚ್ಚಲ, ಹೆಡಿಗ, ಬಾರುಕೋಲು, ಗಾಡಿ, ಗುದ್ದಲಿ, ಸಲಕೆ, ಪಿಕಾಸಿ, ಉಳಿಬೈರಿಗೆ,

[illegible]

ಗರಗಸ, ಕುರ್ಚಿಗೆ ಕುಡ್ಲು, ಬಾರೆ, ಮುಂತಾದ ವಸ್ತುಗಳಿಗೆ ಪೂಜೆ ಸಲ್ಲಿಸುತ್ತಾರೆ. ಇವರು ನೇಗಿಲು ಹೂಡುವಾಗ ವಾರವನ್ನು ಮುಖ್ಯವಾಗಿ ಗಮನಿಸುತ್ತಾರೆ. ಸೋಮವಾರ ಬಿಟ್ಟು ಉಳಿದ ಎಲ್ಲಾ ದಿನಗಳಲ್ಲಿ ನೇಗಿಲನ್ನು ಹೂಡುತ್ತಾರೆ. ಸಾಕು ಪ್ರಾಣಿಗಳಿಗೆ ಮತ್ತು ತಮಗೆ ವಿಶ್ರಾಂತಿ ಸಿಗಲೆಂದು ಸೋಮವಾರ ಬಸವಣ್ಣನ ವಾರವೆಂದು ಇವರಲ್ಲಿ ನಂಬಿಕೆ ಇದೆ. ಸಾಮಾನ್ಯವಾಗಿ ಯುಗಾದಿ ನಂತರ ಮೊದಲು ಮಳೆಬಿದ್ದಾಗ ಹಟ್ಟಿಯಲ್ಲಿ ಯಾರ ಹೆಸರಿಗೆ ಬೆಳೆ ಚೆನ್ನಾಗಿ ಬರುತ್ತದೆ ಎಂದು "ನಾಮಬಲ" ಕೇಳುತ್ತಾರೆ. ಯಾರ ಹೆಸರು ಬರುತ್ತದೋ ಅವನಿಂದ ನೇಗಿಲು ಹೂಡಿಸುವುದರ ಮೂಲಕ ಕೃಷಿಯ ನಿಜವಾದ ಭಿತ್ತನೆ ಕೆಲಸ ಪ್ರಾರಂಭಿಸುತ್ತಾರೆ. ಆ ದಿನವೇ ಎತ್ತುಗಳಿಗೆ ಹಾಗೂ ನೇಗಿಲಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ನೇಗಿಲು ಹೂಡಿ ಗುಡ್ಡೆ ಕಟ್ಟುತ್ತಾರೆ. ಈ ಮಧ್ಯದಲ್ಲಿ ಬಹಳ ಸಮಯದವರೆಗೆ ಮಳೆಯಗಾದೆ ವ್ಯವಸಾಯಕ್ಕೆ ತೊಂದರೆಯಾದರೆ ಮಣ್ಣಿನಿಂದ ಮಳೆರಾಯನ ಪ್ರತಿರೂಪ ರಚಿಸಿ ಅದಕ್ಕೆ ಪೂಜೆಸಲ್ಲಿಸಿ ಊರಿನ ಸುತ್ತಾ ಮೂರು ಸಾರಿ ಮೆರವಣಿಗೆ ಮಾಡುತ್ತಾರೆ. ಇದೇ ಸಂದರ್ಭದಲ್ಲಿ ಊರಿನ ಜನ ಮಳೆರಾಯನಿಗೆ ಈ ಕೆಳಗಿನ ಹಾಡನ್ನು ಹಾಡುತ್ತಾರೆ ಎಂದು ಪ್ರೊ. ಕಾಳೇಗೌಡ ನಾಗವಾರರು ಹೇಳುತ್ತಾರೆ.

"ಮಳೆರಾಯನ ಹೆಂಡತಿ ಮಕ್ಕಳ ತಾಯಿ
ಹುಯ್ಯೋ ಹುಯ್ಯಾ ಮಳೆರಾಯ ||
ಕಾರೆ ಗಿಡದಾಗೆ ಕಳ್ಳರು ಕುಂತವ್ರೆ
ಕಪ್ಪೆ ಹೊಡೆಯೋರು ಕಣ್ ಕಣ್ ಬಿಡ್ತಾರೆ ||
ಕುರಿಯೋರು, ದನಿಯೋರು ಬಾಯ್ ಬಾಯ್ ಬಿಡ್ತಾರೆ
ಹುಯ್ಯೋ ಹುಯ್ಯೋ ಮಳೆರಾಯ ||
ಮಳೆರಾಯನ ಹೆಂಡತಿ ಮಕ್ಕಳ ತಾಯಿ
ಹುಯ್ಯೋ ಹುಯ್ಯಾ ಮಳೆರಾಯ ||"[11]

ಎಂದು ಹಾಡುತ್ತಾರೆ. ಭಿತ್ತನೆಯ ಕಾಲ ಆರಂಭವಾದಾಗ "ಬೆಳೆ ಬೀಜ" ಎಂದು ಹೇಳಿ ಕಾಯ್ದಿರಿಸಿಟ್ಟಿದ್ದ ಬೀಜವನ್ನು ಗುಡಿಯ ಮುಂದೆ ಕರಿಕಂಬಳಿ ಗದ್ದುಗೆಗೆ ಹಾಕಿ, ಮೂರು ಸಣ್ಣ ರಾಶಿ ಮಾಡಿ ಪೂಜಿಸುತ್ತಾರೆ. ಅಲ್ಲಿಂದ ಹೊಲಕ್ಕೆ ತೆಗೆದುಕೊಂಡು ಹೋಗಿ ಬಿತ್ತುತ್ತಾರೆ. ಸರಿಯಾಗಿ ಮಳೆ ಬೆಳೆ ಆಗಲೆಂದು ಜುಂಜಪ್ಪ ದೇವರಿಗೆ ಹರಕೆ ಹೊರುತ್ತಾರೆ. ಹೊಲದಲ್ಲಿ ಬಿತ್ತಿದ್ದ ಕೆಲ ಸಾಲುಗಳನ್ನು ದೇವರ ಹೆಸರಲ್ಲಿ ಮೀಸಲಿಡುತ್ತಾರೆ. ಈ ಸಾಲುಗಳಿಂದ ಬಂದ ಧಾನ್ಯಗಳನ್ನು ದೇವರಿಗೆ ಒಪ್ಪಿಸುತ್ತಾರೆ. ಹುಣಸೆಮರ ಫಲ ಕೊಡದಿದ್ದಾಗ ಕೆಲವು ವರ್ಷಗಳ ಕಾಲ ಮೀಸಲು ಬಿಟ್ಟು ಆ ವರ್ಷಗಳಲ್ಲಿ ಬಂದ ಫಲವನ್ನು ಸಂಬಂದಪಟ್ಟ ದೇವತೆಗೆ ಒಪ್ಪಿಸುತ್ತಾರೆ. ಫಸಲು ಸಮೃದ್ಧವಾಗಿ ಬಂದಾಗ ಕೊಯ್ಲಿಗಿಂತ ಮುಂಚಿತವಾಗಿ 'ಹೊಲದೇವರು' ಎಂಬ ಸಂಭ್ರಮದ ಪೂಜೆ ನಡೆಸುವರು. ಈ ಸಂದರ್ಭದಲ್ಲಿ ಬೆಳೆದ ಹೊಲದಲ್ಲಿ 'ಗಬ್ಬದ ಕುರಿ' ಕಡಿದು, ಅದರ

[illegible]

[illegible]

[illegible]

ರಕ್ತವನ್ನು ಸುತ್ತಲೂ ಚೆಲ್ಲುತ್ತಾರೆ. ಎರಡು ಜೀವಗಳುಳ್ಳ ಪ್ರಾಣಿಯನ್ನು ಬಲಿಕೊಟ್ಟರೆ ಏಳಿಗೆ ಉಂಟಾಗುತ್ತದೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಆಚರಣೆ ನಡೆಯುತ್ತದೆ. ಬೆಳೆ ಸರಿಯಾಗಿ ಆಗದಿದ್ದರೆ "ಗಣೆಶಾಸ್ತ್ರ" ಕೇಳಿ ಅಲ್ಲಿ ತಿಳಿಸಲಾಗುವ ದೇವರ ಹೆಸರಿನಲ್ಲಿ ಪೂಜೆ ನಡೆಸುವರು. ಅದರಲ್ಲಿ "ಭೂತಪ್ಪ" ದೇವರು ಕೂಡ ಒಂದಾಗಿದೆ. ಹೊಲದಲ್ಲಿ ಮೂರು ಕಲ್ಲುಗಳನ್ನು ಇಟ್ಟು ಮೂರು ನಾಮ ಹಚ್ಚಿ, ಅನ್ನದ ಎಡೆ ಇಟ್ಟು ಕುರಿ ಕಡಿದು ಈಟಿ ದೇವರನ್ನು ಪೂಜಿಸುತ್ತಾರೆ. ಇಂತಹ ಆಚರಣೆಗಳ ಮೂಲಕ ಬೆಳೆಯು ಹುಲುಸಾಗುತ್ತದೆ ಎಂದು ಕಾಡುಗೊಲ್ಲರು ನಂಬುತ್ತಾರೆ. ಚೆನ್ನಾಗಿ ಬೆಳೆದು ನಿಂತ ಹಣ್ಣಾದ ಫಸಲನ್ನು ಕೀಳುವಾಗ 'ಕೂಯ್ಯುವ ಶಾಸ್ತ್ರ' ಕೂಡ ಮಾಡುವರು. ದೇವಮೂರ್ತ (ಪೂರ್ವ ಮತ್ತು ಉತ್ತರದ ನಡುವಣ ಈಶಾನ್ಯ)ದಲ್ಲಿ ಮೂರು ಕುಡ್ಲು ಇಟ್ಟು, ಮೂರು ತೆನೆಗಳನ್ನು ಕೊಯ್ದು ಅವುಗಳ ಮೇಲೆ ಜೋಡಿಸುತ್ತಾರೆ. ಹಾಲು ತುಪ್ಪ ಬಿಟ್ಟು ಪೂಜೆ ಮಾಡುತ್ತಾರೆ. ಇದನ್ನು "ಕೊಯ್ಲು ಮೊದಲು ಮಾಡೋದು" ಎಂದು ಕರೆಯುವವರು.

ಹೊಲದಲ್ಲಿ ಹೆಚ್ಚಾಗಿ ರಾಗಿಯ ಫಸಲನ್ನು ಸಾಮಾನ್ಯವಾಗಿ ದೊಡ್ಡ ದೊಡ್ಡ ಕುಪ್ಪೆ(ಮದೆ)ಗಳಾಗಿ ಮಾಡಿ ಜೋಡಿಸಲಾಗುತ್ತದೆ. ಹೀಗೆ ಇಟ್ಟಾಗ ಒಳಗಿನ ತೆನೆಗಳು ಚೆನ್ನಾಗಿ ಮೂಡುತ್ತವೆ. ಸುತ್ತಗುಪ್ಪೆ ಮತ್ತು ಅಡ್ಡಗುಪ್ಪೆ ಎಂದು ಎರಡು ಬಗೆಯಲ್ಲಿ ಕುಪ್ಪೆಗಳನ್ನು ಹಾಕಿ ಗೆದ್ದಲು ಹಾಗೂ ಮಳೆ ನೀರಿನಿಂದ ರಕ್ಷಿಸುತ್ತಾರೆ. ದವಸ ಧಾನ್ಯಗಳನ್ನು ಶುಚಿಗೊಳಿಸಿ ಮನೆಗೆ ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ಕಣ ಮಾಡುತ್ತಾರೆ. ತೆನೆಗಳ ಸಮೇತವಾಗಿ ರಾಗಿಯ ಹುಲ್ಲನ್ನು ಕಣದ ತುಂಬ ಹಾಸಿ ದೊಡ್ಡ ರೇಣುಗಳ ಮೂಲಕ ತುಳಿಸಲಾಗುತ್ತದೆ. ಹುಲ್ಲು ಹೊಟ್ಟು ಮತ್ತು ಧಾನ್ಯವನ್ನು ವಿಂಗಡಿಸುವ ಈ ಕಣವನ್ನು ಅತ್ಯಂತ ಪವಿತ್ರವಾದ ಸ್ಥಳವೆಂದು ತಿಳಿದುಕೊಂಡಿದ್ದಾರೆ. ಕೃಷಿಯ ಸಂದರ್ಭದಲ್ಲಿ ಬಳಸಿದ ವಸ್ತುಗಳನ್ನಿಟ್ಟು ಭಕ್ತಿಯಿಂದ ಪೂಜಿಸುವರು. ಇಲ್ಲಿ ಜರಡಿ ಹಿಡಿಯುವಾಗ ಬಂದ ಕಲ್ಲನ್ನು 'ಬಸವ' ಅಂತ ಹಾಗೂ ಮೊರವನ್ನು 'ಗೌರಮ್ಮ' ಎಂದು ಕರೆಯುತ್ತಾರೆ. ಹಾಗೆಯೆ ಸುಣ್ಣಕ್ಕೆ 'ಚಿನ್ನ', ಜರಡಿಗೆ 'ಬಂಡಿ', ಪೊರಕೆಗೆ 'ಹಿಡಿ', ಅಳತೆ ಸೇರಿಗೆ 'ಅದ್ನ', ಎತ್ತುಗಳಿಗೆ 'ಬಸವಣ್ಣ' ಮುಂತಾದ ಹೊಸ ಹೆಸರುಗಳು ಬಳಕೆಯಾಗುತ್ತವೆ. ಹೊಟ್ಟು ತೂರಿ ಧಾನ್ಯ ಬೇರ್ಪಡಿಸುವಾಗ, ಗಾಳಿ ತುಂಬಾ ಅಗತ್ಯ. ಆದರೆ ಗಾಳಿ ಕಾಣಸಿಕೊಳ್ಳದಿದ್ದಲ್ಲಿ 'ಓಲಗ್ ಸ್ವಾಮಿ ಒಲಿಗ್ಗ' ಎಂಬ ಹಾಡನ್ನು ಹಾಡಿ ವಾಯುದೇವನನ್ನು ಕರೆಯುತ್ತಾರೆ.

"ವಾಯುಪತ್ರ ಅಂಜನೀ ದೇವತೆಯ ಮಗನೇ
ಅಳ್ಳಿಮರ ಅಳ್ಳಡಿಸಿಕೊಂಡು
ಅಂಚಿತೆಗೆ ವಾಲಾಡಿಸಿಕೊಂಡು
ಮಾವಿನ ಮರ ಮಾತ್ನಾಡಿಸಿಕೊಂಡು
ಓಲಿಗ್ ಸ್ವಾಮಿ ಓಲಿಗ್ಗ ಅಂದೋರ ಕಡೆಗೆ

[illegible]

[illegible]

[illegible]

ವಾಲಿ ಬಾರೋ ವಾಯುದೇವ.....

ಓಲಗ್ ಸ್ವಾಮಿ ಓಲಿಗ್ಗ ||"

ಕೊನೆಯಲ್ಲಿ ರಾಗಿ ರಾಶಿಗೆ ವಿಶೇಷವಾದ ಪೂಜೆ ನಡೆಯುತ್ತದೆ. ಕೆಂಬಳ, ಸೋರೆ, ಹೀರೆ, ಕಣಿಗೆಲೆ ಮುಂತಾದ ಬಗೆಯ ಹೂವುಗಳನ್ನು ಮತ್ತು ಮಾವು, ಬೇವು ಇತರೆ ಎಲೆಗಳಿಂದ ರಾಶಿಯನ್ನು ಅಲಂಕರಿಸಲಾಗುತ್ತದೆ. ಸಗಣಿಯ ಉಂಡೆ ಕಟ್ಟಿ ಅದರಲ್ಲಿ ಬ್ರಹ್ಮದಂಡೆ ಹೂವು ಮತ್ತು ಗರಿಕೆ ಪತ್ರಿ ಸಿಗಿಸುತ್ತಾರೆ. ಅದನ್ನು 'ಪಿಳ್ಳೆರಾಯ' ಎಂದು ಕರೆದು ರಾಶಿಯ ಎದುರಲ್ಲಿಟ್ಟು ಪೂಜಿಸುತ್ತಾರೆ. ಪೂಜೆ ಮುಗಿಸಿದ ಬಳಿಕ ರಾಶಿಗೆ ನಮಸ್ಕರಿಸಿ ದವಸ ಧಾನ್ಯಗಳನ್ನು ಮನೆಗೆ ಕೊಂಡೊಯ್ಯುತ್ತಾರೆ. ಬೆಳೆದಂತಾ ದವಸ ಧಾನ್ಯಗಳನ್ನು ಮನೆಯ ಬಳಕೆಗೆ ಸ್ವಲ್ಪ ಇರಿಸಿಕೊಂಡು ಉಳಿದ ಬೆಳೆಯನ್ನು ಮಾರಾಟ ಮಾಡುತ್ತಾರೆ".[೨]

ಕಾಡುಗೊಲ್ಲರ ಹಳೆಯ ಸಾಂಪ್ರದಾಯಿಕ ಪದ್ಧತಿಯಲ್ಲಿಯೇ ಫಸಲು ಬೆಳೆಯುವುದರಿಂದ ಇಳುವರಿ ತುಂಬಾ ಕಡಿಮೆಯಿದ್ದು ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲು ಹಿಂಜರಿಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಇವರು ಆಧುನಿಕ ಪದ್ಧತಿಗೆ ತಮ್ಮನ್ನು ತೆರೆದುಕೊಂಡಿದ್ದು ಕೆಲವು ಕಡೆ ನೇಗಿಲಿನ ಬದಲಿಗೆ ಟ್ರಾಕ್ಟರ್‌ನ್ನು ಬಳಸಿ ಭೂಮಿ ಹದಗೊಳಿಸಲು ಕಬ್ಬಿಣದ ಮಡಿಕೆಯನ್ನು ಬಳಸುತ್ತಿದ್ದಾರೆ. ಅದರಂತೆ ಕಾಳು ಬಿಡಿಸಲು ಆಧುನಿಕ ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ. ಸಾಂಪ್ರದಾಯಿಕ ಸಾವಯವ ಗೊಬ್ಬರವನ್ನು ಬಿಟ್ಟು, ಆಧುನಿಕ ರಾಸಾಯನಿಕ ಗೊಬ್ಬರವನ್ನು ಬಳುಸುತ್ತಿದ್ದಾರೆ. ಇದರಿಂದಾಗಿ ಕೃಷಿ ಇಳುವರಿ ಹೆಚ್ಚಾಗಿದ್ದು, ಉತ್ತಮ ಜೀವನವನ್ನು ಸಾಗಿಸಲು ಪ್ರಯತ್ನಿಸುತ್ತಿದ್ದಾರೆ. ಆದರೂ ಕೂಡ "ತಾವೊಂದು ಬಗೆದರೆ ದೈವವೊಂದು ಬಗೆಯುತ್ತದೆ" ಎನ್ನುವ ನಾಣ್ಣುಡಿಯಂತೆ ಮಳೆರಾಯನ ಅವಕೃಪೆಯಿಂದ ಅನೇಕ ಸಂಕಷ್ಟಗಳನ್ನು ಎದುರಿಸಿ ಬಡವರಾಗಿಯೇ ಇರುವಂತ ಸ್ಥಿತಿ ನಿರ್ಮಾಣವಾಗಿದೆ.

೫.೧.೧.೪ ಕೃಷಿ ಉತ್ಪನ್ನಗಳ ಮಾರಾಟದ ವ್ಯವಸ್ಥೆ

ಹಿಂದೆ ಇವರಲ್ಲಿ ಸಾಟಿ ವಿನಿಮಯ ಪದ್ಧತಿ ಅಸ್ತಿತ್ವದಲ್ಲಿತ್ತು. ಇದರಿಂದಾಗಿ ತಾವು ಬೆಳೆದ ಬೆಳೆಗಳನ್ನು ತಮ್ಮ ತಮ್ಮಲ್ಲಿಯೇ ವಿನಿಮಯ ಮಾಡಿಕೊಳ್ಳುತ್ತಿದ್ದರು. ಇದಕ್ಕೆ ಕಾರಣ ಬಹುತೇಕ ಹಟ್ಟಿಗಳು ಊರು ಬಿಟ್ಟು ಇರುವುದರಿಂದ ನಗರಕ್ಕೆ ಬಂದು ತಮ್ಮ ಬೆಳೆಗಳನ್ನು ಮಾರಾಟ ಮಾಡಲಾಗದೆ ಈ ರೀತಿ ವಸ್ತುವಿನಿಮಯ ಪದ್ಧತಿಯನ್ನು ರೂಢಿಯಲ್ಲಿಟ್ಟುಕೊಂಡಿದ್ದರು. ಪಟ್ಟಣಕ್ಕೆ ಸಮೀಪವಿರುವ ಹಟ್ಟಿಗಳಲ್ಲಿಯ ಜನರು ಮಾತ್ರ ತಮ್ಮ ಬೆಳೆಗಳನ್ನು ನಗರ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಇವರು ನೇರವಾಗಿ ಮಾರುಕಟ್ಟೆಯಲ್ಲಿ ತಮ್ಮ ಬೆಳೆಗಳನ್ನು ಮಾರಾಟ ಮಾಡುವುದು ತುಂಬಾ ಕಡಿಮೆ. ಮಧ್ಯವರ್ತಿಗಳನ್ನು ಹೆಚ್ಚಾಗಿ ಅವಲಂಬಿಸಿಕೊಂಡು ಅವರಿಗೆ ಮಾರಾಟ ಮಾಡುತ್ತಾರೆ.

ಮಧ್ಯವರ್ತಿಗಳಿಗೆ ತಮ್ಮ ಬೆಳೆಗಳನ್ನು ಮಾರಾಟ ಮಾಡಲು ಹಲವಾರು ಕಾರಣಗಳಿವೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

[illegible]

[illegible]

[illegible]

[illegible]

[illegible]

[illegible]

೧. ಕಾಡುಗೊಲ್ಲ ಹಟ್ಟಿಗಳು ಊರು ಬಿಟ್ಟು ದೂರವಿದ್ದು, ತಮ್ಮ ಸರಕುಗಳನ್ನು ಸಾಗಿಸಿ ಮಾರಾಟ ಮಾಡುವುದಕ್ಕೆ ರಸ್ತೆಗಳು ಇಲ್ಲದಿರುವುದು. ಕೆಲವು ಹಟ್ಟಿಗಳಿಗೆ ಮಾತ್ರ ರಸ್ತೆಗಳಿದ್ದು ಅಂಥ ಹಟ್ಟಿಗಳಲ್ಲಿ ಮಾತ್ರ ಮಾರಾಟ ವ್ಯವಸ್ಥೆಯನ್ನು ಕಾಣುತ್ತೇವೆ.

೨. ಕಾಡುಗೊಲ್ಲರ ಹಟ್ಟಿಗಳಲ್ಲಿ ತಮ್ಮ ಸರಕುಗಳನ್ನು ದಾಸ್ತಾನು ಮಾಡಲು ದಾಸ್ತಾನು ಮಳಿಗೆಗಳು ಇಲ್ಲದಿರುವುದು. ಇದರಿಂದಾಗಿ ಕಡಿಮೆ ಬೆಲೆಯಿದ್ದರೂ ತಮ್ಮ ಸರುಕುಗಳನ್ನು ಅನಿವಾರ್ಯವಾಗಿ ಮಾರಾಟ ಮಾಡುತ್ತಾರೆ.

೩. ಕಾಡುಗೊಲ್ಲರ ಭೂಮಿಗಳು ಒಣ ಭೂಮಿಗಳಾಗಿರುವುದರಿಂದ ಸರ್ಕಾರದಿಂದ ರಚಿತಗೊಂಡಿರುವ ಹಣಕಾಸಿನ ಸಂಸ್ಥೆಗಳು ಇವರಿಗೆ ಸಾಲ ಸೌಲಭ್ಯಗಳನ್ನು ಕೊಡುವುದು ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಇದರಿಂದಾಗಿ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕಾಡುಗೊಲ್ಲರಿಗೆ ಸಾಧ್ಯವಾಗುತ್ತಿಲ್ಲ. ಈ ಕಾರಣ ಗಳಿಂದ ಕಾಡುಗೊಲ್ಲರು ಮಧ್ಯವರ್ತಿಗಳಿಂದ ಮುಂಗಡವಾಗಿ ಹಣವನ್ನು ಪಡೆಯುತ್ತಾರೆ. ಹಣವನ್ನು ಕೊಡುವಾಗ ಮಧ್ಯವರ್ತಿಗಳು ಸರಕುಗಳನ್ನು ತಮಗೆ ಮಾರಾಟ ಮಾಡಬೇಕೆಂದು ಕರಾರು ಹಾಕಿರುತ್ತಾರೆ. ಈ ಕರಾರಿನ್ವಯ ಕಾಡುಗೊಲ್ಲರು ತಮ್ಮ ಸರಕುಗಳನ್ನು ಅವರಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕಾದ ಅನಿವಾರ್ಯತೆ ಇರುತ್ತದೆ.

೪. ಕಾಡುಗೊಲ್ಲರಿಗೆ ತಮ್ಮ ಸರಕುಗಳನ್ನು ಮಾರಾಟ ಮಾಡಲು ಮಾರುಕಟ್ಟೆಗೆ ಬಾರದೇ ಇರುವುದಕ್ಕೆ ಮತ್ತೊಂದು ಕಾರಣ ಇವರಿಗೆ ಮಾರುಕಟ್ಟೆಯ ಬಗ್ಗೆ ಮಾಹಿತಿ ಇರದೇ ಇರುವುದು. ಇವರಿಗೆ ವಿದ್ಯುತ್ ಮತ್ತು ದಿನಪತ್ರಿಕೆಗಳು ತಲುಪದೇ ಇರುವ ಕಾರಣ ಮಾರುಕಟ್ಟೆಯ ಮಾಹಿತಿ ಲಭ್ಯವಾಗುವುದಿಲ್ಲ. ಅಲ್ಲದೇ ಕೆಲವು ಹಳ್ಳಿಗಳಿಗೆ ಪತ್ರಿಕೆಗಳು ತಲುಪಿದರೂ ಅದನ್ನು ಓದಲು ಇವರಿಗೆ ಸಾಧ್ಯವಾಗುತ್ತಿಲ್ಲ. ಕಾರಣ ಇವರಲ್ಲಿ ಅನೇಕರು ಅನಕ್ಷರಸ್ಥರು. ಈ ಕಾರಣದಿಂದ ಸರಕುಗಳ ಬೆಲೆಗಳ ಬಗ್ಗೆ ಮಾಹಿತಿ ಇಲ್ಲದೆ ಅನಿವಾರ್ಯ ಸ್ಥಿತಿಯಲ್ಲಿ ಮಧ್ಯವರ್ತಿಗಳಿಗೆ ಮಾರಾಟ ಮಾಡುತ್ತಿದ್ದಾರೆ.

೫. ಒಣ ಬೇಸಾಯ ಪದ್ಧತಿಯಿಂದ ಇವರ ಇಳುವರಿ ತುಂಬಾ ಕಡಿಮೆ ಪ್ರಮಾಣದಲ್ಲಿರುತ್ತದೆ. ಇದರಿಂದಾಗಿ ಅಲ್ಪಪ್ರಮಾಣದಲ್ಲಿ ಇಳುವರಿಯನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಇವರು ಇಷ್ಟಪಡುವುದಿಲ್ಲ.

೬. ಕೆಲವು ಕಾಡುಗೊಲ್ಲರು ಮಾರುಕಟ್ಟೆಗೆ ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಇಚ್ಛಿಸಿ ಮಾರುಕಟ್ಟೆಗೆ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಮಾರುಕಟ್ಟೆಯ ಅವ್ಯವಸ್ಥೆ, ತೂಕ ಮತ್ತು ಅಳತೆಯಲ್ಲಿ ಮೋಸ. ಈ ಮೋಸದ ವ್ಯವಹಾರದಿಂದ ಬೇಸತ್ತು ಅನಿವಾರ್ಯವಾಗಿ ಮಧ್ಯವರ್ತಿಗಳಿಗೆ ತಮ್ಮ ಸರಕುಗಳನ್ನು ಮಾರಾಟ ಮಾಡುತ್ತಾರೆ.

ಈ ಮೇಲಿನ ಅಂಶಗಳು ಮಾತ್ರವಲ್ಲದೆ ಇನ್ನೂ ಹಲವಾರು ಕಾರಣಗಳಿಂದಾಗಿ ಮಧ್ಯವರ್ತಿಗಳು

ಮಾತ್ರ ಕಾಡುಗೊಲ್ಲರ ಸರಕುಗಳನ್ನು ಮಾರುಕಟ್ಟೆ ಬೆಲೆಗಿಂತ ತುಂಬಾ ಕಡಿಮೆ ಬೆಲೆಯಲ್ಲಿ ಕೊಳ್ಳುತ್ತಾರೆ. ಇದರಿಂದಾಗಿ ಕಾಡುಗೊಲ್ಲರು ಶೋಷಣೆಗೆ ಒಳಪಟ್ಟು ಮತ್ತು ಬಡವರಾಗಿಯೇ ಮುಂದುವರಿಯುತ್ತಿದ್ದಾರೆ. ಮಧ್ಯವರ್ತಿಗಳು ಕಾಡುಗೊಲ್ಲರಿಂದ ಪಡೆಯುವ ಕೆಲವು ಸರಕುಗಳಿಗೆ ಕೊಡುವಂತಹ ಬೆಲೆಗಳನ್ನು ಈ ಕೆಳಗಿನ ಕೋಷ್ಟಕದ ಮೂಲಕ ಗ್ರಹಿಸಿಕೊಳ್ಳಬಹುದು.

ಕೋಷ್ಟಕ ೫.೬

ಮಧ್ಯವರ್ತಿಗಳು ಕಾಡುಗೊಲ್ಲರ ಕೃಷಿ ಉತ್ಪನ್ನಗಳಿಗೆ ಕೊಡುವ ಬೆಲೆಗಳು

ಕ್ರ.ಸಂ.	ಧಾನ್ಯಗಳು	೧೦೦ ಕೆ.ಜಿ. ತೂಕವಿರುವ ಕೃಷಿ ಉತ್ಪನ್ನಗಳಿಗೆ ಕೊಡುವ ಬೆಲೆ (ರೂ.ಗಳಲ್ಲಿ)
೦೧	ಜೋಳ	೫೦೦ ರಿಂದ ೬೦೦
೦೨	ರಾಗಿ	೫೫೦ ರಿಂದ ೬೦೦
೦೩	ಮೆಕ್ಕೆಜೋಳ	೩೦೦ ರಿಂದ ೩೫೦
೦೪	ನವಣೆ	೪೫೦ ರಿಂದ ೫೦೦
೦೫	ಈರುಳ್ಳಿ	೫೩೦ ರಿಂದ ೫೮೦
೦೬	ಸಜ್ಜೆ	೪೨೦ ರಿಂದ ೪೯೦
೦೭	ಭತ್ತ	೫೫೦ ರಿಂದ ೬೫೦
೦೮	ಹಲಸಂದಿ	೩೨೦ ರಿಂದ ೩೫೦
೦೯	ಕಡ್ಲೆ	೪೩೦ ರಿಂದ ೪೫೦
೧೦	ಅವರೆ	೪೦೦ ರಿಂದ ೪೮೦
೧೧	ತೊಗರಿ	೩೦೦ ರಿಂದ ೬೦೦
೧೨	ಮೆಣಸು	೧೫೦೦ ರಿಂದ ೨೦೦೦
೧೩	ಎಳ್ಳು	೩೦೦೦ ರಿಂದ ೩೫೦೦
೧೪	ಹೆಸರು	೧೫೦೦ ರಿಂದ ೧೬೦೦
೧೫	ಔಡಲ	೨೫೦೦ ರಿಂದ ೨೬೦೦
೧೬	ಅಡಿಕೆ	೮೦೦೦ ರಿಂದ ೮೨೦೦
೧೭	ಹತ್ತಿ	೧೮೦೦ ರಿಂದ ೨೦೦೦

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿದಾರರ ಮಾಹಿತಿ ಆಧರಿಸಿ ೨೦೦೭-೦೮ನೇ ಸಾಲಿನ ದರಗಳನ್ನು ಇಲ್ಲಿ ನೀಡಲಾಗಿದೆ.

[illegible]

ಮೇಲ್ಕಾಣಿಸಿದ ಕೋಷ್ಠಕದಲ್ಲಿಯ ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ಬೆಲೆ ಮತ್ತು ಆಹಾರ ಬೆಳೆಗಳಿಗೆ ಕಡಿಮೆ ಬೆಲೆಗೆ ಮಧ್ಯವರ್ತಿಗಳು ಕಾಡುಗೊಲ್ಲರ ಕೃಷಿಉತ್ಪನ್ನಗಳನ್ನು ಕೊಂಡುಕೊಳ್ಳುತ್ತಾರೆ. ಈ ಬೆಲೆಗಳು ಮಾರುಕಟ್ಟೆ ಬೆಲೆಗಳಿಗಿಂತ ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಉದಾಹರಣೆಗೆ ಕ್ಷೇತ್ರ ಅಧ್ಯಯನ ಸಂದರ್ಭದಲ್ಲಿ ಜೋಳ ಮತ್ತು ರಾಗಿಯ ಬೆಲೆ ಕ್ರಮವಾಗಿ ೮೦೦ ರೂ. ಮತ್ತು ೯೧೦ ರೂಪಾಯಿಗಳಿದ್ದರೆ ಮಧ್ಯವರ್ತಿಗಳು ಕಾಡುಗೊಲ್ಲರಿಂದ ಜೋಳ ಮತ್ತು ರಾಗಿಯನ್ನು ಕ್ರಮವಾಗಿ ೫೦೦ ರೂ. ಮತ್ತು ೫೫೦ ರೂ.ಗಳಲ್ಲಿ ಕೊಂಡುಕೊಳ್ಳುತ್ತಿದ್ದಾರೆ. ಇದರಿಂದಾಗಿ ಕಾಡುಗೊಲ್ಲರು ಮಧ್ಯವರ್ತಿಗಳಿಂದ ಶೋಷಣೆಗೆ ಒಳಪಟ್ಟು ಅನಿವಾರ್ಯ ಪರಿಸ್ಥಿತಿಯಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಲು ಸರ್ಕಾರ ಇವರಿಗೆ ಸೌಲಭ್ಯಗಳನ್ನು ನೀಡಿ ಅವರ ಅಭಿವೃದ್ಧಿಗೆ ಶ್ರಮಿಸಲೇ ಬೇಕಾಗಿದೆ.

೫.೧.೧.೫ ಕೃಷಿ ಕೂಲಿಗಳು

ಆಡಂಸ್ಮಿತ್‌ರವರು "ಶ್ರಮವನ್ನು ತಂದೆಯಂದೂ ಭೂಮಿಯನ್ನು ತಾಯಿಯಂದೂ ಅರ್ಥಪೂರ್ಣವಾಗಿ ಕರೆದಿದಾರೆ".[೧೩] ಏಕೆಂದರೆ ಭೂಮಿಯಿದ್ದರೂ ಶ್ರಮ ಇಲ್ಲದಿದ್ದರೆ ಆರ್ಥಿಕ ಉತ್ಪಾದನೆಯಾಗಲು ಸಾಧ್ಯವಿಲ್ಲ. ಉತ್ಪಾದನೆಯಾಗುವುದು ಭೂಮಿಯಲ್ಲೆ. ಅದರ ಉಪಯೋಗದ ಮೌಲ್ಯಗಳು ನಿರ್ಮಾಣವಾಗುವುದು ಶ್ರಮದಿಂದ ಮಾತ್ರ. ಅಂತೆಯೇ ಆರ್ಥಿಕ ಕಾರಣಗಳಿಂದ ಕೈಗೊಳ್ಳುವ ಬೌದ್ಧಿಕ ಮತ್ತು ಭೌತಿಕ ಶ್ರಮವನ್ನು ಒಟ್ಟಾಗಿ 'ಶ್ರಮ' ಎಂದು ಅರ್ಥಶಾಸ್ತ್ರದಲ್ಲಿ ಗುರುತಿಸಲಾಗುತ್ತದೆ. ಮಾರ್ಷಲ್ ಎಂಬ ಅರ್ಥಶಾಸ್ತ್ರಜ್ಞರು ಶ್ರಮವನ್ನು ಕುರಿತು "ಒಂದು ಕಾರ್ಯದಿಂದ ನೇರವಾಗಿ ದೊರಕುವ ಸಂತೋಷವನ್ನು ಬಿಟ್ಟು, ಉಳಿದೆಲ್ಲಾ ಲಾಭಕ್ಕಾಗಿ ಮಾಡುವ ಪೂರ್ಣವಾದ ಅಥವಾ ಅಪೂರ್ಣವಾದ ಮಾನಸಿಕ ಮತ್ತು ದೈಹಿಕ ಪ್ರಯತ್ನವೇ ಶ್ರಮ"[೧೪] ಎಂದಿದ್ದಾರೆ. ಇಲ್ಲಿ ಶ್ರಮ ಎಂಬ ಪದವನ್ನು ಕೃಷಿಯಲ್ಲಿ ಬಳಸಿದಾಗ, ಅತಿ ಹೆಚ್ಚು ಶ್ರಮಪಡುವಂತವನು ಕೃಷಿ ಕಾರ್ಮಿಕನಾಗಿರುತ್ತಾನೆ. ರಾಷ್ಟ್ರೀಯ ಕಾರ್ಮಿಕ ಆಯೋಗದ ಪ್ರಕಾರ "ಮೂಲಭೂತವಾಗಿ ನಿಪುಣರಲ್ಲದ ಮತ್ತು ಅಸಂಘಟಿತರಾದ ಹಾಗೂ ಜೀವನೋಪಾಯಕ್ಕಾಗಿ ಶ್ರಮವನ್ನು ಹೊರತುಪಡಿಸಿ ಬೇರೆನೂ ಇಲ್ಲದ ವ್ಯಕ್ತಿ ಕೃಷಿ ಕಾರ್ಮಿಕ"[೧೫] ಭೂಮಿ ಇಲ್ಲದವರು ಬಹುಪಾಲು ಆದಾಯವನ್ನು ಕೃಷಿಕೂಲಿಯಿಂದ ಪಡೆಯುತ್ತಾರೆ. ಈ ಆದಾಯವು ಕೂಲಿ ರೂಪದಲ್ಲಿರುತ್ತದೆ. ಕೂಲಿ ಎಂದರೆ ಕೂಲಿಯು ಶ್ರಮಶಕ್ತಿ ಬೆಲೆಯ ಅಥವಾ ಮೌಲ್ಯದ ಪರಿವರ್ತಿತ.

ಕಾರ್ಮಿಕನು ತನ್ನ ಶ್ರಮಶಕ್ತಿಗೆ ವಿನಿಮಯವಾಗಿ ಏನನ್ನು ಪಡೆಯುತ್ತಾನೆಯೋ ಅದೇ ಕೂಲಿ. ಕೃಷಿಕೂಲಿಯಲ್ಲಿ ನಿರತರಾದ ಅನೇಕ ಸಮುದಾಯಗಳಲ್ಲಿ ಕಾಡುಗೊಲ್ಲರ ಸಮುದಾಯವು ಒಂದು. ಕಾಡುಗೊಲ್ಲರು ಅತಿ ಕಡಿಮೆ ಪ್ರಮಾಣದಲ್ಲಿ ಭೂಹಿಡುವಳಿಗಳನ್ನು ಹೊಂದಿರುವುದರಿಂದ ಬೇರೆಯವರ ಭೂಮಿಗಳಲ್ಲಿ ಕೃಷಿ ಕೂಲಿಗಳಾಗಿ ದುಡಿಯುತ್ತಿದ್ದಾರೆ. ಪ್ರಸ್ತುತ ಕ್ಷೇತ್ರಕಾರ್ಯ ಮಾಡಿದ ಹಳ್ಳಿಗಳಲ್ಲಿ ಕೃಷಿಕೂಲಿಗಳಾಗಿ ಕಾಡುಗೊಲ್ಲರ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ. ಕಾಡುಗೊಲ್ಲರು ಮಾಡುವಂತಹ ಒಟ್ಟಾರೆ ವೃತ್ತಿಗಳಲ್ಲಿ ಅತಿಹೆಚ್ಚು ಶೇ. ೭೧ರಷ್ಟು ಅಂದರೆ ೯೪೫ ರಷ್ಟು ಜನರು

ಕೃಷಿಕೂಲಿಗಳಾಗಿಯೇ ದುಡಿಯುತ್ತಿದ್ದಾರೆ. ಅದರಲ್ಲಿ ಶೇ. ೪೯.೯೪ರಷ್ಟು ಪುರುಷರು ಮತ್ತು ಹಾಗೂ ೫೦.೦೫ರಷ್ಟು ಮಹಿಳೆಯರು ಸಮಪ್ರಮಾಣದಲ್ಲಿ ದುಡಿಯುತ್ತಿದ್ದಾರೆ. ಇವರು ಬಡವರು ಮತ್ತು ಆರ್ಥಿಕವಾಗಿ ದುರ್ಬಲರು ಎನ್ನುವುದಕ್ಕೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಕೃಷಿಕೂಲಿಗಳಾಗಿರುವುದೇ ಸಾಕ್ಷಿ. ಈ ಕೆಳಗಿನ ಕೋಷ್ಟಕ ೭ನ್ನು ಗಮನಿಸಿ.

ಕೋಷ್ಟಕ ೫.೭

ಕೃಷಿ ಕೂಲಿಗಳಾಗಿ ತೊಡಗಿಸಿಕೊಂಡಿರುವ ಕಾಡುಗೊಲ್ಲರ ಲಿಂಗವಾರು ಪ್ರಮಾಣ

ಕ್ರ.ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೭೮	೭೩	೧೪೧
			ಜೋಗಿಹಟ್ಟಿ	೮೮	೮೩	೧೭೧
			ಯಲಗಟ್ಟೆ ಗೊಲ್ಲರಹಟ್ಟಿ	೧೭೭	೧೫೪	೩೩೧
			ಬೆಳೆಗೆರೆ ಗೊಲ್ಲರಹಟ್ಟಿ	೯೫	೯೯	೧೯೪
೨		ಮೊಳಕಾಲ್ಮೂರು	ಗುಂಡ್ಲೂರು	೪೪	೬೪	೧೦೮
			ಒಟ್ಟು	೪೭೨	೪೭೩	೯೪೫

ಕೋಷ್ಟಕ ೫.೭ರಲ್ಲಿ ನೀಡಿರುವ ಅಂಕಿಸಂಖ್ಯೆಗಳಿಂದ ಒಟ್ಟಾರೆ ೯೪೫ ಕೃಷಿಕಾರ್ಮಿಕರಲ್ಲಿ ಚಳ್ಳಕೆರೆ ತಾಲ್ಲೂಕಿನ ಹನುಮಂತನಹಳ್ಳಿಯಲ್ಲಿ ಶೇ. ೧೪.೯೨ರಷ್ಟು ಕೃಷಿಕಾರ್ಮಿಕರಲ್ಲಿ ಅದರಲ್ಲಿ ಗಂಡು ಮತ್ತು ಹೆಣ್ಣು ಕ್ರಮವಾಗಿ ಶೇ. ೪೮.೨೨ ಹಾಗೂ ಶೇ. ೫೧.೭೭ ರಷ್ಟಿದ್ದಾರೆ. ಜೋಗಿಹಟ್ಟಿಯಲ್ಲಿ ಶೆ. ೧೮.೦೯ರಷ್ಟು ಕೃಷಿಕಾರ್ಮಿಕರಿದ್ದು, ಅದರಲ್ಲಿ ಪುರುಷರು ಶೇ. ೫೧.೪೬ರಷ್ಟು ಮಹಿಳೆಯರು ಶೇ. ೪೮.೫೩ರಷ್ಟಿದ್ದಾರೆ. ಯಲಗಟ್ಟೆಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಶೇ. ೩೫.೦೨ರಷ್ಟು ಕೃಷಿಕಾರ್ಮಿಕರಿದ್ದು ಪುರುಷ ಶೇ. ೫೩.೪೭ರಷ್ಟು ಮತ್ತು ಮಹಿಳೆಯರು ಶೇ. ೪೬.೫೨ರಷ್ಟು ಇದ್ದಾರೆ. ಬೆಳಗೆರೆಯಲ್ಲಿ ಶೇ. ೨೦.೫೨ರಷ್ಟು ಇದ್ದು ಇದರಲ್ಲಿ ಪುರುಷರು ಶೇ. ೪೮.೯೬ರಷ್ಟು ಹಾಗೂ ಮಹಿಳೆಯರು ಶೇ. ೫೧.೦೩ರಷ್ಟು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಗುಂಡ್ಲುರಿನಲ್ಲಿ ಶೇ. ೧೧.೪೨ರಷ್ಟು ಕೃಷಿಕಾರ್ಮಿಕರಿದ್ದು, ಅದರಲ್ಲಿ ಗಂಡು ಶೇ. ೪೦.೭೪ರಷ್ಟು ಹಾಗೂ ಹೆಣ್ಣು ಶೇ. ೫೯.೨೫ರಷ್ಟು ಅತಿಕಡಿಮೆ ಪ್ರಮಾಣದಲ್ಲಿದ್ದಾರೆ. ಇವರು ಕೂಲಿ ರೂಪದಲ್ಲಿ ಹಣ ಅಥವಾ ಧಾನ್ಯವನ್ನು ಪಡೆಯುತ್ತಾರೆ. ಇವರ ಸ್ಥಿತಿಯೂ ಕೃಷಿ ಭೂಹಿಡುವಳಿ ಹೊಂದಿದವರ ಸ್ಥಿತಿಗಿಂತ ಅತ್ಯಂತ ನಿಕೃಷ್ಟ ಮಟ್ಟದಲ್ಲಿದ್ದು ಬಂದಂತಹ ಕೂಲಿಯಲ್ಲಿಯೇ ಜೀವನ ಸಾಗಿಸುವ ಪರಿಸ್ಥಿತಿ ಇವರದಾಗಿದೆ.

ಕಾಡುಗೊಲ್ಲರು ಅನೇಕ ವಿಧಗಳಲ್ಲಿ ಕೃಷಿಕೂಲಿಗಳಾಗಿ ದುಡಿಯುತ್ತಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

೧. ದಿನನಿತ್ಯ ಹೊಲದಲ್ಲಿ ದುಡಿಯುವವರ ಕೂಲಿ

೨. ಬೆಳೆಕಟಾವು ಸಂದರ್ಭದ ಕೂಲಿ

೩. ಪ್ರಾಣಿಗಳನ್ನು ಸಾಕುವುದಕ್ಕೆ ಕೂಲಿ

೫.೧.೧.೫.೧. ದಿನನಿತ್ಯ ಹೊಲದಲ್ಲಿ ದುಡಿಯುವವರ ಕೂಲಿ

ಸಾಮಾನ್ಯವಾಗಿ ಕಾಡುಗೊಲ್ಲರು ಪ್ರತಿನಿತ್ಯ ಬೇರೆಯವರ ಹೊಲಗಳಲ್ಲಿ ದುಡಿಯುವುದಕ್ಕಾಗಿ ಹೋಗುತ್ತಾರೆ. ಪ್ರತಿಶತ ೮೦ರಷ್ಟು ಜನ ಕೂಲಿಯನ್ನೇ ನಂಬಿ ಬದುಕುತ್ತಿದ್ದಾರೆ. ಇದರಲ್ಲಿ ಕಡ್ಡಾಯವಾಗಿ ದುಡಿಯಲು ಬರುವವರು ಮತ್ತು ತಾತ್ಕಲಿಕವಾಗಿ ದುಡಿಯುವವರು ಎಂಬ ಎರಡು ವಿಧಗಳಿವೆ. ಕಡ್ಡಾಯವಾಗಿ ದುಡಿಯುವವರು ತಮ್ಮ ಧಣಿಗಳ ಹೊಲದಲ್ಲಿ ಅವರು ಹೇಳಿದಾಗ ಕೆಲಸ ಮಾಡುತ್ತಾರೆ. ಇವರನ್ನು 'ಸ್ವಂತ ಕೂಲಿ' ಎನ್ನುತ್ತಾರೆ. ಈ ಕೂಲಿ ಆಳುಗಳ ಸಂಪೂರ್ಣ ಜವಾಬ್ದಾರಿ ಆ ಧಣಿಗಳದ್ದೇ (ಭೂಮಾಲಿಕರ) ಆಗಿರುತ್ತದೆ. ಸ್ವಂತ ಕೂಲಿ ಆಳುಗಳ ಕಷ್ಟ ಸುಖದಲ್ಲಿ ಈ ಧಣಿಗಳು ಪಾಲುದಾರರಾಗಿರುತ್ತಾರೆ. ಈ ವ್ಯವಸ್ಥೆಯು ತಾತ್ಕಲಿಕವಾಗಿ ದುಡಿಯುವವರಿಗೆ ಇರುವುದಿಲ್ಲ. ಇವರ ಯಾವುದೇ ಜವಾಬ್ದಾರಿಯನ್ನು ಭೂಮಾಲಿಕರು ಹೊರುವುದಿಲ್ಲ. ದಿನನಿತ್ಯ ದುಡಿಯುವವರು ಜಮೀನುಗಳಲ್ಲಿ ಹಲವಾರು ಕೆಲಸಗಳನ್ನು ಮಾಡುತ್ತಾರೆ. ಒಂದೊಂದು ಕೆಲಸಕ್ಕೂ ಪ್ರತ್ಯೇಕವಾದ ಕೂಲಿ ಇರುತ್ತದೆ. ಅವುಗಳನ್ನು ಈ ಕೆಳಗಿನ ಕೋಷ್ಠಕದಲ್ಲಿ ನೋಡಬಹುದು.

ಕೋಷ್ಠಕ ೫.೮

ದಿನನಿತ್ಯ ಹೊಲದಲ್ಲಿ ವಿವಿಧ ಕೆಲಸಗಳಿಗೆ ಕೊಡುವ ಕೂಲಿ

ಕ್ರ.ಸಂ.	ಕೂಲಿಯ ಹೆಸರು	ದಿನವೊಂದಕ್ಕೆ ಕೊಡುವ ಕೂಲಿಯ ದರ (ರೂ.ಗಳಲ್ಲಿ)	
		ಗಂಡು	ಹೆಣ್ಣು
೦೧	ಭೂಮಿ ಅಗೆಯುವುದು	೫೦	--
೦೨	ಭೂಮಿ ಉಳುವುದು	೬೦	--
೦೩	ಭಾರದ ಚೀಲಗಳನ್ನು ಹೊರುವುದು	೫೦	--
೦೪	ಕಳೆ ಕೀಳುವುದು	--	೩೦
೦೫	ಹೊರೆ ಹೊರುವುದು	೫೦	೩೦
೦೬	ಸಸಿ ನೆಡುವುದು	--	೩೫
೦೭	ಟ್ರಾಕ್ಟರ್ ಹೊಡೆಯುವುದು	೮೦	--
೦೮	ಹೊಲಗಳಿಗೆ ಔಷಧ ಸಿಂಪಡಿಸುವುದು	೫೦	೪೦
೦೯	ಮಣ್ಣು ಅಥವಾ ಗೊಬ್ಬರ ಹೊರುವುದು	೫೦	೩೦

ಕೋಷ್ಟಕ ೮ರಲ್ಲಿರುವ ಅಂಕಿ-ಅಂಶಗಳನ್ನು ಗಮನಿಸಿದಾಗ ಕೂಲಿ ಕೊಡುವುದರಲ್ಲಿ ತಾರತಮ್ಯ ಇರುವುದು ಕಂಡುಬರುತ್ತದೆ. ಹೆಣ್ಣಿಗೆ ಕಡಿಮೆ ಕೂಲಿ ಇದ್ದರೆ, ಗಂಡಿಗೆ ಹೆಚ್ಚಿಗೆ ಕೂಲಿ ಇರುವುದನ್ನು ನೋಡಬಹುದು. ಈ ರೀತಿ ತಾರತಮ್ಯದ ವೇತನ ನೀಡಲು ಕಾರಣ ಮಹಿಳೆ ಜಮೀನುಗಳಲ್ಲಿ ಸುಲಭದ ಕೆಲಸಗಳಾದ ಕಳೆ ಕೀಳುವುದು, ಹೊರೆ ಹೊರುವುದು, ಸಸಿ ನೆಡುವುದು, ಮಣ್ಣು ಅಥವಾ ಗೊಬ್ಬರ ಹೊರುವುದು ಮಾಡುತ್ತಾರೆ. ಪುರುಷರು ಭೂಮಿ ಅಗೆಯುವುದು, ಭೂಮಿ ಉಳುವುದು, ಭಾರದ ಚೀಲಗಳನ್ನು ಹೊರುವುದು ಮುಂತಾದ ಶ್ರಮದಾಯಕ ಕೆಲಸದಲ್ಲಿ ನಿರತರಾಗಿರುತ್ತಾರೆ. ಅಂದರೆ ದೈಹಿಕವಾಗಿ ಪುರುಷ ಮಹಿಳೆಗಿಂತ ಹೆಚ್ಚು ಶಕ್ತಿಶಾಲಿಯಾಗಿರುವ ಈ ಕಾರಣದಿಂದ ಹೆಚ್ಚಿನ ಕೂಲಿಯನ್ನು ಪುರುಷರು ಪಡೆಯುತ್ತಾರೆ.

೫.೧.೧.೫.೨. ಬೆಳೆ ಕಟಾವು ಸಂದರ್ಭದ ಕೂಲಿ

ಬೆಳೆ ಕಟಾವಿನ ಸಂದರ್ಭದಲ್ಲಿ ಕಾಡುಗೊಲ್ಲರ ಕೂಲಿ ಕಾರ್ಮಿಕರಿಗೆ ದಿನನಿತ್ಯ ಕೂಲಿ ಹಣಕ್ಕಿಂತ ಸ್ವಲ್ಪ ಹೆಚ್ಚಿಗೆ ಕೊಡುತ್ತಾರೆ. ಇಲ್ಲಿ ಸ್ವಂತ ಕೂಲಿಗಳು ಮತ್ತು ತಾತ್ಕಾಲಿಕ ಕೂಲಿಗಳು ಎಂಬ ಭೇದ-ಭಾವಗಳು ಈ ಸಮಯದಲ್ಲಿ ಇರುವುದಿಲ್ಲ. ಕಡ್ಡಾಯವಾಗಿ ಜಮೀನುಗಳಿಗೆ ಸ್ವಂತ ಕೂಲಿಗಳು ಬಂದರೆ, ಬೇಡಿಕೆಗೆ ಅನುಗುಣವಾಗಿ ತಾತ್ಕಾಲಿಕ ಕೂಲಿಗಳು ದುಡಿಯಲು ಬರುತ್ತಾರೆ. ಇಂತಹ ಸಂದರ್ಭದಲ್ಲಿ ಜಮೀನಿನ ಕೆಲಸಕ್ಕೆ ಅತಿ ಹೆಚ್ಚಿನ ಬೇಡಿಕೆ ಇರುವುದರಿಂದ ಹೆಚ್ಚಿನ ಕೂಲಿಯ ಆಮಿಷ ಒಡ್ಡಿ ತಾತ್ಕಾಲಿಕ ಕೂಲಿಗಳು ದುಡಿಯಲು ಬರುತ್ತಾರೆ. ಈ ಸಂದರ್ಭದಲ್ಲಿ ಜಮೀನಿನ ಆಮಿಷ ಒಡ್ಡಿ ತಾತ್ಕಾಲಿಕ ಕೂಲಿಗಳನ್ನು ಭೂಮಾಲಿಕರು ತಮ್ಮಡೆಗೆ ಸೆಳೆಯುತ್ತಾರೆ. ಈ ಸಂದರ್ಭದಲ್ಲಿ ಕೊಡುವ ಕೂಲಿಯ ದರವನ್ನು ಈ ಕೆಳಗಿನಂತೆ ನೋಡಬಹುದು.

ಕೋಷ್ಟಕ ೫.೯

ಬೆಳೆ ಕಟಾವು ಸಂದರ್ಭದಲ್ಲಿ ನೀಡುವ ಕೂಲಿಯ ದರಗಳು

ಕ್ರ.ಸಂ.	ಕೂಲಿಯ ಹೆಸರು	ದಿನವೊಂದಕ್ಕೆ ಕೊಡುವ ಕೂಲಿಯ ದರ (ರೂ.ಗಳಲ್ಲಿ)	
		ಗಂಡು	ಹೆಣ್ಣು
೦೧	ಬೆಳೆಗಳನ್ನು ರಾಶಿ ಮಾಡುವುದು	೭೦	೫೦
೦೨	ಬೆಳೆಗಳನ್ನು ಕಟಾವು ಮಾಡುವುದು	೭೦	೫೦
೦೩	ಬೆಳೆಗಳನ್ನು ಕೊಯ್ಯುವ ಕೆಲಸ	೬೦	४೫
೦೪	ರಾಗಿ ಮತ್ತು ಭತ್ತ ತೂರುವುದು	೬೦	೫೦
೦೫	ತೆನೆಯಿಂದ ಬೇರ್ಪಡಿಸುವುದು	೮೦	೬೦

೦೬	ಫಸಲನ್ನು ಚೀಲದಲ್ಲಿ ತುಂಬುವುದು	೮೦	೬೦
೦೭	ಟ್ರಾಕ್ಟರ್ ಹೊಡಿಸುವುದು	೧೦೦	--
೦೮	ಭಾರವಾದ ಚೀಲ ಹೊರುವುದು	೧೦೦	--

ಈ ಕೋಷ್ಟಕ ಗಮನಿಸಿದಾಗ ಸಾಮಾನ್ಯ ದಿನಗಳಲ್ಲಿ ಕೊಡುವ ಕೂಲಿಗಿಂತ ಅತಿಹೆಚ್ಚಿನ ಪ್ರಮಾಣದಲ್ಲಿ ಕೂಲಿಯನ್ನು ಈ ಸಂದರ್ಭದಲ್ಲಿ ಕೊಡಲಾಗುತ್ತದೆ. ಫಸಲನ್ನು ಕೊಯ್ಯುವ ಸಂದರ್ಭದಲ್ಲಿ ಕೃಷಿಕೂಲಿಕಾರರು ಇತರೆ ದಿನಗಳಿಗಿಂತ ಸ್ವಲ್ಪ ಪ್ರಮಾಣದಲ್ಲಿ ನೆಮ್ಮದಿಯಿಂದ ಬದುಕುತ್ತಾರೆ ಮತ್ತು ಇದೇ ಸಂದರ್ಭದಲ್ಲಿ ಮಕ್ಕಳಿಗೆ ತಮಗೆ ಬಟ್ಟೆ ಬರೆ ಖರೀದಿಸುವುದು ಕಂಡುಬರುತ್ತದೆ. ಆದರೆ ಈ ಸಂದರ್ಭದಲ್ಲಿ ಬಂದ ಹಣವನ್ನು ಕೂಡಿಡದೇ ಖರ್ಚುಮಾಡಿ ಇತರೆ ದಿನಗಳಲ್ಲಿ ಗಂಜಿ ಕುಡಿಯುತ್ತ ಹಣಕ್ಕಾಗಿ, ಆಹಾರ ಧಾನ್ಯಗಳಿಗಾಗಿ ಪರದಾಡುತ್ತ ಬದುಕುವುದು ಸರ್ವೇಸಾಮಾನ್ಯವಾಗಿದೆ. ಆದರೆ ಇದು ತಾತ್ಕಲಿಕವಾದ್ದರಿಂದ ಆರ್ಥಿಕಮಟ್ಟ ಉತ್ತಮಗೊಳ್ಳದೇ ಬಂದ ಹಣ ನೀರಿನಂತೆ ಖರ್ಚಾಗುತ್ತದೆ.

೫.೧.೧.೫.೩. ಪಶುಪಾಲನೆಗಾಗಿ ಕೂಲಿ

ಕಾಡುಗೊಲ್ಲರು ಮೂಲತಃ ಪಶುಪಾಲಕರು. ಪ್ರಾರಂಭ ದಿಂದಲೂ ಪಶುಪಾಲನೆಯನ್ನು ಮುಂದುವರೆಸಿ ಕೊಂಡು ಬಂದವರು. ನಂತರ ಮಳೆಯು ಕಡಿಮೆಯಾಗಿ, ಪಶುಗಳನ್ನು ಮೇಯಿಸಲು ಹುಲ್ಲು ಸಿಗದೇ ಇದ್ದ ಸಂದರ್ಭದಲ್ಲಿ ಪಶುಪಾಲನೆ ವೃತ್ತಿಯನ್ನು ಕಡಿಮೆ ಮಾಡುತ್ತಾ ಕೃಷಿಯ ಕಡೆಗೆ ಒಲವು ತೋರಿಸುವುದಕ್ಕೆ ಪ್ರಾರಂಭಿಸಿದರು. ಪಶುಪಾಲನೆಯಿಂದ ತುಪ್ಪ, ಮೊಸರು, ಹಾಲು, ಮಜ್ಜಿಗೆ(ಹೈನುತ್ಪಾದನೆ) ಮಾರಾಟದಿಂದ ಜೀವನ ನಡೆಸುತ್ತಿದ್ದವರು. ನಂತರದಲ್ಲಿ ಕೃಷಿಯಲ್ಲಿ ತೊಡಗಿಕೊಂಡಿದ್ದು ಇತಿಹಾಸ. ಇತ್ತೀಚೆಗೆ ಕಾಡುಗೊಲ್ಲರು ಬೇರೆ ಬೇರೆ ವೃತ್ತಿಗಳನ್ನು ಕಂಡು ಕೊಂಡಿರುವುದನ್ನು ಕಾಣುತ್ತೇವೆ. ಆದರೆ ಕೆಲವರು ಮೂಲ ವೃತ್ತಿಯನ್ನು ಬಿಡಲಾಗದೇ ಪಶುಗಳನ್ನು ಸಾಕಿಕೊಂಡಿದ್ದಾರೆ ಮತ್ತು ಪಶುಪಾಲನೆಗಾಗಿ ತಮ್ಮಲ್ಲಿಯೇ ಕೆಲವರನ್ನು ನೇಮಿಸಿ ಕೊಂಡಿರುತ್ತಾರೆ. ಇವರ ಸಂಪೂರ್ಣವಾದ ಖರ್ಚು-ವೆಚ್ಚಗಳನ್ನು ಪಶುಪಾಲನೆಯ ಮಾಲಿಕರೆ ಭರಿಸುತ್ತಾರೆ. ಅನ್ಯ ಸಮುದಾಯದವರು ಸಹ ಪಶುಪಾಲನೆಗಾಗಿ ಕಾಡುಗೊಲ್ಲರನ್ನು ನೇಮಿಸಿಕೊಳ್ಳುತ್ತಾರೆ. ಎಮ್ಮೆ, ಆಕಳು, ಎತ್ತು, ಕುರಿ, ಆಡು ಸಾಕುವುದಕ್ಕೆ ಭಿನ್ನವಾದ ಕೂಲಿಗಳು ಇರುತ್ತವೆ ಎಂಬುದನ್ನು ಕೋಷ್ಟಕ ೧೦ರಲ್ಲಿ ಗಮನಿಸಬಹುದು.

ಕೋಷ್ಟಕ ೫.೧೦

ಪಶುಪಾಲನೆಗೆ ನೀಡುವ ಕೂಲಿಯ ದರಗಳು

ಕ್ರ.ಸಂ.	ಕೂಲಿಯ ಹೆಸರು	ದಿನವೊಂದಕ್ಕೆ ಕೊಡುವ ಕೂಲಿಯ ದರ (ರೂ.ಗಳಲ್ಲಿ)
೦೧	ಎತ್ತು ಕಾಯುವುದು	೫೦.೦೦ ಹಾಗೂ ನಿತ್ಯದ ಊಟ
೦೨	ಎಮ್ಮೆ ಕಾಯುವುದು	೫೦.೦೦ ಹಾಗೂ ನಿತ್ಯದ ಊಟ

[illegible]

೦೩	ಆಕಳು ಕಾಯುವುದು	೫೦.೦೦ ಹಾಗೂ ನಿತ್ಯದ ಊಟ
೦೪	ಕುರಿ ಕಾಯುವುದು	೮೦.೦೦ ಹಾಗೂ ನಿತ್ಯದ ಊಟ
೦೫	ಮೇಕೆ ಕಾಯುವುದು	೭೦.೦೦ ಮತ್ತು ನಿತ್ಯದ ಊಟ

ಹೆಚ್ಚಿನ ಸಂಖ್ಯೆಯಲ್ಲಿ ಎತ್ತು, ಎಮ್ಮೆ, ಆಕಳು, ಕುರಿ ಮತ್ತು ಮೇಕೆಗಳನ್ನು ಗುಂಪು ಗುಂಪಾಗಿಯೇ ಸಾಕುತ್ತಿದ್ದು, ಇವುಗಳ ಮೇವಿಗಾಗಿ ದೂರದ ಕಾಡಿಗೆ ಹೋಗುತ್ತಾರೆ. ಇಲ್ಲವೆ ಪ್ರಾಣಿಗಳನ್ನೇ ಕಾಡಿಗೆ ಹೊಡೆದುಕೊಂಡು ಹೋಗಿ ಮೇಯಿಸಿ ತರುತ್ತಾರೆ.

ಒಟ್ಟಾರೆಯಾಗಿ ಕೃಷಿ ಮತ್ತು ಕೃಷಿಕೂಲಿಗಳಾಗಿ ದುಡಿಯುವ ಕಾಡುಗೊಲ್ಲರ ಆರ್ಥಿಕ ಪರಿಸ್ಥಿತಿ ನಿಕೃಷ್ಟವಾಗಿದ್ದು ನಿತ್ಯ ಬದುಕಿಗಾಗಿ ಹೋರಾಟವನ್ನು ನಡೆಸುತ್ತಿರುವ ಚಿತ್ರಣ ಸಾಮಾನ್ಯವಾಗಿ ಕಂಡುಬರುತ್ತದೆ.

೫.೧.೨ ಪಶುಪಾಲನೆ

ಪ್ರಾಚೀನ ಕಾಲದಿಂದ ಪಶುಪಾಲನೆ ಕಾಡುಗೊಲ್ಲರಲ್ಲಿ ಪೂಜ್ಯನಿಯವಾದ ವೃತ್ತಿಯಾಗಿದೆ. ಕೃಷಿಯಲ್ಲಿ ನಿರತರಾದವರೂ ಸಹ ಪಶುಪಾಲನೆ ಮಾಡುತ್ತಿರುವುದನ್ನು ಕಾಣುತ್ತೇವೆ. ಪಶುಪಾಲನೆ ಮತ್ತು ಕೃಷಿಗೆ ಅವಿನಾಭಾವ ಸಂಬಂಧವಿದೆ. ಕೃಷಿಕ ವೃತ್ತಿ ಮಾಡುತ್ತಿರುವವರಿಗೆ ಕನಿಷ್ಠ ಎರಡು ಎತ್ತುಗಳಾದರೂ ಬೇಕೆ ಬೇಕು. ಸ್ವಂತ ಎತ್ತುಗಳನ್ನು ಹೊಂದಿರದವನ ಬಾಳನ್ನು ಜನಪದರು "ಎತ್ತಿಲ್ಲದವನಿಗೆ ಎದೆಯಿಲ್ಲ" ಎಂದು ಹೇಳುತ್ತಾರೆ. ಭೂಮಿ ಊಳಲು ಉತ್ತಿ ಬಿತ್ತಿಲು ಎತ್ತುಗಳ ಅವಶ್ಯಕತೆ ಇದೆ. ಆಧುನಿಕ ಕೃಷಿ ಪದ್ಧತಿಯಲ್ಲಿ ಟ್ರ್ಯಾಕ್ಟರ್ ಬಳಸಿ ಭೂಮಿಯನ್ನು ಹದಗೊಳಿಸುತ್ತಾರೆ ಮತ್ತು ಬಿತ್ತುತ್ತಾರೆ. ಆದರೆ ಫಸಲಿನ ಮಧ್ಯದ ಸಾಲಿನಲ್ಲಿ ಕಳೆ ತೆಗೆಯುವುದಕ್ಕಾಗಿ 'ಎಡಿ ಕುಂಟೆ' ಹೊಡೆಯಬೇಕಾಗುತ್ತದೆ. ಈ ಕೆಲಸವನ್ನು ಟ್ರಾಕ್ಟರಿನಿಂದ ಮಾಡಲು ಸಾಧ್ಯವಿಲ್ಲ. ಇದಕ್ಕಾಗಿ ಎತ್ತುಗಳು ಬೇಕು. ಮೂಲತಃ ಪಶುಸಂಗೋಪನೆ ಕೃಷಿಯ ಸಹವೃತ್ತಿಯ ಬೆನ್ನೆಲುಬು ಕೂಡ. ಮನೆ ಬಳಕೆಗಾಗಿ ಹಾಲು ಅತ್ಯವಶ್ಯ. ಹಾಲು ಪಡೆಯುವುದಕ್ಕಾಗಿ ಕೃಷಿಕರು ಒಂದೆರಡು ಆಕಳು ಅಥವಾ ಎಮ್ಮೆಗಳನ್ನು ಸಾಕುತ್ತ ಬಂದಿರುವುದನ್ನು ಹಿಂದಿನಿಂದಲೂ ಕಾಣುತ್ತೇವೆ. ಕೃಷಿಕನ ಐಶ್ವರ್ಯ ಅಂತಸ್ತನ್ನು ಅವನು ಹೊಂದಿರುವ ಪಶುಸಂಪತ್ತನ್ನು ಆದರಿಸಿ ನಿರ್ಧರಿಸುತ್ತಿರುವುದು ಹಿಂದಿನಿಂದಲೂ ನಡೆದು ಬಂದಿದೆ. ಕೃಷಿಕರ ಮನೆಯಲ್ಲಿ ಮನೆತುಂಬ ಮಕ್ಕಳು ಕೊಟ್ಟಿಗೆ ತುಂಬ ದನಕರುಗಳು ಇದ್ದರೆ ಅವನಂತಹ ಶ್ರೀಮಂತ ಕುಟುಂಬ ಮತ್ತೊಂದಿಲ್ಲ ಎಂದು ಹೇಳಿಕೊಳ್ಳುತ್ತಿದ್ದುದು, ಒಂದು ಕಾಲಕ್ಕಿತ್ತು. ಇದು ಈ ಚಿತ್ರಣವನ್ನು ಹಳ್ಳಿಗಳಲ್ಲಿ ಕಾಣುತ್ತೇವೆ. ಕೃಷಿಕ ವೃತ್ತಿ ಮಾಡುತ್ತಿರುವವರಿಗೆ ಪಶುಪಾಲನೆ ಮಾಡುವುದು ಅಷ್ಟೇನು ಕಷ್ಟಕರವಾಗುವುದಿಲ್ಲ. ಕೇವಲ ಪಶುಪಾಲನೆ ಮಾಡುವವರಿಗೆ ಸ್ವಲ್ಪ ತೊಂದರೆ ಯಾಗುತ್ತದೆ. ಪಶುಗಳಿಗೆ ಆಹಾರ ಪೂರೈಸಲು ಅವರು ತೊಂದರೆ ಅನುಭವಿಸುತ್ತಾರೆ. ಸಾಮಾನ್ಯವಾಗಿ ಕೃಷಿ ಮಾಡುತ್ತಿರುವವರೆಲ್ಲರೂ ತಮ್ಮ ದನಕರುಗಳನ್ನು ಮನುಷ್ಯರಿಗಿಂತ ಹೆಚ್ಚಾಗಿ ಪ್ರೀತಿಸುತ್ತಿರುವುದು ಕಂಡುಬರುತ್ತದೆ.

[illegible]

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಲ್ಲಿ ಎತ್ತಪ್ಪನ ಕಾಲಕ್ಕೆ ಆಕಳು ಹಾಗೂ ಎತ್ತುಗಳನ್ನು ಸಾಕುತ್ತಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಜುಂಜಪ್ಪನ ಕಾಲಕ್ಕೆ ಎತ್ತು, ಆಕಳು ಮತ್ತು ಕುರಿಸಾಕಾಣಿಕೆ ಮಾಡುತ್ತಿರುವುದು ತಿಳಿಯುತ್ತದೆ. ಕಾಡುಗೊಲ್ಲರು ಪಶುಪಾಲನೆ ಮಾಡುವುದರಲ್ಲಿ ನಿಸ್ಸೀಮರು. ತಮ್ಮ ಕುಟುಂಬದ ನಿರ್ವಹಣೆ, ಆದಾಯದ ನಿರೀಕ್ಷೆಯನ್ನು ಪಶುಪಾಲನೆಯ ಮೇಲೆಯೇ ಅವಲಂಬಿಸಿದವರು. ಒಂದು ಕಾಲಕ್ಕೆ ಕಾಡುಗೊಲ್ಲರು ೧೦೦ ರಿಂದ ೨೦೦ ಆಕಳು ಹಾಗೂ ಎತ್ತುಗಳನ್ನು ಮತ್ತು ೫೦೦ ರಿಂದ ೨೦೦೦ದವರೆಗೆ ಕುರಿ, ಆಡುಗಳನ್ನು ಸಾಕುತ್ತಿದ್ದರೆಂದು ತಿಳಿಯುತ್ತದೆ. ಇತ್ತೀಚೆಗೆ ಮಳೆ ಪ್ರಮಾಣ ಕಡಿಮೆಯಾಗುತ್ತಾ ಹೋದಂತೆ ಗೋಮಾಳಗಳು ಕೃಷಿಭೂಮಿಗಳಾಗಿ ಪರಿವರ್ತನೆಯಾಗುತ್ತಿರುವುದರಿಂದ ಪಶುಪಾಲನೆ ವೃತ್ತಿ ಕಡಿಮೆಯಾಗುತ್ತ ಬರುತ್ತಿದೆ. ಪಾರಂಪರಿಕ ತಳಿಯ ಆಕಳು ಹಾಗೂ ಎಮ್ಮೆಗಳಿಂದ ಹಾಲಿನ ಉತ್ಪಾದನೆ ಪ್ರಮಾಣ ಕಡಿಮೆ ಯಾಗುತ್ತಿದೆ. ಆಧುನಿಕ ತಳಿಗಳನ್ನು ಖರೀದಿಸಿ ಪಶುಪಾಲನೆ ಮಾಡಲು ಇವರಿಗೆ ಬಂಡವಾಳವಿಲ್ಲದೆ ಕೊರಗುತ್ತಿದ್ದಾರೆ. ಈ ಎಲ್ಲ ಕಾಣರಗಳಿಂದ ಕಾಡುಗೊಲ್ಲರಲ್ಲಿ ಪಶುಪಾಲನೆ ಮಾಯವಾಗುತ್ತಿದೆ.

ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ವಲಯಗಳಾದ ಕೃಷಿ, ಕೈಗಾರಿಕೆ ಮತ್ತು ಸೇವಾವಲಯಗಳನ್ನು ಆಧಾರವಾಗಿಟ್ಟುಕೊಂಡು ಮಾನವ ಜೀವನ ನಡೆಸುತ್ತಿದ್ದಾನೆ. ಪ್ರಾಥಮಿಕ ವಲಯದಲ್ಲಿಯ ಭೂಸಾಗುವಳಿ ದಾರರು, ಕೃಷಿ, ಪಶುಪಾಲನೆ, ಅರಣ್ಯ, ಮೀನುಗಾರಿಕೆ, ಬೇಟೆ ಮುಂತಾದವು ಒಳಗೊಂಡಿವೆ. ಈ ವಲಯದಲ್ಲಿ ಕೃಷಿ ಮತ್ತು ಪಶುಪಾಲನೆ ವೃತ್ತಿಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಕಾಡುಗೊಲ್ಲರಲ್ಲಿ ಪಶುಪಾಲನೆ ಕಡಿಮೆಯಾಗಿದ್ದರೂ ಪ್ರತಿ ಕುಟುಂಬದಲ್ಲಿ ಒಂದೆರಡು ಆಕಳು, ಕುರಿ, ಆಡುಗಳನ್ನು, ಹೊಂದಿರುವುದು ಕಂಡುಬರುತ್ತದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು ಪಶುಸಂಪತ್ತನ್ನು ತಮ್ಮ ಆರಾಧ್ಯ ದೈವಗಳೆಂದು ತಿಳಿದುಕೊಂಡವರು. ಸಂಪ್ರದಾಯವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರತಿಯೊಬ್ಬರು, ಕನಿಷ್ಟವಾದ ಪಶುಸಂಪತ್ತನ್ನು ಹೊಂದಿರುವುದನ್ನು ಕಾಣುತ್ತೇವೆ. ಕಾಡುಗೊಲ್ಲರಲ್ಲಿಯ ಪಶುಪಾಲನೆಯ ಹಲವು ಪ್ರಕಾರಗಳಿವೆ. ೧. ಆಕಳು ಸಾಕಾಣಿಕೆ ೨. ಕುರಿ ಸಾಕಾಣಿಕೆ, ೩. ಎತ್ತುಗಳ ಸಾಕಾಣಿಕೆ ೪. ಎಮ್ಮೆ ಸಾಕಾಣಿಕೆ ೫. ಮೇಕೆ ಸಾಕಾಣಿಕೆ ೬. ಕೋಳಿಸಾಕಾಣಿಕೆ.

೫.೧.೨.೧. ಆಕಳು ಸಾಕಾಣಿಕೆ

ಕಾಡುಗೊಲ್ಲರು ಅತ್ಯಂತ ಪ್ರೀತಿ ಹಾಗೂ ಭಕ್ತಿಯಿಂದ ಕೈಕೊಳ್ಳುತ್ತಿರುವ ವೃತ್ತಿಗಳಲ್ಲಿ ಆಕಳು ಸಾಕಾಣಿಕೆ ಪ್ರಮುಖವಾದದ್ದು. ಒಂದು ಕಾಲಕ್ಕೆ ಪ್ರತಿಯೊಂದು ಕಾಡುಗೊಲ್ಲರ ಕುಟುಂಬದಲ್ಲಿ ಕನಿಷ್ಟ ಹತ್ತರಿಂದ ಇಪ್ಪತ್ತೈದು ಆಕಳುಗಳನ್ನು ಸಾಕುತ್ತಿದ್ದರು. ಇಂದು ಆಕಳು ಸಾಕುವ ಪ್ರಮಾಣದಲ್ಲಿ ಬಹಳ ಇಳಿಕೆ ಕಂಡುಬಂದಿದೆ. ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಕನಿಷ್ಟ ಒಂದು ಅಥವಾ ಎರಡು ಆಕಳುಗಳನ್ನು ಸಾಕಿರುವ ಕುಟುಂಬಗಳು ಕಂಡುಬರುತ್ತಿವೆ. ಆಕಳುಗಳ ನಿರ್ವಹಣೆ ತೊಂದರೆಯಾಗಿರುವುದೆ ಕಾರಣವಾಗಿದೆ. ಮನೆಯ ಮುಂದೆ ಕೊಟ್ಟಿಗೆಯನ್ನು ನಿರ್ಮಿಸಿಕೊಂಡು ಅದರಲ್ಲಿ ಆಕಳನ್ನು ಸಾಕುತ್ತಿರುವ ಚಿತ್ರಣ ಎಲ್ಲ ಗೊಲ್ಲರಹಟ್ಟಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

[illegible]

[illegible]

[illegible]

ಕಾಡುಗೊಲ್ಲರ ಹೆಣ್ಣು ಮಕ್ಕಳು ಬೆಳಿಗ್ಗೆ ಎದ್ದು ಕೊಟ್ಟಿಗೆಗಳನ್ನು ಸ್ವಚ್ಛಗೊಳಿಸಿ ಆಕಳುಗಳಿಗೆ ಹಿಂಡಿ ಮೇವು ಹಾಕಿ ಹಾಲು ಕರೆಯುತ್ತಾರೆ. ಒಂದು ಆಕಳು ಒಂದು ಲೀಟರಿನಿಂದ ಎರಡು ಲೀಟರ ವರೆಗೆ ಹಾಲು ಕೊಡುತ್ತದೆ ಎಂದು ಹೇಳುತ್ತಾರೆ. ಕೆಲವರು ಒಂದು ಲೀಟರ ಹಾಲಿಗೆ ೧೪ರೂಗಳಂತೆ ಮಾರಿದರೆ ಕೆಲವರು ಮೊಸರು ಹಾಕಿ ಬೆಣ್ಣೆ ತೆಗೆದು ಮಾರುತ್ತಾರೆ. ಆಕಳು ಸಾಕಾಣಿಕೆಯಿಂದಲೇ ಮಾತ್ರ ಇವರ ಕುಟುಂಬ ನಿರ್ವಹಣೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಕೃಷಿ ಕೂಲಿಗೆ ಹೋಗುತ್ತಾರೆ. ಪ್ರತಿ ದಿನವೂ ಆಕಳನ್ನು ಮೇಯಿಸಲಿಕ್ಕೆ ಹೆಂಗಸರು ಹೋಗುವುದುಂಟು. ಕೃಷಿ ಕೂಲಿ ಕೆಲಸಕ್ಕೆ ಹೋಗಿ ಬರುವಾಗ ಆಕಳಿಗಾಗಿ ಒಂದು ಹೊರೆ ಹುಲ್ಲನ್ನು ಹೊತ್ತು ತರುವುದುಂಟು. ಆಕಳು ಸಗಣಿಯನ್ನು ಗುಂಡಿಯಲ್ಲಿ ಹಾಕುತ್ತಾರೆ ಮತ್ತು ಕೆಲವರು ಕುಳ್ಳು ಬಡಿದು ಕುಳ್ಳಿನಿಂದ ಬೆಂಕಿಮಾಡಿ ಅಡುಗೆ ಮಾಡುತ್ತಾರೆ. ಗೊಬ್ಬರವನ್ನು ಮಾರುತ್ತಾರೆ.

ನಾನು ಸಮೀಕ್ಷೆ ಮಾಡಿದ ೫ ಹಟ್ಟಿಗಳಲ್ಲಿ ಒಟ್ಟು ೧೯೨ ಆಕಳುಗಳು ಕಂಡುಬಂದಿದ್ದು ಚಳ್ಳಕೆರೆ ತಾಲೂಕಿನ ಹನುಮಂತನ ಗೊಲ್ಲರ ಹಟ್ಟಿಯಲ್ಲಿ ೨೭, ಜೋಗಿಹಟ್ಟಿಯಲ್ಲಿ ೨೧, ಯಲಗಟ್ಟಿ ಗೊಲ್ಲರ ಹಟ್ಟಿಯಲ್ಲಿ ೧೩, ಬೆಳಗೆರೆಯಲ್ಲಿ ೧೧೩, ಗುಂಡ್ಲೂರಿನಲ್ಲಿ ೧೪ ಆಕಳುಗಳನ್ನು ಸಾಕಿರುವುದು ಕಂಡುಬರುತ್ತದೆ. ಗೋಮೂತ್ರ ಮೈಲಿಗೆ, ಸೂತಕ ಕಳೆಯಲು ಪವಿತ್ರವಾದುದೆಂದು ತಿಳಿದುಕೊಂಡಿದ್ದಾರೆ.

೫.೧.೨.೨. ಕುರಿಸಾಕಾಣಿಕೆ

ಕಾಡುಗೊಲ್ಲರು ಇಂದು ಕುರಿಸಾಕಾಣಿಕೆಯನ್ನು ಪ್ರಧಾನ ವೃತ್ತಿಯಾಗಿಸಿಕೊಂಡಿರುವುದು ಕಂಡು ಬರುತ್ತಿದೆ. ಕುರಿಸಾಕಾಣಿಕೆ ಇತರೆ ಪಶುಪಾಲಕ ವೃತ್ತಿಗಿಂತ ಹೆಚ್ಚಿನ ಆದಾಯ ತಂದುಕೊಡುವುದಾಗಿದೆ ಎಂಬ ಅಭಿಪ್ರಾಯ ಕಾಡುಗೊಲ್ಲರದ್ದಾಗಿದೆ. ಹೀಗಾಗಿ ಈ ಪಶುಪಾಲನೆಗೆ ಹೆಚ್ಚಿನ ಮಹತ್ವ ಕೊಡುತ್ತಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಬ್ಬರ ಮನೆಯಲ್ಲೂ ಕುರಿಗಳಿರುವುದನ್ನು ಕಾಣುತ್ತೇವೆ. ಮಧ್ಯಮ ವರ್ಗದ ಮತ್ತು ಶ್ರೀಮಂತರಾದ ಕಾಡುಗೊಲ್ಲರು ಒಂದುನೂರರಿಂದ ಸಾವಿರವರೆಗೆ ಕುರಿ ಸಾಕಿರುತ್ತಾರೆ. ಬಡತನದಲ್ಲಿರುವವರು ೭-೮ ಕುರಿಗಳನ್ನು ಹೊಂದಿದ್ದಾರೆ. ಕುರಿಗಳ ಸಂಖ್ಯೆಯ ಆಧಾರದ ಮೇಲೆ ಇವರ ಶ್ರೀಮಂತಿಕೆಯನ್ನು ಅಳೆಯುತ್ತಾರೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಕಾಡುಗೊಲ್ಲರ ಪ್ರಧಾನ ವೃತ್ತಿ ಇಂದು ಕುರಿಸಾಕಾಣಿಕೆಯಾಗಿದೆ.

ಕಾಡುಗೊಲ್ಲರು ಮಳೆಗಾಲದಲ್ಲಿ ತಮ್ಮ ಹಟ್ಟಿಯಲ್ಲಿಯೇ ಇದ್ದುಕೊಂಡು ಕುರಿಗಳ ಪಾಲನೆ ಮಾಡುತ್ತಾರೆ. ಮಳೆಗಾಲ ಮುಗಿದ ಮೇಲೆ ಆ ಪ್ರದೇಶದಲ್ಲಿ ಹುಲ್ಲಿನ ಅಭಾವ ಕಾಣಿಸಿಕೊಳ್ಳಲು ಪ್ರಾರಂಭಿಸಿದರೆ ತಮ್ಮ ಕುರಿಗಳನ್ನು ಹೊಡೆದುಕೊಂಡು ಬೇರೆ ಬೇರೆ ಪ್ರದೇಶಗಳಿಗೆ ಹೋಗುವರು. ಹೊಲ, ಗದ್ದೆ, ಬಯಲು ಪ್ರದೇಶಗಳಲ್ಲಿ ಟೆಂಟು ಹಾಕಿಕೊಂಡು ಕುರಿ ಮೇಯಿಸುತ್ತಾರೆ. ಕೆಲ ರೈತರು ತಮ್ಮ ಭೂಮಿ ಫಲವತ್ತಾಗಲೆಂದು ಕುರಿ ಕೆಡುವಿಸಿಕೊಳ್ಳುವುದುಂಟು. ರೈತರು ಕುರಿಕೆಡವಿಸಿಕೊಂಡರೆ ಒಂದು ದಿನಕ್ಕೆ ೩೦೦ರಿಂದ ೮೦೦ರವರೆಗೆ ಹಣ ಕೊಡುವುದುಂಟು. ಕೆಲವರು ಧಾನ್ಯಗಳನ್ನು ನೀಡುವುದುಂಟು. ಕುರಿಸಾಕಾಣಿಕೆಗಾಗಿ ಅಲೆದಾಡುವಾಗ ಇವರು ತಮ್ಮ ಎಲ್ಲ ವಸ್ತುಗಳನ್ನು ತೆಗೆದುಕೊಂಡು ಹೋಗುವರು. ಕೆಲವರು ಕುರಿಗಳ ಜೊತೆಗೆ ಆಕಳುಗಳನ್ನು ತೆಗೆದುಕೊಂಡು ಹೋಗುವುದುಂಟು.

[illegible]

ಕುರಿಗಳನ್ನು ರಾತ್ರಿ ವೇಳೆಯಲ್ಲಿ ತೋಳ, ಚಿರತೆ, ನಾಯಿಗಳಿಂದ ಕಾಪಾಡುವ ಸಲುವಾಗಿ ಸುತ್ತಲೂ ತಾತ್ಕಾಲಿಕ ಬೇಲಿಯನ್ನು ನಿರ್ಮಿಸಿಕೊಂಡು ಅದರೊಳಗೆ ಕುರಿಗಳನ್ನು ಕೂಡಿ ಹಾಕುತ್ತಾರೆ. ಕುರಿಗಳನ್ನು ಕಾಯಲು ನಾಯಿಗಳನ್ನು ಸಾಕಿರುತ್ತಾರೆ. ರಾತ್ರಿ ಎಚ್ಚರದಿಂದಿದ್ದು ಕುರಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯುವರು. ಕೆಲವರು ಜಾಲಿ, ಕಳ್ಳಿ, ಕಾರೆ ಮುಳ್ಳಗಳಿಂದ ರೊಪ್ಪಗಳನ್ನು ಸಿದ್ಧಪಡಿಸಿ ಅದರ ಮಧ್ಯೆ ಕುರಿಗಳನ್ನು ಸಾಕುತ್ತಾರೆ. ಒಬ್ಬಿಬ್ಬರು ಕುರಿಗಳ ಮಧ್ಯ ಮಲಿಗಿದರೆ ಒಂದಿಬ್ಬರು ಹೊರಗೆ ಕುರಿ ಕಾಯುತ್ತಾರೆ. ಕಳ್ಳರು ಇತರೆ ಪ್ರಾಣಿಗಳು ಕುರಿಗಳ ಮೇಲೆ ಆಕ್ರಮಣ ಮಾಡಲು ಬಂದರೆ ನಾಯಿಗಳು ಬೊಗಳುತ್ತವೆ. ಆಗ ತಕ್ಷಣವೇ ಎದ್ದು ಕೂಗುಹಾಕುತ್ತಾ ಅವುಗಳನ್ನು ಓಡಿಸುತ್ತಾರೆ. ತಮ್ಮ ಹಿಂಡಿನಲ್ಲಿ ಎಷ್ಟು ಕುರಿಗಳಿವೆ ಯಾವ ಕುರಿ ಕಾಣುತ್ತಿಲ್ಲ ಎಂಬುದರ ಸೂಕ್ಷ್ಮ ಅರಿವು ಇವರಿಗಿರುತ್ತದೆ.

ಅನೇಕ ಕಾಡುಗೊಲ್ಲರು ಆಧುನಿಕ ತಳಿಯ ಕುರಿಗಳನ್ನು ಸಾಕುತ್ತಿದ್ದಾರೆ. ಈ ಕುರಿಗಳು ಬಹಳ ಬೇಗ ಬೆಳೆದು ಮಾಂಸಕ್ಕಾಗಿ ಬಳಸಲು ಸಿದ್ಧವಾಗುತ್ತವೆ. ಇದರಿಂದ ಲಾಭ ಹೆಚ್ಚಾಗುತ್ತದೆ ಎಂಬ ಕಾರಣದಿಂದ ಈ ತಳಿಗಳನ್ನು ಸಾಕುತ್ತಿದ್ದಾರೆ. ಕುರಿ ಉಣ್ಣೆಗೂ ಸಾಕಷ್ಟು ಬೇಡಿಕೆ ಇರುವುದರಿಂದ ಆಕಳು, ಎಮ್ಮೆ ಸಾಕಾಣಿಕೆಗಿಂತ ಈ ವೃತ್ತಿ ಲಾಭದಾಯಕವಾಗಿದೆ ಎಂದು ಕಾಡುಗೊಲ್ಲರು ಅಭಿಪ್ರಾಯ ಪಡುತ್ತಾರೆ. ಬಡತನ ರೇಖೆಗಿಂತ ಕೆಳಗಿರುವ ಕಾಡುಗೊಲ್ಲರು ಸಹ ಕುರಿ ಸಾಕಾಣಿಗೆ ಒಲವು ತೋರಿಸುತ್ತಿದ್ದಾರೆ. ಆದರೆ ಅವರಲ್ಲಿ ಬಂಡವಾಳವಿಲ್ಲದೇ ಕೈಚೆಲ್ಲಿಕುಳಿತಿದ್ದಾರೆ.

ನಾನು ಕ್ಷೇತ್ರಕಾರ್ಯ ಕೈಕೊಂಡ ಹಟ್ಟಿಗಳಲ್ಲಿ ಒಟ್ಟು ೩೦೯೩ ಕುರಿಗಳನ್ನು ಸಾಕಿರುವ ಬಗ್ಗೆ ಮಾಹಿತಿ ದೊರೆಯುತ್ತಿದೆ. ಹನುಮಂತನ ಗೊಲ್ಲರ ಹಟ್ಟಿಯಲ್ಲಿ ೬೫೦, ಜೋಗಿಹಟ್ಟಿಯಲ್ಲಿ ೧೨೬, ಯಲಗಟ್ಟಿಯಲ್ಲಿ ೯೭೭, ಬೆಂಜಗೆರೆಗೊಲ್ಲರ ಹಟ್ಟಿ ೧೧೮೨, ಗುಂಡೂರಿನಲ್ಲಿ ೧೫೮ ಕುರಿಗಳನ್ನು ಸಾಕಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಬೆಳಗೆರೆ ಗೊಲ್ಲರ ಹಟ್ಟಿಯಲ್ಲಿ ಕುರಿಸಾಕಾಣಿಕೆಯ ವೃತ್ತಿ ಪ್ರಗತಿಯಲ್ಲಿದೆ. ಈ ವೃತ್ತಿಯನ್ನು ಕೈಕೊಂಡಿರುವವರು ಆರ್ಥಿಕವಾಗಿ ಹಂತ ಹಂತವಾಗಿ ಸಬಲರಾಗುತ್ತಿರುವ ಚಿತ್ರಣ ಕಂಡುಬರುತ್ತಿದೆ. ಆಧುನಿಕತೆ ಮತ್ತು ನಗರೀಕರಣದ ಪ್ರಭಾವಕ್ಕೊಳಗಾದ ಕಾಡುಗೊಲ್ಲರ ವಿದ್ಯಾವಂತ ಯುವಕರು ಮಾತ್ರ ಈ ವೃತ್ತಿಯಲ್ಲಿ ಕೈ ಜೋಡಿಸುತ್ತಿಲ್ಲ. ಇದೊಂದು ಪ್ರತಿಷ್ಠಿತವಾದ ವೃತ್ತಿಯಾಗಿಲ್ಲ ಎಂಬುದು ಅವರ ಅನಿಸಿಕೆಯಾಗಿದೆ.

೫.೧.೨.೩. ಎತ್ತುಗಳ ಸಾಕಾಣಿಕೆ

ಕೃಷಿಯನ್ನೆ ಮೂಲ ವೃತ್ತಿಯನ್ನಾಗಿಸಿಕೊಂಡ ಕಾಡುಗೊಲ್ಲರು ಎತ್ತುಗಳನ್ನು ಹೊಂದಿರಲೇಬೇಕಾಗುತ್ತದೆ. ಕೃಷಿಕ ವೃತ್ತಿಯನ್ನು ಮಾಡುತ್ತಿರುವ ಮಧ್ಯಮ ವರ್ಗದ ಕಾಡುಗೊಲ್ಲರಿಗೆ ಆಧುನಿಕ ಉಪಕರಣಗಳನ್ನು ಬಳಸಿಕೊಂಡು ಕೃಷಿಕ ವೃತ್ತಿ ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಅವರು ಎತ್ತುಗಳ ಮೂಲಕ ಕೃಷಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ಈ ವೃತ್ತಿಗೆ ಎತ್ತುಗಳೆ ಅತ್ಯಂತ ಸೂಕ್ತವಾದವುಗಳು ಎಂಬ ನಿರ್ಧಾರ ಅವರದು.

[illegible]

[illegible]

[illegible]

[illegible]

[illegible]

[illegible]

[illegible]

[illegible]

ಎತ್ತುಗಳಿಂದ ಭೂಮಿಯನ್ನು ಹದಗೊಳಿಸುವ, ಉತ್ತುವ, ಬಿತ್ತುವ ಮತ್ತು ರಾಶಿ ಮಾಡುವ ಕಾರ್ಯಗಳನ್ನು ಮಾಡುತ್ತಿದ್ದಾರೆ. ಟ್ರ್ಯಾಕ್ಟರಿನಿಂದ ಸಾಗುವಳಿ ಮಾಡುವಷ್ಟು ಭೂಮಿಯನ್ನೂ ಸಹ ಇವರು ಹೊಂದಿರದೇ ಇರುವುದು, ಹಾಗೂ ಹೆಚ್ಚಾಗಿ ಒಣ ಭೂಮಿಯನ್ನೇ ಹೊಂದಿರುವುದರಿಂದ ಇವರು ಹೆಚ್ಚಿನ ವ್ಯಯ ಮಾಡದೆ ಎತ್ತುಗಳ ಮೇಲೆ ನೇಗಿಲ ಹೂಡಿ ಕೃಷಿ ಕಾರ್ಯಗಳನ್ನು ನೆರವೇರಿಸುತ್ತಾರೆ. ಬೆರಳೆಣಿಕೆಯಷ್ಟು ಹೆಚ್ಚು ಭೂಮಿ ಹೊಂದಿದ ಕಾಡುಗೊಲ್ಲರು ಬಾಡಿಗೆ ಟ್ರ್ಯಾಕ್ಟರ್ ಬಳಸುತ್ತಿದ್ದಾರೆ. ಎತ್ತುಗಳು ಕೃಷಿಯ ವೃತ್ತಿಯ ಬೆನ್ನೆಲಬು ಎಂದು ತಿಳಿದುಕೊಂಡಿರುವ ಕಾಡುಗೊಲ್ಲರು ಅವುಗಳನ್ನು ತಮ್ಮ ಮಕ್ಕಳಿಗಿಂತ ಹೆಚ್ಚು ಹೆಚ್ಚು ಆರೈಕೆ ಮಾಡುತ್ತಿರುವುದು ಕಂಡುಬರುತ್ತದೆ.

ಕೃಷಿಕ ವೃತ್ತಿಯಲ್ಲಿ ಆದಾಯದ ಮೂಲ ಕೇಂದ್ರವಾದ ಎತ್ತುಗಳನ್ನು ಕಾಡುಗೊಲ್ಲರು ತಮ್ಮ ಮನೆಯ ಮುಂದೆ ದಡ್ಡಿ ನಿರ್ಮಿಸಿಕೊಂಡು ಅಲ್ಲಿ ಅವುಗಳನ್ನು ಸಾಕುತ್ತಾರೆ. ಬೆಳಿಗ್ಗೆ ಎದ್ದು ಎತ್ತುಗಳು ಹಾಕಿದ ಸಗಣಿಯನ್ನು ಸ್ವಚ್ಛಗೊಳಿಸಿ ಅವುಗಳಿಗೆ ಹುಲ್ಲು ಹಿಂಡಿ ಹಾಕುತ್ತಾರೆ. ಮುಂಗಾರು ಮಳೆ ಪ್ರಾರಂಭವಾದರೆ ಎತ್ತುಗಳಿಗೆ ಬಿಡುವಿಲ್ಲದೇ ಕೆಲಸ. ಬೆಳಿಗ್ಗೆ ೬ರಿಂದ ಸಾಯಂಕಾಲ ೬ ಗಂಟೆಯ ವರೆಗೆ ಭೂಮಿಯಲ್ಲಿ ನಿರಂತರವಾಗಿ ದುಡಿಯುತ್ತವೆ. ಕೆಲಸದ ವೇಳೆಯಲ್ಲಿ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ ಹೀಗೆ ಮೂರ್‍ನಾಲ್ಕು ಸಲ ಎತ್ತುಗಳಿಗೆ ಮೇವು ಹಾಕುತ್ತಾರೆ. ಕೃಷಿ ಚಟುವಟಿಕೆಗಳು ಹೆಚ್ಚಿರುವ ಸಂದರ್ಭದಲ್ಲಿ ಎತ್ತುಗಳಿಗೆ ಪೌಷ್ಠಿಕವಾದ ಆಹಾರವನ್ನು ಕೊಡುತ್ತಾರೆ. ಯಾಕೆಂದರೆ ಎತ್ತುಗಳು ಆರೋಗ್ಯದಿಂದಿದ್ದು, ಕೃಷಿ ಕೆಲಸದಲ್ಲಿ ಯಾವ ತೊಂದರೆಗಳಿಲ್ಲದೆ ಸಹಕರಿಸಿದರೆ ಮಾತ್ರ ಆದಾಯ. ಈ ಕಾರಣಕ್ಕಾಗಿ ಎತ್ತುಗಳನ್ನು ಅತ್ಯಂತ ಜತನದಿಂದ ಕಾಪಾಡುತ್ತಾರೆ.

ಕೃಷಿ ಕೆಲಸವನ್ನೆಲ್ಲ ಸಾಮಾನ್ಯವಾಗಿ ಎತ್ತುಗಳೆ ಪೂರೈಸುತ್ತವೆ. ಕೊಟ್ಟಿಗೆ ಗೊಬ್ಬರವನ್ನು ತೆಗೆದುಕೊಂಡು ಹೋಗುವುದರಿಂದ ಹಿಡಿದು ರಾಶಿಯನ್ನು ಮನೆಗೆ ತರುವ ಕೆಲಸವನ್ನು ಎತ್ತುಗಳೆ ನಿರ್ವಹಿಸುತ್ತವೆ. ಕೆಲವೊಂದು ಸಾರಿ ತಮ್ಮ ಸರಕುಗಳನ್ನು ಸಾಗಿಸಲು ಚಕ್ಕಡಿ ಹೂಡಿಕೊಂಡು ಅದರಲ್ಲಿ ಧಾನ್ಯಗಳನ್ನು ತುಂಬಿಕೊಂಡು ಮಾರಾಟಕ್ಕೆ ಹೋಗುವುದುಂಟು. ಜಾತ್ರೆ, ಮದುವೆ, ಹಬ್ಬಗಳಲ್ಲಿ ಬಂಡಿ ಹೂಡಿಕೊಂಡು ಬೇರೆ ಬೇರೆ ಪ್ರದೇಶಗಳಿಗೆ ಹೋಗುವುದುಂಟು. ಹೀಗೆ ಹತ್ತುಹಲವಾರು ಕ್ಷೇತ್ರಗಳಲ್ಲಿ ರೈತರಿಗೆ ನೆರವಾಗುವ ಎತ್ತುಗಳನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಾರೆ. ಅನೇಕ ಸಂದರ್ಭಗಳಲ್ಲಿ ಎತ್ತುಗಳನ್ನು ಹೊಂದದೆ ಕೃಷಿ ಮಾಡುತ್ತಿರುವವರ ಭೂಮಿಯಲ್ಲಿ ದಿನಗೂಲಿಯಂತೆ ಈ ಎತ್ತುಗಳು ದುಡಿಯುವುದುಂಟು.

ನಾನು ಕ್ಷೇತ್ರಕಾರ್ಯ ಮಾಡಿದ ಪ್ರದೇಶಗಳಾದ ಹನುಮಂತಹಳ್ಳಿ ಗೊಲ್ಲರಹಟ್ಟಿಯಲ್ಲಿ ೩೬ ಎತ್ತುಗಳು, ಜೋಗಿಹಟ್ಟಿಯಲ್ಲಿ ೬೦, ಯಲಗಟ್ಟಿ ಗೊಲ್ಲರಹಟ್ಟಿಯಲ್ಲಿ ೨೧೫, ಬೆಂಜಗೆರಿ ಗೊಲ್ಲರಹಟ್ಟಿಯಲ್ಲಿ ೬೮, ಗುಂಡ್ಲೂರಿನಲ್ಲಿ ೩೭ ಎತ್ತುಗಳನ್ನು ಸಾಕಿರುವುದು ಕಂಡುಬರುತ್ತದೆ. ಒಟ್ಟು ಐದು ಹಟ್ಟಿಗಳಲ್ಲಿ ೪೧೬ ಎತ್ತುಗಳಿದ್ದು ಇವೆಲ್ಲ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿವೆ. ಈ ಎತ್ತುಗಳ ಸಾಕಾಣಿಕೆಗಾಗಿ ಕೆಲವರು

[illegible]

[illegible]

[illegible]

[illegible]

ವಾರಕ್ಕೆ ನೂರು ರೂಗಳಿಂದ ನೂರೈವತ್ತು ರೂಗಳನ್ನು ಖರ್ಚುಮಾಡುತ್ತಾರೆ. ಪ್ರತಿ ಸೋಮವಾರ ಈ ಎತ್ತುಗಳಿಗೆ ಕೃಷಿ ಕೆಲಸದಿಂದ ರಜೆ ಇರುತ್ತದೆ.

೫.೧.೨.೪. ಎಮ್ಮೆ ಸಾಕಾಣಿಕೆ

ಹೆಚ್ಚಿನ ಪ್ರಮಾಣದಲ್ಲಿ ಹಾಲನ್ನು ಎಮ್ಮೆಗಳು ಕೊಡುತ್ತವೆ ಎಂಬ ಕಾರಣದಿಂದ ಎಮ್ಮೆ ಸಾಕಾಣಿಕೆಯನ್ನು ಕಾಡುಗೊಲ್ಲರು ಅನುಸರಿಸುತ್ತಿದ್ದಾರೆ. ಆಕಳು ಸಾಕಾಣಿಕೆಗಿಂತ ಎಮ್ಮೆ ಸಾಕಾಣಿಕೆ ಹೆಚ್ಚಿನ ಲಾಭ ತಂದುಕೊಡುತ್ತಿದೆ ಎಂಬ ನಿಲವು ಕಾಡುಗೊಲ್ಲರದ್ದಾಗಿದೆ. ಎಮ್ಮೆ ಸಾಕಾಣಿಕೆಯೂ ಮೊದಲಿಗಿಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಎಮ್ಮೆಗಳು ಪ್ರತಿದಿನಕ್ಕೆ ೫ರಿಂದ ೮ ಲೀಟರ್ ವರೆಗೆ ಹಾಲು ಕೊಡುತ್ತವೆ. ೧೪ ರೂ.ಗಳಂತೆ ಹಾಲು ಮಾರಾಟ ಮಾಡಿದರೆ ಕನಿಷ್ಟ ದಿನಕ್ಕೆ ೭೦ ರೂ.ಗಳು ಗರಿಷ್ಟ ೧೧೨ ರೂ.ಗಳು ಆದಾಯ ಬರುತ್ತದೆ. ಎಮ್ಮೆಗೆ ದಿನಕ್ಕೆ ಹತ್ತರಿಂದ ಹದಿನೈದು ರೂ.ಗಳವರೆಗೆ ಖರ್ಚು ಮಾಡುತ್ತಾರೆ. ಕೆಲವರು ಕೊಟ್ಟಿಗೆ ಗೊಬ್ಬರ ಮಾರಾಟ ಮಾಡುತ್ತಾರೆ.

ನಾನು ಕ್ಷೇತ್ರಕಾರ್ಯ ಮಾಡಿದ ಪ್ರದೇಶಗಳಲ್ಲಿ ಆಕಳು ಸಾಕಾಣಿಕೆಗಿಂತ ಎಮ್ಮೆ ಸಾಕಾಣಿಕೆಗೆ ಹೆಚ್ಚಿನ ಆಸಕ್ತಿ ವಹಿಸಿರುವುದು ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ ಒಟ್ಟು ಆಕಳುಗಳ ಸಂಖ್ಯೆ ೧೯೨ ಇದ್ದರೆ ಎಮ್ಮೆಗಳ ಸಂಖ್ಯೆ ಒಟ್ಟು ೨೭೦ ಇರುವುದು ಕಂಡುಬರುತ್ತದೆ. ಈ ಎಮ್ಮೆಗಳ ತಳಿಯೂ ಸಹ ಪರಂಪರಾನುಗತವಾಗಿದ್ದು. ಆಧುನಿಕ ಎಮ್ಮೆ ತಳಿಗಳನ್ನು ಇವರು ಹೊಂದದೇ ಇರುವುದು ಕಂಡುಬರುತ್ತದೆ. ಚಳ್ಳಕೆರೆ ತಾಲೂಕಿನ ಹನುಮಂತನ ಗೊಲ್ಲರಹಟ್ಟಿಯಲ್ಲಿ ೧೨ ಎಮ್ಮೆಗಳು, ಗುಂಡ್ಲೂರಿನಲ್ಲಿ ೧೮, ಜೋಗಿಹಟ್ಟಿಯಲ್ಲಿ ೫೪, ಯಲಗಟ್ಟೆ ಗೊಲ್ಲರಹಟ್ಟಿಯಲ್ಲಿ ೧೨೫ ಹಾಗೂ ಬೆಳಗೆರೆಯಲ್ಲಿ ೬೧ ಎಮ್ಮೆಗಳನ್ನು ಸಾಕಿರುವ ಬಗ್ಗೆ ಮಾಹಿತಿ ದೊರೆಯುತ್ತದೆ.

೫.೧.೨.೫. ಮೇಕೆ ಸಾಕಾಣಿಕೆ

ಮೇಕೆ ಸಾಕಾಣಿಕೆಯೂ ಸಹ ಲಾಭದಾಯಕವಾದದ್ದು ಎಂದು ಕಾಡುಗೊಲ್ಲರ ಅನಿಸಿಕೆ. ಆದರೆ ಕುರಿ ಸಾಕಾಣಿಕೆಯಷ್ಟು ಮೇಕೆ ಸಾಕಾಣಿಕೆ ಅಷ್ಟೊಂದು ಒಲವು ಇವರಲ್ಲಿ ಇಲ್ಲ ಎಂದೇ ಹೇಳಬೇಕಾಗುತ್ತದೆ. ಕೆಲ ಕಾಡುಗೊಲ್ಲರು ಮೇಕೆಗಳನ್ನಷ್ಟೆ ಸಾಕಿದ್ದರೆ ಮತ್ತೆ ಕೆಲವರು ಕುರಿಗಳ ಹಿಂಡಿನಲ್ಲಿಯೇ ಮೇಕೆಗಳನ್ನು ಸಾಕಿರುವುದು ಕಂಡುಬರುತ್ತದೆ. ಮೇಕೆಯ ಹಾಲು ಅತ್ಯಂತ ಶ್ರೇಷ್ಠವಾದದ್ದು. ಈ ಹಾಲಿನಲ್ಲಿ ಅನೇಕ ರೋಗಗಳನ್ನು ಗುಣಪಡಿಸುವ ಶಕ್ತಿ ಇದೆ ಎಂದು ಕಾಡುಗೊಲ್ಲರು ನಂಬಿದ್ದಾರೆ. ಮೇಕೆ ಹಾಲನ್ನು ನಿತ್ಯ ಬಳಸುತ್ತಿರುವುದನ್ನು ಕಾಣುತ್ತೇವೆ. ಮೇಕೆಗಳ ಸಾಕಾಣಿಕೆಗೆ ಹೆಚ್ಚಿನ ಖರ್ಚು ವೆಚ್ಚಗಳಿರುವುದಿಲ್ಲ. ಈ ಮೇಕೆಗಳನ್ನು ಮಾಂಸಕ್ಕಾಗಿ ಮಾರಾಟ ಮಾಡುತ್ತಾರೆ. ಕೊಬ್ಬಿದ ಮೇಕೆ ೨೫೦೦ ರಿಂದಿ ೩೦೦೦ ರೂಗಳವರೆಗೆ ಮಾರಾಟವಾಗುತ್ತದೆ ಹೀಗಾಗಿ ಮೇಕೆ ಸಾಕಾಣಿಕೆಯನ್ನು ಅಲ್ಲಲ್ಲಿ ನೋಡುತ್ತೇವೆ. ಗೊಲ್ಲರ ಹಟ್ಟಿಯಲ್ಲಿ ೧೦೮೩ ಮೇಕೆಗಳಿದ್ದರೆ ಜೋಗಿಹಟ್ಟಿಯಲ್ಲಿ ೧೮೨, ಹನುಮಂತನಹಳ್ಳಿಯಲ್ಲಿ ೧೩೩, ಯಲಗಟ್ಟೆ ಗೊಲ್ಲರಹಟ್ಟಿಯಲ್ಲಿ ೬೧೧, ಬೆಳಗೆರೆಯಲ್ಲಿ ೯೭ ಹಾಗೂ ಗುಂಡ್ಲೂರಿನಲ್ಲಿ ೬೦ ಮೇಕೆಗಳನ್ನು ಸಾಕಿರುವ ಬಗ್ಗೆ ಮಾಹಿತಿ ದೊರೆಯುತ್ತದೆ.

[illegible]

[illegible]

[illegible]

[illegible]

೫.೧.೩.೬. ಕೋಳಿ ಸಾಕಾಣಿಕೆ

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು ಕೋಳಿ, ಕೋಳಿ ಮೊಟ್ಟೆ ತಿನ್ನುವುದನ್ನು ಹಾಗೂ ಅವುಗಳ ಸಾಕಾಣಿಕೆಯನ್ನು ವಿರೋಧಿಸಿದವರು. ಸಾಮಾನ್ಯವಾಗಿ ಕಾಡುಗೊಲ್ಲರು ಕೋಳಿಗಳನ್ನು ಸಾಕಾವುದಿಲ್ಲ. ಆದರೆ ನಾನು ಕ್ಷೇತ್ರಕಾರ್ಯ ಮಾಡಿದ ಚಳ್ಳಕೆರೆ ಹನುಮಂತನ ಗೊಲ್ಲರಹಟ್ಟಿ, ಗುಂಡ್ಲೂರು ಗೊಲ್ಲರಹಟ್ಟಿ ಹಾಗೂ ಯಲಗಟ್ಟೆ ಗೊಲ್ಲರಹಟ್ಟಿಯಲ್ಲಿ ಕೋಳಿ ಸಾಕಾಣಿಕೆ ಮಾಡಿರುವುದು ಕಂಡುಬಂದಿದೆ. ಆಧುನೀಕರಣ ನಗರೀಕರಣದ ಪ್ರಭಾವದಿಂದ ಈ ಪ್ರದೇಶದ ಕಾಡುಗೊಲ್ಲರು ಕೋಳಿ ಸಾಕಾಣಿಕೆಯೂ ಲಾಭದಾಯಕ ಎಂಬುದನ್ನು ತಿಳಿದು ಈ ವೃತ್ತಿಯಲ್ಲಿ ಬೆರಳೆಣಿಕೆ ಕುಟುಂಬಗಳು ಕೈಜೋಡಿಸಿರುವುದು, ಕಂಡುಬರುತ್ತದೆ. ಮಾಂಸಕ್ಕಾಗಿ ಈ ಕೋಳಿಗಳನ್ನು ೬೫ ರೂಗಳಿಂದ ೮೦ ರೂ.ಗಳವರೆಗೆ ಮಾರಾಟ ಮಾಡುತ್ತಾರೆ. ಹನುಮಂತನ ಗೊಲ್ಲರಹಟ್ಟಿಯಲ್ಲಿ ೯, ಗುಂಡ್ಲೂರಿನಲ್ಲಿ ೫೦ ಹಾಗೂ ಯಲಗಟ್ಟೆ ಗೊಲ್ಲರಹಟ್ಟಿಯಲ್ಲಿ ೫೮, ಕೋಳಿಗಳನ್ನು ಸಾಕಿರುವುದು ಕಂಡುಬರುತ್ತದೆ.

ಪ್ರಸ್ತುತ ಕ್ಷೇತ್ರಕಾರ್ಯದ ವ್ಯಾಪ್ತಿಯ ಹಳ್ಳಿಗಳಲ್ಲಿ ಕಾಡುಗೊಲ್ಲರು ಹೊಂದಿರುವ ಪಶುಸಂಪತ್ತನ್ನು ಈ ಕೆಳಗಿನ ಕೋಷ್ಟಕದಲ್ಲಿ ನೋಡಬಹುದು.

ಕೋಷ್ಟಕ ೫.೧೧

ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲರ ಪಶುಪಾಲನೆಯ ಪ್ರಮಾಣ

ಸಂ.	ತಾಲೂಕು	ನೆಲೆಗಳು	ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ
೧	ಚಳ್ಳಕೆರೆ	ಹನುಮಂತನಹಳ್ಳಿ	೩೬	೨೭	೧೨	೬೫೦	೧೩೩	೯
		ಜೋಗಿಹಟ್ಟಿ	೬೦	೨೧	೫೪	೧೨೬	೧೮೨	
		ಯಲಗಟ್ಟೆ ಗೊಲ್ಲರಹಟ್ಟಿ	೨೧೫	೧೧೩	೧೨೫	೯೭೭	೬೧೧	೫೮
		ಬೆಳೆಗೆರೆ ಗೊಲ್ಲರಹಟ್ಟಿ	೬೮	೧೭	೬೧	೧೧೮೨	೯೭	
೨	ಮೊಳಕಾಲ್ಮೂರು	ಗುಂಡ್ಲೂರು	೩೭	೧೪	೧೮	೧೫೮	೬೦	೫೦
		ಒಟ್ಟು	೪೧೬	೧೯೨	೨೭೦	೩೦೩೯	೧೦೮೩	೧೧೭

ಮೇಲ್ಕಾಣಿಸಿದ ಕೋಷ್ಟಕದಲ್ಲಿ ಕಾಡುಗೊಲ್ಲರು ಹೊಂದಿರುವ ಪಶುಸಂಪತ್ತಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುರಿ ಮತ್ತು ಮೇಕೆಗಳನ್ನು ಸಾಕುತ್ತಿದ್ದು ಕ್ರಮವಾಗಿ ಶೇ. ೬೦ ಮತ್ತು ಶೇ. ೨೧ರಷ್ಟು ಪ್ರಮಾಣದಲ್ಲಿ ಅವುಗಳನ್ನು ಸಾಕುತ್ತಿದ್ದಾರೆ. ಎತ್ತುಗಳನ್ನು ಶೇ. ೮ರಷ್ಟು, ಎಮ್ಮೆಗಳನ್ನು ಶೇ. ೫ರಷ್ಟು ಮತ್ತು ಆಕಳುಗಳನ್ನು ಶೇ. ೪ರಷ್ಟು ಸಾಕುತ್ತಿದ್ದಾರೆ. (ಕೊನೆಯದಾಗಿ ಮನೆಯ ಮುಂದೆಯೇ ಕೋಳಿಗಳನ್ನು ಶೇ. ೨ರಷ್ಟು ಹಾಗೂ) ಬೇಟೆನಾಯಿಗಳನ್ನು ಸಾಕುತ್ತಿರುವುದು ಕಂಡುಬರುತ್ತದೆ.

ಆಕಳು ಎಮ್ಮೆಗಿಂತ ಕುರಿ ಹಾಗೂ ಮೆಕೆಗಳ ಸಾಕಾಣಿಕೆಯಿಂದ ಅಧಿಕ ಲಾಭ ಬರುತ್ತದೆ ಎಂಬ ಉದ್ದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕುರಿ ಮತ್ತು ಮೇಕೆಗಳನ್ನು ಸಾಕುತ್ತಿದ್ದು ಇದೂ ಕೂಡ ಅವರ ಸಾಂಪ್ರದಾಯಿಕ ವೃತ್ತಿಗಳಲ್ಲೊಂದಾಗಿದೆ. ಇದರಿಂದಲೇ ಅವರು ಶ್ರೀಮಂತಿಕೆಯನ್ನು ಪ್ರತಿನಿಧಿಸುತ್ತಾರೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಅರಣ್ಯನಾಶ ಅರಣ್ಯ ಸಂರಕ್ಷಣಾ ಕಾಯಿದೆ ಮತ್ತು ಹುಲ್ಲುಗಾವಲು ಕಡಿಮೆಯಾದಂತೆ ತಮ್ಮ ಸಾಂಪ್ರದಾಯಿಕ ವೃತ್ತಿಯಾದ ಪಶುಪಾಲನೆಯಿಂದ ಸ್ಥಿತ್ಯಂತರಗೊಳ್ಳುತ್ತಿದ್ದು, ಅನಿವಾರ್ಯವಾಗಿ ಇತರೆ ವೃತ್ತಿಗಳನ್ನು ಅವಲಂಬಿಸಬೇಕಾಗಿದೆ.

೫.೧.೩ ಪಶುಪಾಲನೆಯ ಸಾಧಕ ಬಾಧಕಗಳು

೧. ಆಕಳು, ಎಮ್ಮೆ ಹಾಗೂ ಮೇಕೆಗಳಿಂದ ಹಾಲು ಸಂಗ್ರಹಿಸಿ ಮಾರಾಟ ಮಾಡಬಹುದು. ಹಾಲಿನಿಂದ ಬೆಣ್ಣೆ, ತುಪ್ಪ, ತಯಾರಿಸಿ ಹಾಗೂ ಮಜ್ಜಿಗೆ, ಮೊಸರನ್ನು ಮಾರಾಟ ಮಾಡಬಹುದು. ಹಾಲು ಹಾಗೂ ಹಾಲಿನ ಉತ್ಪನ್ನಗಳು ಮಾನವನ ದೇಹಕ್ಕೆ ಅತ್ಯುತ್ತಮವಾದ ಆಹಾರವಾಗಿದೆ.

೨. ಕೃಷಿಯಿಂದ ದೊರಕುವ ಹುಲ್ಲು, ಹಿಂಡಿ, ಪಶುಗಳಿಗೆ ಉತ್ತಮವಾದ ಆಹಾರವಾಗಿದೆ. ಹಸಿರು ಹುಲ್ಲು, ಒಣಹುಲ್ಲು, ತೊಗರೆ ಸೊಪ್ಪು, ಅವರೆ ಸೊಪ್ಪು, ಮುಂತಾದವು ಪಶುಗಳಿಗೆ ಪೌಷ್ಠಿಕತೆಯನ್ನು ನೀಡಿ ಹಾಲಿನ ಉತ್ಪಾದನೆ ಹೆಚ್ಚಾಗುವಂತೆ ಮಾಡುತ್ತವೆ. ಅಲ್ಲದೆ ಪ್ರಾಣಿಗಳು ದಷ್ಟಪುಷ್ಟವಾಗಿ ಬೆಳೆಯಲು ಕೂಡ ಪೂರಕವಾಗಿವೆ.

೩. ಈ ಪಶುಗಳಿಂದ ದೊರೆಯುವ ಸಗಣಿ ಮತ್ತು ಗಂಜಲಿನಿಂದ ಉತ್ತಮವಾದ ಸಾವಯವ ಗೊಬ್ಬರ ಸಿದ್ಧವಾಗುತ್ತದೆ. ಈ ಗೊಬ್ಬರವನ್ನು ಭೂಮಿಗೆ ಹಾಕಿದರೆ ಭೂಮಿಯ ಫಲವತ್ತತೆ ಹೆಚ್ಚಾಗಿ ಅಧಿಕ ಪ್ರಮಾಣದಲ್ಲಿ ಫಸಲು ಬೆಳೆಯಲು ಸಾಧ್ಯವಾಗುತ್ತದೆ. ವೈಜ್ಞಾನಿಕತೆಯಿಂದ ತಯಾರಿಸಿದ ರಸಾಯನಿಕ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತ ಆಹಾರ ಧಾನ್ಯಗಳಲ್ಲಿಯ ಪೋಷಕಾಂಶಗಳು ಕಡಿಮೆಯಾಗುತ್ತವೆ. ಪೋಷಕಾಂಶಗಳಿಲ್ಲದ ಆಹಾರ ಧಾನ್ಯಗಳನ್ನು ಸೇವಿಸುವುದರಿಂದ ಮಾನವನ ಆರೋಗ್ಯ ಹಾಳಾಗುತ್ತದೆ.

೪. ಕಾಡುಗೊಲ್ಲರಲ್ಲಿ ಕೃಷಿಕ ವೃತ್ತಿ ಮಾಡುತ್ತಿರುವವರು ಮಳೆ ಕಂಡು ಬೆಳೆ ಬೆಳೆಯುವರೆ ಹೆಚ್ಚಾಗಿದ್ದಾರೆ. ಮಳೆ ಬಾರದೆ ಇದ್ದ ಸಂದರ್ಭದಲ್ಲಿ ಅವರ ಬದುಕು ಅಸಹನೀಯವಾಗಿರುತ್ತದೆ. ಕೃಷಿ ವೃತ್ತಿಯ ಜೊತೆಗೆ ಪಶುಪಾಲನೆ ಕೈಕೊಂಡಿದ್ದರೆ ಇದರ ಆದಾಯದ ಮೇಲೆ ಬದುಕಲು ಅನುಕೂಲವಾಗುತಿತ್ತು.

೫. ಪಶುಪಾಲನೆಗೆ ಉತ್ತಮವಾದ ಪರಿಸರವನ್ನು ನಿರ್ಮಿಸಿಕೊಳ್ಳಬೇಕು. ಅವರು ಸಾಕುವ ಪಶುಗಳಿಗೆ ಸಾಂಕ್ರಾಮಿಕ ರೋಗಗಳು ತಗಲದಂತೆ ಎಚ್ಚರಿಕೆ ವಹಿಸಬೇಕು. ಅವುಗಳಿಗೆ ಪೌಷ್ಠಿಕ ಆಹಾರ, ಔಷದೋಪಚಾರ ಮಾಡಿ ಅವುಗಳನ್ನು ಸರಿಯಾಗಿ ರಕ್ಷಿಸಿದರೆ ಅವುಗಳಿಂದ ಹೆಚ್ಚಿನ ಆದಾಯ ನಿರೀಕ್ಷಿಸಬಹುದಾಗಿದೆ.

[illegible]

[illegible]

[illegible]

[illegible]

[illegible]

೬. ಮೂಲತಃ ಪಶುಪಾಲಕರಾದ ಕಾಡುಗೊಲ್ಲರಿಗೆ ಆಧುನಿಕ ತಳಿಯ ಪಶುಗಳನ್ನು ನೀಡಿದರೆ ಅವರು ಆರ್ಥಿಕವಾಗಿ ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ.

೭. ಕಾಡುಗೊಲ್ಲರಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಯೋಗ್ಯ ರೀತಿಯಲ್ಲಿ ಮಾರಾಟ ಮಾಡಲು ಅವರಿಗೆ ಉತ್ತಮವಾದ ಮಾರುಕಟ್ಟೆ ಒದಗಿಸಬೇಕು. ಹಾಲಿನ ಸಂಗ್ರಹಣಾ ಕೇಂದ್ರಗಳನ್ನು ಇವರ ಪ್ರದೇಶಗಳಲ್ಲಿ ಪ್ರಾರಂಭಿಸಿ ಹಾಲು ಉತ್ಪಾದನೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು.

೮. ಕಾಲಕ್ಕೆ ತಕ್ಕಂತೆ ಪಶುಗಳಿಗೆ ತಗಲುವ ಸಾಂಕ್ರಾಮಿಕ ರೋಗಗಳ ಬಗ್ಗೆ ತಿಳುವಳಿಕೆ ಹಾಗೂ ಲಸಿಕೆಗಳನ್ನು ನೀಡಿ ಅವರು ಪಶುಸಂಪತ್ತನ್ನು ರಕ್ಷಿಸಿಕೊಳ್ಳುವಲ್ಲಿ ಸರ್ಕಾರ ಸಹಕಾರ ನೀಡಬೇಕು.

೯. ಕುರಿಗಳ ಉಣ್ಣೆ ಹಾಗೂ ಚರ್ಮ ಮಾರಾಟಕ್ಕೆ ಸಂಬಂಧಿಸಿದಂತೆ ಅವರಿಗೆ ಮಾಹಿತಿ ನೀಡಿ ದಲ್ಲಾಳಿ ಗಳಿಂದಾಗುವ ನಷ್ಟ ತಪ್ಪುವಂತೆ ಮಾಡಬೇಕು.

೧೦. ಪಶುಗಳ ಸಗಣಿ ಹಾಗೂ ಗಂಜಲನಿಂದ ಗೊಬ್ಬರ ಗ್ಯಾಸ್ ಘಟಕವನ್ನು ಸ್ಥಾಪಿಸಿಕೊಂಡು ಅದರಿಂದ ಉತ್ಪಾದನೆಯಾಗುವ ಗ್ಯಾಸನ್ನು ಬಳಸಿಕೊಂಡು ಉರುವಲು ಕಟ್ಟಿಗೆಯನ್ನು ಉಳಿತಾಯ ಮಾಡಬಹುದು ಮತ್ತು ಉತ್ತಮವಾದ ಗೊಬ್ಬರವನ್ನು ಪಡೆಯಬಹುದು.

೧೧. ಪಶುಪಾಲನೆಗೆ ಬಂಡವಾಳ ಹೂಡಲು ಬ್ಯಾಂಕುಗಳಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವಂತಾಗಬೇಕು ಮತ್ತು ಆ ಪಶುಸಂಪತ್ತಿಗೆ ವಿಮಾ ಸೌಲಭ್ಯ ಒದಗಿಸಬೇಕು.

೧೨. ಕಾಡುಗೊಲ್ಲರ ಸಮೀಪದಲ್ಲಿ ಪಶುವೈದ್ಯ ಸೌಲಭ್ಯ ಒದಗಿಸಬೇಕು.

೧೩. ಉತ್ತಮ ತಳಿಯ ಹಸು, ಎಮ್ಮೆ, ಹಾಗೂ ಕುರಿಗಳನ್ನು ಸಾಕುವುದಕ್ಕೆ ಪ್ರೋತ್ಸಾಹಿಸಬೇಕು.

೫.೧.೪ ದಿನಗೂಲಿ ನೌಕರರು

ಕಾಡುಗೊಲ್ಲರು ಕೃಷಿ, ಕೃಷಿಕೂಲಿ, ಪಶುಪಾಲನೆ ವೃತ್ತಿಗಳಲ್ಲಿ ಮಾತ್ರ ತೊಡಗಿರದೇ ಇನ್ನಿತರ ಅನೇಕ ವೃತ್ತಿಗಳಲ್ಲಿಯೂ ತೊಡಗಿದ್ದಾರೆ. ಸಾಮಾನ್ಯವಾಗಿ ಅನೇಕರು ದಿನಗೂಲಿ ಕೆಲಸಕ್ಕೆ ಹೋಗುವುದು ಇವರಲ್ಲಿ ಕಂಡುಬರುತ್ತದೆ. ಈ ದಿನಗೂಲಿ ಕೆಲಸವು ದಿನದ ಲೆಕ್ಕದ ಕೆಲಸವಾಗಿದ್ದು ಅಂದೇ ದುಡಿದು ಅಂದೇ ಕೂಲಿಯನ್ನು ಪಡೆಯುತ್ತಾರೆ. ಕೆಲಸದ ನಂತರ ಮಾಲಿಕರಿಗೂ ಇವರಿಗೂ ಯಾವುದೇ ರೀತಿಯ ವ್ಯವಹಾರ ಇರುವುದಿಲ್ಲ. ಇವರು ಪಡೆಯುವ ಕೂಲಿಯು ಅಲ್ಪ ಪ್ರಮಾಣದಲ್ಲಿರುತ್ತದೆ. ಪ್ರಸ್ತುತ ಕ್ಷೇತ್ರ ಅಧ್ಯಯನದ ಹಳ್ಳಿಗಳಲ್ಲಿ ದಿನಗೂಲಿ ಮಾಡುವವರನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ ೫.೧೨

ವಿವಿಧ ವೃತ್ತಿಗಳಲ್ಲಿ ನಿರತರಾದ ಕಾಡುಗೊಲ್ಲರ ದಿನಗೂಲಿ ನೌಕರದಾರರ ಲಿಂಗವಾರು ಪ್ರಮಾಣ

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೨೬	೪	೩೦
			ಜೋಗಿಹಟ್ಟಿ	೧೭	೪	೨೧
			ಯಲಗಟ್ಟಿ ಗೊಲ್ಲರಹಟ್ಟಿ	೨	--	೨
			ಬೆಳಗೆರೆ ಗೊಲ್ಲರಹಟ್ಟಿ	೧	--	೧
		ಮೊಳಕಾಲ್ಮೂರು	ಗುಂಡ್ಲೂರು	೭	--	೭
			ಒಟ್ಟು	೫೩	೮	೬೧

ಈ ಮೇಲಿನ ಕೋಷ್ಟಕದಲ್ಲಿ ಕಾಡುಗೊಲ್ಲರು ಒಟ್ಟಾರೆ ವೃತ್ತಿಗಳಲ್ಲಿ ದಿನಗೂಲಿ ನೌಕರಿ ಮಾಡುವವರು ಶೇ. ೫ರಷ್ಟು ಕಂಡುಬರುತ್ತಾರೆ. ಇದರಲ್ಲಿ ಶೇ. ೮೬.೮೮ರಷ್ಟು ಪುರುಷರು ಮತ್ತು ಶೇ. ೧೩.೧೧ರಷ್ಟು ಮಹಿಳೆಯರು ಈ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಒಟ್ಟಾರೆ ದಿನಗೂಲಿಗಳಲ್ಲಿ ಹನುಮಂತನ ಹಳ್ಳಿಯಲ್ಲಿ ಶೇ. ೪೯.೧೮ರಷ್ಟು ಅತಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದ್ದಾರೆ. (ಇದರಲ್ಲಿ ಶೇ. ೮೬.೬೬ರಷ್ಟು ಗಂಡು ಮತ್ತು ಶೇ. ೧೩.೩೩ರಷ್ಟು ಮಹಿಳೆಯರಿದ್ದಾರೆ) ಅತಿ ಕಡಿಮೆ ಪ್ರಮಾಣದಲ್ಲಿ ಶೇ. ೧.೬೩ರಷ್ಟು ಬೆಳಗೆರೆಯಲ್ಲಿದ್ದು ಲಿಂಗವಾರುಗಳಲ್ಲಿ ನೋಡಿದರೆ ಪುರುಷರೇ ದಿನಗೂಲಿಯನ್ನು ಮಾಡುತ್ತಿದ್ದಾರೆ. ಜೋಗಿಹಟ್ಟಿಯಲ್ಲಿ ಶೇ. ೩೪.೪೨ರಷ್ಟು ಜನರು ದಿನಗೂಲಿಗಳಾಗಿದ್ದಾರೆ. (ಇದರಲ್ಲಿ ಗಂಡು ಮತ್ತು ಹೆಣ್ಣು ಕ್ರಮೇಣವಾಗಿ ಶೇ. ೮೦.೯೫, ಶೇ. ೧೯.೦೪ರಷ್ಟಿದ್ದಾರೆ) ಮೂರನೆಯದಾಗಿ ಮೊಳಕಾಲ್ಮೂರು ತಾಲೂಕಿನ ಗುಂಡ್ಲೂರು ಶೇ. ೧೧.೪೭ ಹಾಗೂ ಶೇ. ೩.೨೭ರಷ್ಟು ಚಳ್ಳಕೆರೆ ತಾಲೂಕಿನ ಯಲಗಟ್ಟಿಯಲ್ಲಿ (ಎರಡು ಊರಗಳಲ್ಲಿ ಸಂಪೂರ್ಣವಾಗಿ ಪುರುಷರೇ ದಿನಗೂಲಿಗಳು ಮತ್ತು ಮಹಿಳೆಯರು ಇಲ್ಲಿ ದಿನಗೂಲಿಗಳಾಗಿ ಕೆಲಸ ನಿರ್ವಹಿಸದೇ ಇರುವುದು ಕಂಡುಬರುತ್ತದೆ.

ಗಾರೆ ಕೆಲಸ, ಹಮಾಲಿ ಕೆಲಸ, ರಸ್ತೆರಿಪೇರಿ, ಕಸ ಹೊರುವುದು, ಮುಂತಾದ ಕೆಲಸಗಳಿಗೆ ದಿನಗೂಲಿಗಳಾಗಿ ಕಾಡುಗೊಲ್ಲರು ಹೋಗುವುದನ್ನು ಕಾಣುತ್ತೇವೆ. ಇವರು ಪಡೆಯುವಂತಹ ಕೂಲಿ ಹಣವೂ ಸಹ ಅಲ್ಪಪ್ರಮಾಣದ್ದಾಗಿದ್ದು ಅದನ್ನು ಈ ಕೆಳಗಿನಂತೆ ನೀಡಲಾಗಿದೆ.

[illegible]

ಕೋಷ್ಟಕ ೫.೧೩

ವಿವಿಧ ಕೆಲಸಗಳಲ್ಲಿ ದಿನಗೂಲಿಗಳು ಪಡೆಯುವ ಕೂಲಿ ದರಗಳು

ಕ್ರ.ಸಂ.	ದಿನಗೂಲಿಯ ಹೆಸರು	ದಿನಗೂಲಿಯ ನೀಡುವ ದರ (ರೂ.ಗಳಲ್ಲಿ)	
		ಗಂಡು	ಹೆಣ್ಣು
೦೧	ಗಾರೆ ಕೆಲಸ	೮೦	೬೦
೦೨	ಹಮಾಲಿ ಕೆಲಸ	೬೦	--
೦೩	ರಸ್ತೆ ದುರಸ್ಥಿ ಕಾಮಗಾರಿ	೧೦೦	--
೦೪	ಗಣಿಗಾರಿಕೆ	೧೨೦	೧೦೦

ಮೇಲಿನ ಕೋಷ್ಟಕ ಗಮನಿಸಿದರೆ ಹೆಚ್ಚಿನ ಹಣವನ್ನು ಗಣಿಗಾರಿಕೆಯಲ್ಲಿ ಕೊಡುತ್ತಿದ್ದು, ಇನ್ನುಳಿದಂತೆ ಗಾರೆಕೆಲಸ, ಹಮಾಲಿ ಕೆಲಸ, ರಸ್ತೆ ದುರಸ್ಥಿಕಾಮಗಾರಿ, ಕಡಿಮೆ ಹಣಗಳನ್ನು ಕೊಡುತ್ತಿದ್ದಾರೆ. ಇದರಿಂದಾಗಿ ದಿನಕೂಲಿಗಳ ಆರ್ಥಿಕ ಪರಿಸ್ಥಿತಿಯೂ ಸಹ ನಿಕೃಷ್ಟ ಮಟ್ಟದಲ್ಲಿದ್ದು ಅನಿವಾರ್ಯ ಪರಿಸ್ಥಿತಿಯಿಂದ ಕಾಡುಗೊಲ್ಲರು ಇದೇ ವೃತ್ತಿಯಲ್ಲಿ ಮುಂದುವರಿಯಬೇಕಾಗಿದೆ.

೫.೧.೫ ಸಣ್ಣ ವ್ಯಾಪಾರ

ಕಾಡುಗೊಲ್ಲರು ಕೇವಲ ಕೂಲಿ ಕೆಲಸ ಮಾಡದೇ ಹಲವು ಸಣ್ಣ-ಪುಟ್ಟ ವ್ಯಾಪಾರ ಮಾಡುತ್ತಿದ್ದಾರೆ. ಬೃಹತ್ ಪ್ರಮಾಣದ ವ್ಯಾಪಾರದಲ್ಲಿ ತೊಡಗಿಸಿಕೊಳ್ಳಲು ಇವರಲ್ಲಿ ಬಂಡವಾಳವಿಲ್ಲದಿರುವುದರಿಂದ ಸಣ್ಣ ವ್ಯಾಪಾರದಲ್ಲಿ ಕೆಲ ಕಾಡುಗೊಲ್ಲರು ಕಂಡುಬರುತ್ತಾರೆ. ಹೋಲ್‌ಸೇಲ್ ಬೆಲೆಯಲ್ಲಿ ಬುಟ್ಟಿತುಂಬಾ ಸರಕುಗಳನ್ನು ತಂದು, ಊರು ತುಂಬಾ ಅಲೆದು ಬೀದಿ ತಿರುಗಿ, ವ್ಯಾಪಾರ ಮಾಡುತ್ತಿರುವುದು ಕಂಡುಬರುತ್ತದೆ. ಕಾಡುಗೊಲ್ಲರು ಹೆಚ್ಚಾಗಿ ನಗರ ಪ್ರದೇಶಗಳಿಂದ ದೂರವಿದ್ದು ಇವರಿಗೆ ತಮ್ಮ ಊರಿನಲ್ಲಿ ಸಣ್ಣ ಅಂಗಡಿ, ಹಿಟ್ಟಿನ ಗಿರಣಿ, ಮೆಣಸಿನಕಾಯಿ ಕುಟ್ಟುವ ಯಂತ್ರ, ಚಿಕ್ಕದಾದ ಡಬ್ಬಿ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಅಂಗಡಿಗಳಲ್ಲಿ ಮಾರಾಟಕ್ಕಾಗಿ ವಸ್ತುಗಳೇನಾದರೂ ಬೇಕಾದರೆ ಚಳ್ಳಕೆರೆಗೆ ಹೋಗಿ ಹೊಲ್‌ಸೇಲ್ ಅಂಗಡಿಗಳಿಂದ ಕೊಂಡು ತರುತ್ತಾರೆ. ಸಣ್ಣ ಅಂಗಡಿಗಳ ವ್ಯಾಪಾರಿಗಳು ತಮ್ಮ ಸಮೀಪದ ನಗರ ಪ್ರದೇಶಗಳಿಗೆ ಹೋಗಿ ಅಲ್ಲಿಂದ ಅಂದರೆ ಮೊಳಕಾಲ್ಮೂರು, ಚಳ್ಳಕೆರೆ, ಚಿತ್ರದುರ್ಗಗಳಿಂದ ಸರಕುಗಳನ್ನು ತಂದು ವ್ಯಾಪಾರ ಮಾಡುವರು. ಈ ವ್ಯಾಪಾರದಲ್ಲಿ ಲಾಭ ಒಂದೇಯಾಗಿರದೆ ಕೆಲವೊಮ್ಮೆ ನಷ್ಟವನ್ನು ಸಹ ಅನುಭವಿಸಬೇಕಾಗುತ್ತದೆ. ಇವರಿಗೆ ವಿಶೇಷವಾಗಿ ಜಾತ್ರೆ, ಬಿತ್ತನೆಯ ಸಂದರ್ಭದಲ್ಲಿ ಹೆಚ್ಚಿಗೆ ಲಾಭವಾಗುತ್ತದೆ. ಬಿತ್ತನೆ ಕಾರ್ಯ ಮುಗಿದ ನಂತರ ಕಡಿಮೆ ಲಾಭವಾಗುತ್ತದೆ. ಅಷ್ಟೇ ಅಲ್ಲದೇ ಮದುವೆಗಳಲ್ಲಿಯೂ ಕೂಡ ಲಾಭವಾಗುತ್ತದೆ ಎಂಬ ಮಾಹಿತಿ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ಕಾಡುಗೊಲ್ಲರು ಅನೇಕ ವಿವಿಧ ಸಣ್ಣವ್ಯಾಪಾರಗಳಾದ ಪಾನ್‌ಶಾಪ್ ಅಂಗಡಿ, ಕಿರಾಣಿ ಅಂಗಡಿ, ಹೂವಿನ ವ್ಯಾಪಾರ, ಹಣ್ಣಿನ ವ್ಯಾಪಾರ, ಚಹಾ ಹೋಟೆಲ್, ತರಕಾರಿ ವ್ಯಾಪಾರ, ಹಾಲಿನ ವ್ಯಾಪಾರ,

ಅಲಂಕಾರಿಕ ವಸ್ತುಗಳ ಮಾರಾಟವನ್ನು ಮಾಡುತ್ತಾರೆ. ಪ್ರಸ್ತುತವಾಗಿ ಕ್ಷೇತ್ರಕಾರ್ಯದಲ್ಲಿನ ಹಳ್ಳಿಗಳಲ್ಲಿ ಕಂಡುಬರುವ ಸಣ್ಣಮಟ್ಟದಲ್ಲಿ ವ್ಯಾಪಾರಗಳ ಪ್ರಮಾಣವನ್ನು ಕೆಳಕಂಡಂತೆ ನೋಡಬಹುದು.

ಕೋಷ್ಟಕ ೫.೧೪

ಸಣ್ಣ ವ್ಯಾಪಾರ ಮಾಡುತ್ತಿರುವ ಕಾಡುಗೊಲ್ಲರ ಲಿಂಗವಾರು ಪ್ರಮಾಣ

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	--	--	--
			ಜೋಗಿಹಟ್ಟಿ	--	೦೧	೦೧
			ಯಲಗಟ್ಟೆ ಗೊಲ್ಲರಹಟ್ಟಿ	೦೯	೦೩	೧೨
			ಬೆಳಗೆರೆ ಗೊಲ್ಲರಹಟ್ಟಿ	--	--	--
೨.		ಮೊಳಕಾಲ್ಮೂರು	ಗುಂಡ್ಲೂರು	೦೬	--	೦೬
			ಒಟ್ಟು	೧೫	೦೪	೧೯

ಮೇಲ್ಕಾಣಿಸಿದ ಕೋಷ್ಟಕದಲ್ಲಿ ಕಾಡುಗೊಲ್ಲರಲ್ಲಿ ಸಣ್ಣವ್ಯಾಪಾರದಲ್ಲಿರುವವರ ಪ್ರಮಾಣ ಶೇ. ೧ರಷ್ಟು ಮಾತ್ರವಾಗಿದ್ದು ಅದರಲ್ಲಿ ಪುರುಷರು ಶೇ. ೭೮.೯೪ರಷ್ಟು ಹಾಗೂ ಶೇ. ೨೧.೦೫ರಷ್ಟು ಮಹಿಳೆಯರು ಇರುವುದನ್ನು ಕಾಣುತ್ತೇವೆ. ಯಲಗಟ್ಟೆಯಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಶೇ. ೬೩.೧೫ರಷ್ಟಿದ್ದಾರೆ. ಇದರಲ್ಲಿ ಸಣ್ಮ ವ್ಯಾಪಾರದಲ್ಲಿ ತೊಡಗಿದವರು ಇದ್ದಾರೆ. (ಶೇ. ೭೫ರಷ್ಟು ಪುರುಷರು ಹಾಗೂ ಶೇ. ೨೫ರಷ್ಟು ಮಹಿಳೆಯರು ಇದ್ದಾರೆ.) ಆದರೆ ಹನುಮಂತನಹಳ್ಳಿ ಹಾಗೂ ಬೆಳಗೆರೆಯಲ್ಲಿ ಯಾರೂ ವ್ಯಾಪಾರದಲ್ಲಿ ತೊಡಗದಿರುವುದು ಕಂಡುಬರುತ್ತದೆ. ಮೊಳಕಾಲ್ಮೂರು ತಾಲೂಕಿನ ಗುಂಡ್ಲೂರಿನಲ್ಲಿ ಶೇ. ೩೧.೫೭ರಷ್ಟಿದ್ದು ಇದರಲ್ಲಿ ಎಲ್ಲ ಪುರುಷರೇ ಇದ್ದಾರೆ.

ವಿವಿಧ ಬಗೆಯ ಸಣ್ಣ ವ್ಯಾಪಾರಗಳಲ್ಲಿ ತೊಡಗಿಕೊಂಡಿರುವ ಕಾಡುಗೊಲ್ಲರ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.

ಕೋಷ್ಟಕ ೫.೧೫

ವಿವಿಧ ಸಣ್ಣ ವ್ಯಾಪಾರದಲ್ಲಿ ತೊಡಗಿರುವ ಕಾಡುಗೊಲ್ಲರ ವಿವರ

ಕ್ರ.ಸಂ.	ಸಣ್ಣ ವ್ಯಾಪಾರದ ಬಗೆಗಳು	ಗಂಡು	ಹೆಣ್ಣು	ಒಟ್ಟು
೦೧	ಪಾನ್‌ಶಾಪ್ ಅಂಗಡಿ	೪	--	೪
೦೨	ಕಿರಾಣಿ ಅಂಗಡಿ	೨	--	೨
೦೩	ಹೋಟೆಲ್	೨	೨	೪

[illegible]

೦೪	ತರಕಾರಿ ವ್ಯಾಪಾರ	೨	೧	೩
೦೫	ಹಣ್ಣಿನ ವ್ಯಾಪಾರ	೩	--	೩
೦೬	ಅಲಂಕಾರಿಕ ವಸ್ತುಗಳ ವ್ಯಾಪಾರ	೨	೧	೩
	ಒಟ್ಟು	೧೫	೪	೧೯

ಈ ಕೋಷ್ಠಕದಲ್ಲಿ ಪಾನ್‌ಶಾಪ್ ಅಂಗಡಿ ಇಟ್ಟವರು ೪ ಜನ ಕಿರಾಣಿ ಅಂಗಡಿ ಇಬ್ಬರು ನಡೆಸುತ್ತಿದ್ದಾರೆ. ಅದರಲ್ಲಿ ೦೪ ಜನ ಹೋಟೆಲ್ ನಡೆಸುತ್ತಾರೆ. ಇನ್ನುಳಿದಂತೆ ಮೂವರು ತರಕಾರಿ ಮಾರಾಟ ಮಾಡುತ್ತಿದ್ದು, ಹಣ್ಣಿನ ವ್ಯಾಪಾರವನ್ನು ಮೂರು ಜನ ಪುರುಷರು ಮಾಡುತ್ತಿದ್ದಾರೆ. ಅಲಂಕಾರಿಕ ವಸ್ತುಗಳ ವ್ಯಾಪಾರ ಮೂರು ಜನ ಮಾಡುತ್ತಾರೆ. ಇವರೆಲ್ಲರ ಸ್ಥಿತಿಯೂ "ಆರಕ್ಕೆ ಏರಲಿಲ್ಲ ಮೂರಕ್ಕೆ ಇಳಿಯಲಿಲ್ಲ" ಎಬ ಪರಿಸ್ಥಿತಿಯಲ್ಲಿದ್ದಾರೆ. ಇವರು ಆರ್ಥಿಕವಾಗಿ ತುಂಬಾ ದುರ್ಬಲರಾಗಿದ್ದಾರೆ. ಕಿರಾಣಿ ಮಾಡುವವರ ಸ್ಥಿತಿಯೂ ಮಾತ್ರ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದೆ.

೫.೧.೬. ಸರ್ಕಾರಿ ನೌಕರರು

ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವ ಕಾಡುಗೊಲ್ಲರು ಸಾಮಾನ್ಯವಾಗಿ ಸರ್ಕಾರಿ ಹುದ್ದೆಗಳಿಗೆ ಹೋಗುವ ಮಟ್ಟದ ಶಿಕ್ಷಣ ಪಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಎರಡ್ಹೊತ್ತಿನ ಊಟಕ್ಕೂ ಪರದಾಡುವ ಇವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದರಲ್ಲಿ ಹಿಂದುಳಿದಿದ್ದಾರೆ. ಇದಕ್ಕೆ ಮುಖ್ಯ ಕಾರಣ ಕಡುಬಡತನ. ಇವರಲ್ಲಿ ಕೆಲವರು ಕಷ್ಟಪಟ್ಟು ಉನ್ನತ ಶಿಕ್ಷಣ ಪಡೆದಿದ್ದರೂ ಸರ್ಕಾರದ ಮೀಸಲಾತಿ ಸಮಸ್ಯೆಯಿಂದ ಸರ್ಕಾರಿ ಕೆಲಸವೂ ದೊರೆಯದಾಗಿದೆ. ಇವರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿರುವುದರಿಂದ ಇತರೆ ಪ್ರಭಾವಿ ಹಿಂದುಳಿದ ಸಮುದಾಯಗಳ ಜೊತೆ ಸ್ಪರ್ಧಿಸಬೇಕಾದ ಅನಿವಾರ್ಯತೆ ಯಿದೆ. ಇವರು ಮೂಲತಃ ನಾಗರಿಕ ಜನಾಂಗದಿಂದ ದೂರವಿದ್ದು ಬುಡಕಟ್ಟಿನಲ್ಲಿರುವ ಎಲ್ಲಾ ಲಕ್ಷಣಗಳನ್ನು ಹೊಂದಿದ್ದು ಸರ್ಕಾರ ಅನುಸೂಚಿತ ಪರಿಶಿಷ್ಟ ಪಂಗಡಕ್ಕೆ ಇವರನ್ನು ಸೇರಿಸಿಲ್ಲ. ಈ ಕಾರಣದಿಂದಲೇ ಇವರಿಗೆ ಯಾವ ಸೌಲಭ್ಯಗಳು ದೊರೆಯುತ್ತಿಲ್ಲ. ಇದರಿಂದಾಗಿ ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದ್ದು, ಸರ್ಕಾರಿ ಹುದ್ದೆಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಇವರಲ್ಲಿಯೇ ಕೆಲವರು ಉನ್ನತ ವ್ಯಾಸಂಗ ಮಾಡಿದ್ದರೂ ಸರ್ಕಾರದ ಕೆಲವು ಅಧಿಕಾರಿಗಳ ಲಂಚತನ ಮತ್ತು ಭ್ರಷ್ಟಾಚಾರದಿಂದ ಸರ್ಕಾರಿ ಹುದ್ದೆಗಳು ಇವರ ಕೈಗೆಟುಕುತ್ತಿಲ್ಲ.

ಇಂತಹ ಅನೇಕ ಸಮಸ್ಯೆಗಳ ನಡುವೆಯು ಕೆಲ ಕಾಡುಗೊಲ್ಲರು ಸರ್ಕಾರಿ ಹುದ್ದೆಯಲ್ಲಿ ತೊಡಗಿದ್ದು ಅವರ ಪ್ರಮಾಣವನ್ನು ಕೆಳಗಿನ ಕೋಷ್ಠಕದಲ್ಲಿ ಕಾಣಬಹುದಾಗಿದೆ.

[illegible]

ಕೋಷ್ಟಕ ೫.೧೬

ಸರ್ಕಾರಿ ಹುದ್ದೆಯಲ್ಲಿ ಕಾಡುಗೊಲ್ಲರ ಲಿಂಗವಾರು ಪ್ರಮಾಣ

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	--	--	--
			ಜೋಗಿಹಟ್ಟಿ	೦೧	--	೦೧
			ಯಲಗಟ್ಟಿ ಗೊಲ್ಲರಹಟ್ಟಿ	೦೧	--	೦೧
			ಬೆಳಗೆರೆ ಗೊಲ್ಲರಹಟ್ಟಿ	೦೨	೦೧	೦೩
೨.		ಮೊಳಕಾಲ್ಮೂರು	ಗುಂಡ್ಲೂರು	೦೨	--	೦೨
			ಒಟ್ಟು	೦೬	೦೧	೦೭

ಕೋಷ್ಟಕದಲ್ಲಿ ಕಂಡುಬರುವಂತೆ ಕಾಡುಗೊಲ್ಲರು ಮಾಡುವ ಅನೇಕ ವೃತ್ತಿಗಳಲ್ಲಿ ಶೇ. ೧ರಷ್ಟು ಜನರು ಮಾತ್ರ ಸರ್ಕಾರಿ ಹುದ್ದೆಗಳಲ್ಲಿ ತೊಡಗಿಕೊಂಡಿದ್ದಾರೆ. ಅತಿ ಹೆಚ್ಚಾಗಿ ಪುರುಷರೇ ಸರ್ಕಾರಿ ನೌಕರಿಯಲ್ಲಿರುವುದು ಕ್ಷೇತ್ರಕಾರ್ಯದ ಅಂಕಿ ಸಂಖ್ಯೆಗಳಿಂದ ಕಾಣಸಿಗುತ್ತದೆ. ಒಟ್ಟಾರೆ ೭ ಜನ ಮಾತ್ರ ಸರ್ಕಾರಿ ನೌಕರಿಯಲ್ಲಿದ್ದು ಅವರಲ್ಲಿ ೬ ಜನರು ಪುರುಷರಾಗಿದ್ದು ಒಬ್ಬರು ಮಾತ್ರ ಮಹಿಳೆ ಕಂಡು ಬಂದಿದ್ದಾಳೆ. ಹನುಮಂತನಹಳ್ಳಿಯಲ್ಲಿ ಯಾರೂ ಸರ್ಕಾರಿ ಕೆಲಸದಲ್ಲಿರುವುದು ಕಂಡುಬರುವುದಿಲ್ಲ. ಗುಂಡ್ಲೂರಿನಲ್ಲಿ ಇಬ್ಬರು ಪುರುಷರು ಜೋಗಿಹಟ್ಟಿಯಲ್ಲಿ ಮತ್ತು ಯಲಗಟ್ಟಿಯಲ್ಲಿ ತಲಾ ಒಬ್ಬರಂತೆ ಪುರುಷರು ಸರ್ಕಾರಿ ನೌಕರಿಯಲ್ಲಿರುವುದನ್ನು ಗಮನಿಸಬಹುದು. ಬೆಳಗೆರೆಯಲ್ಲಿ ಒಟ್ಟು ೩ ಜನರಲ್ಲಿ ಇಬ್ಬರು ಪುರುಷರು ಹಾಗೂ ಮಹಿಳೆಯೊಬ್ಬಳು ಸರ್ಕಾರಿ ಕೆಲಸದಲ್ಲಿರುವುದು ಕಂಡುಬರುತ್ತದೆ.

ಕಾಡುಗೊಲ್ಲ ಸಮುದಾಯದ ೭ ಜನ ಸರ್ಕಾರಿ ನೌಕರದಾರರಲ್ಲಿ ಒಬ್ಬರು ಇಂಜಿನಿಯರ್, ಇಬ್ಬರು ಪ್ರಾಥಮಿಕ ಶಾಲಾ ಶಿಕ್ಷಕರು, ಒಬ್ಬರು ಅಂಗನವಾಡಿ ಶಿಕ್ಷಕಿ, ಇನ್ನುಳಿದ ಮೂವರಲ್ಲಿ ಡಿ ದರ್ಜೆಯ ನೌಕರದಾರರಾಗಿದ್ದು, ಒಬ್ಬ ಡಿ.ಎಂ.ಸಿ.ಯಲ್ಲಿ ನೌಕರ, ಇಬ್ಬರು ಪ್ರಾಥಮಿಕ ಶಾಲೆಯಲ್ಲಿ ಜವಾನರಾಗಿರುವುದು ತಿಳಿದುಬರುತ್ತದೆ. ಇವರ ಆರ್ಥಿಕ ಸ್ಥಿತಿಯು ಸ್ವಲ್ಪ ಸುಧಾರಿಸಿದ ಮಟ್ಟದಲ್ಲಿದ್ದು ಮನೆ ಮತ್ತು ಇತರೆ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

೫.೧.೭ ಖಾಸಗಿ ಹುದ್ದೆಗಳು

ಕೃಷಿಯಲ್ಲಿ ಹೆಚ್ಚಿನ ಕೆಲಸವಿಲ್ಲದೆ ಇಂದು ಅನೇಕ ಸಮುದಾಯಗಳು ಇನ್ನಿತರ ವೃತ್ತಿಗಳಿಗೆ ವಾಲುತ್ತಿದ್ದಾರೆ. ಕೆಲ ಕಾಡುಗೊಲ್ಲರ ಯುವಕರು ಬಡತನದಲ್ಲಿಯೇ ಶಿಕ್ಷಣ ಪಡೆದು ಸರ್ಕಾರಿ ಕೆಲಸಕ್ಕೆ ಅಲೆದಾಡಿ ಕೊನೆಗೆ ಸೋತು ಸುಣ್ಣವಾಗಿ ಬದುಕು ಸಾಗಿಸಲು ಖಾಸಗಿ ಸಂಸ್ಥೆಗಳಲ್ಲಿ ಅನಿವಾರ್ಯವಾಗಿ ದುಡಿಯುತ್ತಿರುವುದು ಕಂಡುಬರುತ್ತದೆ. ಖಾಸಗಿ ಕಂಪನಿಗಳಲ್ಲಿ ದುಡಿಯುವವರಿಗೆ ದೈನಂದಿನ ಜೀವನಕ್ಕೆ

ಬೇಕಾದ ಊಟ ಬಟ್ಟೆಗೆ ಸರಿಹೋಗುತ್ತದೆಯೆ ಹೊರತು, ಉನ್ನತಮಟ್ಟದ ಜೀವನ ನಡೆಸುವುದಕ್ಕೆ ಹಾಗೂ ಮನೆ ಇನ್ನಿತರ ಆಸ್ತಿ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಖಾಸಗಿ ಸಂಸ್ಥೆಗಳಲ್ಲಿ ದುಡಿಯುವ ಇವರಿಗೆ ಅತಿ ಕಡಿಮೆ ಸಂಬಳ ಕೊಡುತ್ತಿದ್ದಾರೆ. ಅಲ್ಲಿ ಅವರಿಗೆ ದುಡಿಯಲೇ ಬೇಕಾದ ಅನಿವಾರ್ಯತೆ ಉಂಟಾಗಿದೆ.

ಪ್ರಸ್ತುತ ಕ್ಷೇತ್ರಕಾರ್ಯ ಮಾಡಿದ ನೆಲೆಗಳಲ್ಲಿ ಖಾಸಗಿ ಹುದ್ದೆಗಳಲ್ಲಿ ತೊಡಗಿಸಿಕೊಂಡಿರುವವರ ವಿವರಗಳು ಈ ಕೆಳಗಿನಂತಿವೆ.

ಕೋಷ್ಟಕ ೫.೧೭

ಸರ್ಕಾರಿ ಹುದ್ದೆಯಲ್ಲಿ ಕಾಡುಗೊಲ್ಲರ ಲಿಂಗವಾರು ಪ್ರಮಾಣ

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	--	--	--
			ಜೋಗಿಹಟ್ಟಿ	೦೧	--	೦೧
			ಯಲಗಟ್ಟೆ ಗೊಲ್ಲರಹಟ್ಟಿ	೦೩	--	೦೩
			ಬೆಳಗೆರೆ ಗೊಲ್ಲರಹಟ್ಟಿ	೦೧	--	೦೧
೨.		ಮೊಳಕಾಲ್ಮೂರು	ಗುಂಡ್ಲೂರು	೦೪	೦೧	೦೫
			ಒಟ್ಟು	**೦೯**	**೦೧**	**೧೦**

ಕೋಷ್ಟಕದಲ್ಲಿ ಕಾಡುಗೊಲ್ಲರು ನಿರ್ವಹಿಸುವ ಒಟ್ಟಾರೆ ವೃತ್ತಿಗಳಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಲ್ಲಿ ೯ ಪುರುಷರು, ಹಾಗೂ ಒಬ್ಬ ಮಹಿಳೆ ಕಂಡಬರುತ್ತಾಳೆ. ಒಟ್ಟಾರೆ ೧೦ ಜನರಲ್ಲಿ ೦೫ ಜನ ಮೊಳಕಾಲ್ಮೂರು ತಾಲ್ಲೂಕಿನ ಗುಂಡ್ಲೂರಿನಲ್ಲಿದ್ದರೆ, ಚಳ್ಳಕೆರೆ ತಾಲ್ಲೂಕಿನ ಯಲಗಟ್ಟೆಯಲ್ಲಿ ೦೩ ಜನ, ಜೋಗಿಹಟ್ಟಿ ಹಾಗೂ ಬೆಳಗೆರೆಯಲ್ಲಿ ತಲಾ ಒಬ್ಬರು ಕಂಡುಬರುತ್ತಾರೆ.

ಖಾಸಗಿ ಹುದ್ದೆಯಲ್ಲಿ ತೊಡಗಿಕೊಂಡಿರುವ ಕಾಡುಗೊಲ್ಲರಲ್ಲಿ ಒಬ್ಬರು ವಕೀಲರಾಗಿ ಖಾಸಗಿ ವಲಯದಲ್ಲಿಯೇ ಸೇವೆ ಸಲ್ಲಿಸುತ್ತಿದ್ದಾರೆ. ಒಬ್ಬರು ಪಶುವೈದ್ಯರಾಗಿದ್ದು, ಸ್ವಂತ ಆಸ್ಪತ್ರೆಯನ್ನು ಹೊಂದಿದ್ದಾರೆ. ಖಾಸಗಿ ಶಾಲೆಗಳಲ್ಲಿ ಇಬ್ಬರು ಪುರುಷ ಶಿಕ್ಷಕರಿದ್ದು ಒಬ್ಬಳು ಮಹಿಳಾ ಶಿಕ್ಷಕಿ ಕಂಡುಬಂದಿದ್ದಾಳೆ. ಖಾಸಗಿ ಸಂಸ್ಥೆಗಳಲ್ಲಿ ಐದು ಜನರು 'ಡಿ' ದರ್ಜೆಯ ಜವಾನರಾಗಿದ್ದು ಇವರ ಮಾಸಿಕ ವೇತನ ಸರಾಸರಿ ೬೦೦ ರೂ.ಗಳಾಗಿರುತ್ತದೆ.

ನ್ಯಾಯವಾದಿ ಹಾಗೂ ಪಶುವೈದ್ಯರ ಜೀವನ ಮಟ್ಟ ಉತ್ತಮವಾಗಿದ್ದು, ಶಿಕ್ಷಕರ ಮತ್ತು ಜವಾನರ ಜೀವನಮಟ್ಟ ಅತ್ಯಂತ ನಿಕೃಷ್ಟವಾಗಿದೆ. ಇದಕ್ಕೆ ಕಾರಣ ಇವರ ಮಾಸಿಕ ವೇತನ ಅತ್ಯಲ್ಪವಾಗಿದ್ದು, ದೈನಂದಿನ ಜೀವನ ನಡೆಸುವುದು ಇವರಿಗೆ ದುಸ್ತರವಾಗಿದೆ.

[illegible]

೫.೧.೭ ಇತರೆ ವೃತ್ತಿಗಳು

ಕಾಡುಗೊಲ್ಲರು ಈ ಮೊದಲು ವಿವರಿಸಿದ ವೃತ್ತಿಗಳನ್ನು ಮಾತ್ರವಲ್ಲದೆ ಇತರೆ ಹಲವಾರು ವೃತ್ತಿಗಳಲ್ಲಿ ತೊಡಗಿಕೊಂಡಿದ್ದಾರೆ. ಟೈಲರ್, ಎಲೆಕ್ಟ್ರೀಷಿಯನ್, ಫೋಟೋಗ್ರಾಫಿ, ಕಂಪ್ಯೂಟರ್ ಶಾಪ್, ಡ್ರೈವರ್ ಹಾಗೂ ಸಾಮಾಜಿಕ ಕಾರ್ಯಕರ್ತರಾಗಿ ದುಡಿಯುವುದನ್ನು ಕಾಣುತ್ತೇವೆ. ಈ ವೃತ್ತಿಗಳಿಗೆ ಅಲ್ಪಪ್ರಮಾಣ ದಲ್ಲಿಯಾದರೂ ಬಂಡವಾಳ ಬೇಕಾಗಿದ್ದು, ಅದರ ಪೂರೈಕೆಯಾಗದೇ ಆ ವೃತ್ತಿಗಳಲ್ಲಿ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ.

ಕೆಲ ವೃತ್ತಿಗಳಿಗೆ ಹೆಚ್ಚಿನ ದೈಹಿಕ ಮತ್ತು ಮಾನಸಿಕ ಶ್ರಮ ಹಾಕಿ ಕೆಲಸ ಮಾಡಬೇಕಾಗುತ್ತದೆ. ಇಂತಹ ವೃತ್ತಿಗಳಿಂದಲೂ ಬರುವ ಲಾಭ ಮತ್ತು ಸಂಬಳ ತುಂಬಾ ಕಡಿಮೆಯಾಗಿರುತ್ತದೆ. ಇದರಿಂದಾಗಿ ಜೀವನ ನಿರ್ವಹಣೆಯ ಸಲುವಾಗಿ ಈ ವೃತ್ತಿಗಳನ್ನು ನಿರ್ವಹಿಸಲಾಗದೆ ಅತ್ತ ಬಿಡಲಾಗದೆ ಮಾನಸಿಕ ಹಿಂಸೆ ಅನುಭವಿಸುವ ಸ್ಥಿತಿಯಿದೆ. ಇತರೆ ಹುದ್ದೆಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆಯನ್ನು ಈ ಕೆಳಗೆ ಕೊಡಲಾಗಿದೆ.

ಕೋಷ್ಟಕ ೫.೧೮

ಕಾಡುಗೊಲ್ಲರು ತೊಡಗಿಸಿಕೊಂಡಿರುವವರ ಇತರೆ ಹುದ್ದೆಗಳ ಪ್ರಮಾಣ

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೦೨	--	೦೨
			ಜೋಗಿಹಟ್ಟಿ	೦೫	೦೩	೦೮
			ಯಲಗಟ್ಟೆ ಗೊಲ್ಲರಹಟ್ಟಿ	೦೭	೦೨	೦೯
			ಬೆಳಗೆರೆ ಗೊಲ್ಲರಹಟ್ಟಿ	೦೫	೦೩	೦೮
೨.		ಮೊಳಕಾಲ್ಮೂರು	ಗುಂಡ್ಲೂರು	--	--	--
			ಒಟ್ಟು	೧೯	೦೮	೨೭

ಕಾಡುಗೊಲ್ಲರು ಇತರೆ ವೃತ್ತಿಗಳನ್ನು ಅವಲಂಬಿಸಿದವರು ಶೇ. ೦೨ರಷ್ಟು. ಇದರಲ್ಲಿ ೧೯ ಪುರುಷರು ಮತ್ತು ೮ ಮಹಿಳೆಯರಿದ್ದು. ಜೋಗಿಹಟ್ಟಿ ಹಾಗೂ ಬೆಳಗೆರೆಯಲ್ಲಿ ತಲಾ ೮ ಜನರು ಇದ್ದಾರೆ. ಹನುಮಂತನಹಳ್ಳಿಯಲ್ಲಿ ಇಬ್ಬರು ಮಾತ್ರ ಕಂಡುಬರುತ್ತಾರೆ. ಮೇಲ್ಕಾಣಿಸಿದ ೨೭ ಜನರಲ್ಲಿ ಫೋಟೋ ಗ್ರಾಫರ್‌ಗಳು ೩ ಎಲೆಕ್ಟ್ರಿಕಲ್ ಕೆಲಸ ಮಾಡುವವರು ೫ ಟೈಲರ್‌ಗಳು ೬ ಡ್ರೈವರ್‌ಗಳು ೫ ಬೇರೆಯವರ ಮನೆಯಲ್ಲಿ ಮನೆಗೆಲಸ ಮಾಡುವವರು ೪ ಸಮಾಜ ಕಾರ್ಯಕರ್ತರಾಗಿ ಇಬ್ಬರು ಕಂಡುಬರುತ್ತಾರೆ. ಆದರೆ ಈ ಹುದ್ದೆಗಳಲ್ಲಿ ತೊಡಗಿಸಿಕೊಂಡವರು ಸಹ ಆರ್ಥಿಕವಾಗಿ ತುಂಬಾ ದುಸ್ಥಿತಿಯಲ್ಲಿಯೇ ಇದ್ದಾರೆ.

[illegible]

[illegible]

[illegible]

[illegible]	[illegible]	[illegible]	[illegible]	[illegible]	[illegible]

[illegible]

[illegible]

[illegible]

ಕಾಡುಗೊಲ್ಲರು ಇಂದು ಹಲವಾರು ಪ್ರವೃತ್ತಿಗಳನ್ನು ಮೈಗೂಡಿಸಿಕೊಂಡು ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಭರಾಟೆಯಲ್ಲಿ ಸಿಕ್ಕು ತಮ್ಮ ಹಳೆಯ ಪಾರಂಪರಿಕ ವೃತ್ತಿಯಿಂದ ಆಧುನಿಕ ವೃತ್ತಿಗಳ ಕಡೆಗೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಶೈಕ್ಷಣಿಕವಾಗಿ ತುಂಬಾ ಹಿಂದುಳಿದ ಇವರು ಸರ್ಕಾರಿ ಹುದ್ದೆಗಳ ಕಡೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಕಾಡುಗೊಲ್ಲರು ಸರ್ಕಾರಿ ಕೆಲಸ ಬಯಸುವುದು ಒಂದಡೆಯಾದರೆ, ವಿದ್ಯಾಭ್ಯಾಸದ ಕೊರತೆ, ವೃತ್ತಿ ನೈಪುಣ್ಯತೆಯ ಕೊರತೆ, ಹಣದ ಕೊರತೆ ಹಾಗೂ ಕೆಲವು ಸರ್ಕಾರಿ ಅಧಿಕಾರಿಗಳ ಭ್ರಷ್ಟಚಾರದಿಂದ ಸರ್ಕಾರಿ ಕೆಲಸ ಎಂಬುವುದು ಇವರಿಗೆ ಕೈಗೆಟುಕದ ದ್ರಾಕ್ಷಿಯಂತಾಗಿದೆ. ಇದಕ್ಕಾಗಿ ಸರ್ಕಾರವು ಇವರತ್ತ ಗಮನ ಹರಿಸುವುದು ಅತ್ಯವಶ್ಯಕವಾಗಿದೆ.

೫.೨ ಕಾಡುಗೊಲ್ಲರ ಸಮುದಾಯದಲ್ಲಿನ ವೃತ್ತಿ ಸಮಸ್ಯೆಗಳು ಮತ್ತು ಪರಿಹಾರಗಳು

ಕಾಡುಗೊಲ್ಲರ ಅನೇಕ ವೃತ್ತಿ ಸಮಸ್ಯೆಗಳನ್ನು ಹಾಗೂ ಅವುಗಳನ್ನು ಬಗೆಹರಿಸುವ ಕ್ರಮಗಳನ್ನು ಸ್ಥೂಲವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ಪಾರಂಪರಿಕ ವೃತ್ತಿ ಸಮಸ್ಯೆಗಳು ಮತ್ತು ಪರಿಹಾರಗಳು.

೨. ಆಧುನಿಕ ವೃತ್ತಿ ಸಮಸ್ಯೆಗಳು ಮತ್ತು ಪರಿಹಾರಗಳು.

೫.೨.೧. ಪಾರಂಪರಿಕ ವೃತ್ತಿ ಸಮಸ್ಯೆಗಳು ಮತ್ತು ಪರಿಹಾರಗಳು

ಕಾಡುಗೊಲ್ಲರು ವಂಶಪರಂಪರಗತವಾಗಿ ರೂಢಿಸಿಕೊಂಡು ಬಂದ ವೃತ್ತಿಗಳೆಂದರೆ ಪಶುಪಾಲನೆ ಮತ್ತು ವ್ಯವಸಾಯ. ಇವರ ಹೆಸರೇ ಸೂಚಿಸುವಂತೆ ಪಶುಪಾಲನೆಯಲ್ಲಿಯೆ ತಮ್ಮ ಜೀವನವನ್ನು ಮುಡುಪಾಗಿಟ್ಟವರು. ಆ ಮೂಲಕ ತಮ್ಮ ಜೀವನ ನಿರ್ವಹಣೆಗಾಗಿ ನೂರಾರು ವರ್ಷ ಶ್ರಮಪಟ್ಟವರು. ಕಾಲಾನಂತರ ಹಲವಾರು ಸಮಸ್ಯೆಗಳಿಂದ ಕೃಷಿಯತ್ತ ವಾಲಿದರು. ಇಲ್ಲಿಯೂ ಕೂಡ ಇವರ ಶ್ರಮಕ್ಕೆ ತಕ್ಕ ಪ್ರತಿಫಲಗಳು ದೊರೆಯದೆ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳನ್ನು ಸ್ಥೂಲವಾಗಿ ಈ ಕೆಳಗೆ ನೀಡಲಾಗಿದೆ.

೧. ಕಾಡುಗೊಲ್ಲರು ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ಭೂಹಿಡುವಳಿಯನ್ನು ಹೊಂದಿರುವ ರೈತರಾಗಿದ್ದು ಇವರಿಗೆ ಉತ್ತಮ ಬಿತ್ತನೆ ಬೀಜಗಳು ವಿತರಣೆಯಾಗುತ್ತಿಲ್ಲ. ಪಾರಂಪರಿಕ ತಳಿಯ ಬೀಜಗಳನ್ನು ಬಳಸುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಪಡೆಯಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ ಇವರಿಗೆ ಮಾರ್ಗದರ್ಶನ ನೀಡಿ ಆರ್ಥಿಕ ಬೆಳವಣಿಗೆಗೆ ಪ್ರೋತ್ಸಾಹಿಸಬೇಕು.

೨. ಕಾಡುಗೊಲ್ಲರು ೪೭೯ ಕುಟುಂಬಗಳಲ್ಲಿ ೭೦ ಕುಟುಂಬಗಳು ಭೂರಹಿತರಾಗಿದ್ದಾರೆ. ಇವರೆಲ್ಲರು ತಮ್ಮದೇ ಆದ ಜಮೀನನ್ನು ಹೊಂದಿ ವ್ಯವಸಾಯ ಮಾಡುವ ಇಚ್ಛೆಯನ್ನು ಹೊಂದಿದ್ದಾರೆ. “ಕರ್ನಾಟಕ ಸರ್ಕಾರ ೧೯೭೪ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ನಿಗಮದ ವತಿಯಿಂದ ರಾಜ್ಯದ ಕೆಲವೊಂದು ಜಿಲ್ಲೆಗಳಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿಲ್ಲದ ಜನರಿಂದ ಭೂಮಿ ಖರೀದಿಸಿ, ಪರಿಶಿಷ್ಟ ವರ್ಗದ ಅರ್ಹ ಫಲಾನುಭವಿಗಳಿಗೆ ಅದನ್ನು ಹಂಚಿದೆ”.[೬] ಇದೇ ರೀತಿಯಾಗಿ

[illegible]

[illegible]

[illegible]

[illegible]

ಇಂದು ಕಾಡುಗೊಲ್ಲರಿಗಾಗಿ ಇಂತಹ ಯೋಜನೆ ಜಾರಿಗೊಳಿಸಿ ಭೂಮಿ ಬಯಸುವ ಫಲಾನುಭವಿಗಳಿಗೆ ಭೂಮಿ ನೀಡಬೇಕು.

೩. ಕಾಡುಗೊಲ್ಲರಲ್ಲಿ ಹಲವರಿಗೆ ವ್ಯವಸಾಯ ಮಾಡಲು ಸಹಕಾರಿ ಹಾಗೂ ಇತರೆ ಬ್ಯಾಂಕುಗಳಿಂದ ಸಾಲ ದೊರೆಯುತ್ತಿಲ್ಲ. ದೊರೆತರು ಅದು ಕಡಿಮೆ ಪ್ರಮಾಣದಲ್ಲಿದ್ದು, ಅದರಿಂದ ವ್ಯವಸಾಯ ಖರ್ಚು ವೆಚ್ಚಗಳಿಗೆ ಸಾಕಾಗುವುದಿಲ್ಲ. ಕಾಡುಗೊಲ್ಲರಲ್ಲಿ ಸಾಲ ಬೇಡುವ ಭೂಹಿಡುವಳಿದಾರರ (ಸಣ್ಣ ಮತ್ತು ಅತಿಸಣ್ಣ ಭೂಹಿಡುವಳಿದಾರ) ಸಂಖ್ಯೆ ಹೆಚ್ಚಿದ್ದು, ಅವರ ಅವಶ್ಯಕತೆಗೆ ಯಾವುದೇ ಬ್ಯಾಂಕುಗಳಾಗಲಿ ಅಥವಾ ಸಹಕಾರಿ ಸಂಘಗಳಾಗಲಿ ಸಾಕಷ್ಟು ಪ್ರಮಾಣದಲ್ಲಿ ಸ್ಪಂದಿಸುತ್ತಿಲ್ಲ. ಇದರಿಂದಾಗಿ ಕಾಡುಗೊಲ್ಲರು ಶ್ರೀಮಂತರ ಹತ್ತಿರ ಹೆಚ್ಚಿನ ಬಡ್ಡಿಯನ್ನು ಕೊಟ್ಟು ಹಾಗೂ ಮಧ್ಯವರ್ತಿಗಳಿಂದ ಹಣವನ್ನು ಪಡೆಯುತ್ತಿದ್ದಾರೆ. ಈ ಕಾರಣಕ್ಕಾದಿಂದಾಗಿ ಮಧ್ಯವರ್ತಿಗಳು ಕಡಿಮೆ ಬೆಲೆ ಕೊಟ್ಟು, ಕಾಡುಗೊಲ್ಲರ ಕೃಷಿ ಉತ್ಪನ್ನಗಳನ್ನು ಪಡೆಯುತ್ತಿದ್ದಾರೆ. ಇದರಿಂದ ಕಾಡುಗೊಲ್ಲರ ಸಮುದಾಯದ ಸ್ಥಿತಿ ಮತ್ತಷ್ಟು ಹೀನಾಯ ಸ್ಥಿತಿಗೆ ತಳ್ಳಲ್ಪಡುತ್ತದೆ. ಇದನ್ನು ತಪ್ಪಿಸಲು ಸಹಕಾರಿ ಸಂಘಟನೆಗಳಿಗೆ ಹಾಗೂ ಬ್ಯಾಂಕುಗಳಿಗೆ ಆದೇಶ ನೀಡಿ ಕಾಡುಗೊಲ್ಲರಿಗೆ ಹೆಚ್ಚಿನ ಸಾಲ ದೊರೆಯುವಂತೆ ಮಾಡುವುದು ಅವಶ್ಯಕವಾಗಿದೆ.

೪. ಕಾಡುಗೊಲ್ಲರಿಗೆ ನೀರಾವರಿ ಸೌಲಭ್ಯದ ಸಮಸ್ಯೆಯು ಕೂಡ ಬಹುಮುಖ್ಯವಾದ ಸಮಸ್ಯೆಯಾಗಿದೆ. ಒಣ ಬೇಸಾಯ ಪದ್ಧತಿಯನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಮಾಡುತ್ತಿದ್ದಾರೆ. ಇವರ ಭೂಹಿಡವಳಿಗಳು ಮಳೆಯಾಶ್ರಿತವಾಗಿರುವುದರಿಂದ ಇವರ ಕೃಷಿ ಉತ್ಪಾದನೆ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಇದರ ಬಗ್ಗೆ ಸರ್ಕಾರ ಹೆಚ್ಚು ಗಮನಹರಿಸಿ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಕೊಡಬೇಕಾಗಿದೆ.

೫. ಕಾಡುಗೊಲ್ಲರಲ್ಲಿ ಅನೇಕರು ಹೆಚ್ಚಿನ ಪ್ರಮಾಣದಲ್ಲಿ ಪಶುಪಾಲನಾ ವೃತ್ತಿ ಮಾಡುತ್ತಿದ್ದಾರೆ. ಹೈನುಗಾರಿಕೆ ಆಸಕ್ತಿಯಿರುವವರೆಗೆ ಪಶುಸಂಗೋಪನೆ ಇಲಾಖೆಯ ವತಿಯಿಂದ ಆಧುನಿಕ ತಳಿಯ ಹಸು, ಎಮ್ಮೆಗಳನ್ನು ನೀಡಿ ಗೋಮಾಳಗಳನ್ನು ಅವರಿಗೆ ಒದಗಿಸಿದರೆ ಅವರ ಅಭಿವೃದ್ಧಿಗೆ ಅನುಕೂಲ ಮಾಡಿ ಕೊಟ್ಟಂತಾಗುತ್ತದೆ ಮತ್ತು ಪಶುಪಾಲನೆಯಲ್ಲಿ ಇವರಿಗೆ ತರಬೇತಿಗಳನ್ನು ನೀಡುವ ಅವಶ್ಯಕತೆಯೂ ಇದೆ.

೬. ಕಾಡುಗೊಲ್ಲರಿಗೆ ಎತ್ತು, ಆಕಳು, ಕುರಿಗಳು, ಮೇಕೆಗಳೆ ಅವರ ಸಂಪತ್ತು ಈ ಹಿಂದೆ ಕಾಡುಗೊಲ್ಲರು ತಮ್ಮ ಪಶುಸಂಪತ್ತನ್ನು ಕಾಡು-ಮೇಡುಗಳಲ್ಲಿ ಮೇಯಿಸಿಕೊಂಡು ಬರುತ್ತಿದ್ದರು. ಆದ್ದರಿಂದ ಮೇವಿನ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಆದರೆ ಇತ್ತೀಚೆಗೆ ಅರಣ್ಯ ಸಂರಕ್ಷಣಾ ಕಾಯಿದೆಯಿಂದ ಇವುಗಳನ್ನು ಕಾಡಿನಲ್ಲಿ ಮೇಯಿಸಲು ಬಿಡುತ್ತಿಲ್ಲ. ಇದರಿಂದಾಗಿ ಪಶುಗಳನ್ನು ಸಾಕುವ ಪ್ರಮಾಣ ಕಡಿಮೆಯಾಗುತ್ತಿದೆ. ಆದ್ದರಿಂದ ಕಾಡಿನಲ್ಲಿ ದನಗಳಿಗೆ ಮೇಯಸಲು ಅವಕಾಶ ಮಾಡಿಕೊಡಬೇಕು ಮತ್ತು ಸರ್ಕಾರದ ವತಿಯಿಂದ ಕಾಡುಗೊಲ್ಲರ ಪಶುಗಳಿಗೆ ಮೇವುಗಳನ್ನು ಒದಗಿಸಬೇಕಾಗಿದೆ.

೭. ಕಾಡುಗೊಲ್ಲರು ಪಶುಗಳನ್ನು ನಂಬಿ ಅವುಗಳಿಂದ ಬಂದ ಹಾಲು, ಮೊಸರು, ಬೆಣ್ಣೆ, ತುಪ್ಪಗಳನ್ನು ಮಾರಿ ಜೀವನ ಸಾಗಿಸುತ್ತಾರೆ. ಆದರೆ ಇತ್ತೀಚೆಗೆ ಡೈರಿ ಹಾಲಿನ ಪೈಪೋಟಿಯಿಂದ ಇವುಗಳ ಬೇಡಿಕೆ

[illegible]

ಕಡಿಮೆಯಾಗುತ್ತಿದ್ದು, ಸರ್ಕಾರ ಇವರ ಹಾಲು ಮೊಸರು, ಬೆಣ್ಣೆ, ತುಪ್ಪಗಳಿಗೆ ಬೆಂಬಲ ಬೆಲೆಯನ್ನು ಘೋಷಿಸಬೇಕಾಗಿದೆ.

ಕಾಡುಗೊಲ್ಲರು ಕೃಷಿ ಹಾಗೂ ಪಶುಪಾಲಕ ಎರಡೂ ವೃತ್ತಿಯನ್ನು ಅನುಸರಿಸುತ್ತಿದ್ದು ಕೆಲವರು ಸಣ್ಣಪುಟ್ಟ ವ್ಯಾಪಾರ ಮಾಡುತ್ತಿದ್ದು, ಇವರ ಹಳ್ಳಿಗಳಿಗೆ ಸಾರಿಗೆ ಸೌಲಭ್ಯದ ಸಮಸ್ಯೆಯಿದೆ. ಈ ಕಾರಣದಿಂದ ಇವರು ಬೆಳೆದಂತ ಬೆಳೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲಾರದೆ ಮಧ್ಯವರ್ತಿಗಳಿಗೆ ಕಡಿಮೆ ಬೆಲೆಗೆ ತಮ್ಮ ಧಾನ್ಯಗಳನ್ನು ಮಾರಾಟ ಮಾಡುತ್ತಿದ್ದಾರೆ. ಮಧ್ಯವರ್ತಿಗಳ ಹಾವಳಿಯೂ ಸಹ ಬಹಳಷ್ಟಿದ್ದು, ಅದನ್ನು ಕಡಿಮೆ ಮಾಡಬೇಕಾಗಿದೆ. ಹಳೆಯ ಕೃಷಿಯ ವಿಧಾನಗಳನ್ನು ಆಶ್ರಯಿಸಿಕೊಂಡಿದ್ದು ಇದರಿಂದ ಉತ್ಪಾದನೆ ಕಡಿಮೆಯಾಗಿದೆ. ಇದನ್ನು ನಿವಾರಿಸಿ ಯಾಂತ್ರಿಕೃತ ಬೇಸಾಯ ಅಳವಡಿಸಿಕೊಳ್ಳುವಂತೆ ಹಾಗೂ ಅವರ ಭೂಮಿಯನ್ನು ವೃತ್ತಿಗೆ ಅನುಕೂಲವಾಗುವಂತೆ ಭೂ ಸುಧಾರಣೆ ಮಾಡಿಸಿಕೊಡುವುದು ಅವಶ್ಯವಿದೆ.

೫.೨.೨. ಆಧುನಿಕ ವೃತ್ತಿ ಸಮಸ್ಯೆಗಳು ಮತ್ತು ಪರಿಹಾರಗಳು

ಕಾಡುಗೊಲ್ಲರು ಪಾರಂಪರಿಕ ವೃತ್ತಿಯ ಜೊತೆಗೆ ಅನೇಕ ವಿಧದ ಆಧುನಿಕ ವೃತ್ತಿಗಳನ್ನು ಸಹ ಅಳವಡಿಸಿಕೊಂಡಿದ್ದು, ಅವುಗಳಲ್ಲಿಯೂ ಸಹ ಅನೇಕ ಸಮಸ್ಯೆಗಳಿರುವುದು ಕಂಡುಬರುತ್ತದೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

೧. ಆಧುನಿಕ ವೃತ್ತಿಗಳಲ್ಲಿ ಒಂದಾದ ಪಾನ್‌ಶಾಪ್, ಕಿರಾಣಿ ಅಂಗಡಿ, ಹೊಟೇಲ್ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ, ಅಲಂಕಾರಿಕ ವಸ್ತುಗಳ ವ್ಯಾಪಾರ, ಮುಂತಾದ ಹಲವಾರು ಸಣ್ಣ ವ್ಯಾಪಾರದಲ್ಲಿ ಕಾಡುಗೊಲ್ಲರು ತೊಡಗಿಕೊಂಡಿದ್ದು, ಇವುಗಳಿಗೆ ಬಂಡವಾಳದ ಅವಶ್ಯಕತೆ ಇದೆ. ಆದರೆ ಬ್ಯಾಂಕುಗಳು ಈ ಬಗೆಯ ವ್ಯಾಪಾರಕ್ಕೆ ಸಾಲಗಳನ್ನು ಮಂಜೂರು ಮಾಡುತ್ತಿಲ್ಲ. ಈ ರೀತಿಯ ವ್ಯಾಪಾರಕ್ಕೆ ಮಾರುಕಟ್ಟೆಯಲ್ಲಿ ಮಾನ್ಯತೆ ಕಡಿಮೆಯಾಗುತ್ತಿದೆ. ಆದ್ದರಿಂದ ಸರ್ಕಾರ ಬ್ಯಾಂಕುಗಳಿಗೆ ಸಾಲ ಮಂಜೂರಾತಿಗೆ ಆದೇಶ ಕೊಡುವುದು ಮತ್ತು ಮಾರುಕಟ್ಟೆ ನಿರ್ಮಿಸಿಕೊಡುವ ಅವಶ್ಯಕತೆಯಿದೆ.

೨. ಕಾಡುಗೊಲ್ಲರು ಗಾರೆ ಕೆಲಸ, ಹಮಾಲಿ ಕೆಲಸ, ರಸ್ತೆ ದುರಸ್ಥಿ ಕಾಮಗಾರಿಗಳ ಕೆಲಸ ಹಾಗೂ ಗಣಿಗಾರಿಕೆಯಲ್ಲಿ ದಿನಗೂಲಿಗಳಾಗಿ ಹೋಗುತ್ತಿದ್ದಾರೆ. ಇಂತಹ ಕೆಲಸಗಳಲ್ಲಿ ನಿಗದಿತ ಕೂಲಿ ನಿರ್ಧಾರವಾಗಿರುವುದಿಲ್ಲ. ಆದ್ದರಿಂದ ಮಾಲೀಕರು ಕಡಿಮೆ ಕೂಲಿ ಕೊಟ್ಟು ಇವರನ್ನು ಶೋಷಿಸುತ್ತಿದ್ದಾರೆ. ಆದ್ದರಿಂದ ಸರ್ಕಾರ ದಿನಗೂಲಿ ಕೆಲಸಗಾರರಿಗೆ ಕೂಲಿ ನಿಗದಿ ಮಾಡುವ ಕಾರ್ಯ ಬಹಳ ತುರ್ತಾಗಿ ಮಾಡಬೇಕಾಗಿದೆ.

೩. ಕಾಡುಗೊಲ್ಲರಲ್ಲಿ ಕೆಲವರು ಸರ್ಕಾರಿ ಹುದ್ದೆಯಲ್ಲಿದ್ದು, ಇದರಲ್ಲಿ ಹಲವರು 'ಡಿ' ದರ್ಜೆಯ ನೌಕರರಿದ್ದಾರೆ. ಇವರಲ್ಲಿಯ ಕೆಲವು ಪ್ರತಿಭಾವಂತ ಯುವಕರಿಗೆ ಬಡ್ತಿ ನೀಡುವುದು ಅತ್ಯಂತ ಅವಶ್ಯಕವಾಗಿದೆ.

೪. ಕಾಡುಗೊಲ್ಲರಲ್ಲಿ ಕೆಲವರಿಗೆ ಸರ್ಕಾರಿ ಹುದ್ದೆಯಲ್ಲಿ ಸೇರುವ ಎಲ್ಲಾ ವಿದ್ಯಾರ್ಹತೆ ಮತ್ತು

[illegible]

[illegible]

[illegible]

[illegible]

[illegible]

[illegible]

ಅರ್ಹತೆಗಳಿದ್ದರೂ ಅನಿವಾರ್ಯ ಕಾರಣಗಳಿಂದ ಖಾಸಗಿ ಸಂಸ್ಥೆಗಳಲ್ಲಿ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಆದ್ದರಿಂದ ಸರ್ಕಾರ ಇಂಥವರನ್ನು ಗುರುತಿಸಿ ಸರ್ಕಾರಿ ಹುದ್ದೆ ನೀಡಬೇಕಾಗಿದೆ.

೫. ಕಾಡುಗೊಲ್ಲರಲ್ಲಿ ಕೆಲವರು ಫೋಟೋಗ್ರಾಫರ್, ಎಲೆಕ್ಟ್ರಿಕಲ್ ಕೆಲಸ, ಟೈಲರ್, ಡ್ರೈವರ್, ಮನೆಗೆಲಸ ಮುಂತಾದ ವೃತ್ತಿಗಳನ್ನು ಮಾಡುತ್ತಿದ್ದಾರೆ. ಇವರಿಗೂ ಸಹ ಮಾರುಕಟ್ಟೆ ಮತ್ತು ಹಣಕಾಸಿನ ಸಮಸ್ಯೆ ಇದೆ. ಸರ್ಕಾರ ಇವರ ಸಮಸ್ಯೆಗಳಿಗೂ ಸ್ಪಂದಿಸಬೇಕಾಗಿದೆ.

೬. ಕಾಡುಗೊಲ್ಲರಲ್ಲಿ ಕೆಲವರು ಗ್ರಾಮಪಂಚಾಯತಿ ಸದಸ್ಯರಿದ್ದು, ಇವರಿಗೆ ಜನಸೇವೆ ಮತ್ತು ಆಡಳಿತ ಕುರಿತು ಯಾವುದೇ ಅನುಭವಗಳಿರುವುದಿಲ್ಲ. ಅನಕ್ಷರಸ್ತರಾಗಿರುವ ಇವರು ಬೇರೆ ಬೇರೆ ಅಧಿಕಾರಿಗಳ ಮಾತಿಗೆ ಸೈ ಎನ್ನುವ ಮನೋಭಾವದವರಾಗಿದ್ದಾರೆ. ಆದ್ದರಿಂದ ಸರ್ಕಾರ ಇವರಿಗೆ ತರಬೇತಿ ಶಿಬಿರಗಳ ಮೂಲಕ ತರಬೇತಿ ನೀಡಿ ಅಕ್ಷರ ಜ್ಞಾನ ನೀಡಬೇಕಾಗಿದೆ.

ಒಟ್ಟಾರೆಯಾಗಿ ಕಾಡುಗೊಲ್ಲರು ಇಂದು ಅನುಸರಿಸುತ್ತಿರುವ ಅನೇಕ ವೃತ್ತಿಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇವರಿಗಾಗಿ ಸರ್ಕಾರ ಒಂದು ಸಂಪೂರ್ಣ ಯೋಜನೆಯನ್ನು ತಂದು ಇವರ ಸರ್ವೋತೋ ಮುಖ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ.

೫.೩ ಆದಾಯ, ಖರ್ಚು, ಉಳಿತಾಯ

ಕಾಡುಗೊಲ್ಲರು ಸಂಪ್ರದಾಯ ಶರಣರು. ಕಟು ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಬಂದವರು. ಇವರಲ್ಲಿ ಪೂಜೆ, ಪುನಸ್ಕಾರ, ಮೂಢನಂಬಿಕೆಗಳು ರೂಢಿಗತ ವಾಗಿವೆಯೆಂದು ಹೇಳಬಹುದು. ಇವರು ಹೆಚ್ಚಾಗಿ ಹಬ್ಬ ಹರಿದಿನಗಳಲ್ಲಿ ತಮ್ಮ ಆದಾಯಕ್ಕಿಂತ ಮಿತಿಮೀರಿ ಹಣವನ್ನು ಖರ್ಚು ಮಾಡುತ್ತಾರೆ. ಇವರ ಆದಾಯದ ಮೂಲಗಳೆಂದರೆ ವ್ಯವಸಾಯ, ಕುರಿಸಾಕಾಣಿಕೆ, ಸರ್ಕಾರಿ ಉದ್ಯೋಗಗಳು, ಕೂಲಿ, ಮುಂತಾದವುಗಳಾಗಿವೆ. ಇವರು ಆದಾಯಕ್ಕೆ ತಕ್ಕಂತೆ ಖರ್ಚು ಮಾಡಿದರೆ ಮತ್ತೆ ಕೆಲವರು ಆದಾಯ ಮೀರಿ ಖರ್ಚು ಮಾಡುತ್ತಿದ್ದಾರೆ. ಕಾಡುಗೊಲ್ಲರು ಅತಿಯಾಗಿ ಖರ್ಚು ಮಾಡುವ ಕ್ಷೇತ್ರಗಳೆಂದರೆ ವಿವಾಹ, ಧಾರ್ಮಿಕ ಆಚರಣೆ, ಸಾರಿಗೆ ಸಂಪರ್ಕಗಳು ಮುಂತಾದವು. ಮಧ್ಯಮ ವರ್ಗದವರು, ಶ್ರೀಮಂತರು, ಇನ್ಸುರೆನ್ಸ್ ಹಾಗೂ ಬ್ಯಾಂಕಿನ ಮೂಲಕ ಹಣವನ್ನು ಉಳಿತಾಯ ಮಾಡುತ್ತಿದ್ದಾರೆ. ಬಡವರು, ಕೂಲಿಕಾರರು ಮಾತ್ರ ಜೀವನ ನಿರ್ವಹಣೆಗಾಗಿ ಸಾಲಗಳನ್ನು ಮಾಡುತ್ತಲ್ಲೇ ಸಾಗಿದ್ದಾರೆ.

ಕುಟುಂಬದ ಆಸ್ತಿ ಹಂಚಿಕೆ ಕುಟುಂಬದ ಯಜಮಾನರ, ರಾಜಕೀಯ ನಾಯಕರ ಹಾಗೂ ಗ್ರಾಮದ ಹಿರಿಯರ ಸಮ್ಮುಖದಲ್ಲಿ ನಡೆಯುತ್ತದೆ. ಕುಟುಂಬದ ಎಷ್ಟೋ ಜನರ ಖರ್ಚು ವೆಚ್ಚಗಳು ಹಾಗೂ ಇತರೆ ವ್ಯವಹಾರಗಳು ಹಿರಿಯರ ನೇತೃತ್ವದಲ್ಲಿಯೆ ನಡೆಯುತ್ತಿರುತ್ತವೆ. ಇವರು ಹೆಚ್ಚು ಅನುತ್ಪಾದಕ ಚಟುವಟಿಕೆಗಳಿಗೆ ಖರ್ಚು ಮಾಡುವುದರಿಂದ ಉಳಿತಾಯವಾಗದೇ ಹೆಚ್ಚು ಖರ್ಚಾಗುತ್ತದೆ. ಆಗ ಇವರು ಸಾಲಕ್ಕಾಗಿ ಬ್ಯಾಂಕು ಅಥವಾ ಸಹಕಾರಿ ಸಂಘಗಳಿಗೆ ಹೋಗದೇ ಸಾಹುಕಾರರ, ಸಾಲದ ಸಂಘಗಳಿಂದ, ಬಡ್ಡಿ ವ್ಯಾಪಾರಸ್ಥರಿಂದ,

[illegible]

ಸ್ನೇಹಿತರಿಂದ ಹಣ ಪಡೆಯುತ್ತಾರೆ. ಕಾಡುಗೊಲ್ಲರು ಆದಾಯಕ್ಕೆ ತಕ್ಕಂತೆ ಖರ್ಚು ಹಾಗೂ ಸಾಲ ಮಾಡಬೇಕು. ಇದನ್ನು ಯೋಚಿಸದ ಅನೇಕರು ತಮ್ಮ ಆದಾಯಕ್ಕಿಂತ ಹೆಚ್ಚು ಸಾಲ ಮಾಡುತ್ತಿದ್ದಾರೆ. ಎಷ್ಟೋ ಸಂದರ್ಭದಲ್ಲಿ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸಿದ್ದೆವು ಎಂಬ ರೈತರ ಹೇಳಿಕೆಗಳನ್ನು ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ. ಈ ಸಮುದಾಯದ ರೈತರು, ಅನಗತ್ಯ ಸಾಲವನ್ನು ಮಾಡಿಕೊಂಡು "ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಸಾಯುವಂಥ ಪರಿಸ್ಥಿತಿ" ಬಂದಿದೆ. ಇವರು ಅನಗತ್ಯ ಖರ್ಚುಗಳನ್ನು ಹೆಚ್ಚಾಗಿ ಮಾಡುತ್ತಿದ್ದು, ಉಳಿತಾಯ ಮಾಡುವಲ್ಲಿ ಈ ಜನ ಹಿಂದುಳಿದಿದ್ದಾರೆ ಎಂದರೆ ತಪ್ಪಾಗಲಾರದು. ಇಷ್ಟಕ್ಕೆಲ್ಲಾ ಕಾರಣ ಇವರು ಅವಲಂಬಿಸಿರುವ ಕೃಷಿ ಮತ್ತು ಪಶುಪಾಲನೆ ವೃತ್ತಿಗಳು. ಆದುದರಿಂದ ನಾಲ್ಕನೆಯ ಎರಡು ಭಾಗದಷ್ಟು ಉಳಿತಾಯ ಮತ್ತು ಆದಾಯದ ಬಗ್ಗೆ ಕಾಳಜಿವಹಿಸುತ್ತಿಲ್ಲವೆಂದೇ ಹೇಳಬಹುದು.

೫.೪ ಬಡತನ

ಭಾರತದಲ್ಲಿಯೂ ಬಡತನ ದೈತ್ಯಕಾರದಲ್ಲಿದೆ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲಾಗದೇ ಅದರೊಳಗೆ ಸಿಕ್ಕಿಕೊಂಡರೆ ಬೇಗನೇ ಹೊರಬರುವುದು ದುಸ್ತರ. ಮಾನವರು ತಮ್ಮ ಜೀವನದ ಕನಿಷ್ಠ ಅಗತ್ಯಗಳನ್ನು ಒದಗಿಸಿಕೊಳ್ಳಲು ಸಾಕಾಗುವಷ್ಟು ಆದಾಯಗಳಿಸಲು ಸಾಧ್ಯವಾಗದಂತಹ ಸ್ಥಿತಿಯನ್ನು ಬಡತನ ಎಂದು ಕರೆಯಬಹುದು.

ಬಡವರು ತಮ್ಮ ಜೀವನಕ್ಕೆ ಬೇಕಾದ ಅತ್ಯವಶ್ಯಕ ವಸ್ತುಗಳನ್ನು ಪಡೆದುಕೊಳ್ಳಲು ಸಾಧ್ಯವಾಗದಿದ್ದಾಗ ಅವರು ಅನುಸಿಸುತ್ತಿರುವ ವೃತ್ತಿಗಳು ಅವರ ಆದಾಯ ಹಾಗೂ ಜೀವನಮಟ್ಟವನ್ನು ಗಮನಿಸಬೇಕಾಗುತ್ತದೆ. ಇದರ ಒಟ್ಟಾರೆ ಪ್ರಭಾವದಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಕುಂಠಿತವಾಗುತ್ತದೆ. ಇದು ಹಿಂದುಳಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶದ ಸಮಸ್ಯೆಯಾಗಿದೆ.

ಈ ಅಧ್ಯಯಕ್ಕಾಗಿ ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ ಬಡವರೇ ಹೆಚ್ಚಾಗಿದ್ದು. ಮಧ್ಯಮ ವರ್ಗದವರು ಕಡಿಮೆ ಪ್ರಮಾಣದಲ್ಲಿದ್ದು, ಶ್ರೀಮಂತರು ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತಾರೆ. ನಾನು ಜೋಗಿಹಟ್ಟಿ ಹಾಗೂ ಗುಂಡ್ಲೂರಿಗೆ ಹೋದಾಗ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿ ಕೊಳ್ಳದಷ್ಟು ಕಷ್ಟದ ಜೀವನವನ್ನು ಅವರು ನಡೆಸುತ್ತಿದ್ದಾರೆ. ಬೆಳಗೆರೆ, ಯಲಗಟ್ಟಿ ಗೊಲ್ಲರಹಟ್ಟಿ, ಹನುಮಂತನಹಳ್ಳಿ ಗೊಲ್ಲರಹಟ್ಟಿಯಲ್ಲಿಯೂ ಬಡವರೆ ಹೆಚ್ಚಾಗಿ ಕಾಣಸಿಗುತ್ತಾರೆ. ಕಾಡುಗೊಲ್ಲರಿಗೆ ಸಿಗಬೇಕಾಗಿದ್ದ ಸೌಲಭ್ಯಗಳು ಸಿಗದೇ ಇದ್ದಾಗ ಭೂಮಿ ಇಲ್ಲದವರು ಇತರರ ಭೂಮಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದು ದಿನದ ದುಡಿಮೆಯ ಹಣದಿಂದಲೇ ಅವರ ಜೀವನ ಸಾಗುತ್ತಿದ್ದರಿಂದ ಬಡತನ ಹೆಚ್ಚಾಗಿದೆ ಎಂದು ಹೇಳಬಹುದು.

ಯೋಜನಾ ಆಯೋಗದ ೨೦೦೦-೨೦೦೧ರ ಆರ್ಥಿಕ ಸಮೀಕ್ಷೆ ಪ್ರಕಾರ ವ್ಯಕ್ತಿಗಳು ದಿನವೊಂದಕ್ಕೆ

ಎರಡು ಹೊತ್ತಿನ ಊಟಕ್ಕೆ ಪರದಾಡುವುದಾದರೆ ಅವರನ್ನು ಬಡತನ ರೇಖೆಗಿಂತ ಕೆಳಗಿರುವವರು ಎನ್ನುತ್ತದೆ. ಕರ್ನಾಟಕದಲ್ಲಿ ೧೯೯೦-೨೦೦೦ ವೇಳೆಗೆ ಸುಮಾರು ೧೦೪.೪೦ ಲಕ್ಷ ಅಂದರೆ ಶೇ. ೨೦.೦೨ರಷ್ಟು ಬಡವರಿದ್ದಾರೆ.

೫.೫ ಸಾರಿಗೆ ವ್ಯವಸ್ಥೆ

ರಾಷ್ಟ್ರ ರಕ್ಷಣೆಯಲ್ಲಿ ನಾಗರಿಕತೆಯ ಕುರುಹು ಆಗಿದ್ದ ಸಾರಿಗೆ ವ್ಯವಸ್ಥೆಯು ಜನಸಂಚಾರ, ಸರಕುಗಳ ಸಾಗಾಟ, ನಾಗರಿಕತೆ ಸಂಸ್ಕೃತಿ, ವೇಷ ಇದೇ ಮೊದಲಾದವುಗಳ ಬೆಳವಣಿಗೆ ಮತ್ತು ವಿನಿಮಯವಾಗುತ್ತಿದೆ. ಅಂದರೆ ಹಿಂದೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಬೇಕಾದರೆ ಕಷ್ಟವಾಗಿತ್ತು. ಇನ್ನು ಸರಕುಗಳ ಸಾಗಾಟ ಮಾಡುವುದಕ್ಕೆ ಹರಸಾಹಸ ಮಾಡಬೇಕಿತ್ತು. ಭಾರತದಂತಹ ಹಿಂದುಳಿದ ರಾಷ್ಟ್ರದ ಆರ್ಥಿಕಾಭಿವೃದ್ಧಿಯು ಬಹುಮಟ್ಟಿಗೆ ಸಾರಿಗೆ ವ್ಯವಸ್ಥೆಯನ್ನುವಲಂಬಿಸಿದೆ. ಸಾರಿಗೆ ವ್ಯವಸ್ಥೆಯ ವಿವಿಧ ಸಾಧನಗಳಾದ ರೈಲು, ಮೋಟಾರು, ವಿಮಾನ, ಹಡಗು, ಇವೇ ಮೊದಲಾದವುಗಳು ಆರ್ಥಿಕ ಜೀವನದ ಚಟುವಟಿಕೆಗಳನ್ನು ತೀವ್ರಗೊಳಿಸುತ್ತದೆ. ದೇಶದಲ್ಲಿ ಉತ್ತಮ ಸಾರಿಗೆ ವ್ಯವಸ್ಥೆಯಿದ್ದರೆ ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ ಮೊದಲಾದವುಗಳು ಅಭಿವೃದ್ಧಿಗೊಳ್ಳುತ್ತವೆ. ಉತ್ಪಾದನೆಯು ಹೆಚ್ಚಾಗಿ ಜನರ ಜೀವನ ಮಟ್ಟವು ಸುಧಾರಿಸುತ್ತದೆ ಎಂದು ಬಹುಮಾರ್ಮಿಕವಾಗಿ ಹೇಳಲಾಗಿದೆ. ಒಂದು ರಾಷ್ಟ್ರವನ್ನು ಮನುಷ್ಯನ ದೇಹಕ್ಕೆ ಹೋಲಿಸಿದರೆ ಕೃಷಿ ಮತ್ತು ಕೈಗಾರಿಕೆಗಳು ಅದರ ಮಾಂಸಖಂಡಗಳೆಂದು, ಸಾರಿಗೆಯು ಅದರ ನರಮಂಡಲವೆಂದು ಹೇಳಬಹುದು. ರಾಷ್ಟ್ರದ ಜನರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಸಾರಿಗೆ ಸಂಪರ್ಕದಿಂದ ಜನಸಂಚಾರ, ಸರಕುಗಳ ಸಾಗಾಟ, ನಾಗರೀಕತೆ, ಸಂಸ್ಕೃತಿ, ಭಾಷೆ, ಇವೇ ಮೊದಲಾದವುಗಳ ಜೊತೆಗೆ ವಸ್ತುಗಳ ವಿನಿಮಯ ಮತ್ತು ಬೆಳವಣಿಗೆಗೆ ಸಹಕಾರಿಯಾಗಿದೆ.

ಒಂದು ದೇಶ ಅಭಿವೃದ್ಧಿಯಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಸಾರಿಗೆಯ ಅಭಿವೃದ್ದಿಯು ಸಹಜವಾಗಿದೆ. ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇದು ಒಂದಾಗಿದೆ. ಇಲ್ಲಿ ಸಮರ್ಪಕ ಸಾರಿಗೆ ಅಭಿವೃದ್ಧಿಯಾಗದೆ ಇರುವುದನ್ನು ಕಾಣಬಹುದು. ಅನೇಕ ಹಟ್ಟಿಗಳಲ್ಲಿ ವಾಸಿಸುತ್ತಿರುವ ಕಾಡುಗೊಲ್ಲರು ಇಂದು ಸಹ ಗ್ರಾಮಗಳಿಂದ ಗ್ರಾಮಗಳಿಗೆ ಕಾಲುದಾರಿಯಿಂದಲೆ ಹೋಗುತ್ತಾರೆ ವಿನಃ ಅಲ್ಲಿ ರಸ್ತೆಗಳಿಲ್ಲ. ನಾನು ಸಂದರ್ಶಿಸಿದ ಕ್ಷೇತ್ರಗಳನ್ನು ಗಮನಿಸಿದಾಗ ಇತ್ತೀಚೆಗೆ ಅಲ್ಲಿ ವಾಹನಗಳು ಬಸ್ಸುಗಳು ಸಂಚರಿಸುತ್ತಿವೆ. ಆದರೆ ಅಲ್ಲಿ ರಸ್ತೆ ಸರಿಯಾಗಿಲ್ಲವೆಂದೆ ಹೇಳಬಹುದು.

ಎಷ್ಟೋ ಸಂದರ್ಭದಲ್ಲಿ ಕಾಡುಗೊಲ್ಲರ ಹಟ್ಟಿಗಳಿಗೆ ಕೆಲವು ಕಡೆ ವಾಹನಗಳಿಲ್ಲದೆ ಹಟ್ಟಿಗಳಿಂದ ಹಳ್ಳಿಗೆ ಬಂದು ಅಲ್ಲಿಂದ ವಾಹನ ಹಿಡಿದುಕೊಂಡು ಹೋಗುತ್ತಾರೆ. ಉದಾಹರಣೆಗೆ ಹೊಸ ಜೋಗಿಹಟ್ಟಿಗೆ ವಾಹನಗಳ ಸೌಲಭ್ಯ ಇರದೇ ಇರುವುದರಿಂದ ೨ ಕಿ.ಮೀ. ದೂರವಿರುವ ಹಳ್ಳಿಯವರೆಗೆ ನಡೆದು ಅಲ್ಲಿಂದ ವಾಹನ ಹಿಡಿದು ಬೇರೆ ಊರಿಗೆ ಹೋಗುತ್ತಾರೆ.

[illegible]

[illegible]

[illegible]

[illegible]

ಕಾಡುಗೊಲ್ಲರಹಟ್ಟಿಗೆ ಸರ್ಕಾರಿ ಬಸ್ಸುಗಳೇ ಅಪರೂಪ. ಆದರೆ ಹೆಚ್ಚಾಗಿ ಖಾಸಗಿ ವಾಹನಗಳ ಸಂಚಾರ ಇದೆ. ಇವರು ವಾಸಿಸುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಖಾಸಗಿ ವಾಹನಗಳಿಗಿಂತ ಸರ್ಕಾರಿ ಬಸ್ಸುಗಳಲ್ಲಿ ಚಲಿಸುವುದು ಕಡಿಮೆ. ಇದಕ್ಕೆ ಮುಖ್ಯ ಕಾರಣ ಬಸ್ಸಿನ ದರ.

ಕೃಷಿ ಉತ್ಪನ್ನಗಳನ್ನು ಸರಕುಗಳನ್ನು ನಗರ ಪ್ರದೇಶಗಳಿಗೆ ಮಾರುವುದಕ್ಕೆ ತರಬೇಕಾದರೆ ವಾಹನಗಳಿಲ್ಲದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇದರಿಂದ ಸರಕುಗಳನ್ನು ಮಧ್ಯವರ್ತಿಗಳಿಗೆ ದಲ್ಲಾಳಿಗಳಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಾರೆ. ಆರ್ಥಿಕವಾಗಿ ನಷ್ಟವನ್ನು ಅನುಭವಿಸುತ್ತಿದ್ದಾರೆ.

ನಗರಗಳು ಬೆಳೆದಂತೆ, ಜನಸಂಖ್ಯೆ ಏರುತ್ತಿದ್ದಂತೆ ಅವರಿಗೆ ಮೂಲಭೂತ ಸೌಕರ್ಯ ಒದಗಿಸುವುದು ಕಷ್ಟದ ಕೆಲಸ. ಸರ್ಕಾರ ಸಾರಿಗೆ ಅಭಿವೃದ್ಧಿ ಪಡಿಸುವುದಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಆದರೆ ಸಮರ್ಪಕ ಸಾರಿಗೆ ವ್ಯವಸ್ಥೆಯನ್ನು ಹಳ್ಳಿಗಳಿಗೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಕಾಡುಗೊಲ್ಲರಿಗೆ ಸಾರಿಗೆ ಸೌಲಭ್ಯವು ದೊರೆಯದೆ ಇರುವುದನ್ನು ಸಹ ಅವರ ಹಿಂದುಳಿಯುವಿಕೆಗೆ ಕಾರಣವಾಗಿದೆ.

೫.೬ ಶೈಕ್ಷಣಿಕ ಸ್ಥಿತಿಗತಿಗಳು


'ಶಿಕ್ಷಣವೇ ಶಕ್ತಿ' ಎಂದು ಹೇಳುವಂತೆ ಶಿಕ್ಷಣ ಮಾನವನ ನಿಪುಣತೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಮಹತ್ವಪೂರ್ಣ ಸ್ಥಾನ ಪಡೆದಿವೆ. ಶಿಕ್ಷಣ ಅಭಿವೃದ್ಧಿಯ ಮೂಲಮಂತ್ರ ಹಾಗೂ ಸಾಮಾಜಿಕ ಪರಿವರ್ತನೆಯ ಮೂಲ ಸಾಧನ. ಶಿಕ್ಷಣವನ್ನು ಅಲಕ್ಷಿಸಿ ಯಾವುದೇ ದೇಶ ಮುಂದುವರಿಯುವುದು ಸಾಧ್ಯವಿಲ್ಲ. ಶಿಕ್ಷಣವೆಂದರೆ ಪ್ರಾಣಿ ರೂಪದಲ್ಲಿರುವ ಮಾನವನನ್ನು ಮಾನವತ್ವದೆಡೆಗೆ ಒಯ್ಯುವ ಸಾಧನವಾಗಿದೆ. ಆದುದರಿಂದಲೇ ಶೈಕ್ಷಣಿಕ ಪ್ರಗತಿ ಸಾಧಿಸಿರುವ ಯಾವುದೇ ದೇಶವಾದರೂ ಅತೀ ಸುಲಭವಾಗಿ ಮುಂದುವರಿಯುತ್ತದೆ. ಇಂದು ಜಗತ್ತಿನಲ್ಲಿ ನಾವು ನೋಡುತ್ತಿರುವ ಅನೇಕ ಹಿಂದುಳಿದ ರಾಷ್ಟ್ರಗಳು ಶಿಕ್ಷಣದಲ್ಲಿ ಹಿಂದುಳಿದವುಗಳಾಗಿವೆ. ಅಕ್ಷರ ಜ್ಞಾನವಿಲ್ಲದ ಮನುಷ್ಯ ಪಶು ಸಮಾನ. ಶಿಕ್ಷಣವು ಪ್ರಜ್ಞೆಯ ಅಭಿವೃದ್ಧಿಯ, ಸಮಾಜದ ಮರುಸಂಘಟನೆಯ ಮತ್ತು ಆರ್ಥಿಕ ಅಭಿವೃದ್ಧಿಯ ಮೂಲ ಸಾಧನವಿದ್ದಂತೆ. ಆದ್ದರಿಂದಲೇ "ಶಿಕ್ಷಣ ರಕ್ಷಣೆಯಷ್ಟೇ ಮುಖ್ಯ" ಎಂದು ಖ್ಯಾತ ಶಿಕ್ಷಣ ತಜ್ಞ ಡಾ. ಎಚ್. ನರಸಿಂಹಯ್ಯ ಹೇಳುತ್ತಾರೆ".[೧೭] ಅಂತೆಯೇ ಶಿಕ್ಷಣದ ಪಾತ್ರವನ್ನು ಸಮರ್ಥವಾಗಿ ಮನಗಂಡಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಶಿಕ್ಷಣವನ್ನು "ಪ್ರಜ್ಞೆಯ, ಅಭಿವೃದ್ಧಿಯ ಮತ್ತು ಸಮಾಜದ ಮರುಸಂಘಟನೆಯ ಮೂಲ ಸಾಧನ"[೧೮] ಎಂದು ಕರೆದಿದ್ದರು. ಡಾ. ಬಿ.ಆರ್. ಅಂಬೇಡ್ಕರ್‌ರು "ಶಿಕ್ಷಣದಿಂದ ಮಾತ್ರ ಶೋಷಣೆ, ನಿರ್ಮೂಲನೆ, ಸಾಧ್ಯವೆಂದು ತಿಳಿಸಿದ್ದರು. ಅವರು ಹೇಳುವಂತೆ ಶಿಕ್ಷಣವೊಂದೇ ದಲಿತರನ್ನು ಮೇಲಕ್ಕೆತ್ತುವ ಸಾಧನ. ಓದು, ಓದು, ಓದು, ಎಡೆಬಿಡದೆ ಓದು ಮತ್ತು ಆಳವಾದ ಚಿಂತನೆ ನಮ್ಮ ಬುದ್ಧಿವಂತಿಕೆಯನ್ನು ಹೆಚ್ಚಿಸಬೇಕು. ವೈಚಾರಿಕವಾಗಿ ಚಿಂತಿಸಬೇಕು. ಆಗ ಮಾತ್ರ ದಲಿತರು ಮೇಲಕ್ಕೆ ಬರಲು ಸಾಧ್ಯವಾಗುತ್ತದೆ"[೧೯] ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಯಾವುದೇ ದೇಶದ ಅಭಿವೃದ್ಧಿಯು

ಅಲ್ಲಿನ ಶಿಕ್ಷಣವನ್ನು ಅವಲಂಬಿಸಿರುತ್ತದೆ. ಈ ಕಾರಣದಿಂದಲೇ ವಿಶ್ವ ಅಭಿವೃದ್ಧಿ ವರದಿಯು ಪ್ರಸ್ತುತ ಪಡಿಸಿರುವ ದೇಶದ "ಅಭಿವೃದ್ಧಿಯ ಮಾನದಂಡಗಳಾಗಿರುವ ಮಾನವ ಅಭಿವೃದ್ಧಿ ಸೂಚಿ ಹಾಗೂ ಜೀವನದ ಭೌತಿಕ ಅನೂಸೂಚಿಯಲ್ಲಿ ಶಿಕ್ಷಣವನ್ನು ಪ್ರಮುಖ ಸೂತ್ರವನ್ನಾಗಿ ಬಳಸಿಕೊಂಡಿದೆ. ಈ ಮೂಲಕ ಮಕ್ಕಳು ಒಂದು ನಿರ್ದಿಷ್ಟ ವಯಸ್ಸಿನವರೆಗೆ ಶಾಲೆ ಕಲಿಯಬೇಕಾಗುತ್ತದೆ. ಇದಕ್ಕಾಗಿ ಭಾರತ ಸರ್ಕಾರವು ಸಂವಿಧಾನದ ನಾಲ್ಕನೆಯ ಪರಿಚ್ಛೇದದ ನಿರ್ದೇಶಕರ ಸೂತ್ರಗಳಲ್ಲಿ ಬರುವ ೪೫ನೇ ವಿಧಿಯ ಪ್ರಕಾರ ೬ ರಿಂದ ೧೪ ವರ್ಷದ ವಯೋಮಾನದವರೆಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಕ್ರಮವಹಿಸುತ್ತಿದೆ".[೨೦] ಇದರಿಂದಾಗಿ ಮಾನವನಿಗೆ ಸಾಕ್ಷರತೆ ಎಷ್ಟೊಂದು ಅವಶ್ಯಕತೆ ಎಂದು ತಿಳಿದುಬರುತ್ತದೆ.

ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದು ಶಿಕ್ಷಣ ನೀಡಲು ಪ್ರಯತ್ನಿಸುತ್ತಿದ್ದರೂ ಸಹ, ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಕೆಲವು ಸಮುದಾಯಗಳಿಗೆ ಸಾಧ್ಯವಾಗುತ್ತಿಲ್ಲ. ಅಂತ ಸಮುದಾಯಗಳಲ್ಲಿ ಕಾಡುಗೊಲ್ಲರ ಸಮುದಾಯವು ಒಂದು. ಇವರಲ್ಲಿ ಶಿಕ್ಷಣದ ಕೊರತೆ ಬಹಳಷ್ಟು ಇರುವುದು ಕಂಡುಬರುತ್ತದೆ. ವೆರಿಯರ್ ಎಲ್ವಿನ್ ಅವರು ಹೇಳುವಂತೆ "ಬೆಳೆಯುತ್ತಿರುವ ಗಂಡು ಮತ್ತು ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸಿಕೊಡುವುದು, ಮೂಲದಲ್ಲಿ ಅವರ ಅರ್ಥವ್ಯವಸ್ಥೆಗೆ ಮತ್ತು ಸಾಂಪ್ರದಾಯಿಕ ಶ್ರಮವಿಭಜನೆಗೆ ಅಡ್ಡ ಬರುತ್ತದೆ"[೨೧] ಎಂಬ ಹೇಳಿಕೆಯಲ್ಲಿ ಸತ್ಯಾಂಶವಿದೆ. ಈ ಹೇಳಿಕೆಗೆ ಅನುಗುಣವಾಗಿ ಕಾಡುಗೊಲ್ಲರಲ್ಲಿ ಹೆಚ್ಚಿನ ಜನರು ಅನಕ್ಷರಸ್ಥರ ಸಾಲಿಗೆ ಇರುವುದು ಕ್ಷೇತ್ರಕಾರ್ಯದಿಂದ ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಇವರು ಆರ್ಥಿಕವಾಗಿ ಸಬಲರಾಗಿರದೇ ಇರುವುದಾಗಿದೆ. ತಮ್ಮ ದೈನಂದಿನ ಹೊಟ್ಟೆಪಾಡಿಗಾಗಿ ಮಕ್ಕಳಿಗೆ ಶಾಲೆ ಬಿಡಿಸಿ ಕೂಲಿ ಕೆಲಸಕ್ಕೆ ಕಳುಹಿಸುವುದನ್ನು ಕಾಣುತ್ತೇವೆ.

ಕ್ಷೇತ್ರಕಾರ್ಯ ಮಾಡಿದ ನೆಲೆಗಳಲ್ಲಿ ಕಾಡುಗೊಲ್ಲರು ಹೊಂದಿರುವ ಸಾಕ್ಷರತೆ ಪ್ರಮಾಣವನ್ನು ಈ ಮುಂದಿನ ಕೋಷ್ಟಕ ಹಾಗೂ ವೃತ್ತಚಿತ್ರದಲ್ಲಿ ಕಾಣಬಹುದಾಗಿದೆ.

ವೃತ್ತಚಿತ್ರ ೫.೩ ಕಾಡುಗೊಲ್ಲರ ಸಾಕ್ಷರರ್ಹರ ಶೇಕಡವಾರು ಪ್ರಮಾಣ






ಕೋಷ್ಟಕ ೫.೧೯ ಕಾಡುಗೊಲ್ಲರ ನೆಲೆಗಳಲ್ಲಿಯ ಸಾಕ್ಷರತೆಯ ಪ್ರಮಾಣ

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬ	ಸಾಕ್ಷರ ಅರ್ಹರು			ಸಾಕ್ಷರಸ್ಥರು			ಅನಕ್ಷರರು		
					ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೬೨	೧೫೩	೧೪೮	೩೦೧	೯೦	೬೪	೧೫೪	೬೩	೮೪	೧೪೭
			ಜೋಗಿಹಟ್ಟಿ	೪೬	೧೨೫	೧೧೦	೨೩೫	೭೦	೪೨	೧೧೨	೫೫	೬೮	೧೨೩
			ಯಲಗಟ್ಟಿ ಗೊಲ್ಲರಹಟ್ಟಿ	೭೨	೧೮೨	೧೪೯	೩೩೧	೭೨	೫೦	೧೨೨	೧೧೦	೯೯	೨೦೯
			ಬೆಳಗೆರೆ ಗೊಲ್ಲರಹಟ್ಟಿ	೧೯೪	೪೫೨	೩೮೫	೮೩೭	೧೦೮	೫೭	೧೬೫	೩೪೪	೩೨೮	೬೭೨
೨		ಮೊಳಕಾಲ್ಮೂರು	ಗುಂಡ್ಲೂರು	೧೦೫	೨೫೨	೨೪೯	೫೦೧	೧೨೪	೯೭	೨೨೧	೧೨೮	೧೫೨	೨೮೦
			ಒಟ್ಟು	೪೭೯	೧೧೬೪	೧೦೪೧	೨೨೦೫	೪೬೪	೩೧೦	೭೭೪	೭೦೦	೭೩೧	೧೪೩೧

ಕೋಷ್ಠಕ ೫.೧೯ ರಲ್ಲಿ ತೋರಿಸಿದಂತೆ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ. ೫.೨೦ರಷ್ಟು ೦-೪ ವರ್ಷದ ಒಳಗಡೆ ವಯೋಮಾನದಲ್ಲಿರುವರಾಗಿದ್ದು ಉಳಿದಂತೆ ಶೇ. ೯೪.೭೯ರಷ್ಟು ಜನರು ಸಾಕ್ಷರ ಅರ್ಹರು ಇದ್ದು, ಇದರಲ್ಲಿ ಶೇ. ೩೫.೧೧ರಷ್ಟು ಸಾಕ್ಷರಸ್ಥರಿದ್ದು, ಉಳಿದ ಶೇ. ೬೪.೯೮ರಷ್ಟು ಅನಕ್ಷರಸ್ಥರಿದ್ದಾರೆ. ಕ್ಷೇತ್ರಾಧ್ಯಯನದ ನೆಲೆಗಳನ್ನು ಗಮನಿಸಿದಾಗ ಹೆಚ್ಚಿನ ಸಾಕ್ಷರತೆಯ ಪ್ರಮಾಣ ಶೇ. ೨೯ ರಷ್ಟು ಬೆಳಗೆರೆಯಲ್ಲಿ ಕಂಡುಬರುತ್ತದೆ. ಯಲಗಟ್ಟಿಯಲ್ಲಿ ಶೇ. ೨೧ ರಷ್ಟು, ಹನುಮಂತನ ಹಳ್ಳಿಯಲ್ಲಿ ಶೇ. ೨೦ರಷ್ಟು, ಜೋಗಿಹಟ್ಟಿ ಯಲ್ಲಿ ಶೇ. ೧೬ ರಷ್ಟು ಹಾಗೂ ಗುಂಡ್ಲೂರಿನಲ್ಲಿ ಶೇ. ೧೪ ರಷ್ಟು ಸಾಕ್ಷರತೆ ಇರುವುದನ್ನು ಕಾಣುತ್ತೇವೆ. ಲಿಂಗವಾರು ಸಾಕ್ಷರತೆಯ ಪ್ರಮಾಣದಲ್ಲಿ ಪುರುಷರು ಶೇ. ೬೦ರಷ್ಟು ಸ್ತ್ರೀಯರು ಶೇ. ೪೦ ರಷ್ಟು ಕಂಡು ಬಂದಿದ್ದಾರೆ. ಪುರುಷರಗಿಂತ ಸ್ತ್ರೀಯರ ಸಾಕ್ಷರತೆ ಪ್ರಮಾಣ ಕಡಿಮೆ ಇರುವುದನ್ನು ಕಾಣಬಹುದು.


ಯಲಗಟ್ಟಿಯಲ್ಲಿ ಶೇ. ೪೬ರಷ್ಟು ಜನರು ಅನಕ್ಷರಸ್ಥರಿದ್ದರೆ, ಶೇ. ೨೦ ರಷ್ಟು ಬೆಳಗೆರೆ, ಶೇ. ೧೫ ರಷ್ಟು ಜೋಗಿಹಟ್ಟಿ, ಶೇ. ೧೦ ರಷ್ಟು ಹನುಮಂತನಹಳ್ಳಿ ಹಾಗೂ ಶೇ. ೯ ರಷ್ಟು ಗುಂಡ್ಲೂರಿನಲ್ಲಿದ್ದಾರೆ. ಒಟ್ಟಾರೆ ಅನಕ್ಷರಸ್ಥರಲ್ಲಿ ಶೇ. ೪೯ ರಷ್ಟು ಪುರುಷರು ಮತ್ತು ಶೇ. ೫೧ ರಷ್ಟು ಮಹಿಳೆಯರಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕಾಡುಗೊಲ್ಲರಲ್ಲಿ ಮಹಿಳೆಯರು ವಿದ್ಯಾಭ್ಯಾಸ ಮಾಡುವುದು ತುಂಬಾ ಕಡಿಮೆ ಪ್ರಮಾಣದಲ್ಲಿದ್ದು. ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ತುಂಬಾ ಅವಶ್ಯವಾಗಿದೆ ಎಂಬುದನ್ನು ೫.೩ರ ಲಂಬಚಿತ್ರದಲ್ಲಿ ಕಾಣಬಹುದು.

ಲಂಬಚಿತ್ರ ೫.೨ ಕಾಡುಗೊಲ್ಲರ ಲಿಂಗವಾರು ಸಾಕ್ಷರರ್ಹರ ಪ್ರಮಾಣ



ಕಾಡುಗೊಲ್ಲರ ವಿವಿಧ ರೀತಿಯ ವಿದ್ಯಾಭ್ಯಾಸ ಮಟ್ಟವನ್ನು ಹೊಂದಿದ್ದು ಅವುಗಳು ಈ ಕೆಳಗಿನಂತಿವೆ.

ಮುಂದಿನ ಕೋಷ್ಟಕ ೫.೨೦ರಲ್ಲಿ ಕಾಡುಗೊಲ್ಲರ ಒಟ್ಟು ಸಾಕ್ಷರರ್ಹರ ಶೇ. ೩೫.೧೧ರಷ್ಟು ಜನರು ಸಾಕ್ಷರಸ್ಥರಿದ್ದಾರೆ. ಇವರುಗಳು ವಿವಿಧ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಒಟ್ಟಾರೆ ಸಾಕ್ಷರಸ್ಥರಲ್ಲಿ ಪ್ರಾಥಮಿಕ



ಕೋಷ್ಟಕ ೫.೨೦. ಕಾಡುಗೊಲ್ಲರ ನೆಲೆಗಳ ಶೈಕ್ಷಣಿಕ ಹಂತಗಳು

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬ	ಶೈಕ್ಷಣಿಕ ಮಟ್ಟ: ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ		
					ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೬೨	೧೫	೨೨	೩೭	೬೬	೩೮	೧೦೪	೯	೪	೧೩
			ಜೋಗಿಹಟ್ಟಿ	೭೨	೨೪	೧೬	೪೦	೧೪	೧೮	೩೨	೨೦	೧೪	೩೪
			ಯಲಗಟ್ಟಿ ಗೊಲ್ಲರಹಟ್ಟಿ	೧೯೪	೧೪	೧೨	೨೬	೧೩	೯	೨೨	೨೮	೨೦	೪೮
			ಬೆಳಗೆರೆ ಗೊಲ್ಲರಹಟ್ಟಿ	೧೦೫	೨೯	೩೦	೫೯	೨೩	೨೬	೪೯	೪೪	೨೬	೭೦
೨		ಮೊಳಕಾಲ್ಮೂರು	ಗುಂಡ್ಲೂರು	೪೬	೧೭	೧೦	೨೭	೧೫	೧೭	೩೨	೨೨	೧೩	೩೫
			ಒಟ್ಟು	೪೭೯	೯೯	೯೦	೧೮೯	೧೩೧	೧೦೮	೨೩೯	೧೨೩	೭೭	೨೦೦

ಸಂ.	ಜಿಲ್ಲೆ	ತಾಲೂಕು	ನೆಲೆಗಳು	ಕುಟುಂಬ	ಶೈಕ್ಷಣಿಕ ಮಟ್ಟ: ಡಿಪ್ಲೋಮಾ			ಪದವಿಪೂರ್ವ			ಪದವಿ			ಸ್ನಾತಕೋತ್ತರ			ಇತರೆ		
					ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚಿತ್ರದುರ್ಗ	ಚಳ್ಳಕೆರೆ	ಹನುಮಂತನಹಳ್ಳಿ	೬೨	–	–	–	–	–	–	–	–	–	–	–	–	–	–	–
			ಜೋಗಿಹಟ್ಟಿ	೭೨	–	–	–	೧೦	೨	೧೨	೩	–	೩	–	–	–	೧	–	೧
			ಯಲಗಟ್ಟಿ ಗೊಲ್ಲರಹಟ್ಟಿ	೧೯೪	೩	–	೩	೩೦	೧೦	೪೦	೧೬	೫	೨೧	–	–	–	೪	೧	೫
			ಬೆಳಗೆರೆ ಗೊಲ್ಲರಹಟ್ಟಿ	೧೦೫	–	–	–	೧೧	೧೧	೨೨	೧೧	೨	೧೩	೧	–	೧	೫	೨	೭
೨		ಮೊಳಕಾಲ್ಮೂರು	ಗುಂಡ್ಲೂರು	೪೬	೪	–	೪	೬	೧	೭	೩	–	೩	–	–	–	೩	೧	೪
			ಒಟ್ಟು	೪೭೯	೭	–	೭	೫೭	೨೪	೮೧	೩೩	೭	೪೦	೧	–	೧	೧೩	೪	೧೭

ಹಂತದಲ್ಲಿ ಶೇ. ೨೪.೫೧ ಇದರಲ್ಲಿ (ಗಂಡು ಶೇ. ೫೨.೩೮ರಷ್ಟು ಮತ್ತು ಹೆಣ್ಣು ಶೇ. ೪೭.೬೧)ರಷ್ಟು, ಮಾಧ್ಯಮಿಕ ಹಂತದಲ್ಲಿ ಶೇ. ೩೦.೯೯ (ಗಂಡು ಶೇ. ೫೪.೮೧ ಮತ್ತು ಹೆಣ್ಣು ಶೇ. ೪೫.೧೮)ರಷ್ಟು, ಪ್ರೌಢಶಾಲೆ ಹಂತದಲ್ಲಿ ಶೇ. ೨೫.೯೪ (ಗಂಡು ಮತ್ತು ಹೆಣ್ಣು ಕ್ರಮವಾಗಿ ಶೇ. ೬೧.೫ ಹಾಗೂ ಶೇ. ೩೮.೫)ರಷ್ಟು, ಡಿಪ್ಲೋಮಾದಲ್ಲಿ ಶೇ. ೦.೯೦ (ಇದರಲ್ಲಿ ಸಂಪೂರ್ಣವಾಗಿ ಗಂಡಸರೇ ಆಗಿದ್ದಾರೆ)ರಷ್ಟು, ಪದವಿಪೂರ್ವ ಹಂತದಲ್ಲಿ ಶೇ. ೧೦.೫೦ (ಇದರಲ್ಲಿ ಗಂಡು ಶೇ. ೭೦.೩೭ ಹಾಗೂ ಹೆಣ್ಣು ಶೇ. ೨೯.೬೨)ರಷ್ಟು, ಪದವಿ ಹಂತದಲ್ಲಿ ಶೇ. ೫.೧೮ (ಗಂಡು ಶೇ. ೮೨.೫ ಹಾಗೂ ಹೆಣ್ಣು ಶೇ. ೧೭.೫)ರಷ್ಟು, ಸ್ನಾತಕೋತ್ತರ ಹಂತದಲ್ಲಿ ಶೇ. ೦.೧೨ (ಇದರಲ್ಲಿ ಸಂಪೂರ್ಣ ಪುರುಷರಿದ್ದಾರೆ)ರಷ್ಟು, ಹಾಗೂ ಇತರೆ ಶಿಕ್ಷಣದಲ್ಲಿ ಶೇ. ೨.೨೦ (ಇದರಲ್ಲಿ ಗಂಡು ಮತ್ತು ಹೆಣ್ಣು ಕ್ರಮವಾಗಿ ಶೇ. ೭೬.೪೭ ಹಾಗೂ ಶೇ. ೨೩.೫೨)ರಷ್ಟು ಜನ ತೊಡಗಿಕೊಂಡಿದ್ದಾರೆ. ಈ ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಕಾಡುಗೊಲ್ಲರ ಸಮುದಾಯವು ಪ್ರೌಢಶಿಕ್ಷಣದವರೆಗೆ ಉತ್ತಮ ರೀತಿಯಲ್ಲಿ ಶಿಕ್ಷಣ ಪಡೆದು ನಂತರ ಪದವಿಪೂರ್ವ, ಪದವಿಯೇತರ ಹಾಗೂ ಇತರೆ ಶಿಕ್ಷಣದಲ್ಲಿ ಹೇಳಿಕೊಳ್ಳುವಷ್ಟು ಸಾಧನೆ ಮಾಡಿರುವುದು ಕಂಡುಬರುವುದಿಲ್ಲ. ಮಹಿಳೆಯರ ಸಾಕ್ಷರತೆಯ ಮಟ್ಟವು ಗಂಡಸರಿಗೆ ಹೋಲಿಸಿ ನೋಡಿದಾಗ ತುಂಬಾ ಕಡಿಮೆ ಪ್ರಮಾಣದಲ್ಲಿ ಇರುವುದು ಕಾಣುತ್ತೇವೆ.

ಕಾಡುಗೊಲ್ಲರಲ್ಲಿ ಕಂಡುಬರುವ ಸಾಕ್ಷರತೆ ಪ್ರಮಾಣ ಹಾಗೂ ಶೈಕ್ಷಣಿಕ ಮಟ್ಟಗಳಲ್ಲಿನ ಪ್ರಮಾಣಗಳಿಂದ ತಿಳಿದುಬರುವ ಅಂಶವೆಂದರೆ ಇವರಲ್ಲಿ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳು ಹೆಚ್ಚು ಪ್ರಬಲವಿಲ್ಲದಿರುವುದು. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲರಲ್ಲದ ಮತ್ತು ನಗರಗಳಿಂದ ದೂರ ಇರುವುದರಿಂದ ಸದಾ ಅಲೆಮಾರಿತನದಲ್ಲಿಯೆ ಕಾಲ ಕಳೆಯುತ್ತಿದ್ದುದರಿಂದ ಶಿಕ್ಷಣದ ಬಗ್ಗೆ ಒಲವು ತೋರಿಸಿಲ್ಲ. ಹೀಗಾಗಿ ಈ ಸಮುದಾಯದ ಸಾಕ್ಷರತೆಯಲ್ಲಿ ಹಿಂದುಳಿಯಲು ಕಾರಣವಾಗಿದೆ. ಸಮುದಾಯದ ಶೈಕ್ಷಣಿಕ ಅಭಿವೃದ್ಧಿಯ ಕಡೆಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕಾದದ್ದು ತುಂಬಾ ಅವಶ್ಯಕವಿದೆ.

ಅಡಿಟಿಪ್ಪಣಿಗಳು

೧. ಡಾ. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸಬುಗಳು, ೨೦೦೨, ಪು. ೧

೨. ರಾಮನ್ ಬಿ.ಎಸ್., ಭಾರತದ ಆರ್ಥಿಕ ಅಭಿವೃದ್ಧಿ, ೨೦೦೫, ಪು. ೩೭

೩. ಡಾ. ಯರ್ರೆಪ್ಪ ಡಿ., ಅಲೆಮಾರಿ ಕುರುಬ, ೨೦೦೮, ಪು. ೯೩

೪. Hereskouits., Melville J., Cultural Anthropology, 1974, P.143

೫. ಎಚ್ಚಾರ್ಕೆ., ಭಾರತದ ಆರ್ಥಿಕ ವ್ಯವಸ್ಥೆ, ೧೯೯೬, ಪು.೧೫೭

೬. ಕೃಷಿ ಉತ್ಪಾದನೆ ೧೯೯೪-೯೫, ೧೯೯೫, ಪು.೩೪

೭. ಗುರುಲಿಂಗಯ್ಯ ಎಂ., ವಿ. ನಾಗಪ್ಪ., ಕಾಡುಗೊಲ್ಲ, ೨೦೦೮, ಪು. ೧೧೨

೮. Stepen Fuches., The Aboriginal Tribes of India, 1970, P. 32

೯. Singh and Sadhu., Ibid, 1968, P.38

೧೦. ಸುಚಿತಾನಂದ ಕೆ. ಮಲ್ಕಾಪುರೆ., ಬೀದರ್ ಜಿಲ್ಲೆಯ ಬೇಡ ಬುಡಕಟ್ಟು ಒಂದು ಅರ್ಥಶಾಸ್ತ್ರೀಯ ಅಧ್ಯಯನ, ೨೦೦೧, ಪು. ೧೨೬

೧೧. ಪ್ರೊ. ಕಾಳೇಗೌಡ ನಾಗವಾರ ಮತ್ತು ಎನ್. ಹುಚ್ಚಪ್ಪ ಮಾಸ್ತರ್., ಗಿರಿಜನ ಸಂಸ್ಕೃತಿ, ೨೦೦೦, ಪು. ೭

೧೨. ಪ್ರೊ. ಕಾಳೇಗೌಡ ನಾಗವಾರ (ಲೇ). ಕಾಡುಗೊಲ್ಲರ ಬದುಕಿನ ಅರ್ಥವ್ಯವಸ್ಥೆ (ಲೇಖನ), ಆದಿವಾಸಿ ಆಖ್ಯಾನ, ೨೦೦೬, ಪು. ೩೬೭-೩೬೮

೧೩. ಕಲ್ಲೂರು ಎಂ.ಎಸ್., ಕೃಷಿ ಅರ್ಥಶಾಸ್ತ್ರ, ೨೦೦೦, ಪು. ೧೨೦

೧೪. ಅದೇ ಪು. ೧೨೧

೧೫. ಎಚ್ಚಾರ್ಕೆ., ಭಾರತದ ಆರ್ಥಿಕ ವ್ಯವಸ್ಥೆ, ೧೯೯೬, ಪು. ೨೫೮

೧೬. ಸುಚಿತಾನಂದ ಕೆ. ಮಲ್ಕಾಪುರೆ., ಬೀದರ್ ಜಿಲ್ಲೆಯ ಬೇಡ ಬುಡಕಟ್ಟು ಒಂದು ಅರ್ಥಶಾಸ್ತ್ರೀಯ ಅಧ್ಯಯನ, ೨೦೦೧, ಪು. ೧೮೧

೧೭. ಎಚಾರ್ಕೆ, ಭಾರತದ ಆರ್ಥಿಕ ವ್ಯವಸ್ಥೆ, ೨೦೦೨, ಪು. ೫೧೨

೧೮. ಬಿ.ಎಸ್. ರಾಮನ್, ಭಾರತದ ಆರ್ಥಿಕ ಅಭಿವೃದ್ಧಿ, ೨೦೦೫ ಪು. ೧೬೧

೧೯. ಡಾ. ಬಿ. ಪ್ರಭಾಕರ ಶಿಶಿಲ, ಅಭಿವೃದ್ಧಿ ಮತ್ತು ಯೋಜನಾ ಅರ್ಥಶಾಸ್ತ್ರ, ೧೯೯೭, ಪು. ೩೮೬

೨೦. ಚಂದ್ರಶೇಖರ ಟಿ.ಆರ್., ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಸಾಕ್ಷರತೆ ಜಿಲ್ಲಾವಾರು, ೧೯೯೧ ಮತ್ತು ೨೦೦೦, ಸಂ-೩, ಸಂ-೧, ಪು. ೩

೨೧. Elwin V.A. New Delhi for Tribal India, 1963, P. 103

ಅಧ್ಯಾಯ ಆರು

ಕಾಡುಗೊಲ್ಲರ ಮಹಿಳೆ ಮತ್ತು ಆರ್ಥಿಕತೆ

೬.೧ ಕೂಲಿ

೬.೨ ವ್ಯಾಪಾರ

೬.೩ ಸ್ವ-ಸಹಾಯ ಗುಂಪುಗಳು

೬.೪ ಉಳಿತಾಯ೬.೫ ಖರ್ಚು-ವೆಚ್ಚಗಳು

೬.೫ ಖರ್ಚು-ವೆಚ್ಚಗಳು

೬.೬ ಪಶುಪಾಲನೆ

ಅಧ್ಯಾಯ ೬

ಕಾಡುಗೊಲ್ಲರ ಮಹಿಳೆ ಮತ್ತು ಆರ್ಥಿಕತೆ

ಮೂಲವನ್ನು ಪರಿಶೀಲಿಸುತ್ತಾ ಹೋದಂತೆಲ್ಲಾ ಹಲವು ಹೊಸ ವಿಷಯ ಗೋಚರವಾಗುತ್ತಿದ್ದು, ಕೃಷಿಯ ಮೂಲ ಜನಕಳು 'ಸ್ತ್ರೀ'ಯಾಗಿದ್ದು ಬೇಟೆಯನ್ನು ಮಾಡಲು ಕೂಡ ಪುರುಷರಿಗೆ ಸಮಾನವಾಗಿ ಹೋಗುತ್ತಿದ್ದಳು ಎನ್ನುವುದಕ್ಕೆ ಹಲವಾರು ಪುರಾವೆಗಳಿವೆ. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಪೂಜ್ಯ ಮನೋಭಾವದಿಂದ ಕಾಣುತ್ತಿದ್ದು, ಸಾಮಾಜಿಕ ಸ್ಥರಗಳ ವಿನ್ಯಾಸದಲ್ಲಿ ಗಂಡು-ಹೆಣ್ಣು ಎನ್ನುವ ಶ್ರೇಣೀಕರಣವಿದ್ದು ಅಲ್ಲಿ ಕೃಷಿ, ಬೇಟೆ, ಪಶುಪಾಲನೆ ಮೂಲತಃ ಜನ್ಮತಾಳಿದ್ದು ಮಹಿಳೆಯಿಂದಲೆ ಎಂದರೆ ತಪ್ಪಾಗಲಿಲಕ್ಕಿಲ್ಲ. ಮಾನವ ವಿಕಾಸದಲ್ಲಿ ಪುರುಷ ಹಾಗೂ ಮಹಿಳೆಯರು ಬೇಟೆಯಾಡುವುದಕ್ಕೆ ಹೋಗುತ್ತಿದ್ದು ಪ್ರಾಣಿಗಳ ಮಾಂಸವನ್ನು ಬೇಯಿಸಿ ತಿನ್ನುತ್ತಿದ್ದರು. ಬೆಂಕಿಯ ಆವಿಷ್ಕಾರವಾದಾಗ ಪ್ರಾಣಿಗಳ ಮಾಂಸವನ್ನು ಬೇಯಿಸಿ ತಿನ್ನಲಾರಂಭಿಸಿದ್ದರು. ಬೇಟೆಯಲ್ಲಿ ಪುರುಷನಷ್ಟೇ ನಿಸ್ಸೀಮಳಾಗಿದಳು. ಬೇಟೆಯಾಡಿದ ಮಾಂಸವನ್ನು ಬೇಯಿಸಿ ತಿನ್ನುವುದಕ್ಕೆ ಪ್ರಾರಂಭಿಸಿದಾಗ ಮಹಿಳೆಯು ಬೇಟೆಯಾಡುವುದನ್ನು ಬಿಟ್ಟು ಮನೆಯಲ್ಲಿ ಕೆಲಸ ಮಾಡುವುದನ್ನು ಪ್ರಾರಂಭಿಸಿದಳು. ಹಣ್ಣು ಹಾಗೂ ಗಡ್ಡೆ-ಗೆಣಸುಗಳನ್ನು ತಿಂದು ಎಸೆದಾಗ ಅವು ಮೊಳಕೆ ಯೊಡೆದು ಸಸಿಯಾಗಿ ಕಂಡ ಜ್ಞಾನವು ಕೃಷಿಯ ಆವಿಷ್ಕಾರಕ್ಕೆ ನಾಂದಿಯಾಯಿತು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಮೆಸೋಪೊಟೋಮಿಯಾದ ಟೈಗ್ರೀಸ್ ಮತ್ತು ಯಾಪ್ರಟಿಸ್ ನದಿ ದಂಡೆಗಳ ಮೇಲಿರುವ ನಾಗರಿಕತೆ ಸಾಕ್ಷಿಯಾಗಿದೆ. ಮಹಿಳೆ ಮತ್ತು ಪುರುಷರ ಗುಂಪುಗಳು ಬೇಟೆಯಾಡುವುದಕ್ಕೆ ಜೊತೆಯಾಗಿಯೆ ಹೋಗುತ್ತಿದ್ದರು. ಇಲ್ಲಿ ಶ್ರಮವಿಭಜನೆಯಾಗದೆ ಗಡ್ಡೆ-ಗೆಣಸು, ಹಣ್ಣು-ಹಂಪಲು ಮತ್ತು ಚಿಕ್ಕ-ಪುಟ್ಟ ಪ್ರಾಣಿಗಳನ್ನು ಹುಡುಕುತ್ತ ಅಲೆದಾಡುತ್ತಾ ಹೋಗುತ್ತಿದ್ದರು. ಕಾಲಾನಂತರ ಮಹಿಳೆ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತುಕೊಂಡರೆ, ಪುರುಷ ಬೇಟೆಯಾಡುವುದಕ್ಕೆ ಹೋಗತೊಡಗಿದ್ದ. ಹೀಗೆ

[illegible]

[illegible]

[illegible]

ಶ್ರಮವಿಭಜನೆಯಾದ ನಂತರ ಮನೆಯಲ್ಲಿ ಗಡ್ಡೆ-ಗೆಣಸುಗಳು, ಹಣ್ಣು-ಹಂಪಲುಗಳನ್ನು ಬಿಸಾಕಿದ್ದು ಅದರಿಂದ ಸಸಿಯಾಗ ತೊಡಗಿದವು. ಸಸಿಗಳನ್ನು ಬೆಳೆಸುವುದು ಹೆಣ್ಣು ಮಕ್ಕಳ ಕೆಲಸವಾದರೆ, ಬೇಟೆಯಾಡುವುದು ಪುರುಷರ ವೃತ್ತಿಯಾಗಿತ್ತು. "ಕೃಷಿ ಕಾರ್ಯ ಸ್ತ್ರೀಯರ ಆವಿಷ್ಕಾರ. ಇದರ ಆವಿಷ್ಕಾರದ ಆರಂಭದ ದಿನಗಳಲ್ಲಿ ವ್ಯವಸಾಯದ ಕೆಲಸ ಪೂರ್ತಿಯಾಗಿ ಸ್ತ್ರೀಯರದ್ದೆ ಆಗಿತ್ತು. ಈ ವಿಚಾರದಲ್ಲಿ ಗಂಡಸರ ಸಹಾಯ ಪ್ರಯತ್ನ ಎಳ್ಳಷ್ಟು ಇರಲಿಲ್ಲ. ಗಂಡಸರು ಬೇಟೆಯನ್ನು ಅರಸುತ್ತಾ ಕಾಡಿನಲ್ಲಿ ಅಲೆಯುತ್ತಿದ್ದರು. ಸ್ತ್ರೀಯರು ವಾಸಸ್ಥಳದ ಸುತ್ತಮುತ್ತ ನೆಲ ಆಗೆದು ಧಾನ್ಯ ಬೆಳೆಯುವ ಪ್ರಯತ್ನ ಮಾಡುತ್ತಿದ್ದರು. ಆದರೆ ನಂತರ ಸದಾ ಕಾಲದವರೆಗೆ ವ್ಯವಸಾಯ ಕೆಲಸ ಸ್ತ್ರೀಯರ ಕೆಲಸವಾಗಿಯೆ ಉಳಿತೆಂದು ಭಾವಿಸುವಂತಿಲ್ಲ".[೧] ಹೀಗೆ ಸ್ತ್ರೀಯರಿಂದ ಕೃಷಿಯ ಆವಿಷ್ಕಾರವಾಯಿತು. "ಕಾಲಾನಂತರ ಪ್ರಾಣಿಗಳನ್ನು ಸಾಕುವುದು ಹಾಗೂ ಕೃಷಿ ಕೆಲಸಗಳು ಸ್ತ್ರೀಯರಿಂದ ಪುರುಷರಿಗೆ ವರ್ಗಾವಣೆಯಾಗುತ್ತದೆ ಪಶುಪಾಲನೆ ಹೇಗೆ ಆರಂಭವಾಯಿತು? ಎನ್ನುವುದಕ್ಕೆ ಮನುಷ್ಯ ಬೇಟೆಗಾಗಿ ಕಾಡಿನಲ್ಲಿ ಅಲೆಯುವಾಗ ಕ್ರೂರವಲ್ಲದ ಪ್ರಾಣಿಗಳ ಮರಿಗಳನ್ನು ಕೊಲ್ಲದೆ ತಂದು ಪಾಲನೆ ಮಾಡುವುದರಿಂದ ಪಶುಪಾಲನೆ ಆರಂಭ ವಾಗಿದೆ. ಶಿಕಾರಿ ಮಾಡುವ ಜವಬ್ದಾರಿ ಯಾರದಾಗಿದ್ದಿತು. ಪುರುಷರದ್ದೋ? ಸ್ತ್ರೀಯರಿದ್ದೋ? ಎನ್ನುವುದನ್ನು ನಾವು ಈಗಾಗಲೇ ನೋಡಿದ್ದೇವೆ. ಈ ಜವಾಬ್ದಾರಿ ಸ್ತ್ರೀಯರದ್ದಾಗಿರಲಿಲ್ಲ. ಭರ್ಚಿಯ ಆವಿಷ್ಕಾರ ಪೂರ್ತಿ ಯಾಗಿ ಪುರುಷರದ್ದಾಗಿದ್ದಿತು".[೨] ಪಶುಪಾಲನೆ ಮತ್ತು ಕೃಷಿ ಕೆಲಸ ಪುರುಷರದ್ದೇ ಆಯಿತು. "ಕೃಷಿ ಕೆಲಸ ಸ್ತ್ರೀಯರಿಂದ ಆವಿಷ್ಕರಿಸಲ್ಪಟ್ಟಿದ್ದರು ಎತ್ತುಗಳನ್ನು ಹೂಡಿ ನೇಗಿಲನಿಂದ ಉಳುಮೆ ಮಾಡಿ ದೊಡ್ಡ ಜಮೀನುಗಳ ವ್ಯವಸಾಯ ಆರಂಭವಾದ ಮೇಲೆ ಸ್ತ್ರೀಯರ ಕೈಯಿಂದ ಇದು ಪುರುಷರ ಕೈಯಗೆ ಬಂದಿತು. ಪೃಥ್ವಿಯ ಪ್ರಾಚೀನ ಇತಿಹಾಸ ತಿಳಿಯುವಲ್ಲಿ ಈ ವಿಚಾರಗಳು ಎಷ್ಟು ಅವಶ್ಯಕ"[೩] ಎಂಬುದನ್ನು ಗಮನಿಸ ಬೇಕಾಗುತ್ತದೆ. ಕೃಷಿ ಆರಂಭವಾಗಿದ್ದು ಸ್ತ್ರೀಯರಿಂದಲೇ ಎನ್ನುವುದನ್ನು ಗಮನಿಸಬಹುದು. ರಾಬರ್ಟ್ ಭಿಪಾಲ್ಡ ಎನ್ನುವರು ಅಮೇರಿಕಾದಲ್ಲಿನ ಒಂದು ಆದಿವಾಸಿ ಗುಂಪಿನ ಹೆಸರು ಚರೋರೆ. ಅವರ ಒಂದು ದಂತ ಕಥೆಯ ಪ್ರಕಾರ "ಒಬ್ಬ ಸ್ತ್ರೀ ಅರಣ್ಯದಲ್ಲಿ ಸಸ್ಯವನ್ನು ಹುಡುಕಿದಳು. ಸಾಯುವಾಗ ಆ ಸ್ತ್ರೀಯು ತಾನು ಸತ್ತ ಮೇಲೆ ತನ್ನ ದೇಹವನ್ನು ನೆಲದ ಮೇಲಿಂದ ಎಳೆದುಕೊಂಡು ಹೋಗಬೇಕೆಂದು ಹೇಳಿದ್ದಳು. ಅವಳ ದೇಹ ಎಲ್ಲಲ್ಲಿ ನೆಲವನ್ನು ಸ್ಪರ್ಶಿಸಿತೋ ಅಲ್ಲೆಲ್ಲಾ ಬೆಳೆ ಸಮೃದ್ಧವಾಗಿ ಬೆಳೆದ್ದಿತು".[೪] ಇಷ್ಟೇ ಅಲ್ಲದೇ "ಮಾನವನ ಇತಿಹಾಸದುದ್ದಕ್ಕೂ ಪುರುಷರು ದುಡಿಯುತ್ತಿರುವುದು ಕಂಡುಬರುತ್ತದೆ. ಆರಂಭದಲ್ಲಿ ಬೇಟೆಗಾರ ಸಮಾಜದಲ್ಲಿ ದುಡಿಮೆಯ ಪರಿಕಲ್ಪನೆಯಿರಲಿಲ್ಲ. ಹೊಟ್ಟೆ ಪೋಷಣೆಗಾಗಿ ಮತ್ತು ಉಳಿವಿಗಾಗಿ ಬೇಟೆಯನ್ನಾಡುತ್ತಿದ್ದರು. ಪ್ರಾರಂಭದಲ್ಲಿ ಬೇಟೆಯಾಡಿದ ಪ್ರಾಣಿ ಪಕ್ಷಿಗಳನ್ನು ಹಸಿಯಾಗಿ ತಿನ್ನುತ್ತಿದ್ದರು. ಬೆಂಕಿಯನ್ನು ಕಂಡುಹಿಡಿದ ಬಳಿಕ ಬೇಯಿಸಿ ತಿನ್ನಲು ಪ್ರಾರಂಭಿಸಿದ. ನಂತರ ಪುರುಷರು ಬೇಟೆಯಾಡಲು ಹೊರಗೆ ಹೋದರೆ, ಸ್ತ್ರೀಯರು ಒಂದು ಕಡೆ ನೆಲೆಸಿ ಆಹಾರ ಬೇಯಿಸಿ ಹಂಚುವ ಕೆಲಸ ವಹಿಸಿಕೊಂಡಳು. ಮಕ್ಕಳನ್ನು ಹೆರುವ

ಮತ್ತು ಅವರನ್ನು ನೋಡಿಕೊಳ್ಳುವ ಕೆಲಸವು ಅವರನ್ನು ನಿರ್ದಿಷ್ಟ ಸ್ಥಳದಲ್ಲಿ ನೆಲೆಸುವಂತೆ ಮಾಡಿತು. ಮಳೆ ಬಿಸಿಲು ಚಳಿಯಿಂದ ರಕ್ಷಣೆ ಪಡೆಯಲು ಗುಡಿಸಲು ಕಟ್ಟಿಕೊಂಡ ಮಹಿಳೆ ತನ್ನ ಸುತ್ತಮುತ್ತಲಿನ ಪ್ರದೇಶದಲ್ಲಿ ಗಡ್ಡೆ-ಗೆಣಸುಗಳನ್ನು ಬೆಳೆಯಲಾರಂಭಿಸಿದಳು. ಬೇಟೆಯಾಡುವುದು ಕಡಿಮೆಯಾಗಿ ಜನಸಂಖ್ಯೆಯು ಹೆಚ್ಚಾದಂತೆ ಇತರೆ ಆಹಾರ ಬೆಳೆಗಳನ್ನು ಬೆಳೆಯಲಾರಂಭಿಸಿ ಕೃಷಿಪದ್ಧತಿ ಜಾರಿಗೆ ಬಂದಿತು. ಮಾನವ ಅಲೆಮಾರಿ ಜೀವನವನ್ನು ಬಿಟ್ಟು ಒಂದು ಕಡೆ ನೆಲೆಯೂರಲು ಪ್ರಾರಂಭಿಸಿದರು. ಹೀಗೆ ಕೃಷಿ ಪ್ರಾರಂಭಮಾಡಿದ್ದು ಮಹಿಳೆಯಿಂದ ಎಂಬುದು ಗಮನಿಸಬೇಕಾದ ಅಂಶ”.[೫] “ಯಾವ ಸಮಾಜದಲ್ಲೇ ಆಗಲಿ, ಅಲ್ಲಿ ಸ್ತ್ರೀಯರಿಗೆ ಕೊಟ್ಟಿರುವ ಸ್ಥಾನಮಾನಗಳಿಂದ ಸಂಸ್ಕೃತಿಯ ಮಟ್ಟವನ್ನು ಅಳೆಯಬಹುದು. ಯಾವ ಸಮಾಜದಲ್ಲಿ ಸ್ತ್ರೀಯರಿಗೆ ಉಚ್ಚಸ್ಥಾನವಿದೆಯೊ ಆ ಸಮಾಜದ ಸಂಸ್ಕೃತಿ ಉತ್ತಮಮಟ್ಟದ್ದು ಎಂದು ತಿಳಿಯಬಹುದು. ಪ್ರತಿಯೊಂದು ದೇಶದಲ್ಲಿಯೂ ಸ್ತ್ರೀಯರನ್ನು ಕಾಣುವ ದೃಷ್ಟಿ ಬೇರೆ ಬೇರೆಯಾಗಿರುತ್ತದೆ. ಅಲ್ಲದೇ ಕಾಲಕಾಲಕ್ಕೆ ಬದಲಾವಣೆ ಹೊಂದುತ್ತಿರುತ್ತದೆ. ಒಂದು ಕಾಲದಲ್ಲಿ ಫ್ರೆಂಚರು ಪ್ರೇಯಸಿರೆಂದು, ಜರ್ಮನ್ನರು ಮನೆಯೊಡತಿಯರೆಂದು, ಚೀನಿಯರು ಹಾಗೂ ಭಾರತೀಯರು ಮಕ್ಕಳ ತಾಯಿಯರೆಂದು, ಮುಸ್ಲಿಮರು ತಮ್ಮ ಕೈಗೊಂಬೆಗಳೆಂದು ಪರಿಗಣಿಸುತ್ತಿದ್ದರು. ಆದರೆ ಇಂದಿನ ಸ್ಥಿತಿ ಬೇರೆಯಾಗಿದೆ”.[೬] ಒಂದೊಂದು ದೇಶದಲ್ಲಿ ಸ್ತ್ರೀಯರನ್ನು ದೇವತೆಗಳೆಂದು, ಭಾರತದಲ್ಲಿ ತಾಯಿಯಾಗಿ, ಅಮೇರಿಕಾದವರು ಸ್ತ್ರೀಯನ್ನು ದೇವತೆಗಳೆಂದು ಕಂಡುಕೊಂಡಿದ್ದಾರೆ. ಆದರೆ ಫ್ರೆಂಚರು ಪ್ರೆಯಸಿಯರೆಂದು ಕರೆಯುತ್ತಾರೆ. ಇಷ್ಟೆಲ್ಲಾ ಭಿನ್ನತೆಗಳು ಕಂಡುಬರುತ್ತವೆ.

ಭಾರತೀಯ ಸಮಾಜದಲ್ಲಿ ಸ್ತ್ರೀ ಆದಿಕಾಲದಿಂದಲೂ ತಾಯಿಯಾಗಿಯೆ ಅತಿ ಹೆಚ್ಚು ಪ್ರಾಮುಖ್ಯತೆ ಪಡೆದಿದ್ದಾಳೆ. ನಂತರ ಸ್ಥಾನದಲ್ಲಿ ಹೆಂಡತಿಯಾಗಿ, ಮಗಳಾಗಿ, ತಂಗಿಯಾಗಿ ಗುರುತಿಸಲ್ಪಟ್ಟಿದ್ದಾಳೆ. ಅವಳ ಕೆಲವೊಂದು ಪಾತ್ರಗಳನ್ನು ಮಾದರಿಯ ಮೂಲಕ ಅವಳ ವ್ಯಕ್ತಿತ್ವವನ್ನು ಅಚ್ಚೊತ್ತಲಾಗಿದೆ. ಹೆಣ್ಣು ಸಹನೆಯ ಮೂರ್ತಿ, ವಾತ್ಸಲ್ಯದ ಗಣಿ ಎಂದು ಗಂಡಿನ ಪೂರಕ ಸ್ಥಾನದಲ್ಲಿ ಕಲ್ಪಿತವಾಗಿದ್ದಾಳೆ. ವೇದಗಳ ಕಾಲದಲ್ಲಿ ಸ್ತ್ರೀ-ಪುರುಷರಿಗೆ ಅಸಮಾನತೆಯಿರಲಿಲ್ಲ. ಜ್ಞಾನ ಸಂಪಾದನೆಯಲ್ಲಿ ಪುರುಷನಷ್ಟೆ ಸಮರ್ಥ ಳಾಗಿದ್ದಳು. ವೇದಮಂತ್ರಗಳನ್ನು ಕೂಡ ಪಠಣೆ ಮಾಡುತ್ತಿದ್ದಳು. ವೇದಕಾಲದಲ್ಲಿ ಕೆಲ ಮಹಿಳೆಯರು ಶ್ಲೋಕಗಳನ್ನು ರಚಿಸಿದ ಉದಾಹರಣೆಗಳಿವೆ. ಸ್ತ್ರೀಯರೂ ಕೂಡ ಉಪನಯನ ಸಂಸ್ಕಾರಕ್ಕೆ ಅರ್ಹರಾಗಿದ್ದರು. ವೇದ ಕಾಲದ ನಂತರದಲ್ಲಿ ಎಲ್ಲ ವೇದಜ್ಞಾನ ಹೊಂದಿ ಮುಂದುವರಿದು ಬಿಡುವಳೆಂಬ ಭಯದಿಂದ ಉಪನಯನ ಸಂಸ್ಕಾರ ನಿರಾಕರಿಸಿ ವೇದಪಠಣವನ್ನು ನಿಷೇಧಿಸಲಾಯಿತು. ವಿವಾಹದ ಆಯ್ಕೆಯ ವಿಷಯದಲ್ಲಿ ಅವಳ ಆಯ್ಕೆಗೂ ಕೂಡ ಮಾನ್ಯತೆ ಇತ್ತು ಎನ್ನುವುದಕ್ಕೆ ಕೆಲ ಮಹಿಳೆಯರು ಉಪಾಧ್ಯಾಯನಿರಾಗಿ, ಅವಿವಾಹಿತರಾಗಿ, ನಿರಂತರ ಕಲಿಕೆಯಲ್ಲಿ ತೊಡಗಿದ ಉದಾಹರಣೆಗಳಿವೆ. ಮಹಾಕಾವ್ಯಗಳ ಕಾಲದಲ್ಲಿ ಮಹಿಳೆಗೆ ಒಳ್ಳೆಯ ಸ್ಥಾನವಿತ್ತಾದರೂ ಇಲ್ಲಿ ಕಂಡುಬರುವುದೇನೆಂದರೆ ತನ್ನ ತಪ್ಪು ಇರದೇ, ಹೆಣ್ಣು ಬಲಿಪಶುಯಾಗಿದ್ದಳೆಂದು ಹೇಳಬಹುದು. ಇದಕ್ಕೆ ಉದಾಹರಣೆಯಾಗಿ ವಿಶ್ವಾಮಿತ್ರನ ಹೆಂಡತಿ ರೇಣುಕಾ,

ಗೌತಮನ ಹೆಂಡತಿ ಅಹಲ್ಯೆ, ರಾಮಯಣದ ಸೀತೆ ಆದರ್ಶಗಳಾಗಿದ್ದರು. ರಾಮನಿಂದಾಗಿ ಕಾಡು ಪಾಲಾದಳು. ಮಹಾಭಾರತದಲ್ಲಿ ದ್ರೌಪದಿ ಅರ್ಜುನನ್ನು ಇಷ್ಟಪಟ್ಟು ವಿವಾಹವಾದರೂ, ಐದು ಜನರೊಡನೆ ಜೀವಿಸ ಬೇಕಾಯಿತು. ದ್ರೌಪದಿ ತಂದೆಗೆ ರಾಜಕಾರಣದಲ್ಲಿ ಒಳ್ಳೆಯ ಸಲಹೆಯನ್ನು ನೀಡುತ್ತಿದ್ದಳು. ಇಲ್ಲಿ ಪುತ್ರಸಂತಾನಕ್ಕೆ ಆಧ್ಯತೆಯಿದ್ದ ಒಂದು ಹೆಣ್ಣು ಸಂತಾನಕ್ಕಾಗಿ ೧೧ ಜನ ಪುರುಷರೊಡನೆ ಸಂಬಂಧ ಹೊಂದಬಹುದಾಗಿತ್ತು ಎಂದು ಹೇಳಲಾಗುತ್ತದೆ. ಪಾಂಡುರಾಜ ನಿರ್ವೀರ್ಯನಾಗಿದ್ದರು. ಆತ ಕುಂತಿ ಮತ್ತು ಮಾದ್ರಿ ಎಂಬಿಬ್ಬರನ್ನು ವಿವಾಹವಾಗಿದ್ದ. ಇವೆಲ್ಲವನ್ನು ನೋಡಿದಾಗ ಮಹಾಕಾವ್ಯಗಳಲ್ಲಿ ಹೆಣ್ಣು ಕೇವಲ ಭೋಗದ ವಸ್ತು, ಸಂತಾನಕ್ಕಾಗಿ ಮಾತ್ರ ಮಾನ್ಯಳಾಗಿದ್ದಳು ಎಂದು ಕಂಡುಬರುತ್ತದೆ.

"ಸ್ಮೃತಿಗಳ ಕಾಲದಲ್ಲಿ ಮತ್ತೆ ಸ್ತ್ರೀಯರನ್ನು ಬಂಧನಕ್ಕೊಳಪಡಿಸಿದರು. ಅಲ್ಲಿ ಸ್ತ್ರೀ ಸ್ವಾತಂತ್ರ್ಯ ಕ್ಷೀಣಿಸುತ್ತಾ ಬಂದು ಸ್ತ್ರೀಯು ಪತಿಯನ್ನು ಪೂಜ್ಯಭಾವನೆಯಿಂದ 'ಪಾವಿತ್ರ್ಯತೆ' ಎನ್ನುವ ಸಂಕೋಲೆಯಿಂದ ಬಂಧನಗೊಳಪಡಿಸಿದರು. ಮನುಧರ್ಮಶಾಸ್ತ್ರದಲ್ಲಿ ಹೆಣ್ಣಿನ ಬಗೆಗೆ "ಯತ್ರನಾರ್ಯಸ್ತು ಪೂಜ್ಯಂತೇ ರಮತಿ ತತ್ರದೇವತಾ" ಎಂದು ಒಂದು ಕಡೆ ಹೇಳಿದ್ದಾನೆ. ಈ ಶ್ಲೋಕ ಹೆಣ್ಣಿನ ಪೂಜ್ಯ ಸ್ಥಾನವನ್ನು ಪರಿಚಯಿಸುತ್ತದೆ ಯಾದರೂ ಮತ್ತೊಂದೆಡೆ "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂದು ಹೇಳುವ ಮೂಲಕ ಹೆಣ್ಣಿನ ಬಗೆಗೆ ದ್ವಂದ ಅಭಿಪ್ರಾಯಗಳು ಮೂಡಿವೆ. ಇದಲ್ಲದೆ ಹೆಣ್ಣು ಮಗುವಿಗೆ ಇನ್ನು ಲಜ್ಜೆ ಮಾಡದೆ ಬೆತ್ತಲೆ ತಿರುಗುವ ಹಂತದಲ್ಲೇ ಮದುವೆ ಮಾಡಬೇಕೆಂದು ಮನುಧರ್ಮ ಶಾಸ್ತ್ರ ನುಡಿಯುತ್ತದೆ. ದೇವರ ಪೂಜೆ ಮಾಡಬಾರದೆಂದು ವಿಧಿಸುತ್ತದೆ. ವೇದ ಮಂತ್ರ ಪಠಿಸಬಾರದೆಂದು, ವೇದವನ್ನು ಓದಬಾರದೆಂದು ಅಪ್ಪಣೆ ಮಾಡಿದ ಯಜ್ಞೋಸವತ ಧರಿಸಿ ಯಜ್ಞಯಾಗದಿಗಳನ್ನು ನೆರವೇರಿಸುವ, ಯಜಮಾನ್ಯ ವಹಿಸುವ ಅಧಿಕಾರದ ವಿದ್ವತ್ತನ್ನು ಗಳಿಸಿದ್ದ ಸ್ತ್ರೀಗೆ, ವೇದಮಂತ್ರಗಳನ್ನು ಕಿವಿಗಳಿಂದ ಕೇಳಲು ಬಾರದೆಂಬ ಕಟ್ಟುನಿಟ್ಟಾದ ನಿಯಮ ಮಾಡಿ ಮಹಿಳೆಯ ಸಾಮಾಜಿಕ ಅಂತಸ್ತನ್ನು ಕೆಳಗಿಳಿಸಿದ್ದು ಮಾತ್ರವಲ್ಲದೆ ಆಕೆಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಸಿದುಕೊಳ್ಳಲಾಯಿತು".[೬] ಹೀಗೆ ಒಂದೊಂದು ಕಾಲದಲ್ಲಿ ಸ್ತ್ರೀಯರ ಸ್ಥಾನಮಾನಗಳು ಬದಲಾಗುತ್ತಾ 'ಪುರುಷ ಪ್ರಧಾನ ಸಮಾಜ' ಬೆಳೆದದ್ದನ್ನು ನಮ್ಮಲ್ಲಿ ಕಾಣಬಹುದಾಗಿದೆ. ಆದರು ಈಗ ಮಹಿಳೆ ಪುರುಷನಿಗೆ ಪೈಪೋಟಿಗೆ ನಿಲ್ಲುವಷ್ಟು ಎತ್ತರಕ್ಕೆ ಬೆಳೆದಿದ್ದಾಳೆ. ಹೀಗೆ ಹೆಣ್ಣಿನ ಕೈಯಲ್ಲಿ ಬದುಕಿನ ವೀಣೆ ನಿಸರ್ಗ ಸಹಜವಾಗಿಯೆ ಸಿಕ್ಕಿದ್ದು, ಅದನ್ನು ಹದಗೊಳಿಸಲು ಆಕೆಯ ವಿವೇಚನೆಗೆ ಬಿಟ್ಟಿದ್ದು. ಗಂಡಸು ಹೆಣ್ಣಿನ ಬೆನ್ನಲ್ಲಿ ಕತ್ತಿಯಾಗಿ ಆಕೆಯಿಂದ ಹಾಡಿಸುವ, ಶೃತಿಗೊಳಿಸುವ ವಕೃನಾಗಿರುವುದರಿಂದ ಬದುಕಿನ ವೀಣೆಯ ತಂತಿ ಒಂದೊಂದು ಸಲ ಹರಿಯುವ, ಸಡಿಲಗೊಳ್ಳುವ ಅಪಸ್ವರಗೊಳ್ಳುವುದೆಲ್ಲ ಚರಿತ್ರೆಯುದ್ದಕ್ಕೂ ನಡೆದುಕೊಂಡು ಬಂದಿದೆ. ಮಾನವ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ದುಡಿಯುವುದು ಅವಶ್ಯಕವಾಗಿದ್ದು ಅದಕ್ಕಾಗಿ ಅವನು ಕೂಲಿಯನ್ನು ಮಾಡುತ್ತಾನೆ. "ಜಗತ್ತಿನಾದ್ಯಂತ ಎಲ್ಲ ಮಹಿಳೆಯರ ಜೀವನವು ಹೆಚ್ಚು ಕಡಿಮೆ ವರ್ತುಲಾಕಾರದಿಂದ ಕೂಡಿರುವುದನ್ನು ಕಾಣಬಹುದು. ಬಹುಮುಖ್ಯವಾಗಿ ಈ ರೀತಿಯ ವಿಶೇಷಾಧಿಕಾರ ಇರುವುದೆ ಪುರುಷ ವರ್ಗಕ್ಕೆ ಮಾತ್ರ ಆದರೆ ಇನ್ನೊಂದು

ಮುಖ್ಯವಾದ ಅಂಶವೇನೆಂದರೆ ಮಹಿಳಾ ಕಾರ್ಮಿಕರಿಗೆ ಕೂಲಿಯಲ್ಲಿರುವ ತಾರತಮ್ಯ ಅವರ ಸಮ್ಮುಖದಲ್ಲಿಯೆ ನಡೆಯುತ್ತದೆ. ಇದಕ್ಕೆ ಪೂರಕವಾದ ಹಲವಾರು ಸಂಶೋಧನೆಗಳು, ಆಯೋಗದ ವರದಿಗಳು ಸಮೀಕ್ಷೆಗಳು ತಿಳಿಸುತ್ತದೆ".[೮]

ಆಹಾರ ಸಂಗ್ರಹಣಾ ಕಾರ್ಯದಿಂದ ಆಹಾರ ಉತ್ಪಾದನಾ ವ್ಯವಸ್ಥೆಗೆ ದಾರಿ ತೋರಿಸಿದವಳು ಮಹಿಳೆ ಎಂಬುದನ್ನು ಗಮನಿಸಬೇಕಾಗಿದೆ. ಕೃಷಿಯ ಮೂಲಕ ಆಹಾರದ ಕೊರತೆಯನ್ನು ನೀಗಿಸಿಕೊಂಡ ಮೇಲೆ ಮಹಿಳೆಗೆ ವಿರಾಮದ ಸಮಯದಲ್ಲಿ ಇತರೆ ಕೆಲಸಗಳಲ್ಲಿ ತೊಡಗಿಕೊಳ್ಳಲು ಅವಕಾಶವಾಯಿತು. ಅವಳು ಮಡಿಕೆ ಕುಡಿಕೆಗಳ ತಯಾರಿಸುವಲ್ಲಿ, ಮನೆಕಟ್ಟುವಿಕೆ, ನೂಲುವಿಕೆ ಮುಂತಾದ ಕಾರ್ಯಗಳಲ್ಲಿ ತೊಡಗಿ ಕೊಂಡಳು. ಈ ಎಲ್ಲ ಕೈಗಾರಿಕೆಗಳನ್ನು ಸ್ತ್ರೀಯರೇ ಮಾಡುತ್ತಿದ್ದರು. ಕುರಿಗಳ ತುಪ್ಪಳದಿಂದ ದಾರ ತಯಾರಿಸಿ ಅದರಿಂದ ಬಟ್ಟೆ ಸಿದ್ಧಪಡಿಸುವುದನ್ನೂ ಮಹಿಳೆಯೆ ಕಂಡುಕೊಂಡಳು. ಮಹಿಳೆ ಕಂಡುಕೊಂಡ ಎಲ್ಲ ವೃತ್ತಿಗಳು ಹಂತಹಂತವಾಗಿ ಪುರುಷರ ಕೈ ಸೇರಿ ಇದು ಪುರುಷರಿಂದ ನಿರ್ಮಾಣವಾದದ್ದು ಎಂದು ಅಚ್ಚು ಹೊಡೆಯಲಾಯಿತು. ಹೆಣ್ಣು ಪ್ರತಿಯೊಂದು ಕೆಲಸದಲ್ಲಿಯೂ ಗಂಡಿನ ಸಮಾನಳಾಗಿ ದುಡಿಯು ತ್ತಿದ್ದರೂ ಅವಳನ್ನು ಆದಾಯದ ವ್ಯಾಪ್ತಿಗೆ ಒಳಪಡಿಸಿಲ್ಲ. ಕಾಡುಗೊಲ್ಲರಲ್ಲಿಯ ಮಹಿಳೆಯ ಚಿತ್ರಣವನ್ನು ಗಮನಿಸಿದಾಗ ಅವಳು ಕೃಷಿ, ಕೃಷಿಕೂಲಿ, ಕೃಷಿಯೇತರ ಕೂಲಿ, ವ್ಯಾಪರ, ಪಶುಪಾಲನೆ, ಹೈನು ಉತ್ಪನ್ನಗಳ ಮಾರಾಟ ಮುಂತಾದ ಎಲ್ಲ ವೃತ್ತಿಗಳನ್ನು ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಪುರುಷ ಪ್ರಧಾನ ಸಮುದಾಯದಲ್ಲಿ ಮಹಿಳೆ ಮಕ್ಕಳನ್ನು ಹೊತ್ತು ಹೆತ್ತು ಸಂಸಾರ ನಡೆಸುವುದರ ಜೊತೆಗೆ ದುಡಿಯುವುದನ್ನು ಕಾಣುತ್ತೇವೆ. ಕಾಡುಗೊಲ್ಲರಲ್ಲಿ ಸಾಮಾನ್ಯವಾಗಿ ಬಡತನ ಹೆಚ್ಚಿನ ಪ್ರಮಾಣದಲ್ಲಿದೆ. ಗಂಡ-ಹೆಂಡತಿ, ಮಕ್ಕಳು ದುಡಿದರೂ ಆಧುನಿಕಯುಗದಲ್ಲಿ ಅವರ ಹೊಟ್ಟೆ ತುಂಬುವುದಿಲ್ಲ. ಕಾಡುಗೊಲ್ಲರ ಮಹಿಳೆ ಮನೆಯ ಒಳಗೂ ಮತ್ತು ಹೊರಗೂ ದುಡಿಯುತ್ತಿರುವ ಚಿತ್ರಣ ಸಾಮಾನ್ಯವಾಗಿ ಕಂಡುಬರುತ್ತದೆ.

೬.೧ ಕೂಲಿ

"ಶ್ರಮಕ್ಕೆ ಪ್ರತಿಫಲವಾಗಿ ಕೊಡುವ ಹಣಕ್ಕೆ 'ಕೂಲಿ' ಎಂದು ಕರೆಯಬಹುದು".[೯] ಹಿಂದೆ ಕೂಲಿಯನ್ನು ವಸ್ತುಗಳ ವಿನಿಮಯ ವ್ಯವಸ್ಥೆಯಲ್ಲಿ ಕಾಣಬಹುದಿತ್ತು. ಒಬ್ಬನು ಇನ್ನೊಬ್ಬನ ಹೊಲದಲ್ಲಿ ದುಡಿದರೆ, ಆ ದುಡಿತದ ಬೆಲೆಯು ಹಣದ ಬದಲಾಗಿ ಕಾಳುಗಳನ್ನೆ ಕೊಡುತ್ತಿದ್ದರು. ಅದು ರಾಗಿ, ಜೋಳ, ಭತ್ತ, ಸೂರ್ಯಕಾಂತಿ ಇತರೆ ಕಾಳುಗಳನ್ನು ಕೂಲಿಯ ರೂಪದಲ್ಲಿ ಕೊಡುತ್ತಿದ್ದರು. ಇಲ್ಲಿ ದುಡಿತವು ವಿನಿಮಯ ವಾಗುತ್ತಿತ್ತು. ಈ ವ್ಯವಸ್ಥೆಯ ಬದಲಾವಣೆಯಿಂದಾಗಿ ಹಣವನ್ನು ಕೊಡುವ ಪರಂಪರೆ ಜಾರಿಗೆ ಬಂದಿತು. ಇಂತಹ ಹಣವನ್ನು ಪಡೆಯಬೇಕಾದರೆ ಕೂಲಿಯನ್ನು ಮಾಡುತ್ತಾ ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯ ಕಾಡುಗೊಲ್ಲರ ಮಹಿಳೆಯರು ಕೂಲಿ ಮಾಡುತ್ತಾ ಕುಟುಂಬದ ನಿರ್ವಹಣೆ ಕೈಗೊಳ್ಳುತ್ತಿದ್ದಾಳೆ. ಕೂಲಿಯನ್ನು ಎರಡು ರೀತಿಯಲ್ಲಿ ವಿಂಗಡಿಸಲಾಗಿದೆ. ಅದು ಈ ಕೆಳಗಿನಂತಿವೆ.

[illegible]

[illegible]

[illegible]

ಕೂಲಿಯ ವಿಧಗಳು

೧. ಕೃಷಿಕೂಲಿ

೨. ದಿನಗೂಲಿ (ಕೃಷಿಯೇತರ ಕೂಲಿಗಳು)

೬.೧.೧. ಕೃಷಿಕೂಲಿ

ಕೃಷಿ ಚಟುವಟಿಕೆಯಲ್ಲಿ ಮಾಡತಕ್ಕಂತ ಕೂಲಿಯನ್ನು ಕೃಷಿಕೂಲಿ ಎಂದು ಕರೆಯಬಹುದು. ಭಾರತದಲ್ಲಿ ಕೃಷಿಯನ್ನು ಹೆಚ್ಚಾಗಿ ಮೂಲ ಉದ್ಯೋಗವನ್ನಾಗಿ ಮಾಡಿಕೊಂಡು ಅದರಲ್ಲಿ ಮಹಿಳೆಯರು ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ. ಕೃಷಿಯನ್ನು ಎಲ್ಲ ವರ್ಗದವರು ಮಾಡುತ್ತಿದ್ದಾರೆ. ಕಾಡುಗೊಲ್ಲರು ಬಡವರಾಗಿದ್ದು, ಹೆಚ್ಚಾಗಿ ಭೂಮಿಯನ್ನು ಹೊಂದಿಲ್ಲ. ಇವರು ಬೇರೆಯವರ ಹೊಲ, ಗದ್ದೆಗಳಲ್ಲಿ ದುಡಿಯುವುದನ್ನು ಹೆಚ್ಚಾಗಿ ಕಾಣುತ್ತೇವೆ. ಕೇವಲ ಗಂಡಸರು ಮಾತ್ರ ಕೂಲಿ ಕೆಲಸಗಳನ್ನು ಮಾಡುತ್ತಿಲ್ಲ. ಆದರೆ ಮಹಿಳೆಯರೂ ಕೂಡಾ ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕೂಲಿ ಮಾಡುತ್ತಿರುವುದು ಕಾಡುಗೊಲ್ಲರ ಸಮುದಾಯದಲ್ಲಿ ಕಂಡುಬರುತ್ತದೆ. ಈ ಸಮುದಾಯದ ಮಹಿಳೆ ಪ್ರತಿದಿನ ಬೆಳಿಗ್ಗೆ ಐದು ಗಂಟೆಗೆ ಎದ್ದು, ದನಗಳ ಕುರಿಗಳ ಹಟ್ಟಿಯನ್ನು ಸ್ವಚ್ಛಗೊಳಿಸಿ ಆಹಾರ ಸಿದ್ಧಪಡಿಸಿ, ಬೆಳಗಿನ ಉಪಹಾರ ತಿಂದು, ಗಂಡನಿಗೆ ಬುತ್ತಿ ಕಟ್ಟಿಕೊಟ್ಟು ತಾನು ಮಧ್ಯಾಹ್ನದ ಊಟ ಕಟ್ಟಿಕೊಂಡು, ಕೂಲಿ ಕೆಲಸಕ್ಕೆ ಹೋಗುವ ಚಿತ್ರಣ ಸಾಮಾನ್ಯವಾಗಿ ಎಲ್ಲ ಗೊಲ್ಲರಹಟ್ಟಿಗಳಲ್ಲಿ ಕಂಡುಬರುತ್ತದೆ. ಬೆಳಿಗ್ಗೆ ಒಂಭತ್ತು ಗಂಟೆಯಿಂದ ಸಾಯಂಕಾಲ ಐದು ಗಂಟೆಯವರೆಗೆ ಕೂಲಿ ಕೆಲಸ ಮಾಡುತ್ತಾರೆ. ಕೃಷಿಕೂಲಿ ಕೆಲಸಗಳು ಮುಂಗಾರು ಮಳೆಯ ಪ್ರಾರಂಭದಿಂದ ಪೈರು ಕೊಯ್ದು ರಾಶಿ ಮಾಡುವವರೆಗೆ ಸಿಗುತ್ತವೆ. ಫೆಬ್ರವರಿಯಿಂದ ಜೂನ್ ತಿಂಗಳವರೆಗೆ ಕೃಷಿ ಕೂಲಿ ಕೆಲಸಗಳು ಸಿಗುವುದು ಅಪರೂಪ.

"ಭಾರತೀಯ ಮಹಿಳೆ ಮೊದಲಿನಿಂದಲೂ ಆರ್ಥಿಕ ವ್ಯವಸ್ಥೆಯಲ್ಲಿ ಭಾಗವಹಿಸುತ್ತಾ ಬಂದಿದ್ದಾಳೆ. ಸಾವಿರಾರು ವರ್ಷಗಳ ಹಿಂದಿನಿಂದಲೂ ಮಹಿಳೆ ಕೃಷಿ ಕ್ಷೇತ್ರದ ಜೊತೆಗೆ ಮನೆಗೆಲಸವನ್ನು ನಿಭಾಯಿಸಿಕೊಂಡು ಬರುತ್ತಿದ್ದಾಳೆ. ಇದರಿಂದಾಗಿ ಸಮಾಜದಲ್ಲಿ ಮಹಿಳೆಯ ಮಾನವೀಯ ಸಂಬಂಧಗಳು ಹತ್ತಿರವಾದವು. ಇಂತಹ ಚಾರಿತ್ರಿಕ ಯುಗಾಂತರದಲ್ಲಿ ಮಹಿಳೆ ಉತ್ಪಾದನಾ ಘಟಕಗಳಲ್ಲಿ ಕೆಲಸ ಮಾಡುತ್ತಲೇ ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಸೊಸೆಯಾಗಿ... ಸಾಮಾಜಿಕ ಕಾರ್ಯಗಳಲ್ಲಿ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ. ಹೀಗೆ ಜೀವನ ಅವಶ್ಯಕತೆಗಳನ್ನು ಪೂರೈಸುವುದರ ಜೊತೆಗೆ ಸಾಂಪ್ರದಾಯಿಕ ಆರ್ಥಿಕ ಬೆಳವಣಿಗೆಯನ್ನು ಬಲಪಡಿಸಿದಳು. ಇದರಿಂದಾಗಿ ಮಹಿಳೆಯ ಸ್ಥಾನಮಾನಗಳು ಹೆಚ್ಚಿದವು".[೧೦] ಗ್ರಾಮೀಣ ಸಮುದಾಯಗಳಲ್ಲಿಯ ಮಹಿಳೆ, ಕೃಷಿ ಜೀವನದ ಜೊತೆಗೆ ಪ್ರತಿಯೊಂದು ಹಂತದಲ್ಲಿ ದುಡಿದಿದ್ದಾಳೆ. ಕೃಷಿ, ಮನೆಗೆಲಸ, ತೋಟಗಳಲ್ಲಿ ಕೂಲಿ, ಇನ್ನೂ ಹಲವಾರು ಕೂಲಿಗಳನ್ನು ಮಾಡುತ್ತಿದ್ದಾಳೆ. "ಜಗತ್ತಿನಾದ್ಯಂತ ಎಲ್ಲಾ ಮಹಿಳೆಯರ ಜೀವನವು ಹೆಚ್ಚು-ಕಡಿಮೆ ವರ್ತುಲಾಕಾರದಿಂದ ಕೂಡಿರುವುದನ್ನು

[illegible]

[illegible] [illegible]

[illegible]

[illegible]

[illegible]

[illegible]

ಕಾಣಬಹುದು. ಬಹುಮುಖ್ಯವಾಗಿ ಈ ರೀತಿಯ ವ್ಯತ್ಯಾಸ ಕಂಡುಬರುವ ಕ್ಷೇತ್ರವೆಂದರೆ ಆರ್ಥಿಕ ರಂಗ. ಆರ್ಥಿಕ ರಂಗವನ್ನು ನಿರ್ಧರಿಸುವ ವಿಶೇಷಾಧಿಕಾರಿ ಇರುವುದು ಪುರುಷ ವರ್ಗಕ್ಕೆ ಮಾತ್ರ. ಆದರೆ ಇನ್ನೊಂದು ಮುಖ್ಯವಾದ ಅಂಶವೆಂದರೆ ಮಹಿಳಾ ಕಾರ್ಮಿಕರಿಗೆ ಕೂಲಿಯಲ್ಲಿರುವ ತಾರತಮ್ಯ ಅವರ ಸಮ್ಮುಖದಲ್ಲೇ ನಡೆಯುತ್ತದೆ. ಇದಕ್ಕೆ ಪೂರಕವಾದ ಹಲವಾರು ಸಂಶೋಧನೆಗಳು ಆಯೋಗದ ವರದಿಗಳು ಹಾಗೂ ಸಮೀಕ್ಷೆಗಳು ತಿಳಿಸುತ್ತವೆ".[೧೯] ಹೀಗೆ ನೋಡುತ್ತಾ ಹೋದರೆ ೧೯೪೮ರ ಕನಿಷ್ಟ ಕೂಲಿ ಕಾಯಿದೆಯ ಪ್ರಕಾರ ನಿಗದಿಯಾದ ಕೂಲಿಯು ಸಿಗದೆ ಹೋದರೆ ಅವನಿಗೆ ಸಜೆ ಅಥವಾ ಯಜಮಾನನಿಗೆ ದಂಡಾರ್ಹ ಅಪಾರಾಧ ಮಾಡಿದಂತೆ. ಇಷ್ಟೆಲ್ಲಾ ಕಾನೂನುಗಳು ಇದ್ದರೂ ಕೂಡ ಈ ಯಾವ ಸೌಲಭ್ಯಗಳು ಮಹಿಳೆಯರಿಗೆ ತಲುಪುತ್ತಲೆ ಇಲ್ಲವೆಂದು ಹೇಳಬಹುದು. ಹೀಗೆ ಎಲ್ಲ ರೀತಿಯಿಂದಲೂ ಮಹಿಳೆ ಶೋಷಣೆಯಾಗುತ್ತಿದ್ದಾಳೆ.

ಕಾಡುಗೊಲ್ಲರ ಮಹಿಳೆಯರ ಕೂಲಿಯ ಸ್ವರೂಪಗಳು

* ಕಳೆ ತೆಗೆಯುವುದು
* ಬೀಜ ಬಿತ್ತುವುದು
* ನೆಲ್ಲುಕೊಯ್ಯುವುದು
* ತೆನೆ ಮುರಿಯುವುದು
* ರವದಿ ಹಾರಿಸುವುದು
* ಹತ್ತಿ ಬಿಡಿಸುವುದು
* ಗೊಬ್ಬರ ಹಾಕುವುದು
* ಕಣ ಮಾಡುವುದು
* ಜಿನ್ ಹಾಕಿಸುವುದು
* ಎಡಿಕುಂಟೆ ಹೊಡೆಯಲು ಸಹಾಯ ಮಾಡುವುದು
* ಸಸಿ ನಾಟಿ ಮಾಡುವುದು
* ಮಣ್ಣು ಎತ್ತುವುದು
* ರಾಶಿ ಮಾಡಲು ಸಹಾಯ ಮಾಡುವುದು

ಕಳೆ ತೆಗೆಯುವುದು : ಕೃಷಿಯ ಪ್ರಾರಂಭಿಕ ಕಾಲ, ಬೀಜ ಬಿತ್ತನೆಯ ಸಮಯ ಹಾಗೂ ಬೆಳೆ ಬೆಳೆಯುವುದಕ್ಕಿಂತ ಮುಂಚೆ ಹೊಲಗಳನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ಮಹಿಳೆ ಭಾಗವಹಿಸುತ್ತಾಳೆ. ಹೊಲದಲ್ಲಿ ಬಿದ್ದಿರಂತಕ್ಕಂತ ಕಸ ಕಡಿಗಳನ್ನು ತೆಗೆದು ಹಾಕುವುದು ಪೈರಿನ ಮಧ್ಯ ಬೆಳೆದ ಕಸವನ್ನು ತೆಗೆಯುವುದು ಇವರ ಕೆಲಸವಾಗಿದೆ. ಈ ಕೆಲಸಕ್ಕೆ ಮುಂಜಾನೆ ಎದ್ದು ಮನೆಗೆಲಸವನ್ನು ಮುಗಿಸಿಕೊಂಡು ಹೋಗುತ್ತಾರೆ. ಕಳೆ ತೆಗೆಯುವ ಕೆಲಸಕ್ಕೆ ಬಹಳ ಬೇಡಿಕೆ ಇರುತ್ತದೆ.

[illegible]

[illegible]

[illegible]

ನೆಲ್ಲುಕೊಯ್ಯುವುದು : ಭತ್ತದ ಫಸಲು ಬಂದ ನಂತರ ಅದನ್ನು ಕೊಯ್ಯುವುದಕ್ಕೆ ದಿನಗೂಲಿಯ ರೂಪದಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ. ಭತ್ತ ಕೊಯ್ಯುವ, ಭತ್ತದ ತೆನೆಯ ಹೊರೆಗಳನ್ನು ಹೊರುವ ಕಾರ್ಯಗಳಲ್ಲಿ ಸ್ತ್ರೀಯರು ಪ್ರಮುಖ ಪಾತ್ರವಹಿಸುವುದನ್ನು ನೋಡುತ್ತೇವೆ.

ಬೀಜ ಬಿತ್ತುವುದು : ಬಿತ್ತನೆ ಸಂದರ್ಭದಲ್ಲಿ ಬೀಜ ಬಿತ್ತುವ ಸಾಲಿನಲ್ಲಿ ಮಹಿಳೆಯರು ಗೊಬ್ಬರ ಹಾಕಲು ಹೋಗುವುದುಂಟು. ಕೆಲ ಮಹಿಳೆಯರು ಬೀಜ ಬಿತ್ತುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಭತ್ತದ ಸಸಿಗಳನ್ನು ನಾಟಿ ಮಾಡುವುದು, ಗೊಬ್ಬರ ಹಾಕುವ ಮುಂತಾದ ಹಲವಾರು ಕಾರ್ಯಗಳನ್ನು ಮಹಿಳೆಯರು ನಿರ್ವಹಿಸುವುದು ಕಂಡುಬರುತ್ತದೆ.

ರವದಿ ಹಾರಿಸುವುದು : ಭೂಮಿಯಲ್ಲಿ ಗಡ್ಡೆಯಾಗಿ ಬೆಳೆದ ಈರುಳ್ಳಿ, ಆಲುಗಡ್ಡೆ, ಶೇಂಗಾ ಮುಂತಾದವುಗಳನ್ನು ಭೂಮಿಯಿಂದ ಕಿತ್ತು ಅದನ್ನು ಸ್ವಚ್ಛಗೊಳಿಸುವ ಕೆಲಸವನ್ನು ಸಾಮಾನ್ಯವಾಗಿ ಹೆಂಗಸರೆ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಮೆಕ್ಕೆಜೋಳದ ತೆನೆಯ ಮೇಲಿನ ರವುದಿ, ಕಬ್ಬಿನ ರವುದಿ ಸುಲಿದು ಅದನ್ನು ಸ್ವಚ್ಛವಾಗಿಡಿಸುವ ಕೆಲಸವನ್ನು ಸ್ತ್ರೀಯರು ಅಚ್ಚುಕಟ್ಟಾಗಿ ಮಾಡುತ್ತಿರುವುದನ್ನು ಕಾಣುತ್ತೇವೆ.

ಹತ್ತಿ ಬಿಡಿಸುವುದು : ಬೆಳೆದು ನಿಂತ ಗಿಡಗಳಲ್ಲಿಯ ಹತ್ತಿ ಬಿಡಿಸುವ ಕೆಲಸವನ್ನು ಹೆಚ್ಚಾಗಿ ಮಹಿಳೆಯರೆ ನಿರ್ವಹಿಸುತ್ತಿರುವುದನ್ನು ಕಾಣಬಹುದಾಗಿದೆ. ಅವರು ಸುಗ್ಗಿಯ ಸಂದರ್ಭದಲ್ಲಿ ದಿನಕ್ಕೆ ೩೦ ರಿಂದ ೪೦ ರೂಪಾಯಿಗಳಂತೆ ಹತ್ತಿಯನ್ನು ಬಿಡಿಸುತ್ತಿದ್ದಾರೆ.

ಕೃಷಿ ಕೂಲಿಗಳಿಂದ ಕಾಡುಗೊಲ್ಲರ ಮಹಿಳೆಯರು ಜೀವನ ನಡೆಸುತ್ತಿದ್ದು, ಆರು ತಿಂಗಳ ನಂತರ ಅರೆ ನಿರುದ್ಯೋಗಿಗಳಾಗಿರುತ್ತಾರೆ. ಕೃಷಿ ಚಟುವಟಿಕೆಗಳ ಸಂದರ್ಭದಲ್ಲಿ ಮಾತ್ರ ಇವರಿಗೆ ಕೂಲಿಯಿದ್ದು ಉಳಿದ ದಿನಗಳಲ್ಲಿ ಕೂಲಿಯಿರದೆ ಉಪವಾಸವಿರುವ ಸಂದರ್ಭಗಳೆ ಕಂಡುಬರುತ್ತದೆ. ಅನೇಕ ಕುಟುಂಬ ಗಳಲ್ಲಿಯ ಹೆಣ್ಣುಮಕ್ಕಳು ವರ್ಷವಿಡಿ ಕೃಷಿಕೂಲಿಗಳು ಸಿಗದೇ ಇರುವುದರಿಂದ ಕೆಲವರು ಕೃಷಿಯೇತರ ಕೂಲಿಕೆಲಸಗಳಿಗೆ ಹೋಗುವುದುಂಟು. ಈ ಮಹಿಳೆಯರು ಕೃಷಿಯೇತರ ಕೂಲಿಗಳನ್ನು ಹುಡುಕಿಕೊಂಡು ನಗರಗಳತ್ತ ವಲಸೆ ಹೋಗುತ್ತಿರುವುದನ್ನು ಕಾಣುತ್ತೇವೆ. ಕೃಷಿಕ ವೃತ್ತಿಯನ್ನು ಕೈಗೊಂಡಿರುವವರು ಮಳೆಯನ್ನೆ ಆಶ್ರಯಿಸಿ ಬೆಳೆ ಬೆಳೆಯುತ್ತಾರೆ. ಇವರ ಜಮೀನುಗಳಿಗೆ ನೀರಾವರಿ ಸೌಲಭ್ಯಗಳಿಲ್ಲ. ನೀರಾವರಿ ಸೌಲಭ್ಯಗಳಿದ್ದರೆ ವರ್ಷದ ಹನ್ನೆರಡು ತಿಂಗಳು ಕೃಷಿ ಕೂಲಿಯ ಮೂಲಕ ಬದುಕುವವರಿಗೆ ಕೂಲಿ ಕೆಲಸಗಳು ಸಿಗುತ್ತಿದ್ದವು. ನಗರ ಪ್ರದೇಶಗಳಲ್ಲಿ ಕೂಲಿಗೆ ಬಹಳ ಬೇಡಿಕೆ ಇದೆ. ಈ ಕೆಲಸಕ್ಕೆ ಹೆಚ್ಚಿಗೆ ಹಣವನ್ನು ಕೊಡುತ್ತಿರುವುದರಿಂದ ಅಲ್ಲಿಗೆ ವಲಸೆ ಹೋಗುತ್ತಿದ್ದಾರೆ. ಗಂಡನಿಗೆ ಬುತ್ತಿ ಹೊಯ್ಯುವುದಲ್ಲದೆ, ಹೊಲದಲ್ಲಿ ಕೆಲಸ ಮಾಡುತ್ತಿರುತ್ತಾಳೆ. ಇಷ್ಟೆಲ್ಲಾ ದುಡಿದರೂ ಗಂಡನ ಹತ್ತಿರ ಖರ್ಚಿಗಾಗಿ ಹಣ ಕೇಳುವುದು ದುರಂತವೆಂದೇ ಹೇಳಬಹುದು.

[illegible]

[illegible]

[illegible]

೬.೧.೨. ಕೃಷಿಯೇತರ ಕೂಲಿಗಳು

ಕೃಷಿಯನ್ನು ಬಿಟ್ಟು ಇನ್ನು ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ. ಉದಾಹರಣೆ ಗಾರೆ ಕೆಲಸದಲ್ಲಿ, ನಗರದ ಚಿಕ್ಕಪುಟ್ಟ ಕಾರ್ಖಾನೆಗಳಲ್ಲಿ, ರಸ್ತೆ ದುರಸ್ತಿ ಕೆಲಸಗಳಲ್ಲಿ, ಗಣಿಗಾರಿಕೆಗಳಲ್ಲಿ ಹೀಗೆ ತಮ್ಮ ಉಪಜೀವನಕ್ಕಾಗಿ ಹಲವಾರು ವೃತ್ತಿಗಳಲ್ಲಿ ತೊಡಗಿಕೊಂಡಿದ್ದಾರೆ.

ಗಾರೆ ಕೆಲಸ : ಮನೆ ಕಟ್ಟುವ ಕೆಲಸದಲ್ಲಿ ಇತ್ತೀಚಿಗೆ ಕಾಡುಗೊಲ್ಲರ ಮಹಿಳೆಯರು ತೊಡಗಿಸಿ ಕೊಂಡಿರುವುದನ್ನು ಕಾಣುತ್ತೇವೆ. ಇಲ್ಲಿ ಮಣ್ಣು ಹೊರುವುದು, ಸಿಮೆಂಟ್ ಹಾಕುವುದು, ಗೋಡೆಗಳಿಗೆ ನೀರು ಹಾಕುವುದು ಈ ಕೆಲಸಗಳು ಕಷ್ಟಕರವಾಗಿದ್ದು ಪುರುಷನಷ್ಟೇ ದುಡಿದರೂ ಅಲ್ಲಿಯೂ ಇವರಿಗೆ ಕೂಲಿಯ ಹಣ ದಿನಕ್ಕೆ ೫೦ ರೂ.ಗಳಂತೆ ಪಾವತಿಸುತ್ತಾರೆ. ಪ್ರಾರಂಭದಲ್ಲಿ ಕಾಡುಗೊಲ್ಲರ ಮಹಿಳೆಯರು ಮನೆಬಿಟ್ಟು ಹೊರಬರುತ್ತಿರಲಿಲ್ಲ. ಈಗ ಸಂದರ್ಭಗಳು ಬೇರೆಯಾಗಿವೆ ಏಕೆಂದರೆ ಜೀವನ ನಡೆಸುವುದು ಒಬ್ಬರಿಂದ ಕಷ್ಟವಾಗುತ್ತಿದ್ದು, ಮಹಿಳೆಯು ಅನಿವಾರ್ಯವಾಗಿ ಮನೆಬಿಟ್ಟು ಹೊರಗೆ ದುಡಿಯುತ್ತಿದ್ದಾಳೆ.

ರಸ್ತೆ ದುರಸ್ಥಿ : ರಸ್ತೆಗಳ ಕಾಮಗಾರಿಗಳ ಕೆಲಸದಲ್ಲಿಯೂ ಸಹ ಈ ಮಹಿಳೆಯರು ದುಡಿಯು ತ್ತಿರುವುದನ್ನು ಕಾಣಬಹುದಾಗಿದೆ. ಇದಕ್ಕೆಲ್ಲಾ ಕಾರಣವೇನೆಂದರೆ ಬಡತನ. ಗಂಡ ದುಡಿಯದೆ ಇದ್ದ ಸಂದರ್ಭದಲ್ಲಿ ಮಹಿಳೆ ರಸ್ತೆ ದುರಸ್ಥಿ ಕೆಲಸದಲ್ಲಿ ನಿರತಳಾಗಿದ್ದಾಳೆ. ಮಾನಸಿಕ ಅಸ್ವಸ್ಥಳಾದರೂ ದೈಹಿಕವಾಗಿ ಕೆಲಸ ಮಾಡುತ್ತಿದ್ದಾಳೆ. ಮಹಿಳೆ ಹೀಗೆ ರಸ್ತೆಯ ಕೆಲಸದಲ್ಲಿ ಅಲ್ಲದೆ ಅದಕ್ಕೆ ಸಂಬಂಧಿಸಿದ ಅನೇಕ ವೃತ್ತಿಗಳಲ್ಲಿ ಭಾಗವಹಿಸುತ್ತಿದ್ದಾಳೆ.

ಗಣಿಗಾರಿಕೆ : ಗಂಡಾಂತರದಿಂದ ಕೂಡಿದ ಗಣಿಗಾರಿಕೆಯ ಕೆಲಸದಲ್ಲಿಯೂ ಇವಳು ತೊಡಗಿಕೊಂಡಿದ್ದು ಕಂಡುಬರುತ್ತದೆ. ಇವರು ಸಂಡೂರು, ರಾಜಪುರ, ಹೊಸಪೇಟೆ ಮುಂತಾದ ಪ್ರದೇಶಗಳಲ್ಲಿ ಗಣಿಕೆಲಸ ಅರಿಸಿಕೊಂಡು ಕುಟುಂಬದೊಂದಿಗೆ ದುಡಿಯುವುದಕ್ಕಾಗಿ ಹೋಗುತ್ತಿದ್ದಾರೆ. ಅವರನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದಾಗ ನಮಗೆ ಭೂಮಿ ಇಲ್ಲ, ದುಡಿಯುವುದಕ್ಕೆ ಕೆಲಸವಿಲ್ಲ, ಮಳೆ ಬಂದರೆ ನಮಗೆ ಕೆಲಸವಿದ್ದು, ಮಳೆ ಬಾರದೆ ಇದ್ದಾಗ ಕೆಲಸವನ್ನು ಹುಡುಕಿಕೊಂಡು ಒಂದೂರಿನಿಂದ ಮತ್ತೊಂದೂರಿಗೆ ಬರುತ್ತೇವೆ ಎಂದು ಹೇಳುತ್ತಾರೆ.

ಕಾರ್ಖಾನೆಗಳು : ಉದ್ಯೋಗವಿರದೆ ಇದ್ದಾಗ ಕೆಲವರು ಬೆಂಗಳೂರು, ಪೂನಾ, ಬಾಂಬೆ, ಗೋವಾ ಹಾಗೂ ಇತರೆ ಜಿಲ್ಲಾ ಕೇಂದ್ರಗಳ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದಕ್ಕೆ ಹೋಗುತ್ತಿದ್ದಾರೆ. ಹಬ್ಬ ಅಥವಾ ಜಾತ್ರೆಗಳ ಸಂದರ್ಭದಲ್ಲಿ ಮರಳಿ ತಮ್ಮ ಗ್ರಾಮಗಳಿಗೆ ವಾಪಸ್ಸಾಗುವುದನ್ನು ಕಾಣುತ್ತೇವೆ. ಆದರೆ ಇಲ್ಲಿಯು ಸಹ ಇವರ ದುಡಿಮೆಗೆ ತಕ್ಕ ಪ್ರತಿಫಲ ದೊರೆಯದೆ ಬಡವರಾಗಿಯೆ ಜೀವನ ಸಾಗಿಸುತ್ತಿದ್ದಾರೆ.

ಕಾಡುಗೊಲ್ಲರಲ್ಲಿ ಭೂಮಿ ಹೊಂದಿದವರಿದ್ದರೆ ಅಲ್ಲಿ ದುಡಿಯುತ್ತಾರೆ. ಕೆಲವರು ಕುಟುಂಬದ ಸಮೇತ ಜೀತದಾಳುಗಳಾಗಿ ಶ್ರೀಮಂತರ ಮನೆಯಲ್ಲಿ ದುಡಿಯುತ್ತಾರೆ. ಇದಕ್ಕೆಲ್ಲಾ ಕಾರಣ ಬಡತನ.

[illegible]

[illegible]

[illegible]

[illegible]

ಇವರ ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು, ಕುಟುಂಬದ ಆದಾಯಕ್ಕೆ ತಕ್ಕಂತೆ ಖರ್ಚುಗಳು ಹೆಚ್ಚಾಗಿದ್ದು, ಈ ಸಂದರ್ಭದಲ್ಲಿ ಮನೆ ನಡೆಸುವುದು ಕಷ್ಟಕರವಾಗಿದ್ದು, ಈ ಖರ್ಚುಗಳನ್ನು ಭರಿಸಲು ನಗರ ಪ್ರದೇಶಗಳಿಗೆ ವಲಸೆ ಹೋಗಿ ದುಡಿಯುವುದು ಅನಿವಾರ್ಯವಾಗಿದೆ.

೬.೨ ವ್ಯಾಪಾರ

ಕಾಡುಗೊಲ್ಲರ ಮಹಿಳೆಯರು ವ್ಯಾಪಾರ ಮಾಡುತ್ತಿದ್ದು, ಮನೆಗೆಲಸದ ಜೊತೆಗೆ ಅಂಗಡಿ ವ್ಯಾಪಾರ, ತರಕಾರಿ ವ್ಯಾಪಾರವನ್ನು ಮಾಡುತ್ತಾರೆ. ಇದಕ್ಕೆ ಮೂಲ ಕಾರಣ ಅವಳ ಆರ್ಥಿಕ ಪರಿಸ್ಥಿತಿ. ಅವಳ ಮನೆಯ ಪರಿಸ್ಥಿತಿ ಸರಿಯಾಗಿ ಇಲ್ಲದೆ ಇರುವುದು ಹಾಗೂ ಗಂಡನಿದ್ದರೂ ಕೂಡ ಸರಿಯಾಗಿ ದುಡಿಯದೆ, ಮನೆಯಲ್ಲಿದ್ದುಕೊಂಡು ಕುಡಿತ, ಜೂಜಾಟದ ಸಹವಾಸ ಮಾಡಿ ಹಣವನ್ನೆಲ್ಲಾ ತನ್ನ ಸ್ವಾರ್ಥಕ್ಕಾಗಿ ಬಳಸುವ ಗಂಡನನ್ನು ನೋಡಿಕೊಂಡು ಮಕ್ಕಳ ಶಿಕ್ಷಣಕ್ಕಾಗಿ ಮತ್ತು ಜೀವನ ನಿರ್ವಹಣೆಗೆ ಅವಳೆ ದುಡಿಯುವ ಪರಿಸ್ಥಿತಿ ಬಂದಿದೆ. ಇದಕ್ಕೆಲ್ಲಾ ಸಮಾಜದಲ್ಲಿ ನಾವು ಎಲ್ಲರಂತೆ ಇರಬೇಕೆಂಬ ಆಸೆ. ಬಡತನ, ನಿರುದ್ಯೋಗ, ಮಳೆಯಿಲ್ಲದೇ ಬೆಳೆನಾಶ ಮುಂತಾದ ಕಾರಣಗಳಿಂದ ಎಷ್ಟೋ ಸ್ತ್ರೀಯರು ವ್ಯಾಪಾರ ಮಾಡುತ್ತಿದ್ದಾರೆ.

ಮೂಲತಃ ಕಾಡುಗೊಲ್ಲರು ವ್ಯಾಪಾರದ ಮನೋಭಾವನೆ ಹೊಂದಿದವರಲ್ಲ. ಈ ಹಿಂದೆ ಬೇಟೆ, ಪಶುಪಾಲನೆ, ಕೃಷಿ, ಕೃಷಿಯೇತರ ಕೂಲಿ, ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟದ ಮೂಲಕವೆ ಬದುಕುತ್ತಿದ್ದರು. ವ್ಯಾಪಾರ ಎನ್ನುವುದು ಇತ್ತೀಚಿನ ಅನ್ಯ ಸಮುದಾಯಗಳ ಪ್ರಭಾವದಿಂದಾಗಿ ಇಂತಹ ಪ್ರವೃತ್ತಿಗಳು ಹುಟ್ಟಿಕೊಂಡಿವೆ. ವ್ಯಾಪಾರದ ಸಾಹಸವನ್ನು ಕಾಡುಗೊಲ್ಲರಲ್ಲಿ ಬೆರಳೆಣಿಕೆಯಷ್ಟು ಕುಟುಂಬಗಳು ಮಾಡುತ್ತಿವೆ ಎಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿದೆ. ಈ ವ್ಯಾಪಾರ ವೃತ್ತಿಯು ಸಹ ಅತ್ಯಂತ ಚಿಕ್ಕ ಪ್ರಮಾಣದಲ್ಲಿ ಬಂಡವಾಳ ಹೂಡಿ ಮಾಡುವಂತಹದ್ದಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಗೊಲ್ಲರಹಟ್ಟಿಗಳಲ್ಲಿ ಕಾಡುಗೊಲ್ಲರ ನಾಲ್ಕು ಜನ ಮಹಿಳೆಯರು ಅತಿ ಚಿಕ್ಕ ವ್ಯಾಪಾರಗಳಾದ ತರಕಾರಿ ಮಾರಾಟ, ಪಾನ್‌ಷಾಪ್ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ.

ಮಹಿಳೆಯನ್ನು ಪ್ರಾಚೀನ ಸಂಪ್ರದಾಯದ ಮೂಲಕ ಅವಳು ಪುರುಷನ ಅಧೀನಳು ಎಂಬ ಕಾರಣದಿಂದ ಅವಳನ್ನು ಎರಡನೆಯ ದರ್ಜೆಯಲ್ಲಿ ಕಾಣಲಾಗುತ್ತಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯು ಉದ್ಯೋಗ ಅವಕಾಶಗಳಲ್ಲಿ ವಂಚಿತಳಾಗಿದ್ದು, ಮಹಿಳೆ ಮತ್ತು ಪುರುಷರ ನಡುವೆ ಶ್ರಮ ವಿಭಜನೆಯಲ್ಲಿ ಅಸಮಾನ ಹಂಚಿಕೆಯಾಗಿದೆ. "ಭಾರತದ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳಾ ಕಾರ್ಮಿಕರನ್ನು ಹೆಚ್ಚು ನಿರ್ಲಕ್ಷಿಸಲಾಗುತ್ತದೆ. ಭಾರತವನ್ನು ಒಳಗೊಂಡಂತೆ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಸಹ ಮಹಿಳಾ ಕಾರ್ಮಿಕರು ಉದ್ಯೋಗವಕಾಶಗಳಲ್ಲಿ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ ಕಾರಣ ಮಾನವ ಸಮಾಜದಲ್ಲಿ ಪ್ರಾರಂಭದಿಂದಲೂ ಪುರುಷರ ಮತ್ತು ಮಹಿಳೆಯರ ನಡುವೆ ಮೂಲಭೂತವಾಗಿ ಅಸಮಾನ ಶ್ರಮವಿಭಜನೆ ಏರ್ಪಟ್ಟಿದೆ.

[illegible]

[illegible]

[illegible]

[illegible]

ಮಹಿಳೆಯು ದುಡಿಮೆಯ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ೨೧ನೇ ಶತಮಾನದಲ್ಲಿ ಸಮಾಜ ಜೀನವದ ಆರಂಭದಿಂದಲೂ ಅವಳು ದುಡಿಯುತ್ತಿದ್ದಾಳೆ. ಆದರೆ ಇಂದು ಅವಳನ್ನು ವಿವಿಧ ಶ್ರಮವರ್ಗಗಳಲ್ಲಿ ವಿವಿಧ ಸ್ತರಗಳಲ್ಲಿ ಗುರುತಿಸಬಹುದು".[೨] ಪ್ರತಿಯೊಂದು ರಾಷ್ಟ್ರವು ಅಭಿವೃದ್ಧಿಯನ್ನು ಬಯಸುತ್ತಿದ್ದು, ಅಂತಹ ರಾಷ್ಟ್ರಗಳ ಅಭಿವೃದ್ಧಿಗಾಗಿ ಪುರುಷ ಮತ್ತು ಮಹಿಳೆಯಿಬ್ಬರು ಕಾರಣವಾಗಿದ್ದು ಹಲವಾರು ದಿನಗಳಿಂದ ಮಹಿಳೆಯರಿಗೆ ಉದ್ಯೋಗದ ಅವಕಾಶಗಳು ಕಡಿಮೆಯಿದ್ದು ಉದ್ಯೋಗದಲ್ಲಿ ಪುರುಷರ ಪ್ರಮಾಣಕ್ಕಿಂತ ಅರ್ಧದಷ್ಟಿದೆ. ಹಾಗೆ ನೋಡಿದರೆ ಮಹಿಳೆಯರು ವೇದಗಳ ಕಾಲದಲ್ಲಿ, ಆರ್ಯರ ಕಾಲದಲ್ಲಿ, ಸ್ಮೃತಿಗಳ ಕಾಲದಲ್ಲಿ, ಮಹಾಕಾವ್ಯಗಳ ಕಾಲದಲ್ಲಿ ಮಹಿಳೆಯರಿಗೆ ವಿದ್ವತ್ ಸ್ಥಾನವಿತ್ತು. ದಿನಗಳು ಕ್ಷೀಣಿಸಿದಂತೆ ಮಹಿಳೆಯರಿಗೆ ಎಲ್ಲ ಕ್ಷೇತ್ರಗಳಲ್ಲಿ ಶೋಷಣೆಯಾಗುತ್ತಾ ಬಂದಿದೆ.

೬.೩ ಸ್ವ-ಸಹಾಯ ಗುಂಪುಗಳು

ಕಾಡುಗೊಲ್ಲರ ಮಹಿಳೆಯರು ಇಂದು ಸ್ವ-ಸಹಾಯ ಗುಂಪುಗಳನ್ನು ನಿರ್ಮಿಸಿಕೊಂಡಿದ್ದಾರೆ ಅದರಲ್ಲೂ ಈ ಸ್ವ-ಸಹಾಯ ಸಂಘದ ಉದ್ದೇಶವೆನೆಂದರೆ ಸಹಭಾಗಿತ್ವವನ್ನು ಪ್ರತಿನಿಧಿಸುವ ಒಂದು ಮಾದರಿಯಾಗಿದೆ. ಸ್ವಸಹಾಯ ಎಂದರೆ (ಸ್ವಂತ ದುಡಿಮೆ) ಪರಸ್ಪರ ಸಹಾಯ (ಒಬ್ಬರು ಇನ್ನೊಬ್ಬರಿಗೆ ನೆರವಾಗುವುದು) ಎಂದರ್ಥ. ಇದು ಬಡತನ ನಿವಾರಣೆ, ಮಾನವಾಭಿವೃದ್ಧಿ ಮತ್ತು ಸಮಾಜಿಕ ಸಶಕ್ತಿಕರಣಕ್ಕಾಗಿ ಇದು ಪರಿಣಾಮಕಾರಿ ಕಾರ್ಯತಂತ್ರವಾಗಿದೆ. ಸ್ವ-ಸಹಾಯ ಗುಂಪುಗಳನ್ನು ಆಧರಿಸಿ ಬಹಳಷ್ಟು ಕಾರ್ಯಕ್ರಮಗಳನ್ನು ಎನ್.ಜಿ.ಒ.(N.G.O)ಗಳ ಸಹಭಾಗಿತ್ವದಲ್ಲಿ ಮತ್ತು ಹಣಕಾಸು ಸಂಪನ್ಮೂಲ ಒದಗಿಸುವ ದಾನಿ ಸಂಸ್ಥೆಗಳ ಮೂಲಕ ಅನುಷ್ಠಾನಗೊಳ್ಳುತ್ತಿವೆ. "ಹನಿ ಹನಿ ಗೂಡಿದರೆ ಹಳ್ಳ; ತೆನೆ ತೆನೆ ಕೂಡಿದರೆ ಬಳ್ಳ" ಎಂಬ ನಾಣ್ಣುಡಿಯಂತೆ ವೈಯಕ್ತಿಕವಾಗಿ ಸಂಘಟನಾತ್ಮಕವಾಗಿ ಸದಸ್ಯರನ್ನು ಸಶಕ್ತರಾಗಿಸುವುದು ಈ ವಿಧಾನದ ಮುಖ್ಯವಾದ ಉದ್ದೇಶವಾಗಿದೆ. ಸಾರ್ವಜನಿಕ, ಖಾಸಗಿ ಕ್ಷಿತ್ರಗಳಲ್ಲಿ ಬಡವರನ್ನು ಅದರಲ್ಲೂ ಮಹಿಳೆಯರನ್ನು ಸಶಕ್ತರನ್ನಾಗಿಸುವ ಗುಂಪು ನಿಧಿಯನ್ನು ನಿರ್ವಹಿಸುವ ಪ್ರಕ್ರಿಯೆಗಳನ್ನೊಳಗೊಂಡ ಗುಂಪು ಆಧಾರಿತ ವಿಧಾನಗಳ ಮೂಲಕ ಪ್ರಭಾವ ಬೀರಿತು. ಉಳಿತಾಯವಲ್ಲದೆ, ವ್ಯವಹಾರದಿಂದ ಸಂಗ್ರಹವಾದ ಬಡ್ಡಿಯನ್ನು ಗುಂಪಿನ ಒಟ್ಟು ನಿಧಿಗೆ ಸೇರಿಸಲಾಗುತ್ತದೆ. ಇಲ್ಲಿ ಸಾಲ ನೀಡುವುದು ರೂ. ೫೦೦ ರಿಂದ ೩೦,೦೦೦ ರೂ.ಗಳವರೆಗೆ. ಈ ಸಾಲದ ಮರುಪಾವತಿ ಒಂದು ತಿಂಗಳಿನಿಂದ ಎರಡು ವರ್ಷದವರೆಗೆ ಇರುತ್ತದೆ. ಇಲ್ಲಿ ೧೮ ರಿಂದ ೬೦ ವರ್ಷದವರೆಗಿನ ೩೦ ಜನರ ಸದಸ್ಯರೊಳಗೊಂಡ ಗುಂಪು ಇರುತ್ತದೆ. ಇವರು ನಿರ್ಧಿಷ್ಟ ಮೊತ್ತವನ್ನು ಸಾಮಾನ್ಯ ನಿಧಿಗೆ ಸೇರ್ಪಡಿಸಿ ಸಂಗ್ರಹಿಸಿದ ಹಣವನ್ನು ಬ್ಯಾಂಕಿಗೆ ಕಟ್ಟುತ್ತಾರೆ. ಇವರಲ್ಲಿ ಒಬ್ಬ ಕಾರ್ಯದರ್ಶಿ, ಖಜಾಂಚಿ ಮತ್ತು ಸರ್ವಸದಸ್ಯರ ಅನುಮೋದನೆಯೊಂದಿಗೆ ನೀಡಲಾಗುತ್ತಿತ್ತು. ಹಣವನ್ನು ಖಜಾಂಚಿಯು ಬ್ಯಾಂಕಿನಲ್ಲಿಡುತ್ತಾರೆ. ಸ್ವಸಹಾಯ ಗುಂಪಿನ ಆರು ತಿಂಗಳ ಕಾಲಾವಧಿಯ ಪರಾಮರ್ಶೆ ಆಧಾರದಲ್ಲಿ ಗುಂಪಿನ ಸಾಮಾನ್ಯ ಠೇವಣಿಯಿಸುವ ಬ್ಯಾಂಕು ಮೊತ್ತದ ೪-೫ ಪಟ್ಟು ಸಾಲವನ್ನು

[illegible]

[illegible]

ಠೇವಣಿಯಿಸುವ ಬ್ಯಾಂಕ ಠೇವಣಿ ಮೊತ್ತದ ೪-೫ರಷ್ಟು ಸಾಲವನ್ನು ಸಂಧಿಸಿದೆ. ಸ್ವಸಹಾಯ ಗುಂಪಿಗೆ ಕೋರಿಕೆಯ ಮೇರೆಗೆ ನೀಡುತ್ತದೆ. ಇಲ್ಲಿ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಾ ಗುಂಪಿನ ಸದಸ್ಯರು ಸಾಲವನ್ನು ನೀಡಿ ಅದನ್ನು ಮರುಪಾವತಿ ಸಮಾರ್ಥ್ಯ ೧೦೦ಕ್ಕೆ ೧೦೦ರಷ್ಟಿದೆ. ಇಲ್ಲಿ ಯಾವುದೇ ಖಾತ್ರಿಯಿಲ್ಲದೆ ಉದ್ಯೋಗವನ್ನು ನೀಡುವುದು. ಹೀಗೆ ನಮ್ಮ ಭಾರತ ದೇಶದಲ್ಲಿರತಕ್ಕಂತ ಬಡ ಮಹಿಳೆಯರ ಸ್ವಾವಲಂಬನೆಯ ಸಾಧಿಸಿ, ಅದರ ಜೊತೆಗೆ ಗಂಡನ, ಕುಟುಂಬದ ಸಾಲವನ್ನು ತೀರಿಸುತ್ತಾ ಬಂದಿದ್ದಾಳೆ.

ಸ್ವಸಹಾಯ ಗುಂಪುಗಳ ಉದ್ದೇಶಗಳು

* ನಿಯಮಿತವಾಗಿ ಉಳಿತಾಯ ಮಾಡುವ ಹವ್ಯಾಸ

* ಸಹಭಾಗಿತ್ವದ ರೀತಿಯಲ್ಲಿ ಮತ್ತು ಖಚಿತ ಕಾರ್ಯಸೂಚಿ ಆಧಾರದ ಮೇಲೆ ಸಾಪ್ತಾಹಿಕ ಸಭೆ ನಡೆಸುವುದು. ಅಲ್ಲಿ ಸದಸ್ಯರಿಗೆ ಉದ್ದೇಶ, ಮೊತ್ತ, ಮರುಪಾವತಿ ಅವಧಿ ಇತ್ಯಾದಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು.

* ಸಾಲ ಮರುಪಾವತಿ ಮಾಡದಿದ್ದಾಗ ಬಹಿಷ್ಕಾರ ಹಾಕುವುದು

* ಮಹಿಳೆಯರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಾ ಕುಟುಂಬದ ರಕ್ಷಣೆಯನ್ನು ಕೈಗೊಂಡಿದ್ದಾರೆ.

* ಸಹಭಾಗಿತ್ವದ ಸ್ವಯಂ ಮೌಲ್ಯಮಾಪನವನ್ನು ನಡೆಸುವ ಸಾಮರ್ಥ್ಯವಿದೆ.

* ಕುಟುಂಬದ ನಿರ್ವಹಣೆಗಾಗಿ ತಮ್ಮ ಹಣವನ್ನು ಕೊಡುತ್ತಿದ್ದಾರೆ. ಉದಾಹರಣೆಗೆ ವಸತಿ, ವಿದ್ಯುತ್, ಕುಡಿಯುವ ನೀರು ಪೂರೈಕೆ, ಶೌಚಾಲಯ ನಿರ್ಮಾಣ ಇತ್ಯಾದಿ.

* ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಾರೆ ಮತ್ತು ಕಲಿಯುವ ಸಂಸ್ಕೃತಿ ಮುಂದುವರಿಸುತ್ತದೆ.

* ಸ್ವ-ಸಹಾಯ ಗುಂಪುಗಳಿಂದ ದೇವದಾಸಿ ಪದ್ಧತಿ, ವೇಶ್ಯಾವಾಟಿಕೆ ಪದ್ಧತಿ, ವರದಕ್ಷಿಣೆ, ಮಹಿಳೆ ಲೈಂಗಿಕ ಶೋಷಣೆ, ಪುರುಷರ ಮಧ್ಯಪಾನ ಮುಂತಾದ ಘಟನೆಗಳ ವಿರುದ್ಧ ಮಹಿಳೆಯರನ್ನು ಪ್ರೇರೆಪಿಸುವ ಕಾರ್ಯವನ್ನು ಮಾಡುತ್ತಿದೆ.

* ಸ್ಥಳೀಯ ಸರ್ಕಾರಗಳು, ನಗರಸಭೆ, ಜಿಲ್ಲಾ, ತಾಲೂಕು ಮತ್ತು ಗ್ರಾಮಪಂಚಾಯತ್‌ಗಳು ಉತ್ತಮ ಪಡಿಸಲು ಸಾಧ್ಯವಿದೆ.

ಪ್ರಸ್ತುತ ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಸ್ತ್ರೀಶಕ್ತಿ ಸಂಘಗಳು ಬೆಳಗೆರೆ ಗೊಲ್ಲರಹಟ್ಟಿಯಲ್ಲಿ 'ಸುಜಲಾ' ಎನ್ನುವ ಯೋಜನೆ 'ವಿಶ್ವಬ್ಯಾಂಕಿ'ನಿಂದ ಸ್ಥಾಪಿತವಾಗಿದ್ದು ಈ ಯೋಜನೆಯಲ್ಲಿ ತರಬೇತಿಗೋಸ್ಕರ ಸುತ್ತು ನಿಧಿ ಎಂದು ೧೫೦೦೦೦ ರೂ.ಗಳ ಅನುದಾನವಾಗಿ ಕೊಟ್ಟಿದೆ. ಆ ಮೂರು ಸಂಘಗಳು ಈ ಕೆಳಗಿನಂತಿವೆ.

ಕ್ರ.ಸಂ.	ಸ್ವಸಹಾಯ ಸಂಘಗಳ ಹೆಸರು	ಸಭೆ ನಡೆಯುವ ದಿನ
೧.	ಯದುನವಾ ಸಾಕ್ಷರತಾ ಸ್ವಸಹಾಯ ಮಹಿಳಾ ಸಂಘ	ಶುಕ್ರವಾರ
೨.	ಸುಜಲಾ ಮಹಿಳಾ ಸ್ವಸಹಾಯ ಸಂಘ	ಗುರುವಾರ
೩.	ಕಾವೇರಿ ಸುಜಲಾ ಮಹಿಳಾ ಸಂಘ	ಮಂಗಳವಾರ

ಕಾವೇರಿ ಸುಜಲಾ ಮಹಿಳಾ ಸ್ವಸಹಾಯ ಸಂಘದಲ್ಲಿರುವ ಸದಸ್ಯರು

ಕ್ರ.ಸಂ.	ಸದಸ್ಯರು	ಕ್ರ.ಸಂ.	ಸದಸ್ಯರು	ಕ್ರ.ಸಂ.	ಸದಸ್ಯರು
೧.	ಗೀತಾ	೬.	ಪ್ರೇಮಕ್ಕ	೧೧.	ದೇವಿರಮ್ಮ
೨.	ಜಯಮ್ಮ	೭.	ರತ್ನಮ್ಮ	೧೨.	ಕಮಲಮ್ಮ
೩.	ಚಿತ್ತಮ್ಮ	೮.	ಈರಮ್ಮ ಟಿ.	೧೩.	ಬಡಕ್ಕಿ
೪.	ತೀಪ್ಪರವ್ವ	೯.	ಚಿಕ್ಕಮ್ಮ	೧೪.	ತಿಪ್ಪಮ್ಮ
೫.	ಚಿತ್ತಮ್ಮ	೧೦.	ವೀರಮ್ಮ	೧೫.	ಶಾಂತಮ್ಮ

ಈ ಸಂಘವು ಚನ್ನವೀರಪ್ಪ ಎನ್ನುವರ ನೇತೃತ್ವದಲ್ಲಿ ನಡೆಯುತ್ತಿದೆ. ಈ ಸಂಘವು ಹಲವಾರು ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಇವರು ಸ್ತ್ರೀಯರು ತಮ್ಮ ಹಕ್ಕುಗಳನ್ನು ಕೇಳುವಂತಾಗಿದೆ. ಈ ಸಂಘದ ಮೂಲಕ ಅನಕ್ಷರಸ್ಥರಿಗೆ ರಾತ್ರಿವೇಳೆ ಅಕ್ಷರ ಜ್ಞಾನ ಮಾಡಿಸಲಾಗುತ್ತಿದೆ.

ಉದ್ದೇಶ: * ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದು.

* ಕಾಡುಗೊಲ್ಲರಿಗೆ ಸರ್ಕಾರದಿಂದ ಸಿಗುವಂತ ಸೌಲಭ್ಯಗಳು ಸಿಗುವಂತೆ ಮಾಡುವುದು.

* ಹೆಣ್ಣು ಮಕ್ಕಳು ಎಲ್ಲಾ ಕಡೆ ಮಾತನಾಡುವುದು.

* ಸಂಘದಲ್ಲಿ ಹಾಗೂ ಊರಿನ ಏಳಿಗೆಯ ಬಗ್ಗೆ ಚರ್ಚಿಸುವುದು.

ಈ ಸಂಘ ೧೫ ಮಹಿಳೆಯರಿಂದ ಕೂಡಿದ್ದು ಇವರು ಉಳಿತಾಯ ಮಾಡಿದ ಹಣವನ್ನು ಕಟ್ಟುತ್ತಾ ಸಭೆಯನ್ನು ಕರೆದು ಊರಿನ ವಿಷಯಗಳನ್ನು ಚರ್ಚಿಸುತ್ತಾ, ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಕೊಳ್ಳುತ್ತಿದ್ದಾರೆ. ಕೂಲಿಯನ್ನು ಮಾಡುತ್ತಾ ಕುಟುಂಬದ ಜವಾಬ್ದಾರಿ ಹೊತ್ತುಕೊಂಡವರಿದ್ದಾರೆ ಮತ್ತು ಸರಿಯಾದ ಸಮಯಕ್ಕೆ ಸಂಘಕ್ಕೆ ಹಣವನ್ನು ಕಟ್ಟುತ್ತಾ ಸಂಘವನ್ನು ಬೆಳೆಸಲು ಸಹಾಯ ಸಹಕಾರ ಸಲ್ಲಿಸುತ್ತಿದ್ದಾರೆ. ಆಧುನಿಕತೆಯ ಪರಿಸರದಲ್ಲಿ ಆರ್ಥಿಕವಾಗಿ ಪ್ರಬಲವಾಗುವ ವಿಷಯಗಳನ್ನು ಈ ಸಭೆಗಳಲ್ಲಿ ಚರ್ಚಿಸುತ್ತಾರೆ.

ಸ್ತ್ರೀ-ಶಕ್ತಿ ಸಂಘಗಳು ಕಾಡುಗೊಲ್ಲರಲ್ಲಿ ಇತ್ತೀಚೆಗೆ ತಲೆ ಎತ್ತುತ್ತಿವೆ. ಕಾಡುಗೊಲ್ಲರ ಮಹಿಳೆಯರು

ಹೆರಿಗೆ, ಬಾಣಂತಿ, ಮೈನೆರೆದ ಸಂದರ್ಭದಲ್ಲಿ ಶೋಷಣೆಗೊಳಪಡುತ್ತಿದ್ದರು. ಈಗ ಸ್ವಲ್ಪಮಟ್ಟಿಗೆ ಬದಲಾವಣೆಯಾಗಿದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿಯೂ ಈ ಮಹಿಳೆಯರು ಶೋಷಣೆಗೆ ಒಳಪಡುತ್ತಿದ್ದಾರೆ. ಹೀಗೆ ಕಾಡುಗೊಲ್ಲರ ಮಹಿಳೆ ಹಲವಾರು ಕ್ಷೇತ್ರಗಳಲ್ಲಿ ಹಿಂದುಳಿದಿದ್ದು, ಅವರು ಮುಂದುವರಿಯುವುದಕ್ಕೆ ಹಲವಾರು ಯೋಜನೆಗಳನ್ನು ರೂಪಿಸಬೇಕಾಗಿದೆ.

೬.೪ ಉಳಿತಾಯ

ಕಾಡುಗೊಲ್ಲರಲ್ಲಿ ಧಾರ್ಮಿಕ ಮನೋಭಾವನೆ ಪರಂಪರಾನುಗತ ಆಚರಣೆ, ನಂಬಿಕೆಗಳನ್ನು ಅತಿಯಾಗಿ ನಂಬಿದ್ದಾರೆ. ಇವರು ಹಬ್ಬ-ಹರಿದಿನ, ಅಮವಾಸ್ಯೆ, ಹುಣ್ಣಿಮೆ, ಪೂಜೆ-ಪುನಸ್ಕಾರ, ಜಾತ್ರೆ ಮುಂತಾದ ಕಾರ್ಯಕ್ರಮಗಳಲ್ಲಿಯೇ ಸಮಯ ಕಳೆಯುತ್ತಾ ಅದಕ್ಕಾಗಿಯೇ ಸಮಯವನ್ನು ವ್ಯರ್ಥ ಮಾಡುತ್ತಿರುವುದರಿಂದ ಇದರಲ್ಲಿ ಹೆಚ್ಚಾಗಲಿಕ್ಕೆ ಬಡತನವು ಕಾರಣವಾಗಿದೆ. ಧಾರ್ಮಿಕ ಆಚರಣೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣ ಖರ್ಚು ಮಾಡುವುದರಿಂದ ಉಳಿತಾಯ ಮಾಡುವ ಸಂದರ್ಭವೆ ಇವರಿಗೆ ಒದಗಿಬಂದಿಲ್ಲ. ಕಾಡುಗೊಲ್ಲರ ಮಹಿಳೆಯರು ಎಲೆ ಅಡಿಕೆ ಹಾಕಿಕೊಳ್ಳುವುದು, ನಶೆ ತಿಕ್ಕುವುದು ಮುಂತಾದ ಸಣ್ಣ ಪುಟ್ಟ ಚಟಗಳಿಗೆ ಹಣ ವ್ಯಯ ಮಡುತ್ತಾರೆ ಇದರಿಂದಾಗಿಯೂ ಉಳಿತಾಯ ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ.

೬.೫ ಖರ್ಚು-ವೆಚ್ಚಗಳು

ಕಾಡುಗೊಲ್ಲರ ಮಹಿಳೆಯರು ತಮ್ಮ ಜೀವನ ನಿರ್ವಹಣೆಗಾಗಿ ಹಲವಾರು ವೃತ್ತಿಗಳನ್ನು ಕೈಗೊಂಡಿದ್ದು ಕೃಷಿ, ಕೃಷಿಕೂಲಿ, ಕೃಷಿಯೇತರ ಕೂಲಿ, ಕೈಗಾರಿಕೆ, ವ್ಯಾಪಾರ, ಪಶುಪಾಲನೆ, ಕುರಿಸಾಕಾಣಿಕೆಗೆ, ಇನ್ನೂ ಹಲವಾರು ವೃತ್ತಿಗಳಿಂದ ಆದಾಯ ಪಡೆದುಕೊಳ್ಳುತ್ತಾರೆ. ಈ ಆದಾಯಗಳಿಂದ ತಮ್ಮ ದಿನ ನಿತ್ಯದ ಖರ್ಚುಗಳನ್ನು ಸರಿದೂಗಿಸಿಕೊಳ್ಳಲು ಮಾತ್ರ ಸಾಧ್ಯವಾಗುತ್ತಿದೆ. ಪಶುಪಾಲನೆ ಮತ್ತು ಕೃಷಿಯಿಂದ ಬಂದ ಹಣವನ್ನು ವಸತಿ, ಉಡುಗೆ-ತೊಡುಗೆ, ಪಶುಗಳಿಗೆ ರೋಗ ಬಂದರೆ ಅವುಗಳಿಗೆ ಔಷಧಿ, ಜೊತೆಗೆ ಹಬ್ಬ-ಹರಿದಿನಗಳು, ಜಾತ್ರೆ, ಮದುವೆ, ಮೊದಲಾದ ಆಚರಣೆಗಳಿಗೆ ಸಹ ಖರ್ಚು ಮಾಡುತ್ತಾರೆ. ಇವುಗಳ ಜೊತೆಗೆ ಸಾರಿಗೆ ವೆಚ್ಚವನ್ನು ಆದಾಯದಲ್ಲಿಯೆ ನಿಬಾಯಿಸಬೇಕಾಗುತ್ತದೆ. ಬರುವ ಆದಾಯ ಕಡಿಮೆಯಿದ್ದು ಖರ್ಚು ಹೆಚ್ಚಾಗುತ್ತಿದ್ದುದರಿಂದ ಕುಟುಂಬ ನಿರ್ವಹಣೆಯಿಂದ ಹಿಂದುಳಿಯುವುದಕ್ಕೆ ಕಾರಣವಾಗಿದೆ.

೬.೬ ಪಶುಪಾಲನೆ

ಪಶುಪಾಲನೆ ಕಾಡುಗೊಲ್ಲರ ಪ್ರಮುಖ ವೃತ್ತಿಯಾಗಿದ್ದರಿಂದ ಮಹಿಳೆಯರು ಇದರಲ್ಲಿ ತೊಡಗಿಸಿ ಕೊಂಡಿದ್ದಾರೆ. ಗಂಡ ಬೇರೆ ಊರಿಗೆ ಹೋಗಿದ್ದ ಸಂದರ್ಭದಲ್ಲಿ ಪಶುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಇವರ ಮೇಲಿರುತ್ತದೆ. ಪಶುಗಳನ್ನು ಸಾಕುವ ಹಾಗೂ ಮಾರುವ ಜವಾಬ್ದಾರಿಯನ್ನು ಮಹಿಳೆಯರೆ ನಿರ್ವಹಿಸುವರು. ಈ ವೃತ್ತಿಯ ಮೂಲಕ ಅವಳು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ.

ಇಂದು ಪುರುಷರಿಗಿಂತ ಕಾಡುಗೊಲ್ಲರ ಮಹಿಳೆಯರು ಪಶುಪಾಲನೆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಮನೆಯಲ್ಲಿ ಅಡುಗೆ ಮಾಡಿಕೊಂಡು ಬುತ್ತಿಯನ್ನು ತೆಗೆದುಕೊಂಡು ದನಗಳನ್ನು ಮೇಯಿಸಲು ಹೋಗುವರು. ಹಸುಗಳಿಂದ ಬೆಳಿಗ್ಗೆ ಕರೆದ ಹಾಲಿಗೆ ಹೆಪ್ಪು ಹಾಕಿ, ಮೊಸರು ಮಜ್ಜಿಗೆ ಹಾಗೂ ಬೆಣ್ಣೆ ಮಾರುವುದಕ್ಕೆ ನಗರ ಪ್ರದೇಶಗಳಿಗೆ ಹೋಗುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿದೆ. ಈ ರೀತಿ ಹೈನುತ್ಪಾದನೆಗಳ ಮಾರಾಟದಿಂದ ಬಂದ ಹಣದಿಂದ ಮಹಿಳೆಯರು ತಮ್ಮ ಕುಟುಂಬದ ನಿರ್ವಹಣೆ ಮಾಡುವರು.

ದನ, ಕುರಿಗಳನ್ನು ಮೇಯಿಸುವ ಸಂದರ್ಭದಲ್ಲಿ ಮಹಿಳೆಯರು ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಬೆಳಗ್ಗೆ ದನಗಳ ಮೈತೊಳೆದು ಅವುಗಳನ್ನು ಮೇಯಿಸಲು ಗೋಮಾಳಗಳಿಗೆ ಹೋಗುತ್ತಾರೆ. ದನಗಳು ಅಪ್ಪಿತಪ್ಪಿ ಫಸಲು ಇರುವ ಭೂಮಿಗೆ ನುಗ್ಗಿದರೆ ಅಲ್ಲಿ ಯಜಮಾನರಿಂದ ಬೈಸಿಕೊಳ್ಳಬೇಕು. ರಾತ್ರಿ ವೇಳೆ ದನಗಳಿಗೆ ಬೇಕಾಗುವ ಹುಲ್ಲನ್ನು ಹೆಂಗಸರೆ ಸಂಗ್ರಹಿಸಬೇಕಾಗುತ್ತಿದೆ. ದನಗಳ ಕೊಟ್ಟಿಗೆ ಸ್ವಚ್ಛಗೊಳಿಸುವುದು, ದನಗಳ ಯೋಗಕ್ಷೇಮ ನೋಡಿಕೊಳ್ಳುವುದು, ಹಾಲು ಕರೆಯುವುದು, ಹೀಗೆ ಹತ್ತು ಹಲವಾರು ಕೆಲಸಗಳನ್ನು ಕಾಡುಗೊಲ್ಲರ ಮಹಿಳೆಯರು ಕಾಳಜಿ ವಹಿಸಿ ಪಶುಪಾಲನೆಯನ್ನು ಅಲ್ಲಲ್ಲಿ ಮುಂದುವರೆಸಿಕೊಂಡು ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ಕಾಡುಗೊಲ್ಲರಲ್ಲಿ ಇಂದು ಅಲ್ಲಲ್ಲಿ ಪಶುಪಾಲನೆ ಉಳಿದಿದ್ದರೆ ಅದು ಮಹಿಳೆಯರಿಂದ ಎಂದು ನಿರ್ಭೀತಿಯಿಂದ ಹೇಳಬಹುದು. ದನಗಳ ಸಾಕಾಣಿಕೆಯಿಂದ ಅವರ ಬದುಕು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಪರಿಷ್ಕರಿಸಿದ ಹಸುಗಳಿಂದ ಪಶುಪಾಲನೆ ಮಾಡಿದರೆ ಆರ್ಥಿಕವಾಗಿ ಸದೃಢರಾಗಲು ಅದು ಸಾಧ್ಯವಾಗುತ್ತದೆ ಆದರೆ ಅದನ್ನು ಅವರು ನಿರ್ವಹಿಸುತ್ತಿಲ್ಲ.

೬.೬.೧. ಕುರಿಸಾಕಾಣಿಕೆ

ಕಾಡುಗೊಲ್ಲರ ಮಹಿಳೆಯರು ದನಗಳ ಸಾಕಾಣಿಕೆಗಿಂತ ಕುರಿ ಹಾಗೂ ಮೇಕೆ ಸಾಕಾಣಿಕೆಯಲ್ಲಿ ಹೆಚ್ಚಿನ ಒಲವು ತೋರಿಸುತ್ತಿರುವುದು ಕಂಡುಬರುತ್ತಿದೆ. ಕುರಿ ಹಾಗೂ ಮೇಕೆ ಸಾಕಾಣಿಕೆ ಅವರಿಗೆ ಆರ್ಥಿಕ ಭದ್ರತೆ ನೀಡಲು ಸಹಾಯವಾಗುತ್ತಿದೆ. ಕುರಿಗಳ ತಪ್ಪಳ, ಚರ್ಮ ಹಾಗೂ ಮಾಂಸಕ್ಕಾಗಿ ಕುರಿಗಳನ್ನು ಮಾರಾಟ ಮಾಡುತ್ತಿದ್ದಾರೆ. ಕೃಷಿಕರು ಕುರಿಗಳನ್ನು ತಮ್ಮ ಹೊಲಗಳಿಗೆ ಕರೆಯಿಸಿಕೊಂಡು ಒಂದು ಅಥವಾ ಎರಡು ದಿನ ಕುರಿ ಕೆಡವಿಸಿಕೊಳ್ಳುತ್ತಾರೆ. ಕುರಿಗೊಬ್ಬರ ಕೃಷಿಕ ವೃತ್ತಿಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಭೂಮಿಯ ಫಲವತ್ತತೆಗೆ ಕುರಿಗೊಬ್ಬರ ಅವಶ್ಯವಾಗಿ ಬೇಕು ಕುರಿಗೊಬ್ಬರಕ್ಕೆ ಸಾಕಷ್ಟು ಬೇಡಿಕೆ ಇದೆ. ಈ ಎಲ್ಲ ಕಾರಣಗಳಿಂದ ಕುರಿ ಹಾಗೂ ಆಡುಗಳ ಸಾಕಾಣಿಕೆಗೆ ಕಾಡುಗೊಲ್ಲರ ಮಹಿಳೆಯರು ಹೆಚ್ಚಿನ ಆಸಕ್ತಿ ವಹಿಸುತ್ತಿದ್ದಾರೆ. ಕಾಡುಗೊಲ್ಲರ ಗಂಡಸರು ಕುರಿಸಾಕಾಣಿಕೆಗೆ ಆಸಕ್ತಿ ವಹಿಸದಿದ್ದರೂ ಮಹಿಳೆಯರು ಒತ್ತಾಯ ಮಾಡುವುದರ ಮೂಲಕ ಈ ವೃತ್ತಿಯನ್ನು ಕೈಗೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಮನೆಯ ಯಜಮಾನ ಕುರಿಸಾಕಾಣಿಕೆಯಲ್ಲಿ ಆಸಕ್ತಿ ತೋರದಿದ್ದರೂ ಮಹಿಳೆಯರೆ ಆ ಕಾರ್ಯವನ್ನು

[illegible]

ಮಾಡುತ್ತಿದ್ದಾರೆ. ಮನೆಕೆಲಸಗಳನ್ನು ಮುಗಿಸಿಕೊಂಡು ಪ್ರತಿದಿನ ಕುರಿ ಹಾಗೂ ಆಡು ಮೇಯಿಸಲಿಕ್ಕೆ ಹೋಗುತ್ತಿದ್ದಾರೆ. ಕುರಿ ಹಾಗೂ ಆಡಿನ ಹಿಕ್ಕಿ ತೆಗೆದು ಅದನ್ನು ಗೊಬ್ಬರ ಗುಂಡಿಗೆ ಹಾಕುವುದು, ಕುರಿ ಹಾಗೂ ಮೇಕೆಗಳನ್ನು ನೋಡಿಕೊಳ್ಳುವುದು, ಹೊಲದಲ್ಲಿ ಕುರಿಗಳನ್ನು ಕೆಡುವುದಕ್ಕೋಸ್ಕರ ಚರ್ಚಿಸುವುದು, ಕುರಿಗಳ ಗೊಬ್ಬರ ಮಾರಾಟ ಮಾಡುವಲ್ಲಿ ಕೆಲಸಗಳನ್ನು ಕಾಡುಗೊಲ್ಲರ ಮಹಿಳೆಯರು ಆಸಕ್ತಿವಹಿಸು ತ್ತಿರುವುದು ಕಂಡುಬರುತ್ತದೆ. ಮಹಿಳೆ ನಿರ್ವಹಿಸುತ್ತಿರುವ ಈ ಜವಾಬ್ದಾರಿ ಕೆಲಸಕ್ಕೆ ಪುರುಷರು ಪ್ರೋತ್ಸಾಹ ನೀಡಿ ಅವರು ಸಹಾಯ ಸಹಕಾರಗಳನ್ನು ನೀಡಿದರೆ ಈ ವೃತ್ತಿಯ ಮೂಲಕ ಕಾಡುಗೊಲ್ಲರು ಆರ್ಥಿಕವಾಗಿ ಚೇತರಿಸಿಕೊಳ್ಳಬಹುದು. ಆದರೆ ಪುರುಷರು ಅಷ್ಟಾಗಿ ಸ್ಪಂದಿಸುತ್ತಿಲ್ಲ ಎಂದೆ ಹೇಳಬೇಕಾಗುತ್ತದೆ.

ಸಂಸಾರದ ಎಲ್ಲ ಆಗು ಹೋಗುಗಳ ಜವಾಬ್ದಾರಿ ಹೋತ್ತುಕೊಂಡು ಆರ್ಥಿಕವಾಗಿ ಬೆಳೆಯುವುದಕ್ಕಾಗಿ ಮತ್ತು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಕಾಡುಗೊಲ್ಲರ ಅನೇಕ ಮಹಿಳೆಯರು ಹಗಲಿರಳು ದುಡಿಯು ತ್ತಿರುವುದು ಕಂಡು ಬರುತ್ತದೆ. ಇಷ್ಟೆಲ್ಲ ದುಡಿದರೂ ಕಾಡುಗೊಲ್ಲರ ಪುರುಷ ಸಮಾಜ ಅವಳನ್ನು ಆರ್ಥಿಕ ಮೂಲದವಳು ಎಂದು ಪರಿಗಣಿಸಿಲ್ಲ.

ಅಡಿಟಿಪ್ಪಣಿಗಳು

೧. ದೇವಿಪ್ರಸಾದ ಚಟ್ಟೋಪಾಧ್ಯಯ, ಮಾತೆಯ ಮಾನ್ಯರಾಗಿದ್ದಾಗ, ೨೦೦೪, ಪು. ೨೩-೨೪

೨. ಅದೇ ಪು. ೨೪-೨೫

೩. ಅದೇ ಪು. ೨೫

೪. ಅದೇ ಪು. ೨೫-೨೬

೫. ಡಾ. ಹೇಮಲತಾ ಎಚ್.ಎಂ, ಮಹಿಳಾ ಅಧ್ಯಯನ-೩, ೨೦೦೬, ಪು. ೧೧

೬. ನಂಜಮ್ಮಣ್ಣಿ, ಸಾಮಾಜಿಕ ಸಂಸ್ಥೆಗಳು, ೨೦೦೩, ಪು. ೧೮೮

೭. ಕಮಲಾ ಹಂಪನಾ., ಬೊಗಸೆ, ೨೦೦೩, ಪು.೧೩೪

೮. Anant, Suchitra, Women at Work in India, 1998, P.12

೯. ಕೆ.ಡಿ. ಬಸವ, ಆಧುನಿಕ ಅರ್ಥಶಾಸ್ತ್ರ, ೧೯೮೫, ಪು. ೩೫೭

೧೦. Ramegowda A., Gender Ineguality, 1997, P.50

೧೧. Anant, Suchitra, Women at Work in India, 1986, P.12

೧೨. ಗಾಯತ್ರಿ ಎನ್. ಮಹಿಳೆ ಬಿಡುಗಡೆಯ ಹಾದಿಯಲ್ಲಿ, ೧೯೯೧, ಪು. ೧೨೧

[illegible]

[illegible]

ಅಧ್ಯಾಯ ಏಳು

ಸರ್ಕಾರದ ಯೋಜನೆಗಳು ಮತ್ತು ಕಾಡುಗೊಲ್ಲರು

೭.೧. ಹಿಂದುಳಿದ ವರ್ಗಗಳ ಯೋಜನೆಗಳಲ್ಲಿ ಅಭಿವೃದ್ಧಿ

೭.೨ ಹಿಂದುಳಿದ ವರ್ಗಗಳಿಗಿರುವ ಸರ್ಕಾರದ ಯೋಜನೆಗಳು

೭.೩ ಅಲೆಮಾರಿ ಅರೆಅಲೆಮಾರಿ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮಗಳು

೭.೪ ಕಾಡುಗೊಲ್ಲರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಅಧ್ಯಾಯ ೭

ಸರ್ಕಾರದ ಯೋಜನೆಗಳು ಮತ್ತು ಕಾಡುಗೊಲ್ಲರು

ಅಭಿವೃದ್ಧಿ ಎಂಬುದು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಅದರಲ್ಲಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿನ ಬದಲಾವಣೆಗಳನ್ನು ಅಭಿವೃದ್ಧಿ ಎಂದು ಕರೆಯಬಹುದಾಗಿದೆ. ಸ್ವಾತಂತ್ರ್ಯ ಬಂದು ೫೨ ವರ್ಷಗಳು ಕಳೆದಿದ್ದರೂ ನಾವು ಇನ್ನೂ ಅಭಿವೃದ್ಧಿ ಹೊಂದುವಲ್ಲಿ ಹಾಕಿಕೊಳ್ಳುವ ಯೋಜನೆಗಳಲ್ಲೆ ಮುಂದುವರೆಯುತ್ತಿದ್ದೇವೆ. ಅಭಿವೃದ್ಧಿ ಹೊಂದುತ್ತಿರುವ ನಮ್ಮ ದೇಶದಲ್ಲಿ ಯಾರು ಅಭಿವೃದ್ಧಿ ಹೊಂದುತ್ತಿದ್ದಾರೆ ಎಂದು ಪ್ರಶ್ನಿಸಿಕೊಂಡರೆ ಅಭಿವೃದ್ಧಿ ಹೊಂದಿದವರೆ ಮತ್ತೆ ಮತ್ತೆ ಅಭಿವೃದ್ಧಿ ಹೊಂದುತ್ತಿದ್ದಾರೆ. ಅಂದರೆ ಶ್ರೀಮಂತರು ಶ್ರೀಮಂತರಾಗಿಯೆ, ಬಡವರು ಬಡವರಾಗಿಯೆ ಉಳಿಯುತ್ತಿರುವುದನ್ನು ಕಾಣಬಹುದಾಗಿದೆ. ನಮ್ಮ ದೇಶದಲ್ಲಿ ತಳಮಟ್ಟದಲ್ಲಿಯ ಅಭಿವೃದ್ಧಿ ಅಂದರೆ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಯಾವ ಪ್ರಮಾಣದಲ್ಲಿದೆ ಎಂಬುದನ್ನು ಗಮನಿಸಿದಾಗ ನಮ್ಮ ಅಭಿವೃದ್ಧಿ ಕಲ್ಪನೆಗಳು ಯಾವ ಹಂತದಲ್ಲಿ ಬೆಳೆದಿವೆ ಎಂದು ಅರ್ಥೈಸಿ ಕೊಳ್ಳಬಹುದಾಗಿದೆ.

ಸಾಮಾನ್ಯವಾಗಿ ಅಭಿವೃದ್ಧಿಯನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಯನ್ನು ಮಾನದಂಡವಾಗಿಟ್ಟುಕೊಂಡು ಅಳತೆ ಮಾಡಿದರೆ ಅಭಿವೃದ್ಧಿಯ ಪ್ರಮಾಣ ತಿಳಿಯುತ್ತದೆ. ಕೆಳಸಮುದಾಯದವರ ಮೂಲಭೂತ ಸಮಸ್ಯೆಗಳಾದ ಆಹಾರ, ಬಟ್ಟೆ, ವಸತಿ, ಮುಂತಾದ ಅವಶ್ಯಕತೆಗಳನ್ನು ಸಮರ್ಪಕವಾಗಿ ಪೂರೈಸಲು ಸಾಧ್ಯವಾಗುತ್ತಿಲ್ಲ. ಈ ದೇಶ ತಾಂತ್ರಿಕವಾಗಿ, ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ, ಆರ್ಥಿಕವಾಗಿ, ಮುಂತಾದ ಎಲ್ಲಾ ರಂಗಗಳಲ್ಲಿಯೂ ಬೆಳೆಯುತ್ತಿದೆ, ಇದು ಸತ್ಯ ಎನ್ನುವುದಾದರೆ ಕೆಳ ಸಮುದಾಯದ ಜನರು ಮಾತ್ರ ಯಾಕೆ ಅಭಿವೃದ್ಧಿ ಹೊಂದುತ್ತಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸರ್ಕಾರದ ಅನೇಕ ಅಭಿವೃದ್ಧಿ ಯೋಜನೆಗಳು ಕೆಳಸಮುದಾಯದವರಿಗೆ ಸಮರ್ಪಕವಾಗಿ ಮುಟ್ಟುತ್ತಿಲ್ಲ. ಕೆಲ ಯೋಜನೆಗಳು ಈ ಸಮುದಾಯಗಳಿಗೆ ತಲುಪಿದರೂ ಅವುಗಳ ಪರಿಣಾಮ ಮಾತ್ರ ಶೂನ್ಯವಾಗಿರುತ್ತದೆ.

ಅಭಿವೃದ್ಧಿಯನ್ನು ಕುರಿತು ಜೆ.ಜೆ. ಶುಂಪೀಟರ್‌ರವರು "ದಿ ಥಿಯರಿ ಆಫ್ ಎಕಾನಾಮಿಕ್ ಡವಲಪ್‌ಮೆಂಟ್" ಎಂಬ ಗ್ರಂಥದಲ್ಲಿ "ಒಂದು ಸಮುದಾಯದ ಪ್ರಗತಿಯು ನಿರಂತರ ಬದಲಾವಣೆ ಹಾಗೂ ಸಾಹಸ ಕಾರ್ಯಗಳಿಂದ ಉಂಟಾದರೆ ಅದನ್ನು ಆರ್ಥಿಕ ಅಭಿವೃದ್ಧಿ ಎಂತಲೂ, ಅದೇ ಸಮುದಾಯದ ಪ್ರಗತಿಯು ನಿಧಾನಗತಿಯಲ್ಲಿ ಉಂಟಾದರೆ ಅದನ್ನು ಆರ್ಥಿಕ ಬೆಳವಣಿಗೆ".[೧] ಎಂದು ಕರೆದಿದ್ದಾರೆ.

ವಿಶ್ವಸಂಸ್ಥೆಯ ಅಧ್ಯಯನದ ಪ್ರಕಾರ "ಮಾನವನ ಭೌತಿಕ ಅಗತ್ಯತೆಗಳು ಮಾತ್ರವಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಅಂಶಗಳಲ್ಲಾಗುವ ಬದಲಾವಣೆಯೇ ಅಭಿವೃದ್ಧಿ.[೨]

ಅಮರ್ತ್ಯಸೇನ್ ಪ್ರಕಾರ "ಅಭಿವೃದ್ಧಿಯು ಜನರ ಆಯ್ಕೆಯನ್ನು ವಿಸ್ತರಿಸುವ ಪ್ರಕ್ರಿಯೆಯಾಗಿದ್ದು, ಜನರು ಸುಧೀರ್ಘ ಆರೋಗ್ಯವಂತ ಜೀವನ ನಡೆಸಲು ಅನುಕೂಲವಾಗುವ ರೀತಿಯಲ್ಲಿ ಜನರ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ".[೩]

ಹಲವಾರು ಅರ್ಥಶಾಸ್ತ್ರಜ್ಞರು ಅಭಿವೃದ್ಧಿ ಎಂದರೇನು ಎಂಬ ವಿವರಣೆಯನ್ನು ನೀಡಿದ್ದಾರೆ. ಸಮಾಜವು ಅಭಿವೃದ್ಧಿಯಾಗಬೇಕಾದರೆ ಮೂರು ಉದ್ದೇಶಗಳನ್ನು ಒಳಗೊಂಡಿರಬೇಕಾಗುತ್ತದೆ. ಅವು ಈ ಕೆಳಗಿನಂತಿವೆ.

೧. ಜೀವನಕ್ಕೆ ಅವಶ್ಯಕವಾದ ಆಹಾರ, ವಸತಿ, ರಕ್ಷಣೆಗಳ ಲಭ್ಯತೆ ಹಾಗೂ ವಿತರಣೆಗಳ ವಿಸ್ತರಣೆ.

೨. ಜೀವನಮಟ್ಟವನ್ನು ಉತ್ತಮಗೊಳಿಸುವ ಸಲುವಾಗಿ ಭೌತಿಕ ಕಲ್ಯಾಣ ಹಾಗೂ ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಗಮನ ಹರಿಸುವುದು.

೩. ಆರ್ಥಿಕ, ಸಾಮಾಜಿಕ ಆಯ್ಕೆಯ ವ್ಯಾಪ್ತಿಯನ್ನು ವಿಸ್ತರಿಸುವ ಸದ್ಉದ್ದೇಶ, ರಾಷ್ಟ್ರ ಅಥವಾ ಜನತೆಯನ್ನು ಅವಲಂಬನೆ ಅಥವಾ ಗುಲಾಮತನದಿಂದ ಹೊರತರುವುದು.

ಒಟ್ಟಾರೆಯಾಗಿ ಅಭಿವೃದ್ಧಿಯನ್ನು ರಾಷ್ಟ್ರೀಯ ಮತ್ತು ತಲಾ ಆದಾಯ ಹೆಚ್ಚಿಸಿ ವಿತರಣೆಯಲ್ಲಿ ನ್ಯಾಯ ಒದಗಿಸುವ, ವ್ಯಕ್ತಿ ಮತ್ತು ಸಮಾಜಿಕ ಜೀವನದ ಗುಣಮಟ್ಟ, ಆರ್ಥಿಕ ಕಲ್ಯಾಣ ಇವುಗಳಿಂದ ಆರ್ಥಿಕ ಅಭಿವೃದ್ಧಿಯನ್ನು ಅಳೆಯಬಹುದಾಗಿದೆ.

ಅಭಿವೃದ್ಧಿಯ ಬಗ್ಗೆ ಚರ್ಚಿಸುವಾಗ ಪಿ. ಚಿದಂಬರಂ ಅವರು ಮಂಡಿಸಿರುವ ೧೧ನೆಯ ಯೋಜನೆಗಳ ಬಜೆಟ್‌ನ್ನು ಗಮನದಲ್ಲಿಟ್ಟುಕೊಂಡು ಡಾ. ಮನುಮೋಹನಸಿಂಗ್ ಅವರು ಹೀಗೆ ಹೇಳಿದ್ದಾರೆ. "ನಮಗೆ ವರಮಾನವು ತೀವ್ರಗತಿಯಲ್ಲಿ ಏರಿಕೆಯಾಗುವ ಅಗತ್ಯವಿದೆ. ವರಮಾನದ ವರ್ಧನೆಯು ಹರಿಯ ಬಿಡುವ ಫಲಗಳ ಹರಿವು ವಿಶಾಲವಾಗದಿದ್ದರೆ ಅಂತಹ ಸಂದರ್ಭದಲ್ಲಿ ವರಮಾನ ವರ್ಧನೆಯೊಂದೆ ಸಾಕಾಗುವುದಿಲ್ಲ. ಆದ್ದರಿಂದ ನಮಗೆ ಎಂತಹ ಅಭಿವೃದ್ಧಿಯ ಅಗತ್ಯವಿದೆಯೆಂದರೆ ಅದು ಹೆಚ್ಚು ಹೆಚ್ಚು ಜನರನ್ನು ಒಳಗೊಳ್ಳುವಂತಿರಬೇಕು ಮತ್ತು ಅದು ಸಮುದಾಯದ ಎಲ್ಲ ವರ್ಗಗಳಿಗೂ ಆರೋಗ್ಯ ಮತ್ತು ಶಿಕ್ಷಣ ದೊರೆಯುವಂತೆ ಮಾಡಬೇಕು".[೪] ಆದ್ದರಿಂದ ಡಾ. ಮನುಮೋಹನ ಸಿಂಗ್‌ರವರು ಹೇಳಿದಂತೆ "ಕೇವಲ

ವರಮಾನ ವರ್ಧನೆಯಾದರೆ ಸಾಕಾಗುವುದಿಲ್ಲ. ಜನರ ಬದುಕೂ ಉತ್ತಮವಾಗಬೇಕು ಎಂದಾದರೆ ವರ್ಧನೆಯಾದ ವರಮಾನದಲ್ಲಿ ಸಮುದಾಯದ ಎಲ್ಲ ವರ್ಗಗಳೂ ಪಾಲು ಪಡೆಯುವಂತಾಗಬೇಕು. ವರ್ಧನೆಯಾದ ವರಮಾನದ ಮೇಲೆ ಎಲ್ಲಾ ವರ್ಗದ ಜನರು ತಮ್ಮ ಹಕ್ಕು ಅಧಿಕಾರ ಸ್ಥಾಪಿಸುವಂತಾಗಬೇಕು. ವರ್ಧನೆಯಾದ ವರಮಾನವನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯವು ವರ್ಧನೆಯಾಗಬೇಕು. ಅದು ಜನರನ್ನು ಒಳಗೊಳ್ಳುವ ಅಭಿವೃದ್ಧಿ ವರ್ಧನೆಯಾದ ವರಮಾನದ ಪರಿಧಿಯಿಂದ ಹೊರಗಿರುವ ಜನರನ್ನು ಸರಧಿಯೊಳಗೆ ತರುವ ಪ್ರಕ್ರಿಯೆಯೆ ಜನರನ್ನು ಒಳಗೊಳ್ಳುವ ಅಭಿವೃದ್ಧಿ".[೫]

ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕ್ಷೇತ್ರಗಳ ಅಭಿವೃದ್ಧಿಯ ಜೊತೆಗೆ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ನೈರ್ಮಲ್ಯದ ಸ್ವಚ್ಛತೆ, ಬಡತನ ಮತ್ತು ನಿರುದ್ಯೋಗದ ನಿವಾರಣೆ, ನಾಯಕತ್ವದ ತರಬೇತಿ, ಪಂಚಾಯತಿ ರಾಜ್ಯಗಳ ವ್ಯವಸ್ಥೆಯ ಬಲವರ್ಧನೆ, ವಸತಿ ಸೌಲಭ್ಯ, ಕೃಷಿಕ್ರಾಂತಿ, ಜೀತಪದ್ಧತಿಯ ನಿರ್ಮೂಲನೆ ಎಂಬ ಅಂಶಗಳು ಕೂಡಾ ಮುಖ್ಯವಾಗಿವೆ.

ವೆರಿಯರ್ ಎಲ್ವಿನ್ ಅವರು "ಅಭಿವೃದ್ಧಿಯ ಶಪ್ತ ಅಸ್ತಿಗಳು ಪ್ರೀತಿಯಿಂದ ಸ್ಫೂರ್ತಿಗೊಂಡು ಪ್ರಜ್ವಲಿಸುವಂತಾದಾಗ ಬುಡಕಟ್ಟು ಜನ ಪ್ರತಿಕ್ರಿಯಿಸುತ್ತಾರೆ. ಅವರು ಬದಲಾವಣೆಯನ್ನು ಬಯಸುತ್ತಾರೆ".[೬] ಆದಿವಾಸಿಗಳು ಎಷ್ಟೇ ಪ್ರಗತಿಯನ್ನು ಸಾಧಿಸಿದ್ದಾರೆ. ಎನ್ನುವುದಾದರೆ ಉತ್ಪಾದನೆಯ ಹಂತದಲ್ಲಿ ಮಾನವ ಶಕ್ತಿಯನ್ನು ನಿರಾಕರಿಸುತ್ತಾ ತಮ್ಮದೆ ಆದ ಕೌಶಲ್ಯಗಳನ್ನು ಬಳಸಿಕೊಳ್ಳುತ್ತಾ ಹಿಂದುಳಿಯಲು ಕಾರಣವಾಗುತ್ತಿದ್ದಾರೆ. ಇಲ್ಲಿ ಸರ್ಕಾರವು ಅಭಿವೃದ್ಧಿ ಯೋಜನೆಗಳತ್ತ ಗಮನಹರಿಸಬೇಕಾಗಿದೆ.

"ನಮ್ಮಲ್ಲಿ ಅಭಿವೃದ್ಧಿ ಎಂದರೆ ಬೃಹತ್ ಕೈಗಾರಿಕೆಗಳ ಸ್ಥಾಪನೆ, ದೊಡ್ಡ ದೊಡ್ಡ ಆಣೆಕಟ್ಟುಗಳ ನಿರ್ಮಾಣ, ಹಳ್ಳಿಗಳಿಗೆ ಶೌಚಾಲಯ ಕಟ್ಟಿಕೊಡುವುದು, ಅವರಿಗೆ ಸಾಕ್ಷರರಾಗಿ ಎಂದು ಘೋಷಣೆ ಕೂಗುವುದು ಇತ್ಯಾದಿ. ಸ್ಥೂಲವಾಗಿ ಅಭಿವೃದ್ಧಿ ಎಂದರೆ 'ಇದೇ' ಎಂಬ ಪರಿಕಲ್ಪನೆ ನಮ್ಮಲ್ಲಿದೆ. ನಾವು ಈ ಅಭಿವೃದ್ಧಿ ಪರಿಕಲ್ಪನೆಯನ್ನು ಸಮಗ್ರ ಭಾರತದ ಚೌಕಟ್ಟಿನಲ್ಲಿಟ್ಟು ನೋಡುವ ಕ್ರಮವೇ ನಮಗೆ ಮೇಲಿನ ಭ್ರಮೆಗಳನ್ನು ಹುಟ್ಟಿಸಿರಲೂಬಹುದು. ಸಾಮಾಜಿಕ ಅಸಮಾನತೆ, ವರ್ಗ ಅಸಮಾನತೆ, ಪ್ರಧಾನವಾಗಿ ಎದ್ದು ಕಾಣುವ ಇಂಡಿಯಾ ದೇಶದಲ್ಲಿ ಈ ಅಭಿವೃದ್ಧಿ ಎಂಬ ಸಂಕಥನವನ್ನು ಏಕಾಏಕಿಯಾಗಿ ಹೀಗೆ ಪರಿಭಾವಿಸುವ ಕ್ರಮ ಅಸಮಂಜಸವಾದದ್ದು".[೭] ಇಷ್ಟಲ್ಲೇದರ ನಡುವೆಯೂ ಒಂದು ಆರ್ಥಿಕತೆಯ ರಾಷ್ಟ್ರೀಯ ವರಮಾನವು ಹೆಚ್ಚಾಗುವುದನ್ನು ಅಭಿವೃದ್ಧಿ ಎಂದು ಹೇಳಬಹುದು. ಇದಕ್ಕೆ ಪೂರಕವಾಗಿ ಅಮರ್ತ್ಯಸೇನ್ "ಮಾನವಮುಖೀ ಅಭಿವೃದ್ಧಿ ಕಥನವನ್ನು ಕಟ್ಟಿಕೊಟ್ಟಿದ್ದಾರೆ. ಉತ್ಪಾದನೆಯ ಯಾವ ಹಂತದಲ್ಲೂ ಶ್ರಮಿಕನ ಶ್ರಮಕ್ಕೆ ಬೆಲೆಕೊಡದ ನಾಗರಿಕತೆಯಲ್ಲಿ ಮಾನವನ ಶ್ರಮ ಮತ್ತು ಅವನ ಹಿತ ಸಂವರ್ಧನೆಯನ್ನು ಈ ಕಥನ ಮುಖ್ಯವಾಗಿ ಪ್ರತಿಪಾದಿಸುತ್ತದೆ. ಆರ್ಥಿಕಾಭಿವೃದ್ಧಿಯ ಗರಬಡಿಸಿಕೊಂಡ ವ್ಯವಸ್ಥೆಯಲ್ಲಿ ಈ ಅಭಿವೃದ್ಧಿ ಕಥನ ಈ ಶತಮಾನದ ಅತ್ಯಂತ ಮುಖ್ಯ ಸಾಧನೆಗಳಲ್ಲೊಂದು. ಮಾನವಶ್ರಮ ಅವನ ಉತ್ಪಾದನಾ

[illegible]

ಶಕ್ತಿಯನ್ನು ಬಂಡವಾಳ ಮತ್ತು ಯಂತ್ರ ಜಗತ್ತು ಎಂದು ಕ್ಷುದ್ರವಾಗಿ ಕಾಣುತ್ತಾ ಬಂದಿದೆ. ಅದಕ್ಕೆ ಮಾನವನ ನೈಜ ಸಾಮರ್ಥ್ಯಕ್ಕಿಂತ ಯಂತ್ರಗಳ ಮೋಹ ಹೆಚ್ಚು. ಅಲ್ಲಿ ಮನುಷ್ಯನ ಹಿತವನ್ನು ಕಾಪಾಡುವ, ಅದಕ್ಕೆ ಬೆಲೆಗಟ್ಟುವ ಮನಸ್ಸು ನಾಶವಾಗುತ್ತದೆ. ಇಲ್ಲಿ ಹಿತವನ್ನು ಕಾಪಾಡುವ ಅದಕ್ಕೆ ಬೆಲೆಟ್ಟುವ ಮನಸ್ಸು ನಾಶವಾಗಿರುತ್ತದೆ. ಇಲ್ಲಿ ಮನುಷ್ಯನ 'ಇರುವು' ನೆಪ ಮಾತ್ರ ಬಂಡವಾಳ ಮತ್ತದರ ಹೀನ ಸಂತಾನವಾದ ಯಂತ್ರಗಳದೆ ಕಾರುಬಾರು. ಮನುಷ್ಯ ನಿಜ ಅರ್ಥದಲ್ಲಿ ಬಂಧಿತ ಬದುಕನ್ನು ಸಾಗಿಸಲು ಇರುವ ಅವಕಾಶಗಳಲ್ಲಿ ಜನರು ತಮಗೆ ಇಷ್ಟವಾದುದನ್ನು ಆಯ್ದುಕೊಳ್ಳಲು ಮುಕ್ತವಾಗಿರಬೇಕು. ಮಾನವ ಮುಖಿ ಅಭಿವೃದ್ಧಿಯ ಅಂತಿಮ ಗುರಿ ವರಮಾನವಲ್ಲ, ಉತ್ಪಾದನೆಯಲ್ಲ, ಅಣುಬಾಂಬಗಳಲ್ಲ, ಅಭಿವೃದ್ಧಿ ಗುರಿ. ಮಾನವ ಮತ್ತು ಮಾನವನ ಬದುಕು".[೮] ಹೀಗೆ ಅಭಿವೃದ್ಧಿಯನ್ನು ಅಮರ್ತ್ಯಸೇನ್‌ರವರು ವಿಶ್ಲೇಷಿಸಿದ್ದಾರೆ. ಆದರೆ ಈ ಅಭಿವೃದ್ಧಿಯಲ್ಲಿ ಸರ್ಕಾರದ ಯೋಜನೆಗಳು ಜನರಿಗೆ ಎಷ್ಟರ ಮಟ್ಟಿಗೆ ತಲುಪಿವೆ ಎಂದು ಹೇಳುವುದು ಕಷ್ಟವಾಗಿದೆ. ಅನೇಕ ಯೋಜನೆಗಳು ಸರಿಯಾಗಿ ತಲುಪದೆ ಜನರು ಹಿಂದುಳಿಯಲು ಕಾರಣವಾಗಿದೆ ಎಂದು ಹೇಳಬಹುದು. ಮಾನವಶಕ್ತಿಯ ಉಪಯೋಗವಾಗಿ ದೇಶ ಅಭಿವೃಧಿಯಾಗಿದೆಯೆ ಅಥವಾ ಅನಾಭಿವೃದ್ಧಿಯಾಗಿದೆಯೊ ಎಂದು ತಿಳಿಯಲು ಪ್ರಯತ್ನಿಸಿದಾಗ ಭಾರತದೇಶ ಅಭಿವೃದ್ಧಿ ದೇಶವಾಗಿ ಮುಂದುವರಿಯುತ್ತಿದೆ.

೭.೧. ಹಿಂದುಳಿದ ವರ್ಗಗಳ ಯೋಜನೆಗಳಲ್ಲಿ ಅಭಿವೃದ್ಧಿ

ಭಾರತ ಸರ್ಕಾರದ ಸಂವಿಧಾನದಲ್ಲಿ ಎಲ್ಲ ಜಾತಿಗಳಿಗೆ, ಸಮುದಾಯಗಳಿಗೆ ಸೌಲಭ್ಯಗಳನ್ನು ನೀಡುತ್ತಾ ಬಂದಿದೆ. ಅದರಲ್ಲಿ ಕೆಲ ಸೌಲಭ್ಯಗಳನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಿದ್ದು ಅದರಲ್ಲಿ ಅನೇಕ ಸೌಲಭ್ಯಗಳನ್ನು ಪಡೆಯುತ್ತಾ ಬಂದಿವೆ. ಸರ್ಕಾರವು ಹಿಂದುಳಿದ ಜನರ ಆರ್ಥಿಕ ದುಸ್ಥಿತಿಯನ್ನು ಸುಧಾರಿಸಲು ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಅಭಿವೃದ್ಧಿ ಸಾಧಿಸಲು ಹಲವಾರು ಸವಲತ್ತುಗಳನ್ನು ನೀಡಿದೆ. ಮೀಸಲಾತಿಗಳಲ್ಲಿ ಅವರವರ ಪರಿಸ್ಥಿತಿಯ ಆಧಾರದ ಮೇಲೆ ಸೌಲಭ್ಯಗಳನ್ನು ನೀಡುತ್ತಿದೆ. ಅದರಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಈ ತರದಲ್ಲಿ ನೀಡಲಾಗಿದೆ. ಕರ್ನಾಟಕ ಸರ್ಕಾರದ ಪ್ರಕಾರ ಕಾಡುಗೊಲ್ಲರು ಹಿಂದುಳಿದ ಬುಡಕಟ್ಟುಗಳ ಪಟ್ಟಿಯಲ್ಲಿದ್ದಾರೆ. ಇವರು ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ನಿಸ್ಸಂಶಯವಾಗಿ ಹಿಂದುಳಿದಿದ್ದಾರೆ. ೧೯೭೫ರಲ್ಲಿ ಕರ್ನಾಟಕ ಸರ್ಕಾರ ಮೊದಲಿಗೆ ಅಲೆಮಾರಿ ಮತ್ತು ಅರೆಅಲೆಮಾರಿ ಬುಡಕಟ್ಟುಗಳೆಂದು ಪರಿಗಣಿಸಿದ್ದ ೪೯ ಬುಡಕಟ್ಟುಗಳನ್ನು ಪರಿಷ್ಕರಿಸಿ ಒಪ್ಪಿಕೊಂಡಿರುವುದು ಸೂಕ್ತವಾಗಿದೆ. ಈ ಪಟ್ಟಿಯನ್ನು ಪರಿಶೀಲಿಸಿದಾಗ ಕಾಡುಗೊಲ್ಲರನ್ನು ಸೇರಿಸಿ ಯಾದವರು ಅಥವಾ ಗೊಲ್ಲರೆಂದು ಕರೆಯುತ್ತಾರೆ. ಸರ್ಕಾರ ಹಿಂದುಳಿದ ಬುಡಕಟ್ಟು ಜನರಿಗೆ ಶೈಕ್ಷಣಿಕವಾಗಿ ಮುಂದುವರಿಯಲು ಅನೇಕ ಸವಲತ್ತುಗಳನ್ನು ನೀಡಿದೆ. ಇಲ್ಲಿ ಶೇ. ೩ರಷ್ಟು ಸ್ಕಾಲರ್‌ಶಿಪ್ ಪಡೆಯಬಹುದು. ಅದರಂತೆ ಉದ್ಯೋಗಗಳಲ್ಲಿ ಶೇ. ೩ರಷ್ಟು ಸ್ಥಾನಗಳನ್ನು ಕೊಟ್ಟಿದೆ. ಆದರೆ ಕಾಡುಗೊಲ್ಲರಲ್ಲಿಯೆ ಅನೇಕ ಸಮುದಾಯಗಳು ಸೇರಿ

[illegible]

[illegible]

ಹೋಗಿರುವುದರಿಂದ ಅತಿ ಹೆಚ್ಚು ಹಿಂದುಳಿದ ಕಾಡುಗೊಲ್ಲರ ಜನಾಂಗಕ್ಕೆ ಶೋಷಣೆಯಾಗುತ್ತಿದೆ ಎಂದೇ ಹೇಳಬಹುದು. ಪೈಪೋಟಿಯುತ ಜಾತಿ ರಾಜಕಾರಣದಲ್ಲಿ ಅತಿಹೆಚ್ಚು ಶೋಷಣೆಗಳಾಗುತ್ತಿರುವ ಅನೇಕ ಸಮುದಾಯಗಳಲ್ಲಿ ಅದರಲ್ಲಿ ಕಾಡುಗೊಲ್ಲರ ಸಮುದಾಯವೂ ಒಂದಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ್ ನೇರ ಅಧೀನದಲ್ಲಿದ್ದ ಪ್ರಾಂತ್ಯಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಸರ್ಕಾರಿ ನೌಕರಿಗಳಿಗೆ ಜನರನ್ನು ಅರ್ಹತೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಿದ್ದು ಇಂತಹ ನೌಕರಿಗಳು ಹೆಚ್ಚು ಬುದ್ಧಿವಂತರೆನ್ನುವ ಬ್ರಾಹ್ಮಣರಿಗೆ ಸಿಗುತ್ತಿದ್ದವು. ಈ ನೀತಿಯಿಂದ ಇದರಿಂದ ಅನೇಕ ಸಮುದಾಯಗಳಿಗೆ ಮತ್ತು ಜಾತಿಗಳಿಗೆ ಅನ್ಯಾಯವಾಗುತ್ತಿತ್ತು, ಈ ಅನ್ಯಾಯವನ್ನು ತಡೆಗಟ್ಟುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಆಯೋಗಗಳನ್ನು ರಚಿಸುವುದರ ಮೂಲಕ ಎಲ್ಲಾ ಸಮುದಾಯಗಳಿಗೆ ನ್ಯಾಯ ಸಿಗುವಂತೆ ಮಾಡಿತು. ಜಸ್ಟೀಸ್ ಪಾರ್ಟಿಯಲ್ಲಿ ರಾಜಕೀಯ ಸಂಘಟನೆ ಪ್ರಾರಂಭವಾಗಿ ರಾಜಕೀಯ, ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ನೀಡುವಂತೆ ಇದರಲ್ಲಿ ಎಂ. ಬಸಯ್ಯ, ಎಸ್. ಚನ್ನಯ್ಯ, ಗುಲಾಮಿ ಅಹಮ್ಮದ್, ಕಲಾಮಿ ಮೊದಲಾದವರು ಪ್ರಜಾಮಿತ್ರ ಮಂಡಳಿಯಲ್ಲಿ ಪ್ರಥಮ ಹಿಂದುಳಿದ ವರ್ಗಗಳ ರಾಜಕೀಯ ಸಂಘಟನೆಗೆ ಅಹವಾಲವನ್ನು ಕೊಟ್ಟರು. ಆಗ ಸರ್ಕಾರವು ೧೯೧೮ರ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ಸರ್ ಲೆಸ್ಲೀಮಿಲ್ಲರ್ ಸಮಿತಿಯನ್ನು ಜಾರಿಗೆ ತಂದಿತು. ಈ ಆಯೋಗದಲ್ಲಿ ಬ್ರಾಹ್ಮಣೇತರ ಸಮುದಾಯಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ, ಸರ್ಕಾರಿ ಸೇವೆಗಳಲ್ಲಿ ಅರ್ಹರಾದವರನ್ನು ನೇಮಕ ಮಾಡಿಕೊಳ್ಳುವುದರ ಮೂಲಕ, ೧೯೧೯ರಲ್ಲಿ ತನ್ನ ಕಾರ್ಯಗಳನ್ನು ಪೂರ್ಣ ಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿತು. ಹೆಚ್ಚು ವರದಿಯಲ್ಲಿ ೭ ವರ್ಷಗಳಲ್ಲಿ ಸರ್ಕಾರ ಶೇ. ೫೦ಕ್ಕೂ ಉನ್ನತ ಹುದ್ದೆಗಳು ಮತ್ತು ಮೂರನೆಯ ಎರಡು ಭಾಗ ಹಿಂದುಳಿದ ವರ್ಗಗಳಿಗೆ ಪ್ರಾಪ್ತವಾಗಬೇಕೆಂಬ ಅಂಶ ಅಡಕವಾಗಿತ್ತು, ಆಯೋಗವು ತನ್ನ ಸಮಿತಿ ವರದಿಯನ್ನು ಸರ್ಕಾರದ ಮುಂದೆ ಇಟ್ಟಾಗ ಈ ವರದಿಯ ಪ್ರಕಾರ ಮುಸ್ಲಿಮರು, ವೀರಶೈವರು, ಜೈನರು ಲಾಭವನ್ನು ಪಡೆದುಕೊಂಡರು. ಆದರೆ ಕಾಡುಗೊಲ್ಲರ ಸಮುದಾಯವು ಹಿಂದುಳಿದ ವರ್ಗಗಳಲ್ಲಿಯೆ ಅತಿ ಹಿಂದುಳಿದ ಸಮುದಾಯವಾಗಿದ್ದು ಇವರಿಗೆ ಯಾವುದೆ ಸೌಲಭ್ಯಗಳು ಸಿಗದೆ ಹೋಯಿತು. ಸ್ವಾತಂತ್ರ್ಯ ನಂತರ ೧೯೫೧ರಲ್ಲಿ ಮೈಸೂರು ಸರ್ಕಾರವು ಎಲ್ಲ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡು ಬ್ರಾಹ್ಮಣರು ಮತ್ತು ಪ್ರಬಲ ಜಾತಿಗಳು ಸೇರಿ ೧೮ ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಜಾತಿಗಳಿಗೆ ಪ್ರತ್ಯೇಕ ಮೀಸಲಾತಿಯನ್ನು ನೀಡಿದರು. ೧೯೫೯ರಲ್ಲಿ ಮೈಸೂರು ಸರ್ಕಾರಕ್ಕೆ ಹಿಂದುಳಿದ ೧೬೫ ಸಮುದಾಯಗಳನ್ನು ವರ್ಗೀಕರಿಸಿ ಶೇ. ೫೭ರಷ್ಟು ಮೀಸಲಾತಿಯನ್ನು ನೀಡಬೇಕೆಂದು ಉಚ್ಚನ್ಯಾಯಲಯವು ತೀರ್ಪನ್ನು ನೀಡಿತು. ಸೌಲಭ್ಯಗಳು ಪ್ರಬಲ ಹಿಂದುಳಿದ ಜಾತಿಗಳಿಗೆ ಸಿಕ್ಕವು. ಇಲ್ಲಿಯೂ ಕಾಡುಗೊಲ್ಲರಿಗೆ ಸಿಗಬೇಕಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯ ಸೌಲಭ್ಯಗಳು ಲಭಿಸಲಿಲ್ಲ. ಹೀಗೆ ಕಾಡುಗೊಲ್ಲರ ಸಮುದಾಯವು ಯಾವುದೆ ಸೌಲಭ್ಯವಿಲ್ಲದೆ ನಾಗರಿಕ ಸಂಸ್ಕೃತಿಯಿಂದ ದೂರವಿದ್ದ ಇಂತಹ ಗ್ರಾಮಗಳು ಹಿಂದುಳಿಯುತ್ತಾ ಬಂದಿವೆ. ಇದೇ ಸಂದರ್ಭದಲ್ಲಿ

[illegible]

ಕರ್ನಾಟಕ ಸರ್ಕಾರವು ಡಾ. ಆರ್. ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಿ ಆ ಸಮಿತಿಯು ಯಾರು ಶೈಕ್ಷಣಿಕ ಮಟ್ಟದಲ್ಲಿ, ಸರ್ಕಾರಿ ಸೇವೆಯಲ್ಲಿ, ಸಾಮಾಜಿಕವಾಗಿ ಹಿಂದುಳಿದಿದ್ದು ಅವರುಗಳ ಅಂತಸ್ತಿನ ಆಧಾರದ ಮೇಲೆ ಹಿಂದುಳಿದವರೆಂದು ನಿರ್ಧರಿಸಲ್ಪಟ್ಟು ಹಿಂದುಳಿದ ವರ್ಗಗಳನ್ನು ಗ್ರೂಪ 'ಎ' ಮತ್ತು ಗ್ರೂಪ 'ಬಿ' ಎಂದು ವಿಂಗಡಿಸಿದರು. ಕಾಡುಗೊಲ್ಲರು ಗ್ರೂಪ 'ಬಿ' ಎಂದು ವರ್ಗೀಕರಿಸಿತು. ಈ ಸಮಿತಿ ಕೇಂದ್ರಸರ್ಕಾರಕ್ಕೆ ಕಾಡುಗೊಲ್ಲರನ್ನು ಸೇರಿಸುವಂತೆ ಶಿಫಾರಸ್ಸು ಮಾಡಲಿಲ್ಲ. ಆಗ ಕೇಂದ್ರಸರ್ಕಾರ ಮಾತ್ರವಲ್ಲದೆ ರಾಜ್ಯ ಸರ್ಕಾರ ಇವರಿಗೆ ಯಾವುದೇ ಪ್ರಾತಿನಿಧ್ಯವನ್ನು ಕೊಡದೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಉದ್ಯೋಗದಲ್ಲಿ ಹಿಂದುಳಿಯುವಿಕೆಗೆ ಅವಕಾಶ ಮಾಡಿಕೊಟ್ಟಿತ್ತು. ಇದರಿಂದ ರೊಚ್ಚಿಗೆದ್ದ ಜನಾಂಗದ ಮುಖಂಡರು ಕಾಡುಗೊಲ್ಲರ ಸಮುದಾಯ ಎಷ್ಟರ ಮಟ್ಟಿಗೆ ಹಿಂದುಳಿದಿದೆ ಎನ್ನುವುದನ್ನು ಮನವರಿಕೆ ಮಾಡಿಕೊಟ್ಟಾಗ ಅಂತಹ ಸಂದರ್ಭದಲ್ಲಿ ಬುಡಕಟ್ಟು ಲಕ್ಷಣಗಳನ್ನು ಹೊಂದಿದ ಕಾಡುಗೊಲ್ಲರ ಅಲೆಮಾರಿ ಮತ್ತು ಅರೆಅಲೆಮಾರಿತವನ್ನು ಗಮದಲ್ಲಿಟ್ಟುಕೊಂಡು ೧೯೭೬ರಲ್ಲಿ ಒಂದು ಆದೇಶವನ್ನು ಹೊರಡಿಸಿತು. ಅದರ (ಸರ್ಕಾರಿ ಅದೇಶ ಸಂ. ಪಿ.ಎಚ್.ಎಸ್. ೨೬೨ ಎಸ್.ಇ.ಡಬ್ಲ್ಯೂ ೬೫ ದಿನಾಂಕ ೧.೨.೧೯೭೬) ಪ್ರಕಾರ ಕಾಡುಗೊಲ್ಲರ ಸಮುದಾಯವನ್ನು Nomadic and Seminomadic Tribes ಪಟ್ಟಿಯಲ್ಲಿ ಸೇರಿಸಿತು.

ಕಾಡುಗೊಲ್ಲರಿಗೆ ಉದ್ಯೋಗದಲ್ಲಿ, ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ, ನಿವೇಶನ ಹಂಚಿಕೆಯಲ್ಲಿ, ಜನತಾ ಮನೆಗಳಲ್ಲಿ, ಮೀಸಲಾತಿ ಹಾಗೂ ಪಶುಪಾಲನೆಗಾಗಿ ಮತ್ತು ಹಸು ಎತ್ತುಗಳನ್ನು ಕೊಳ್ಳಲು ಸಬ್ಸಿಡಿ, ಕೃಷಿ ಉಪಕರಣಗಳನ್ನು ಖರೀದಿಸಲು ರಿಯಾಯಿತಿ ಮುಂತಾದ ಇತರೆ ಸೌಲಭ್ಯಗಳನ್ನು ಒದಗಿಸಿದರು.

ಕರ್ನಾಟಕ ಸರ್ಕಾರವು ೧೯೭೨ರ ಅಗಸ್ಟ್‌ನಲ್ಲಿ ಹಾವನೂರು ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಿ, ಆ ಆಯೋಗದಲ್ಲಿ ಒಂದು ವಿಸ್ತೃತವಾದ ಮಾಹಿತಿಯನ್ನು ಸಂಗ್ರಹಿಸಲಾಯಿತು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವೈಜ್ಞಾನಿಕವಾಗಿ ಸಿದ್ಧಪಡಿಸಿದ ಪ್ರಶ್ನಾವಳಿ, ವಿಚಾರಗೋಷ್ಠಿ, ಮನವಿಗಳನ್ನು ಸ್ವೀಕಾರ, ಸಂದರ್ಶನ, ಅವಲೋಕನದ ಆಧಾರಗಳ ಮೂಲಕ ಹಿಂದುಳಿದ ವರ್ಗಗಳ ಬಗ್ಗೆ ವಿಸ್ತಾರವಾದ ಮಾಹಿತಿಯನ್ನು ಸಂಗ್ರಹಿಸಿತು. ಸುಪ್ರೀಂ ಕೋರ್ಟ್ ಮೀಸಲಾತಿ ಪ್ರಮಾಣ ಶೇ. ೫೦ರಷ್ಟು ಮೀರಬಾರೆಂದು ಕಟ್ಟಳೆ ಇದ್ದರೂ ಅದನ್ನು ಗಮನದಲ್ಲಿಟ್ಟುಕೊಂಡು ೧. ಹಿಂದುಳಿದ ಬುಡಕಟ್ಟುಗಳು ಬಿ.ಟಿ. ಶೇ. ೬ರಷ್ಟು ೨. ಹಿಂದುಳಿದ ಜಾತಿಗಳು ಶೇ. ೧೦ರಷ್ಟು ೩. ಹಿಂದುಳಿದ ಸಮುದಾಯಗಳಿಗೆ ಶೇ. ೧೬ರಷ್ಟು ಮೀಸಲಾತಿ ನೀಡಬೇಕೆಂದು ಸರ್ಕಾರಕ್ಕೆ ೧೯೭೭ರಲ್ಲಿ ವರದಿಯನ್ನು ತಯಾರಿಸಿ, ಸರ್ಕಾರಕ್ಕೆ ದೇವರಾಜು ಅರಸರ ಕಾಲದಲ್ಲಿ ಸಲ್ಲಿಸಿತು. ಈ ಸಂದರ್ಭದಲ್ಲಿ ಕಾಡುಗೊಲ್ಲರನ್ನು ಹಾವನೂರು ಸಮಿತಿ ಹಿಂದುಳಿದ ಬುಡಕಟ್ಟಿಗೆ ಸೇರಿಸಿತು ಇದರಿಂದ ಆಯೋಗದಲ್ಲಿ ಮೀಸಲಾತಿಯಲ್ಲಿ ಆದಾಯದ ಮಿತಿಯನ್ನು ಹೇರಲಾಯಿತು. ಆದರೆ ನಾಗನಗೌಡ ಸಮಿತಿಯಲ್ಲಿ ಆದಾಯದ ಮಿತಿಯಿಲ್ಲದೆ ಮೀಸಲಾತಿ ನೀಡಿದ್ದರು. ಇದರಿಂದ ಕಾಡುಗೊಲ್ಲ

ಜನಾಂಗಕ್ಕೆ ಬಹಳಷ್ಟು ಅನ್ಯಾಯವಾಯಿತೆಂದೆ ಹೇಳಬಹುದು. ಇದನ್ನರಿತ ಕಾಡುಗೊಲ್ಲರ ಸಮುದಾಯ ಯಾದವ ಸಂಘದ ಮುಖಂಡರು ಬೃಹತ್ ಪ್ರತಿಭಟನೆಯ ಮುಖಾಂತರ ಈ ಅನ್ಯಾಯವನ್ನು ವಿರೋಧಿಸಿದರು. ಗೊಲ್ಲರ ಜನಾಂಗದ ಸಮಸ್ಯೆಗಳನ್ನು ಅರಿತ ದೇವರಾಜ ಅರಸರು ಕಾಡುಗೊಲ್ಲರ ಜನಾಂಗವು ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟಿನಷ್ಟೇ ಹೀನಾಯವಾದ ಸ್ಥಿತಿಯನ್ನು ಅನುಭವಿಸುತ್ತಿದೆ ಎಂದು ತಿಳಿಸಿ ಆದಾಯದ ಮಿತಿಯನ್ನು ತೆಗೆದು ಹಾಕಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಂತೆ ಕಾಡುಗೊಲ್ಲರಿಗೂ ಆದಾಯದ ಮಿತಿಯನ್ನು ತೆಗೆದು ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಅರ್ಹರು ಎಂದು ಆದೇಶ ಮಾಡಲಾಯಿತು. ಹಿಂದುಳಿದ ವರ್ಗಗಳ ಮೂರನೆ ಆಯೋಗವನ್ನು ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೇಮಿಸಲಾಯಿತು. ವೆಂಕಟಸ್ವಾಮಿ ಆಯೋಗವು "ಎಸ್.ಎಸ್.ಎಲ್.ಸಿ. ತೇರ್ಗಡೆ, ಭೂಹಿಡುವಳಿ, ಮನೆಮಾಲಿಕತ್ವ, ಆದಾಯ, ಇತ್ಯಾದಿ ಸೇರಿದಂತೆ ಲಿಂಗಾಯತ, ಒಕ್ಕಲಿಗ, ಬಲಿಜ, ದೇವಾಂಗ, ಗಾಣಿಗ ಇತ್ಯಾದಿ ೧೩ ಸಮುದಾಯಗಳನ್ನು ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಯಿಂದ ಹೊರಗಿಟ್ಟು ಅಂತಿಮವಾಗಿ ಆಯೋಗವು ತನ್ನ ವರದಿಯನ್ನು ೩೧.೩.೧೯೮೬ರಂದು ಸರ್ಕಾರಕ್ಕೆ ಒಪ್ಪಿಸಿತು".[೯] ಈ ವರದಿಯಲ್ಲಿ ಅನೇಕ ಜಾತಿಗಳಿಗೆ ಅನ್ಯಾಯವಾಗಿದೆ ಎಂಬ ಕಾರಣಕ್ಕಾಗಿ ಅಂದಿನ ಮುಖ್ಯಮಂತ್ರಿಗಳಾಗಿದ ರಾಮಕೃಷ್ಣ ಹೆಗಡೆಯವರು ಈ ವರದಿಯನ್ನು ತಿರಸ್ಕರಿಸಿದರು. ಗೊಲ್ಲ ಜನಾಂಗದ ನಾಯಕರು ಮಾಜಿ ಸಂಸತ್ ಸದಸ್ಯರೂ ಆದ ಪಿ. ಕೋದಂಡರಾಮಯ್ಯನವರು ದಿನಾಂಕ ೨.೬.೧೯೯೮ ರಂದು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಪುಣ್ಯತಿಥಿಯ ಉದ್ಘಾಟನೆಯ ಸಂದರ್ಭದಲ್ಲಿ "ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕುರಿತು ರಚಿಸಲಾಗಿದ್ದ ವೆಂಕಟಸ್ವಾಮಿ ಆಯೋಗದ ವರದಿಯನ್ನು ತಿರಸ್ಕರಿಸುವ ಮೂಲಕ ಆ ವರ್ಗಗಳಿಗೆ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಅನ್ಯಾಯ ಮಾಡಿದರು ಎಂದು ಅವರು ಕಟುವಾಗಿ ಟೀಕಿಸಿದರು".[೧೦]

ರಾಜಕೀಯ ಮತ್ತು ಬಲಿಷ್ಠ ವ್ಯಕ್ತಿಗಳಿಗೆ ಮಣಿದ ರಾಮಕೃಷ್ಣ ಹೆಗಡೆಯವರು ಎಲ್ಲ ಜಾತಿಗಳಿಗೂ ಮೀಸಲಾತಿಯನ್ನು ನೀಡುವುದಕ್ಕೆ ನಿರ್ಧರಿಸಿದರು ಮತ್ತು ಮೂರನೆಯ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸು ಜಾರಿಗೆ ಬಂದಿತು. ಇಲ್ಲಿ ಕಾಡುಗೊಲ್ಲರನ್ನು 'ಎ' ಗುಂಪಿನ ಮೀಸಲಾತಿಗೆ ಸೇರಿಸಲಾಗಿದ್ದು, ಇದರ ಜೊತೆಗೆ ಉದ್ಯೋಗದ ಮೀಸಲಾತಿಯನ್ನು ೫೦ಕ್ಕೆ ನಿಗದಿಗೊಳಿಸಿ ಆದಾಯದ ಮಿತಿ ತೆಗೆದು ಹಾಕಲಾಯಿತು. ಎ ಗುಂಪಿನ ಮೀಸಲಾತಿಯಲ್ಲಿ ೬೮ ಹಿಂದುಳಿದ ಸಮುದಾಯಗಳನ್ನು ಸೇರಿರುವುದರಿಂದ ಕಾಡುಗೊಲ್ಲರಿಗೆ ಅಷ್ಟೇನೂ ಪ್ರಯೋಜನವಾಗಿಲ್ಲವೆಂದು ಹೇಳಬಹುದು.

ಓ.ಚಿನ್ನಪ್ಪರೆಡ್ಡಿ ಅಧ್ಯಕ್ಷತೆಯಲ್ಲಿ ಮತ್ತೊಂದು ಹಿಂದುಳಿದ ವರ್ಗಗಳ ಆಯೋಗವನ್ನು ಸರ್ಕಾರ ರಚಿಸಿತು. ಈ ಸಮಿತಿ ವರದಿಯನ್ನು ಸಲ್ಲಿಸಿ ಮಂಡಲ್ ವರದಿಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿದಾಗ ೧೯೯೪ರಲ್ಲಿ ಈ ವರದಿಯನ್ನು ಸರ್ಕಾರ ಜಾರಿಗೆ ತಂದಿತು. ಈ ವರದಿಯಲ್ಲಿ ರಾಜ್ಯದ ಭೋವಿ,

ಲಂಬಾಣಿ, ಕೊರವ ಸಮುದಾಯಗಳು ಪರಿಶಿಷ್ಟ ಪಂಗಡಕ್ಕೆ ಸೇರಿಸಲ್ಪಟ್ಟವು. ಆದರೆ ಈ ವರದಿಯಲ್ಲಿಯೂ ಕಾಡುಗೊಲ್ಲರ ಸಮುದಾಯಕ್ಕೆ ನಿರಾಶೆಯಾಯಿತು. ಎಲ್ಲ ಹಿಂದುಳಿದ ವರ್ಗಗಳ ಆಯೋಗದಲ್ಲಿ ಕಾಡು ಗೊಲ್ಲರಿಗೆ ನಿರಿಕ್ಷಿತ ಮಟ್ಟದಲ್ಲಿ ಮೀಸಲಾತಿ ಸಿಗದೇ ಇದ್ದಾಗ ನಿರಾಶೆ ಆಯಿತೆಂದು ಹೇಳುಬಹುದು. ಪರಿಶಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಆಶೆ ಕಾಡುಗೊಲ್ಲರಿಗೆ ಕೈಗೆ ಎಟುಕದಂತಾಯಿತು.

೭.೨ ಹಿಂದುಳಿದ ವರ್ಗಗಳಿಗಿರುವ ಸರ್ಕಾರದ ಯೋಜನೆಗಳು

೧. ಉದ್ಯೋಗ ಮತ್ತು ಮಾರ್ಗದರ್ಶನ ಕೋಶ (ಮೀಸಲಾತಿ ನಿಯಮಗಳ ಜಾರಿ)

ಭಾರತ ಸಂವಿಧಾನ ಅನುಚ್ಛೇದ ೧೫೧ಳರ ಪ್ರಕಾರ ಕರ್ನಾಟಕ ಸರ್ಕಾರ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಉದ್ಯೋಗದಲ್ಲಿ ಶೇ. ೫೦ರ ಸ್ಥಾನಗಳನ್ನು ಕಾಯ್ದಿರಿಸಿದೆ. ಹಿಂದುಳಿದ ವರ್ಗಗಳಾಗಿ ಕಾದಿರಿಸುವ ಶೇ. ೩೨ರಷ್ಟು ಸ್ಥಾನಗಳ ಮೀಸಲಾತಿ ಬಗೆಗಿನ ಸರ್ಕಾರಿ ಆದೇಶಗಳನ್ವಯ ಖಾಲಿ ಹುದ್ದೆಗಳನ್ನು ಮೀಸಲಾತಿಯಂತೆ ರೋಸ್ಟರ್ ಪ್ರಕಾರ ಸರಿಯಾಗಿ ಭರ್ತಿ ಮಾಡಲಾಗಿದೆ ಎನ್ನುವುದನ್ನು ಪರಿಶೀಲನೆ ನಡೆಸುವ ಸಲುವಾಗಿ ಉದ್ಯೋಗ ಮತ್ತು ಮಾರ್ಗದರ್ಶನ ಜಾರಿ ಕೋಶವನ್ನು ಸ್ಥಾಪನೆ ಮಾಡಲಾಗಿದೆ. ಕಾಡುಗೊಲ್ಲರು ಈ ಸೌಲಭ್ಯವನ್ನು ಪಡೆಯುತ್ತಿಲ್ಲವೆಂದೆ ಹೇಳಬಹುದು. ಏಕೆಂದರೆ ಕಾಡುಗೊಲ್ಲರು ಇತ್ತೀಚೆಗೆ ಶಿಕ್ಷಣವನ್ನು ಪಡೆಯುತ್ತಿರುವುದರಿಂದ ಉದ್ಯೋಗದಲ್ಲಿ ಮೀಸಲಾತಿ ಯನ್ನು ಪಡೆಯಲು ಅವರಿಗೆ ಸಾಧ್ಯವಾಗಿಲ್ಲ ಎಂದು ಹೇಳಬೇಕಾಗುತ್ತದೆ.

೨. ಕೆ.ಎ.ಎಸ್. ಮತ್ತು ಐ.ಎ.ಎಸ್. ಭೋದನಾ ಕೇಂದ್ರಗಳು

ಹಿಂದುಳಿದ ವರ್ಗಗಳ ಯುವಕರು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಉತ್ತಮವಾದ ಹುದ್ದೆಗಳನ್ನು ಪಡೆಯಲಿ ಎಂಬ ಉದ್ದೇಶದಿಂದ ಅವರಿಗೆ ತರಬೇತಿ ಕೇಂದ್ರ ಗಳನ್ನು ತೆರೆದಿದೆ ಮತ್ತು ತರಬೇತಿ ಸಮಯದಲ್ಲಿ ತಿಂಗಳಿಗೆ ೧೦೦೦ ಹಾಗೂ ೫೦೦ ರೂ.ಗಳ ಸಹಾಯ ಧನವನ್ನು ನೀಡುತ್ತಿದೆ. ಆದರೆ ಕಾಡುಗೊಲ್ಲರ ಬೆರಳೆಣಿಕೆಯಷ್ಟು ಯುವಕರು ಈ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

೩. ಮೆಟ್ರಿಕ್ ಪೂರ್ವ ಬಾಲಕ / ಬಾಲಕಿಯರ ವಿದ್ಯಾರ್ಥಿನಿಲಯಗಳು

ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳ ಅನೇಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಅವರ ಊರಿಗೆ ಸಮೀಪದಲ್ಲಿ ಉಳಿದು ಕಲಿಯಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯ ಗಳನ್ನು ಸ್ಥಾಪಿಸಲಾಗಿದ್ದು ಇಲ್ಲಿ ೧ ರಿಂದ ೧೦ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ವಿದ್ಯಾರ್ಥಿನಿಲಯ ಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯದ ಜೊತೆ ಪಠ್ಯಪುಸ್ತಕ, ಲೇಖನ ಸಾಮಗ್ರಿ ಹಾಗೂ ಅಲ್ಪಕಾಲಿಕ ಭೋದಕರಿಂದ ವಿಶೇಷ ಪಾಠ ಪ್ರವಚನಗಳನ್ನು ಬೋಧಿಸುವುದರ ಮೂಲಕ ಕಾಡುಗೊಲ್ಲರ ಮಕ್ಕಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿ ಪಡಿಸಲು ಪ್ರಯತ್ನಿಸಲಾಗುತ್ತಿದೆ. ಇಲ್ಲಿ ೧೦ನೇ ತರಗತಿಯೊಳಗಿನ

ಎಲ್ಲ ಮಕ್ಕಳಿಗೆ ಸಮರ್ಪಕವಾಗಿ ಶಿಕ್ಷಣ ನೀಡುವುದು ವಿದ್ಯಾರ್ಥಿನಿಲಯಗಳ ಜವಾಬ್ದಾರಿಯಾಗಿದೆ. ಈ ಸೌಲಭ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲರು ಪಡೆಯುತ್ತಿದ್ದಾರೆ. ಪ್ರಾರಂಭದಲ್ಲಿ ಕಾಡುಗೊಲ್ಲರು ತಮ್ಮ ಮಕ್ಕಳನ್ನು ಈ ವಸತಿ ನಿಲಯಗಳಿಗೆ ಕಳಿಸುವುದಕ್ಕೆ ಹಿಂದು ಮುಂದು ನೋಡುತ್ತಿದ್ದರು. ಏಕೆಂದರೆ ತಮ್ಮ ದೈವಗಳು, ಆಚಾರ-ವಿಚಾರ ಮೈಲಿಗೆ ಮುಂತಾದ ಕಟ್ಟುನಿಟ್ಟಿನ ಸಂಪ್ರದಾಯಗಳಿಂದ ಶಾಲೆಗೆ ಮತ್ತು ವಸತಿ ನಿಲಯಗಳಿಗೆ ಕಳುಹಿಸುತ್ತಿರಲಿಲ್ಲ. ಆದರೆ ಇತ್ತೀಚಿಗೆ ಬದಲಾವಣೆಯಾಗಿದ್ದು ಈ ಸೌಲಭ್ಯಗಳನ್ನು ಹೆಚ್ಚಾಗಿ ಪಡೆಯುತ್ತಿದ್ದಾರೆ.

೪. ಮೆಟ್ರಿಕ್‌ನಂತರ ಬಾಲಕ ಬಾಲಕಿಯರ ವಿದ್ಯಾರ್ಥಿನಿಲಯಗಳು

ಮಾಧ್ಯಮಿಕ ಶಿಕ್ಷಣದ ನಂತರ ಪದವಿ ಪೂರ್ವ ಶಿಕ್ಷಣ ಪಡೆಯಲು ಖರ್ಚುವೆಚ್ಚಗಳು ಹೆಚ್ಚಾಗುತ್ತವೆ ಎಂಬ ಕಾರಣಕ್ಕೆ ಮಾಧ್ಯಮಿಕ ಶಿಕ್ಷಣ ಮುಗಿದ ತಕ್ಷಣ ಕಾಡುಗೊಲ್ಲರ ಮಕ್ಕಳು ಮುಂದಿನ ಓದನ್ನು ನಿಲ್ಲಿಸುತ್ತಿದ್ದರು. ಈಗ ಸರ್ಕಾರ ಮೆಟ್ರಿಕ ನಂತರದ ವಿದ್ಯಾರ್ಥಿನಿಲಯಗಳ ಉಪಯೋಗ ಪಡೆದುಕೊಂಡು ಶಿಕ್ಷಣ ಪಡೆಯಲು ಆಸಕ್ತಿ ವಹಿಸುತ್ತಿದ್ದಾರೆ.

೫. ಆಶ್ರಮ ಶಾಲೆಗಳು

ಕರ್ನಾಟಕ ಸರ್ಕಾರ ಅನೇಕ ಆಶ್ರಮ ಶಾಲೆಗಳ ಮೂಲಕ ಬುಡಕಟ್ಟು ಸಮುದಾಯಗಳ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ. ಇಲ್ಲಿ ೧ ರಿಂದ ೫ನೆಯ ತರಗತಿಯವರೆಗೆ ಓದುವ ಮಕ್ಕಳಿಗೆ ಶಿಕ್ಷಣದ ಜೊತೆಗೆ ಊಟ ಮತ್ತು ವಸತಿ ಸೌಲಭ್ಯ ಒದಗಿಸುತ್ತಿದೆ. ಕಾಡುಗೊಲ್ಲರು ಈ ಸೌಲಭ್ಯವನ್ನು ಪಡೆಯುವಲ್ಲಿ ಆಸಕ್ತಿ ತೋರಿಸುತ್ತಿಲ್ಲ. ಆದ್ದರಿಂದ ಈ ಸೌಲಭ್ಯವನ್ನು ಪಡೆದುಕೊಳ್ಳುವರ ಸಂಖ್ಯೆ ಕಡಿಮೆಯಾಗಿದೆ.

೬. ಹಿಂದುಳಿದ ವರ್ಗಗಳ ಪ್ರವರ್ಗ ೧ರ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ

ಪ್ರವರ್ಗ ೧ಕ್ಕೆ ಸೇರಿದ ಹಾಗೂ ಶೇ. ೭೫ರಷ್ಟು ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಅರ್ಹರಾಗುತ್ತಾರೆ. ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ೨೦೦ ರೂ. ದರದಲ್ಲಿ ಶೈಕ್ಷಣಿಕ ವರ್ಷದ ೧೦ ತಿಂಗಳ ಅವಧಿಗೆ ೨೦೦೦ ರೂ. ಭೋಜನಾ ವೆಚ್ಚವನ್ನು ಸರ್ಕಾರ ಭರಿಸುತ್ತದೆ. ಇಲ್ಲಿ ಕಾಡುಗೊಲ್ಲರ ಅನೇಕ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

೧೨. ಹಿಂದುಳಿದ ವರ್ಗಗಳ ಪ್ರವರ್ಗ ೨ಎ, ೨ಬಿ, ೩ಎ, ಮತ್ತು ೩ಬಿಗಳಿಗೆ ಸೇರಿದ ವೃತ್ತಿಪರ ಶಿಕ್ಷಣದ ವಿದ್ಯಾರ್ಥಿಗಳಿಗೆ ಊಟದ ವೆಚ್ಚ ನೀಡಿಕೆ

ಈ ಸೌಲಭ್ಯವನ್ನು ಇಲ್ಲಿ ಪ್ರತಿಭೆ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ೨೦೦೨-೦೩ನೇ ಸಾಲಿನಿಂದ ವೃತ್ತಿಪರ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ (ಬಿ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಎಲ್.ಎಲ್.ಬಿ., ಎಲ್.ಎಲ್.ಎಂ., ಇತ್ಯಾದಿ) ಈ ಮೇಲೆ ತಿಳಿಸಿದ ಎಲ್ಲಾ ವರ್ಗದ ಜನರ ಹಾಗೂ ಶೈಕ್ಷಣಿಕ ಉತ್ತೇಜನ ನೀಡುವುದಕ್ಕಾಗಿ ಪ್ರತಿಯೊಂದು ವಿದ್ಯಾರ್ಥಿಗೆ

೨೦೦ ರೂ. ದರದಲ್ಲಿ ಪ್ರತಿ ವಿದ್ಯಾರ್ಥಿಗೆ ೧೦ ತಿಂಗಳ ಅವಧಿಗಾಗಿ ೨೦೦೦ ರೂ. ಊಟದ ವೆಚ್ಚವನ್ನು ಸರ್ಕಾರ ಮಂಜೂರು ಮಾಡುತ್ತಿದೆ. ಬಡ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ ಈ ಸೌಲಭ್ಯದಲ್ಲಿ ವಿದ್ಯಾರ್ಥಿಗಳ ಪಾಲಕರು/ಪೋಷಕರು ವಾರ್ಷಿಕ ವರಮಾನ ೧೫೦೦೦ ರೂ.ಗಳೊಳಗೆ ಇರಬೇಕೆಂಬ ನಿಯಮವಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ವಾರ್ಷಿಕ ವರಮಾನವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸೌಲಭ್ಯವನ್ನು ನೀಡುತ್ತಿದೆ. ಪಿ.ಯು.ಸಿ., ಬಿ.ಎ., ಬಿ.ಎಸ್.ಸಿ, ಬಿ.ಕಾಂ., ಡಿಪ್ಲೋಮಾ, ಇತ್ಯಾದಿ ಕೋರ್ಸ್‌ಗಳಿಗೆ ವಾರ್ಷಿಕ್ಕೆ ೩೦೦ ರೂ. ಕಾನೂನು ಪದವಿ, ಸ್ನಾತಕೋತ್ತರ ಶಿಕ್ಷಣ ಇತ್ಯಾದಿ ಕೋರ್ಸ್‌ಗಳಿಗೆ ರೂ. ೪೦೦ ಹಾಗೂ ವೃತ್ತಿಪರ ಪದವಿಗಳು ಮತ್ತು ಸಂಬಂಧಿಸಿದ ಸ್ನಾತಕೋತ್ತರ ಪದವಿಗಳು ಇತ್ಯಾದಿ ಕೋರ್ಸ್‌ಗಳಿಗೆ ರೂ. ೫೦೦ರಂತೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುತ್ತಿದೆ. ಪ್ರವರ್ಗ೧ರ ವಿದ್ಯಾರ್ಥಿಗಳನ್ನು ಹೊರತು ಪಡಿಸಿದರೆ ಇತರೆ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ೧೫,೦೦೦ ರೂ.ಗಳ ಆದಾಯ ಮಿತಿಯನ್ನು ನಿಗದಿಪಡಿಸಿದೆ. ಆದುದರಿಂದ ಈ ಸೌಲಭ್ಯವು ಬಡ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತಿದೆ.

ಶುಲ್ಕ ವಿನಾಯಿತಿ

ಸರ್ಕಾರ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ಬಡ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. ೧೧,೦೦೦ ಗಳು ಅಥವಾ ಅದಕ್ಕಿಂತ ಕಡಿಮೆಯಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಭೋದನಾ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳಿಂದ ವಿನಾಯಿತಿ ನೀಡಲಾಗುತ್ತದೆ. ಹಿಂದುಳಿದ ವರ್ಗಗಳ ಪ್ರವರ್ಗ ೧ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಯಾವುದೆ ಆದಾಯ ಮಿತಿ ಇಲ್ಲದೆ ಸರ್ಕಾರ ನಿಗದಿಪಡಿಸುವ ಎಲ್ಲ ಶುಲ್ಕಗಳ ಪಾವತಿಯಿಂದ ವಿನಾಯಿತಿ ನೀಡಲಾಗುತ್ತದೆ.

ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಅರ್ಹತೆಯ ಆಧಾರದ ಮೇಲೆ ಈ ತರಬೇತಿಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ವಾಣಿಜ್ಯ ವಿದ್ಯಾಲಯಗಳಲ್ಲಿ ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಪಡೆಯುತ್ತಿರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗೆ ಮಾಹೆಯಾನ ೫೦ ರೂ. ರಂತೆ ೧೦ ತಿಂಗಳು ೫೦೦ ರೂ.ಗಳ ಶಿಷ್ಯವೇತನ ನೀಡಲಾಗುತ್ತದೆ. ಪ್ರವರ್ಗ ೧ರ ಅಭ್ಯರ್ಥಿಗಳನ್ನು ಹೊರತುಪಡಿಸಿ ಇತರೆ ಪ್ರವರ್ಗಗಳ ಅಭ್ಯರ್ಥಿಗಳಿಗೆ ೫೦೦೦ ರೂ.ಗಳಷ್ಟು ವಾರ್ಷಿಕ ವರಮಾನವನ್ನು ನಿಗದಿ ಮಾಡಲಾಗುತ್ತದೆ.

ಕಾನೂನು ಪದವೀಧರರಿಗೆ ತರಬೇತಿ

ಈ ಸೌಲಭ್ಯವನ್ನು ಪ್ರವರ್ಗ-೧ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿದೆ. ಇಲ್ಲಿ ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿಗಳನ್ನು ಆಯ್ಕೆ ಮಾಡಿ ಅವರಿಗೆ ೪ ವರ್ಷಗಳ ಅವಧಿಗೆ ವಕೀಲ ವೃತ್ತಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಧಿಕಾರಿಗಳು ಈ ಕಾರ್ಯಕ್ರಮದ ಅನುಷ್ಠಾನಾಧಿಕಾರಿ ಗಳಾಗಿರುತ್ತಾರೆ. ವರ್ಷಕ್ಕೆ ಒಟ್ಟು ೫೫ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ತರಬೇತಿ ಪಡೆಯುವ ಪ್ರತಿ ಅಭ್ಯರ್ಥಿಗೆ ಮಾಹೆಯಾನ ೧೦೦೦ ರೂ.ಗಳಂತೆ ೪ ವರ್ಷಗಳ ಅವಧಿಯವರೆಗೆ ತರಬೇತಿ ಭತ್ಯೆ ನೀಡಲಾಗುತ್ತದೆ. ಪ್ರವರ್ಗ ೧ ನ್ನು ಬಿಟ್ಟರೆ ಉಳಿದ ಅಭ್ಯರ್ಥಿಗಳಿಗೆ ೧೫,೦೦೦ ರೂ.ಗಳ ವಾರ್ಷಿಕ ವರಮಾನವನ್ನು ನಿಗದಿಪಡಿಸಿದೆ. ನಾನು ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಇಬ್ಬರು ಕಾಡುಗೊಲ್ಲರ ಕಾನೂನು ಪದವಿದರರು ಕಂಡುಬಂದಿದ್ದು ಅವರು ಈ ಸೌಲಭ್ಯವನ್ನು ಪಡೆಯದೆ ಇರುವುದು ಕಂಡುಬಂದಿತು.

ಹೊಲಿಗೆ ತರಬೇತಿ ಕೇಂದ್ರಗಳು

ಅತ್ಯಂತ ಹಿಂದುಳಿದ ವರ್ಗಗಳಲ್ಲಿಯ ಮಹಿಳೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡುವ ಹಿನ್ನೆಲೆಯಲ್ಲಿ ೭ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಮಹಿಳೆಯರಿಗೆ ಹೊಲಿಗೆಗೆ ಸಂಬಂಧಿಸಿದ ತರಬೇತಿಗಳನ್ನು ನೀಡುವುದಕ್ಕಾಗಿ ಅನೇಕ ಕೇಂದ್ರಗಳನ್ನು ತೆಗೆಯಲಾಗಿದೆ. ಕುಟುಂಬದಿಂದ ಯಾವ ಸಹಾಯ ಸಹಕಾರವಿಲ್ಲದೆ, ಆರ್ಥಿಕವಾಗಿ ನಿರ್ಗತಿಕರಾದವರಿಗೆ, ವಿಧವೆಯರಿಗೆ, ಈ ತರಬೇತಿಯನ್ನು ನೀಡಲಾಗುತ್ತಿದೆ. ಈ ತರಬೇತಿ ಸಮಯದಲ್ಲಿ ತಿಂಗಳಿಗೆ ಅವರಿಗೆ ೩೦೦ ರೂ.ಗಳಂತೆ ೧೨ ತಿಂಗಳವರೆಗೆ ತರಬೇತಿ ಭತ್ಯೆ ಯನ್ನು ನೀಡಲಾಗುತ್ತಿದೆ. ಇಂತವರ ವಾರ್ಷಿಕ ಆದಾಯದ ಮಿತಿ ೧೫೦೦೦ ರೂ.ಗಳನ್ನು ಮೀರಬಾರದು ಎಂಬ ನಿಯಮವಿದೆ. ಪ್ರವರ್ಗ-೧ರ ಅಭ್ಯರ್ಥಿಗಳಿಗೆ ಯಾವುದೇ ಆದಾಯದ ಮಿತಿ ಇರುವುದಿಲ್ಲ. ಆದ್ದರಿಂದ ಈ ತರಬೇತಿಯಲ್ಲಿ ಅನೇಕ ಕಾಡುಗೊಲ್ಲರ ಮಹಿಳೆಯರು ತೊಡಗಿಸಿಕೊಂಡು ಸ್ವಂತ ಉದ್ಯೋಗ ಕೈಗೊಳ್ಳುವಲ್ಲಿ ಪ್ರಯತ್ನಿಸುತ್ತಿದ್ದಾರೆ.

ಬೆಳ್ಳಬೆಳಕು

ಮಾನವನು ಜೀವಿಸಲು ಮೂಲಸೌಕರ್ಯಗಳು ಬೇಕೆ ಬೇಕು. ಆ ಮೂಲ ಸೌಕರ್ಯಗಳಾದ ವಸತಿ, ನೀರು, ನೈರ್ಮಲ್ಯ, ಬೆಳಕು ಇತ್ಯಾದಿಗಳಾಗಿ ಪ್ರವರ್ಗ-೧ರ ಗ್ರೂಪ್-ಎ ಗೆ ಸೇರಿದ ಜನಾಂಗದವರು ಹೆಚ್ಚಾಗಿ ವಾಸಿಸುವಂತಹ ಅತಿ ದೂರದ ಗ್ರಾಮಗಳ ಅಭಿವೃದ್ಧಿಗಾಗಿ ಈ ಕಾರ್ಯಕ್ರಮ ಅನುಷ್ಠಾನ ಗೊಳಿಸಲಾಗುತ್ತಿದೆ. ಪ್ರಸ್ತುತ ಆಯವ್ಯಯದ ಕೊರತೆಯಿಂದಾಗಿ ಪ್ರತಿ ಮನೆಗೆ ೨೦,೦೦೦ ದರದಲ್ಲಿ ಮನೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

[illegible]

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಧನಸಹಾಯ

ಉನ್ನತ ಶಿಕ್ಷಣ ಪಡೆಯಲು ಹೆಚ್ಚಿನ ಹಣಕಾಸಿನ ನೆರವು ಬೇಕಾಗುತ್ತದೆ. ಆರ್ಥಿಕವಾಗಿ ಪ್ರಬಲ ರಾದವರಿಗೆ ಮಾತ್ರ ಈ ಶಿಕ್ಷಣ ಪಡೆಯಲು ಒಂದು ಕಾಲಕ್ಕೆ ಸಾದ್ಯವಾಗುತ್ತಿತ್ತು. ಆದರೆ ಸರ್ಕಾರ ಇಂದು ಹಿಂದುಳಿದ ವರ್ಗದ ಬಡ ವಿದ್ಯಾರ್ಥಿಗಳೂ ಉನ್ನತ ಶಿಕ್ಷಣವನ್ನು ಪಡೆಯುವಂತಾಗಬೇಕು ಎಂಬ ಉದ್ದೇಶದಿಂದ ಅವರಿಗೆ ಆರ್ಥಿಕ ಸಹಾಯ ನೀಡುತ್ತಿದೆ. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ, ಪಿಎಚ್.ಡಿ. ಮುಂತಾದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. ೩.೫೦ ಲಕ್ಷಗಳ ಧನಸಹಾಯವನ್ನು ನೀಡುತ್ತಿದ್ದಾರೆ. ಈ ಸೌಲಭ್ಯ ಪಡೆಯುವ ಕುಟುಂಬದ ವಾರ್ಷಿಕ ವರಮಾನದ ರೂ. ೧,೪೪,೦೦೦ ಗಳಿಗೆ ಮೀರದಿರುವ ಹಾಗೂ ಪದವಿ, ಸ್ನಾತಕೋತ್ತರ ಪದವಿ, ಪಿಎಚ್.ಡಿ.ಯಲ್ಲಿ ಶೇ. ೬೦ ಮತ್ತು ಹೆಚ್ಚಿನ ಅಂಕಗಳನ್ನು ಗಳಿಸಿರುವ ೩೫ ವರ್ಷಗಳ ವಯೋಮಿತಿ ಯಲ್ಲಿಯ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯಬಹುದಾಗಿದೆ. ಈ ಸೌಲಭ್ಯವನ್ನು ಪಡೆದಿರುವ ಅಥವಾ ಪಡೆಯುತ್ತಿರುವ ಕಾಡುಗೊಲ್ಲರ ಯುವಕರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿಲ್ಲ.

ಪ್ರೊಫೆಷನಲ್ ಏರ್ ಹೋಸ್ಟಸ್ ಅಂಡ್ ಹಾಸ್ಪಿಟಾಲಿಟಿ ಮ್ಯಾನಜ್‌ಮೆಂಟ್ ಕೇರಿಯರ್ (ಗಗನಸಖಿ) ತರಬೇತಿ

ಆಧುನಿಕ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ಪುರುಷನಿಗೆ ಸಮಾನವಾಗಿ ಕೆಲಸ ಮಾಡುತ್ತಿದ್ದಾಳೆ. ಮುಂದು ವರೆದ ಸಮುದಾಯಗಳ ಮಹಿಳೆಯರು ಗಗನಸಖಿಯರ ತರಬೇತಿ ಪಡೆದು ಅಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾಳೆ. ಆದರೆ ಬುಡಕಟ್ಟು ಮತ್ತು ಹಿಂದುಳಿದ ವರ್ಗಗಳ ಸಮುದಾಯದ ಯುವಕ ಯುವತಿಯರಿಗೆ ಈ ಸೌಲಭ್ಯ ಸಿಗುತ್ತಿರಲಿಲ್ಲ. ಇಂದು ಸರ್ಕಾರ ಬುಡಕಟ್ಟು ಹಾಗೂ ಹಿಂದುಳಿದ ವರ್ಗಗಳ ಯುವಕ ಯುವತಿಯರಿಗೆ ಈ ತರಬೇತಿಯನ್ನು ನೀಡುವುದರ ಮೂಲಕ ಅವರಿಗೂ ಗಗನಸಖಿಯರಾಗಿ ಸೇವೆ ಸಲ್ಲಿಸುವ ಅವಕಾಶಗಳು ದೊರೆಯಲಿ ಎಂಬ ಉದ್ದೇಶದಿಂದ ಇಂತಹ ತರಬೇತಿ ಶಿಬಿರಗಳನ್ನು ಹಮ್ಮಿಕೊಂಡಿದೆ. ಈ ತರಬೇತಿ ನೀಡುವುದಕ್ಕಾಗಿ ಸರ್ಕಾರ ೨೦೦೭-೦೮ನೇ ಸಾಲಿಗಾಗಿ ೨೩ ಲಕ್ಷ ರೂ.ಗಳನ್ನು ತೆಗೆದಿರಿಸಿದೆ. ಈ ಹಣದಲ್ಲಿ ೨೭ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಬ್ಬರಿಗೆ ಒಟ್ಟು ೮೫,೦೦೦ ರೂ.ಗಳನ್ನು ಖರ್ಚು ಮಾಡಿ ತರಬೇತಿ ನೀಡಲು ನಿರ್ಧರಿಸಿದೆ. ಆದರೆ ಈ ತರಬೇತಿಗೆ ಆಯ್ಕೆ ಬಯಸುವವರು ಪಿಯುಸಿಯಲ್ಲಿ ಶೇ. ೬೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು ಹಾಗೂ ೧೮ ರಿಂದ ೨೪ ವರ್ಷದೊಳಗೆ ವಯೋಮಿತಿ ಹೊಂದಿರಬೇಕು ಮತ್ತು ಇವರು ಆಕರ್ಷಕ ವ್ಯಕ್ತಿತ್ವ, ಉತ್ತಮ ಆರೋಗ್ಯ, ಶ್ರವಣಶಕ್ತಿ, ಉತ್ತಮ ದೃಷ್ಟಿಯನ್ನು ಹೊಂದಿರಬೇಕು. ಯುವಕರು ೧೭೦ ಸೆಂ.ಮೀ. ಯುವತಿಯರು ೧೫೭ ಸೆಂ.ಮೀ. ಕನಿಷ್ಠ ಎತ್ತರವನ್ನು ಹೊಂದಿರಬೇಕಾಗಿರುತ್ತದೆ. ಈ ತರಬೇತಿಯ ಅವಧಿ ೧೨ ತಿಂಗಳಾಗಿದ್ದು ಈ ಸಂದರ್ಭದಲ್ಲಿ ಉಚಿತ ಊಟ ಮತ್ತು ವಸತಿಯನ್ನು ನೀಡುತ್ತಾರೆ. ತರಬೇತಿಯನ್ನು ಪಡೆಯುವ ಯುವಕ ಯುವತಿಯರ

[illegible]

ವಾರ್ಷಿಕ ಆದಾಯ ಒಂದು ಲಕ್ಷ ಮೀರಿರಬಾರದು. ಆದರೆ ಈ ಸೌಲಭ್ಯವನ್ನು ನನ್ನ ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತೆ ಯಾರು ಪಡೆದಿಲ್ಲವೆಂಬುದು ತಿಳಿಯುತ್ತದೆ.

ನರ್ಸಿಂಗ್ ತರಬೇತಿ

ಬುಡಕಟ್ಟು ಹಾಗೂ ಹಿಂದುಳಿದ ಸಮುದಾಯಗಳ ಯುವಕ, ಯುವತಿಯರು ಎಲ್ಲ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಅನುಕೂಲವಾಗಲೆಂದು ಸರ್ಕಾರ ಅವರಿಗಾಗಿ ಅನೇಕ ತರಬೇತಿ ಶಿಬಿರಗಳನ್ನು ಹಮ್ಮಿಕೊಂಡಿದೆ. ನರ್ಸಿಂಗ್ ತರಬೇತಿ ಸಂಸ್ಥೆಗಳಲ್ಲಿ ಈ ಸಮುದಾಯಗಳ ವಿದ್ಯಾರ್ಥಿಗಳಿಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿದೆ. ನರ್ಸಿಂಗ್ ತರಬೇತಿ ಕಾಲೇಜುಗಳಲ್ಲಿ ಬಿ.ಎಸ್.ಸಿ. ನರ್ಸಿಂಗ್, ಎ.ಎನ್.ಎಂ. ನರ್ಸಿಂಗ್‌ನಲ್ಲಿ ಓದುತ್ತಿರುವ, ಒಂದು ಲಕ್ಷದ ಆದಾಯದ ಮಿತಿ ಹೊಂದಿದ ವಿದ್ಯಾರ್ಥಿಗಳಿಗೆ ತರಬೇತಿಗಾಗಿ ೫೦೦೦ ರೂ.ಗಳನ್ನು ವಾರ್ಷಿಕ ವೆಚ್ಚವೆಂದೂ ಪ್ರತಿ ತಿಂಗಳಿಗೆ ೧೦೦೦ ರೂ.ಗಳಂತೆ ನಿರ್ವಹಣಾ ವೆಚ್ಚವನ್ನು ಪಾವತಿಸುತ್ತಿದೆ. ಆದ್ದರಿಂದ ೩೪ ಲಕ್ಷದಲ್ಲಿ ೨೧೨ ವಿದ್ಯಾರ್ಥಿಗಳಿಗೆ ಈ ತರಬೇತಿ ವೆಚ್ಚ ನೀಡಲಾಗುತ್ತಿದೆ.

೭.೩ ಅಲೆಮಾರಿ ಅರೆಅಲೆಮಾರಿ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮಗಳು

ಅಲೆಮಾರಿ ಹಾಗೂ ಅರೆಅಲೆಮಾರಿ ಸಮುದಾಯದಗಳಿಗೆ ಸರ್ಕಾರ ೨೦೦೭-೦೮ನೇ ಸಾಲಿನಲ್ಲಿ ರೂ. ೪೦೦ ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಸರ್ಕಾರದ ಈ ಅಭಿವೃದ್ಧಿ ಯೋಜನೆಯ ವ್ಯಾಪ್ತಿಯ ಹೊರಗೆ ಕಾಡುಗೊಲ್ಲರಿರುವುದು ಕಂಡುಬರುತ್ತಿದೆ. ಆದುದರಿಂದ ಈ ಸೌಲಭ್ಯಗಳು ಕಾಡುಗೊಲ್ಲರಿಗೆ ದೊರಕುತ್ತಿವೆಯೆ ಎನ್ನುವ ಪ್ರಶ್ನೆ ಕಾಡುತ್ತಿದೆ. ಈ ಅಭಿವೃದ್ಧಿಗಳಿಂದ ಕಾಡುಗೊಲ್ಲರ ಅಭಿವೃದ್ಧಿಯಾಗಿದೆಯೆ? ಸರ್ಕಾರ ಇವರ ಬಗ್ಗೆ ಕಾಳಜಿ ವಹಿಸುತ್ತಿದೆಯೆ? ಹಾಗಾದರೆ ಈ ಯೋಜನೆಗಳು ಅವರಿಗೆ ತಲುಪುತ್ತಿವೆಯೆ? ಎಂಬುದಕ್ಕೆ ಉತ್ತರಗಳನ್ನು ಕ್ಷೇತ್ರಕಾರ್ಯದಲ್ಲಿ ಕಂಡುಕೊಳ್ಳಲಾಗಿದೆ. ಒಂದೆ ಮಾತಿನಲ್ಲಿ ಹೇಳಬೇಕೆಂದರೆ ಸರ್ಕಾರದ ಯಾವುದೆ ಯೋಜನೆಗಳು ಈ ಸಮುದಾಯಕ್ಕೆ ಮುಟ್ಟುತ್ತಿಲ್ಲ. ಸರ್ಕಾರ ತಮ್ಮ ಸಮುದಾಯಕ್ಕಾಗಿ ಯಾವ ಯಾವ ಯೋಜನೆಗಳನ್ನು ರೂಪಿಸಿದೆ ಎಂಬುದರ ಅರಿವೆ ಈ ಸಮುದಾಯದವರಿಗೆ ಇರುವುದಿಲ್ಲ. ಸರ್ಕಾರವೂ ಸಹ ಕಾಡುಗೊಲ್ಲರಿಗೆ ತಯಾರಿಸಿದ ಯೋಜನೆಗಳು ತಲುಪಿವೆಯೆ ಎಂಬುದರ ಬಗ್ಗೆ ಯೋಚಿಸುವುದೂ ಇಲ್ಲ ಎಂಬುದನ್ನು "ಬುಡಕಟ್ಟುಗಳಿಗಾಗಿ ಹಾಕಿಕೊಂಡಿರುವ ಯೋಜನೆಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. ಆದರೆ ನಿಜಕ್ಕೂ ಅದಕ್ಕಿರುವುದು ಕೇವಲ ಕಾಳಜಿ ಮಾತ್ರ ಮತ್ತು ಅದರ ವೈಚಾರಿಕ ಕಾಳಜಿಯಲ್ಲ ಎನ್ನುವ ಬಗ್ಗೆ ಯಾವ ಅನುಮಾನಗಳಿರಬೇಕಿಲ್ಲ. ಆಳುವ ವ್ಯವಸ್ಥೆ ಎಷ್ಟೋ ಸಲ ತನಗೆ ಸಿಕ್ಕಿರುವ ಅಧಿಕಾರ, ಅದು ಜನ ಕೊಡಮಾಡಿದ ಸ್ಥಾನಮಾನ ಯೋಚಿಸುವುದಿಲ್ಲ. ಇಂತಹ ಕಡೆ ಎಂದೂ ಜೀವಂತವಾಗಿಬಾರದು ಇಂಡಿಯಾದಲ್ಲಿ ಅದು ಅಭಿವೃದ್ಧಿ ನೀತಿಯಾಗಿರಲಿ ಅಥವಾ ಸರ್ಕಾರದ ತಪ್ಪಿನಿಂದಾದ ದುರಂತ ಆಗಲಿ ಇವೆರಡಕ್ಕೂ ಬಲಿಪಶು ಸಾಮಾನ್ಯ ದುಡಿವ ವರ್ಗ ಮಾತ್ರ. ವಸಾಹತುಗಳಿಂದ ಅಧಿಕಾರವೆಂಬುದು ದೇಶೀಯ ಬಂಡವಳಗಾರರಿಗೆ, ಭೂಮಾಲಿಕರಿಗೆ ಹಸ್ತಾಂತರವಾದದ್ದೆ ಈ ಎಲ್ಲ

[illegible]

[illegible]

[illegible]

[illegible]

[illegible]

[illegible]

ದುರಂತಗಳಿಗೆ ಕಾರಣ. ಇನ್ನು ಸರ್ಕಾರ ಅನುಸರಿಸುವ ಅಭಿವೃದ್ಧಿ ನೀತಿಯು ಅದು ಪಶ್ಚಿಮದ ಮುಂದುವರಿದ ದೇಶಗಳಿಂದ ಎರವಲು ಪಡೆದ ನೀತಿಯೆ ಆಗಿರುತ್ತದೆ. ಹೀಗಿದ್ದಾಗ ಇಂಡಿಯಾದ ಒಟ್ಟು ಅಭಿವೃದ್ಧಿಯ ಫಲವಾಗಿ ನೇರವಾಗಿ ಬಂಡವಾಳಿಗರ, ಮಧ್ಯವರ್ತಿಗಳ, ಗುತ್ತಿಗೆದಾರರ, ಖಜಾನೆಗಳಿಗೆ ತಲುಪುತ್ತವೆ. ಒಂದೆಡೆ ಅಭಿವೃದ್ಧಿಯ ಪ್ರಕ್ರಿಯೆ ಕುರಿತು ಜಾಣ ಕುರುಡನ್ನು ಪ್ರದರ್ಶಿಸುವ ಸರ್ಕಾರ ಇನ್ನೊಂದರ ಅಭಿವೃದ್ಧಿಯೆ ಅನುಷ್ಠಾನದಲ್ಲಿ ತೊಡಗುವ ಮಧ್ಯವರ್ತಿಗಳು ಮತ್ತು ಗುತ್ತಿಗೆದಾರರ ಈ ವಿಷವೃತ್ತ ಯೋಜನೆಗಳ ಸಿಂಹಪಾಲನ್ನು ನೊರೆದು ಹಾಕುತ್ತಿದೆ. ನಾಡಿನ ಪ್ರಜ್ಞಾವಂತರೆನಿಸಿಕೊಂಡ ನಾಗರಿಕರೆಂದು ಬೀಗುವ ಜನರೇ ಈ ಎಲ್ಲಾ ಅವಾಂತರಗಳನ್ನು ನೋಡಿಯೂ ಸುಮ್ಮನಿರುತ್ತಾರೆ. ಇನ್ನೂ ಬುಡಕಟ್ಟುಗಳ ಅಭಿವೃದ್ಧಿ ಯೋಜನೆಗಳ ಬಗ್ಗೆ ಯಾರು ಕೇಳುವಂತಿಲ್ಲ. ನಾಡಿನ ನಾಗರಿಕನೆ ಅಸಂಘಟಿತನಾಗಿರುವಾಗ ಕಾಡಿನ ಮುಗ್ಧ ಸಮುದಾಯವೆಲ್ಲಿ ಸಂಘಟಿತವಾದೀತು? ಇದೆಲ್ಲದರ ನಡುವೆಯೂ ಬುಡಕಟ್ಟುಗಳ ಅಭಿವೃದ್ಧಿಯ ಹೆಸರಿನಲ್ಲಿ ಕೆಲವು ಯೋಜನೆಗಳು ಅನುಷ್ಠಾನಕ್ಕೆ ಬಂದಿವೆ. ಅದಕ್ಕೆ ಸಂಬಂಧಪಟ್ಟ ಕೆಲವೇ ಅಧಿಕಾರಿಗಳ ದಕ್ಷತೆ ಮಾತ್ರ ಕಾರಣವಿರಬಹುದು".[೧೧] ಸರ್ಕಾರದ ಯೋಜನೆಗಳಲ್ಲಿ ಅನೇಕ ಅವ್ಯವಹಾರಗಳು ಕಾಣಸಿಗುತ್ತಿದ್ದು, ಕಾಡುಗೊಲ್ಲರ ಜನಾಂಗಕ್ಕೆ ಸಿಗತಕ್ಕಂತ ಸೌಲಭ್ಯಗಳು ಸಿಗದೇ ಹೋದಾಗ ಇಡೀ ಸಮುದಾಯ ಅಭಿವೃದ್ಧಿಯಾಗದೆ ಹಿಂದುಳಿಯುವುದಕ್ಕೆ ಕಾರಣವಾಗಿದೆ. ಆದ್ದರಿಂದ ಸಮಾಜದಲ್ಲಿ ಹಿಂದುಳಿದಿರತಕ್ಕಂತ ಸಮುದಾಯವು ಇದಾಗಿದೆ. ಬುಡಕಟ್ಟು ಲಕ್ಷಣಗಳನ್ನು ಹೊಂದಿದ್ದರು ಕೂಡಾ ಹಿಂದುಳಿದ ಬುಡಕಟ್ಟು '೧-ಎ' ಪಟ್ಟಿಯಲ್ಲಿ ಬಂದಿರತಕ್ಕಂತ ಈ ಸಮುದಾಯ ಹಿಂದುಳಿದ ವರ್ಗಗಳಲ್ಲಿಯೆ ಶೋಷಣೆಯಾಗುತ್ತಿದೆ. ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಪ್ರಸ್ತುತ ಕಾಡುಗೊಲ್ಲ ಸಮುದಾಯಕ್ಕೆ ಹೋಲಿಕೆ ಮಾಡಿ ಅಧ್ಯಯನ ಮಾಡತೊಡಗಿದರೆ ಪ್ರಭುತ್ವವೆನ್ನುವುದು ಇಲ್ಲಿಯವರೆಗೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿರುವುದು ಗೋಚರಿಸುತ್ತದೆ. ಆದ್ದರಿಂದ ಈ ಸಮುದಾಯವು ಊರಿನಿಂದ ದೂರವಿದ್ದು ಜಮೀನ್ದಾರಿಕೆ, ಬಂಡವಾಳಶಾಹಿಗಳ ಹಿಡಿತದಲ್ಲಿ ಯಾರಿಗೂ ತಿಳಿಯದಂತೆ ಬದುಕನ್ನು ಸಾಗಿಸುತ್ತಿರುವುದು ಸಹಭಾಗಿ ಅವಲೋಕನೆಯಿಂದ ತಿಳಿಯಲಾಗಿದೆ.

ಪ್ರಸ್ತುತ ಸಾಮುದಾಯಿಕ ಅಭಿವೃದ್ಧಿಯಲ್ಲಿ ಕಾಡುಗೊಲ್ಲರ ಸಮುದಾಯವನ್ನು ಚರ್ಚಿಸುತ್ತಾ ಹೊರಟರೆ ಸಮುದಾಯದ ಅಂತರಾಳದಲ್ಲಿರುವ ದುಃಖ ದುಮ್ಮಾನಗಳೆಲ್ಲವೂ ಎಳೆವಳೆಯಾಗಿ ಹೊರಬಿಳುವುದನ್ನು ತಿಳಿದರೆ, ಪಾರಂಪರಿಕವಾಗಿ ಮೈಗೂಡಿಸಿಕೊಂಡಿರುವ ಸಾಂಸ್ಕೃತಿಕ ವ್ಯವಸ್ಥೆ, ಕುಲಕಸಬು, ಜೀವನವರ್ತನಾ ಆಚರಣೆಗಳು, ನ್ಯಾಯಪಂಚಾಯಿತಿ, ದೈವರಾಧನೆಗಳೆಲ್ಲವೂ ಇಂದು ಬದುಕಿಗೆ ಪೂರಕವಾಗಿರದೆ ಅಥವಾ ಅಭಿವೃದ್ಧಿಯ ಪರವಾಗಿರದೆ ಮಾರಕವಾಗಿರುವುದು ಗೋಚರವಾಗುತ್ತದೆ. ಕಾಡುಗೊಲ್ಲರ ಸಮುದಾಯವು ಬುಡಕಟ್ಟಿನ ಎಲ್ಲಾ ಲಕ್ಷಣಗಳನ್ನು ಹೊಂದಿದ್ದು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸದೆ ಇರುವುದನ್ನು ನೋಡಿದರೆ ಸರ್ಕಾರಕ್ಕೆ ಈ ಸಮುದಾಯಗಳ ಬಗ್ಗೆ ಕಾಳಜಿಯಿಲ್ಲದಿರುವುದು ತಿಳಿದುಬರುತ್ತದೆ. ಈ ಸಮುದಾಯ ಒಂದು ವಿಶಿಷ್ಟ ಸಮುದಾಯವಾಗಿದ್ದು ಭಿನ್ನವಾದ ಆಚರಣೆಯನ್ನು ತನ್ನ ಸಾಂಸ್ಕೃತಿಕ

ಜಗತ್ತಿನಲ್ಲಿ ಶ್ರೀಮಂತಿಕೆಯ ಸೊಗಿನಲ್ಲಿ ಹೆಣದುಕೊಂಡು ಬದುಕನ್ನು ಸಾಗಿಸುತ್ತಿದೆ, ಸರ್ಕಾರ ನನಗಾಗಿ ಯಾವ ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಿದೆ ಎಂದು ತಿಳಿದುಕೊಳ್ಳಲೂ ಸಹ ಇಂದು ಪ್ರಯತ್ನಿಸುತ್ತಿಲ್ಲ.

ಕಾಡುಗೊಲ್ಲರ ಸಮುದಾಯವು ಬುಡಕಟ್ಟಿನಿಂದ ಹೊರತಾಗಿಯಿಲ್ಲದಿದ್ದರೂ ಕೂಡ ಬುಡಕಟ್ಟುಗಳಿಗೆ ಕೊಟ್ಟಿರುವಂತಹ ಸರ್ಕಾರದ ಸೌಲಭ್ಯಗಳು ಇವತ್ತಿನವರೆಗೂ ಈ ಸಮುದಾಯವನ್ನು ತಲುಪದೆ ಇರುವುದು ಕ್ಷೇತ್ರಕಾರ್ಯದಿಂದ ತಿಳಿಯಲಾಗಿದೆ. ಮೂಲತಃ ಬುಡಕಟ್ಟಿನ ಎಲ್ಲ ಲಕ್ಷಣಗಳೆಲ್ಲವನ್ನು ಮೈಗೂಡಿಸಿ ಕೊಂಡಿರುವ ಕಾಡುಗೊಲ್ಲರ ಸಮುದಾಯ ಕಾಡು ಮತ್ತು ನಾಡಿನ ಸಂಪರ್ಕದಿಂದ ಬದುಕಿನ ಅತಂತ್ರ ಸ್ಥಿತಿಯನ್ನು ಅವಲೋಕಿಸಲಾಗಿದೆ. ಸರ್ಕಾರ ಪ್ರಭುತ್ವದ ಹಿನ್ನೆಲೆಯಲ್ಲಿಯೆ ಯೋಚನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆಯೆ ವಿನಹ ಸಮುದಾಯಗಳ ಅಭಿವೃದ್ದಿಯ ಶ್ರೇಯಸ್ಸಿಗಾಗಿ ದುಡಿಯುವುದು ಅತಿ ವಿರಳ ಎನ್ನಲಾಗುವುದು. ಬುಡಕಟ್ಟುಗಳಿಗೆ ಹಾಗೂ ಕಾಡುಗೊಲ್ಲರ ಸಮುದಾಯಕ್ಕೆ ಹೋಲಿಸಿ ಅಧ್ಯಯನಕ್ಕೆ ತೊಡಗಿದಾಗ ಹಿಂದುಳಿದ ವರ್ಗಗಳ ಯೋಜನೆಗಳು ಈ ಸಮುದಾಯವನ್ನು ತಲುಪದೇ ಇರುವುದು ದುರಂತವೇ ಸರಿ.

೭.೪ ಕಾಡುಗೊಲ್ಲರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಮಾನವ ಸಮಾಜ ನಿತ್ಯಪರಿವರ್ತನಶೀಲವಾದದ್ದು. ಸಮುದಾಯದ ಆದಿಮ ಸಂಸ್ಕೃತಿಯಿಂದ ಕಂಪ್ಯೂಟರ್‌ನತ್ತ ಮುಖಮಾಡಿದರೂ ಕೂಡ ಕಾಡುಗೊಲ್ಲ ಸಮುದಾಯದವು ತನ್ನದೇ ಆದ ಸಂಸ್ಕೃತಿ ಮೆರೆದ ಸಮುದಾಯ ಇದು ಅನೇಕ ತೊಂದರೆ, ನೋವು, ಹಿಂಸೆಗಳನ್ನು ಅನುಭವಿಸುತ್ತ ಆಧುನಿಕ ಸಮಾಜಕ್ಕೆ ಮುಖಾಮುಖಿಯಾಗುತ್ತಿದೆ. ಈ ಸಂದರ್ಭದಲ್ಲಿ ಕಾಡುಗೊಲ್ಲರು ತಮ್ಮ ಸಮುದಾಯದ ಮೂಲ ವೃತ್ತಿಗಳನ್ನು ಉಳಿಸಿಕೊಳ್ಳಲಾಗದೇ ಆಧುನಿಕತೆಯ ಇಂದಿನ ಪರಿಸ್ಥಿತಿಯಲ್ಲಿ ಅವರ ಮೂಲ ವೃತ್ತಿಗಳನ್ನು ಸಂಪೂರ್ಣವಾಗಿ ಕೈಬಿಡಲಾಗದೇ ಅಥವಾ ಇತರೆ ವೃತ್ತಿಗಳನ್ನು ಅನುಸರಿಸಲಾಗದೆ ಅನೇಕ ಸಮಸ್ಯೆಗಳ ಸುಳಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅವರ ಸಮಸ್ಯೆಗಳನ್ನು ಇಲ್ಲಿ ಗಮನಿಸಲಾಗಿದೆ.

೭.೪.೧. ಸಮಸ್ಯೆಗಳು

*** ನೈಸರ್ಗಿಕ ವಿಕೋಪ**

ಅಲೆಮಾರಿಗಳಾದ ಕಾಡುಗೊಲ್ಲರು ಪಶುಸಂಗೋಪನೆಯಲ್ಲಿ ಕುರಿಗಳನ್ನು ಮೇಯಿಸುವುದಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದು ಅಂತಹ ಸಂದರ್ಭದಲ್ಲಿ ಪ್ರಕೃತಿ ವೈಪರಿತ್ಯವನ್ನು ತಿಳಿಯದ ಕಾಡುಗೊಲ್ಲರು ಇಂತಹ ವಿಕೋಪಕ್ಕೆ ಸುಲಭವಾಗಿ ಬಲಿಯಾಗುತ್ತಾರೆ. ಗುಡುಗು, ಸಿಡಿಲು, ಮಳೆ, ನೆರಹಾವಳಿ, ಅತಿವೃಷ್ಟಿ, ಅನಾವೃಷ್ಟಿ, ಮುಂತಾದವುಗಳಿಂದ ಪ್ರತಿವರ್ಷ ಅನೇಕ ಕುರಿಗಳು ಮೇಕೆಗಳು, ಆಕಳು, ಎತ್ತುಗಳು ಮತ್ತು ಮನುಷ್ಯರು ಇಂತಹ ವಿಕೋಪಗಳಿಗೆ ತುತ್ತಾಗುತ್ತಿದ್ದಾರೆ. ಇದರಿಂದ ಕಾಡುಗೊಲ್ಲರು ಅಪಾರ ನಷ್ಟಕ್ಕೆ ಒಳಾಗಾಗುತ್ತಿದ್ದಾರೆ. ಈ ಸಮಸ್ಯೆಯು ನಿರಂತರವಾಗಿ ಕಾಡುತ್ತಿರುವ ಸಮಸ್ಯೆಯಾಗಿದೆ.

[illegible]

[illegible]

[illegible]

[illegible]

[illegible]

* ವೃತ್ತಿ ಸಮಸ್ಯೆಗಳು

ಕಾಡುಗೊಲ್ಲರು ನಿರ್ವಹಿಸುತ್ತಿರುವ ಮೂಲ ವೃತ್ತಿಗಳು ಅನೇಕ ಸಮಸ್ಯೆಗಳಲ್ಲಿ ಸಿಕ್ಕಿಕೊಂಡಿವೆ. ನಾಗರಿಕ ಸಮುದಾಯಗಳ ಐಶರಾಮಿ ಜೀವನಕ್ಕೆ ಕಾಡನ್ನು ಕಡಿದು ಹಾಳುಮಾಡುತ್ತಿರುವಾಗ ಕೃಷಿ ಭೂಮಿ ಮಾಯವಾಗಿ ಆಹಾರ ಉತ್ಪಾದನೆ ಇಲ್ಲದಂತಾಗಿವೆ. ಇಂದಿನ ಕೃಷಿ, ಕೃಷಿಕೂಲಿ, ಪಶುಸಂಗೋಪನಾ ವೃತ್ತಿಗಳು ನಾಗರಿಕ ಜಗತ್ತಿನಲ್ಲಿ ಲಾಭದಾಯಕವಲ್ಲದ ವೃತ್ತಿಗಳಾಗಿವೆ. ಕೃಷಿಯಲ್ಲಿ ಹೆಚ್ಚಿನ ಕೂಲಿ ಸಿಗುತ್ತಿಲ್ಲ ಹಾಗೂ ಆಧುನಿಕ ಉಪಕರಣಗಳನ್ನು ಕೃಷಿಯಲ್ಲಿ ಬಳಸುವುದರಿಂದ ಕೃಷಿಕೂಲಿಕಾರರು ನಿರುದ್ಯೋಗಿಗಳಾಗಿದ್ದಾರೆ.

ಕಾಡುಗೊಲ್ಲರು ಕುರಿಗಳಿಗೆ ಬರುವ ರೋಗಗಳನ್ನು ಪತ್ತೆಹಚ್ಚುವಲ್ಲಿ ನಿಸ್ಸೀಮರಾದರೂ ಕೂಡ ಕುರಿಗಳ ಸಾವನ್ನಪ್ಪುತ್ತವೆ. ದೊಮ್ಮರೋಗ, ಕಾಲು ಬಾಯಿಜ್ವರ, ತಿಕ್ಕಲುರೋಗ, ಕಂದಹಾಕಿಕೊಳ್ಳುವುದು ಅನೇಕ ರೋಗಗಳು ಮತ್ತು ವಾಹನಗಳ ಅಪಘಾತದಲ್ಲಿ ಕುರಿಗಳು ಸಿಕ್ಕಿ ಸಾವನ್ನಪ್ಪುತ್ತಿವೆ. ಇದರಿಂದ ಕುರಿಸಾಕಾಣಿಕೆ ವೃತ್ತಿ ಕಾಡುಗೊಲ್ಲರಿಗೆ ಲಾಭದಾಯಕವಲ್ಲ ಎನ್ನಿಸುತ್ತದೆ.

* ವೈದ್ಯಕೀಯ ಕೊರತೆ

ಕಾಡುಗೊಲ್ಲರು ಗಿಡಮೂಲಿಕೆಗಳ ಮೂಲಕ ಕುರಿಗಳ ವಿವಿಧ ರೋಗಗಳಿಗೆ ಔಷಧಿಯನ್ನು ಕಂಡು ಕೊಂಡಿದ್ದರು. ಇಂದು ಈ ನಾಟಿ ವೈದ್ಯಪದ್ಧತಿ ಅವರಿಂದ ದೂರ ಸರಿದಿದೆ. ಹೀಗಾಗಿ ಅವರು ಚಳ್ಳಕೆರೆ, ಮೊಳಕಾಲ್ಮೂರುಗಳಲ್ಲಿಯ ಆಸ್ಪತ್ರೆಗಳಿಗೆ ಹೋಗುತ್ತಾರೆ. ಅನೇಕ ಸಂದರ್ಭದಲ್ಲಿ ದಾರಿ ಮದ್ಯದಲ್ಲಿ ಕುರಿಗಳು ಸಾಯುವುದುಂಟು. ಇಲ್ಲವಾದರೆ ಕಾಡುಗೊಲ್ಲರು ಔಷಧಿಯನ್ನು ನೆನಪಿನಲ್ಲಿಟ್ಟುಕೊಂಡು ಅದನ್ನೆ ಕೊಡುತ್ತಾರೆ. ಎಷ್ಟೋ ಸಾರಿ ಸರಕಾರಿ ಆಸ್ಪತ್ರೆಯಲ್ಲಿ ಇವರ ಕುರಿಗಳನ್ನು ಸರಿಯಾಗಿ ನೋಡುವುದಿಲ್ಲ ಎಂಬ ಕಾರಣಕ್ಕಾಗಿ ಖಾಸಗಿ ದವಾಖಾನಿಗಳಿಗೆ ಹೋಗುತ್ತಾರೆ. ಇದರಿಂದ ಸಾಯುವ ಕುರಿ ಬದುಕುತ್ತವೆ. ಎನ್ನುವ ಆಶೆ ಇದ್ದರೂ ಹಣವು ಖರ್ಚಾಗುತ್ತಲ್ಲ ಎನ್ನುವ ದುಃಖವು ಇವರಿಗಿದೆ. ಆಸ್ಪತ್ರೆಯಲ್ಲಿ ಒಂದು ಸಾರಿ ಕುರಿ ತೋರಿಸಲು ೫೦ ರೂಪಾಯಿಗಳನ್ನು ಕೊಡುತ್ತಾರೆ ಕುರಿಗಳ ಆರೋಗ್ಯಕ್ಕಾಗಿಯೇ ಇವರು ತಮ್ಮ ಆದಾಯದಲ್ಲಿ ಒಂದಿಷ್ಟು ಹಣವನ್ನು ತೆಗೆದಿಡುತ್ತಾರೆ. ಕುರಿಗಳಿಗೆ ಸಾಂಕ್ರಾಮಿಕ ರೋಗಗಳು ತಗಲಬಾರದು ಎಂಬ ದೃಷ್ಟಿಯಿಂದ ಕುಶಲ ಮತ್ತು ಆರೋಗ್ಯ ಜೈವಿಕ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ಉಚಿತವಾಗಿ ಔಷಧಿ ಪಡೆದುಕೊಂಡು ಕುರಿಗಳಿಗೆ ಔಷಧಿ ನೀಡುತ್ತಾರೆ.

ಕಾಡುಗೊಲ್ಲರು ಆರೋಗ್ಯಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.ಇವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಸರ್ಕಾರಿ ಅಸ್ಪತ್ರೆಗಳಲ್ಲಿ ಯಾವುದೇ ಸಮಸ್ಯೆ ಬಂದರೆ ದೂರದ ಪ್ರದೇಶದಲ್ಲಿರುವ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಹೋಗಬೇಕಾಗಿದೆ. ಹೆರಿಗೆಯ ಸಂದರ್ಭದಲ್ಲಿ ಹಾಗೂ ಇನ್ನಿತರ ಸಾಮಾನ್ಯ ಸಂದರ್ಭಗಳಲ್ಲಿಯೂ ಸಹ ಕಾಡುಗೊಲ್ಲರು ವೈದ್ಯಕೀಯ ಸೌಲಭ್ಯದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇವರ ಪಾರಂಪರಿಕ ವೈದ್ಯಪದ್ಧತಿ ಇಂದು ಮಾಯವಾಗುತ್ತಿದೆ.

[illegible]

[illegible]

[illegible]

* **ಮೂಲಭೂತ ಸೌಕರ್ಯದಿಂದ ವಂಚಿತರು**

ಕಾಡುಗೊಲ್ಲರ ಅನೇಕ ಕುಟುಂಬಗಳು ಆಹಾರ, ವಸತಿ, ಶಿಕ್ಷಣವು ಸಿಗದೇ ಅವುಗಳಿಂದ ವಂಚಿತರಾಗಿದ್ದಾರೆ. ಸರ್ಕಾರದಿಂದ ನಿರ್ಮಿಸಿದ ಮನೆಗಳು ಕೆಲವರಿಗೆ ಮಾತ್ರ ದೊರೆತರೆ ಇನ್ನು ಅನೇಕ ಬಡವರಿಗೆ ಮನೆಗಳು ದೊರೆಯದೇ ಹಾಳಾದ ಗುಡಿಸಲಿನಲ್ಲಿಯೇ ಜೀವನ ಮಾಡುತ್ತಿದ್ದಾರೆ. ಹೀಗೆ ವಸತಿ, ಆಹಾರ, ಶಿಕ್ಷಣ, ಆರೋಗ್ಯ ಮುಂತಾದ ಸರ್ಕಾರದ ಮೂಲಭೂತ ಸೌಕರ್ಯಗಳು ದೊರೆಯದೇ ನರಳುತ್ತಿದ್ದಾರೆ.

* **ಬಡತನ**

ಏರುತ್ತಿರುವ ಜನಸಂಖ್ಯೆಯು ಜನರ ಬಡತನವನ್ನು ಹೆಚ್ಚಿಸಿದ್ದು, ಅವರಲ್ಲಿ ಬಡವರು, ಮಧ್ಯಮ ವರ್ಗದವರು ಮತ್ತು ಶ್ರೀಮಂತರು ಎನ್ನುವ ಶ್ರೇಣಿಕರಣದಲ್ಲಿ ವಿಗಂಡಿಸಿದಾಗ, ಕಾಡುಗೊಲ್ಲರಲ್ಲಿ ಬಡವರೇ ಹೆಚ್ಚಾಗಿದ್ದಾರೆ. ಮಧ್ಯಮ ಹಾಗೂ ಶ್ರೀಮಂತರಲ್ಲಿ ಬೆರಳೆಣಿಕೆ ಜನರು ಮಾತ್ರ ಕಂಡುಬರುತ್ತಾರೆ. ಇವರು ಆದಾಯ ಅಸಮಾನತೆಯಿಂದ ನರಳುತ್ತಿದ್ದು, ಕಾಡುಗೊಲ್ಲರು "ಬಡತನದಲ್ಲೆ ಹುಟ್ಟಿ ಬಡತನದಲ್ಲೆ ಸಾಯುವಂತಹ" ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ಸರ್ಕಾರದಿಂದ ಸಿಗತಕ್ಕಂತ ಸೌಲಭ್ಯಗಳು ಇವರಿಗೆ ಸಿಗದೇ ಇರುವುದು. ಈ ಸೌಲಭ್ಯಗಳು ಕೇವಲ ಸ್ಥಿತಿವಂತರಿಗೆ ಮಾತ್ರ ಸಿಗುತ್ತಿವೆ. ಅನೇಕ ಕಾಡುಗೊಲ್ಲರ ಕುಟುಂಬಗಳು ಇತರರ ಹೊಲದಲ್ಲಿ ಕೂಲ ನಾಲಿ ಮಾಡಿ ಬದುಕುತ್ತಿರುವುದು ಹೆಚ್ಚಾಗಿದ್ದು, ಕೆಲವೇ ಜನರು ೧ ಅಥವಾ ೨ ಎಕರೆ ಜಮೀನನ್ನು ಹೊಂದಿದ್ದರೂ ಬೇರೆಯವರ ಹೊಲದಲ್ಲಿ ದುಡಿಯುವ ಪರಿಸ್ಥಿತಿ ಅವರಿಗೆ ತಲೆದೋರಿದೆ. ಇದೊಂದು ದುರಂತವೇ ಸರಿ. ಕಾಡುಗೊಲ್ಲರಿಗೆ ಎಲ್ಲ ಕಾಲದಲ್ಲೂ ಕೂಲಿ ಕೆಲಸಗಳು ಸಿಗದೇ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

* **ಮಾರುಕಟ್ಟೆ ಸಮಸ್ಯೆ**

ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಕಾಡುಗೊಲ್ಲರು ಹೆಚ್ಚಾಗಿ ತಾವು ಬೆಳೆದ ಪಸಲನ್ನು ಜಿಲ್ಲಾ ಮತ್ತು ತಾಲ್ಲೂಕು ಪ್ರದೇಶಗಳಲ್ಲಿ ಮಾರಾಟಕ್ಕೆ ತರಬೆಕಾಗುತ್ತದೆ. ಅಂತಹ ಸಂದರ್ಭದಲ್ಲಿ ಸರಿಯಾದ ಮಾರುಕಟ್ಟೆ ಮಾಹಿತಿ ಇರದೇ ಇದ್ದಾಗ ಇವರು ಬೆಳೆದ ಪಸಲನ್ನು ಮದ್ಯಸ್ಥಗಾರರಿಗೆ, ಎಜೆಂಟರಿಗೆ ಕೇಳಿದ ಬೆಲೆಗೆ ಕೊಡುತ್ತಾರೆ. ಇದರಿಂದ ಇವರ ಬೆಲೆಗೂ ಮಾರುಕಟ್ಟೆಯ ಬೆಲೆಗೂ ಸಾಕಷ್ಟು ವ್ಯತ್ಯಾಸವಿರುವುದರಿಂದ ಇಲ್ಲಿಯೂ ನಷ್ಟವನ್ನು ಅನುಭವಿಸುತ್ತಾರೆ.

* **ಸಾರಿಗೆ ಸಂಪರ್ಕದ ಕೊರತೆ**

ಕಾಡುಗೊಲ್ಲರು ತಮ್ಮ ಹಟ್ಟಿಯಿಂದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಹೋಗುವುದಕ್ಕೆ ಸರ್ಕಾರಿ ವಾಹನದ ಸೌಕರ್ಯವಿರದೇ ಖಾಸಗಿ ವಾಹನದಲ್ಲಿಯೇ ಓಡಾಡುತ್ತಾರೆ. ಇವರ ಪ್ರದೇಶಗಳಲ್ಲಿ ಸರ್ಕಾರಿ ವಾಹನಗಳು ಅನಿಯಮಿತವಾಗಿ ಚಲಿಸುತ್ತವೆ. ಆದುದರಿಂದ ಕಾಡುಗೊಲ್ಲರು ಖಾಸಗಿ ವಾಹನ ಅವಲಂಬಿಸಿರುವುದೇ ಜಾಸ್ತಿ. ಬೆಳೆದ ಫಸಲನ್ನು ಮಾರುವುದಕ್ಕೆ ಸರಿಯಾದ ಸಾರಿಗೆ ವ್ಯವಸ್ಥೆಯಿಲ್ಲದ ಕಾರಣ ಹೆಚ್ಚಾಗಿ ಸ್ಥಳೀಯರಿಗೆ ಮಾರುತ್ತಾರೆ.

*** ಶೈಕ್ಷಣಿಕ ಸಮಸ್ಯೆ**

ಮಾನವನಿಗೆ ಬೇಕಾಗುವ ಮೂಲ ಭೂತ ಸೌಲಭ್ಯಗಳಲ್ಲಿ ಶಿಕ್ಷಣವು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಅನಕ್ಷರತೆ, ನಿರೋದ್ಯೋಗ, ಬಡತನ, ವಲಸೆಯಿಂದಾಗಿ ಕಾಡುಗೊಲ್ಲರಿಗೆ ಔಪಚಾರಿಕ ಶಿಕ್ಷಣವು ಸಿಗದೇ ಹಿಂದುಳಿದಿದ್ದಾರೆ. ಕಾಡುಗೊಲ್ಲರಲ್ಲಿ ಅಲೆಮಾರಿಗಳಾಗಿ ತಿರುಗುತ್ತಿರುವಾಗ ಮಕ್ಕಳನ್ನು ಶಾಲೆಗೆ ಕಳುಹಿಸದೆ ಕುರಿಕಾಯುವುದಕ್ಕೆ ಕರೆದುಕೊಂಡು ಹೋಗುತ್ತಿದ್ದು, ಇವರಿಗೆ ವೃತ್ತಿ ಮುಖ್ಯವಾಗಿದ್ದರಿಂದ ಯೋಗಕ್ಷೇಮವನ್ನು ಮರೆತ್ತಿದಿದ್ದಾರೆ. ಆದುದರಿಂದ ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಶಿಕ್ಷಣವನ್ನು ಪಡೆದವರ ಸಂಖ್ಯೆ ತೀರಾ ಕಡಿಮೆ ಇದ್ದದನ್ನು ಗಮನಿಸಿದ್ದೇನೆ. ಇನ್ನು ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಓದುವವರ ಸಂಖ್ಯೆ ಬೆರಳೆಣಿಕೆಯಷ್ಟು, ಎಂದೇ ಹೇಳಬಹುದು.

*** ಪಡಿತರ ಚೀಟಿ ಕೊರತೆ**

ಪಡಿತರ ಚೀಟಿಯ ಮೂಲಕ ನ್ಯಾಯಬೆಲೆ ಅಂಗಡಿಗಳಲ್ಲಿ ವಸ್ತುಗಳು ಕಡಿಮೆ ಬೆಲೆಗೆ ಸಿಗುತ್ತವೆ. ಕಾಡುಗೊಲ್ಲರಲ್ಲಿಯೇ ಸ್ಥಿತಿವಂತರು ಪಡಿತರ ಚೀಟಿಯನ್ನು ಹೊಂದಿದ್ದು, ಈ ಸೌಲಭ್ಯ ಬಡವರಿಗೆ ಸಿಗದೇ ಇರುವುದು ಕಂಡುಬರುತ್ತದೆ.

೭.೪.೨ ಪರಿಹಾರೋಪಾಯಗಳು

ಕಾಡುಗೊಲ್ಲರ ಜೀವನಕ್ರಮದಲ್ಲಿ ವಿಶಿಷ್ಟತೆಯನ್ನು ಕಾಣಬಹುದಾಗಿದ್ದು ಅವರು ಇತರ ಸಮುದಾಯ ಗಳಿಗಿಂತ ಭಿನ್ನವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದೇ ಹೇಳಬಹುದು. ಆದ್ದರಿಂದ ಮೂಲಭತ ಸಮಸ್ಯೆಗಳಿಂದಲೇ ಇವರು ಹಿಂದುಳಿಯುವುದಕ್ಕೆ ಕಾರಣವಾಗಿವೆ. ಕಾಡುಗೊಲ್ಲರು ತಮ್ಮದೇ ಆದ ಚೌಕಟ್ಟಿನಲ್ಲಿ ಜೀವನ ಮಾಡುತ್ತಿದ್ದು ಹಟ್ಟಿಯಿಂದ ಹೊರಗಡೆ ಬಂದರೆ ನಮ್ಮ ಸೂತಕ ಹಾಳಾಗುತ್ತದೆ ಎನ್ನುವ ಮೂಢನಂಬಿಕೆಯಿಟ್ಟು ತಮ್ಮ ಹಟ್ಟಿಗಳಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ನಾಗರಿಕ ಜಗತ್ತಿಗೆ ಇವರನ್ನು ಪ್ರವೇಶಿಸುವಂತೆ ಮತ್ತು ಇತರರಿಗೆ ಸಿಗಬೇಕಾದ ಯೋಜನೆಗಳು ಇವರಿಗೂ ಸಿಗುವಂತೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕಾಗಿದೆ.

ಕಾಡುಗೊಲ್ಲರ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಈ ಕೆಳಗಿನ ಅಂಶಗಳ ಮೂಲಕ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

- **ಹುಲ್ಲುಗಾವಲು ಮೀಸಲಿಡುವುದು**

ಕಾಡುಗೊಲ್ಲರ ಮೂಲವೃತ್ತಿ ಪಶುಪಾಲನೆಯಾಗಿದ್ದು, ರಾಜ್ಯದಲ್ಲಿ ಸಂಭವಿಸುತ್ತಿರುವ ಬರಗಾಲ, ಕಾಡುಗಳ ನಾಶದಿಂದಾಗಿ ಹುಲ್ಲುಗಾವಲು ಪ್ರದೇಶಗಳು ಕಡಿಮೆಯಾಗುತ್ತಿವೆ. ಇವರು ಅಲೆಮಾರಿಗಳಾಗಿ ಅಲೆದಾಡುವ ಪ್ರದೇಶಗಳಲ್ಲಿಯೇ ಗೋಮಾಳ, ಅರಣ್ಯ ಭೂಮಿ ಮತ್ತು ಭೂಪ್ರದೇಶಗಳನ್ನು ಪ್ರತಿಹೋಬಳಿ ಮಟ್ಟದಲ್ಲಿರುವಂತೆ ಮಾಡಬೇಕಾಗಿದೆ. ಹುಲ್ಲುಗಾವಲುಗಳಿಗೆ ಪ್ರತ್ಯಕವಾದ ಭೂಮಿಯನ್ನು ನೀಡುವ ವ್ಯವಸ್ಥೆ ಮಾಡಬೇಕು. ಅವುಗಳಲ್ಲಿ ಪಶುಗಳನ್ನು ಮೇಯಿಸಲು ಮುಕ್ತ ಅವಕಾಶ ನೀಡಬೇಕು.

• **ಶಿಕ್ಷಣ**

ಅಲೆಮಾರಿಗಳಿಗಾಗಿಯೇ ಬಿಡಾರ, ಶಾಲೆಗಳ ವ್ಯವಸ್ಥೆಯಿದ್ದು, ಈ ವ್ಯವಸ್ಥೆ ಕಾಡುಗೊಲ್ಲರಿಗೆ ತಲುಪುತ್ತಿಲ್ಲ. ಇವರು 'ಎಲ್ಲೆಲ್ಲಿ ವಾಸವಾಗಿರುತ್ತಾರೋ ಅಲ್ಲಲ್ಲಿ ಶಾಲೆ' ಎಂಬ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೆ ತರಬೇಕಾಗಿದೆ. ಇವರಿಗೆ ಸರಳವಾಗಿ ವರ್ಗಾವಣೆ ಪತ್ರ, ವಲಸೆಯ ಸಂದರ್ಭದಲ್ಲಿ ಮಕ್ಕಳ ದಾಖಲಾತಿ ಕಡ್ಡಾಯವಾಗಿ ಮಾಡಿಕೊಳ್ಳಬೇಕಾಗಿದೆ ಹಾಗೂ ಕಾಡುಗೊಲ್ಲರ ಮಕ್ಕಳಿಗಾಗಿಯೇ ಪ್ರತ್ಯೇಕ ವಸತಿ ಶಾಲೆಯ ವ್ಯವಸ್ಥೆಯನ್ನು ನೀಡಬೇಕು. ಇದರ ಜೊತೆಗೆ ಊರಿನಿಂದ ಬೇರೆ ಬೇರೆ ಊರುಗಳಿಗೆ ಹೋಗಿ ಶಿಕ್ಷಣ ಪಡೆಯುತ್ತಿರುವವರಿಗೆ ವಾಹನದ ಸೌಲಭ್ಯ ದೊರಕುವಂತೆ ಮಾಡಬೇಕಾಗಿದೆ.

• **ರೋಗ ನಿರೋಧಕ ಲಸಿಕೆ**

ಕುರಿಗಳಿಗೆ ದಮ್ಮರೋಗ, ನೀಲಿನಾಲಿಗೆ, ಮೈಲಿಬೇನೆ, ಸಿಡುಬು, ಕಾಲುಬಾಯಿ ಜ್ವರ, ಮುಂತಾದ ರೋಗಗಳನ್ನು ನಿಯಂತ್ರಣ ಮಾಡುವುದಕ್ಕಾಗಿ ಕುರಿಗಳಿಗೆ, ದನಗಳಿಗೆ, ಎತ್ತುಗಳಿಗೆ ರೋಗ ನಿರೋಧಕ ಲಸಿಕೆ ಹಾಕುವ ಆಂದೋಲವನ್ನು ಸರ್ಕಾರ ಕೈಗೊಳ್ಳಬೇಕಾಗಿದೆ.

• **ಅಲೆಮಾರಿ ಕಾಡುಗೊಲ್ಲರಿಗೆ "ಜನಶ್ರೀವಿಮಾ" ಮತ್ತು ಕುರಿಗಳಿಗೆ "ಸಮಗ್ರ ವಿಮಾ" ಯೋಜನೆಗಳು ಅನುಷ್ಠಾನ :**

ಅಕಾಲಿಕ ಮಳೆ, ಇಲ್ಲವೇ ಆಕಸ್ಮಿಕ ದುರಂತದಲ್ಲಿ ತುತ್ತಾದ ಕುರಿ, ಮೇಕೆ, ದನಗಳನ್ನು ಸಾಕಿದ ಅನೇಕ ಕುಟುಂಬಗಳು ಬೀದಿಪಾಲಾಗುತ್ತವೆ. ದುರಂತಗಳನ್ನು ತಡೆಗಟ್ಟುವುದಕ್ಕೆ "ಜನಶ್ರೀ ವಿಮಾ" ಯೋಜನೆ ಜಾರಿಗೊಳಿಸುವುದು ಮತ್ತು ಅತಿವೃಷ್ಟಿ, ಅನಾವೃಷ್ಟಿ ಇನ್ನು ಅನೇಕ ಪ್ರಕೃತಿ ವಿಕೋಪಗಳು ಸಂಭವಿಸಿದಾಗ "ಸಮಗ್ರ ವಿಮಾ" ಯೋಜನೆಯು ಜಾರಿಗೆ ತರುವುದು ಅವಶ್ಯಕವಾಗಿದೆ. ಜನಶ್ರೀ ವಿಮಾ ಯೋಜನೆಯನ್ನು ಇತ್ತೀಚೀಗೆ ರಾಜ್ಯ ಸರ್ಕಾರ ಆರಂಭಿಸಿದೆ. ನೈಸರ್ಗಿಕ ವಿಕೋಪಗಳಾದ ಕುರಿಗಳಿಗೆ ಮಾತ್ರ ಇದನ್ನು ನೀಡಲಾಗಿದೆ. ಆದರೆ ಇಲ್ಲಿ ಕುರಿಕಾಯುವವನನ್ನು ಕಡೆಗಣಿಸಿದ್ದರಿಂದ ಪಶುಪಾಲಕನಿಗೂ ಈ ಸೌಲಭ್ಯ ಸಿಗುವಂತೆ ಸರ್ಕಾರ ಮಾಡಬೇಕಾಗಿದೆ.

• **ಮಾರುಕಟ್ಟೆ ಸೌಲಭ್ಯ**

ಕಾಡುಗೊಲ್ಲರು ಉತ್ಪಾದಿಸಿದ ವಸ್ತುಗಳನ್ನು ಸರಿಯಾದ ಬೆಲೆಗೆ ಮಾರಲು ಮಾರುಕಟ್ಟೆಯ ಸೌಲಭ್ಯಬೇಕು. ಕುರಿಗಳನ್ನು ಮಾರುವುದಕ್ಕೆ ಇವರು ಮಧ್ಯವರ್ತಿಗಳ ಬಿಗಿ ಹಿಡಿತದಲ್ಲಿರುವುದರಿಂದ ಅದನ್ನು ತಪ್ಪಿಸಲು ಸಾಧ್ಯವಾಗುತ್ತದೆ ಮತ್ತು ಇವರಿಗೆ ನ್ಯಾಯಬೆಲೆ ದೊರೆಯುವಂತಾಗುತ್ತದೆ. ಆದ್ದರಿಂದ ಸರ್ಕಾರ ಕೃಷಿ ಉತ್ಪನ್ನಗಳ ಮಾರುಕಟ್ಟೆ ಮಾದರಿಯಲ್ಲಿ "ಕುರಿ-ಮೇಕೆ-ಉತ್ಪನ್ನಗಳ ಮಾರುಕಟ್ಟೆ ಕಾಯಿದೆ" ಜಾರಿಗೆ ತರಬೇಕಾಗಿದೆ. ಅದರಂತೆಯೇ ಕಾಡುಗೊಲ್ಲರು ವ್ಯವಸಾಯದಲ್ಲಿ ಬೆಳೆದ ಪಸಲನ್ನು ಮಾರುವುದಕ್ಕೆ ಸರಿಯಾದ ಮಾಹಿತಿಯಿಲ್ಲದೆ ಮದ್ಯವರ್ತಿಗಳಿಗೆ ಮಾರುವುದು ಕಂಡುಬರುತ್ತದೆ. ಇವರಿಗೆ ಸಾರಿಗೆ ಸೌಲಭ್ಯ, ಪ್ರಚಾರ, ಇವುಗಳನ್ನು ಸುಲಭವಾಗಿ ಸಿಗುವಂತೆ ಮಾಡಬೇಕಾಗಿದೆ.

• ಆರೋಗ್ಯ ಸೌಲಭ್ಯ

ಕಾಡುಗೊಲ್ಲರಿಗೆ ಸಮರ್ಪಕವಾದ ಆರೋಗ್ಯ ಸೇವೆ ದೊರೆಯುತ್ತಿಲ್ಲ. ಹಟ್ಟಿಗಳಿಂದ ಬಹಳ ದೂರದಲ್ಲಿ ಸರ್ಕಾರಿ ಆಸ್ಪತ್ರೆಗಳಿವೆ. ಪ್ರಾಣಾಪಾಯಕ್ಕೆ ತೊಂದರೆಯಾಗುವ ರೋಗಗಳು ಬಂದರೆ ದೂರದ ಪ್ರದೇಶಗಳಲ್ಲಿಯ ಆಸ್ಪತ್ರೆಗೆ ರೋಗಿಯನ್ನು ಕರೆದುಕೊಂಡು ಹೋಗುವಾಗ ರೋಗಿ ಮಾರ್ಗ ಮಧ್ಯದಲ್ಲಿಯೇ ಸಾವನ್ನಪ್ಪುತ್ತಾನೆ. ಇಂತಹ ಅನೇಕ ಘಟನೆಗಳು ಈಗಾಗಲೇ ಈ ಪ್ರದೇಶಗಳಲ್ಲಿ ಸಂಭವಿಸಿವೆ. ಈ ಕಾರಣಕ್ಕಾಗಿ ಕಾಡುಗೊಲ್ಲರು ವಾಸಿಸುತ್ತಿರುವ ಸಮೀಪದ ಸ್ಥಳಗಳಲ್ಲಿ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯ ಒದಗಿಸಬೇಕು. ಇದರಿಂದ ಗರ್ಭಿಣಿ ಯರಿಗೆ, ಹೆರಿಗೆಗೆ, ವಯಸ್ಸಾದವರಿಗೇತರೆ ರೋಗಿಗಳಿಗೆ ಅನುಕೂಲವಾಗುತ್ತದೆ. ಆಧುನಿಕತೆಯ ಈ ಸಂದರ್ಭದಲ್ಲಿ ಕಾಡುಗೊಲ್ಲರಲ್ಲಿ ಋತುಮತಿ, ತಿಂಗಳ ಮುಟ್ಟು ಮತ್ತು ಹೆರಿಗೆ ಸಂದರ್ಭದಲ್ಲಿ ಆಚರಿಸುವ ಉಗ್ರ ಆಚರಣೆಗಳಿಂದ ಮುಕ್ತರಾಗಿ ಆರೋಗ್ಯವಂತರಾಗಿ ಬದುಕಲು ಮಾರ್ಗದರ್ಶನ ನೀಡಬೇಕು. ಇಷ್ಟಲ್ಲದೆ ಗ್ರಾಮಗಳ ಮಟ್ಟದಲ್ಲಿ ಪಶುಗಳ ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸಬೇಕು. ಇದರಿಂದ ಪಶುಗಳ ಅಕಾಲಿಕ ಮರಣವನ್ನು ತಡೆಗಟ್ಟಬಹುದು.

• ಸಾರಿಗೆ ಸಂಪರ್ಕದ ಸೌಲಭ್ಯ

ಕಾಡುಗೊಲ್ಲರು ಬೆಳೆದ ಪಸಲನ್ನು ಮಾರುವುದಕ್ಕೆ ಉತ್ತಮ ಸಾರಿಗೆ ವ್ಯವಸ್ಥೆಯಿರದೇ ಮಧ್ಯಸ್ಥಗಾರರಿಗೆ ಮಾರುವ ವ್ಯವಸ್ಥೆಯನ್ನು ಬದಾಲಿಯಿಸುವುದಕ್ಕೆ, ಕಡಿಮೆ ಖರ್ಚಿನಲ್ಲಿ ಬೆಳೆದ ಫಸಲನ್ನು ಒಯ್ಯುವುದಕ್ಕೆ ಸಣ್ಣ ವಾಹನಗಳ (ಮಿನಿಲಾರಿ, ಟ್ರ್ಯಾಕ್ಟರ್, ಟೆಂಪೋ)ಗಳ ಸೌಲಭ್ಯವು ದೊರಕುವಂತೆ ಮಾಡಬೇಕಾಗಿದೆ. ಇದರಿಂದ ಕುರಿಗಳನ್ನು, ಎತ್ತುಗಳನ್ನು, ಆಕಳು, ಮೇಕೆಗಳು ಸುಲಭವಾಗಿ ಸಾಗಿಸಬಹುದಾಗಿದೆ.

• ಅರಣ್ಯದೊಳಗೆ ಪಶುಸಂಗೋಪನೆಗೆ ಅವಕಾಶ

ಪ್ರಕೃತಿಯಲ್ಲಿ ಹುಟ್ಟಿ, ಪ್ರಕೃತಿಯಲ್ಲಿ ಬೆಳೆದ ಕಾಡುಗೊಲ್ಲರ ಸಮುದಾಯಕ್ಕೆ ಅರಣ್ಯದಲ್ಲಿ ಪಶು ಸಂಗೋಪನೆಗೆ ಅವಕಾಶ ನೀಡಬೇಕು.

• ರಾಸಾಯನಿಕ ಗೊಬ್ಬರ ಮತ್ತು ಔಷಧಿ ವಿತರಣೆ

ಕೇವಲ ಕೊಟ್ಟಿಗೆ ಗೊಬ್ಬರ ಮೂಲಕವೇ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮತ್ತು ಇಂದು ಬೆಳೆಯುತ್ತಿರುವ ಅನೇಕ ಫಸಲಿಗೆ ಮಾರಕ ರೋಗಗಳು ಅಂಟಿಕೊಳ್ಳುತ್ತಿವೆ. ಇವುಗಳ ಬಗ್ಗೆ ಕಾಡುಗೊಲ್ಲರ ಕೃಷಿಕರಿಗೆ ಮಾರ್ಗದರ್ಶನ ಮಾಡಿ ಅವರಿಗೆ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಔಷಧಿಗಳನ್ನು ಕಡಿಮೆ ಬೆಲೆಯಲ್ಲಿ ದೊರಕುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು.

• ಜಾಹಿರಾತಿನ ಕೊರತೆ

ಕಾಡುಗೊಲ್ಲರು ನಗರ ಪ್ರದೇಶಗಳಿಂದ ದೂರವಿದ್ದು ಮುಖ್ಯವಾಗಿ ಅವರುಗಳಿಗೆ ಮಾರುಕಟ್ಟೆಯ ಸಮಾಚಾರವನ್ನು ತಿಳಿಸುವ ಸಾಧನ ಸಂಪರ್ಕಗಳಿಲ್ಲ. ಹೀಗಾಗಿ ನಗರದ ಕೃಷಿ ಹುಟ್ಟುವಳಿ ಬಗ್ಗೆ, ಬೆಲೆಯ

ಬಗ್ಗೆ ಅಥವಾ ಬೆಲೆಗಳಲ್ಲಾಗುವ ಬದಲಾವಣೆಗಳ ಬಗ್ಗೆ ಯಾವ ಮಾಹಿತಿಯೂ ಇರುವುದಿಲ್ಲ. ಆದುದರಿಂದ ಸ್ಥಳೀಯ ವ್ಯಾಪರಸ್ಥರಿಗೆ ಮಾರಾಟ ಮಾಡುತ್ತಾರೆ. ಕಾಡುಗೊಲ್ಲರಿಗೆ ಸಮೂಹ ಸಂವಹನಾ ಮಾಧ್ಯಮಗಳಾದ ದಿನಪತ್ರಿಕೆ, ರೆಡಿಯೋ ಮತ್ತು ಟಿ.ವಿ. ಮೂಲಕ ಮಾಹಿತಿ ಪಡೆಯಲು ಅನುಕೂಲ ಮಾಡಿಕೊಡಬೇಕು.

- **ಮಹಿಳೆಯರಿಗೆ ಸ್ತ್ರೀ ಶಕ್ತಿ ಯೋಜನೆಯ ಪ್ರಾಮುಖ್ಯತೆ**

ಕಾಡುಗೊಲ್ಲರ ಮಹಿಳೆಯರು ಅಲ್ಲಲ್ಲಿ ಸ್ತ್ರೀ-ಶಕ್ತಿ ಗುಂಪುಗಳನ್ನು ರಚಿಸಿಕೊಂಡು ಉಳಿತಾಯ ಮಾಡುತ್ತಿದ್ದಾರೆ. ಈ ಸ್ತ್ರೀ ಶಕ್ತಿ ಗುಂಪುಗಳು ಉಳಿತಾಯ ಮಾಡಿದ ಹಣವನ್ನು ತಮ್ಮ ಗುಂಪಿನ ಸದಸ್ಯರಿಗೆ ಸಾಲದ ರೂಪದಲ್ಲಿ ಹಣವನ್ನು ನೀಡುತ್ತಾ ಬಂದಿದ್ದಾರೆ. ಕೆಲ ಸ್ತ್ರೀ-ಶಕ್ತಿ ಗುಂಪುಗಳು ತಾವು ಉಳಿತಾಯ ಮಾಡಿದ ಹಣವನ್ನು ಬ್ಯಾಂಕಿಗೆ ಕಟ್ಟುತ್ತಿದ್ದಾರೆ. ಬರುವ ಬಡ್ಡಿ ತೀರಾ ಕಡಿಮೆಯಾಗಿದ್ದು ಆ ಹಣವನ್ನು ಇತರೆ ವೃತ್ತಿಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಸ್ತ್ರೀಶಕ್ತಿ ಗುಂಪುಗಳಿಗೆ ಹೆಚ್ಚಿನ ರೀತಿಯಲ್ಲಿ ಆರ್ಥಿಕ ಸಹಾಯ ನೀಡಿ ಸರ್ಕಾರ ಅವರಿಗೆ ಪ್ರೋತ್ಸಾಹ ನೀಡಬೇಕಾಗಿದೆ.

- **ಕುರಿಗಳ ತಳಿ ಅಭಿವೃದ್ಧಿ**

ಜಾತಿಯ ಕುರಿಗಳಾದ ಡೆಕ್ಕನಿ, ಹಾಸನ, ಕೆಂಗುರಿ, ಮುಂತಾದ ಕುರಿಗಳ ದೇಹದ ತೂಕ ಕಡಿಮೆಯಿದ್ದು ಅವುಗಳಿಂದ ಬರುವ ಉಣ್ಣೆ ಒರಟಾಗಿದೆ. ಮಾಂಸದ ಪ್ರಮಾಣ, ಉಣ್ಣೆ ಪ್ರಮಾಣ ಹೆಚ್ಚಾಗುವಂತಹ ವಿದೇಶಿ ಮೂಲದ "ಕಾಂಬೂಲೇ" ತಳಿಯೊಂದಿಗೆ ಮಿಶ್ರ ತಳಿ ಟಗರುಗಳನ್ನು ಕುರಿಗಾರರಿಗೆ ನಿಗದಿತ ದರದಲ್ಲಿ ದೊರೆಯುವಂತೆ ಮಾಡಿದಾಗ ಕಾಡುಗೊಲ್ಲರಿಗೆ ಮತ್ತು ಕುರಬರಿಗೂ ಅನುಕೂಲವಾಗುತ್ತದೆ.

- **ಕುಲಸಂಗೋಪನಾ ಕೇಂದ್ರಗಳ ನಿರ್ವಹಣೆ ಅಥವಾ ಮಿಶ್ರತಳಿಗೆ ವಿತರಣೆ**

ಕುರಿಸಾಕಾಣೆದಾರರಿಗೆ ಉತ್ತಮ ತಳಿಯ ಮಿಶ್ರತಳಿ ಮತ್ತು ಶುದ್ಧತಳಿಯ ಯೋಗ್ಯ ಟಗರುಗಳನ್ನು ಉತ್ಪಾದಿಸಿ ವಿತರಿಸುವ ಉದ್ದೇಶದಿಂದ ನಿಗಮವು ತನ್ನ ಅಧೀನದಲ್ಲಿ ಆರು ಸಂವರ್ಧನಾ ಕೇಂದ್ರಗಳನ್ನು ಹೊಂದಿದೆ.

೧. ಕುರಿ ಸಂವರ್ಧನಾ ಕೇಂದ್ರ, ಕುಂದಾಪುರ ಚಳ್ಳಕೆರೆ ತಾ, ಚಿತ್ರದುರ್ಗ ಜಿಲ್ಲೆ

೨. ಕುರಿ ಸಂವರ್ಧನಾ ಕೇಂದ್ರ, ಉಳಾರ್ತಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿಲ್ಲೆ

೩. ಕುರಿ ಸಂವರ್ಧನಾ ಕೇಂದ್ರ, ಗುತ್ತಲ, ಹಾವೇರಿ ತಾ, ಹಾವೇರಿ ಜಿಲ್ಲೆ

೪. ಕುರಿ ಸಂವರ್ಧನಾ ಕೇಂದ್ರ, ಸುತ್ತಟ್ಟಿ, ಅಥಣಿ ತಾ, ಬೆಳಗಾವಿ ಜಿಲ್ಲೆ

೫. ಕುರಿ ಸಂವರ್ಧನಾ ಕೇಂದ್ರ, ಅಗನವಾಡಿ, ಬಿಳಿಗಿ ತಾ, ಬಾಗಲಕೋಟೆ ಜಿಲ್ಲೆ

೬. ಕುರಿ ಸಂವರ್ಧನಾ ಕೇಂದ್ರ, ಧನಗೂರು, ಮಳವಳ್ಳಿ ತಾ, ಬಾಗಲಕೋಟೆ ಜಿಲ್ಲೆ

"ಕುರಿ ಮತ್ತು ಕುರಿ ಉತ್ಪನ್ನಗಳಿಗೆ ವೈಜ್ಞಾನಿಕ ಮಾರುಕಟ್ಟೆ ಅಭಿವೃದ್ಧಿಯ ಕನಿಷ್ಟ ಯೋಜನೆ ಸದ್ಯದ ಪರಿಸ್ಥಿತಿಯಲ್ಲಿ ಕುರಿಗಾರರು ಎದುರಿಸುತ್ತಿರುವ ಮಾರುಕಟ್ಟೆ ವ್ಯವಸ್ಥೆ ಕೊರತೆಯನ್ನು ಸ್ವಲ್ಪಮಟ್ಟಿಗೆ

[illegible]

[illegible]

[illegible]

[illegible]

[illegible]

ಹೋಗಲಾಡಿಸಲು ೨೦೦೩-೦೪ನೇ ಸಾಲಿನಲ್ಲಿಯೇ ಒಂದು ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಚಳ್ಳಿಕೆರೆ ತಾಲ್ಲೂಕು ಕುಂದಾಪುರ, ಕುರಿಸಂರ್ಧನಾ ಕೇಂದ್ರಗಳಲ್ಲಿ ಕುರಿ ಸಂಗ್ರಹಣಾ ಆಶ್ರಯ ಶೆಡ್ ನಿರ್ಮಿಸಿ ಇಲ್ಲಿಗೆ ಕುರಿಗಾರರು ಉತ್ಪಾದಿಸುವ ಕುರಿ-ಮೇಕೆಗಳನ್ನು ಖರೀದಿಸಿ ನಂತರ ಮಾರುಕಟ್ಟೆಯಲ್ಲಿ ಅವನ್ನು ಮಾಂಸಕ್ಕಾಗಿ ಮಾರಾಟ ಮಾಡುವ ವ್ಯವಸ್ಥೆ ಯೋಜಿಸಲಾಗಿದೆ. ಇಲ್ಲಿ ಪ್ರತಿ ತಿಂಗಳು ಮೂವತ್ತು ಸಾವಿರ ಕುರಿಗಳನ್ನು ಖರೀದಿಸಿ ಮಾರಾಟ ಮಾಡುವ ಗುರಿ ಹೊಂದಲಾಗಿದೆ" ಎಂಬ ಮಾಹಿತಿ ತಿಳಿಯುತ್ತದೆ.

ಪ್ರಸ್ತುತ ಸಮುದಾಯದ ಅಧ್ಯಯನಗಳು ಸಂಗ್ರಹಣಾತ್ಮಕವಾಗಿವಿಯೇ ವಿನಃ ಸಮುದಾಯದ ಅಭಿವೃದ್ಧಿಗೆ ಪೂಕವಾಗಿರದೆ ಸಮುದಾಯವು ಗೊಂದಲದ ವ್ಯವಸ್ಥೆಯೊಳಗೊಡೆ ಸಿಕ್ಕಿ ಹಾಕಿಕೊಂಡಿದೆ. ಆದ್ದರಿಂದ ಯಾವುದೆ ಅಧ್ಯಯನಗಳು, ಸರ್ಕಾರದ ಯೋಜನೆಗಳೆಲ್ಲವೂ ಸಾರ್ವತ್ರಿಕ ಸಧಬಿರುಚಿಯನ್ನು ಸೃಷ್ಟಿ ಮಾಡುವಂತಹ ವ್ಯವಸ್ಥೆ ಆಗಬೇಕಾಗಿರುವುದು ಇಂದು ಅನಿವಾರ್ಯವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಅಲೆಮಾರಿ ಸಮುದಾಯವಾಗಿರುವ ಕಾಡುಗೊಲ್ಲರು ನಿಲ್ಲಲು ನೆಲೆಯಿಲ್ಲದೆ ಬೆರಳೆಣಿಕೆಯಷ್ಟು ನೆಲೆನಿಂತರೂ ಕೂಡ ಅವರ ಬದುಕಿಗೆ ಪೂರಕವಾದ ಯೋಜನೆಗಳು ಇಲ್ಲದೇ ಇರುವುದು ಕ್ಷೇತ್ರಕಾರ್ಯದ ಮೂಲಕ ಮನವರಿಕೆಯಾಗಿದೆ.

ಅಡಿಟಿಪ್ಪಣಿಗಳು

೧. ಜಿ.ಎಂ. ಶುಂಪೀಟರ್., ದಿ ಥಿಯರಿ ಆಫ್ ಎಕಾನಾಮಿಕ್ ಡೆವಲಪ್‌ಮೆಂಟ್, ೨೦೦೦, ಪು. ೩-೪

೨. ಕೃಷ್ಣಮೂರ್ತಿ ಹೆಚ್.ಆರ್., ವೀರಪ್ಪಗೌಡ ಹೆಚ್.ಸಿ., ಅಭಿವೃದ್ಧಿ ಅರ್ಥಶಾಸ್ತ್ರ, ಪು. ೭

೩. ಅದೇ ಪು. ೭-೮

೪. ಟಿ.ಆರ್. ಚಂದ್ರಶೇಖರ, ಕರ್ನಾಟಕ ಅಭಿವೃದ್ಧಿ ಆಕೃತಿ, ೨೦೦೭, ಪು. ೩

೫. ಅದೇ ಪು. ೯

೬. ಎ.ಎಸ್. ಪ್ರಭಾಕರ., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪು. ೧೪೫

೭. ಅದೇ ಪು. ೧೩೩

೮. ಅದೇ ಪು. ೧೩೫

೯. ಗುರುಲಿಂಗಯ್ಯ ಎಂ., ಕರ್ನಾಟಕದ ಗೊಲ್ಲ ಸಮುದಾಯ, ಪು. ೭೯

೧೦. ಅದೇ ಪು. ೮೦

೧೧. ಎ.ಎಸ್. ಪ್ರಭಾಕರ., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪು. ೧೩೬

ಸಮಾರೋಪ

ಸಮಾರೋಪ

ಕಾಡುಗೊಲ್ಲರು ದಕ್ಷಿಣ ಭಾರತದಲ್ಲಿ ಪಶುಪಾಲನ ವೃತ್ತಿಯನ್ನು ಅತ್ಯಂತ ಪ್ರೀತಿ ಹಾಗೂ ಭಕ್ತಿಯಿಂದ ಪರಂಪರಾನುಗತವಾಗಿ ಮುಂದುವರೆಸಿಕೊಂಡು ಬಂದಿದ್ದರು. ಕೇವಲ ಪಶುಪಾಲನೆಯಲ್ಲಿಯೆ ತನ್ನ ಅಸ್ತಿತ್ವ ಕಂಡುಕೊಂಡಿದ್ದ ಈ ಸಮುದಾಯ ಪಶುಪಾಲನೆಯ ಮೂಲಕ ಇಂದು ಬದುಕು ಸಾಗಿಸುವುದು ತೊಂದರೆ ಯಾಗುತ್ತಿರುವುದರಿಂದ ತನ್ನ ಸಮುದಾಯದ ಮೂಲ ವೃತ್ತಿಯನ್ನು ಕೈಬಿಟ್ಟು ಕೃಷಿ, ಕೃಷಿಕೂಲಿ, ಕೃಷಿಯೇತರ ಕೂಲಿ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುತ್ತಿದೆ. ಪರಂಪರಾನುಗತ ಪಶುಗಳ ಸಾಕಾಣಿಕೆಯಿಂದ ಆದಾಯ ಅತಿ ಕಡಿಮೆಯಾಗುತ್ತಿದ್ದು, ಪಶುಗಳಿಗೆ ಮೀಸಲಿಟ್ಟ ಗೋಮಾಳಗಳು ಕೃಷಿ ಭೂಮಿಯಾಗಿ ಪರಿವರ್ತನೆಯಾಗು ತ್ತಿದ್ದುದರಿಂದ ಹಾಗೂ ಕಾಲಕ್ಕೆ ತಕ್ಕಂತೆ ಮಳೆಯಾಗದೆ ಇರುವುದರಿಂದ ಈ ವೃತ್ತಿ ಇಂದು ಲಾಭದಾಯಕ ವಾದುದಲ್ಲ ಎಂದು ಈ ಸಮುದಾಯದ ಜನರು ನಂಬಿದ್ದಾರೆ. ಪಶುಪಾಲನ ವೃತ್ತಿಗೆ ನಮ್ಮ ಸಾಂಸ್ಕೃತಿಕ ನಾಯಕರು ಪೂಜ್ಯನೀಯವಾದ ಸ್ಥಾನಮಾನಗಳನ್ನು ಕೊಟ್ಟಿದ್ದರು ಎಂಬ ಕಾರಣಕ್ಕಾಗಿ ನಮ್ಮ ಸಮುದಾಯ ದವರು ಸಾಂಕೇತಿಕವಾಗಿ ಈ ಪಶುಪಾಲನೆಯನ್ನು ಇಂದು ಅನುಸರಿಸಿಕೊಂಡು ಬಂದಿದ್ದಾರೆ ಎಂದು ಕೆಲ ಹಿರಿಯರು ಅಭಿಪ್ರಾಯಪಡುತ್ತಾರೆ.

ನಾನು ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಹನುಮಂತನ ಗೊಲ್ಲರಹಟ್ಟಿ, ಗುಂಡ್ಲೂರು ಜೋಗಿಹಟ್ಟಿ, ಯಲಗಟ್ಟೆ ಗೊಲ್ಲರಹಟ್ಟಿ ಹಾಗೂ ಬೆಳಗೆರೆ ಗೊಲ್ಲರಹಟ್ಟಿಯಲ್ಲಿಯ ಪಶುಪಾಲನೆಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಪಶುಪಾಲನೆ ವೃತ್ತಿಯಲ್ಲಿ ಅದರಲ್ಲೂ ಕುರಿ ಸಾಕಾಣಿಕೆ ವೃತ್ತಿ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿದೆ ಎಂದು ಹೇಳಬಹುದು. ಆಧುನೀಕರಣ, ನಗರೀಕರಣದ ಪ್ರಭಾವದಿಂದಾಗಿ ಕಾಡುಗೊಲ್ಲರ ಯುವ ಪೀಳಿಗೆ ಕುರಿಸಾಕಣಿಕೆ, ಆಕಳು ಸಾಕಾಣಿಕೆ ಮುಂತಾದ ಪಶುಪಾಲಕ ವೃತ್ತಿಗಳಲ್ಲಿ ಆಸಕ್ತಿವಹಿಸದೆ ಇರುವುದು ಕಂಡುಬರುತ್ತಿದೆ. ಕೆಲವರು ಈ ವೃತ್ತಿಯನ್ನು ಇಂದು ಅವಹೇಳನ ಮಾಡುತ್ತಿರುವುದು ಕಂಡುಬರುತ್ತದೆ. ಇದಕ್ಕೆಲ್ಲ ಆಧುನಿಕತೆಯ ಪರಿಸರವೂ ಕಾರಣವಾಗಿದೆ. ಮಧ್ಯಮ ವರ್ಗ ಮತ್ತು

ಬಡತನದಲ್ಲಿರುವ ಕಾಡುಗೊಲ್ಲರ ಕುಟುಂಬದ ಅನಕ್ಷರಸ್ಥ ಯುವಕರು ವೃತ್ತಿಯನ್ನು ಅನಿವಾರ್ಯವಾಗಿ ಮುಂದುವರಿಸಿಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. ಇದರಲ್ಲಿಯೆ ಮಧ್ಯಮ ವರ್ಗದವರು ಆಧುನಿಕ ಪಶು ತಳಿಗಳನ್ನು ಸಾಕುವಲ್ಲಿ ಮುಂದಾಗಿದ್ದಾರೆ. ಬಡತನದಲ್ಲಿರುವ ಕಾಡುಗೊಲ್ಲರಿಗೆ ಬಂಡವಾಳದ ಕೊರತೆ ಇರುವುದರಿಂದ ವೈಜ್ಞಾನಿಕವಾಗಿ ಪರಿಷ್ಕರಿಸಿದ ತಳಿಗಳನ್ನು ಸಾಕಲು ಸಾಧ್ಯವಾಗುತ್ತಿಲ್ಲ. ಶ್ರೀಮಂತರಾದವರು ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ನೀಡಿ ಅವರನ್ನು ಸುಶೀಕ್ಷಿತರನ್ನಾಗಿ ನಗರ ಪ್ರದೇಶಗಳಿಗೆ ಕಳುಹಿಸುತ್ತಿರುವುದು ಕಂಡುಬರುತ್ತಿದೆ.

ಕಾಡುಗೊಲ್ಲರಿಗೆ ಶಿಕ್ಷಣ ಎಂಬುದು ಮರಿಚೀಕೆಯಾಗಿತ್ತು. ಇಂದು ಅನೇಕ ಕಾಡುಗೊಲ್ಲರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರಲ್ಲಿ ಪ್ರಯತ್ನಿಸುತ್ತಿದ್ದಾರೆ. ಮಧ್ಯಾಹ್ನದ ಬಿಸಿಯೂಟದಿಂದ ಆಕರ್ಷಿತರಾದ ಮಕ್ಕಳು ಶಾಲೆಗಳಿಗೆ ತಪ್ಪದೆ ಹೋಗುತ್ತಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಿದ್ದೇನೆ. ವಿದ್ಯಾವಂತರು ನಗರ ಪ್ರದೇಶಗಳಿಗೆ ವಲಸೆ ಹೋಗಿ ಅಲ್ಲಿ ಸಣ್ಣ-ಪುಟ್ಟ ಕೆಲಸಗಳನ್ನು ಮಾಡಿಕೊಂಡು ಬದುಕುತ್ತಿದ್ದಾರೆ. ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಡುಗೊಲ್ಲರು ತಮ್ಮ ಹಟ್ಟಿಗಳ ಇತರೆ ಜನರನ್ನು ತಮ್ಮತ್ತ ಸೆಳೆಯುವ ಪ್ರಯತ್ನ ಮಾಡುತ್ತಿಲ್ಲ.

ಭೂಮಿಯನ್ನು ಹೊಂದಿರದ ಕಾಡುಗೊಲ್ಲರು ಕೃಷಿ ಹಾಗೂ ಕೃಷಿಯೇತರ ಕೂಲಿಗಳನ್ನು ನಂಬಿ ಜೀವನ ಸಾಗಿಸುತ್ತಿದ್ದಾರೆ. ಇವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ವರ್ಷವಿಡಿ ಕೂಲಿಗಳು ಸಿಗದೆ ಇರುವುದರಿಂದ ಕೂಲಿ ಕೆಲಸಗಳಿಗಾಗಿ ನಗರ ಪ್ರದೇಶಗಳಿಗೆ ಹೋಗುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮಳೆಯನ್ನೆ ನಂಬಿ ಕೃಷಿಯನ್ನು ನಿರ್ವಹಿಸುತ್ತಿರುವ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳು ತುಂಬಾ ಶೋಚನೀಯ ಸ್ಥಿತಿಯಲ್ಲಿವೆ. ಸಕಾಲಕ್ಕೆ ಮಳೆಯಾಗದೆ ಬೆಳೆ ಸರಿಯಾಗಿ ಬರುತ್ತಿಲ್ಲ. ನೀರಾವರಿ ಸೌಲಭ್ಯ ಇಲ್ಲದೆ ಅನೇಕ ಕಾಡುಗೊಲ್ಲರು ಕೃಷಿಕ ವೃತ್ತಿಯಿಂದ ಬೇಸತ್ತಿದ್ದಾರೆ. ಆಧುನಿಕ ಕೃಷಿ ನೀತಿಯ ಬಗ್ಗೆ ಇವರಿಗೆ ಅಷ್ಟಾಗಿ ಜ್ಞಾನವಿಲ್ಲ. ಪಾರಂಪರಿಕ ಕೃಷಿ ತಿಳುವಳಿಕೆಯಲ್ಲಿಯೆ ಈ ವೃತ್ತಿಯನ್ನು ಕೈಗೊಂಡಿರುವುದರಿಂದ ಉತ್ಪಾದನೆಯ ಪ್ರಮಾಣ ತೀರಾ ಕಡಿಮೆ ಪ್ರಮಾಣದಲ್ಲಿದೆ.

ಆಧುನಿಕ ಸಮಾಜದಲ್ಲಿ ನಾವು ಹೇಗೆ ಬದುಕಬೇಕು ಎಂಬುದನ್ನು ಅರಿಯದ ಮುಗ್ಧಜನರು ಇವರಾಗಿದ್ದಾರೆ. ಈ ಜಗತ್ತು ಆಧುನಿಕವಾಗಿ ಬೆಳೆಯುತ್ತಿದ್ದರೂ ಅನೇಕ ಕಾಡುಗೊಲ್ಲರು ತಮ್ಮ ಪರಂಪರೆ ಯಲ್ಲಿಯೆ ಬದುಕಲು ಇಷ್ಟಪಡುತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ. ಸಮುದಾಯ ದಲ್ಲಿರುವ ಕಠಿಣ ಹಾಗೂ ಅಮಾನವೀಯ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುವ ಭಾವನೆಗಳನ್ನು ಇವರು ವ್ಯಕ್ತಪಡಿಸುತ್ತಿರುವುದನ್ನು ಅಲ್ಲಲ್ಲಿ ಕಾಣುತ್ತೇವೆ.

ಕಾಡುಗೊಲ್ಲರ ಸಮುದಾಯ ಬುಡಕಟ್ಟಿನ ಎಲ್ಲ ಲಕ್ಷಣಗಳನ್ನು ಹೊಂದಿದ್ದರೂ ಅವರನ್ನು ಸರ್ಕಾರ ಪರಿಶಿಷ್ಟ ಪಂಗಡದಲ್ಲಿ ಸೇರಿಸದೆ ಇರುವುದು ದುಃಖದ ಸಂಗತಿ. ಇವರನ್ನು ಹಿಂದುಳಿದ ವರ್ಗ ಪ್ರವರ್ಗ-

೧ರಲ್ಲಿ ಸೇರಿಸಿರುವುದರಿಂದ ಸರ್ಕಾರದ ಸೌಲಭ್ಯಗಳು ಇವರಿಗೆ ದೊರೆಯುತ್ತಿಲ್ಲ. ಕಾಡುಗೊಲ್ಲರಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಇತರೆ ಪ್ರಭಾವಿ ಪ್ರವರ್ಗ-೧ರ ಸಮುದಾಯಗಳಿಗೆ ದಕ್ಕುತ್ತಿದೆ. ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಿಂದುಳಿದ ಕಾಡುಗೊಲ್ಲರಿಗೆ ಈ ಯೋಜನೆಗಳು ದೊರೆಯುತ್ತಿಲ್ಲ. ಸರ್ಕಾರ ಕಾಡುಗೊಲ್ಲರಿಗಾಗಿಯೆ ವಿಶೇಷವಾದ ಪ್ಯಾಕೇಜುಗಳನ್ನು ಬಿಡುಗಡೆ ಮಾಡುವ ಅವಶ್ಯಕತೆ ಇದೆ.

ಕಾಡುಗೊಲ್ಲರು ಸರ್ಕಾರದ ವೈದ್ಯಕೀಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ. ಕಾಡುಗೊಲ್ಲರು ಪರಂಪರಾನುಗತವಾಗಿ ಸಾಗಿ ಬಂದ ಗಿಡಮೂಲಿಕೆಗಳನ್ನು ನೀಡುವ ಸಮುದಾಯದ ನಾಟಿವೈದ್ಯರ ಸಂಖ್ಯೆ ಕಡಿಮೆಯಾಗುತ್ತಿದೆ. ಆಧುನಿಕ ಯುಗದಲ್ಲಿ ಹುಟ್ಟಿಕೊಳ್ಳುತ್ತಿರುವ ರೋಗಗಳಿಗೆ ಸೂಕ್ತವಾದ ಔಷಧೋಪಚಾರ ಕಾಡುಗೊಲ್ಲ ನಾಟಿ ವೈದ್ಯರಿಗೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅನೇಕ ರೋಗಗಳು ಬಂದರೆ ಸರ್ಕಾರಿ ಅಸ್ಪತ್ರೆಗಳನ್ನು ಹುಡುಕಿಕೊಂಡು ದೂರದ ತಾಲೂಕು ಕೇಂದ್ರಗಳಿಗೆ ಅಲೆದಾಡುತ್ತಿದ್ದಾರೆ. ಅದಕ್ಕಾಗಿ ಕಾಡುಗೊಲ್ಲರ ಹಟ್ಟಿಗಳಿಗೆ ಸಮೀಪದಲ್ಲಿ ಸರ್ಕಾರಿ ವೈದ್ಯ ಸೇವೆಯನ್ನು ಸರ್ಕಾರ ಒದಗಿಸಿಕೊಡಬೇಕಾಗಿದೆ.

ಕಾಡುಗೊಲ್ಲರ ಪಶುಸಂಪತ್ತಿಗೆ ಆಗಾಗ ಅನೇಕ ಮಾರಕ ರೋಗಗಳು ಬರುವುದುಂಟು. ಕುರಿ, ಮೇಕೆ, ಹಸು, ಎಮ್ಮೆ, ಎತ್ತುಗಳಿಗೆ ರೋಗಗಳು ಬಂದರೆ ಅವುಗಳನ್ನು ದೂರದ ಪಶುಚಿಕಿತ್ಸಾಲಯಕ್ಕೆ ಕರೆದುಕೊಂಡು ಹೋಗುವುದು ತುಂಬ ತೊಂದರೆಯಾಗುತ್ತಿದೆ. ಹೀಗಾಗಿ ಅವರ ಪರಿಸರದಲ್ಲಿ ಪಶು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯತೆ ಇದೆ.

ಕಾಡುಗೊಲ್ಲರು ವಾಸಿಸುತ್ತಿರುವ ಹಟ್ಟಿಗಳು ಸರ್ಕಾರದ ಕಂದಾಯ ಗ್ರಾಮಗಳಿಂದ ಹೊರತಾಗಿವೆ. ಇವರ ಹಟ್ಟಿಗಳನ್ನು ಕಂದಾಯ ಗ್ರಾಮಗಳ ವ್ಯಾಪ್ತಿಗೆ ಒಳಪಡಿಸುವ ಮತ್ತು ಮೂಲ ಸೌಕರ್ಯಗಳನ್ನು ಆ ಹಟ್ಟಿಗಳಿಗೆ ಒದಗಿಸುವ ಕಾರ್ಯ ತೀವ್ರಗತಿಯಲ್ಲಿ ನಡೆಯಬೇಕಾಗಿದೆ. ಕಾಡುಗೊಲ್ಲರಿಗೆ ಶುದ್ಧವಾದ ಕುಡಿಯುವ ನೀರಿನ ಅವಶ್ಯಕತೆ ಇದ್ದು ಅದನ್ನು ಸರ್ಕಾರ ಪೂರೈಸಬೇಕಾಗಿದೆ.

ಇತ್ತೀಚೆಗೆ ಕಾಡುಗೊಲ್ಲರು ಸಣ್ಣ-ಪುಟ್ಟ ವ್ಯಾಪಾರಗಳಲ್ಲಿ ಆಸಕ್ತಿ ವಹಿಸಿಕೊಂಡು ವ್ಯಾಪಾರ ಮಾಡುತ್ತಿರುವುದನ್ನು ಕಾಣುತ್ತೇವೆ. ಇವರಿಗೆ ಬಂಡವಾಳದ ಕೊರತೆ ಇದ್ದು, ಕಡಿಮೆ ಬಡ್ಡಿ ದರದಲ್ಲಿ ಹಣಕಾಸಿನ ನೆರವು ನೀಡಿ ಅವರಿಗೆ ವ್ಯಾಪಾರ ಮಾಡಲು ಪ್ರೋತ್ಸಾಹ ನೀಡಬೇಕು.

ಕಾಡುಗೊಲ್ಲರಿಗೆ ವಸತಿ ಸಮಸ್ಯೆ ಇಲ್ಲಿಯವರೆಗೆ ಬಗೆಹರಿದಿಲ್ಲ. ಅನೇಕರು ವಾಸಿಸಲು ಅನರ್ಹವಾದ ಗುಡಿಸಲುಗಳಲ್ಲಿಯೆ ವಾಸಿಸುತ್ತಿದ್ದಾರೆ. ಅವರಿಗೆ ಸರಿಯಾದ ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕಾಗಿದೆ. ಸರ್ಕಾರದ ಆಶ್ರಯ ಮನೆಗಳು ಬಡತನ ರೇಖೆಗಿಂತ ಕಡಿಮೆ ಇರುವವರಿಗೆ ಮೊದಲಿಗೆ ಈ ಸೌಲಭ್ಯ ಸಿಗಬೇಕು.

ಕಾಡುಗೊಲ್ಲರು ರಾಜಕೀಯವಾಗಿ ಬಹಳ ಹಿಂದುಳಿದಿದ್ದಾರೆ. ಇವರಿಗೆ ರಾಜಕೀಯದಲ್ಲಿ ಪ್ರಾತಿನಿಧ್ಯವನ್ನು ನೀಡಬೇಕು.

ಭೂಮಿಯನ್ನು ಹೊಂದದೆ ಇರುವ ಕಾಡುಗೊಲ್ಲರಿಗೆ ಭೂಮಿ ನೀಡಬೇಕು ಮತ್ತು ಕಡಿಮೆ ಬಡ್ಡಿ ದರದಲ್ಲಿ ಕೃಷಿ ಉಪಕರಣಗಳನ್ನು, ಎತ್ತುಗಳನ್ನು ಹಾಗೂ ಬಿತ್ತನೆ ಬೀಜ, ಗೊಬ್ಬರಗಳನ್ನು ಖರೀದಿಸಲು ಸಾಲದ ವ್ಯವಸ್ಥೆ ಮಾಡಬೇಕು.

ಈ ಮೇಲಿನ ಅಂಶಗಳು ನನ್ನ ಕ್ಷೇತ್ರಕಾರ್ಯದ ಅಧ್ಯಯನದಿಂದ ಕಂಡುಕೊಂಡ ಅಂಶಗಳಾಗಿದ್ದು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕವಾಗಿ ಹಿಂದುಳಿದುದ್ದು ಅದೇ ರೀತಿ ಮೂಲ ಸೌಲಭ್ಯಗಳಿಂದ ವಂಚಿತರಾಗಿರುವುದು ಕಂಡುಬರುತ್ತದೆ.

ಕಾಡುಗೊಲ್ಲರ ಅಭಿವೃದ್ಧಿಗಾಗಿ ಸಲಹೆ ಸೂಚನೆಗಳು

ಪ್ರಸ್ತುತ ಅಧ್ಯಯನ ಅನೇಕ ಸಮಸ್ಯೆಗಳನ್ನು ಹಾಗೂ ಪರ್ಯಾಯ ಆಯ್ಕೆಗಳತ್ತಾ ಆರ್ಥಿಕ ವ್ಯವಸ್ಥೆಗೆ ಪೂರಕವಾದ ಆರ್ಥಿಕ ಬೆಳೆವಣಿಗೆ ಮತ್ತು ಯೋಜನೆಗಳಲ್ಲಿ ಸರ್ಕಾರ ಮತ್ತು ರಾಜಕೀಯ ಧುರೀಣರು ಯಾವ ರೀತಿಯಲ್ಲಿ ಸಮಸ್ಯೆಗಳನ್ನು ಅರಿತು ಮಹತ್ವಪೂರ್ಣವಾದ ಪಾತ್ರ ನಿರ್ವಹಿಸಲು, ಸಮರ್ಥವಾಗಿ ಮತ್ತು ಆರ್ಥಿಕಾಭಿವೃದ್ಧಿ ಬೆಳವಣಿಗೆಯಲ್ಲಿ ಎಲ್ಲಾ ಜಾತಿ, ಗುಂಪು ಹಾಗೂ ವರ್ಗಗಳಲ್ಲಿ ಹೆಚ್ಚುವಂತೆ ಮಾಡಬೇಕಾಗಿದೆ. ಇಂತಹ ಜಾತಿ, ವರ್ಗ, ಗುಂಪು ಮುಂತಾದ ಸ್ಥರಗಳಾಗಿ ಜನರನ್ನು ಹಾಗೂ ಅಭಿವೃದ್ಧಿ ಯೋಜನೆಗಳನ್ನು ವಿಂಗಡಿಸುವಾಗ ಸ್ವಜನ ಪಕ್ಷಪಾತ ಮಾಡದೆ, ಹಿಂದುಳಿದ ತಾಲ್ಲೂಕು ಮತ್ತು ಗ್ರಾಮಗಳಿಗೆ ಅಗತ್ಯವಿರುವ ಅಭಿವೃದ್ಧಿ ಕಾರ್ಯಕ್ರಮಗಳು ತ್ವರಿತವಾಗಿ ಅನುಷ್ಠಾನಕ್ಕೆ ಬರುವಂತೆ ಮಾಡಬೇಕಾಗಿದೆ.

- ಕಾಡುಗೊಲ್ಲರು ಬಡತನವನ್ನು ನಿವಾರಣೆ ಮಾಡುವುದುಕ್ಕಾಗಿ ಶಿಕ್ಷಣವು ಒಂದು ಪ್ರಮುಖ ಅಸ್ತ್ರವಾಗಿರುತ್ತದೆ. ಶಿಕ್ಷಣದ ಸೌಲಭ್ಯಗಳ ವಿಸ್ತರಣೆಯಾಗುವುದು ಸರ್ಕಾರವಷ್ಟೆ ಸಾಲದು, ಗ್ರಾಮಗಳು ಸಹ ಇದರಲ್ಲಿ ಪಾಲ್ಗೊಳ್ಳಬೇಕು. ಸಮುದಾಯದ ಎಲ್ಲ ಜನರಿಗೂ ಕನಿಷ್ಠ ಶಿಕ್ಷಣವನ್ನು ನೀಡಬೇಕು.
- ಕಾಡುಗೊಲ್ಲರ ಸಮುದಾಯದ ಅಭಿವೃದ್ದಿಗಾಗಿ ಸರ್ಕಾರದಿಂದ ರೂಪಿಸಿರುವ ಎಲ್ಲ ಯೋಜನೆಗಳು ಸರಿಯಾಗಿ ಸಿಗಬೇಕು. ಸರ್ಕಾರದಿಂದ ಅನೇಕ ಉದ್ಯೋಗಗಳನ್ನು ಇವರಿಗಾಗಿಯೆ ಸೃಷ್ಟಿ ಮಾಡಬೇಕು.
- ಕಾಡುಗೊಲ್ಲರ ಸಮುದಾಯದ ಕೃಷಿಕರು ಮತ್ತು ಕೃಷಿಕಾರ್ಮಿಕರು ಗುಂಪನ್ನು ಆರ್ಥಿಕ ಚಟುವಟಿಕೆಯ ಮುಖ್ಯವಾಹಿನಿಯಲ್ಲಿ ತಂದು ಗ್ರಾಮದ ಜನರ ಹಿತಾಶಕ್ತಿಯನ್ನು ಪುನಶ್ಚೇತನಗೊಳಿಸುವ ಅಭಿವೃದ್ಧಿ ಮತ್ತು ಅಲ್ಲಿರತಕ್ಕಂತ ಭೂಸಂಪನ್ಮೂಲವನ್ನು ಬಳಸಿಕೊಳ್ಳಲು ಅನುವು ಮಾಡಿಕೊಟ್ಟು ಅವರ ಜೀವನಮಟ್ಟ ಸುಧಾರಿಸಲು ಪ್ರಯತ್ನಪಡಬೇಕಾಗಿದೆ.
- ಕೃಷಿಕ ವೃತ್ತಿಯಲ್ಲಿ ತೊಡಗಿಕೊಂಡಿರುವ ಕಾಡುಗೊಲ್ಲರಿಗೆ ಸಾಲ ಸೌಲಭ್ಯ ಮಾರ್ಗದರ್ಶನ, ಉಚಿತ ಬೀಜ, ಗೊಬ್ಬರ್, ಹಣ್ಣು, ತರಕಾರಿ, ಸಸಿಗಳ ವಿತರಣೆ, ಮುಂತಾದ ಸೌಲಭ್ಯಗಳು ದೊರೆಯುಂತೆ ಮಾಡಬೇಕಾಗಿದೆ. ಸಬ್ಸಿಡಿಯಲ್ಲಿ ಕೃಷಿ ಸಾಲಗಳನ್ನು ನೀಡಬೇಕು. ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಕೃಷಿ ಭೂಮಿಯಾಗಿ ಮಾರ್ಪಡಿಸಿ ಕೊಡಬೇಕು.

- ಕಾಡುಗೊಲ್ಲರು ಹೆಚ್ಚಾಗಿ ಒಣಬೇಸಾಯ ಮಾಡುತ್ತಿರುವುದು ಕಂಡುಬರುತ್ತಿದೆ. ಈ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಭೂಮಿಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು.
- ಕಾಡುಗೊಲ್ಲರ ಹಿಂದುಳಿದ ಹಟ್ಟಿಗಳನ್ನು ಆಯ್ಕೆಮಾಡಿಕೊಂಡು ಅವುಗಳ ಅಭಿವೃದ್ಧಿಗಾಗಿ ಪಂಚಾಯಿತಿಗಳ ಮೂಲಕ ಸರ್ಕಾರವು ಈ ಪ್ರದೇಶದಲ್ಲಿನ ಗ್ರಾಮಪಂಚಾಯಿತಿಗಳು ಕೇವಲ ಕಾಟಾಚಾರಕ್ಕಾಗಿ ಸಭೆ ನಡೆಸದೆ ಕಾಡುಗೊಲ್ಲರ ಹಟ್ಟಿಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಬೇಕು ಮತ್ತು ಈ ಸಮುದಾಯದ ಏಳ್ಗಿ ಬಗೆಗೆ ಚರ್ಚಿಸಿ ಆದಾಯ ಅಸಮಾನತೆಯನ್ನು ಕಡಿಮೆ ಮಾಡಿ, ಅಲ್ಲಿರತಕ್ಕಂತ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಬೇಕು. ಆ ಊರಿನಲ್ಲಿ ಕಾಡುಗೊಲ್ಲರ ಸಮುದಾಯಕ್ಕಾಗಿಯೆ ಮಾಡಿರತಕ್ಕಂತೆ ಖರ್ಚು ವೆಚ್ಚಗಳ ಬಗ್ಗೆ ಮಾಹಿತಿ ನೀಡುತ್ತಿರಬೇಕು.
- ಪ್ರತಿಯೊಂದು ಪ್ರತಿಯೊಬ್ಬ ಯುವಕನಿಗೆ ಸ್ವಯಂ ಉದ್ಯೋಗಗಳನ್ನು ಕೈಗೊಳ್ಳುವಂತೆ, ಗುಡಿ ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಹಾಗೂ ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸ ಬೇಕಾಗಿದೆ.
- ಕಾಡುಗೊಲ್ಲರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಾವೆ ಒಬ್ಬರಂತೆ ನಾಯಕರಾಗಿ ಇಲ್ಲವೆ ಊರಿನ ಯಜಮಾನರಿಂದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವಂತೆ ಮಾಡಬೇಕು. ಉದಾಹರಣೆಗೆ ರಸ್ತೆ, ಚರಂಡಿ, ಕಾಲುವೆ, ಕೆರೆ ಮುಂತಾದುವುಗಳ ದುರಸ್ಥಿ, ಕುಡಿಯುವ ನೀರು, ವಿದ್ಯುತ್ ದೀಪಗಳ ಬಳಕೆ, ಬೀದಿಗಳ ಸ್ವಚ್ಛತೆ, ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಅವರು ಸಮುದಾಯದ ಜನರಿಗೆ ತಿಳಿಸುವಂತೆ ನೋಡಿಕೊಳ್ಳಬೇಕು.
- ಸಾಲ ನೀಡುವ ಸಂದರ್ಭದಲ್ಲಿ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಮಹತ್ವದಾಗಿದ್ದು, ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಜನರಿಗೆ ಸಾಲ ಹಾಗೂ ಸಬ್ಸಿಡಿ ಪಡೆಯುವಲ್ಲಿ ಅವರೆ ಸಫಲರಾಗುತ್ತಾರೆ. ಆರ್ಥಿಕವಾಗಿ ತೀರಾ ಸಂಕಷ್ಟದಲ್ಲಿರುವವರಿಗೆ ಸಾಲ ಅಥವಾ ಸಬ್ಸಿಡಿಗಳು ದೊರೆಯುವುದಿಲ್ಲ. ಈ ರೀತಿ ತಾರತಮ್ಯಗಳನ್ನು ನಡೆಯುವುದನ್ನು ತಪ್ಪಿಸಿ ನಿಜವಾದ ಫಲಾನುಭವಿ ಗಳನ್ನು ಗುರುತಿಸಬೇಕು.
- ಕಾಡುಗೊಲ್ಲರ ಸಮುದಾಯದವರಿಗೆ ಕೃಷಿ ಭೂಮಿಯ ಸದ್ಬಳಕೆ, ನೀರಾವರಿ ವ್ಯವಸ್ಥೆ, ಅಂಗಡಿಗಳ ಸ್ಥಾಪನೆ, ಗೃಹ ಕೈಗಾರಿಕೆಗಳ ಬಲವರ್ಧನೆ ಮುಂತಾದವುಗಳಿಗೆ ಮೂಲ ಬಂಡವಾಳದ ಅವಶ್ಯಕತೆ ಇದೆ ಈ ವ್ಯವಸ್ಥೆಯನ್ನು ಸರಿಯಾದ ಸಮಯಕ್ಕೆ ಒದಗಿಸುವಲ್ಲಿ ಸರ್ಕಾರ ಕ್ರಮವಹಿಸಬೇಕಾಗಿದೆ.
- ಕಾಡುಗೊಲ್ಲ ಸಮುದಾಯದ ಜನರಿಗೆ ವಿಧವಾ ವೇತನ, ವೃದ್ಧಾಪ್ಯ ವೇತನ ಹಾಗೂ ಅಂಗವಿಕಲಕರಿಗೆ

[illegible]

[illegible]

[illegible]

[illegible]

[illegible]

[illegible]

ಸಹಾಯಧನ ಇವೆಲ್ಲವುಗಳು ಅವರಿಗೆ ತಲುಪಿಯೆ ಇಲ್ಲ. ಇದಕ್ಕೆ ಮೂಲ ಕಾರಣ ಶಿಕ್ಷಣದ ಅಭಾವದಿಂದ ಅನೇಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

- ಹುಲ್ಲುಗಾವಲು ಮತ್ತು ಅರಣ್ಯ ಪ್ರದೇಶ ಕಡಿಮೆಯಾಗುತ್ತಿದ್ದ ಕಾರಣ ಕಾಡುಗೊಲ್ಲರಿಗೆ ತಮ್ಮ ಮೂಲವೃತ್ತಿಯಾದ ಪಶುಸಂಗೋಪನೆಯನ್ನು ಬಿಟ್ಟು ಕೃಷಿಯತ್ತ ವಾಲುತ್ತಿದ್ದಾರೆ. ಆದ್ದರಿಂದ ಪಶುಪಾಲನೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಾಗಿದೆ.

- ಕಾಡುಗೊಲ್ಲರಿಗೆ ಯಾವುದೇ ಯೋಜನೆಗಳಾಗಲಿ ಇಲ್ಲವೆ ಸೌಲಭ್ಯಗಳೆ ಆಗಲಿ ಸಿಗದೆ ಇದ್ದರಿಂದ ಹಿಂದುಳಿಯಲು ಕಾರಣರಾಗಿದ್ದಾರೆ. ಇವರಿಗೆ ಕೇವಲ ಓಟಿನ ಸೌಲಭ್ಯ ೧೦೦ಕ್ಕೆ ೯೯ರಷ್ಟು ಜನರಿಗೆ ಸಿಕ್ಕಿದೆ. ಆದ್ದರಿಂದ ಒಂದು ಯೋಜನೆಯು ಯಶಸ್ವಿಯಾಗಿದೆ ಎಂದು ಹೇಳಬಹುದು.

- ಕಾಡುಗೊಲ್ಲರು ಬ್ಯಾಂಕಿನ ಸೌಲಭ್ಯವನ್ನು ಪಡೆದುಕೊಳ್ಳದೆ ಹೆಚ್ಚಾಗಿ ಮಧ್ಯವರ್ತಿಗಳಿಂದ ಇಲ್ಲವೆ ಖಾಸಗಿ ಬಂಡವಾಳದಾರರಿಂದ ಸಾಲ ಪಡೆದು ಕೊಳ್ಳುತ್ತಿದ್ದಾರೆ. ಆದ್ದರಿಂದ ಬ್ಯಾಂಕಿನ ಸೌಲಭ್ಯಗಳ ಬಗ್ಗೆ ತಿಳುವಳಿಕೆ ನೀಡಲು ತರಬೇತಿ ಅವಶ್ಯಕವಿದೆ.

- ಕಾಡುಗೊಲ್ಲರು ಗ್ರಾಮದಿಂದ ದೂರವಿದ್ದ ಕಾರಣ ವೈದ್ಯಕೀಯ ಸೌಲಭ್ಯ ದೊರೆಯದೆ ಸಾವು ನೋವುಗಳಾಗುತ್ತಿದ್ದು, ಗ್ರಾಮಗಳಲ್ಲಿ ಮತ್ತು ಹಟ್ಟಿಗಳಲ್ಲಿ ವೈದ್ಯಕೀಯ ಸೌಲಭ್ಯವು ದೊರೆಯದಂತೆ ಮಾಡಬೇಕು.

ಅನುಬಂಧಗಳು

- ಪರಾಮರ್ಶನ ಗ್ರಂಥಗಳು
- ತಿಳುವಳಿಕೆದಾರರ ಸೂಚಿ
- ಅಂಕಿ ಅಂಶಗಳ ಪಟ್ಟಿ
- ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

ಅಂಬಳಿಕೆ ಹಿರಿಯಣ್ಣ, ೧೯೭೮, ಕಾಡುಗೊಲ್ಲರ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಇಂದಿರಾ ಆರ್. ೨೦೦೨, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಕನ್ನಡ ವಿಶ್ವದ್ಯಾಲಯ, ಹಂಪಿ.

ಎಚ್ಚಾರ್ಕೆ, ೨೦೦೭, ಭಾರತದ ಆರ್ಥಿಕ ವ್ಯವಸ್ಥೆ, ಸ್ವಪ್ನ ಬುಕ್ ಹೌಸ್ ಬೆಂಗಳೂರು.

ಒಡೆಯರ್ ಡಿ. ಹೆಗ್ಗಡೆ, ಎನ್. ಅನ್ನಪೂರ್ಣೇಶ್ವರಿ, ೨೦೦೩, ಮಹಿಳಾ ಅಧ್ಯಯನಗಳು ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು.

ಸುದರ್ಶನ ಕುಮಾರ (ಸಂ), ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ, ೨೦೦೮ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಾದರಪಡಿಸಿದ ಆಪ್ರಕಟಿತ ಪಿಎಚ್.ಡಿ. ಪ್ರಬಂಧ.

ಕಟ್ಟೀ, ವೆಂಕಟರಂಗೋ (ಅನು)., ಗ್ಯಾಝೆಟೀಯರು ಮುಂಬಯೀ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: ಧಾರವಾಡ ಬೆಳಗಾವಿ ವಿಜಾಪುರ ಕಾನಡಾ ಈ ನಾಲ್ಕು ಜಿಲ್ಲೆಗಳದ್ದು (ಮುಂಬಯಿ: ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೊ, ೧೮೯೩) ಪುನರ್ ಮುದ್ರಣ. ೧೯೮೫, ಹೊಸ ದೆಹಲಿ: ಏಷಿಯನ್ ಎಜುಕೇಷನಲ್ ಸರ್ವೀಸೆಸ್).

ಕರಿಯಪ್ಪ ಡಿ., ಲೇಖನ ಅಡವಿ (ಕಾಡು) ಗೊಲ್ಲರ ಸಮುದಾಯದ ಚಾರಿತ್ರಿಕ ಹಿನ್ನೆಲೆ, ಸ್ಮರಣ ಸಂಚಿಕೆ, (ತುಮಕೂರು ಜಿಲ್ಲಾ ಪ್ರಥಮ ಅಧಿವೇಶನ, ೧೯೭೨)

ಕರಿಶೆಟ್ಟಿ ರುದ್ರಪ್ಪ, ೧೯೬೫, ಮ್ಯಾಸನಾಯಕ ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಲ್ಲೂರು ಎಂ.ಎಸ್, ೨೦೦೦, ಕೃಷಿ ಅರ್ಥಶಾಸ್ತ್ರ, ಕಲಾಪ್ರಕಾಶನ, ಬೆಂಗಳೂರು.

ಕಾಳೇಗೌಡ ನಾಗಾವಾರ ಮತ್ತು ಎನ್. ಹುಚ್ಚಪ್ಪ ಮಾಸ್ತರ್, ೨೦೦೦, ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಕಾಳೇಗೌಡ ನಾಗವಾರ, ಕಾಡುಗೊಲ್ಲರ ಹಟ್ಟಿಯೊಂದರ ಅಧ್ಯಯನ, ೧೯೭೫ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಪ್ರಬಂಧ.

ಕಾಳೆಗೌಡ ನಾಗವಾರ., ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ (ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಹೆಚ್.ಡಿ. ಮಹಾಪ್ರಬಂಧ, ೧೯೮೫)

[illegible]

ಕೃಷ್ಣಮೂರ್ತಿ ಹನೂರು., 'ಕಾಡುಗೊಲ್ಲರು' ಸಂಪಾದಕರು, ಪ್ರೊ॥ ಎಚ್ ಜೆ ಜೆಲಕ್ಕಪ್ಪಗೌಡರು: ಕರ್ನಾಟಕದ ಬುಡಕಟ್ಟುಗಳು, ಸಂಪುಟ–೧, (ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮)

ಕೃಷ್ಣಮೂರ್ತಿ ಹೆಚ್.ಆರ್. ವೀರಪ್ಪಗೌಡ ಹೆಚ್‌ಸಿ. ೨೦೦೫, ಅಭಿವೃದ್ಧಿ ಅರ್ಥಶಾಸ್ತ್ರ, ಎಸ್.ಬಿ.ಎಸ್. ಪಬ್ಲಿಷರ್ಸ್, ಬೆಂಗಳೂರು.

ಕೃಷಿ ಉತ್ಪಾದನೆ, ೧೯೯೪-೯೫, ಕೃಷಿ ನಿರ್ದೇಶನಾಲಯ, ಬೆಂಗಳೂರು.

ಗಾಯತ್ರಿ ಎನ್., ೧೯೯೧, ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಗುರುಲಿಂಗಯ್ಯ ಎಂ., ಕರ್ನಾಟಕದ ಗೊಲ್ಲ ಸಮುದಾಯ (ಶಕ್ತಿ ಪ್ರಿಂಟರ್ಸ್ ಆಂಡ್ ಪಬ್ಲಿಷರ್ಸ್, ಬೆಂಗಳೂರು, ೨೦೦೫)

...............,ಬುಡಕಟ್ಟುಗಳು ಮತ್ತು ಅಭಿವೃದ್ಧಿ (ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೨೦೦೫)

ಗುರುಲಿಂಗಯ್ಯ ಎಂ., ವಿ. ನಾಗಪ್ಪ, ೨೦೦೪, ಕಾಡುಗೊಲ್ಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಗಂಗಾಧರ ದೈವಜ್ಞ, ೧೯೯೯, ಮಾಳಿಂಗರಾಯನ ಕಾವ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗಂಗಾಧರ ದೈವಜ್ಞ, ೨೦೦೦, ಬುಡಕಟ್ಟು ಸಮಾಜ, ಹುಟ್ಟು-ಸಾವಿನ ನಡುವೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗಂಗಾಧರ ದೈವಜ್ಞ, ೨೦೦೬, ಸಣ್ಣಾಟಗಳು, ಹುಟ್ಟು-ಬೆಳವಣಿಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದ ಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು

ಚೆಲುವರಾಜು., ಜುಂಜಪ್ಪ (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭)

ಚಂದ್ರಶೇಖರ ಟಿ.ಆರ್., ೧೯೯೯, ಅಮರ್ತ್ಯಸೇನ್‌ರ ಅಭಿವೃದ್ಧಿ ಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್., ೨೦೦೦, ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್., ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಚಂದ್ರಶೇಖರ್ ಟಿ.ಆರ್., ಮತ್ತು ಚಂದ್ರಪೂಜಾರಿ ಎಂ. ೨೦೦೨, ಅಭಿವೃದ್ಧಿ ಅಧ್ಯಯನ ಸಂಪುಟ-೩, ಸಂಚಿಕೆ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ್ ಟಿ.ಆರ್., ೨೦೦೩, ಪರಿಶಿಷ್ಟಜಾತಿ ಮತ್ತು ವರ್ಗದ ಸಾಕ್ಷರತೆ ಜಿಲ್ಲಾವಾರು, ೧೯೯೧ ಮತ್ತು ೨೦೦೧, ಅಭಿವೃದ್ಧಿ ಅಧ್ಯಯನ ವಿಭಾಗ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಸಂಪುಟ-೩, ಸಂಚಿಕೆ-೧.

ಚಂದ್ರಶೇಖರ ಟಿ.ಆರ್., ೨೦೦೪, ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚಂದ್ರಶೇಖರ್ ಟಿ.ಆರ್., ೨೦೦೭, ಕರ್ನಾಟಕ ಅಭಿವೃದ್ಧಿ ಆಕೃತಿ, ಪಲ್ಲವಿ ಪ್ರಕಾಶನ, ಬೆಂಗಳೂರು.

ದೇವಿಚಟ್ಟೋಪಾಧ್ಯ (ಮೂಲ) ಜಿ. ಕುಮಾರಪ್ಪ (ಅನು), ೧೯೯೬, ಮಾತೆಯರು ಮಾನ್ಯರಾಗಿದ್ದಾಗ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ನಾಗಭೂಷಣ ಒ.ಎಲ್., ೧೯೯೩, ಪುರಾಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗರಾಜು ಬಿ ವಿ., *ಗೊಲ್ಲರಟ್ಟಿ* (ಆಪ್ತ ಪ್ರಕಾಶನ, ಬೆಂಗಳೂರು, ೧೯೯೮)

ನಂಜಮ್ಮಣ್ಣಿ, ೨೦೦೩, ಸಾಮಾಜಿಕ ಸಂಸ್ಥೆಗಳು, ಕುವೆಂಪು ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪರಮಶಿವಯ್ಯ, ೧೯೭೯, "ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು" ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪಾರ್ವತಮ್ಮ ಸಿ., ೨೦೦೭, ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ ಶಿಶಿಲ, ೧೯೯೭, ಅಭಿವೃದ್ಧಿ ಮತ್ತು ಯೋಜನಾ ಅರ್ಥಶಾಸ್ತ್ರ, ಕಲಾ ಪ್ರಕಾಶನ ಬೆಂಗಳೂರು.

ಪ್ರಭಾಕರ ಎ.ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ ಎ.ಎಸ್., ೨೦೦೪, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ್ ಎ.ಎಸ್, ೨೦೦೬, ಆದಿವಾಸಿ ಆಖ್ಯಾನ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ.

ಪ್ರಶಾಂತ ಎಚ್ ಡಿ (ಸಂ)., *ಜನಸಮುದಾಯ ಸಂಪುಟ* (ಹಂಪಿ:ಕನ್ನಡ ವಿಶ್ವವಿದ್ಯಾಲಯ, ೨೦೦೦).

ಭಾನುಮತಿ ವೈ.ಸಿ., ೧೯೯೪, ಮಲೆನಾಡಿನ ಶೈವ ಒಕ್ಕಲಿಗರು (ಜಾನಪದೀಯ ಅಧ್ಯಯನ) ಕೇಶವ ಪ್ರಕಾಶನ, ಮೈಸೂರು.

ಬಸವ ಕೆ.ಡಿ., ೧೯೮೫, ಆಧುನಿಕ ಅರ್ಥಶಾಸ್ತ್ರ, ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳ್ಳಿ.

ಬೋರಲಿಂಗಯ್ಯ ಹಿ.ಚಿ., ೨೦೦೧, ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., ೨೦೦೬, ಗಿರಿಜನ ನಾಡಿಗೆ ಪಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ., ೧೯೯೯, ಗೊಲ್ಲಕಡಗ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ., ೨೦೦೦, ಗಣೆಯದನಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ., ೨೦೦೨, ಎತ್ತಪ್ಪ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

ಮೀರಾಸಾಬಿಹಳ್ಳಿ, ಶಿವಣ್ಣ., ೨೦೦೩, ಮ್ಯಾಸಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ., ೨೦೦೪, ಕಾಡುಗೊಲ್ಲರ ಸಂಸ್ಕೃತಿ, ಸಿವಿಜಿ. ಪಬ್ಲಿಕೇಷನ್ಸ್, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ., ೨೦೦೫, ಕಾಡುಗೊಲ್ಲರ ಬುಡಕಟ್ಟು ವೀರರು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲ ಬುಡಕಟ್ಟು ವೀರರು (ಸಿವಿಜಿ ಪಬ್ಲಿಕೇಷನ್ ಬೆಂಗಳೂರು, ೨೦೦೫)

ಮೇತ್ರಿ ಕೆ ಎಂ., ಕೃಷ್ಣಗೊಲ್ಲರ ಕಥನಕಾವ್ಯ, (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭)

..............,ಬುಡಕಟ್ಟು ಕುಲಕಸುಬುಗಳು (ಹಂಪಿ:ಕನ್ನಡ ವಿಶ್ವವಿದ್ಯಾಲಯ, ೨೦೦೨).

ಮೈತ್ರಿ ಕೆ.ಎಂ. ೧೯೯೭, ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಗಳ್ಳಿ ಗಣೇಶ., ೨೦೦೦, ದಲಿತರು ಮತ್ತು ಜಾಗತಿಕರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಂಜುನಾಥ ಬೇವಿನಕಟ್ಟೆ., ೧೯೯೬, ಜನಪದ ನಂಬಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಯೆರ‍್ರಪ್ಪ ಡಿ., ೨೦೦೮, ಅಲೆಮಾರಿ ಕುರುಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ರಾಮನ್ ಬಿ.ಎಸ್., ೨೦೦೫, ಭಾರತದ ಆರ್ಥಿಕ ಅಭಿವೃದ್ಧಿ, ಯುನೈಟೆಡ್ ಪಬ್ಲಿಷರ್ಸ್, ಜೆಪ್ಪು, ಮಂಗಳೂರು.

ರಮೇಶ ಸ.ಚಿ., ೨೦೦೫, ಅಲೆಮಾರಿಗಳ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಜನ್ ಎಂ.ಎ., ೧೯೮೭, ಕರ್ನಾಟಕದಲ್ಲಿ ಭೂಸುಧಾರಣೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ರಂಗಯ್ಯ ಸಾ., 'ಕಾಡುಗೊಲ್ಲರು' ಸ್ಮರಣ ಸಂಚಿಕೆಯಲ್ಲಿ ಲೇಖನ, (ತುಮಕೂರು ಜಿಲ್ಲಾ ಪ್ರಥಮ ಅಧಿವೇಶನ, ೧೯೭೨)

ರೈ, ಎ ಸುಬ್ಬಣ್ಣ...(ಸಂ).,ದ್ರಾವಿಡ ನಿಘಂಟು (ಹಂಪಿ:ಕನ್ನಡ ವಿಶ್ವವಿದ್ಯಾಲಯ, ೨೦೦೧).

ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೨ ಚಿತ್ರದುರ್ಗ ಬುಡಕಟ್ಟು ವೀರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಂಕರನಾರಾಯಣ, ೧೯೮೮, ಕಾಡುಗೊಲ್ಲರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಶಂಕರನಾರಾಯಣ ತೀ ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, (ಮೈಸೂರು ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೯೪)

ಶುಂಪೀಟರ್ ಜಿ.ಎಂ. ೨೦೦೦, ದಿ ಥಿಯರಿ ಆಫ್ ಎಕಾನಾಮಿಕ್ ಡವಲಮೆಂಟ್, ಪ್ರಕಾಶಕರು ಸಂವಹಸಿ, ಮೈಸೂರು.

ಶೇಷಶಾಸ್ತ್ರಿ, ೧೯೮೨, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶ್ರೀಮತಿ ಎಚ್.ಎಸ್., ಶಿವಾನಂದ ಎಸ್. ವಿರಕ್ತಮಠ, ಜೆ. ಕೃಷ್ಣ, (ಸಂ), ೨೦೦೭, ಮಹಿಳೆ ದುಡಿಮೆ ಮತ್ತು ಬಿಡವು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಮತಿ ಎಚ್.ಎಸ್. (ಅನು), ೧೯೯೮, ಪ್ರಾಚೀನ ಭಾರತದ ಚರಿತ್ರೆ, ಬೆಳ್ಳಿಚುಕ್ಕಿ ಬುಕ್‌ಟ್ರಸ್ಟ್ ಮೈಸೂರು.

ಸಣ್ಣೋಬಯ್ಯ, ಎಸ್ ಕೆ., ಮ್ಯಾಸ ಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಹೆಚ್.ಡಿ. ಅಪ್ರಕಟಿತ ಮಹಾಪ್ರಬಂಧ, ೨೦೦೨)

ಸುಚೇತಾನಂದ ಕೆ. ಮಲ್ಕಾಪುರೆ (ಸಂ), ಬೀದರ ಜಿಲ್ಲೆಯ ಬೇಡಬುಡಕಟ್ಟು; ಒಂದು ಅರ್ಧಶಾಸ್ತ್ರೀಯ ಅಧ್ಯಯನ, ೨೦೦೧, ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರಪಡಿಸಿದ ಅಪ್ರಕಟಿತ ಪಿಎಚ್.ಡಿ. ಪ್ರಬಂಧ.

ಹಲ್ಲೋಳ್ಳಿ ಎಂ.ಎಸ್., ೧೯೮೨, ಹಳ್ಳಿಯ ಬೃಹತ್ ಯೋಜನೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹಿರೇಮಠ, ಎಸ್.ಎಸ್., ೧೯೪೨, ಹಬ್ಬಗಳು, ಸಮತ ಪ್ರಕಾಶನ, ಹರಪನಹಳಿ.

ಹಿರೇಮಲ್ಲೂರ ಈಶ್ವರನ್, ೧೯೭೨, ಭಾರತದ ಹಳ್ಳಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಹೇಮಲತಾ ಎಚ್.ಎಂ., ೨೦೦೬, ಮಹಿಳಾ ಅಧ್ಯಯನ-೩, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

ಹಂಪ, ನಾಗರಾಜಯ್ಯ., ದ್ರಾವಿಡಭಾಷಾವಿಜ್ಞಾನ (ಬೆಂಗಳೂರು) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೧).

<u>ಇಂಗ್ಲೀಷ್</u>

Alexander K.C., R.R. Prasad, Jahagirdar M.P., 1991, Tribals, Rehabilitation and Development, Rawat Publication, New Delhi.

Amitabha Sarkar, Samira Das Gupta., 1996, Specturm of Tribal Bastar, Agam Kala Prakashan, New Delhi.

Anata, Suchira, 1998, Women at Work in India.

Ananthakrishna Iyer, L K., *The Mysore Tribes and Castes* (Mysore: The Mysore University, 1930; rpt. 1998, New Delhi: Mittal Publications), 5 Vols.

Bharadwaj R., 1992, Planning for Social and Economic Development, Sage Publications, New Delhi.

Brochure on Reservation for Scheduled Castes, Scheduled Tribes and other Categories of Backward Classes in Services and Posts (Bangalore: Government Press, 1987).

Brochure on Reservation and Concessions for Scheduled Castes, Scheduled Tribes and other Backward Classes...(New Delhi: A Nabhi Publications, 2004).

Buchanan, Francis., Journey through Mysore, Canara and Malbar (London, 1807)

Devy, G N (Chairman)., Technical Advisory Group on Denotified Nomadic and Semi-nomadic Tribes Report, 2006 (New Delhi: Ministry of Social Justice and Empowerment, Government of India).

Elwin V.A. 1963, New Dehali for Tribale India, New Dehali, Ministry of Home of feaers.

Enthoven, R E., *The Tribes and Castes of Bombay* (Bombay: Government Central Press,1922; rpt. 1975, Delhi: Cosmo Publications) 3 Vols.

Eustace J Kitts, *A Compendium of the Castes and Tribes found in India: Census of India 1881* (Byculla: Education Sociey Press,1885; rpt.1982, Gurgaon: The Academic Press, Gurgaon).

Gurulingaiah, M.," Social Mobility and Social Change among Gollas" Unpublished Ph D Thesis submitted to Mangalore University, 2000.

...., Tribal Culture, Change and Mobility (New Delhi: Anmol Publications, 2007)

Hassan, S S., *The Castes and Tribes of H E H Nizam's Dominions* (Bombay: Government Central Press, 1920; rpt. 1989, New Delhi: Asian Educational Services).

Havanur, L G (Chairman)., *Karnataka Backward Classes Commission Report* (Bangalore: Government Press, 1975), 5 Vols.

Hereskouits, Melville J., 1974, Cullural Anghropology, Mohan primalani oxford and IBH publishing New Dehli.

Jain P.C., 1999, Planned Development Among Tribales, Rawat Publications, New Delhi.

Khan, Mamtax Ali, 1980, Schedule Caste and thire states in India, New Dehali, uppal publishing louse.

Lieten G.K., 1996, Development Devolution and Democracy, Sage Publication, New Delhi.

Luiz, A A D., The Tribes of Mysore (Bangalore: G S Viswa and Co, 1963)

Madan G.R., 1967, Indian Social Problems, Vol. II, Allied publishers Limited, Lukno.

Manivshree Pathak., 1991, Tribale Customs Law and Justice, A mittal Publication, New Delhi.

Misra, P K, Rajalakshmi, C R, Verghese, I., *Nomads in the Mysore City* (Calcutta: Anthropological Survey of India, 1971).

Mishra P.K., 1989, Culture Tribale History and Freedom Movement, Agam Kala Prakashan, New Delhi.

Nagan Gowda, R (Chairman)., *Mysore Backward Classes Committee Report* (Bangalore: Government Press, 1979).

Nanjundayya, H V., *The Ethnographic Survey of Mysore* (Bangalore: Government Press, 1908).

Nityanad Patnaik., 2002, Folklore of Tribal Communities, Gyan Publishing house, New Delhi.

Posset, Journal of Anthropological Society, 1888.

Praveen Fernandees., Kadugollas (Mangalore: Unesco Co action Learning Centre, 1994).

Prasad R.R., Jahagirdar M.P., 1993, Tribal Situation In Forest Villages, Discovery Publing house, New Delhi.

Ram Singh Meena., 2006, Tribal Development Programs, by Prof. R.K. Dixit, Ritu Publication, Jaipur.

Ravivarma Kumar (Chairman)., *The Karnataka State Commission for Backward Classes Special Report -2000* (Bangalore: Government Press, 2000).

Reddy, O Chinnappa (Chairman).,Report of the Karnataka Third Backward Classes Commission (Bangalore: Government Press, 1990), 2 Vols.

Risley, H H.,*The Caste and Tribes of Bengal* (Calcutta: Bengal Secretariat Press, 1891; rpt.1981, Calcutta: Firma Mukhopadhyay), vols

Russell, R V and Hiralal, *The Tribes and Castes of the Central Provinces of India* (London: Macmillan and Co., 1916; rpt. 1975, New Delhi:Cosmo Publications), vols

Sarita K. Chaudhari, Sucheta Sen Chaudhari., 2005, Primitive Tribes in Contemporary India, Vol.I, Mittal Publications, New Delhi.

Shachi Arya., 1998, Tribal Activism, Rawat Publications, New Delhi.

Shashi, S S., *The World of Nomads*(New Delhi: Lotus Press, 2006).

Salil Basu., 1994, Tribae Health in India, Manak Publications,

Sing and Sadhu, Ibid, 1968.

Singh K.S., 2006, Tribal Movements in India., Vol.I, Manohar Publication, New Delhi.

Singh K.S., 2006, Tribal Movements in India., Vol.II, Manohar Publication, New Delhi.

Singh, K S., *The Scheduled Castes* (Delhi: Oxford University, Press,1993) People of Inida National Series, vol. 2

...., *The Scheduled Tribes* (Delhi: Oxford University, Press,1994) People of Inida National Series, vol. 3

...., *India's Communities* (Delhi: Oxford University, Press,1998) People of Inida National Series, vol.4-6.

.... (General Editor)., *People of India : Karnataka* (New Delhi: Anthropological Survey of India, 2003) Volume XXVI.

Stephen Fuches, 1970, The Aboringinal Tribes of India.

Stepen Fuches, 1970, The Aboriginal Tries of India.

Swarankar R.C., 1995, Indian Tribes., Roopa Books pvt. Ltd., Jaipur.

The Annual Administration Report on the Working of the Criminal Tribes Act in the Bombay Presidency Part - I (Bombay: Govt. Central Press, 1936)

The New Encyclopaedia Britannica (The University of Chicago, 1992)

Thurrston, E., *Ethnographic Notes on Southern India* (Madrss: Government Press, 1906).

..........., *Castes and Tribes of Southern India* (Madrss: Government Press, 1909; rpt. 1975, Delhi: Cosmo Publications) 7 vols.

Venkataswamy, T (Chairman).,Report of the Karnataka Second Backward Classes Commission (Bangalore: Government Press, 1986), 3 Vols.

೨. ಕ್ಷೇತ್ರಕಾರ್ಯದಲ್ಲಿ ಸಂದರ್ಶನ ನೀಡಿದ ತಿಳುವಳಿಕೆದಾರರ ವಿವರಗಳು

ಕ್ರ.ಸಂ.	ಮಾಹಿತಿದಾರರ ಹೆಸರು	ವಯಸ್ಸು	ಹಟ್ಟಿಯ ಹೆಸರು	ವೃತ್ತಿ
೧.	ಚನ್ನವೀರಪ್ಪ	೩೯	ಬೆಳಗೆರೆ ಗೊಲ್ಲರಹಟ್ಟಿ	ಶಿಕ್ಷಣ ಕೇಂದ್ರದಲ್ಲಿ ಖಾಸಗಿ ಕೆಲಸ
೨.	ಈರಮ್ಮ	೪೮	ಬೆಳಗೆರೆ ಗೊಲ್ಲರಹಟ್ಟಿ	ಕುರಿಕಾಯುವುದು
೩.	ರಘು	೩೫	ಬೆಳಗೆರೆ ಗೊಲ್ಲರಹಟ್ಟಿ	ಕೃಷಿ
೪.	ಸಿರಿಗೊಂಡಪ್ಪ	೫೦	ಬೆಳಗೆರೆ ಗೊಲ್ಲರಹಟ್ಟಿ	ವ್ಯವಸಾಯ
೫.	ಜಯಣ್ಣ	೪೯	ಬೆಳಗೆರೆ ಗೊಲ್ಲರಹಟ್ಟಿ	ವ್ಯವಸಾಯ
೬.	ಚಂದ್ರಣ್ಣ	೪೮	ಬೆಳಗೆರೆ ಗೊಲ್ಲರಹಟ್ಟಿ	ಮಾ.ಗ್ರಾ.ಸದಸ್ಯರು
೭.	ಚಿಕ್ಕಣ್ಣ	೮೦	ಬೆಳಗೆರೆ ಗೊಲ್ಲರಹಟ್ಟಿ	ಕುರಿಕಾಯುವುದು
೮.	ಶಿವಲಿಂಗಮ್ಮ	೩೫	ಬೆಳಗೆರೆ ಗೊಲ್ಲರಹಟ್ಟಿ	ಅಂಗಡಿ ವ್ಯಾಪಾರ
೯.	ಚಿದಾನಂದಪ್ಪ	೪೩	ಬೆಳಗೆರೆ ಗೊಲ್ಲರಹಟ್ಟಿ	ಅಂಗಡಿ ವ್ಯಾಪಾರ
೧೦.	ನಾಡೋಜ ಸಿರಿಯಜ್ಜಿ	೯೮	ಬೆಳಗೆರೆ ಗೊಲ್ಲರಹಟ್ಟಿ	ಜಾನಪದ ಹಾಡುಗಾರ್ತಿ
೧೧.	ಈರಣ್ಣ	೫೯	ಬೆಳಗೆರೆ ಗೊಲ್ಲರಹಟ್ಟಿ	ವ್ಯವಸಾಯ
೧೨.	ಕ್ಯಾತಣ್ಣ	೫೮	ಬೆಳಗೆರೆ ಗೊಲ್ಲರಹಟ್ಟಿ	ವ್ಯವಸಾಯ
೧೩.	ತಿಪ್ಪೇಸ್ವಾಮಿ	೩೫	ಬೆಳಗೆರೆ ಗೊಲ್ಲರಹಟ್ಟಿ	ಶಾಲಾ ಶಿಕ್ಷಕರು
೧೪.	ಪ್ರಸನ್ನ	೩೬	ಬೆಳಗೆರೆ ಗೊಲ್ಲರಹಟ್ಟಿ	ಶಾಲಾ ಶಿಕ್ಷಕರು
೧೫.	ನಾಗರಾಜು	೪೦	ಬೆಳಗೆರೆ ಗೊಲ್ಲರಹಟ್ಟಿ	ವ್ಯವಸಾಯ
೧೬.	ರಾಮಣ್ಣ	೪೫	ಬೆಳಗೆರೆ ಗೊಲ್ಲರಹಟ್ಟಿ	ಸಮಾಜ ಸೇವಕರು
೧೭.	ಟಿ. ವೀರಣ್ಣ	೪೯	ಬೆಳಗೆರೆ ಗೊಲ್ಲರಹಟ್ಟಿ	ಶಿಕ್ಷಕರು
೧೮.	ಚಿತ್ತಪ್ಪ	೯೧	ಗುಂಡ್ಲೂರು	ಕುರಿಕಾಯುವುದು
೧೯.	ಸಣ್ಣಪ್ಪ	೮೩	ಗುಂಡ್ಲೂರು	ವ್ಯವಸಾಯ
೨೦.	ತಿಮ್ಮಣ್ಣ	೧೬	ಗುಂಡ್ಲೂರು	ವಿದ್ಯಾರ್ಥಿ
೨೧.	ಸಣ್ಣಮ್ಮ	೮೦	ಗುಂಡ್ಲೂರು	ವ್ಯವಸಾಯ
೨೨.	ಈರಮ್ಮ	೫೪	ಗುಂಡ್ಲೂರು	ವ್ಯವಸಾಯ

ಕ್ರ.ಸಂ.	ಮಾಹಿತಿದಾರರ ಹೆಸರು	ವಯಸ್ಸು	ಹಟ್ಟಿಯ ಹೆಸರು	ವೃತ್ತಿ
೨೩.	ಸಣ್ಣಿಗಪ್ಪ	೬೫	ಗುಂಡ್ಲೂರು	ಕೂಲಿ
೨೪.	ಚಿತ್ತಯ್ಯ	೪೦	ಗುಂಡ್ಲೂರು	ಕೂಲಿ
೨೫.	ನಿಂಗಣ್ಣ	೫೦	ಗುಂಡ್ಲೂರು	ಕೂಲಿ
೨೬.	ಕರಿಯಣ್ಣ	೪೦	ಗುಂಡ್ಲೂರು	ವ್ಯಾಪಾರ
೨೭.	ಎಸ್.ವೀರಭದ್ರಪ್ಪ	೩೨	ಗುಂಡ್ಲೂರು	ವ್ಯವಸಾಯ
೨೮.	ಸಣ್ಣವೀರಪ್ಪ	೬೦	ಗುಂಡ್ಲೂರು	ವ್ಯವಸಾಯ
೨೯.	ರತ್ನಮ್ಮ	೩೫	ಗುಂಡ್ಲೂರು	ಕೂಲಿ
೩೦.	ವೀರಣ್ಣ	೪೦	ಗುಂಡ್ಲೂರು	ವ್ಯವಸಾಯ
೩೧.	ಗೋಪಾಲಪ್ಪ	೩೫	ಗುಂಡ್ಲೂರು	ವ್ಯವಸಾಯ
೩೨.	ಚಿಕ್ಕಮ್ಮ	೫೦	ಗುಂಡ್ಲೂರು	ಕೂಲಿ
೩೩.	ನಾಗರಾಜಪ್ಪ	೪೦	ಗುಂಡ್ಲೂರು	ವ್ಯವಸಾಯ
೩೪.	ಚಲುವುರಪ್ಪ	೪೦	ಗುಂಡ್ಲೂರು	ಕೂಲಿ
೩೫.	ತಿಮ್ಮಣ್ಣ	೩೮	ಗುಂಡ್ಲೂರು	ವ್ಯವಸಾಯ
೩೬.	ಭಾಗ್ಯಮ್ಮ	೩೨	ಗುಂಡ್ಲೂರು	ಕೂಲಿ
೩೭.	ರುದ್ರಮ್ಮ	೨೫	ಗುಂಡ್ಲೂರು	ಕೂಲಿ
೩೮.	ಚಿತ್ತಯ್ಯ	೪೨	ಗುಂಡ್ಲೂರು	ಕೂಲಿ
೩೯.	ಸಣ್ಣಕ್ಕ	೬೫	ಗುಂಡ್ಲೂರು	ಕೂಲಿ
೪೦.	ರಮೇಶ	೩೨	ಹನುಮಂತನಹಳ್ಳಿ	ವಕೀಲರು
೪೧.	ಕ್ಯಾತಣ್ಣ	೬೦	ಹನುಮಂತನಹಳ್ಳಿ	ಕೂಲಿ
೪೨.	ಈರಣ್ಣ	೪೩	ಹನುಮಂತನಹಳ್ಳಿ	ಕೂಲಿ
೪೩.	ದ್ಯಾವರಪ್ಪ	೫೫	ಹನುಮಂತನಹಳ್ಳಿ	ವ್ಯವಸಾಯ
೪೪.	ತಮ್ಮಣ್ಣ	೪೫	ಹನುಮಂತನಹಳ್ಳಿ	ಕೂಲಿ
೪೫.	ಭಾಗ್ಯಮ್ಮ	೨೫	ಹನುಮಂತನಹಳ್ಳಿ	ಕೂಲಿ
೪೬.	ಚನ್ನಮ್ಮ	೫೦	ಹನುಮಂತನಹಳ್ಳಿ	ಕೂಲಿ
೪೭.	ನರಸಣ್ಣ	೬೦	ಹನುಮಂತನಹಳ್ಳಿ	ಕೂಲಿ
೪೮.	ಚಂದ್ರಣ್ಣ	೩೫	ಹನುಮಂತನಹಳ್ಳಿ	ಕೂಲಿ

ಕ್ರ.ಸಂ.	ಮಾಹಿತಿದಾರರ ಹೆಸರು	ವಯಸ್ಸು	ಹಟ್ಟಿಯ ಹೆಸರು	ವೃತ್ತಿ
೪೯.	ಈರಮ್ಮ	೫೨	ಹನುಮಂತನಹಳ್ಳಿ	ಕೂಲಿ
೫೦.	ನರಸಿಂಹಪ್ಪ	೫೫	ಹನುಮಂತನಹಳ್ಳಿ	ಕೂಲಿ
೫೧.	ನಾಗಮ್ಮ	೫೫	ಹನುಮಂತನಹಳ್ಳಿ	ಕೂಲಿ
೫೨.	ದೇವಿರಮ್ಮ	೪೮	ಹನುಮಂತನಹಳ್ಳಿ	ಕೂಲಿ
೫೩.	ಕರಿಯಣ್ಣ	೫೦	ಹನುಮಂತನಹಳ್ಳಿ	ಕೂಲಿ
೫೪.	ಜಂಪಣ್ಣ	೪೫	ಹನುಮಂತನಹಳ್ಳಿ	ಕೂಲಿ
೫೫.	ದಾಸಣ್ಣ	೩೫	ಹನುಮಂತನಹಳ್ಳಿ	ಕೂಲಿ
೫೬.	ಕೆದುರಣ್ಣ	೬೦	ಹನುಮಂತನಹಳ್ಳಿ	ವ್ಯವಸಾಯ
೫೭.	ಸಣ್ಣವೀರಣ್ಣ	೬೯	ಹನುಮಂತನಹಳ್ಳಿ	ವ್ಯವಸಾಯ
೫೮.	ಮುದ್ದಮ್ಮ	೫೦	ಹನುಮಂತನಹಳ್ಳಿ	ವ್ಯವಸಾಯ
೫೯.	ಶಾಂತಮ್ಮ	೬೦	ಹನುಮಂತನಹಳ್ಳಿ	ಕೂಲಿ
೬೦.	ಬಾಲಯ್ಯ	೬೦	ಜೋಗಿಹಟ್ಟಿ	ವ್ಯವಸಾಯ
೬೧.	ಕೆಂಚಪ್ಪ	೬೩	ಜೋಗಿಹಟ್ಟಿ	ವ್ಯವಸಾಯ
೬೨.	ಕ್ಯಾತಪ್ಪ	೬೫	ಜೋಗಿಹಟ್ಟಿ	ವ್ಯವಸಾಯ
೬೩.	ಚಂದ್ರಪ್ಪ	೪೮	ಜೋಗಿಹಟ್ಟಿ	ಕೂಲಿ
೬೪.	ಶಿಲ್ಪಾ	೧೮	ಜೋಗಿಹಟ್ಟಿ	ಸ್ವಯಂ ಸೇವಕಿ
೬೫.	ತಿಪ್ಪೇಸ್ವಾಮಿ	೧೭	ಜೋಗಿಹಟ್ಟಿ	ಬೇಸಾಯ
೬೬.	ಚನ್ನಪ್ಪ	೫೦	ಜೋಗಿಹಟ್ಟಿ	ಅಂಗಡಿ ವ್ಯಾಪಾರ
೬೭.	ಮೇಘು	೨೧	ಜೋಗಿಹಟ್ಟಿ	ಕಾಲ್‌ಸೆಂಟರ್‌ನಲ್ಲಿ
೬೮.	ಬಾಲರಾಜ	೫೦	ಜೋಗಿಹಟ್ಟಿ	ಕುರಿಸಾಕಾಣಿಕೆ
೬೯.	ತಿಪ್ಪೇಸ್ವಾಮಿ	೪೯	ಜೋಗಿಹಟ್ಟಿ	ಕೂಲಿ
೭೦.	ಬೊಮ್ಮಯ್ಯ	೫೦	ಜೋಗಿಹಟ್ಟಿ	ವ್ಯವಸಾಯ
೭೧.	ಕೆಂಚಪ್ಪ	೩೧	ಜೋಗಿಹಟ್ಟಿ	ವ್ಯವಸಾಯ
೭೨.	ನಾಗಣ್ಣ	೬೦	ಜೋಗಿಹಟ್ಟಿ	ಕುರಿಸಾಕಣಿಕೆ
೭೩.	ಸಣ್ಣಮಲ್ಲಯ್ಯ	೫೦	ಜೋಗಿಹಟ್ಟಿ	ವ್ಯವಸಾಯ
೭೪.	ಮಾಸಯ್ಯ	೭೧	ಜೋಗಿಹಟ್ಟಿ	ವ್ಯವಸಾಯ

ಕ್ರ.ಸಂ.	ಮಾಹಿತಿದಾರರ ಹೆಸರು	ವಯಸ್ಸು	ಹಟ್ಟಿಯ ಹೆಸರು	ವೃತ್ತಿ
೭೫.	ರಾಜು	೨೩	ಜೋಗಿಹಟ್ಟಿ	ಕೂಲಿ
೭೬.	ತಿಪ್ಪೇಸ್ವಾಮಿ	೪೫	ಜೋಗಿಹಟ್ಟಿ	ಲೈಟಿಂಗ್ ಕೆಲಸ
೭೭.	ಅಡೆವೆಪ್ಪ	೬೦	ಜೋಗಿಹಟ್ಟಿ	ವ್ಯವಸಾಯ
೭೮.	ರಂಗಪ್ಪ	೫೫	ಜೋಗಿಹಟ್ಟಿ	ವ್ಯವಸಾಯ
೭೯.	ಗಿಡ್ಡಣ್ಣ	೫೦	ಜೋಗಿಹಟ್ಟಿ	ವ್ಯವಸಾಯ
೮೦.	ಗಿಡ್ಡಜ್ಜ	೭೦	ಜೋಗಿಹಟ್ಟಿ	ಕುರಿಕಾಯುವುದು
೮೧.	ನಿಂಗಪ್ಪ	೪೦	ಜೋಗಿಹಟ್ಟಿ	ಶಿಕ್ಷಕರು
೮೨.	ಶೇಖರಯ್ಯ	೩೫	ಜೋಗಿಹಟ್ಟಿ	ವಕೀಲರು
೮೩.	ಸಿರಿಯಣ್ಣ	೫೦	ಯಲಗಟ್ಟಿ	ವ್ಯವಸಾಯ
೮೪.	ಕ್ಯಾತಮ್ಮ	೬೦	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ
೮೫.	ಜಯಣ್ಣ	೫೦	ಯಲಗಟ್ಟಿ ಗೊಲ್ಲರಹಟ್ಟಿ	ಕೂಲಿ
೮೬.	ಚಿತ್ತಯ್ಯ	೪೫	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ
೮೭.	ರಂಗಪ್ಪ	೬೦	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ
೮೮.	ಅಜ್ಜಪ್ಪ	೬೦	ಯಲಗಟ್ಟಿ ಗೊಲ್ಲರಹಟ್ಟಿ	ಕೂಲಿ
೮೯.	ಶ್ರೀಕಂಠಪ್ಪ	೩೭	ಯಲಗಟ್ಟಿ ಗೊಲ್ಲರಹಟ್ಟಿ	ಕೂಲಿ
೯೦.	ಕ್ಯಾತಣ್ಣ	೫೫	ಯಲಗಟ್ಟಿ ಗೊಲ್ಲರಹಟ್ಟಿ	ಕುರಿಸಾಕಾಣಿಕೆ
೯೧.	ಕದರಮ್ಮ	೫೩	ಯಲಗಟ್ಟಿ ಗೊಲ್ಲರಹಟ್ಟಿ	ಕೂಲಿ
೯೨.	ಚಿಕ್ಕಣ್ಣ	೪೦	ಯಲಗಟ್ಟಿ ಗೊಲ್ಲರಹಟ್ಟಿ	ಕೂಲಿ
೯೩.	ಗೌಡಪ್ಪ	೪೫	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ
೯೪.	ತಿಪ್ಪೇಸ್ವಾಮಿ	೪೮	ಯಲಗಟ್ಟಿ ಗೊಲ್ಲರಹಟ್ಟಿ	ವ್ಯಾಪಾರ
೯೫.	ವೀರಣ್ಣ	೪೩	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ
೯೬.	ಲಕ್ಷ್ಮೀದೇವಿ	೩೨	ಯಲಗಟ್ಟಿ ಗೊಲ್ಲರಹಟ್ಟಿ	ಕೂಲಿ
೯೭.	ಕ್ಯಾತಣ್ಣ	೭೦	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ
೯೮.	ಕರಿಯಣ್ಣ	೫೨	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ
೯೯.	ಉಮೇಶ	೨೧	ಯಲಗಟ್ಟಿ ಗೊಲ್ಲರಹಟ್ಟಿ	ನರ್ಸಿಂಗ್
೧೦೦.	ಕೆಂಜಡಿಯಪ್ಪ	೪೮	ಯಲಗಟ್ಟಿ ಗೊಲ್ಲರಹಟ್ಟಿ	ವ್ಯವಸಾಯ

ಅಂಕಿಅಂಶಗಳು ೧. ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುವಾರು, ನೆಲೆಗಳವಾರು ಕುಟುಂಬ, ಲಿಂಗವಾರು ಜನಸಂಖ್ಯೆ ಮತ್ತು ವಯೋಗುಂಪು

ಕ್ರ.ಸಂ.	ತಾಲೂಕು	ನೆಲೆಗಳು	ಕುಟುಂಬ	ಜನಸಂಖ್ಯೆ			ವಯೋಗುಂಪು														
				ಗಂಡು	ಹೆಣ್ಣು	ಒಟ್ಟು	೦ - ೪ ಗಂ	ಹೆಣ್ಣು	ಒಟ್ಟು	೫ - ೧೭ ಗಂ	ಹೆಣ್ಣು	ಒಟ್ಟು	೧೮-೪೦ ಗಂ	ಹೆಣ್ಣು	ಒಟ್ಟು	೪೧-೬೦ ಗಂ	ಹೆಣ್ಣು	ಒಟ್ಟು	೬೧ಮೇಲ್ಪಟ್ಟು ಗಂ	ಹೆಣ್ಣು	ಒಟ್ಟು
೧	ಚಳಕೆರೆ	ಹನುಮಂತನಹಳ್ಳಿ	೬೨	೧೬೪	೧೬೧	೩೨೫	೧೧	೧೩	೨೪	೪೧	೪೩	೮೪	೭೪	೮೧	೧೫೫	೩೦	೧೯	೪೯	೮	೫	೧೩
೨		ಜೋಗಿಹಟ್ಟಿ	೬೨	೧೯೮	೧೫೭	೩೫೫	೧೬	೮	೨೪	೫೨	೪೮	೧೦೦	೮೯	೭೭	೧೬೬	೩೩	೨೦	೫೩	೮	೪	೧೨
೩		ಯಲಗಟ್ಟಿ ಗೊಲ್ಲರಹಟ್ಟಿ	೧೯೪	೪೬೩	೩೯೮	೮೬೧	೧೧	೧೩	೨೪	೮೧	೭೩	೧೫೪	೨೫೫	೨೪೨	೪೯೭	೯೩	೫೯	೧೫೨	೨೩	೧೧	೩೪
೪		ಬೆಳಗೆರೆ ಗೊಲ್ಲರಹಟ್ಟಿ	೧೦೫	೨೭೨	೨೬೨	೫೩೪	೨೦	೧೩	೩೩	೭೧	೮೨	೧೫೩	೧೨೨	೧೨೪	೨೪೬	೪೨	೩೫	೭೭	೧೭	೮	೨೫
೫	ಮೊಳಕಾಲ್ಮೂರು	ಗುಂಡ್ಲುರು	೪೬	೧೩೩	೧೧೮	೨೫೧	೮	೮	೧೬	೩೪	೩೨	೬೬	೬೬	೬೧	೧೨೭	೧೯	೧೭	೩೬	೬		೬
			೪೭೯	೧೨೩೦	೧೦೯೬	೨೩೨೬	೬೬	೫೫	೧೨೧	೨೭೯	೨೭೮	೫೫೭	೬೦೬	೫೮೫	೧೧೯೧	೨೧೭	೧೫೦	೩೬೭	೬೨	೨೮	೯೦

ಅಂಕಿಅಂಶಗಳು ೨. ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುವಾರು, ನೆಲೆಗಳವಾರು ಕುಟುಂಬ, ಲಿಂಗವಾರು ವೈವಾಹಿಕ ಸ್ಥಾನಮಾನ

				ವೈವಾಹಿಕ ಸ್ಥಾನಮಾನ									
				ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು			
ಕ್ರ.ಸಂ.	ತಾಲೂಕು	ನೆಲೆಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	
೧	ಚಳಕೆರೆ	ಹನುಮಂತನಹಳ್ಳಿ	೬೨	೮೩	೬೯	೧೫೨	೭೫	೭೬	೧೫೧	೬	೧೭	೨೩	
೨		ಜೋಗಿಹಟ್ಟಿ	೭೨	೧೧೪	೭೮	೧೯೨	೭೮	೭೭	೧೫೫	೫	೬	೧೧	
೩		ಯಲಗಟ್ಟಿ ಗೊಲ್ಲರಹಟ್ಟಿ	೧೯೪	೨೩೮	೧೫೯	೩೯೭	೨೧೬	೨೧೮	೪೩೪	೫	೧೬	೨೧	
೪		ಬೆಳಗೆರೆ ಗೊಲ್ಲರಹಟ್ಟಿ	೧೦೫	೧೪೯	೧೩೩	೨೮೨	೧೨೨	೧೨೧	೨೪೧	೫	೧೮	೨೩	
೫	ಮೊಳಕಾಲ್ಮೂರು	ಗುಂಡ್ಲುರು	೪೬	೭೭	೬೫	೧೪೨	೫೩	೫೩	೧೦೬	೨	೧	೩	
			೪೭೯	೬೬೧	೫೦೪	೧೧೬೫	೫೪೪	೫೪೫	೧೦೮೬	೨೩	೫೮	೮೧	

ಅಂಕಿಅಂಶಗಳು ೩. ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುವಾರು, ನೆಲೆಗಳವಾರು ಕುಟುಂಬ, ಲಿಂಗವಾರು ಶೈಕ್ಷಣಿಕ ಮಟ್ಟ

ಕ್ರ.ಸಂ.	ತಾಲೂಕು	ನೆಲೆಗಳು	ಕುಟುಂಬ	ಶೈಕ್ಷಣಿಕ ಮಟ್ಟ																						
				ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಡಿಪ್ಲೊಮಾ			ಪದವಿಪೂರ್ವ			ಪದವಿ			ಸ್ನಾತಕೋತ್ತರ			ಇತರೆ	
				ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
೧	ಚಳಕೆರೆ	ಹನುಮಂತನಹಳ್ಳಿ	೬೨	೧೫	೨೨	೩೭	೬೬	೩೮	೧೦೪	೯	೪	೧೩														
೨		ಜೋಗಿಹಟ್ಟಿ	೭೨	೨೪	೧೬	೪೦	೧೪	೧೮	೩೨	೨೦	೧೪	೩೪				೧೦	೨	೧೨	೩		೩				೧	
೩		ಯಲಗಟ್ಟ ಗೊಲ್ಲರಹಟ್ಟಿ	೧೯೪	೧೪	೧೨	೨೬	೧೩	೯	೨೨	೨೮	೨೦	೪೮	೩		೩	೩೦	೧೦	೪೦	೧೬	೫	೨೧				೪	೧
೪		ಬೆಳಗೆರೆ ಗೊಲ್ಲರಹಟ್ಟಿ	೧೦೫	೨೯	೩೦	೫೯	೨೩	೨೬	೪೯	೪೪	೨೬	೭೦				೧೧	೧೧	೨೨	೧೧	೨	೧೩	೧		೧	೫	೨
೫	ಮೊಳಕಾಲ್ಮೂರು	ಗುಂಡ್ಲುರು	೪೬	೧೭	೧೦	೨೭	೧೫	೧೭	೩೨	೨೨	೧೩	೩೫	೪		೪	೬	೧	೭	೩		೩				೩	೧
			೪೭೯	೯೯	೯೦	೧೮೯	೧೩೧	೧೦೮	೨೩೯	೧೨೩	೭೭	೨೦೦	೭		೭	೫೭	೨೪	೮೧	೩೩	೭	೪೦	೧		೧	೧೩	೪

ಅಂಕಿಅಂಶಗಳು ೪. ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುವಾರು, ನೆಲೆಗಳವಾರು ಲಿಂಗವಾರು ಕಸುಬುಗಳು

ಕ್ರ.ಸಂ.	ತಾಲೂಕು	ನೆಲೆಗಳು	ಕಸುಬುಗಳು																				
			ಕೃಷಿ			ಕೃಷಿಕೂಲಿ			ದಿನಗೂಲಿ			ಸಣ್ಣ ವ್ಯಾಪಾರ			ಸರ್ಕಾರಿ			ಖಾಸಗಿ			ಇತರೆ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚಳಕೆರೆ	ಹನುಮಂತನಹಳ್ಳಿ	೧೨	೨೦	೩೨	೬೮	೭೩	೧೪೧	೨೬	೪	೩೦										೨		೨
೨		ಜೋಗಿಹಟ್ಟಿ	೫	೨	೭	೮೮	೮೩	೧೭೧	೧೭	೪	೨೧		೧	೧	೧		೧	೧		೧	೫	೩	೮
೩		ಯಲಗಟ್ಟಿ ಗೊಲ್ಲರಹಟ್ಟಿ	೫೮	೪೭	೧೦೫	೧೭೭	೧೫೪	೩೩೧	೨		೨	೯	೩	೧೨	೧		೧	೩		೩	೭	೨	೯
೪		ಬೆಳಗೆರೆ ಗೊಲ್ಲರಹಟ್ಟಿ	೪೩	೩೪	೭೭	೯೫	೯೯	೧೯೪	೧		೧				೨	೧	೩	೧		೧	೫	೩	೮
೫	ಮೊಳಕಾಲ್ಮೂರು	ಗುಂಡ್ಲುರು	೨೦	೬	೨೬	೪೪	೬೪	೧೦೮	೭		೭	೬		೬	೨		೨	೪	೧	೫			
			೧೩೮	೧೦೯	೨೪೭	೪೭೨	೪೭೩	೯೪೫	೫೩	೮	೬೧	೧೫	೪	೧೯	೬	೧	೭	೯	೧	೧೦	೧೯	೮	೨೭

ಅಂಕಿಅಂಶಗಳು ೫. ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುವಾರು, ನೆಲೆಗಳವಾರು ಲಿಂಗವಾರು ಸರ್ಕಾರಿ ಸೌಲಭ್ಯಗಳು ಮತ್ತು ಭೂ ಹಿಡುವಳ (ಎಕರೆಗಳಲ್ಲಿ), ಶ್ರೇಣಿಕೃತ ಭೂಹಿಡುವಳ

ಕ್ರ.ಸಂ.	ತಾಲೂಕು	ನೆಲೆಗಳು	ಸರ್ಕಾರಿ ಸೌಲಭ್ಯಗಳು							ಭೂ ಹಿಡುವಳಿ ಎಕರೆಗಳಲ್ಲಿ			ಶ್ರೇಣಿಕೃತ ಭೂ ಹಿಡುವಳಿ (ಎಕರೆಗಳಲ್ಲಿ)					
			ಓಟಿನ ಕಾರ್ಡ್			ವಿಧವಾವೇತನ			ಪಡಿತರ ಚೀಟಿ				೨೫.೧ ಮೇಲ್ಪಟ್ಟ	೧೦.೧ - ೨೫	೫.೧ - ೧೦	೨.೫೧ - ೫	೨.೫೦	ಭೂರಹಿತ
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು		ಒಣ	ನೀರಾವರಿ	ಒಟ್ಟು	ಎ	ಬಿ	ಸಿ	ಡಿ	ಇ	ಎಫ್
೧	ಚಳಕೆರೆ	ಹನುಮಂತನಹಳ್ಳಿ	೭೩	೬೬	೧೩೯		೧೩	೧೩	೫೬	೨೪೬	೩೫.೦	೨೮೧.೦	೧	೪	೮	೧೬	೨೯	೪
೨		ಜೋಗಿಹಟ್ಟಿ	೮೧	೬೭	೧೪೮				೫೯	೩೨೨	೧೩.೫	೩೩೫.೫	೧	೫	೭	೩೪	೨೧	೨
೩		ಯಲಗಟ್ಟೆ ಗೊಲ್ಲರಹಟ್ಟಿ	೨೩೪	೨೧೫	೪೪೯				೧೫೦	೧೧೯೨	೨೧೭.೫	೧೪೦೯.೫	೧೦	೨೮	೫೦	೫೨	೨೪	೩೪
೪		ಬೆಳಗೆರೆ ಗೊಲ್ಲರಹಟ್ಟಿ	೧೩೧	೧೧೦	೨೪೧		೪	೪	೮೬	೪೦೭	೪೦.೯	೪೪೭.೯	೨	೬	೧೮	೨೫	೨೯	೨೩
೫	ಮೊಳಕಾಲ್ಮೂರು	ಗುಂಡ್ಲುರು	೬೭	೪೭	೧೧೪				೩೭	೧೫೪	೪೩.೫	೧೯೭.೫		೩	೮	೧೬	೧೨	೭
			೫೮೬	೫೦೫	೧೦೯೧		೧೭	೧೭	೩೮೮	೨೩೨೧	೩೫೦.೪	೨೬೭೧.೪	೧೪	೪೬	೯೧	೧೪೩	೧೧೫	೭೦

ಅಂಕಿಅಂಶಗಳು ೬. ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುವಾರು, ನೆಲೆಗಳ ಕುಟುಂಬವಾರು ಪಶುಸಂಪತ್ತು, ಮನೆಗಳ ಮಾದರಿ, ಇತರೆ ಸರ್ಕಾರಿ ಸೌಲಭ್ಯಗಳು

				ಪಶುಸಂಪತ್ತು						ಮನೆಗಳ ಮಾದರಿ								ಇತರೆ ಸರ್ಕಾರಿ ಸೌಲಭ್ಯಗಳು					
																		ನಿವೇಶನ		ಮನೆ		ವಿದ್ಯುತ್	
ಕ್ರ.ಸಂ.	ತಾಲೂಕು	ನೆಲೆಗಳು	ಕುಟುಂಬ	ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ	ಹೆಂಚಿನ	ಜನತಾ	ಬಾಡಿಗೆ	ಸ್ವಂತ	ಸರ್ಕಾರ	ಸ್ವಂತ	ಸರ್ಕಾರ	ಸ್ವಂತ	ಸರ್ಕಾರ
೧	ಚಳಕೆರೆ	ಹನುಮಂತನಹಳ್ಳಿ	೬೭	೩೬	೨೭	೧೨	೬೫೦	೧೩೩	೯		೧೨	೧	೩೭			೧೧	೧	೨೯		೮	೨	೫	೧೯
೨		ಜೋಗಿಹಟ್ಟಿ	೬೭	೬೦	೨೧	೫೪	೧೨೬	೧೮೨			೯		೬೧			೨		೬೮		೬೮	೧	೫೬	೧
೩		ಯಲಗಟ್ಟೆ ಗೊಲ್ಲರಹಟ್ಟಿ	೧೯೪	೨೧೫	೧೧೩	೧೨೫	೯೭೭	೬೧೧	೫೮		೫೮	೧	೧೨೫	೧	೬		೩	೧೬೭		೧೮೦		೧೭೫	೨
೪		ಬೆಳಗೆರೆ ಗೊಲ್ಲರಹಟ್ಟಿ	೧೦೫	೬೮	೧೭	೬೧	೧೧೮೨	೯೭		೪	೧೮	೩	೫೦	೧೦	೧೯		೧	೯೮	೨	೯೮	೨	೯೮	೨
೫	ಮೊಳಕಾಲ್ಮೂರು	ಗುಂಡ್ಲುರು	೪೬	೩೭	೧೪	೧೮	೧೫೮	೬೦	೫೦		೪		೨೯	೧	೨	೯	೧	೩೩	೯	೩೧	೯	೨೩	೧೫
			೪೭೯	೪೧೬	೧೯೨	೨೭೦	೩೦೯೩	೧೦೮೩	೧೧೭	೪	೧೦೧	೫	೩೦೨	೧೨	೨೭	೨೨	೬	೩೯೫	೧೧	೩೮೫	೧೪	೩೫೭	೩೯

ಕಾಡುಗೊಲ್ಲರ ಪಶುಪಾಲನೆ ಚಿತ್ರಣ













ಆಡು ಸಾಕಾಣಿಕೆ




ದನಗಳ ದೊಡ್ಡಿ





ಕಾಡುಗೊಲ್ಲರ ಪಶುಸಂಪತ್ತು



ಕುರಿಸಾಕಾಣಿಕೆಯಲ್ಲಿ ನಿರತ ಮಹಿಳೆ



ಕಾಡುಗೊಲ್ಲರ ದನಗಳು



[illegible]

ಕಾಡುಗೊಲ್ಲರು ಬೆಳೆದ ಫಸಲು











ಬೋರವೆಲ್ಲ ಮೂಲಕ ನೀರಾವರಿ



ಕೆಲಸದಲ್ಲಿ ನಿರತಳಾದ ಮಹಿಳೆ



ಕೃಷಿ ಉಪಕರಣಗಳು



ಧಾನ್ಯ ಹಸನು ಮಾಡುತ್ತಿರುವ ಮಹಿಳೆ



ಧಾನ್ಯ ಸಂಗ್ರಹಿಸುತ್ತಿರುವ ವಿಧಾನ










ಕಾಡುಗೊಲ್ಲರ ವ್ಯಾಪಾರದ ಚಿತ್ರಣ











ಸಾಧಾರಣ ಮನೆ



ಮಧ್ಯಮ ವರ್ಗದ ಕಾಡುಗೊಲ್ಲರ ಮನೆ



ಸಮುದಾಯ ಭವನ




ಶ್ರೀಮಂತ ಕಾಡುಗೊಲ್ಲರ ಮನೆ

ಕಾಡುಗೊಲ್ಲರು ಬೆಳೆದ ಫಸಲಿನ ರಾಶಿ














ಆಡುಸಾಕಾಣಿಕೆ



ಸ್ತ್ರೀ ಶಕ್ತಿ ಗುಂಪುಗಳು





ಕಾಡುಗೊಲ್ಲರ ದೈವ



ಶಾಲೆ



ಹಾಡುಗೊಲ್ಲರ ಶಿಕ್ಷಕಿ



ಬಿಸಿಯೂಟ ತಯಾರಿಸುತ್ತಿರುವ ಚಿತ್ರ



ಅಂಗನವಾಡಿ ಮಕ್ಕಳು





ಕಾಡುಗೊಲ್ಲರ ಮದುಮಗ



ಬಿಳಿಅಜ್ಜಿ





ಕಾಡುಗೊಲ್ಲರ ಟೈಲರ

COLOR PLATES

